
ಶ್ರೀಮದ್ಭಾಗವತ

ಭಾರತ ದರ್ಶನ ಪ್ರಕಾಶನ



೧೧-೧೨ನೆಯ ಸ್ಕಂಧಗಳು

ಸಂಪುಟ - ೬

ಭಾರತ ದರ್ಶನ ಪ್ರಕಾಶನ

ಶ್ರೀಮದ್ಭಾಗವತ

(ಮೂಲದೊಡನೆ ಸರಳ ಕನ್ನಡಾನುವಾದ)

ಜನ್ಮಾದ್ಯಸ್ಯ ಯತೋಽನ್ವಯಾದಿತರತ-
ಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ
ಮುಹ್ಯನ್ತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ
ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ
ಸತ್ಯಂ ಪರಂ ಧೀಮಹಿ ॥

ಸಂಪುಟ 9

ಮುದ್ರಕರು:
ಭಾರತ ದರ್ಶನ ಮುದ್ರಣಾಲಯ
163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು – 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ
ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ|| ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ
ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ವಿ. ಸೂರ್ಯನಾರಾಯಣ್, M.A. B.Com., B.L.,
ಕೋಶಾಧ್ಯಕ್ಷರು

ವಿನಮ್ರವಚನಗಳು

ದಯಾಮಯನಾದ ಪರಮಾತ್ಮನ ದಿವ್ಯಾನುಗ್ರಹದಿಂದಲೂ, ಕರುಣಾಮಯನಾದ ಗುರುಭಗವಂತನ ದಿವ್ಯಾಶೀರ್ವಾದದಿಂದಲೂ, ಶುದ್ಧ ಮನಸ್ಕರಾದ ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಶ್ರೀಮದ್ಭಾಗ ವತದಲ್ಲಿ ಕಡೆಯದಾದ ಮತ್ತು ಭಾರತ-ರಾಮಾಯಣ-ಭಾಗವತಗಳ ಮಾಲೆಯಲ್ಲಿಯೂ ಕಡೆಯದಾದ ದಿವ್ಯವಾದ, ಶ್ರೀಕೃಷ್ಣಪರಮಾತ್ಮನ ಅಧ್ಯಾತ್ಮತತ್ತ್ವಗಳಿಂದ ತುಂಬಿಹೋಗಿರುವ ಒಂಭತ್ತನೆಯ ದಿವ್ಯಕುಸುಮ ವನ್ನು ಭಕ್ತಿಪೂರ್ವಕವಾಗಿ ಶ್ರೀಕೃಷ್ಣನ ಅಡಿದಾವರೆಗಳಲ್ಲಿ ಸಮರ್ಪಿಸಿ ಪ್ರಸಾದರೂಪವಾದ ಈ ದಿವ್ಯಕುಸುಮವನ್ನು ಪ್ರಿಯಗ್ರಾಹಕರ ಅಂಜಲಿಪುಟ ಗಳಲ್ಲಿಡುತ್ತಿದ್ದೇವೆ. ಉದ್ಧವಗೀತೆಯ ಉತ್ತರಾರ್ಧದಿಂದ ಸಮಲಂಕೃತ ವಾಗಿರುವ ಈ ದಿವ್ಯಸಂಪುಟವನ್ನು ಗ್ರಾಹಕರು ಭಕ್ತಿಪೂರ್ವಕವಾಗಿ ಸ್ವೀಕರಿಸಿ ಶ್ರೀಕೃಷ್ಣಪರಮಾತ್ಮನ ಜ್ಞಾನಾಮೃತವನ್ನು ಸವಿಯಬೇಕಾಗಿ ವಿನಂತಿಸು ತ್ತೇವೆ. ಈ ಸಂಪುಟದಲ್ಲಿ ೧೧ನೆಯ ಸ್ಕಂಧದ ಕಡೆಯ ಹದಿನಾಲ್ಕು ಅಧ್ಯಾಯಗಳು ಮುಗಿದಿದ್ದು ಹದಿಮೂರು ಅಧ್ಯಾಯಗಳಿಂದ ಸಂಪನ್ನ ವಾಗಿರುವ ೧೨ನೆಯ ಸ್ಕಂಧವೂ ಮುಗಿದಿದೆ. ಕಡೆಯಲ್ಲಿ ಸ್ಕಾಂದಪುರಾಣ ದಲ್ಲಿರುವ ವಾನಪ್ರಸ್ಥ-ಸಂನ್ಯಾಸಾಶ್ರಮಗಳ ವರ್ಣನೆಯಿದೆ. ಭಕ್ತಿ-ಜ್ಞಾನ-ಯಮ-ನಿಯಮಾದಿ ಸಾಧನೆಗಳ ನಿರೂಪಣೆಯಿದೆ. ಜ್ಞಾನಯೋಗ-ಭಕ್ತಿಯೋಗ-ಕರ್ಮಯೋಗಗಳ ನಿರೂಪಣೆಯಿದೆ. ಭಗವಂತನು ಗುಣದೋಷ ಗಳನ್ನು ವಿಚಿತ್ರವಾದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾನೆ. ಪ್ರಕೃತಿ-ಪುರುಷರನ್ನು ವಿಶ್ಲೇಷಿಸಿದ್ದಾನೆ. ಸಾಂಖ್ಯಯೋಗ, ಕ್ರಿಯಾಯೋಗಗಳನ್ನು ಪುನಃ ಹೇಳಿದ್ದಾನೆ. ಭಗವಂತನ ಗುಣಗಳ ನಿರೂಪಣೆಯಿದೆ. ಉದ್ಧವನಿಗೆ ಹೇಳಿದ ಗೀತೆಯ ವಿಷಯವಾಗಿ ಶ್ರೀಕೃಷ್ಣನೇ ಈ ಶ್ಲೋಕವನ್ನು ನಿರೂಪಿಸಿದ್ದಾನೆ.

ಅಭೀಕ್ಷ್ಣಶಸ್ತೇ ಗದಿತಂ ಜ್ಞಾನಂ ವಿಸ್ಪಷ್ಟಯುಕ್ತಿಮತ್ ।
ಏತದ್ವಿಜ್ಞಾಯ ಮುಚ್ಯೇತ ಪುರುಷೋ ನಷ್ಟಸಂಶಯಃ ॥ (೨೪-೨೮)

“ನಾನು ಸುಸ್ಪಷ್ಟವಾಗಿ ಮತ್ತು ಯುಕ್ತಿ-ಯುಕ್ತವಾಗಿ ಯಾವ ಬ್ರಹ್ಮಜ್ಞಾನದ ವರ್ಣನೆಯನ್ನು ಪುನಃ ಪುನಃ ಮಾಡಿರುವೆನೋ ಅದನ್ನು ತಿಳಿದವನ ಹೃದಯದಲ್ಲಿ ಸಂಶಯವೆಂಬ ಗಂಟು ಛಿನ್ನ-ಭಿನ್ನವಾಗಿ ಹೋಗುತ್ತದೆ. ಒಡನೆಯೇ ಅವನು ಮುಕ್ತನಾಗುತ್ತಾನೆ.”

ಇದಕ್ಕಿಂತ ಮಿಗಿಲಾಗಿ ಶ್ರೀಕೃಷ್ಣನ ಗೀತೆಯನ್ನು ವಿವರಿಸಲು ಶಕ್ಯವಿಲ್ಲ.

೩೧ನೆಯ ಅಧ್ಯಾಯದಲ್ಲಿ ಭಗವಂತನು ಪರಮಧಾಮಕ್ಕೆ ತೆರಳಿದ ಪ್ರಸಂಗವಿದೆ. ೧೨ನೆಯ ಸ್ಕಂಧವು ಕಲಿಯುಗದ ರಾಜರ ವರ್ಣನೆಯಿಂದ ಪ್ರಾರಂಭವಾಗುತ್ತದೆ. ಕಲಿಯುಗದಲ್ಲಿ ಧರ್ಮವು ಹೇಗಿರುತ್ತದೆಂಬುದನ್ನು ನಿರೂಪಿಸಲಾಗಿದೆ. ಇಂದು ನಡೆಯುತ್ತಿರುವುದನ್ನು ಅಂದೇ ಅಲ್ಲಿ ಹೇಳಿಬಿಟ್ಟಿದ್ದಾರೆ. ಕಲಿಯುಗದೋಷದಿಂದ ಮುಕ್ತಿಹೊಂದುವ ಉಪಾಯವನ್ನೂ ಮುಂದೆ ವಿವರಿಸಿದ್ದಾರೆ. ಹೀಗೆ ರೋಚಕವಾದ ವಿಷಯಗಳ ಸಂಪತ್ತಿನಿಂದ ಈ ಸಂಪುಟವು ತುಂಬಿಹೋಗಿದೆ.

ಈ ಸಂಪುಟವನ್ನು ಮುಗಿಸುತ್ತಾ ದಯಾಸಮುದ್ರನ ಅಪಾರವಾದ ಕರುಣೆಯನ್ನು ನೆನೆಯಬೇಕಾಗಿದೆ.

ಮೂಕಂ ಕರೋತಿ ವಾಚಾಲಂ ಪಙ್ಗುಂ ಲಙ್ಘಯತೇ ಗಿರಿಮ್ ।
ಯತ್ಕೃಪಾ ತಮಹಂ ವನ್ದೇ ಪರಮಾನನ್ದಮಾಧವಮ್ ॥

ಎಂಬ ದಿವ್ಯವಾದ ಉಕ್ತಿಯನ್ನು ಕ್ಷಣ-ಕ್ಷಣಕ್ಕೂ ಸ್ಮರಿಸಿಕೊಳ್ಳಬೇಕಾಗಿದೆ. ಆಢ್ಯತೆಯಿಲ್ಲ, ವಿದ್ಯಾಪ್ರೌಢಿಮೆಯಿಲ್ಲ. ಅಂತಹವನೊಬ್ಬನನ್ನು ನೆಪವಾಗಿಟ್ಟುಕೊಂಡು ಈ ಮೂರು ಗ್ರಂಥರತ್ನಗಳನ್ನೂ ಪ್ರಕಾಶನಗೊಳಿಸಿದನಲ್ಲವೇ ದಯಾಮಯನಾದ ಪರಮಾತ್ಮ? ಹುಲ್ಲುಶತ್ತೆಯನ್ನು ವಜ್ರಾಯುಧವನ್ನಾಗಿ ಪರಿವರ್ತಿಸಬಹುದೆಂಬುದನ್ನು ತೋರಿಸಿಕೊಟ್ಟಿದ್ದಾನೆ. ವಿದ್ಯೆಯೂ ಬೇಡ; ವೇದವೂ ಬೇಡ; ಹಣವೂ ಬೇಡ. ಕೇವಲ ಅವನ ದಯೆಯೊಂದಿದ್ದರೆ; ಅಭಯವಿದ್ದರೆ ಎಲ್ಲ ಕಾರ್ಯಗಳೂ ನಡೆದುಹೋಗುತ್ತವೆ. ಮೂರು ಮೇರು ಕೃತಿಗಳು ಒಂದಾದರ ಮೇಲೊಂದು ನಿರ್ವಿಘ್ನವಾಗಿ ಹೊರಬಂದಿತೆಂದರೆ ನಂಬಲು ಸಾಧ್ಯವಾಗುವುದೇ? ಹೊರಬಂದಿರುವುದಂತೂ ನಿಶ್ಚಯ. ಆ ಮಾಲೆಯಲ್ಲಿ ಇದೇ ಕಡೆಯ ಸಂಪುಟ. ಜ್ಞಾನ-ವಿಜ್ಞಾನಶಿಖಾಮಣಿಗಳಾದ,

ಶ್ರೀರಂಗಗುರುಭಗವಂತನ ಉತ್ಸವಮೂರ್ತಿಯ ಸ್ವರೂಪದಲ್ಲಿರುವ ಪರಮ ಪೂಜ್ಯ ಶ್ರೀ ಶ್ರೀ ರಂಗಪ್ರಿಯಮಹಾದೇಶಿಕಸ್ವಾಮಿಗಳವರು ಪ್ರಕಾಶನದ ಅಧ್ಯಕ್ಷರು ಹೇಗಾದರು? ಪರಮಾತ್ಮನ ಸಂಕಲ್ಪ. ಪರಮಪೂಜ್ಯರಾದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಂದ್ರಭಾರತೀಸ್ವಾಮಿ ಗಳವರು ಪ್ರತಿ ಸಂಪುಟಕ್ಕೂ ಸುವರ್ಣಮಂತ್ರಾಕ್ಷತೆಯನ್ನು ಕಳುಹಿಸಿ ಆಶೀರ್ವದಿಸುತ್ತಿದ್ದುದು ಹೇಗೆ? ಪರಮಾತ್ಮನ ಸಂಕಲ್ಪದಂತೆ. ಅಮೆರಿಕೆಯಲ್ಲಿರುವ ಗುರುಬಂಧುಗಳಾದ ಡಾ|| ಹುಂಗಿ ಪಾಪಣ್ಣ ಈಶ್ವರರು ಭಾರತ ದರ್ಶನದ ಪ್ರಚಾರಕರಾಗಿ ತನು-ಮನ-ಧನಗಳಿಂದ ಸಹಕಾರವೀಯುತ್ತಿರುವುದಕ್ಕೆ ಕಾರಣವೇನು? ಶ್ರೀಭಗವಂತನ ಕರುಣೆ. ಸಂಪಾದಕಮಂಡಲಿಯ ವಿದ್ವಾಂಸರು ಮೂರು ದಶಕಗಳಿಂದ ನಿಃಸ್ವಾರ್ಥಸೇವೆಯನ್ನು ಹೇಗೆ ಸಲ್ಲಿಸುತ್ತಿದ್ದಾರೆ? ಭಗವಂತನ ಸಂಕಲ್ಪದಿಂದ. ನೂರಾರು ಮಂದಿ ಈ ರತ್ನತ್ರಯಗಳನ್ನು ಮನೆ-ಮನೆಗೆ ಒಯ್ದು ಹಂಚುತ್ತಿರುವುದು ಹೇಗೆ? ಪರಮಾತ್ಮನ ಸಂಕಲ್ಪ. ಮನೆ ಮಕ್ಕಳೂ ಮಡದಿಯೂ ಯಾವುದೇ ಕಷ್ಟದಲ್ಲಿಯೂ ಈ ಮಹಾಕಾರ್ಯಕ್ಕೆ ಒತ್ತಾಸೆ ನೀಡುತ್ತಿರುವುದು ಹೇಗೆ? ದೈವಸಂಕಲ್ಪ. ಕಷ್ಟಸಮಯದಲ್ಲಿ ಹಲವಾರು ದಾನಿಗಳು ಮುಂದೆ ಬಂದು ಸಹಕರಿಸುತ್ತಿರುವುದಕ್ಕೇನು ಕಾರಣ? ದೈವಪ್ರೇರಣೆ. ಸೌಮನಸ್ಯದಿಂದಲೂ, ಸೌಹಾರ್ದಭಾವನೆಯಿಂದಲೂ, ಮೂರು ದಶಕಗಳಿಂದ ಸನ್ಮಾನ್ಯ ಶ್ರೀ ವಿ. ಸೂರ್ಯನಾರಾಯಣ್‌ರವರು ಕೋಶಾಧ್ಯಕ್ಷರಾಗಿ ಹೇಗೆ ಸಹಕರಿಸುತ್ತಿದ್ದಾರೆ? ಋಷಿ-ಮುನಿಗಳ ಪೂರ್ಣಾ ನುಗ್ರಹವಿರುವುದರಿಂದ. ಮುದ್ರಣಾಲಯದಲ್ಲಿ ಕೆಲಸಗಾರರು ಮಹಾಭಾರತವು ಪ್ರಾರಂಭವಾದಾಗಿನಿಂದಲೂ ಇದುವರೆಗೂ ಶ್ರದ್ಧಾಭಕ್ತಿ ಗಳಿಂದ ಕೆಲಸಮಾಡುತ್ತಿರುವುದಕ್ಕೆ ಏನು ಕಾರಣ? ಭಗವಂತನ ಕಾರ್ಯಕ್ಕೆ ಆ ಪ್ರಭುವಿನದೇ ಪ್ರಚೋದನೆ.

ಇದು ಹೇಗೆ ನಡೆಯಿತು?-ಎಂಬುದನ್ನು ಕಾರಣ ಕೊಟ್ಟು ಹೇಳಲಾಗುವುದಿಲ್ಲ. ದೈವಾನುಗ್ರಹದಿಂದ ನಡೆಯುತ್ತಿದೆ. ಇಷ್ಟು ಮಾತ್ರ ಹೇಳಲು ಸಾಧ್ಯ. ೫೨ ಸಂಪುಟಗಳ ರತ್ನತ್ರಯವನ್ನು ದಯಾಸಾಗರನಾದ ಪರಮಾತ್ಮನು ತಾನೇ ಪ್ರಕಾಶಿಸಿ ಸಮರ್ಪಿಸಿಕೊಂಡಿದ್ದಾನೆ.

ಹೊಸ ಪ್ರಕಾಶನವನ್ನು ಕೈಗೆತ್ತಿಕೊಳ್ಳಲು ಅವನ ಪ್ರೇರಣೆಯಿಲ್ಲ.

ಪರ್ವತೋಪಮವಾದ ಪುನರ್ಮುದ್ರಣದ ಕಾರ್ಯವು ನಡೆಯಬೇಕಾಗಿದೆ. ಪುನರ್ಮುದ್ರಣಮಾಡಿ ಲಕ್ಷ-ಲಕ್ಷ ಕನ್ನಡ ಬಂಧುಗಳಿಗೆ ಈ ಗ್ರಂಥರತ್ನಗಳನ್ನು ಒದಗಿಸಬೇಕೆನ್ನುವ ಆಶಯವಿದೆ. ಆದರೆ ಅವನು 'ಅಸ್ತು' ಎನ್ನಬೇಕು. ಅಭಯಹಸ್ತವನ್ನು ತಲೆಯ ಮೇಲೆ ಇರಿಸಬೇಕು. ಆಗ ಸಾಧ್ಯವಾದೀತು. ಈ ಕಡೆಯ ಸಂಪುಟಕ್ಕೆ ವಿನಮ್ರವಚನಗಳನ್ನು ಬರೆಯುತ್ತಿರುವ ಈ ಮಂಗಳ ಮುಹೂರ್ತ ಅತ್ಯಂತ ಆನಂದದಾಯಕವಾಗಿದೆ. ಮನಸ್ಸು ದೇವದೇವನ ಅಡಿದಾವರೆಗಳಲ್ಲಿ ನಿಂತು ನಲಿಯುತ್ತಿದೆ. ಜೀವನವು ಸಾರ್ಥಕತೆಯನ್ನು ಕಂಡಿದೆ.

ಶ್ರೀಮದ್ಭಾಗವತದ ೮ನೆಯ ಸಂಪುಟದ ಪ್ರಕಾಶನ ಸಮಾರಂಭವು ಧಾತೃ-ಮಾರ್ಗಶೀರ್ಷ ಶುದ್ಧ ತ್ರಯೋದಶೀ ರವಿವಾರದಂದು (ತಾ:22-12-1996) ಪ್ರದೋಷಕಾಲದಲ್ಲಿ ನಡೆಯಿತು. ಪೂಜ್ಯರಾದ ಯತಿದ್ವಯರನ್ನು ಪೂರ್ಣಕುಂಭ ಸ್ವಾಗತದೊಂದಿಗೆ ವೇದಿಕೆಗೆ ಕರೆತರಲಾಯಿತು. ವೇದಘೋಷವಾದ ಬಳಿಕ ಶತಾವಧಾನೀ ರಾ. ಗಣೇಶ್ ವಿರಚಿತ ಸ್ವಾಗತಪದ್ಯಮಾಲಿಕೆಯನ್ನು ಡಾ|| ಪದ್ಮಶ್ರೀ ವಾಚಿಸಿದರು.

ಧನುರ್ಮಾಸದ ವಿಶೇಷತೆ

ಅನಂತರ ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದ ಭಾರತ ದರ್ಶನ ಪ್ರಕಾಶನದ ಸಂಚಾಲಕ ತುಮಕೂರಿನ ವಿದ್ವಾನ್ ಟಿ. ಎನ್. ಪ್ರಭಾಕರರವರು 'ಮಾಸಗಳಲ್ಲೆಲ್ಲಾ ಮಾರ್ಗಶೀರ್ಷಮಾಸವೇ ಶ್ರೇಷ್ಠವೆಂದು ಗೀತಾಚಾರ್ಯನ ಉಪದೇಶವಾಗಿದೆ. ಈ ಮಾಸವನ್ನೇ ಧನುರ್ಮಾಸವನ್ನಾಗಿ ಕರೆಯಲಾಗುತ್ತದೆ. ಈ ಮಾಸದಲ್ಲಿ ಗೀತಾಚಾರ್ಯನಾದ ಶ್ರೀಕೃಷ್ಣಪರಮಾತ್ಮನ ಲೀಲಾವಿಭವಗಳನ್ನು ಅನುಸಂಧಾನಮಾಡಿಕೊಳ್ಳಲು ಪೂರಕವಾಗುವಂತೆ ಭಾಗವತದ ಪ್ರಕಾಶನವಾಗುತ್ತಿದೆಯೆಂದು ತಿಳಿಸಿದರು. 1997ರ ಮೇ ತಿಂಗಳಿನಲ್ಲಿ ಶ್ರೀಮದ್ಭಾಗವತದ ಕೊನೆಯ ಸಂಪುಟವು ಪ್ರಕಟಗೊಳ್ಳಲಿದ್ದು, ಅದರ ನೆನಪಿಗಾಗಿ ಭಾಗವತಪ್ರಕಾಶನದ ಮಹಾಮಂಗಳೋತ್ಸವವನ್ನು ವ್ಯವಸ್ಥೆಮಾಡಲು ನಡೆದಿರುವ ಸಿದ್ಧತೆಗಳ ಬಗ್ಗೆ ತಿಳಿಸಿ, ಅದಕ್ಕೆ ಗ್ರಾಹಕರು ಹಾಗೂ ಹಿತೈಷಿಗಳು ಸರ್ವವಿಧದ ನೆರವನ್ನೂ ನೀಡಬೇಕೆಂದು ಪ್ರಾರ್ಥಿಸಿದರು.

ಅನಂತರ ಶ್ರೀರಾಮಚಂದ್ರಾಪುರಮಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀಮದ್ರಾಘವೇಂದ್ರಭಾರತೀಸ್ವಾಮೀಜೀಯವರು ಭಾಗವತ ಸರಸ್ವತಿಯನ್ನು ಅರ್ಚಿಸಿ, ಸಂಪುಟವನ್ನು ಬಿಡುಗಡೆಮಾಡಿದರು. ಶೇಷಮಹಾಗಣಪತಿ ಮಹಿಳಾ ಸಂಘದ ಸದಸ್ಯರು ಪ್ರಕಾಶಿತ ಸಂಪುಟದ ಹೃದಯಭಾಗವಾದ ಶ್ರೀಕೃಷ್ಣವಿಭೂತಿಯೋಗವನ್ನು ಸುಶ್ರಾವ್ಯವಾಗಿ ಹಾಡಿದರು.

ದೇವನೊಬ್ಬ; ನಾಮಹಲವು

ಅನಂತರ ಸಂಪುಟವನ್ನು ಪರಿಚಯಿಸಿದ ಭಾರತ ದರ್ಶನದ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ರಂಗಪ್ರಿಯಮಹಾ ದೇಶಿಕಸ್ವಾಮಿಗಳವರು 'ದೇವನೊಬ್ಬ, ನಾಮ ಹಲವು' ಎಂಬ ಭಾರತದ ಮಹಾಸಂದೇಶವನ್ನು ಇಲ್ಲಿ ಚೆನ್ನಾಗಿ ಪ್ರತಿಪಾದಿಸಲಾಗಿದೆ. ಭಗವಂತನಿಗೆ ಏಕಾದಶೀತಿಥಿಯು ಪರಮಪ್ರಿಯವಾಗಿರುವಂತೆ ಭಾಗವತದ ೧೧ನೆಯ ಸ್ಕಂಧವು ಸಾರದಲ್ಲಿ ಸಾರಿಷ್ಠವಾಗಿದೆ. ಗೀತೆಯ ಸಂಕ್ಷಿಪ್ತರಸವನ್ನೇ ಇಲ್ಲಿ ಕಾಣಬಹುದು. ಜ್ಞಾನಿಗಳ, ಭಕ್ತರ ಲಕ್ಷಣದ ಬಗ್ಗೆ ಉತ್ತಮ ನಿರೂಪಣೆಯಿದೆ. ಯೋಗ, ಸಾಂಖ್ಯ, ಧರ್ಮಶಾಸ್ತ್ರಗಳ ವಿಚಾರಗಳೂ ಇಲ್ಲಿ ಮೂಡಿಬಂದಿವೆ.

ಸಿದ್ಧಿ: ಹಾವು-ಏಣಿ ಆಟದಂತೆ

ಅಣಿಮಾದಿ 8 ಸಿದ್ಧಿಗಳ ಬಗ್ಗೆ ನಾವು ಎಲ್ಲೆಡೆ ಕೇಳಿದ್ದೇವೆ. ಆದರೆ ಇಲ್ಲಿ 18 ಸಿದ್ಧಿಗಳ ಬಗ್ಗೆ ತಿಳಿಸಲಾಗಿದೆ. ಭಗವದಾರಾಧನೆಯನ್ನು ತದೇಕ ಚಿತ್ತದಿಂದ ಹತ್ತಾರು ವರ್ಷಗಳ ಕಾಲ ಮಾಡಿದವರಿಗೆ ಕೆಲವು ಸಿದ್ಧಿಗಳು ಪ್ರಾಪ್ತವಾಗುತ್ತವೆ. ಆದರೆ ಇವು ಹಾವು-ಏಣಿ ಆಟದಂತೆ ಎಂದು ಸಾಧಕರು ಚೆನ್ನಾಗಿ ತಿಳಿದಿರಬೇಕೆಂದು ಅವರು ಹೇಳಿದರಲ್ಲದೆ ಇವುಗಳಿಂದಾಗಿ ಸಾಧಕರು ತಮ್ಮ ಸಾಧನೆಯ ದಿಕ್ಕನ್ನು ಬದಲಾಯಿಸಿಕೊಳ್ಳಬಾರದೆಂದೂ ನುಡಿದರು. ವರ್ಣಧರ್ಮಗಳ ಬಗ್ಗೆ ಈ ಸಂಪುಟದಲ್ಲಿ ವಿಶೇಷ ಅಧ್ಯಾಯವಿದ್ದು, ವರ್ಣಗಳಲ್ಲಿ ಪ್ರತಿಯೊಂದೂ ಕೂಡ ತಮ್ಮ ತಮ್ಮ ವಿಷಯಗಳಲ್ಲಿ ಶ್ರೇಷ್ಠ

ಹಾಗೂ ಪರಸ್ಪರ ರಕ್ಷಕಗಳು ಎಂಬುದನ್ನು ೧೧ನೆಯ ಸ್ಕಂಧದಲ್ಲಿ ಮನೋಜ್ಞವಾಗಿ ನಿರೂಪಿಸಲಾಗಿದೆಯೆಂದೂ ಅವರು ಹೇಳಿದರು.

ಮಾನವಜನ್ಮ-ಪುಣ್ಯವಿಶೇಷ

ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀಮದ್ರಾಘವೇಂದ್ರಭಾರತೀ ಸ್ವಾಮಿಗಳವರು ಅನುಗ್ರಹಭಾಷಣಮಾಡಿ "ಮಾನವಜನ್ಮವೆಂಬುದು ಮಹತ್ತರ ಪುಣ್ಯವಿಶೇಷದ ಫಲ. ಈ ಪುಣ್ಯಪರಂಪರೆಯನ್ನು ಉಳಿಸಿಕೊಳ್ಳಲು ಅವನು ಉತ್ತಮಕಾರ್ಯಗಳನ್ನು ಮಾಡಬೇಕು. ಜೀವಿಕೆಗಾಗಿ ಯಾವುದೇ ವೃತ್ತಿಯನ್ನು ಆಶ್ರಯಿಸಿದರೂ ದೈವೀಚಿಂತನೆ ಹಾಗೂ ಸತ್ಸಂಗಕ್ಕಾಗಿ ನಿಗದಿತಸಮಯವನ್ನು ಮೀಸಲಿಡಬೇಕು" ಎಂದು ಕರೆನೀಡಿದರು.

ಅವರು ಶ್ರೀಮಠದ ಪರವಾಗಿ ಸಂಪಾದಕಮಂಡಲಿಯ ವಿದ್ವಾಂಸರಿಗೆ ಶಾಲನ್ನು ಹೊದಿಸಿ ಸುವರ್ಣಮಂತ್ರಾಕ್ಷತೆ ಅನುಗ್ರಹಿಸಿ ಗೌರವಿಸಿದರು. ವಿದ್ವಾನ್ ಟಿ. ಎನ್. ಪ್ರಭಾಕರ ಇವರು ಕೃತಜ್ಞತೆಗಳನ್ನು ಸಲ್ಲಿಸಿದರು.

ಗುರುಬಂಧುಗಳಾದ ಡಾ|| ಹುಂಗಿ ಪಾಪಣ್ಣ ಈಶ್ವರರವರು ಅಮೆರಿಕೆಯಲ್ಲಿ ನಮ್ಮ ಪ್ರತಿನಿಧಿಗಳಾಗಿ ಕೆಲಸಮಾಡುತ್ತಿದ್ದಾರೆ. ಪ್ರಚಾರ ಕಾರ್ಯವನ್ನು ಅವರು ಮಾಡುತ್ತಿರುವಂತೆ ನಾವೂ ಮಾಡುತ್ತಿಲ್ಲವೆನ್ನಬಹುದು. ಅಷ್ಟು ಶ್ರದ್ಧಾಭಕ್ತಿಗಳಿಂದ ಈ ಗ್ರಂಥತ್ರಯದ ಪ್ರಚಾರವನ್ನು ಮಾಡುತ್ತಿದ್ದಾರೆ. ಯಾವುದಾದರೂ ವ್ಯಾಜಗಳಿಂದ ಕಾಣಿಕೆಗಳನ್ನು ಕಳುಹಿಸುತ್ತಿರುತ್ತಾರೆ. ಮಹಾಮಂಗಳ ಭೋಜನದ ಖರ್ಚಿನಲ್ಲಿ ಅರ್ಧಭಾಗವನ್ನು ವಹಿಸಿಕೊಳ್ಳುವುದಾಗಿ ತಿಳಿಸಿ ಅದರ ಬಾಬತ್ತು 1501 ಡಾಲರ್‌ಗಳನ್ನು (53 ಸಾವಿರ ರೂಪಾಯಿಗಳು) ಈಗಾಗಲೇ ಕಳುಹಿಸಿರುತ್ತಾರೆ. ಇವರಿಗೆ ಪರಮಾತ್ಮನು ತನ್ನನ್ನು ಅರಿತುಕೊಳ್ಳಲು ಮಾರ್ಗದರ್ಶನ ಮಾಡಲೆಂದು ಪ್ರಾರ್ಥಿಸುತ್ತೇವೆ. ಇವರು ಅಧ್ಯಾತ್ಮಸಾಧಕರು; ನೈಷ್ಠಿಕಬ್ರಹ್ಮಚಾರಿಗಳು. ಅಂತರಂಗದಲ್ಲಿರುವ ದೇವನನ್ನು ಕಂಡುಕೊಳ್ಳುವುದೇ ಇವರ ಜೀವನದ ಧ್ಯೇಯವಾಗಿದೆ. ದಯಾಮಯನಾದ ಪರಮಾತ್ಮನು ಅದನ್ನು ಅವರಿಗೆ ಕರುಣಿಸಲಿ.

ಪರಮಪೂಜ್ಯ ಶ್ರೀ ಶ್ರೀ ರಾಘವೇಂದ್ರಭಾರತೀಸ್ವಾಮಿಗಳವರು ರಾಮಚಂದ್ರಾಪುರ, ಪರಮಪೂಜ್ಯ ಧರ್ಮಸ್ಥಳದ ಶ್ರೀ ವೀರೇಂದ್ರಹೆಗ್ಗಡೆಯವರು, ಶ್ರೀ ಎಂ.ಎನ್.ಭಟ್‌ರವರು, ಡಾ||ಹೆಚ್. ಎನ್. ನಂಜುಂಡಯ್ಯ

ನವರು, ಶ್ರೀ ಸಿ.ಪಿ. ರವೀಂದ್ರನಾಥರು, ಅಮೆರಿಕಾದ ಶ್ರೀ ಸಿ. ಎಸ್. ಪಿ. ದಾಸರು, ಇವರೇ ಮುಂತಾದವರು ನಿರಂತರದಾನಿಗಳು. ಪ್ರತಿಯೊಂದು ಸಂಪುಟದ ಪ್ರಕಾಶನಕ್ಕೂ ಧನಸಹಾಯಮಾಡಿರುತ್ತಾರೆ. ಈ ಮಹನೀಯರೆಲ್ಲರಿಗೂ ಹೃತ್ಪೂರ್ವಕ ವಂದನೆಗಳನ್ನು ಸಮರ್ಪಿಸುತ್ತೇವೆ. ನನ್ನ ಹಿರಿಯ ಮಗ ಚಿ॥ ಯೋಗನೂ ಕೂಡ ಸಂಕಟದ ಸಮಯವರಿತು ಸಾಕಷ್ಟು ಹಣವನ್ನು ಕಳುಹಿಸುತ್ತಿರುತ್ತಾನೆ. ಇವನಿಗೆ ದಯಾಮಯನಾದ ಭಗವಂತನು ಮನಸೋಭೀಷ್ಟವನ್ನು ನೆರವೇರಿಸಿಕೊಡಲಿ.

ದಿ॥ ವೇ॥ ಬ್ರಹ್ಮಶ್ರೀ ಟಿ. ನಾರಾಯಣಶಾಸ್ತ್ರಿಗಳು (ತುರುವೇಕೆರೆ) ತಮ್ಮ ಜೀವಿತದ ಕಡೆಯವರೆಗೂ ಮಹಾಭಾರತ-ರಾಮಾಯಣ-ಭಾಗವತಗಳನ್ನು ಪ್ರಚಾರಮಾಡಿದರು. ಅವರ ಸುಪುತ್ರ ಚಿ॥ ಟಿ. ಎನ್. ಪ್ರಭಾಕರನು ಈ ಪ್ರಕಾಶನಕ್ಕೆ ಆಧಾರಸ್ತಂಭದಂತಿದ್ದಾನೆ. ಅವನ ಹತ್ತಾರು ಗೆಳೆಯರ ಮೂಲಕವಾಗಿ ಈ ಗ್ರಂಥಗಳ ಪ್ರಚಾರಕಾರ್ಯವನ್ನು ಮಾಡುತ್ತಲೇ ಇರುತ್ತಾನೆ. ಮಹಾಮಂಗಳದ ಯಶಸ್ಸಿಗೆ ಅವನೇ ಮುಖ್ಯ ಕಾರಣ. ಇಂತಹವನ ಸಹಕಾರವು ಸಿಕ್ಕಿರುವುದು ದೈವಸಂಕಲ್ಪವೇ.

ಭಾರತ ದರ್ಶನವು ಉದಯಿಸಲು ಕಾರಣರಾದ ಶ್ರೀ ಬೆ. ಸು. ನಾ. ಮಲ್ಯರು ಮತ್ತು ಮಹಾಭಾರತದ ಪ್ರಕಟಣೆಗೆ ಕಾರಣಭೂತರಾದ ಶ್ರೀಯುತರಾದ ಟಿ. ವಿ. ತಿಮ್ಮೇಗೌಡ, ಹೆಚ್. ವಿ. ಶ್ರೀರಂಗರಾಜು, ಕೆನರಾ ಬ್ಯಾಂಕಿನ ಜನರಲ್ ಮ್ಯಾನೇಜರ್ ಆಗಿದ್ದ ಯು. ಕೃಷ್ಣಕಿಣಿ, ಅರ್ಥ ಸಚಿವರಾಗಿದ್ದ ಎಂ. ವೈ. ಘೋರ್ಪಡೆ, ಡಾ॥ ಎನ್. ಎಸ್. ಅನಂತರಂಗಾಚಾರ್, ಶ್ರೀ ಎ. ಭರತ್ ಇವರ ಶುಭನಾಮಗಳನ್ನು ಸ್ಮರಿಸುವುದು ಅಗತ್ಯವಾಗಿದೆ. ಈ ಮಹನೀಯರು ಹಾಕಿಕೊಟ್ಟ ಏಣಿಯಿಂದಲೇ ಈ ಉತ್ತುಂಗ ಶಿಖರವನ್ನು ಏರಲು ಸಾಧ್ಯವಾಯಿತು. ಇವರುಗಳ ಸಹಕಾರಗಳನ್ನು ಕೃತಜ್ಞತೆಯಿಂದ ಸ್ಮರಿಸಲಾಗುವುದು.

ಪರಮಪೂಜ್ಯ ಶ್ರೀ ಶ್ರೀ ರಂಗಪ್ರಿಯಮಹಾದೇಶಿಕಸ್ವಾಮಿಗಳವರ ನೇತೃತ್ವದಲ್ಲಿ ಸಂಪಾದಕಮಂಡಲಿಯ ವಿದ್ವಾಂಸರು ಅವಿಶ್ರಾಂತರಾಗಿ ನಿಃಸ್ಪೃಹತೆಯಿಂದ ದುಡಿಯುತ್ತಾ ಸಂಪುಟವನ್ನು ಸಂಪಾದಿಸಿಕೊಡು

ತ್ತಿದ್ದಾರೆ. ಇವರ ಕಾರ್ಯಕ್ಕೆ ಕನ್ನಡಬಾಂಧವರೆಲ್ಲರೂ ಚಿರಋಣಿಗಳಾಗಿರಬೇಕಾಗಿದೆ. ಸಾತ್ತ್ವಿಕಶಿರೋಮಣಿಗಳಾದ ಈ ಎಲ್ಲ ವಿದ್ವಾಂಸರಿಗೂ ಹೃತ್ಪೂರ್ವಕ ವಂದನೆಗಳನ್ನು ಸಮರ್ಪಿಸುತ್ತೇವೆ.

ಇನ್ನು ಪ್ರಚಾರಕರ ವಿಷಯವಾಗಿ ಎಷ್ಟು ಬರೆದರೂ ಅಲ್ಪವೇ. ಗ್ರಂಥಗಳನ್ನು ತಲೆಯ ಮೇಲೆ ಹೊತ್ತು ಮನೆ-ಮನೆಗೆ ಸುತ್ತಾಡಿ ಹಂಚುತ್ತಿರುವವರು ಅದೆಷ್ಟೋ ಮಂದಿ. ಅನೇಕ ವೇಳೆ ಅವರು ಯಾರೆಂಬುದೂ ನಮಗೆ ತಿಳಿದಿರುವುದಿಲ್ಲ. ಇಷ್ಟು ನಿಃಸ್ವಾರ್ಥತೆಯಿಂದ ಅವರ ಸೇವೆಯು ಗ್ರಂಥರತ್ನಗಳ ಪ್ರಚಾರಕ್ಕೆ ನಡೆಯುತ್ತಿದೆ. ದಯಾಮಯನಾದ ಭಗವಂತನು ಅವರೆಲ್ಲರಿಗೂ ಇಷ್ಟಾರ್ಥಗಳನ್ನು ದಯಪಾಲಿಸಲಿ.

ಈ ಗ್ರಂಥವನ್ನು ಪಠಿಸಿದವರಿಗೆ, ಪಠಿಸಿದುದನ್ನು ಕೇಳಿದವರಿಗೆ, ಕೊಡಿಸಿಕೊಟ್ಟವರಿಗೆ, ಪಡೆದುಕೊಂಡು ಅಧ್ಯಯನ ಮಾಡುವವರಿಗೆ ದಯಾಮಯನಾದ ಭಾಗವತಗ್ರಂಥಸ್ವರೂಪನಾದ ಭಗವಂತನು ಐಹಿಕವಾದ ಮತ್ತು ಆಮುಷ್ಮಿಕವಾದ ಸುಖಗಳನ್ನು ದಯಪಾಲಿಸಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

—ಪ್ರಕಾಶಕರು.

卐

॥ ಶ್ರೀರಂಗಸದ್ಗುರವೇ ನಮಃ ॥

ಮುನ್ನುಡಿ

ಭಾರತ ದರ್ಶನ ಸಂಸ್ಥೆಯು ಶ್ರೀಭಗವದನುಗ್ರಹದಿಂದ ಸಂಪನ್ನಗೊಳಿಸಿ ಸಮರ್ಪಣೆ ಮಾಡುತ್ತಿರುವ ಮಂಗಳಾಂತ್ಯವಾದ ಶ್ರೀಮದ್ಭಾಗವತ ನವಮ ಸಂಪುಟವನ್ನು ಕುರಿತು ಮಂಗಳಾಶಂಸನೆಗಳು. "ಶ್ರೀದಃ ಶ್ರೀಶಃ ಶ್ರೀನಿವಾಸಃ 'ಶ್ರೀನಿಧಿಃ ಶ್ರೀ ವಿಭಾವನಃ' 'ಕಶ್ರೀಃ ಶ್ರಿಯಃ ಪರಮಸತ್ತ್ವಸಮಾಶ್ರಯಃ ಕಃ' ಎಂಬಂತೆ ಮಂಗಲದೇವತೆಗೂ ಮಾಂಗಲ್ಯವಾಗಿ ನಿತ್ಯನಿಕೇತನನಾಗಿರುವ ಶ್ರೀಕೃಷ್ಣಪರಮಾತ್ಮನು ಇದಕ್ಕೆ ತನ್ನ ಅನುಗ್ರಹಾಮೃತದ ಧಾರೆಯಿಂದ ಅಭಿಷೇಕಮಾಡಲಿ.

ಶ್ರೀಮದ್ಭಾಗವತದ ಏಕಾದಶಸ್ಕಂಧದ ಕಡೆಯ ಹದಿನಾಲ್ಕು ಅಧ್ಯಾಯಗಳು ಸಮಗ್ರವಾದ ಹನ್ನೆರಡನೆಯ ಸ್ಕಂಧವೂ ಮತ್ತು ಶ್ರೀಸ್ಕಾಂದ ಪುರಾಣೋಕ್ತ ಭಾಗವತಮಾಹಾತ್ಮ್ಯದ ಅಧ್ಯಾಯಗಳೂ ಈ ಹಿಂದಿನ ಸಂಪುಟಗಳಲ್ಲಿರುವಂತೆಯೇ ಕನ್ನಡ ಭಾಷಾನುವಾದಸಹಿತವಾಗಿ ಈ ಶ್ರೀಕೋಶವನ್ನು ಅಲಂಕರಿಸಿವೆ. ಈ ಏಕಾದಶ ಮತ್ತು ದ್ವಾದಶಸ್ಕಂಧಗಳ ಯೋಗವು ಏಕಾದಶೀ, ದ್ವಾದಶೀತಿಥಿಗಳಂತೆ ಯೋಗೇಶ್ವರನಿಗೆ ಪ್ರಿಯತಮವಾಗಿ ಪವಿತ್ರತಮವಾದ ಭಗವದ್ಭಾಗವತಧರ್ಮ ಮತ್ತು ಕಥಾಭಾಗಗಳಿಂದ ಬೆಳಗುತ್ತಿದೆ. ಇವುಗಳಲ್ಲಿ ಏಕಾದಶಸ್ಕಂಧದ ಭಾಗವು ಭಗವಂತನಾದ ಶ್ರೀಕೃಷ್ಣನ ಪರಂಧಾಮಪ್ರಾಪ್ತಿಯನ್ನು ವರ್ಣಿಸಿದರೆ ದ್ವಾದಶಸ್ಕಂಧವು ಭಾಗವತಶಿರೋಮಣಿಯಾದ ವಿಷ್ಣುರಾತನ ಪರಂಧಾಮಪ್ರಾಪ್ತಿಯನ್ನು ವರ್ಣಿಸುತ್ತದೆ. ಎರಡೂ ಪಾವನತಮವಾದ ಪ್ರಸಂಗಗಳು. ಈ ಸ್ಕಂಧಗಳು ಭಗವಂತನ ಮತ್ತು ಭಾಗವತದ ಮಹಿಮೆಯನ್ನು ಮೊಳಗಿದರೆ ಕಡೆಯದಾಗಿರುವ ಶ್ರೀಸ್ಕಾಂದಪುರಾಣದ ಅಧ್ಯಾಯಗಳು ಆ ಮಹಿಮೆಗೆ ಶ್ರೀಕೋಶವಾಗಿರುವ ಶ್ರೀಮದ್ಭಾಗವತದ ಮಾಹಾತ್ಮ್ಯವನ್ನು ಕಥೋದಾಹರಣೆಯ ಮೂಲಕ ಘೋಷಣೆಮಾಡುತ್ತವೆ. ಗ್ರಂಥದ ಪ್ರಥಮಸಂಪುಟವು ಶ್ರೀಮದ್ಭಾಗವತಮಾಹಾತ್ಮ್ಯದ ಆದಿಮಂಗಲದಿಂದಲೂ, ಮಧ್ಯಭಾಗವು ಭಗವಚ್ಚರಿತದ ಮಧ್ಯಮಂಗಲದಿಂದಲೂ ಮತ್ತು ಅಂತಿಮಭಾಗವು ಮತ್ತೆ

ಶ್ರೀಮದ್ಭಾಗವತಮಾಹಾತ್ಮ್ಯದ ಅಂತ್ಯಮಂಗಲದಿಂದಲೂ ಸಂಪನ್ನವಾಗಿ ಸಮಗ್ರಗ್ರಂಥವು ಸರ್ವಮಂಗಲವಾಗಿ ಶೋಭಿಸುತ್ತಿದೆ. ಸಂಪುಟದ ಪ್ರಾರಂಭದ ಹದಿನಾಲ್ಕು ಅಧ್ಯಾಯಗಳಲ್ಲಿ ವರ್ಣಾಶ್ರಮಧರ್ಮಯೋಗಾಂಗ ಗಳು, ಸಾಂಖ್ಯಯೋಗ-ಕ್ರಿಯಾಯೋಗಗಳು ಮತ್ತು ಭಗವಂತನಿಂದಲೇ ಉಪದಿಷ್ಟವಾದ ಭಾಗವತಧರ್ಮ, ಯಾದವರ ವಿನಾಶ ಮತ್ತು ಶ್ರೀಭಗವಂತನ ಸ್ವಧಾಮಪ್ರಾಪ್ತಿ–ಇವುಗಳನ್ನು ನಿರೂಪಣೆಮಾಡಿ ಪುರೂರವ ಮತ್ತು ತಿತಿಕ್ಷುಬ್ರಾಹ್ಮಣ ಉಪಾಖ್ಯಾನಗಳ ಮೂಲಕ ವೈರಾಗ್ಯದ ಮಾಹಾತ್ಮ್ಯವನ್ನು ಪ್ರತಿಪಾದಿಸಲಾಗಿದೆ.

ಇಲ್ಲಿ ಬೋಧಿತವಾಗಿರುವ ಧರ್ಮೋಪದೇಶ ಮತ್ತು ಆಧ್ಯಾತ್ಮಿಕೋಪದೇಶಗಳು ಮಹಾಭಾರತದ ಶ್ರೀಗೀತೋಪದೇಶಕ್ಕೆ ಕೈಗನ್ನಡಿಗಳಾಗಿವೆ. ಶ್ರೀಗೀತೆಯಲ್ಲಿ ಭಗವಂತನು ಮಿತ್ರಶ್ರೇಷ್ಠನೂ ಭಕ್ತಶ್ರೇಷ್ಠನೂ ಆದ ಅರ್ಜುನನನ್ನು ನೆಪವನ್ನಾಗಿಟ್ಟುಕೊಂಡು-

ಸಾರಥ್ಯಮರ್ಜುನಸ್ಯಾಜೌ ಕುರ್ವನ್ ಗೀತಾಮೃತಂ ದದೌ ।
ಲೋಕತ್ರಯೋಪಕಾರಾಯ ತಸ್ಮೈ ಕೃಷ್ಣಾತ್ಮನೇ ನಮಃ ॥

ಎಂಬಂತೆ ಇಡೀ ಜಗತ್ತಿನ ಕಲ್ಯಾಣಕ್ಕಾಗಿ ಉಪದೇಶಮಾಡಿದಂತೆ, ಇಲ್ಲಿಯೂ ಅದೇ ಭಗವಂತನೇ ಭೃತ್ಯಶ್ರೇಷ್ಠನೂ, ಮಿತ್ರಶ್ರೇಷ್ಠನೂ ಆದ ಉದ್ಧವನನ್ನು ವ್ಯಾಜವನ್ನಾಗಿಟ್ಟುಕೊಂಡು **'ಪ್ರೀತಃ ಕ್ಷೇಮಾಯ ಲೋಕಾನಾಂ ಧರ್ಮಾನಾಹ ಸನಾತನಾನ್'** ಎಂಬಂತೆ ಸರ್ವಲೋಕ ಗಳ ಕ್ಷೇಮಕ್ಕಾಗಿ ಧರ್ಮ-ಬ್ರಹ್ಮಗಳನ್ನು ಮನೋಜ್ಞವಾಗಿ ಉಪದೇಶಿಸು ತ್ತಾನೆ. ಅಲ್ಲಿ ಬಂಧುಪ್ರೇಮದ ಕಾರಣದಿಂದ ಶೋಕ-ಮೋಹಮಹೋವಧಿ ಯಲ್ಲಿ ಮುಳುಗಿದ್ದ ಮಿತ್ರನನ್ನು ಸಂಬೋಧಿಸಿದರೆ, ಇಲ್ಲಿ ಭಗವಂತನು ಪರಂಧಾಮವನ್ನು ಹೊಂದಿದ ಬಳಿಕ ಆತನ ಅಗಲಿಕೆಯ ದುಃಖವನ್ನು ಹೇಗೆ ಸಹಿಸುವುದು?–ಎಂದು ಚಿಂತಾಶೋಕಗಳಲ್ಲಿ ಮಗ್ನನಾಗಿರುವ ಮಿತ್ರ ನನ್ನು ಸಂಬೋಧಿಸಿ ಉಪದೇಶಾಮೃತವು ಹರಿದುಬಂದಿದೆ. ಉದ್ಧವನು ಧರ್ಮಜ್ಞನೇ ಆಗಿದ್ದರೂ ಧರ್ಮದ ಬಗೆಗೆ ವಿಶೇಷ ತಿಳಿವಳಿಕೆಗಾಗಿ **'ಕೃಷ್ಣಂ ಧರ್ಮಂ ಸನಾತನಂ' 'ಧರ್ಮಸ್ಯ ಪ್ರಭುರಚ್ಯುತಃ'**

ಎಂಬಂತೆ ಧರ್ಮಸ್ವರೂಪಿಯೂ ಧರ್ಮಪ್ರಭುವೂ ಆಗಿರುವ ಪರಮಾತ್ಮನನ್ನು ಪ್ರಾರ್ಥನೆಮಾಡುತ್ತಾನೆ. ಹಿಂದೆ ಹಂಸರೂಪಿಯಾಗಿ ಸ್ವಾಮಿಯು ಬ್ರಹ್ಮದೇವರಿಗೆ ಉಪದೇಶಮಾಡಿದ್ದ ಪರಮಧರ್ಮವು ಕಾಲಕ್ರಮದಲ್ಲಿ ಲುಪ್ತಪ್ರಾಯವಾಗಿಬಿಟ್ಟಿದೆ. ಈಗ ಶ್ರೀಕೃಷ್ಣನು ಪರಂಧಾಮವನ್ನು ಹೊಂದಿಬಿಟ್ಟರೆ ಅದನ್ನು ಮತ್ತೆ ಹಾಗೆಯೇ ಉಪದೇಶಮಾಡುವ ಸಮರ್ಥರು ಬೇರಾರೂ ಇರುವುದಿಲ್ಲವಾದ್ದರಿಂದ ಆತನೇ ಅದೇ ಸಮಯದಲ್ಲೇ ಅದನ್ನು ತನಗೆ ಬೋಧಿಸಬೇಕೆಂದು ಉದ್ಧವನ ಭಕ್ತಿಪೂರ್ವಕವಾದ ಆಗ್ರಹ. **'ತ್ಯಕ್ತೇ ಮಹೀತಲೇ ದೇವ ವಿನಷ್ಟಂ ಕಃ ಪ್ರವಕ್ಷ್ಯತಿ.'** ಇಲ್ಲಿ ಉದ್ಧವನು ಧರ್ಮಹ್ರಾಸದ ಬಗೆಗೆ ಹೇಳಿರುವ **'ಸ ಇದಾನೀಂ ಸುಮಹತಾ ಕಾಲೇನಾಮಿತ್ರಕರ್ಶನ । ನ ಪ್ರಾಯೋ ಭವಿತಾ ಮರ್ತ್ಯಲೋಕೇ ಪ್ರಾಗನುಶಾಸಿತಃ'** ಎಂಬ ಮಾತು ಶ್ರೀಗೀತೆಯಲ್ಲಿ ಭಗವಂತನು ಹೇಳಿರುವ **'ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ'** ಎಂಬ ಮಾತಿನ ಛಾಯೆಯೇ ಆಗಿದೆ. ಹೀಗೆಯೇ ಧರ್ಮಬ್ರಹ್ಮಗಳ ಬಗೆಗೆ ಪಾರ್ಥನನ್ನು ಕುರಿತು ಉಪದೇಶಿಸಿದ ಭಗವದ್ಗೀತೆಗೂ ಉದ್ಧವನನ್ನು ಕುರಿತು ಉಪದೇಶಿಸಿದ ಈ ಭಗವದ್ಗೀತೆಗೂ ಇರುವ ಪರಮಸಾಮ್ಯವನ್ನು ಉದ್ದಕ್ಕೂ ಗಮನಿಸಬಹುದು. ಭಗವಂತನಲ್ಲಿ ಈ ಹಿಂದೆ ಬಂದಿರುವ ವಿಭೂತಿಯೋಗದ ವರ್ಣನೆಯಂತೂ ನೇರವಾಗಿ ಗೀತೋಕ್ತ ವಿಭೂತಿಯೋಗದ ಅವತಾರವೇ ಆಗಿದೆ. ಈ ಎರಡು ಗೀತೆಗಳಿಗೂ ಅಭಿಪ್ರಾಯದಲ್ಲಿ ಮಾತ್ರವಲ್ಲದೆ ವಾಕ್ಯಗಳಲ್ಲೂ ಹೋಲಿಕೆಯಿರುವುದನ್ನು ಈ ಗ್ರಂಥಸಂಪುಟದ ಅಡಿ ಟಿಪ್ಪಣಿಗಳಲ್ಲಿ ಅನೇಕ ಕಡೆಗಳಲ್ಲಿ ಗುರುತು ಮಾಡಿದೆ. ಸ್ವಾಮಿಯು ಇಲ್ಲಿ ಉಪದೇಶಮಾಡಿರುವ ವರ್ಣಾಶ್ರಮಧರ್ಮವು ಭಕ್ತಿಯೋಗಕ್ಕೆ ಅಂಗವಾಗಿದ್ದು ಧರ್ಮಶಾಸ್ತ್ರಕ್ಕೆ ಅಧ್ಯಾತ್ಮಶಾಸ್ತ್ರದಲ್ಲಿಯೇ ತಾತ್ಪರ್ಯವೆಂಬುದನ್ನು ಸೂಚನೆ ಮಾಡಿರುತ್ತದೆ.

ಯಥಾನುಷ್ಠೀಯಮಾನೇನ ತ್ವಯಿ ಭಕ್ತಿರ್ನೃಣಾಂ ಭವೇತ್ ।
ಸ್ವಧರ್ಮೇಣಾರವಿಂದಾಕ್ಷ ತತ್ ಸಮಾಖ್ಯಾತುಮರ್ಹಸಿ ॥

ಆದರೆ ಧರ್ಮಶಾಸ್ತ್ರಗಳಲ್ಲಿ ಸಾಮಾನ್ಯವಾಗಿ **'ತಸ್ಮಾಜ್ಜ್ಯೇಷ್ಠಾಶ್ರಮೋ ಗೃಹೀ'** ಎಂದು ಗೃಹಸ್ಥಾಶ್ರಮದ ಅಗ್ಗಳಿಕೆಯನ್ನು ಸಾರಿದರೆ

ಇಲ್ಲಿ 'ಆಶ್ರಮಾಣಾಮಹಂ ತುರ್ಯಂ' 'ನ್ಯಾಸಃ ಶೀರ್ಷಣಿ ಸಂಸ್ಥಿತಃ' ಎಂದು ಸಂನ್ಯಾಸಾಶ್ರಮದ ಉತ್ಕರ್ಷವನ್ನು ಸಾರಿರುವುದು ಈ ಪಾರಮಹಂಸ್ಯಸಂಹಿತೆಯ ಭಾವಕ್ಕೆ ಸರ್ವಥಾ ಉಚಿತವಾಗಿದೆ. ಆತ್ಮಜ್ಞಾನ ಆತ್ಮಗುಣಗಳೇ ಸಂನ್ಯಾಸದ ತಿರುಳು. ಹೊರಗಿನ ವೇಷಗಳಲ್ಲ. ವಾಙ್ಮನಃಕಾಯಗಳಲ್ಲಿ ದಂಡನೆಯಿಲ್ಲದೆ ಹೊರಗೆ ತ್ರಿದಂಡಗಳನ್ನು ಹಿಡಿದ ಮಾತ್ರದಿಂದ ಸಂನ್ಯಾಸವು ಸಿದ್ಧಿಸುವುದಿಲ್ಲ.

'ಭಿಕ್ಷೋರ್ಧರ್ಮಃ ಶಮೋಽಹಿಂಸಾ' 'ನಹ್ಯೇತೇ ಯಸ್ಯ ಸನ್ತ್ಯಙ್ಗ ವೇಣುಭಿರ್ನಭವೇದ್ಯತಿಃ' 'ಜ್ಞಾನವೈರಾಗ್ಯರಹಿತಃ ತ್ರಿದಂಡಮುಪಜೀವತಿ। ಸುರಾನಾತ್ಮಾನಮಾತ್ಮಸ್ಥಂ ನಿಹ್ನುತೇ ಮಾಂ ಚ ಸರ್ವದಾ'

ಎಂಬ ಇಲ್ಲಿಯ ವಾಕ್ಯಗಳು **'ನಲಿಙ್ಗಂ ಧರ್ಮಕಾರಣಂ'** ಎಂದು ಮನುವು ಈ ಬಗೆಗೆ ಹೇಳಿರುವ ಉಪದೇಶದ ವ್ಯಾಖ್ಯಾನವಾಗಿದೆ. ಉದ್ಧವನಿಗೆ ಸಾಂಖ್ಯಯೋಗಗಳನ್ನು ಉಪದೇಶಿಸುವಾಗ ಹಿಂದೆ ಭೀಷ್ಮಪಿತಾಮಹನು ಧರ್ಮರಾಜನಿಗೆ ಉಪದೇಶಮಾಡಿದ್ದ ಆಧ್ಯಾತ್ಮಧರ್ಮದ ಸಾರವೇ ಇದು ಎಂದು ಸ್ವಾಮಿಯೇ ಸಾರುತ್ತಾನೆ. **'ತಾನಹಂ ತೇಽಭಿಧಾಸ್ಯಾಮಿ ದೇವವ್ರತಮುಖಾಚ್ಚ್ಯುತಮ್'** ಶ್ರೀಮದ್ಭಾಗವತವು ಮಹಾಭಾರತದ ಮುಂದುವರಿಕೆಯಾಗಿದೆಯೆಂಬುದು ಇಲ್ಲಿ ದ್ಯೋತಿತವಾಗಿದೆ.

ಮೋಕ್ಷೋಪಾಯವಾದ ಯೋಗಗಳು ಶಾಸ್ತ್ರಗಳಲ್ಲಿ ಅನೇಕ ಪ್ರಕಾರ ಗಳಲ್ಲಿ ಹೇಳಲ್ಪಟ್ಟಿವೆ.* ಆದರೆ ಅವೆಲ್ಲವೂ ಜ್ಞಾನಯೋಗ, ಭಕ್ತಿಯೋಗ ಮತ್ತು ಕರ್ಮಯೋಗ ಇವುಗಳಲ್ಲಿಯೇ ಅಂತರ್ಗತವಾಗಿವೆಯೆಂದು ಇಲ್ಲಿ ಸ್ಪಷ್ಟವಾಗಿ ಸ್ವಾಮಿಯು ಸಾರುತ್ತಾನೆ. **'ಜ್ಞಾನಂ ಕರ್ಮ ಚ ಭಕ್ತಿಶ್ಚ ನೋಪಾಯೋಽನ್ಯೋಽಸ್ತಿ ಕುತ್ರಚಿತ್'** ಇಷ್ಟು ಮಾತ್ರವಲ್ಲ. ಅಧಿಕಾರಿ ಭೇದದಿಂದ ಈ ಮೂರು ಯೋಗಗಳೂ ಉಪಯೋಗಪಡುತ್ತವೆಯೆಂಬುದನ್ನೂ ಅವನು ಘೋಷಿಸುತ್ತಾನೆ. ಅತ್ಯಂತ ವಿರಕ್ತರಾದವರಿಗೆ ಜ್ಞಾನಯೋಗ. ಅಷ್ಟು ವೈರಾಗ್ಯವಿಲ್ಲದೆ ಕಾಮಬುದ್ಧಿಯು ಇರುವವರಿಗೆ ಕರ್ಮಯೋಗ

* 'ಸದಾಶಿವೋಕ್ತಾನಿ ಸಪಾದಲಕ್ಷಲಯಾವಧಾನಾನಿ ವಸನ್ತಿ ಲೋಕೇ'

ಯೋಗತಾರಾವಳಿ.

ಮತ್ತು ಅತ್ಯಂತ ವಿರಕ್ತರೂ ಅಲ್ಲದೆ ಅತ್ಯಂತ ಆಸಕ್ತರೂ ಅಲ್ಲದೇ ಇರುವ ಅಧಿಕಾರಿಗಳಿಗೆ ಭಕ್ತಿಯೋಗ–ಎಂಬುದು ಅವನು ಹೇಳುವ ವಿವೇಕ.

ನಿರ್ವಿಣ್ಣಾನಾಂ ಜ್ಞಾನಯೋಗಃ ನ್ಯಾಸಿನಾಮಿಹ ಕರ್ಮಸು ।
ತೇಷ್ವನಿರ್ವಿಣ್ಣಚಿತ್ತಾನಾಂ ಕರ್ಮಯೋಗಸ್ತು ಕಾಮಿನಾಮ್ ।
ನ ನಿರ್ವಿಣ್ಣೋ ನಾತಿಸಕ್ತೋ ಭಕ್ತಿಯೋಗೋಽಸ್ಯ ಸಿದ್ಧಿದಃ ॥

ಆದರೆ ಈ ಮೂರು ಯೋಗಗಳಿಗೂ ಭಗವಂತನೇ ಕೇಂದ್ರವಾಗಿರುವುದರಿಂದ ಇವುಗಳಿಗೆ ಪರಸ್ಪರರಾಹಿತ್ಯವಿಲ್ಲ. 'ತ್ರಿಭಿರನ್ಯೋನ್ಯಸಂಗಮಃ'–ಎಂದು ಗೀತಾರ್ಥಸಂಗ್ರಹವು ಹೇಳುವಂತೆ ಪರಮಾತ್ಮಸಾಕ್ಷಾತ್ಕಾರಸಿದ್ಧಿಯಲ್ಲಿ ಈ ಮೂರೂ ಪರಸ್ಪರ ಪೋಷಕಗಳಾಗಿವೆ.

ಆವನಾಣತಿಯೊಳಿಗ ಕರ್ಮಯೋಗವಾವನ ನೆನಹು ವಿಜ್ಞಾನ ।
ವಾವನೊಳೆರಕ ಭಕುತಿಯಾ ಪರವಾಸುದೇವನಿಗೆರಗುವೆನು ॥

ಎಂಬ ಕನ್ನಡ ಕವಯಿತ್ರಿಯ ಭಗವತ್‌ಸ್ತುತಿಯನ್ನು ಇಲ್ಲಿ ಸ್ಮರಿಸಬಹುದು.

ಶ್ರೀಭಗವಂತನು ಇಲ್ಲಿ ಉಪದೇಶಿಸಿರುವ ಸಾಂಖ್ಯಯೋಗದಲ್ಲಿ ಒಂದು ವಿಶೇಷವಿದೆ. ತತ್ತ್ವಗಳ ಪರಿಗಣನೆಯಲ್ಲಿ ಜ್ಞಾನಿಗಳು ಮೂರು, ಒಂಭತ್ತು, ಹನ್ನೊಂದು, ಇಪ್ಪತ್ತಾರು–ಇತ್ಯಾದಿಯಾಗಿ ಸಂಖ್ಯಾಭೇದಗಳನ್ನು ಹೇಳಿದ್ದರೂ, ವಾಸ್ತವವಾಗಿ ಅವೆಲ್ಲಾ ಪ್ರಾಮಾಣಿಕವೇ ಆಗಿವೆ. '**ಯುಕ್ತಂ ಚ ಸನ್ತಿ ಸರ್ವತ್ರ ಭಾಷನ್ತೇ ಬ್ರಾಹ್ಮಣಾ ಯಥಾ**' ಆದುದರಿಂದ ಈ ಬಗೆಗೆ ಶುಷ್ಕವಾದ ವಾದ-ವಿವಾದಗಳು ಕೂಡದು-ಎಂಬ ಸಮನ್ವಯ ದೃಷ್ಟಿಯನ್ನು ಭಗವಂತನು ಇಲ್ಲಿ ಬೋಧಿಸುತ್ತಾನೆ. ಗುಣತ್ರಯವಿಭಾಗ ವಿವರಣೆಗಳಲ್ಲಿ ಸಾಂಖ್ಯಸಿದ್ಧಾಂತಿಗಳು ಹೇಳಿರುವುದನ್ನು ಮಾನ್ಯಮಾಡಿದರೂ ಇಲ್ಲಿ ಹೇಳಿರುವ ಸಾಂಖ್ಯವು ನಿರೀಶ್ವರಸಾಂಖ್ಯವಲ್ಲ. '**ಆಸೀತ್ ಜ್ಞಾನಮಥೋ ಹ್ಯರ್ಥ ಏಕಮೇವಾವಿಕಲ್ಪಿತಮ್**' ಕಪಿಲರು ದೇವಹೂತಿಗೆ ಹಿಂದೆ ಉಪದೇಶಮಾಡಿರುವ ದರ್ಶನವೂ ಸೇಶ್ವರಸಾಂಖ್ಯವೇ ಆಗಿದೆಯೆಂಬುದನ್ನು ಗಮನಿಸಬೇಕು. ಇದು ವೇದಾಂತಕ್ಕೆ ಪೋಷಕವೇ ಆಗಿದೆ.

ಭಗವಂತನ ಉಪಾಸನೆಯಲ್ಲಿ ವೈದಿಕ-ಲೌಕಿಕ–ಎಂದು ಎರಡು

ಪ್ರಕಾರಗಳಿವೆ. ಇವೆರಡೂ ಪರಸ್ಪರ ಮಾರಕಗಳಲ್ಲ. ಪರಸ್ಪರ ಪೂರಕಗಳೆಂಬ ಸಮನ್ವಯಸಿದ್ಧಾಂತವನ್ನು ಸ್ವಾಮಿಯು ಇಲ್ಲಿ ಸಾರುತ್ತಾನೆ. ವೈದಿಕ, ತಾಂತ್ರಿಕ ಮತ್ತು ವೈದಿಕ-ತಾಂತ್ರಿಕಮಿಶ್ರಿತ ಎಂಬ ಮೂರೂ ಪ್ರಾಮಾಣಿಕವಾದ ಉಪಾಸನಾಮಾರ್ಗಗಳೇ. ಅಧಿಕಾರಿ ಮತ್ತು ರುಚಿಭೇದಗಳಿಂದ ಅವೆಲ್ಲಾ ಗ್ರಾಹ್ಯವೆಂದು ಗೋವಿಂದನು ಇಲ್ಲಿ ಘೋಷಿಸುತ್ತಾನೆ.

ವೈದಿಕಸ್ತಾನ್ತ್ರಿಕೋ ಮಿಶ್ರ ಇತಿ ಮೇ ತ್ರಿವಿಧೋ ಮುಖಃ ।
ತ್ರಯಾಣಾಮೀಪ್ಸಿತೇನೈವ ವಿಧಿನಾ ಮಾಂ ಸಮರ್ಚಯೇತ್ ॥

ಆತನು ಇಲ್ಲಿ ವಿವರಿಸಿರುವ ಕ್ರಿಯಾಯೋಗದಲ್ಲಿ ಯಜುರಾರಣ್ಯಕದಲ್ಲಿ ಬರುವ 'ಸುವರ್ಣಂ ಘರ್ಮಂ' ಎಂಬ ಅನುವಾಕವನ್ನೂ ಮತ್ತು ಪುರುಷಸೂಕ್ತವನ್ನೂ ವಿಶೇಷವಾದ ಪೂಜಾಮಂತ್ರಗಳನ್ನಾಗಿ ಉಪದೇಶಿಸಿ ಅವುಗಳ ಜೊತೆಯಲ್ಲಿ ಭಕ್ತಿಯೋಗಕ್ಕೆ ಪೋಷಕವಾದ ತಂತ್ರಗಳನ್ನೂ ಸೇರಿಸಿ ಹೇಳಿದೆ. ಜ್ಞಾನಯೋಗವನ್ನು ಹೇಳುವ ವೇದಮಂತ್ರಗಳನ್ನೂ ಭಕ್ತಿಭಾವಕ್ಕೆ ಪೋಷಕವಾದ ಸ್ತೋತ್ರ, ಉಪಚಾರ, ಉಪಹಾರಗಳನ್ನೂ ಮತ್ತು ಇವುಗಳಿಂದ ಕೂಡಿದ ಪೂಜಾಕರ್ಮಯೋಗವನ್ನೂ ಬೋಧಿಸುವ ಇದು ಯೋಗತ್ರಯದ ಸಮನ್ವಯವಲ್ಲದೆ ಮತ್ತೇನು?

ಭಗವಂತನು ಇಲ್ಲಿ ಉದ್ಧವನಿಗೆ ಉಪದೇಶಮಾಡಿರುವ ಭಾಗವತ ಧರ್ಮವು ಗೀತೋಪದಿಷ್ಟವಾದ ಧರ್ಮವೇ ಆಗಿದೆಯೆಂದು ಶ್ರೀಕೃಷ್ಣಪರಮಾತ್ಮನೇ ಸಾರಿರುವುದನ್ನು ಗಮನಿಸುವುದರ ಜೊತೆಗೆ ಅದಕ್ಕೆ ಅನುಗುಣವಾಗಿ ಇಲ್ಲಿ ಬೋಧಿಸಿರುವ ಕ್ರಿಯಾಯೋಗವೂ ಭಾಗವತತಂತ್ರಕ್ಕೆ ಸಂಬಂಧಪಟ್ಟಿದ್ದಾಗಿದೆ ಎಂಬುದನ್ನೂ ಮನಗಾಣಬೇಕು. ಇದನ್ನು ಸಾತ್ವತರ ಕ್ರಿಯಾಯೋಗ ಎಂದೂ ಶ್ರೀಮದ್ಭಾಗವತವು ಹೇಳುತ್ತದೆ. '**ಯಸ್ಮಾತ್ತ್ವಾಂ ಯೇ ಯಥಾರ್ಚನ್ತಿ ಸಾತ್ವತಾಃ ಸಾತ್ವತರ್ಷಭ**' ಇದನ್ನು ಮೊಟ್ಟಮೊದಲಿಗೆ ಬೋಧಿಸಿದವನು ಶ್ರೀಭಗವಂತನೇ. ಅನಂತರ ಅದನ್ನು ಆತನಿಂದ ಬ್ರಹ್ಮದೇವರೂ, ಅವರಿಂದ ಭೃಗುವೇ ಮುಂತಾದ ಬ್ರಹ್ಮಪುತ್ರರೂ, ಭಗವಂತನಾದ ಶಿವನೂ, ಆತನಿಂದ ಭಗವತೀ ಪಾರ್ವತಿಯೂ ಉಪದೇಶಪಡೆದು ಮುಂದುವರಿಸಿದರೆಂದೂ ಅದರಲ್ಲಿ ಸರ್ವವರ್ಣ ಸರ್ವಾ

ಶ್ರಮಗಳಿಗೂ ಶ್ರೇಯಸ್ಕರವಾದ ಪೂಜಾವಿಧಿಯು ಉಪದಿಷ್ಟವಾಗಿದೆ ಯೆಂದೂ ಶ್ರೀಮದ್ಭಾಗವತವೇ ತಿಳಿಸುತ್ತದೆ.

ನಿಸ್ಸೃತಂ ತೇ ಮುಖಾಂಭೋಜಾತ್ ಯದಾಹ ಭಗವಾನಜಃ ।
ಪುತ್ರೇಭ್ಯೋ ಬ್ರಹ್ಮಮುಖ್ಯೇಭ್ಯೋ ದೇವ್ಯೈ ಚ ಭಗವಾನ್ ಭವಃ ॥

ಈ ವಿವರಣೆಯಿಂದ ಇಲ್ಲಿ ಹೇಳಲ್ಪಟ್ಟಿರುವ ಪೂಜಾವಿಧಿಯು ಭಗವಚ್ಛಾಸ್ತ್ರ, ಭಾಗವತತಂತ್ರ, ಶ್ರೀಪಾಂಚರಾತ್ರಾಗಮ–ಎಂದು ಕರೆಯ ಲ್ಪಟ್ಟಿರುವ ತಂತ್ರವಿಶೇಷವೇ ಆಗಿದೆಯೆಂಬುದು ಸ್ಪಷ್ಟಪಡುತ್ತದೆ.

ಭಾಗವತ ಎನ್ನುವ ಪದಕ್ಕೆ ಭಗವದ್ಭಕ್ತ (**'ಭಗವಾನ್ ದೇವತಾ ಅಸ್ಯ ಭಗವತ್ಸ್ಸಾಸ್ಯ ದೇವತಾ ಇತ್ಯಣ್'**) ಎಂದು ನೇರವಾದ ಅರ್ಥವಾಗು ತ್ತದೆ. ವಿಶೇಷವಾಗಿ ಭಗವಂತನಾದ ವರಾಹವಿಷ್ಣುವನ್ನೇ ಆಶ್ರಯಿಸಿರುವವನು. ಆತನ ಸೇವೆಯಲ್ಲಿ ಸದಾನಿರತನಾಗಿರುವವನು. ಆತನಲ್ಲೇ ನೆಟ್ಟಮನಸ್ಸುಳ್ಳವನಾಗಿ, ಅವಿಚ್ಯುತವಾದ ಭಕ್ತಿಯಿಂದ ಕೂಡಿ, ವ್ರತಭ್ರಷ್ಟನಾಗದೆ ಪ್ರಿಯತಮನಾದ ಆತನನ್ನೇ ಆರಾಧಿಸುವವನು. ಸದಾಚಾರತತ್ಪರ, ಶಿಷ್ಟಶಿರೋಮಣಿ, ಸರ್ವಭೂತದಯಾಪರ, ರಾಗ-ದ್ವೇಷಾದಿರಹಿತ ತನ್ನಲ್ಲೂ ಮತ್ತು ಸರ್ವಭೂತಗಳಲ್ಲೂ ಪರಮಾತ್ಮನಾದ ಶ್ರೀಹರಿಯನ್ನೇ ಸದಾ ಭಾವಿಸುತ್ತಿರುವವನು.

'ಸರ್ವದೇವಾನ್ಪರಿತ್ಯಜ್ಯ ನಿತ್ಯಂ ಭಗವದಾಶ್ರಯಃ ।
ರತಸ್ತದೀಯಸೇವಾಯಾಂ ಸ ಭಾಗವತ ಉಚ್ಯತೇ ॥'

"ಯೇ ತು ಭಾಗವತಾ ಲೋಕೇ ತಚ್ಚಿನ್ನಾಸ್ತತ್ಪರಾಯಣಾಃ । ಪೂಜಯನ್ತಿ ಸದಾ ವಿಷ್ಣುಂ । ಭಕ್ತಿರ್ನ ವಿಚ್ಯುತಾ ಯೇಷಾಂ ನ ಚ್ಯುತಾನಿ ವ್ರತಾನಿ ಚ ॥ ಸುಪ್ರಿಯಃ ಶ್ರೀಪತಿರ್ಯೇಷಾಂ ತೇ ಸ್ಯುರ್ಭಾಗವತಾ ನರಾಃ । ಸದಾಚಾರರತಾಃ ಶಿಷ್ಟಾಃ ಸರ್ವಭೂತಾನುಕಂಪಕಾಃ । ಶುಚಯಃ ತ್ಯಕ್ತರಾಗಾ ಯೇ ಸದಾ ಭಾಗವತಾ ಹಿ ತೇ । ಸರ್ವಭೂತೇಷು ಯಃ ಪಶ್ಯೇದ್ಭಗವದ್ಭಾವಮಾತ್ಮನಃ । ಭೂತಾನಿ ಭಗವತ್ಯಾತ್ಮನ್ಯೇಷ ಭಾಗವತಃ ಸ್ಮೃತಃ ॥

[ii] ಎಂದು ಮೊದಲಾಗಿ ಪುರಾಣಗಳು ಆತನನ್ನು ವರ್ಣಿಸುತ್ತವೆ.

ಇದಲ್ಲದೇ ಪಾರಿಭಾಷಿಕವಾಗಿ ಭಾಗವತದ ಶಬ್ದವು ಒಂದು ವಿಶಿಷ್ಟವಾದ ದರ್ಶನವನ್ನೂ ತಿಳಿಸುತ್ತದೆ. ಶ್ರೀಮದ್ಭಾಗವತದಲ್ಲಿ ಭಗವಂತನಿಂದ ಉಪದಿಷ್ಟವಾಗಿರುವ ಕ್ರಿಯಾಯೋಗವು ಈ ಸಿದ್ಧಾಂತಕ್ಕೇ ಸೇರಿದುದಾಗಿದೆ. ಶಾರೀರಕಮೀಮಾಂಸಾಸೂತ್ರದಲ್ಲಿ ಈ ಭಾಗವತ ಸಿದ್ಧಾಂತವು ವಿಮರ್ಶಿಸಲ್ಪಟ್ಟು ಸಿದ್ಧಾಂತದ ಕೆಲವು ಅಂಶಗಳು ಕೆಲವು ಭಾಷ್ಯಕಾರರಿಗೆ ಅಷ್ಟು ಸಮ್ಮತವಾಗಿಲ್ಲದೇ ಇದ್ದರೂ, ಇದು ಹೇಳಿರುವ ಉಪಾಸನಾವಿಧಾನವು ವೈದಿಕಪಂಥಗಳ ಎಲ್ಲ ಆಚಾರ್ಯರಿಗೂ ಮಾನ್ಯವಾಗಿದೆ.* ಹೇತುವಾದಗಳಿಂದ ವಿರೋಧಿಸದೆ ಇದನ್ನು ಮಾನ್ಯಮಾಡಬೇಕೆಂದು ಶಾಸ್ತ್ರಕಾರರು ಹೇಳುತ್ತಾರೆ.

ಸಾಂಖ್ಯಂ ಯೋಗಃ ಪಾಂಚರಾತ್ರಂ ವೇದಾಃ ಪಾಶುಪತಂ ತಥಾ ।
ಅತಿಪ್ರಮಾಣಾನ್ಯೇತಾನಿ ಹೇತುಭಿರ್ನ ವಿರೋಧಯೇತ್ ॥

(ವೀರಮಿತ್ರೋದಯ)

ಇದನ್ನು ಕುರಿತು ಪ್ರಶಂಸಾವಾಕ್ಯಗಳನ್ನು ಶ್ರೀಮನ್ಮಹಾಭಾರತದಲ್ಲೂ ನೋಡುತ್ತೇವೆ.

ಶ್ರೀಕೃಷ್ಣಪರಮಾತ್ಮನಿಂದ ಭಾಗವತಧರ್ಮದ ಉಪದೇಶಾಮೃತ ವನ್ನು ಪಡೆದ ಭಕ್ತಶ್ರೇಷ್ಠನಾದ ಉದ್ಧವನು, ಭಗವಂತನ ಶ್ರೀಪಾದುಕೆ

---

*ತತ್ರ ಯತ್ತಾಮದುಚ್ಯೇತ ಯೋಽಸೌ ನಾರಾಯಣಃ ಪರೋಽವ್ಯಕ್ತಾತ್ಪ್ರಸಿದ್ಧಃ ಸರ್ವಾತ್ಮಾ ಸ ಆತ್ಮನಾ ಆತ್ಮಾನಂ ಅನೇಕಧಾ ವ್ಯೂಹ್ಯ ಅವಸ್ಥಿತ ಇತಿ । ತನ್ನ ನಿರಾಕ್ರಿಯತೇ..... ಯದಪಿ ತಸ್ಯ ಭಗವತೋ ಅಭಿಮಾನಾದಿಲಕ್ಷಣಂ ಆರಾಧನಂ ಅಜಸ್ರಮನನ್ಯ ಚಿತ್ತತಯಾ ಅಭಿಪ್ರೇಯತೇ ತದಪಿ ನ ಪ್ರತಿಷಿಧ್ಯತೇ ॥ಯತ್ತುನರಿವ ಮುಚ್ಯತೇ ವಾಸುದೇವಾತ್ಸಂಕರ್ಷಣ ಉತ್ಪದ್ಯತೇ ಸಂಕರ್ಷಣಾಚ್ಚ ಪ್ರದ್ಯುಮ್ನಃ ಪ್ರದ್ಯುಮ್ನಾಚ್ಚಾನಿರುದ್ಧ ಇತಿ - ತತ್ರಬ್ರೂಮಃ ನ ವಾಸುದೇವ ಸಂಜ್ಞಿಕಾತ್ಪರ ಮಾತ್ಮನಃ ಸಂಕರ್ಷಣ ಸಂಜ್ಞಕಸ್ಯ ಜೀವಸ್ಯ ಉತ್ಪತ್ತಿಃ ಸಂಭವತಿ ಅನಿತ್ಯತ್ವಾದಿ ದೋಷಪ್ರಸಂಗಾತ್." (ವೇದಾನ್ತಸೂತ್ರ ಶಾಂಕರಭಾಷ್ಯ ||-೨-೪೨)

"ತತ್ರ ಜೀವಮನೋಽಹಂಕಾರ ತತ್ತ್ವಾನಾಂ ಅಧಿಷ್ಠಾತಾರಃ ಸಂಕರ್ಷಣ ಪ್ರದ್ಯುಮ್ನಾನಿರುದ್ಧ ಇತಿ ತೇಷಾಮೇವ ಜೀವಾದಿ ಶಬ್ದೈರಭಿಧಾನಮವಿರುದ್ಧಂ ಯಥಾ ಆಕಾಶ ಪ್ರಾಸಾದಿ ಶಬ್ದೈಃ ಬ್ರಹ್ಮಣ್ಯೋಽಭಿಧಾನಂ ವಿಪ್ರತಿಷಿದ್ಧಾಹಿ ಜೀವೋತ್ಪತ್ತಿಃ ತಸ್ಮಿನ್ನಪಿ ತಂತ್ರೇ ॥

(ವೇದಾನ್ತಸೂತ್ರ ಶ್ರೀಭಾಷ್ಯ ||-೨-೪೨)

ಗಳನ್ನು ಶಿರಸ್ಸಿನಲ್ಲಿ ಇರಿಸಿಕೊಂಡು ಮತ್ತೆ ಮತ್ತೆ ನಮಸ್ಕರಿಸಿ ಬದರಿಗೆ ಹೋಗಿ ಆತನ ಧ್ಯಾನಮಾಡುತ್ತಾ ತಪಸ್ಸನ್ನು ಆಚರಿಸಿ ಪರಮಗತಿಯನ್ನು ಪಡೆಯುತ್ತಾನೆ. ಅನಂತರ ಶ್ರೀಭಗವಂತನ ಸಂಕಲ್ಪದಂತೆ ಯಾದವರು ಪರಸ್ಪರಕಲಹದಿಂದ ನಾಶಹೊಂದುತ್ತಾರೆ. ಬ್ರಾಹ್ಮಣಶಾಪವನ್ನು ಇದಕ್ಕೆ ನಿಮಿತ್ತವನ್ನಾಗಿ ಮಾಡಿಕೊಂಡು ಭಗವಂತನು ಯದುವಂಶಿಗಳನ್ನು ಸಂಹರಿಸಿ ಅವಶಿಷ್ಟವಾಗಿದ್ದ ಭೂಮಿಯ ಭಾರವು ಕಳೆಯಿತೆಂದು ಸಮಾಧಾನ ಪಡುತ್ತಾನೆ. ಕಟ್ಟಕಡೆಯಲ್ಲಿ ಜರನೆಂಬ ವ್ಯಾಧನ ಬಾಣಘಾತವನ್ನು ಸ್ವೀಕರಿಸಿ ಬ್ರಹ್ಮಾದಿದೇವತೆಗಳ ಪ್ರಾರ್ಥನೆಯಂತೆ ತಾನೂ ಪರಂಧಾಮ ವನ್ನು ಹೊಂದುತ್ತಾನೆ. ಶ್ರೀಬಲರಾಮನು ಇದಕ್ಕೆ ಮೊದಲೇ ಯೋಗ ಸಮಾಧಿಯಿಂದ ದೇಹತ್ಯಾಗಮಾಡಿರುತ್ತಾನೆ. ಶ್ರೀಭಗವಂತನ ಪರಂಧಾಮ ಪ್ರಾಪ್ತಿಯು ಪರಮಾದ್ಭುತವಾದುದು. ಆತನ ಯೋಗಗತಿಯನ್ನು ಅರ್ಥಮಾಡಿಕೊಳ್ಳಲು ಬ್ರಹ್ಮಾದಿ ದೇವತೆಗಳಿಗೂ ಸಾಧ್ಯವಾಗುವುದಿಲ್ಲ. ಶ್ರೀಕೃಷ್ಣಪರಮಾತ್ಮನು ಪರಂಧಾಮವನ್ನು ಹೊಂದುವುದಕ್ಕೂ ಆತನ ಸಂಕಲ್ಪವೇ ಮುಖ್ಯಕಾರಣ. ಅವತಾರಕಾರ್ಯವು ಸಮಾಪ್ತವಾಗಿದ್ದುದ ರಿಂದ ಆತನು ಸ್ವಧಾಮಕ್ಕೆ ತೆರಳಿದ್ದು ಸಹಜವೇ ಆಗಿದೆ. ಶ್ರೀಭಗವಂತನು ಇಷ್ಟಪಟ್ಟಿದ್ದರೆ ತನ್ನ ದಿವ್ಯದೇಹವನ್ನು ಇಲ್ಲಿಯೇ ಎಂದೆಂದಿಗೂ ಉಳಿಸಿ ಕೊಳ್ಳಬಹುದಾಗಿತ್ತು. ಆದರೆ ಆತ್ಮನಿಷ್ಠರಾದ ಪುರುಷರು ತಮ್ಮ ಶರೀರ ವನ್ನು ಭೂಮಿಯಲ್ಲಿ ಉಳಿಸಿಕೊಳ್ಳಲು ಪ್ರಯತ್ನಿಸಬಾರದು–ಎಂಬ ತಿಳಿ ವಳಿಕೆಯನ್ನು ನೀಡುವುದಕ್ಕೋಸ್ಕರವೇ ಭಗವಂತನು ಹಾಗೆಮಾಡಿದನು. ಆಗ್ನೇಯೀ ಎಂಬ ಯೋಗಧಾರಣೆಯಿಂದ ತನ್ನ ದಿವ್ಯಮಂಗಳವಿಗ್ರಹವನ್ನು ಬಳಸಿಕೊಳ್ಳದೆಯೇ ಸ್ವಧಾಮವನ್ನು ಹೊಂದಿದನು.* ಶ್ರೀಕೃಷ್ಣನು ಯಮಪುರಿಗೆ ಹೋಗಿದ್ದ ತನ್ನ ಗುರುಪುತ್ರನನ್ನು ಆತನ ಮನುಷ್ಯ ಶರೀರ ಸಹಿತ ಹಿಂದಕ್ಕೆ ಕರೆತಂದವನು. ಬ್ರಹ್ಮಾಸ್ತ್ರದಿಂದ ಸುಟ್ಟುಹೋಗಿದ್ದ ಪರೀಕ್ಷಿದ್ರಾಜನನ್ನು ಬದುಕಿಸಿದವನು ಮತ್ತು ಅಂತಕಾಂತಕನನ್ನು ಯುದ್ಧದಲ್ಲಿ ಜಯಿಸಿದ್ದವನು. ಇಂತಹ ಭಗವಂತನು ದೇಹತ್ಯಾಗಮಾಡುವುದಕ್ಕೆ ಆತನದೇ ಆದ ಇಚ್ಛೆಯಲ್ಲದೆ ಬೇರಾವ ಕಾರಣವಿದ್ದೀತು! ಗಾಂಧಾರಿಯ

---

* ಯೋಗಧಾರಣಯಾಗ್ನೇಯ್ಯಾ ದಗ್ಧ್ವಾ ಧಾಮಾವಿಶತ್ಸ್ವಯಮ್ ।

ಶಾಪವು ಇದಕ್ಕೆ ಒಂದು ನಿಮಿತ್ತವಾಗಿತ್ತೆಂದು ಮಹಾಭಾರತದ ಕಥೆಯಿಂದ ತಿಳಿಯುತ್ತದೆ.

ಈ ಶಾಪಸ್ವೀಕಾರಕ್ಕೆ ಶ್ರೀಕೃಷ್ಣನ ಸ್ವಂತ ಇಚ್ಛೆಯೇ ಮೂಲಕಾರಣವಾಗಿತ್ತೆಂದು ಸ್ಪಷ್ಟಪಡುತ್ತದೆ. ಅವಿವೇಕದಿಂದ ತನಗೆ ಶಾಪವನ್ನು ಕೊಟ್ಟ ಗಾಂಧಾರಿಗೂ ಇದೇ ಅಭಿಪ್ರಾಯವನ್ನೇ ಭಗವಂತನು ತಿಳಿಸುತ್ತಾನೆ. ಶಾಪವನ್ನು ಹಿಂತೆಗೆದುಕೊಳ್ಳಬೇಕೆಂದು ಆಕೆಯನ್ನು ಪ್ರಾರ್ಥಿಸುವುದಿಲ್ಲ. ಆಕೆಗೆ ಪ್ರತಿಶಾಪವನ್ನೂ ಕೊಡುವುದಿಲ್ಲ. ಆಕೆಯ ಶಾಪವನ್ನು ವ್ಯರ್ಥಗೊಳಿಸುವುದೂ ಇಲ್ಲ. ತನ್ನ ಸಂಕಲ್ಪನಿರ್ವಹಣೆಗೆ ಅದನ್ನು ಒಂದು ಸಾಧನವನ್ನಾಗಿಸಿಕೊಂಡು ಪ್ರಶಾಂತನಾಗಿರುತ್ತಾನೆ. ತನ್ನ ಮೇಲೆ ಬಾಣಪ್ರಯೋಗಮಾಡಿದ ವ್ಯಾಧನಿಗೆ ಸದ್ಗತಿಯನ್ನು ಕರುಣಿಸುತ್ತಾನೆ. ಮಹಾಯೋಗೇಶ್ವರನು ಈತನಲ್ಲದೆ ಮತ್ತಾರು?

ಭಗವಂತನಿಗೆ ಭೃಗು, ದುರ್ವಾಸ, ಗಾಂಧಾರಿ ಮುಂತಾದವರು ಅವಿವೇಕದಿಂದ ಶಾಪವನ್ನು ಕೊಟ್ಟಾಗ ಅದನ್ನು ಭಗವಂತನು ಏಕೆ ಸ್ವೀಕರಿಸಿದ? ಎಂಬುದಕ್ಕೆ ನಮ್ಮ ಗುರುದೇವರು ಯೋಗಮೂಲಕವಾದ ಒಂದು ಕಾರಣವನ್ನು ಅಪ್ಪಣೆಕೊಡಿಸಿದ್ದರು. ಅದೇನೆಂದರೆ: 'ಆ ಶಾಪವನ್ನು ಭಗವಂತನು ಸ್ವೀಕರಿಸದೇ ಇದ್ದಿದ್ದರೆ ಅದು ಶಾಪಕೊಟ್ಟವರ ಮೇಲೆ ತಿರುಗುಬಾಣವಾಗಿ ಬಿದ್ದು ಅವರಿಗೆ ಆತ್ಮಘಾತವನ್ನೇ ಉಂಟುಮಾಡುತ್ತಿತ್ತು. ಎಂದೆಂದಿಗೂ ಅವರು ತಾಪತ್ರಯದಲ್ಲಿ ಬೆಂದುಹೋಗುವಂತೆ ಮಾಡುತ್ತಿತ್ತು. ಇದನ್ನು ತಪ್ಪಿಸಲು ಭಗವಂತನು ಅವರ ಶಾಪವನ್ನು ಸ್ವೀಕರಿಸುತ್ತಾನೆ. ಶಾಪವನ್ನು ಕೊಟ್ಟವರು ಆ ಭಗವಂತನನ್ನೇ ಶರಣುಹೊಂದಿ ವಿವೇಕವನ್ನೂ ಶಾಂತಿಯನ್ನೂ ಪಡೆಯುತ್ತಾರೆ.'

ವಿಷ್ಣುಶ್ಶಕ್ತಿಮವಿದ್ವಾನ್ ಸಃ ಪ್ರಪೇದೇ ಶಾಪಮೋಹತಾಮ್ ।
ಭೃಗುಣಾರಾಧಿತೋ ವಿಷ್ಣುರಾಗತಃ ಪ್ರಾಹತಂ ಭೃಗುಮ್ ।
ಮಾಭೈರ್ಭೃಗೋಽನೃತಂ ವಾಕ್ಯಂ ನ ಭವಿಷ್ಯತಿ ತೇ ದ್ವಿಜ ॥
ತಪಸಾರಾಧಿತೋ ದೇವೋಹ್ಯಬ್ರವೀತ್ ಭಕ್ತವತ್ಸಲಃ ।
ಲೋಕಾನಾಂ ಸಂಪ್ರಿಯಾರ್ಥಂ ತು ತಂ ಶಾಪಂ ಗ್ರಾಹ್ಯಮುಕ್ತವಾನ್ ॥

(ರಾಮಾಯಣ ಉತ್ತರಕಾಂಡ ಸರ್ಗ ೫೦)

ಶಾಪಕೊಟ್ಟವರಿಗೆ ಶಾಂತಿಯ ವರವನ್ನು ಕೊಟ್ಟು ತಾನು ವಿಚಲಿತನಾಗದೆ ಲೋಕಕಲ್ಯಾಣಕ್ಕಾಗಿ ಶಾಪವನ್ನು ಬಳಸಿಕೊಂಡ ಭಗವಂತನ ಯೋಗಮಹಿಮೆಯನ್ನೂ ಮತ್ತು ಪರಮಕರುಣೆಯನ್ನೂ ಈ ಶ್ಲೋಕಗಳು ಸಾರಿ ಹೇಳುತ್ತವೆ.*

ಭಗವಂತನ ಪರಂಧಾಮದ ಪ್ರಾಪ್ತಿಯು ಧೀರರಿಗೆ ಧೈರ್ಯವನ್ನು ವೃದ್ಧಿಪಡಿಸುತ್ತದೆ. ಪ್ರಾತಃಕಾಲದಲ್ಲಿ ಇದನ್ನು ಭಕ್ತಿ-ಸಂಯಮಗಳಿಂದ ಸಂಕೀರ್ತನೆ ಮಾಡುವವರು ಆ ಭಗವಂತನ ಸರ್ವಶ್ರೇಷ್ಠವಾದ ಪರಮಪದವನ್ನೇ ಪಡೆಯುತ್ತಾರೆ'–ಎಂದು ಶ್ರೀಮದ್ಭಾಗವತವು ಘೋಷಣೆಮಾಡುತ್ತದೆ.

ಯ ಏತಾಂ ಪ್ರಾತರುತ್ಥಾಯ ಕೃಷ್ಣಸ್ಯ ಪದವೀಂ ಪರಾಮ್ ।
ಪ್ರಯತಃ ಕೀರ್ತಯೇದ್ಭಕ್ತ್ಯಾ ತಾಮೇವಾಪ್ನೋತ್ಯನುತ್ತಮಾಮ್ ॥

ಹನ್ನೆರಡನೆಯ ಸ್ಕಂಧದ ಪ್ರಾರಂಭದಲ್ಲಿ ಶುಕಮುನಿಗಳು ಪರೀಕ್ಷಿದ್ರಾಜನಿಗೆ ಕಲಿಯುಗದ ರಾಜವಂಶಗಳನ್ನು ತಿಳಿಸಿ ಪಾಪಭೂಯಿಷ್ಠವಾದ ಕಲಿಯುಗಧರ್ಮವನ್ನು ವಿವರಿಸಿ, ಎಲ್ಲ ಕಲಿದೋಷಗಳಿಂದ ಬಿಡುಗಡೆಹೊಂದಲು ಶ್ರೀಹರಿಕೀರ್ತನೆಯನ್ನು ಸರ್ವೋತ್ತಮವಾದ ಉಪಾಯವನ್ನಾಗಿ ಉಪದೇಶಿಸುತ್ತಾರೆ.

"ಎಲ್ಲ ದೋಷಗಳಿಗೂ ನಿಧಿಯಾಗಿರುವ ಕಲಿಯುಗದಲ್ಲಿ ಒಂದು ದೊಡ್ಡ ಗುಣವಿದೆ. ಅದೇನೆಂದರೆ: ಈ ಯುಗದಲ್ಲಿ ಶ್ರೀಕೃಷ್ಣನ ಸಂಕೀರ್ತನದಿಂದಲೇ ಎಲ್ಲಾ ಆಸಕ್ತಿಗಳನ್ನೂ ತೊರೆದು ಪರಮಪದವನ್ನು ಹೊಂದುತ್ತಾನೆ."

ಕಲೇರ್ದೋಷನಿಧೇ ರಾಜನ್ನಸ್ತಿ ಹ್ಯೇಕೋ ಮಹಾನ್ ಗುಣಃ ।
ಕೀರ್ತನಾದೇವ ಕೃಷ್ಣಸ್ಯ ಮುಕ್ತಸಂಗಃ ಪರಂ ವ್ರಜೇತ್ ॥

ಕಲಿಯುಗದಲ್ಲಿ ಅಧರ್ಮವು ತುಂಬಿಕೊಂಡಿದ್ದರೂ ಅದನ್ನು ತಡೆಗಟ್ಟಲು ಸಾಧ್ಯವಾದಷ್ಟು ಪ್ರಯತ್ನಪಡಬೇಕು. ಇದು ಯುಗಧರ್ಮವೆಂದು

---

* ದೇಹನ್ಯಾಸಂ ಚ ತಸ್ಯೈವ ಧೀರಾಣಾಂ ಧೈರ್ಯವರ್ಧನಮ್ ।
ಅನ್ಯೇಷಾಂ ದುಷ್ಕರತರಂ ಪಶೂನಾಂ ವಿಕ್ಲವಾತ್ಮನಾಮ್ ॥ (II-4-34)

ಸಬೂಬು ಹೇಳುತ್ತಾ ಸುಮ್ಮನಿರಬಾರದು. ರಾಜನು ಧರ್ಮಿಷ್ಠನಾಗಿದ್ದರೆ ಕಲಿಯುಗವನ್ನು ಕೃತಯುಗವನ್ನಾಗಿ ಮಾಡಬಹುದು. ನಿದ್ರೆಮಾಡುವುದು ಕಲಿಯುಗ. ನಿದ್ರೆಯಿಂದ ಏಳುತ್ತಾ ಆಕಳಿಸುವುದು ದ್ವಾಪರಯುಗ. ನಿದ್ರೆಯನ್ನು ಬಿಟ್ಟು ಮೇಲೇಳುವುದು ತ್ರೇತಾಯುಗ ಮತ್ತು ಧ್ಯಾನ ಮಾಡುವುದು ಕೃತಯುಗ.

ಕಲಿಃ ಶಯಾನೋ ಭವತಿ ಸಂಜಿಹಾನಸ್ತು ದ್ವಾಪರಃ ।
ಉತ್ತಿಷ್ಠನ್ ಭವತಿ ತ್ರೇತಾ ಧ್ಯಾಯನ್ಕೃತಯುಗೀ ಭವೇತ್ ॥

ಮತ್ತು 'ರಾಜಾ ಕಾಲಸ್ಯ ಕಾರಣಂ' ಎಂಬ ಶ್ರುತಿ-ಸ್ಮೃತಿವಚನಗಳನ್ನು ಸ್ಮರಿಸಿ ಧಾರ್ಮಿಕರು ಐಕಮತ್ಯದಿಂದ ಕೂಡಿ ಅಧರ್ಮ ಆಸುರೀಶಕ್ತಿಗಳನ್ನು ಹೊಡೆದಟ್ಟಲು ಪ್ರಯತ್ನಶೀಲರಾಗಲೇಬೇಕು.

ಕಟ್ಟಕಡೆಗೆ ಬ್ರಹ್ಮಮೂರ್ತಿ, ಗುರುಮೂರ್ತಿ ಶ್ರೀಶುಕಮುನಿಗಳಿಂದ ಪರಮಾರ್ಥದ ಉಪದೇಶವನ್ನು ಪಡೆದ ಮಹಾತ್ಮನಾದ ಪರೀಕ್ಷಿತನು, ಅತ್ಯಂತ ಕೃತಜ್ಞತೆಯಿಂದ ಅವರನ್ನು ಸತ್ಕರಿಸಿ ಕಳುಹಿಸಿಕೊಟ್ಟು, ನಿರ್ಭಯನಾಗಿ ನಿರ್ಮೋಹನಾಗಿ ತಕ್ಷಕಸರ್ಪದ ಆಕ್ರಮಣಕ್ಕೆ ಸಿದ್ಧನಾಗುತ್ತಾನೆ. ತಕ್ಷಕನು ಬ್ರಹ್ಮಭೂತನಾಗಿದ್ದ ಆ ಮಹಾಯೋಗಿಯ ದೇಹವನ್ನು ಮಾತ್ರ ಸುಟ್ಟನು. ಯೋಗಾರೂಢನಾಗಿದ್ದ ರಾಜರ್ಷಿ ಪರೀಕ್ಷಿತನು ಪರಮಪದವನ್ನು ಪಡೆದು ಬಿಟ್ಟಿದ್ದನು. ಆತನ ದಿವ್ಯಗತಿಯನ್ನು ನೋಡಿ ದೇವತೆಗಳೂ ವಿಸ್ಮಿತರಾಗಿ ಹೂಮಳೆ, ಗೀತವಾದ್ಯ ಮತ್ತು ಸಾಧುವಾದಗಳಿಂದ ಆತನನ್ನು ಸಂಭಾವಿಸು ತ್ತಾರೆ.

ಮುಂದಿನ ಗ್ರಂಥಭಾಗವು ಕೇವಲ ಶೌನಕಮಹರ್ಷಿ ಮತ್ತು ಸೂತ ಪುರಾಣಿಕರ ಸಂಭಾಷಣಾರೂಪವಾಗಿದೆ. ತಂದೆಯನ್ನು ಕಚ್ಚಿ ಕೊಂದ ತಕ್ಷಕನ ಮೇಲೆ ಸೇಡು ತೀರಿಸಿಕೊಳ್ಳಲು ಪರೀಕ್ಷಿತನ ಸುಪುತ್ರನು ತಾನು ಆಚರಿಸುತ್ತಿದ್ದ ಸರ್ಪಯಾಗವನ್ನು ಬೃಹಸ್ಪತಿಗಳ ಹಿತವಚನದಿಂದ ನಿಲ್ಲಿಸು ವನು. ಅನಂತರ ಬರುವ ವೇದವಿಭಾಗ ಮತ್ತು ವೇದಶಾಖೆಗಳ ವರ್ಣನೆಯೂ ಅಂತೆಯೇ ಪುರಾಣಗಳ ವಿಶ್ಲೇಷಣೆಯೂ ಅವುಗಳಿಗೆ ಪ್ರವರ್ತಕರಾದ ಕೃಷ್ಣ ದ್ವೈಪಾಯನವೇದವ್ಯಾಸರ ಮಹಿಮೆಯ ಕೊಂಡಾಟವಾಗಿ, ಅವರ ವಿಷಯ ದಲ್ಲಿ ನಮ್ಮ ಮನಸ್ಸು ಕೃತಜ್ಞತೆಯ ಭಾವದಿಂದ ಭಾರವಾಗುವಂತೆ ಮಾಡು

ತ್ತವೆ. ಈ ನಡುವೆ ಬರುವ ಅಯಾತಯಾಮ (ನೂತನ) ವೇದಭಾಗ ಪ್ರವರ್ತಕರಾದ ಯಾಜ್ಞವಲ್ಕ್ಯರ ವೃತ್ತಾಂತವು ಆ ಮಹಾಯೋಗಿಯ ರೋಮಾಂಚಕರವಾದ ಮಹಿಮೆಗೆ ದರ್ಪಣವಾಗಿದೆ. ಜ್ಞಾನ-ಭಕ್ತಿ-ವೈರಾಗ್ಯ ಗಳ ನಿಧಿಯಾಗಿ ಪರವಾಸುದೇವ ನಾರಾಯಣಮಹರ್ಷಿಯ ಮತ್ತು ಪರಶಿವನ ಪರಮಕೃತಿಗೆ ಪಾತ್ರನಾಗಿ ಸದುರ್ದರ್ಶವಾದ ಯೋಗಮಾಯೆಯ ಅನುಭವ ದಲ್ಲಿ ವಟಪತ್ರಶಾಯಿಯ ಸಾಕ್ಷಾತ್ಕಾರವನ್ನು ಪಡೆದು ಕಲ್ಪಾಂತಸ್ಥಾಯಿ ಯಾದ, ಭಗವಂತನ ಕೃಪೆಯನ್ನೂ ಅಜರಾಮರತ್ವವನ್ನೂ ತ್ರಿಕಾಲ ಜ್ಞಾನವನ್ನೂ ಪುರಾಣಾಚಾರ್ಯತ್ವವನ್ನೂ ವರಪ್ರಸಾದವನ್ನಾಗಿ ಪಡೆದ ಭಾರ್ಗವಕುಲಪ್ರದೀಪ ಮಾರ್ಕಂಡೇಯಮಹರ್ಷಿಯ ಪರಮಾದ್ಭುತವಾದ ಚರಿತ್ರವು ಎಲ್ಲರನ್ನೂ ಚಕಿತಗೊಳಿಸುತ್ತದೆ. ಅನಂತರ ಬರುವ ಅಸ್ತ್ರಭೂಷಣಾಧ್ಯಾಯವು ಶ್ರೀಭಗವಂತನ ಆ ಯುದ್ಧಭೂಷಣಗಳೆಲ್ಲವೂ ತತ್ತ್ವರೂಪ ವಿಭೂತಿಗಳಾಗಿ ಅವುಗಳನ್ನು ಧರಿಸಿರುವ ಮಹಾವಿಷ್ಣುವು ಪರತತ್ತ್ವವಾಗಿದ್ದಾನೆಂಬುದನ್ನು ಮನವರಿಕೆಮಾಡಿಕೊಡುತ್ತದೆ.

ಸೌರವ್ಯೂಹಗಳ ವರ್ಣನೆಯು ಹಿಂದೆ ನಿರೂಪಿತವಾಗಿದ್ದ ಖಗೋಳದ ವರ್ಣನೆಗೆ ಅನುಬಂಧರೂಪವಾಗಿದೆ. ಶ್ರೀಮದ್ಭಾಗವತದ ಸಂಕ್ಷಿಪ್ತ ವಿಷಯ ಸೂಚಿಯೂ ಮತ್ತು ವಿಭಿನ್ನಪುರಾಣಗಳ ಶ್ಲೋಕಸಂಖ್ಯೆಯೂ ಆ ಗ್ರಂಥಗಳ ಪ್ರಮಾಣ ಮರ್ಯಾದೆಗಳನ್ನು ವ್ಯವಸ್ಥೆಗೊಳಿಸುತ್ತದೆ ಮತ್ತು ಕಟ್ಟ ಕಡೆಯ ಅಧ್ಯಾಯದಲ್ಲಿ ಈ ಎಲ್ಲ ವಿಷಯಗಳಿಗೂ ಶ್ರೀಕೋಶವಾಗಿರುವ ಶ್ರೀಮದ್ಭಾಗವತದ ನಿಃಸಮವಾದ ಮಹಿಮೆಯನ್ನು ನಿರೂಪಿಸಿ, ಗುರು ದೇವತಾನಮಸ್ಕಾರರೂಪವಾಗಿ ಇಡೀ ಗ್ರಂಥಕ್ಕೆ ಮಂಗಳಾಶಂಸನೆಯನ್ನು ಮಾಡಿದೆ. "ಇದು ಸರ್ವವೇದಾಂತದ ಸಾರ. ಇದರ ರಸಾಮೃತದಿಂದ ತೃಪ್ತಿಪಡೆದವರಿಗೆ ಬೇರೆ ಯಾವುದರಲ್ಲಿಯೂ ರತಿ ಇರುವುದಿಲ್ಲ. ನದಿಗಳಲ್ಲಿ ಗಂಗೆಯಂತೆಯೂ, ದೇವತೆಗಳಲ್ಲಿ ಅಚ್ಯುತನಂತೆಯೂ, ವೈಷ್ಣವರಲ್ಲಿ ಶಂಭು ವಿನಂತೆಯೂ, ಕ್ಷೇತ್ರಗಳಲ್ಲಿ ಕಾಶಿಯಂತೆಯೂ ಸರ್ವಪುರಾಣಗಳಲ್ಲಿಯೂ ಇದು ಸರ್ವೋತ್ತಮವಾಗಿದೆ"*–ಇತ್ಯಾದಿಯಾಗಿ ತನ್ನ ಅಗ್ಗಳಿಕೆಯನ್ನು

* ಸರ್ವವೇದಾನ್ತಸಾರಂ ಹಿ ಶ್ರೀಭಾಗವತಮಿಷ್ಯತೇ ।
ತದ್ರಸಾಮೃತತೃಪ್ತಸ್ಯ ನಾನ್ಯತ್ರಸ್ಯಾದ್ರತಿಃ ಕ್ವಚಿತ್ ॥

ಪುರಾಣದ ಅಂತಿಮಾಧ್ಯಾಯವು ಘೋಷಣೆಮಾಡುತ್ತದೆ. ಕಟ್ಟಕಡೆಯಲ್ಲಿ ಸೇರಿಸಲ್ಪಟ್ಟಿರುವ ಶ್ರೀಸ್ಕಾಂದಪುರಾಣದ ಅಧ್ಯಾಯಗಳು ಪರೀಕ್ಷಿತ-ವಜ್ರನಾಭರ ಸಮಾಗಮದ ಕಥೆಯ ಮೂಲಕ ಭಾಗವತಮಾಹಾತ್ಮ್ಯವನ್ನು ಬೋಧಿಸುತ್ತಾ ಈ ಘೋಷಣೆಗೆ ಅನುಬಂಧರೂಪವಾಗಿದೆ. ಇಲ್ಲಿ ಹೇಳಿ ರುವ ಉದ್ಧವ-ಶ್ರೀಕೃಷ್ಣ ಪ್ರಸಂಗವನ್ನು ಓದಿದವರ ಮನದಲ್ಲಿ "ಮಹಾತ್ಮನಾದ ಉದ್ಧವನು ಶ್ರೀಕೃಷ್ಣನ ಶಾಸನದಂತೆ ಬದರೀಕ್ಷೇತ್ರಕ್ಕೆ ಹೋಗಿ ಭಗವದ್ ಜ್ಞಾನಭಕ್ತಿಗಳಿಂದ ಪರಮಗತಿಯನ್ನು ಹೊಂದಿಬಿಟ್ಟನು ಎಂದು ಭಾಗವತ ದಲ್ಲಿ ಹೇಳಿದೆ. ಆದರೆ ಆತನು ಗಿಡ-ಮರ-ಬಳ್ಳಿ-ಪೊದೆಗಳಿಂದ ಎದ್ದು ಬಂದು ಶ್ರೀಕೃಷ್ಣಪತ್ನಿಯರಿಗೆ ದರ್ಶನಕೊಟ್ಟನೆಂದು ಇಲ್ಲಿ ಹೇಳಿರುವುದು. ಅಸಮಂಜಸವಲ್ಲವೇ?" ಎಂಬ ಪ್ರಶ್ನೆ ಏಳಬಹುದು. ವಾಸ್ತವವಾಗಿ ಭಗವಂತನ ಪಾದವನ್ನು ಸೇರಿಕೊಂಡ ಮಹಾತ್ಮರು "ಇಮಾನ್ ಲೋಕಾನ್ ಕಾಮಾನ್ನೀ ಕಾಮರೂಪ್ಯನುಸಂಚರನ್" ಎಂಬಂತೆ ಎಲ್ಲೆಲ್ಲಿಯೂ ನಾನಾರೂಪಗಳಲ್ಲಿ ಪ್ರಕಟಗೊಂಡು ಭಕ್ತರನ್ನು ಅನುಗ್ರಹಿಸಬಹುದು"–ಎಂಬುದನ್ನು ಇಲ್ಲಿ ಉತ್ತರರೂಪದಲ್ಲಿ ಸ್ಮರಿಸುತ್ತೇವೆ.

ಶ್ರೀಮದ್ಭಾಗವತದ ಶ್ರವಣದಿಂದ ಶ್ರೋತೃಗಳಿಗೆ ಭಗವದ್ಧಾಮದ ಪ್ರಾಪ್ತಿಯಾದ ಕಥೆಯು ಪದ್ಮಪುರಾಣವು ಈ ವಿಷಯವನ್ನು ಪ್ರತಿಪಾದಿಸುವ ಕಥೆಯಷ್ಟೇ ಪ್ರಭಾವಕಾರಿಯಾಗಿದೆ. ಶ್ರೋತೃ ಮತ್ತು ವಕ್ತೃಗಳ ಅಧಿಕಾರಸಂಪತ್ತನ್ನು ವಿತರಿಸುವ ಗ್ರಂಥಭಾಗವು ಪದ್ಮಪುರಾಣದಲ್ಲಿ ನಿರೂಪಿತವಾಗಿರುವುದಕ್ಕಿಂತಲೂ ಅಲಂಕಾರಮಯವಾಗಿ ರಸಮಯವೂ ಆಗಿದೆ.

ಶ್ರೀಮದ್ಭಾಗವತದ ಮಹಿಮೆಯನ್ನು ಹೇಳಲು ಈ ಒಂದೇ ಮಾತು ಸಾಕು. ಶ್ರೀಮದ್ಭಾಗವತಕ್ಕೂ ಮತ್ತು ಶ್ರೀಭಗವಂತನಿಗೂ ಒಂದೇ ಸ್ವರೂಪ–ಅದು ಸತ್ ಚಿತ್. ಆನಂದಮಯಸ್ವರೂಪ.

ಹಾಗೆಯೇ ಭಗವಂತನಿಗೂ, ಭಾಗವತರಿಗೂ, ಭಾಗವತಗ್ರಂಥಕ್ಕೂ ಯಾವ ವ್ಯತ್ಯಾಸವೂ ಇಲ್ಲ–ಎಂದೂ ಜ್ಞಾನಿಗಳು ಹೇಳುತ್ತಾರೆ. ಶ್ರೀಕೃಷ್ಣಪರಮಾತ್ಮನನ್ನು ನೋಡುತ್ತಿದ್ದಾಗ ಅವನಿಂದ ಎರಡು ಕಿರಣಗಳು ಹೊರಹೊಮ್ಮಿ ಅವುಗಳಲ್ಲಿ ಒಂದು ಭಕ್ತರನ್ನು ಮುಟ್ಟಿತು. ಮತ್ತೊಂದು ಭಾಗವತವನ್ನು ಮುಟ್ಟಿತು. ಕೊನೆಗೆ ಎಲ್ಲವೂ ಶ್ರೀಕೃಷ್ಣಪ್ರಕಾಶದಲ್ಲೇ ಲಯಹೊಂದಿತು–ಎಂಬುದು ಶ್ರೀರಾಮಕೃಷ್ಣಪರಮಹಂಸರ ದರ್ಶನ.

**ಶ್ರೀಮದ್ಭಾಗವತಸ್ಯಾಥ ಶ್ರೀಮದ್ಭಗವತಸ್ಸದಾ ।
ಸ್ವರೂಪಮೇಕಮೇವಾಸ್ತಿ ಸಚ್ಚಿದಾನನ್ದಲಕ್ಷಣಮ್ ॥**

ಶ್ರೀಕೃಷ್ಣನಲ್ಲಿ ಆಸಕ್ತವಾದ ಚಿತ್ತವುಳ್ಳ ಭಕ್ತರ ಹೃದಯದಿಂದ ಭಗವಂತನ ದಿವ್ಯಮಾಧುರ್ಯವನ್ನು ಯಾವ ಯಾವ ಮಾತು ಹೊರಸೂಸುತ್ತದೆಯೋ ಅದೆಲ್ಲಾ ಭಾಗವತವೇ.

**ಶ್ರೀಕೃಷ್ಣಾಸಕ್ತಚಿತ್ತಾನಾಂ ತನ್ಮಾಧುರ್ಯಪ್ರಕಾಶಕಮ್ ।
ಸಮುಜ್ಜೃಮ್ಭತಿ ಯದ್ವಾಕ್ಯಂ ವಿದ್ಧಿ ಭಾಗವತಂ ಹಿ ತತ್ ॥**

ಜ್ಞಾನ-ವಿಜ್ಞಾನ-ಭಕ್ತಿ ಮತ್ತು ಇವುಗಳಿಗೆ ಅಂಗವಾದ ಸಾಧನ ಚತುಷ್ಟಯವನ್ನು ಪ್ರಕಾಶಪಡಿಸುತ್ತ ಮಾಯೆಯನ್ನು ಮರ್ದನಮಾಡುವ ಸಾಮರ್ಥ್ಯವುಳ್ಳ ಯಾವ ಯಾವ ಮಾತುಂಟೋ ಅದೆಲ್ಲಾ ಭಾಗವತವೇ.

**ಜ್ಞಾನವಿಜ್ಞಾನಭಕ್ತ್ಯಙ್ಗಚತುಷ್ಟಯಪರಂ ವಚಃ ।
ಮಾಯಾಮರ್ದನದಕ್ಷಂ ಹಿ ವಿದ್ಧಿ ಭಾಗವತಂ ಚ ತತ್ ॥**

ಇಂತಹ ವಾಕ್ಯಗಳ ಹೃದಯಂಗಮವಾದ ಕಥಾದೃಷ್ಟಾಂತಚರಿತ್ರಾದಿ ಸಹಿತವಾದ ದಿವ್ಯಸಾಹಿತ್ಯವೇ ಶ್ರೀಮದ್ಭಾಗವತ ಗ್ರಂಥ.

ಉದ್ಧವನಿಗೆ ಶ್ರೀಕೃಷ್ಣನ ಪರಮಸಖ್ಯವನ್ನೂ ಭಕ್ತಿಯನ್ನೂ ತಾದಾತ್ಮ್ಯವನ್ನುಂಟುಮಾಡಿದ್ದು ಶ್ರೀಮದ್ಭಾಗವತ. ಅಷ್ಟೇಕೆ? ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ತಮ್ಮ-ತಮ್ಮ ಕರ್ತವ್ಯಗಳನ್ನು ಜ್ಞಾನಮೂಲವಾಗಿ ನಿರ್ವಹಿಸಲು ಸಾಮರ್ಥ್ಯವನ್ನು ಕೊಟ್ಟಿದ್ದೂ ಶ್ರೀಮದ್ಭಾಗವತವೇ. ಪ್ರಣವ, ಗಾಯತ್ರೀ, ಗೀತೆ ಮತ್ತು ಉಪನಿಷತ್ತುಗಳ ವಿಸ್ತಾರವೇ ಇದು. ಪಾವಿತ್ರ್ಯದಲ್ಲಿ ಮತ್ತು ಭಗವದ್ಧರ್ಮಪರಿಪೂರ್ಣತೆಯಲ್ಲಿ ಇದಕ್ಕೆ ಸರಿಸಾಟಿಯಾದ ಸಾಹಿತ್ಯ ಬೇರಾವುದು?

ಈ ಅತುಲವಾದ ಜ್ಞಾನಪ್ರದೀಪವನ್ನು ಮೊಟ್ಟಮೊದಲಿಗೆ ನಾರಾಯಣನೇ ಬ್ರಹ್ಮದೇವರಿಗೆ ಉಪದೇಶಿಸಿದ. ಅನಂತರ ಆತನೇ ಬ್ರಹ್ಮದೇವರ ರೂಪದಲ್ಲಿ ನಾರದರಿಗೆ ಉಪದೇಶಮಾಡಿದ. ಆ ನಾರದರ ರೂಪದಲ್ಲಿ ಕೃಷ್ಣದ್ವೈಪಾಯನವ್ಯಾಸರಿಗೆ ಅದನ್ನು ಅನುಗ್ರಹಿಸಿದವನೂ ಆ

ನಾರಾಯಣನೇ. ಮತ್ತೆ ಆತನೇ ಶ್ರೀವೇದವ್ಯಾಸರೂಪದಲ್ಲಿ ಶುಕಬ್ರಹ್ಮರ್ಷಿಗೆ ಅದನ್ನು ದಯಪಾಲಿಸಿದ ಮತ್ತು ಶ್ರೀಶುಕಬ್ರಹ್ಮರ್ಷಿರೂಪದಲ್ಲಿ ಪರಮಕರುಣೆಯಿಂದ ಮಹಾತ್ಮನಾದ ರಾಜರ್ಷಿ ವಿಷ್ಣುರಾತನಿಗೆ ಅದನ್ನು ಆ ನಾರಾಯಣನೇ ಅನುಗ್ರಹಮಾಡಿದನು. ಇಂತಹ ಭಗವತ್ಸ್ವರೂಪವಾಗಿ ಭಗವಂತನಿಂದಲೇ ಭಗವದ್ಭಕ್ತ ಶಿರೋಮಣಿಗಳಿಗೆ ಪವಿತ್ರ ಪರಂಪರೆಯಲ್ಲಿ ದಯಪಾಲಿಸಲ್ಪಟ್ಟ ಗ್ರಂಥ ಇದು. ಇದರಿಂದ ಪ್ರತಿಪಾದಿಸಲ್ಪಡುವ ಪರಂಜ್ಯೋತಿ, ಪರತತ್ತ್ವ, ಪರಿಶುದ್ಧ, ಶೋಕ-ಮೋಹರಹಿತ, ಪರಮಾನಂದಾಮೃತರೂಪವಾದ ಪರಮಸತ್ಯವನ್ನು ಧ್ಯಾಸಮಾಡುತ್ತೇವೆ.

ಕಸ್ಮೈ ಯೇನ ವಿಭೂಷಿತೋಽಯಮಮಲೋ ಜ್ಞಾನಪ್ರದೀಪಃ ಪುರಾ
ತದ್ರೂಪೇಣ ಚ ನಾರದಾಯ ಮುನಯೇ ಕೃಷ್ಣಾಯ ತದ್ರೂಪಿಣಾ ।
ಯೋಗೀಂದ್ರಾಯ ತದಾತ್ಮನಾಥ ಭಗವದ್ರಾತಾಯ ಕಾರುಣ್ಯತಃ
ತಚ್ಛುದ್ಧಂ ವಿಮಲಂ ವಿಶೋಕಮಮೃತಂ ಸತ್ಯಂ ಪರಂ ಧೀಮಹಿ ॥

ಇಂತಹ ಎಣೆಮಿಗಿಲಿಲ್ಲದ ಸದ್ಗ್ರಂಥವನ್ನು ಒಪ್ಪವಾಗಿ ಓರಣವಾಗಿ ಸಂಸ್ಕೃತ ಮೂಲ ಮತ್ತು ಕನ್ನಡ ಭಾವ ಪ್ರಕಾಶನ ಸಹಿತವಾಗಿ ಅತಿಸುಲಭವಾದ ಬೆಲೆಯಲ್ಲಿ ಶ್ರೀಸಾಮಾನ್ಯರಿಗೂ, ಶ್ರೀವಿಶೇಷರಿಗೂ ವಿತರಣೆಮಾಡುತ್ತಿರುವ ಭಾರತ ದರ್ಶನ ಸಂಸ್ಥೆಗೆ ಭೂರಿ ಭೂರಿ ಭಗವತ್ ಸ್ಮರಣೆಗಳು. ಇದು ಭಗವದ್ಧರ್ಮವಿಜೃಂಭಣೆಗೆ ಮತ್ತು ಭಾಗವತ ಹೃದಯೋಲ್ಲಾಸಕ್ಕೆ ಕಾರಣವಾಗಲಿ.

ಅಷ್ಟಾಂಗಯೋಗ ವಿಜ್ಞಾನ ಮಂದಿರಂ
ಈಶ್ವರಸಂವತ್ಸರದ ಚೈತ್ರಶುದ್ಧ
ಚಿತ್ರಾಪೂರ್ಣಿಮಾ — ಇತಿ ನಾರಾಯಣಸ್ಮೃತಯಃ
20-4-1997 — ಶ್ರೀ ಶ್ರೀ **ರಂಗಪ್ರಿಯ** ಶ್ರೀಪಾದ ಶ್ರೀ ಶ್ರೀಃ

—೦—

ಶ್ರೀಮದ್ಭಾಗವತ ಒಂಭತ್ತನೆಯ ಸಂಪುಟ
ಅಧ್ಯಾಯಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ
(ಏಕಾದಶಸ್ಕಂಧ ಮತ್ತು ದ್ವಾದಶಸ್ಕಂಧಗಳು)

(ವಿ.ಸೂ. ಮೊದಲನೆಯದು: ಮೂಲಶ್ಲೋಕಗಳ ಅಧ್ಯಾಯ ಪುಟಸಂಖ್ಯೆ
ಎರಡನೆಯದು: ಅನುವಾದದಲ್ಲಿರುವ ವಿಷಯಗಳ ಪುಟಸಂಖ್ಯೆ)

—o—

ದ್ವಿತೀಯ ಮುದ್ರಣದ ಪ್ರಸ್ತಾವನೆ

ಕರುಣಾಮಯನಾದ ಪರಮಾತ್ಮನ ದಿವ್ಯಾನುಗ್ರಹದಿಂದಲೂ ಗುರುಭಗವಂತನ ಆಶೀರ್ವಾದದಿಂದಲೂ ಭಾಗವತದ ೯ನೇ ಸಂಪುಟದ ಪುನರ್ಮುದ್ರಣವನ್ನು ಮುಗಿಸಿದ್ದೇವೆ. ಇದರ ಮುದ್ರಣದಿಂದಾಗಿ ಸುಮಾರು ಒಂದು ಸಾವಿರ ಗ್ರಾಹಕರಿಗೆ ಭಾಗವತದ ಪೂರ್ಣಮಾಲೆಯನ್ನು ವಿತರಿಸಬಹುದಾಗಿದೆ. ರಾಮಾಯಣ ವಿಭಾಗದಲ್ಲಿಯೂ ಕಡೆಯದಾದ ೧೧ನೆಯ ಸಂಪುಟವನ್ನು ಪುನರ್ಮುದ್ರಣ ಮಾಡಿದರೆ ನೂರಕ್ಕೂ ಹೆಚ್ಚು ಪೂರ್ಣಮಾಲೆಯನ್ನು ಗ್ರಾಹಕರಿಗೆ ವಿತರಿಸಬಹುದಾಗಿದೆ. ಆದುದರಿಂದ ರಾಮಾಯಣದ ೧೧ನೆಯ ಸಂಪುಟವನ್ನು ಇಷ್ಟರಲ್ಲಿಯೇ ಮುದ್ರಣಮಾಡಲಾಗುವುದು. ಮಹಾಭಾರತದ ೩೨ ಸಂಪುಟಗಳನ್ನೂ ಒಟ್ಟಾಗಿ ಗ್ರಾಹಕರಿಗೆ ವಿತರಿಸುವ ಪ್ರಯತ್ನವು ನಡೆಯುತ್ತಿದೆ. ಭಗವಂತನ ಕೃಪೆಯಿಂದ ಅದು ಕಾರ್ಯಗತವಾಗಬೇಕಾಗಿದೆ. ಸಂಪುಟಗಳ ಬೆಲೆಯನ್ನು ಅನಿವಾರ್ಯಕಾರಣದಿಂದ 5/- ರೂ. ಹೆಚ್ಚಿಸಲಾಗಿದೆ. ಆದರೆ ಪೂರ್ಣಮಾಲೆಯ ಚಂದಾಹಣವನ್ನು ಹೆಚ್ಚಿಸಿಲ್ಲ. ಗ್ರಾಹಕರು ಇದರ ಪ್ರಯೋಜನವನ್ನು ಪಡೆದುಕೊಳ್ಳಬಹುದು. ಪ್ರಸಕ್ತ ಮಹಾಭಾರತದ ಪೂರ್ಣಮಾಲೆಯಲ್ಲಿ (32 ಸಂಪುಟಗಳಲ್ಲಿ) 14 ಸಂಪುಟಗಳು ವಿತರಣೆಗೆ ಸಿದ್ಧವಾಗಿವೆ. ಇನ್ನೂ 18 ಸಂಪುಟಗಳನ್ನು ಪುನರ್ಮುದ್ರಣ ಮಾಡಬೇಕಾಗಿದೆ. ತಿಂಗಳಿಗೆ ಒಂದು ಸಂಪುಟದಂತೆ ಹೊರತರುವ ಉತ್ಸಾಹವಿದೆ. ಗ್ರಾಹಕರೂ, ಹಿತೈಷಿಗಳೂ, ಧರ್ಮಾಭಿಮಾನಿಗಳೂ, ಆಢ್ಯರೂ ಆಗಿರುವವರು ದಿನಕ್ಕೆ 3 ಮಂದಿ ಗ್ರಾಹಕರನ್ನು ಸಂಗ್ರಹಿಸಿದರೂ ನಮ್ಮ ಸತ್ಸಂಕಲ್ಪವು ಯಶಸ್ವಿಯಾಗಿ ಕಾರ್ಯರೂಪಕ್ಕೆ ಬರುತ್ತದೆ. ಪರಮಾತ್ಮನು ಪ್ರೇರಣೆಯನ್ನಿತ್ತು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು ಸಮಸ್ತಸನ್ಮಂಗಲಾನಿಭವಂತು

ಓಂ ತತ್ಸತ್

—ಪ್ರಕಾಶಕರು.

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು
ಶಂಕರಾಚಾರ್ಯ ಶ್ರೀಮದ್ರಾಮಚಂದ್ರಾಪುರಮಠಸ್ಥ



ಶ್ರೀ ಶ್ರೀಮದ್ರಾಘವೇಂದ್ರಭಾರತೀ ಶ್ರೀಸ್ವಾಮಿಭಿಃ

ಅಸ್ಮದತ್ಯಂತ ಪ್ರಿಯಶಿಷ್ಯ ಭಾರತ ದರ್ಶನ ಪ್ರಕಾಶನ ಸಂಪಾದಕರಾದ ಕೇಶವ ಸುಬ್ರಹ್ಮಣ್ಯ ಕೌಶಿಕರು, ತ್ಯಾಗರಾಜನಗರ, ಬೆಂಗಳೂರು ಇವರಿಗೆ-

ಆದಾಗಿ ಶ್ರೀಸವಾರಿಯು ಆರಾಧ್ಯ ಶ್ರೀಸೀತಾರಾಮಚಂದ್ರಾದಿ ದೇವತಾ ದಿವ್ಯಸನ್ನಿಧಿಯಲ್ಲಿ ಸಮಸ್ತಜನತೆಯ ಯೋಗಕ್ಷೇಮಗಳನ್ನು ಸಂಪ್ರಾರ್ಥಿಸುತ್ತ ಸದ್ಯ ಈ ಮುಕ್ಕಾಮಿನಲ್ಲಿ ಕ್ಷೇಮದಿಂದ ವಸತಿಮಾಡಿದೆ.

ನಮ್ಮ ದೇಶದ ಅತ್ಯುತ್ತಮ ಆಧ್ಯಾತ್ಮಿಕ ತತ್ತ್ವಸಮುದ್ರದಲ್ಲಿಯ ರತ್ನತ್ರಯಗಳೆನಿಸಿದ ಶ್ರೀಮಹಾಭಾರತ, ಶ್ರೀಮದ್ರಾಮಾಯಣ, ಶ್ರೀಮದ್ಭಾಗವತಗಳೆಂಬ ಸಂಸ್ಕೃತಮಹಾಗ್ರಂಥಗಳನ್ನು ಕನ್ನಡಿಗರಿಗೆ ಸರಳ ವಾಗಿ ಓದಲು ಲಭಿಸುವಂತೆ ಮಾಡಲು, ನಿಮ್ಮ ಸಂಸ್ಥೆಯು ಕಾರ್ಯ

ಪ್ರವೃತ್ತಗೊಂಡ ಲಾಗಾಯ್ತಿನಿಂದ ಈವರೆಗೂ, ನಿಮ್ಮ ಕಾರ್ಯಗಳಿಗೆ ಸುವರ್ಣಮಂತ್ರಾಕ್ಷತೆಯನ್ನಿತ್ತು ಹರಸುತ್ತ ಬಂದಿರುವುದು ತನ್ಮೂಲಕ ಎಲ್ಲ ಗ್ರಂಥಗಳ ಪ್ರಕಾಶನ ಕಾರ್ಯಗಳು ನಿರ್ವಿಘ್ನವಾಗಿ ಪ್ರಕಟವಾಗುತ್ತ ಬಂದಿರುವುದು ಜನಜನಿತವಷ್ಟೆ.

ಪ್ರಕೃತ ಶ್ರೀಮದ್ಭಾಗವತದ ಹನ್ನೊಂದನೇ ಸ್ಕಂಧದ ಉತ್ತರಾರ್ಧ, ಹನ್ನೆರಡನೇ ಸ್ಕಂಧದ ಎಲ್ಲಾ ಅಧ್ಯಾಯಗಳನ್ನೊಳಗೊಂಡ, ೯ನೇ ಸಂಪುಟವನ್ನು ಸದ್ಯವೇ ಬಿಡುಗಡೆಗೊಳಿಸಲಿರುವ ಸಂಗ್ತಿ, ನಿಮ್ಮ ನಿವೇದನೆಯಿಂದ ವೇದ್ಯವಾಗಿ ಸಂತಸವಾಯಿತು.

ಯ ಏತಚ್ಛ್ರದ್ಧಯಾ ನಿತ್ಯಮವ್ಯಗ್ರಃ ಶೃಣುಯಾನ್ನರಃ ।
ಮಯಿ ಭಕ್ತಿಂ ಪರಾಂ ಕುರ್ವನ್ಕರ್ಮಭಿರ್ನ ಸ ಬಧ್ಯತೇ ॥

ಎಂಬುದಾಗಿ ಶ್ರೀಕೃಷ್ಣಪರಮಾತ್ಮನು ಉದ್ಧವನನ್ನು ಕುರಿತು, ಯಾವನು ಶ್ರದ್ಧಾಪೂರ್ವಕವಾಗಿ ಅನುದಿನವೂ ಈ ಬ್ರಹ್ಮಜ್ಞಾನಸಂವಾದವನ್ನು ಶ್ರವಣಮಾಡುವನೋ ಅಂಥಹವನಿಗೆ ಕರ್ಮಬಂಧನವಿರಲಾರದೆಂದು ಫಲಶ್ರುತಿ ಹೇಳಿರುವುದು ವೈಶಿಷ್ಟ್ಯವೇ ಸರಿ.

ಎರಡು ಸ್ಕಂಧಗಳಿಂದ ಕೂಡಿದ ಈ ಸಂಪುಟದಲ್ಲಿ ಅಡಕವಾಗಿರುವ ಆಧ್ಯಾತ್ಮಿಕವಿಷಯಗಳನ್ನೆಲ್ಲಾ ಸರ್ವರೂ ಓದಿ ಮನನಮಾಡಿಕೊಂಡು, ತಮ್ಮ ತಮ್ಮ ಆತ್ಮೋದ್ಧಾರಮಾಡಿಕೊಂಡು ಸುಖ-ಶಾಂತಿ ಪಡೆಯಲೆಂದು ಸುವರ್ಣಮಂತ್ರಾಕ್ಷತೆಯೊಂದಿಗೆ ಹಾರೈಸುತ್ತೇವೆ.

ಇತಿ ಶ್ರೀ ಶ್ರೀಮನ್ನಾರಾಯಣಸ್ಮೃತಯಃ

ಮಿತಿ: ಶ್ರೀ ಈಶ್ವರ ಸಂ। ದ ಚೈತ್ರ ಬಹುಳ ಬಿದಿಗೆ
(ದಿನಾಂಕ ೨೪-೪-೯೭ನೇ) ಗುರುವಾಸರೇ.
ವಸತಿ: ಶ್ರೀ ವಿದ್ಯಾಮಂದಿರ, ನಂ. ೨-ಎ, ಜೆ.ಪಿ. ರಸ್ತೆ, ಗಿರಿನಗರ, ಬೆಂಗಳೂರು.

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ॐ

ನವಮಃ ಸಂಪುಟಃ
ಶ್ರೀಮದ್ಭಾಗವತೇ-ಏಕಾದಶಸ್ಕನ್ಧಃ

ಜನ್ಮಾದ್ಯಸ್ಯ ಯತೋಽನ್ವಯಾದಿತರತ-
ಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ
ಮುಹ್ಯನ್ತಿ ಯತ್ಸೂರಯಃ।
ತೇಜೋವಾರಿಮೃದಾಂ ಯಥಾ ವಿನಿಮಯೋ
ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ
ಸತ್ಯಂ ಪರಂ ಧೀಮಹಿ ॥

ಅಥ ಅಷ್ಟಾದಶೋಽಧ್ಯಾಯಃ

ಶ್ರೀಭಗವಾನುವಾಚ :

ವನಂ ವಿವಿಕ್ಷುಃ ಪುತ್ರೇಷು ಭಾರ್ಯಾಂ ನ್ಯಸ್ಯ ಸಹೈವ ವಾ।
ವನ ಏವ ವಸೇಚ್ಛಾನ್ತಸ್ತೃತೀಯಂ ಭಾಗಮಾಯುಷಃ ॥೧॥

ಕನ್ದಮೂಲಫಲೈರ್ವನ್ಯೈರ್ಮೇಧ್ಯೈರ್ವೃತ್ತಿಂ ಪ್ರಕಲ್ಪಯೇತ್।
ವಸೀತ ವಲ್ಕಲಂ ವಾಸಸ್ತೃಣಪರ್ಣಾಜಿನಾನಿ ಚ ॥೨॥

ಕೇಶರೋಮನಖಶ್ಮಶ್ರುಮಲಾನಿ ಬಿಭೃಯಾದ್ದತಃ।
ನ ಧಾವೇದಪ್ಸು ಮಜ್ಜೇತ ತ್ರಿಕಾಲಂ ಸ್ಥಣ್ಡಿಲೇಶಯಃ ॥೩॥

ಗ್ರೀಷ್ಮೇ ತಪ್ಯೇತ ಪಞ್ಚಾಗ್ನೀನ್ ವರ್ಷಾಸ್ವಾಸಾರಷಾಡ್ಜಲೇ।
ಆಕಣ್ಠಮಗ್ನಃ ಶಿಶಿರೇ ಏವಂ ವೃತ್ತಸ್ತಪಶ್ಚರೇತ್ ॥೪॥

ಅಗ್ನಿಪಕ್ವಂ ಸಮಶ್ನೀಯಾತ್ಕಾಲಪಕ್ವಮಥಾಪಿ ವಾ।
ಉಲೂಖಲಾಶ್ಮಕುಟ್ಟೋ ವಾ ದನ್ತೋಲೂಖಲ ಏವ ವಾ ॥೫॥

ಸ್ವಯಂ ಸಞ್ಚಿನುಯಾತ್ಸರ್ವಮಾತ್ಮನೋ ವೃತ್ತಿಕಾರಣಮ್।
ದೇಶಕಾಲಬಲಾಭಿಜ್ಞೋ ನಾದದೀತಾನ್ಯದಾಹೃತಮ್ ॥೬॥

ವನ್ಯೈಶ್ಚರುಪುರೋಡಾಶೈರ್ನಿರ್ವಪೇತ್ಕಾಲಚೋದಿತಾನ್।
ನ ತು ಶ್ರೌತೇನ ಪಶುನಾ ಮಾಂ ಯಜೇತ ವನಾಶ್ರಮೀ ॥೭॥

ಅಗ್ನಿಹೋತ್ರಂ ಚ ದರ್ಶಶ್ಚ ಪೂರ್ಣಮಾಸಶ್ಚ ಪೂರ್ವವತ್।
ಚಾತುರ್ಮಾಸ್ಯಾನಿ ಚ ಮುನೇರಾಮ್ನಾತಾನಿ ಚ ನೈಗಮೈಃ ॥೮॥

ಏವಂ ಚೀರ್ಣೇನ ತಪಸಾ ಮುನಿರ್ಧಮನಿಸನ್ತತಃ।
ಮಾಂ ತಪೋಮಯಮಾರಾಧ್ಯ ಋಷಿಲೋಕಾದುಪೈತಿ ಮಾಮ್॥೯॥

ಯಸ್ತ್ವೇತತ್ಕೃಚ್ಛ್ರತಶ್ಚೀರ್ಣಂ ತಪೋ ನಿಃಶ್ರೇಯಸಂ ಮಹತ್।
ಕಾಮಾಯಾಲ್ಪೀಯಸೇ ಯುಞ್ಜ್ಯಾದ್ಬಾಲಿಶಃ ಕೋಽಪರಸ್ತತಃ ॥೧೦॥

ಯದಾಸೌ ನಿಯಮೇಽಕಲ್ಪೋ ಜರಯಾ ಜಾತವೇಪಥುಃ।
ಆತ್ಮನ್ಯಗ್ನೀನ್ಸಮಾರೋಪ್ಯ ಮಚ್ಚಿತ್ತೋಽಗ್ನಿಂ ಸಮಾವಿಶೇತ್ ॥೧೧॥

ಯದಾ ಕರ್ಮವಿಪಾಕೇಷು ಲೋಕೇಷು ನಿರಯಾತ್ಮಸು।
ವಿರಾಗೋ ಜಾಯತೇ ಸಮ್ಯಙ್ನ್ಯಸ್ತಾಗ್ನಿಃ ಪ್ರವ್ರಜೇತ್ತತಃ ॥೧೨॥

ಇಷ್ಟ್ವಾ ಯಥೋಪದೇಶಂ ಮಾಂ ದತ್ತ್ವಾ ಸರ್ವಸ್ವಮೃತ್ವಿಜೇ।
ಅಗ್ನೀನ್ಸ್ವಪ್ರಾಣ ಆವೇಶ್ಯ ನಿರಪೇಕ್ಷಃ ಪರಿವ್ರಜೇತ್ ॥೧೩॥

ವಿಪ್ರಸ್ಯ ವೈ ಸಂನ್ಯಸತೋ ದೇವಾ ದಾರಾದಿರೂಪಿಣಃ।
ವಿಘ್ನಾನ್ ಕುರ್ವನ್ತ್ಯಯಂ ಹ್ಯಸ್ಮಾನಾಕ್ರಮ್ಯ ಸಮಿಯಾತ್ಪರಮ್॥೧೪॥

ಬಿಭೃಯಾಚ್ಚೇನ್ಮುನಿರ್ವಾಸಃ ಕೌಪೀನಾಚ್ಛಾದನಂ ಪರಮ್।
ತ್ಯಕ್ತಂ ನ ದಣ್ಡಪಾತ್ರಾಭ್ಯಾಮನ್ಯತ್ಕಿಞ್ಚಿದನಾಪದಿ ॥೧೫॥

ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಪಿಬೇಜ್ಜಲಮ್।
ಸತ್ಯಪೂತಾಂ ವದೇದ್ವಾಚಂ ಮನಃಪೂತಂ ಸಮಾಚರೇತ್ ॥೧೬॥

ಮೌನಾನೀಹಾನಿಲಾಯಾಮಾ ದಣ್ಡಾ ವಾಗ್ದೇಹಚೇತಸಾಮ್।
ನ ಹ್ಯೇತೇ ಯಸ್ಯ ಸನ್ತ್ಯಙ್ಗ ವೇಣುಭಿರ್ನ ಭವೇದ್ಯತಿಃ ॥೧೭॥

ಭಿಕ್ಷಾಂ ಚತುರ್ಷು ವರ್ಣೇಷು ವಿಗರ್ಹ್ಯಾನ್ವರ್ಜಯಂಶ್ಚರೇತ್।
ಸಪ್ತಾಗಾರಾನ್ ಅಸಂಕ್ಲೃಪ್ತಾಂಸ್ತುಷ್ಯೇಲ್ಲಬ್ಧೇನ ತಾವತಾ ॥೧೮॥

ಬಹಿರ್ಜಲಾಶಯಂ ಗತ್ವಾ ತತ್ರೋಪಸ್ಪೃಶ್ಯ ವಾಗ್ಯತಃ।
ವಿಭಜ್ಯ ಪಾವಿತಂ ಶೇಷಂ ಭುಞ್ಜೀತಾಶೇಷಮಾಹೃತಮ್ ॥೧೯॥

ಏಕಶ್ಚರೇನ್ಮಹೀಮೇತಾಂ ನಿಸ್ಸಙ್ಗಃ ಸಂಯತೇನ್ದ್ರಿಯಃ ।
ಆತ್ಮಕ್ರೀಡ ಆತ್ಮರತ ಆತ್ಮವಾನ್ ಸಮದರ್ಶನಃ ॥೨೦॥

ವಿವಿಕ್ತಕ್ಷೇಮಶರಣೋ ಮದ್ಭಾವವಿಮಲಾಶಯಃ।
ಆತ್ಮಾನಂ ಚಿನ್ತಯೇದೇಕಮಭೇದೇನ ಮಯಾ ಮುನಿಃ ॥೨೧॥

ಅನ್ವೀಕ್ಷೇತಾತ್ಮನೋ ಬನ್ಧಂ ಮೋಕ್ಷಂ ಚ ಜ್ಞಾನನಿಷ್ಠಯಾ।
ಬನ್ಧ ಇನ್ದ್ರಿಯವಿಕ್ಷೇಪೋ ಮೋಕ್ಷ ಏಷಾಂ ಚ ಸಂಯಮಃ ॥೨೨॥

ತಸ್ಮಾನ್ನಿಯಮ್ಯ ಷಡ್ವರ್ಗಂ ಮದ್ಭಾವೇನ ಚರೇನ್ಮುನಿಃ।
ವಿರಕ್ತಃ ಕ್ಷುಲ್ಲಕಾಮೇಭ್ಯೋ ಲಬ್ಧ್ವಾಽಽತ್ಮನಿ ಸುಖಂ ಮಹತ್ ॥೨೩॥

ಪುರಗ್ರಾಮವ್ರಜಾನ್ ಸಾರ್ಥಾನ್ಭಿಕ್ಷಾರ್ಥಂ ಪ್ರವಿಶಂಶ್ಚರೇತ್।
ಪುಣ್ಯದೇಶಸರಿಚ್ಛೈಲವನಾಶ್ರಮವತೀಂ ಮಹೀಮ್ ॥೨೪॥

ವಾನಪ್ರಸ್ಥಾಶ್ರಮಪದೇಷ್ವಭೀಕ್ಷ್ಣಂ ಭೈಕ್ಷ್ಯಮಾಚರೇತ್।
ಸಂಸಿಧ್ಯತ್ಯಾಶ್ವಸಂಮೋಹಃ ಶುದ್ಧಸತ್ತ್ವಃ ಶಿಲಾನ್ಧಸಾ ॥೨೫॥

ನೈತದ್ವಸ್ತುತಯಾ ಪಶ್ಯೇದ್ದೃಶ್ಯಮಾನಂ ವಿನಶ್ಯತಿ।
ಅಸಕ್ತಚಿತ್ತೋ ವಿರಮೇದಿಹಾಮುತ್ರ ಚಿಕೀರ್ಷಿತಾತ್ ॥೨೭॥

ಯದೇತದಾತ್ಮನಿ ಜಗನ್ಮನೋವಾಕ್ಪ್ರಾಣಸಂಹತಮ್।
ಸರ್ವಂ ಮಾಯೇತಿ ತರ್ಕೇಣ ಸ್ವಸ್ಥಸ್ತ್ಯಕ್ತ್ವಾ ನ ತತ್ಸ್ಮರೇತ್ ॥೨೮॥

ಜ್ಞಾನನಿಷ್ಠೋ ವಿರಕ್ತೋ ವಾ ಮದ್ಭಕ್ತೋ ವಾನಪೇಕ್ಷಕಃ।
ಸಲಿಙ್ಗಾನಾಶ್ರಮಾಂಸ್ತ್ಯಕ್ತ್ವಾ ಚರೇದವಿಧಿಗೋಚರಃ ॥೨೯॥

ಬುಧೋ ಬಾಲಕವತ್ಕ್ರೀಡೇತ್ಕುಶಲೋ ಜಡವಚ್ಚರೇತ್ ।
ವದೇದುನ್ಮತ್ತವದ್ವಿದ್ವಾನ್ ಗೋಚರ್ಯಾಂ ನೈಗಮಶ್ಚರೇತ್ ॥೨೯॥

ವೇದವಾದರತೋ ನ ಸ್ಯಾನ್ನ ಪಾಖಣ್ಡೀ ನ ಹೈತುಕಃ।
ಶುಷ್ಕವಾದವಿವಾದೇ ನ ಕಞ್ಚಿತ್ಪಕ್ಷಂ ಸಮಾಶ್ರಯೇತ್ ॥೩೦॥

ನೋದ್ವಿಜೇತ ಜನಾದ್ಧೀರೋ ಜನಂ ಚೋದ್ವೇಜಯೇನ್ನ ತು।
ಅತಿವಾದಾಂಸ್ತಿತಿಕ್ಷೇತ ನಾವಮನ್ಯೇತ ಕಞ್ಚನ।
ದೇಹಮುದ್ದಿಶ್ಯ ಪಶುವದ್ವೈರಂ ಕುರ್ಯಾನ್ನ ಕೇನಚಿತ್ ॥೩೧॥

ಏಕ ಏವ ಪರೋ ಹ್ಯಾತ್ಮಾ ಭೂತೇಷ್ವಾತ್ಮನ್ಯವಸ್ಥಿತಃ।
ಯಥೇನ್ದುರುದಪಾತ್ರೇಷು ಭೂತಾನ್ಯೇಕಾತ್ಮಕಾನಿ ಚ ॥೩೨॥

ಅಲಬ್ಧ್ವಾ ನ ವಿಷೀದೇತ ಕಾಲೇ ಕಾಲೇಽಶನಂ ಕ್ವಚಿತ್ ।
ಲಬ್ಧ್ವಾ ನ ಹೃಷ್ಯೇದ್ಧೃತಿಮಾನುಭಯಂ ದೈವತನ್ತ್ರಿತಮ್ ॥೩೩॥

ಆಹಾರಾರ್ಥಂ ಸಮೀಹೇತ ಯುಕ್ತಂ ತತ್ಪ್ರಾಣಧಾರಣಮ್।
ತತ್ತ್ವಂ ವಿಮೃಶ್ಯತೇ ತೇನ ತದ್ವಿಜ್ಞಾಯ ವಿಮುಚ್ಯತೇ ॥೩೪॥

ಯದೃಚ್ಛಯೋಪಪನ್ನಾನ್ನಮದ್ಯಾಚ್ಛ್ರೇಷ್ಠಮುತಾಪರಮ್ ।
ತಥಾ ವಾಸಸ್ತಥಾ ಶಯ್ಯಾಂ ಪ್ರಾಪ್ತಂ ಪ್ರಾಪ್ತಂ ಭಜೇನ್ಮುನಿಃ ॥೩೫॥

ಶೌಚಮಾಚಮನಂ ಸ್ನಾನಂ ನ ತು ಚೋದನಯಾ ಚರೇತ್।
ಅನ್ಯಾಂಶ್ಚ ನಿಯಮಾನ್ ಜ್ಞಾನೀ ಯಥಾಹಂ ಲೀಲಯೇಶ್ವರಃ ॥೩೬॥

ನ ಹಿ ತಸ್ಯ ವಿಕಲ್ಪಾಖ್ಯಾ ಯಾ ಚ ಮದ್ವೀಕ್ಷಯಾ ಹತಾ।
ಆದೇಹಾನ್ತಾತ್ ಕ್ವಚಿತ್ ಖ್ಯಾತಿಸ್ತತಃ ಸಮ್ಪದ್ಯತೇ ಮಯಾ ॥೩೭॥

ದುಃಖೋದರ್ಕೇಷು ಕಾಮೇಷು ಜಾತನಿರ್ವೇದ ಆತ್ಮವಾನ್।
ಅಜಿಜ್ಞಾಸಿತಮದ್ಧರ್ಮೋ ಗುರುಂ ಮುನಿಮುಪಾವ್ರಜೇತ್ ॥೩೮॥

ತಾವತ್ಪರಿಚರೇದ್ಭಕ್ತಃ ಶ್ರದ್ಧಾವಾನನಸೂಯಕಃ।
ಯಾವದ್ಬ್ರಹ್ಮ ವಿಜಾನೀಯಾನ್ಮಾಮೇವ ಗುರುಮಾದೃತಃ ॥೩೯॥

ಯಸ್ತ್ವಸಂಯತಷಡ್ವರ್ಗಃ ಪ್ರಚಣ್ಡೇನ್ದ್ರಿಯಸಾರಥಿಃ ।
ಜ್ಞಾನವೈರಾಗ್ಯರಹಿತಸ್ತ್ರಿದಣ್ಡಮುಪಜೀವತಿ ॥೪೦॥

ಸುರಾನಾತ್ಮಾನಮಾತ್ಮಸ್ಥಂ ನಿಹ್ನುತೇ ಮಾಂ ಚ ಧರ್ಮಹಾ।
ಅವಿಪಕ್ವಕಷಾಯೋಽಸ್ಮಾದಮುಷ್ಮಾಚ್ಚ ವಿಹೀಯತೇ ॥೪೧॥

ಭಿಕ್ಷೋರ್ಧರ್ಮಃ ಶಮೋಽಹಿಂಸಾ ತಪ ಈಕ್ಷಾ ವನೌಕಸಃ।
ಗೃಹಿಣೋ ಭೂತರಕ್ಷೇಜ್ಯಾ ದ್ವಿಜಸ್ಯಾಚಾರ್ಯಸೇವನಮ್ ॥೪೨॥

ಬ್ರಹ್ಮಚರ್ಯಂ ತಪಃ ಶೌಚಂ ಸನ್ತೋಷೋ ಭೂತಸೌಹೃದಮ್।
ಗೃಹಸ್ಥಸ್ಯಾಪ್ಯೃತೌ ಗನ್ತುಃ ಸರ್ವೇಷಾಂ ಮದುಪಾಸನಮ್ ॥೪೩॥

ಇತಿ ಮಾಂ ಯಃ ಸ್ವಧರ್ಮೇಣ ಭಜೇನ್ನಿತ್ಯಮನನ್ಯಭಾಕ್।
ಸರ್ವಭೂತೇಷು ಮದ್ಭಾವೋ ಮದ್ಭಕ್ತಿಂ ವಿನ್ದತೇ ದೃಢಾಮ್ ॥೪೪॥

ಭಕ್ತ್ಯೋದ್ಧವಾನಪಾಯಿನ್ಯಾ ಸರ್ವಲೋಕಮಹೇಶ್ವರಮ್।
ಸರ್ವೋತ್ಪತ್ತ್ಯಪ್ಯಯಂ ಬ್ರಹ್ಮ ಕಾರಣಂ ಮೋಪಯಾತಿ ಸಃ ॥೪೫॥

ಇತಿ ಸ್ವಧರ್ಮನಿರ್ಣಿಕ್ತಸತ್ತ್ವೋ ನಿರ್ಜ್ಞಾತಮದ್ಗತಿಃ।
ಜ್ಞಾನವಿಜ್ಞಾನಸಮ್ಪನ್ನೋ ನಚಿರಾತ್ಸಮುಪೈತಿ ಮಾಮ್ ॥೪೬॥

ವರ್ಣಾಶ್ರಮವತಾಂ ಧರ್ಮ ಏಷ ಆಚಾರಲಕ್ಷಣಃ।
ಸ ಏವ ಮದ್ಭಕ್ತಿಯುತೋ ನಿಃಶ್ರೇಯಸಕರಃ ಪರಃ ॥೪೭॥

ಏತತ್ತೇಽಭಿಹಿತಂ ಸಾಧೋ ಭವಾನ್ ಪೃಚ್ಛತಿ ಯಚ್ಚ ಮಾಮ್।
ಯಥಾ ಸ್ವಧರ್ಮಸಂಯುಕ್ತೋ ಭಕ್ತೋ ಮಾಂ
ಸಮಿಯಾತ್ಪರಮ್ ॥೪೮॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಸಂಹಿತಾಯಾಂ ಏಕಾದಶಸ್ಕನ್ಧೇ ಅಷ್ಟಾದಶೋಽಧ್ಯಾಯಃ

ಅಥ ಏಕೋನವಿಂಶೋಽಧ್ಯಾಯಃ

ಶ್ರೀಭಗವಾನುವಾಚ:

ಯೋ ವಿದ್ಯಾಶ್ರುತಸಮ್ಪನ್ನ ಆತ್ಮವಾನ್ ನಾನುಮಾನಿಕಃ।
ಮಾಯಾಮಾತ್ರಮಿದಂ ಜ್ಞಾತ್ವಾ ಜ್ಞಾನಂ ಚ ಮಯಿ ಸಂನ್ಯಸೇತ್॥

ಜ್ಞಾನಿನಸ್ತ್ವಹಮೇವೇಷ್ಟಃ ಸ್ವಾರ್ಥೋ ಹೇತುಶ್ಚ ಸಂಮತಃ।
ಸ್ವರ್ಗಶ್ಚೈವಾಪವರ್ಗಶ್ಚ ನಾನ್ಯೋಽರ್ಥೋ ಮದೃತೇ ಪ್ರಿಯಃ ॥೨॥

ಜ್ಞಾನವಿಜ್ಞಾನಸಂಸಿದ್ಧಾಃ ಪದಂ ಶ್ರೇಷ್ಠಂ ವಿದುರ್ಮಮ।
ಜ್ಞಾನೀ ಪ್ರಿಯತಮೋಽತೋ ಮೇ ಜ್ಞಾನೇನಾಸೌ ಬಿಭರ್ತಿ ಮಾಮ್ ॥

ತಪಸ್ತೀರ್ಥಂ ಜಪೋ ದಾನಂ ಪವಿತ್ರಾಣೀತರಾಣಿ ಚ।
ನಾಲಂ ಕುರ್ವನ್ತಿ ತಾಂ ಸಿದ್ಧಿಂ ಯಾ ಜ್ಞಾನಕಲಯಾ ಕೃತಾ ॥೪॥

ತಸ್ಮಾಜ್ಜ್ಞಾನೇನ ಸಹಿತಂ ಜ್ಞಾತ್ವಾ ಸ್ವಾತ್ಮಾನಮುದ್ಧವ।
ಜ್ಞಾನವಿಜ್ಞಾನಸಮ್ಪನ್ನೋ ಭಜ ಮಾಂ ಭಕ್ತಿಭಾವಿತಃ ॥೫॥

ಜ್ಞಾನವಿಜ್ಞಾನಯಜ್ಞೇನ ಮಾಮಿಷ್ಟ್ವಾತ್ಮಾನಮಾತ್ಮನಿ ।
ಸರ್ವಯಜ್ಞಪತಿಂ ಮಾಂ ವೈ ಸಂಸಿದ್ಧಿಂ ಮುನಯೋಽಗಮನ್ ॥೬॥

ತ್ವಯ್ಯುದ್ಧವಾಶ್ರಯತಿ ಯಸ್ತ್ರಿವಿಧೋ ವಿಕಾರೋ
ಮಾಯಾನ್ತರಾಽಪತತಿ ನಾದ್ಯಪವರ್ಗಯೋರ್ಯತ್ ।
ಜನ್ಮಾದಯೋಽಸ್ಯ ಯದಮೀ ತವ ತಸ್ಯ ಕಿಂ ಸ್ಯು-
ರಾದ್ಯನ್ತಯೋರ್ಯದಸತೋಽಸ್ತಿ ತದೇವ ಮಧ್ಯೇ ॥೭॥

ಉದ್ಧವ ಉವಾಚ:

ಜ್ಞಾನಂ ವಿಶುದ್ಧಂ ವಿಪುಲಂ ಯಥೈತ-
ದ್ವೈರಾಗ್ಯವಿಜ್ಞಾನಯುತಂ ಪುರಾಣಮ್ ।
ಆಖ್ಯಾಹಿ ವಿಶ್ವೇಶ್ವರ ವಿಶ್ವಮೂರ್ತೇ
ತ್ವದ್ಭಕ್ತಿಯೋಗಂ ಚ ಮಹದ್ವಿಮೃಗ್ಯಮ್ ॥೮॥

ತಾಪತ್ರಯೇಣಾಭಿಹತಸ್ಯ ಘೋರೇ
ಸನ್ತಪ್ಯಮಾನಸ್ಯ ಭವಾಧ್ವನೀಶ ।
ಪಶ್ಯಾಮಿ ನಾನ್ಯಚ್ಛರಣಂ ತವಾಂಘ್ರಿ-
ದ್ವನ್ದ್ವಾತಪತ್ರಾದಮೃತಾಭಿವರ್ಷಾತ್ ॥೯॥

ದಷ್ಟಂ ಜನಂ ಸಮ್ಪತಿತಂ ಬಿಲೇಽಸ್ಮಿನ್
ಕಾಲಾಹಿನಾ ಕ್ಷುದ್ರಸುಖೋರುತರ್ಷಮ್ ।
ಸಮುದ್ಧರೈನಂ ಕೃಪಯಾಽಪವರ್ಗ್ಯೈ-
ರ್ವಚೋಭಿರಾಸಿಞ್ಚ ಮಹಾನುಭಾವ ॥೧೦॥

ಶ್ರೀಭಗವಾನುವಾಚ:

ಇತ್ಥಮೇತತ್ ಪುರಾ ರಾಜಾ ಭೀಷ್ಮಂ ಧರ್ಮಭೃತಾಂ ವರಮ್।
ಅಜಾತಶತ್ರುಃ ಪಪ್ರಚ್ಛ ಸರ್ವೇಷಾಂ ನೋಽನುಶೃಣ್ವತಾಮ್ ॥೧೧॥

ನಿವೃತ್ತೇ ಭಾರತೇ ಯುದ್ಧೇ ಸುಹೃನ್ನಿಧನವಿಹ್ವಲಃ।
ಶ್ರುತ್ವಾ ಧರ್ಮಾನ್ಬಹೂನ್ಪಶ್ಚಾನ್ಮೋಕ್ಷಧರ್ಮಾನಪೃಚ್ಛತ ॥೧೨॥

ತಾನಹಂ ತೇಽಭಿಧಾಸ್ಯಾಮಿ ದೇವವ್ರತಮುಖಾಚ್ಛ್ರುತಾನ್ ।
ಜ್ಞಾನವೈರಾಗ್ಯವಿಜ್ಞಾನಶ್ರದ್ಧಾಭಕ್ತ್ಯುಪಬೃಂಹಿತಾನ್ ॥೧೩॥

ನವೈಕಾದಶ ಪಞ್ಚ ತ್ರೀನ್ಭಾವಾನ್ಭೂತೇಷು ಯೇನ ವೈ।
ಈಕ್ಷೇತಾಥೈಕಮಪ್ಯೇಷು ತಜ್ಜ್ಞಾನಂ ಮಮ ನಿಶ್ಚಿತಮ್ ॥೧೪॥

ಏತದೇವ ಹಿ ವಿಜ್ಞಾನಂ ನ ತಥೈಕೇನ ಯೇನ ಯತ್।
ಸ್ಥಿತ್ಯುತ್ಪತ್ತ್ಯಪ್ಯಯಾನ್ ಪಶ್ಯೇದ್ಭಾವಾನಾಂ ತ್ರಿಗುಣಾತ್ಮನಾಮ್ ॥೧೫॥

ಆದಾವನ್ತೇ ಚ ಮಧ್ಯೇ ಚ ಸೃಜ್ಯಾತ್ಸೃಜ್ಯಂ ಯದನ್ವಿಯಾತ್।
ಪುನಸ್ತತ್ಪ್ರತಿಸಙ್ಕ್ರಾಮೇ ಯಚ್ಛಿಷ್ಯೇತ ತದೇವ ಸತ್ ॥೧೬॥

ಶ್ರುತಿಃ ಪ್ರತ್ಯಕ್ಷಮೈತಿಹ್ಯಮನುಮಾನಂ ಚತುಷ್ಟಯಮ್।
ಪ್ರಮಾಣೇಷ್ವನವಸ್ಥಾನಾದ್ವಿಕಲ್ಪಾತ್ ಸ ವಿರಜ್ಯತೇ ॥೧೭॥

ಕರ್ಮಣಾಂ ಪರಿಣಾಮಿತ್ವಾದಾವಿರಿಞ್ಚ್ಯಾದಮಙ್ಗಲಮ್।
ವಿಪಶ್ಚಿನ್ನಶ್ವರಂ ಪಶ್ಯೇದದೃಷ್ಟಮಪಿ ದೃಷ್ಟವತ್ ॥೧೮॥

ಭಕ್ತಿಯೋಗಃ ಪುರೈವೋಕ್ತಃ ಪ್ರೀಯಮಾಣಾಯ ತೇಽನಘ ।
ಪುನಶ್ಚ ಕಥಯಿಷ್ಯಾಮಿ ಮದ್ಭಕ್ತೇಃ ಕಾರಣಂ ಪರಮ್ ॥೧೯॥

ಶ್ರದ್ಧಾಮೃತಕಥಾಯಾಂ ಮೇ ಶಶ್ವನ್ಮದನುಕೀರ್ತನಮ್।
ಪರಿನಿಷ್ಠಾ ಚ ಪೂಜಾಯಾಂ ಸ್ತುತಿಭಿಃ ಸ್ತವನಂ ಮಮ ॥೨೦॥

ಆದರಃ ಪರಿಚರ್ಯಾಯಾಂ ಸರ್ವಾಙ್ಗೈರಭಿವನ್ದನಮ್।
ಮದ್ಭಕ್ತಪೂಜಾಭ್ಯಧಿಕಾ ಸರ್ವಭೂತೇಷು ಮನ್ಮತಿಃ ॥೨೧॥

ಮದರ್ಥೇಷ್ವಙ್ಗಚೇಷ್ಟಾ ಚ ವಚಸಾ ಮದ್ಗುಣೇರಣಮ್।
ಮಯ್ಯರ್ಪಣಂ ಚ ಮನಸಃ ಸರ್ವಕಾಮವಿವರ್ಜನಮ್ ॥೨೨॥

ಮದರ್ಥೇಽರ್ಥಪರಿತ್ಯಾಗೋ ಭೋಗಸ್ಯ ಚ ಸುಖಸ್ಯ ಚ।
ಇಷ್ಟಂ ದತ್ತಂ ಹುತಂ ಜಪ್ತಂ ಮದರ್ಥಂ ಯದ್ವ್ರತಂ ತಪಃ ॥೨೩॥

ಏವಂ ಧರ್ಮೈರ್ಮನುಷ್ಯಾಣಾಮುದ್ಧವಾತ್ಮನಿವೇದಿನಾಮ್।
ಮಯಿ ಸಞ್ಜಾಯತೇ ಭಕ್ತಿಃ ಕೋಽನ್ಯೋಽರ್ಥೋಽಸ್ಯಾವಶಿಷ್ಯತೇ ॥

ಯದಾಽತ್ಮನ್ಯರ್ಪಿತಂ ಚಿತ್ತಂ ಶಾನ್ತಂ ಸತ್ತ್ವೋಪಬೃಂಹಿತಮ್।
ಧರ್ಮಂ ಜ್ಞಾನಂ ಸವೈರಾಗ್ಯಮೈಶ್ವರ್ಯಂ ಚಾಭಿಪದ್ಯತೇ ॥೨೫॥

ಯದರ್ಪಿತಂ ತದ್ವಿಕಲ್ಪೇ ಇನ್ದ್ರಿಯೈಃ ಪರಿಧಾವತಿ ।
ರಜಸ್ವಲಂ ಚಾಸನ್ನಿಷ್ಠಂ ಚಿತ್ತಂ ವಿದ್ಧಿ ವಿಪರ್ಯಯಮ್ ॥೨೬॥

ಧರ್ಮೋ ಮದ್ಭಕ್ತಿಕೃತ್ ಪ್ರೋಕ್ತೋ ಜ್ಞಾನಂ ಚೈಕಾತ್ಮ್ಯದರ್ಶನಮ್ ।
ಗುಣೇಷ್ವಸಙ್ಗೋ ವೈರಾಗ್ಯಮೈಶ್ವರ್ಯಂ ಚಾಣಿಮಾದಯಃ ॥೨೭॥

ಉದ್ಧವ ಉವಾಚ:

ಯಮಃ ಕತಿವಿಧಃ ಪ್ರೋಕ್ತೋ ನಿಯಮೋ ವಾರಿಕರ್ಶನ।
ಕಃ ಶಮಃ ಕೋ ದಮಃ ಕೃಷ್ಣ ಕಾ ತಿತಿಕ್ಷಾ ಧೃತಿಃ ಪ್ರಭೋ ॥೨೮॥

ಕಿಂ ದಾನಂ ಕಿಂ ತಪಃ ಶೌರ್ಯಂ ಕಿಂ ಸತ್ಯಮೃತಮುಚ್ಯತೇ।
ಕಸ್ತ್ಯಾಗಃ ಕಿಂ ಧನಂ ಚೇಷ್ಟಂ ಕೋ ಯಜ್ಞಃ ಕಾ ಚ ದಕ್ಷಿಣಾ ॥೨೯॥

ಪುಂಸಃ ಕಿಂಸ್ವಿದ್ಬಲಂ ಶ್ರೀಮನ್ಭಗೋ ಲಾಭಶ್ಚ ಕೇಶವ।
ಕಾ ವಿದ್ಯಾ ಹ್ರೀಃ ಪರಾ ಕಾ ಶ್ರೀಃ ಕಿಂ ಸುಖಂ ದುಃಖಮೇವ ಚ॥೩೦॥

ಕಃ ಪಣ್ಡಿತಃ ಕಶ್ಚ ಮೂರ್ಖಃ ಕಃ ಪನ್ಥಾ ಉತ್ಪಥಶ್ಚ ಕಃ।
ಕಃ ಸ್ವರ್ಗೋ ನರಕಃ ಕಃ ಸ್ವಿತ್ಕೋ ಬನ್ಧುರುತ ಕಿಂ ಗೃಹಮ್ ॥೩೧॥

ಕ ಆಢ್ಯಃ ಕೋ ದರಿದ್ರೋ ವಾ ಕೃಪಣಃ ಕಃ ಕ ಈಶ್ವರಃ।
ಏತಾನ್ ಪ್ರಶ್ನಾನ್ ಮಮ ಬ್ರೂಹಿ ವಿಪರೀತಾಂಶ್ಚ ಸತ್ಪತೇ ॥೩೨॥

ಶ್ರೀಭಗವಾನುವಾಚ:

ಅಹಿಂಸಾ ಸತ್ಯಮಸ್ತೇಯಮಸಙ್ಗೋ ಹ್ರೀರಸಞ್ಚಯಃ।
ಆಸ್ತಿಕ್ಯಂ ಬ್ರಹ್ಮಚರ್ಯಂ ಚ ಮೌನಂ ಸ್ಥೈರ್ಯಂ
ಕ್ಷಮಾಭಯಮ್ ॥೩೩॥

ಶೌಚಂ ಜಪಸ್ತಪೋ ಹೋಮಃ ಶ್ರದ್ಧಾತಿಥ್ಯಂ ಮದರ್ಚನಮ್ ।
ತೀರ್ಥಾಟನಂ ಪರಾರ್ಥೇಹಾ ತುಷ್ಟಿರಾಚಾರ್ಯಸೇವನಮ್ ॥೩೪॥

ಏತೇ ಯಮಾಃ ಸನಿಯಮಾ ಉಭಯೋರ್ದ್ವಾದಶ ಸ್ಮೃತಾಃ।
ಪುಂಸಾಮುಪಾಸಿತಾಸ್ತಾತ ಯಥಾಕಾಮಂ ದುಹನ್ತಿ ಹಿ ॥೩೫॥

ಶಮೋ ಮನ್ನಿಷ್ಠತಾ ಬುದ್ಧೇರ್ದಮ ಇನ್ದ್ರಿಯಸಂಯಮಃ ।
ತಿತಿಕ್ಷಾ ದುಃಖಸಮ್ಮರ್ಷೋ ಜಿಹ್ವೋಪಸ್ಥಜಯೋ ಧೃತಿಃ ॥೩೬॥

ದಣ್ಡನ್ಯಾಸಃ ಪರಂ ದಾನಂ ಕಾಮತ್ಯಾಗಸ್ತಪಃ ಸ್ಮೃತಮ್।
ಸ್ವಭಾವವಿಜಯಃ ಶೌರ್ಯಂ ಸತ್ಯಂ ಚ ಸಮದರ್ಶನಮ್ ॥೩೭॥

ಋತಂ ಚ ಸೂನೃತಾ ವಾಣೀ ಕವಿಭಿಃ ಪರಿಕೀರ್ತಿತಾ।
ಕರ್ಮಸ್ವಸಙ್ಗಮಃ ಶೌಚಂ ತ್ಯಾಗಃ ಸಂನ್ಯಾಸ ಉಚ್ಯತೇ ॥೩೮॥

ಧರ್ಮ ಇಷ್ಟಂ ಧನಂ ನೄಣಾಂ ಯಜ್ಞೋಽಹಂ ಭಗವತ್ತಮಃ ।
ದಕ್ಷಿಣಾ ಜ್ಞಾನಸನ್ದೇಶಃ ಪ್ರಾಣಾಯಾಮಃ ಪರಂ ಬಲಮ್ ॥೩೯॥

ಭಗೋ ಮ ಐಶ್ವರೋ ಭಾವೋ ಲಾಭೋ ಮದ್ಭಕ್ತಿರುತ್ತಮಃ।
ವಿದ್ಯಾಽತ್ಮನಿ ಭಿದಾಭಾವೋ ಜುಗುಪ್ಸಾ ಹ್ರೀರಕರ್ಮಸು ॥೪೦॥

ಶ್ರೀರ್ಗುಣಾ ನೈರಪೇಕ್ಷ್ಯಾದ್ಯಾಃ ಸುಖಂ ದುಃಖಸುಖಾತ್ಯಯಃ।
ದುಃಖಂ ಕಾಮಸುಖಾಪೇಕ್ಷಾ ಪಣ್ಡಿತೋ ಬನ್ಧಮೋಕ್ಷವಿತ್ ॥೪೧॥

ಮೂರ್ಖೋ ದೇಹಾದ್ಯಹಮ್ಬುದ್ಧಿಃ ಪನ್ಥಾ ಮನ್ನಿಗಮಃ ಸ್ಮೃತಃ।
ಉತ್ಪಥಶ್ಚಿತ್ತವಿಕ್ಷೇಪ ಸರ್ಗಃ ಸತ್ತ್ವಗುಣೋದಯಃ ॥೪೨॥

ನರಕಸ್ತಮ ಉನ್ನಾಹೋ ಬನ್ಧುರ್ಗುರುರಹಂ ಸಖೇ।
ಗೃಹಂ ಶರೀರಂ ಮಾನುಷ್ಯಂ ಗುಣಾಢ್ಯೋ ಹ್ಯಾಢ್ಯ ಉಚ್ಯತೇ ॥೪೩॥

ದರಿದ್ರೋ ಯಸ್ತ್ವಸನ್ತುಷ್ಟಃ ಕೃಪಣೋ ಯೋಽಜಿತೇನ್ದ್ರಿಯಃ ।
ಗುಣೇಷ್ವಸಕ್ತಧೀರೀಶೋ ಗುಣಸಙ್ಗೋ ವಿಪರ್ಯಯಃ ॥೪೪॥

ಏತ ಉದ್ಧವ ತೇ ಪ್ರಶ್ನಾಃ ಸರ್ವೇ ಸಾಧು ನಿರೂಪಿತಾಃ।
ಕಿಂ ವರ್ಣಿತೇನ ಬಹುನಾ ಲಕ್ಷಣಂ ಗುಣದೋಷಯೋಃ।
ಗುಣದೋಷದೃಶಿರ್ದೋಷೋ ಗುಣಸ್ತೂಭಯವರ್ಜಿತಃ ॥೪೫॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಸಂಹಿತಾಯಾಂ ಏಕಾದಶಸ್ಕನ್ಧೇ ಏಕೋನವಿಂಶೋಽಧ್ಯಾಯಃ

——

ಅಥ ವಿಂಶೋಽಧ್ಯಾಯಃ

ಉದ್ಧವ ಉವಾಚ:

ವಿಧಿಶ್ಚ ಪ್ರತಿಷೇಧಶ್ಚ ನಿಗಮೋ ಹೀಶ್ವರಸ್ಯ ತೇ।
ಅವೇಕ್ಷತೇಽರವಿನ್ದಾಕ್ಷ ಗುಣಂ ದೋಷಂ ಚ ಕರ್ಮಣಾಮ್ ॥೧॥

ವರ್ಣಾಶ್ರಮವಿಕಲ್ಪಂ ಚ ಪ್ರತಿಲೋಮಾನುಲೋಮಜಮ್।
ದ್ರವ್ಯದೇಶವಯಃಕಾಲಾನ್ಸ್ವರ್ಗಂ ನರಕಮೇವ ಚ ॥೨॥

ಗುಣದೋಷಭಿದಾದೃಷ್ಟಿಮನ್ತರೇಣ ವಚಸ್ತವ।
ನಿಃಶ್ರೇಯಸಂ ಕಥಂ ನೃಣಾಂ ನಿಷೇಧವಿಧಿಲಕ್ಷಣಮ್ ॥೩॥

ಪಿತೃದೇವಮನುಷ್ಯಾಣಾಂ ವೇದಶ್ಚಕ್ಷುಸ್ತವೇಶ್ವರ।
ಶ್ರೇಯಸ್ತ್ವನುಪಲಬ್ಧೇಽರ್ಥೇ ಸಾಧ್ಯಸಾಧನಯೋರಪಿ ॥೪॥

ಗುಣದೋಷಭಿದಾದೃಷ್ಟಿರ್ನಿಗಮಾತ್ತೇ ನ ಹಿ ಸ್ವತಃ।
ನಿಗಮೇನಾಪವಾದಶ್ಚಭಿದಾಯಾ ಇತಿ ಹ ಭ್ರಮಃ ॥೫॥

ಶ್ರೀಭಗವಾನುವಾಚ:

ಯೋಗಾಸ್ತ್ರಯೋ ಮಯಾ ಪ್ರೋಕ್ತಾ ನೃಣಾಂ ಶ್ರೇಯೋವಿಧಿತ್ಸಯಾ ।
ಜ್ಞಾನಂ ಕರ್ಮ ಚ ಭಕ್ತಿಶ್ಚ ನೋಪಾಯೋಽನ್ಯೋಽಸ್ತಿ ಕುತ್ರಚಿತ್ ॥

ನಿರ್ವಿಣ್ಣಾನಾಂ ಜ್ಞಾನಯೋಗೋ ನ್ಯಾಸಿನಾಮಿಹ ಕರ್ಮಸು।
ತೇಷ್ವನಿರ್ವಿಣ್ಣಚಿತ್ತಾನಾಂ ಕರ್ಮಯೋಗಸ್ತು ಕಾಮಿನಾಮ್ ॥೭॥

ಯದೃಚ್ಛಯಾ ಮತ್ಕಥಾದೌ ಜಾತಶ್ರದ್ಧಸ್ತು ಯಃ ಪುಮಾನ್।
ನ ನಿರ್ವಿಣ್ಣೋ ನಾತಿಸಕ್ತೋ ಭಕ್ತಿಯೋಗೋಽಸ್ಯ ಸಿದ್ಧಿದಃ ॥೮॥

ತಾವತ್ ಕರ್ಮಾಣಿ ಕುರ್ವೀತ ನ ನಿರ್ವಿದ್ಯೇತ ಯಾವತಾ।
ಮತ್ಕಥಾಶ್ರವಣಾದೌ ವಾ ಶ್ರದ್ಧಾ ಯಾವನ್ನ ಜಾಯತೇ ॥೯॥

ಸ್ವಧರ್ಮಸ್ಥೋ ಯಜನ್ಯಜ್ಞೈರನಾಶೀಃ ಕಾಮ ಉದ್ಧವ।
ನ ಯಾತಿ ಸ್ವರ್ಗನರಕೌ ಯದ್ಯನ್ಯನ್ನ ಸಮಾಚರೇತ್ ॥೧೦॥

ಅಸ್ಮಿಂಲ್ಲೋಕೇ ವರ್ತಮಾನಃ ಸ್ವಧರ್ಮಸ್ಥೋಽನಘಃ ಶುಚಿಃ ।
ಜ್ಞಾನಂ ವಿಶುದ್ಧಮಾಪ್ನೋತಿ ಮದ್ಭಕ್ತಿಂ ವಾ ಯದೃಚ್ಛಯಾ ॥೧೧॥

ಸ್ವರ್ಗಿಣೋಽಪ್ಯೇತಮಿಚ್ಛನ್ತಿ ಲೋಕಂ ನಿರಯಿಣಸ್ತಥಾ ।
ಸಾಧಕಂ ಜ್ಞಾನಭಕ್ತಿಭ್ಯಾಮುಭಯಂ ತದಸಾಧಕಮ್ ॥೧೨॥

ನ ನರಃ ಸ್ವರ್ಗತಿಂ ಕಾಂಕ್ಷೇನ್ನಾರಕಿಂ ವಾ ವಿಚಕ್ಷಣಃ ।
ನೇಮಂ ಲೋಕಂ ಚ ಕಾಂಕ್ಷೇತ ದೇಹಾವೇಶಾತ್ಪ್ರಮಾದ್ಯತಿ ॥೧೩॥

ಏತದ್ವಿದ್ವಾನ್ ಪುರಾ ಮೃತ್ಯೋರಭವಾಯ ಘಟೇತ ಸಃ ।
ಅಪ್ರಮತ್ತ ಇದಂ ಜ್ಞಾತ್ವಾ ಮರ್ತ್ಯಮಪ್ಯರ್ಥಸಿದ್ಧಿದಮ್ ॥೧೪॥

ಛಿದ್ಯಮಾನಂ ಯಮೈರೇತೈಃ ಕೃತನೀಡಂ ವನಸ್ಪತಿಮ್ ।
ಖಗಃ ಸ್ವಕೇತಮುತ್ಸೃಜ್ಯ ಕ್ಷೇಮಂ ಯಾತಿ ಹ್ಯಲಮ್ಪಟಃ ॥೧೫॥

ಅಹೋರಾತ್ರೈಶ್ಛಿದ್ಯಮಾನಂ ಬುದ್ಧ್ವಾಽಽಯುರ್ಭಯವೇಪಥುಃ ।
ಮುಕ್ತಸಙ್ಗಃ ಪರಂ ಬುದ್ಧ್ವಾ ನಿರೀಹ ಉಪಶಾಮ್ಯತಿ ॥೧೬॥

ನೃದೇಹಮಾದ್ಯಂ ಸುಲಭಂ ಸುದುರ್ಲಭಂ
ಪ್ಲವಂ ಸುಕಲ್ಪಂ ಗುರುಕರ್ಣಧಾರಮ್ ।
ಮಯಾನುಕೂಲೇನ ನಭಸ್ವತೇರಿತಂ
ಪುಮಾನ್ ಭವಾಬ್ಧಿಂ ನ ತರೇತ್ಸ ಆತ್ಮಹಾ ॥೧೭॥

ಯದಾಽಽರಮ್ಭೇಷು ನಿರ್ವಿಣ್ಣೋ ವಿರಕ್ತಃ ಸಂಯತೇನ್ದ್ರಿಯಃ ।
ಅಭ್ಯಾಸೇನಾತ್ಮನೋ ಯೋಗೀ ಧಾರಯೇದಚಲಂ ಮನಃ ॥೧೮॥

ಧಾರ್ಯಮಾಣಂ ಮನೋ ಯರ್ಹಿ ಭ್ರಾಮ್ಯದಾಶ್ವನವಸ್ಥಿತಮ್ ।
ಅತನ್ದ್ರಿತೋಽನುರೋಧೇನ ಮಾರ್ಗೇಣಾತ್ಮವಶಂ ನಯೇತ್ ॥೧೯॥

ಮನೋಗತಿಂ ನ ವಿಸೃಜೇಜ್ಜಿತಪ್ರಾಣೋ ಜಿತೇನ್ದ್ರಿಯಃ ।
ಸತ್ತ್ವಸಮ್ಪನ್ನಯಾ ಬುದ್ಧ್ಯಾ ಮನ ಆತ್ಮವಶಂ ನಯೇತ್ ॥೨೦॥

ಏಷ ವೈ ಪರಮೋ ಯೋಗೋ ಮನಸಃ ಸಙ್ಗ್ರಹಃ ಸ್ಮೃತಃ ।
ಹೃದಯಜ್ಞತ್ವಮನ್ವಿಚ್ಛನ್ದಮ್ಯಸ್ಯೇವಾರ್ವತೋ ಮುಹುಃ ॥೨೧॥

ಸಾಙ್ಖ್ಯೇನ ಸರ್ವಭಾವಾನಾಂ ಪ್ರತಿಲೋಮಾನುಲೋಮತಃ।
ಭವಾಪ್ಯಯಾವನುಧ್ಯಾಯೇನ್ಮನೋ ಯಾವತ್ಪ್ರಸೀದತಿ ॥೨೨॥

ನಿರ್ವಿಣ್ಣಸ್ಯ ವಿರಕ್ತಸ್ಯ ಪುರುಷಸ್ಯೋಕ್ತವೇದಿನಃ।
ಮನಸ್ತ್ಯಜತಿ ದೌರಾತ್ಮ್ಯಂ ಚಿನ್ತಿತಸ್ಯಾನುಚಿನ್ತಯಾ ॥೨೩॥

ಯಮಾದಿಭಿರ್ಯೋಗಪಥೈರಾನ್ವೀಕ್ಷಿಕ್ಯಾ ಚ ವಿದ್ಯಯಾ।
ಮಮಾರ್ಚೋಪಾಸನಾಭಿರ್ವಾ ನಾನ್ಯೈರ್ಯೋಗ್ಯಂ ಸ್ಮರೇನ್ಮನಃ॥

ಯದಿ ಕುರ್ಯಾತ್ಪ್ರಮಾದೇನ ಯೋಗೀ ಕರ್ಮ ವಿಗರ್ಹಿತಮ್।
ಯೋಗೇನೈವ ದಹೇದಂಹೋ ನಾನ್ಯತ್ತತ್ರ ಕದಾಚನ ॥೨೫॥

ಸ್ವೇ ಸ್ವೇऽಧಿಕಾರೇ ಯಾ ನಿಷ್ಠಾ ಸ ಗುಣಃ ಪರಿಕೀರ್ತಿತಃ।
ಕರ್ಮಣಾಂ ಜಾತ್ಯಶುದ್ಧಾನಾಮನೇನ ನಿಯಮಃ ಕೃತಃ।
ಗುಣದೋಷವಿಧಾನೇನ ಸಙ್ಗಾನಾಂ ತ್ಯಾಜನೇಚ್ಛಯಾ ॥೨೬॥

ಜಾತಶ್ರದ್ಧೋ ಮತ್ಕಥಾಸು ನಿರ್ವಿಣ್ಣಃ ಸರ್ವಕರ್ಮಸು।
ವೇದ ದುಃಖಾತ್ಮಕಾನ್ ಕಾಮಾನ್ಪರಿತ್ಯಾಗೇऽಪ್ಯನೀಶ್ವರಃ ॥೨೭॥

ತತೋ ಭಜೇತ ಮಾಂ ಪ್ರೀತಃ ಶ್ರದ್ಧಾಲುರ್ದೃಢನಿಶ್ಚಯಃ।
ಜುಷಮಾಣಶ್ಚ ತಾನ್ಕಾಮಾನ್ ದುಃಖೋದರ್ಕಾಂಶ್ಚ ಗರ್ಹಯನ್॥

ಪ್ರೋಕ್ತೇನ ಭಕ್ತಿಯೋಗೇನ ಭಜತೋ ಮಾಸಕೃನ್ಮುನೇಃ।
ಕಾಮಾ ಹೃದಯ್ಯಾ ನಶ್ಯನ್ತಿ ಸರ್ವೇ ಮಯಿ ಹೃದಿ ಸ್ಥಿತೇ ॥೨೯॥

ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ।
ಕ್ಷೀಯನ್ತೇ ಚಾಸ್ಯ ಕರ್ಮಾಣಿ ಮಯಿ ದೃಷ್ಟೇऽಖಿಲಾತ್ಮನಿ ॥೩೦॥

ತಸ್ಮಾನ್ಮದ್ಭಕ್ತಿಯುಕ್ತಸ್ಯ ಯೋಗಿನೋ ವೈ ಮದಾತ್ಮನಃ।
ನ ಜ್ಞಾನಂ ನ ಚ ವೈರಾಗ್ಯಂ ಪ್ರಾಯಃ ಶ್ರೇಯೋ ಭವೇದಿಹ ॥೩೧॥

ಯತ್ಕರ್ಮಭಿರ್ಯತ್ತಪಸಾ ಜ್ಞಾನವೈರಾಗ್ಯತಶ್ಚ ಯತ್।
ಯೋಗೇನ ದಾನಧರ್ಮೇಣ ಶ್ರೇಯೋಭಿರಿತರೈರಪಿ ॥೩೨॥

ಸರ್ವಂ ಮದ್ಭಕ್ತಿಯೋಗೇನ ಮದ್ಭಕ್ತೋ ಲಭತೇಽಞ್ಜಸಾ ।
ಸ್ವರ್ಗಾಪವರ್ಗಂ ಮದ್ಧಾಮ ಕಥಞ್ಚಿದ್ಯದಿ ವಾಞ್ಛತಿ ॥೩೩॥

ನ ಕಿಞ್ಚಿತ್ಸಾಧವೋ ಧೀರಾ ಭಕ್ತಾ ಹ್ಯೇಕಾನ್ತಿನೋ ಮಮ।
ವಾಞ್ಛನ್ತ್ಯಪಿ ಮಯಾ ದತ್ತಂ ಕೈವಲ್ಯಮಪುನರ್ಭವಮ್ ॥೩೪॥

ನೈರಪೇಕ್ಷ್ಯಂ ಪರಂ ಪ್ರಾಹುರ್ನಿಃಶ್ರೇಯಸಮನಲ್ಪಕಮ್।
ತಸ್ಮಾನ್ನಿರಾಶಿಷೋ ಭಕ್ತಿರ್ನಿರಪೇಕ್ಷಸ್ಯ ಮೇ ಭವೇತ್ ॥೩೫॥

ನ ಮಯ್ಯೇಕಾನ್ತಭಕ್ತಾನಾಂ ಗುಣದೋಷೋದ್ಭವಾ ಗುಣಾಃ।
ಸಾಧೂನಾಂ ಸಮಚಿತ್ತಾನಾಂ ಬುದ್ಧೇಃ ಪರಮುಪೇಯುಷಾಮ್॥

ಏವಮೇತಾನ್ಮಯಾಽದಿಷ್ಟಾನನುತಿಷ್ಠನ್ತಿ ಮೇ ಪಥಃ ।
ಕ್ಷೇಮಂ ವಿನ್ದನ್ತಿ ಮತ್ಸ್ಥಾನಂ ಯದ್ಬ್ರಹ್ಮ ಪರಮಂ ವಿದುಃ ॥೩೭॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಸಂಹಿತಾಯಾಂ ಏಕಾದಶಸ್ಕನ್ಧೇ ವಿಂಶೋಽಧ್ಯಾಯಃ

——

ಅಥ ಏಕವಿಂಶೋಽಧ್ಯಾಯಃ

ಶ್ರೀಭಗವಾನುವಾಚ:

ಯ ಏತಾನ್ಮತ್ಪಥೋ ಹಿತ್ವಾ ಭಕ್ತಿಜ್ಞಾನಕ್ರಿಯಾತ್ಮಕಾನ್।
ಕ್ಷುದ್ರಾನ್ಕಾಮಾಂಶ್ಚಲೈಃ ಪ್ರಾಣೈರ್ಜುಷನ್ತಃ ಸಂಸರನ್ತಿ ತೇ ॥೧॥

ಸ್ವೇ ಸ್ವೇಽಧಿಕಾರೇ ಯಾ ನಿಷ್ಠಾ ಸ ಗುಣಃ ಪರಿಕೀರ್ತಿತಃ।
ವಿಪರ್ಯಯಸ್ತು ದೋಷಃ ಸ್ಯಾದುಭಯೋರೇಷ ನಿಶ್ಚಯಃ ॥೨॥

ಶುದ್ಧ್ಯಶುದ್ಧೀ ವಿಧೀಯೇತೇ ಸಮಾನೇಷ್ವಪಿ ವಸ್ತುಷು।
ದ್ರವ್ಯಸ್ಯ ವಿಚಿಕಿತ್ಸಾರ್ಥಂ ಗುಣದೋಷೌ ಶುಭಾಶುಭೌ ॥೩॥

ಧರ್ಮಾರ್ಥಂ ವ್ಯವಹಾರಾರ್ಥಂ ಯಾತ್ರಾರ್ಥಮಿತಿ ಚಾನಘ।
ದರ್ಶಿತೋಽಯಂ ಮಯಾಽಚಾರೋ ಧರ್ಮಮುದ್ವಹತಾಂ
ಧುರಮ್ ॥೪॥

ಭೂಮ್ಯಂಬ್ವಗ್ನ್ಯನಿಲಾಕಾಶಾ ಭೂತಾನಾಂ ಪಞ್ಚ ಧಾತವಃ।
ಆಬ್ರಹ್ಮಸ್ಥಾವರಾದೀನಾಂ ಶಾರೀರಾ ಆತ್ಮಸಂಯುತಾಃ ॥೫॥

ವೇದೇನ ನಾಮರೂಪಾಣಿ ವಿಷಮಾಣಿ ಸಮೇಷ್ವಪಿ।
ಧಾತುಷೂದ್ಧವ ಕಲ್ಪ್ಯನ್ತೇ ಏತೇಷಾಂ ಸ್ವಾರ್ಥಸಿದ್ಧಯೇ ॥೬॥

ದೇಶಕಾಲಾದಿಭಾವಾನಾಂ ವಸ್ತೂನಾಂ ಮಮ ಸತ್ತಮ।
ಗುಣದೋಷೌ ವಿಧೀಯೇತೇ ನಿಯಮಾರ್ಥಂ ಹಿ ಕರ್ಮಣಾಮ್॥೭॥

ಅಕೃಷ್ಣಸಾರೋ ದೇಶಾನಾಮಬ್ರಹ್ಮಣ್ಯೋಽಶುಚಿರ್ಭವೇತ್ ।
ಕೃಷ್ಣಸಾರೋಽಪ್ಯಸೌವೀರಕೀಕಟಾಸಂಸ್ಕೃತೇರಿಣಮ್ ॥೮॥

ಕರ್ಮಣ್ಯೋ ಗುಣವಾನ್ಕಾಲೋ ದ್ರವ್ಯತಃ ಸ್ವತ ಏವ ವಾ।
ಯತೋ ನಿವರ್ತತೇ ಕರ್ಮ ಸ ದೋಷೋಽಕರ್ಮಕಃ ಸ್ಮೃತಃ ॥೯॥

ದ್ರವ್ಯಸ್ಯ ಶುದ್ಧ್ಯಶುದ್ಧೀ ಚ ದ್ರವ್ಯೇಣ ವಚನೇನ ಚ।
ಸಂಸ್ಕಾರೇಣಾಥ ಕಾಲೇನ ಮಹತ್ತ್ವಾಲ್ಪತಯಾಥವಾ ॥೧೦॥

ಶಕ್ತ್ಯಾಶಕ್ತ್ಯಾಥವಾ ಬುದ್ಧ್ಯಾ ಸಮೃದ್ಧ್ಯಾ ಚ ಯದಾತ್ಮನೇ।
ಅಘಂ ಕುರ್ವನ್ತಿ ಹಿ ಯಥಾ ದೇಶಾವಸ್ಥಾನುಸಾರತಃ ॥೧೧॥

ಧಾನ್ಯದಾರ್ವಸ್ಥಿತನ್ತೂನಾಂ ರಸತೈಜಸಚರ್ಮಣಾಮ್।
ಕಾಲವಾಯ್ವಗ್ನಿಮೃತ್ತೋಯೈಃ ಪಾರ್ಥಿವಾನಾಂ ಯುತಾಯುತೈಃ॥

ಅಮೇಧ್ಯಲಿಪ್ತಂ ಯದ್ಯೇನ ಗನ್ಧಂ ಲೇಪಂ ವ್ಯಪೋಹತಿ।
ಭಜತೇ ಪ್ರಕೃತಿಂ ತಸ್ಯ ತಚ್ಛೌಚಂ ತಾವದಿಷ್ಯತೇ ॥೧೩॥

ಸ್ನಾನದಾನತಪೋಽವಸ್ಥಾವೀರ್ಯಸಂಸ್ಕಾರಕರ್ಮಭಿಃ ।
ಮತ್ಸ್ಮೃತ್ಯಾ ಚಾತ್ಮನಃ ಶೌಚಂ ಶುದ್ಧಃ ಕರ್ಮಾಚರೇದ್ದ್ವಿಜಃ ॥೧೪॥

ಮನ್ತ್ರಸ್ಯ ಚ ಪರಿಜ್ಞಾನಂ ಕರ್ಮಶುದ್ಧಿರ್ಮದರ್ಪಣಮ್।
ಧರ್ಮಃ ಸಮ್ಪದ್ಯತೇ ಷಡ್ಭಿರಧರ್ಮಸ್ತು ವಿಪರ್ಯಯಃ ॥೧೫॥

ಕ್ವಚಿದ್ಗುಣೋಽಪಿ ದೋಷಃ ಸ್ಯಾದ್ದೋಷೋಽಪಿ ವಿಧಿನಾ ಗುಣಃ ।
ಗುಣದೋಷಾರ್ಥನಿಯಮಸ್ತದ್ಭಿದಾಮೇವ ಬಾಧತೇ ॥೧೬॥

ಸಮಾನಕರ್ಮಾಚರಣಂ ಪತಿತಾನಾಂ ನ ಪಾತಕಮ್।
ಔತ್ಪತ್ತಿಕೋ ಗುಣಃ ಸಙ್ಗೋ ನ ಶಯಾನಃ ಪತತ್ಯಧಃ ॥೧೭॥

ಯತೋ ಯತೋ ನಿವರ್ತೇತ ವಿಮುಚ್ಯೇತ ತತಸ್ತತಃ।
ಏಷ ಧರ್ಮೋ ನೃಣಾಂ ಕ್ಷೇಮಃ ಶೋಕಮೋಹಭಯಾಪಹಃ॥೧೮॥

ವಿಷಯೇಷು ಗುಣಾಧ್ಯಾಸಾತ್ ಪುಂಸಃ ಸಙ್ಗಸ್ತತೋ ಭವೇತ್।
ಸಙ್ಗಾತ್ತತ್ರ ಭವೇತ್ಕಾಮಃ ಕಾಮಾದೇವ ಕಲಿರ್ನೃಣಾಮ್ ॥೧೯॥

ಕಲೇರ್ದುರ್ವಿಷಹಃ ಕ್ರೋಧಸ್ತಮಸ್ತಮನುವರ್ತತೇ।
ತಮಸಾ ಗ್ರಸ್ಯತೇ ಪುಂಸಶ್ಚೇತನಾ ವ್ಯಾಪಿನೀ ದ್ರುತಮ್ ॥೨೦॥

ತಯಾ ವಿರಹಿತಃ ಸಾಧೋ ಜನ್ತುಃ ಶೂನ್ಯಾಯ ಕಲ್ಪತೇ।
ತತೋಽಸ್ಯ ಸ್ವಾರ್ಥವಿಭ್ರಂಶೋ ಮೂರ್ಚ್ಛಿತಸ್ಯ ಮೃತಸ್ಯ ಚ ॥೨೧॥

ವಿಷಯಾಭಿನಿವೇಶೇನ ನಾತ್ಮಾನಂ ವೇದ ನಾಪರಮ್।
ವೃಕ್ಷಜೀವಿಕಯಾ ಜೀವನ್ವ್ಯರ್ಥಂ ಭಸ್ತ್ರೇವ ಯಃ ಶ್ವಸನ್ ॥೨೨॥

ಫಲಶ್ರುತಿರಿಯಂ ನೃಣಾಂ ನ ಶ್ರೇಯೋ ರೋಚನಂ ಪರಮ್।
ಶ್ರೇಯೋವಿವಕ್ಷಯಾ ಪ್ರೋಕ್ತಂ ಯಥಾ ಭೈಷಜ್ಯರೋಚನಮ್॥

ಉತ್ಪತ್ತ್ಯೈವ ಹಿ ಕಾಮೇಷು ಪ್ರಾಣೇಷು ಸ್ವಜನೇಷು ಚ।
ಆಸಕ್ತಮನಸೋ ಮರ್ತ್ಯಾ ಆತ್ಮನೋಽನರ್ಥಹೇತುಷು ॥೨೪॥

ನ ತಾನವಿದುಷಃ ಸ್ವಾರ್ಥಂ ಭ್ರಾಮ್ಯತೋ ವೃಜನಾಧ್ವನಿ।
ಕಥಂ ಯುಞ್ಜ್ಯಾತ್ ಪುನಸ್ತೇಷು ತಾಂಸ್ತಮೋ ವಿಶತೋ ಬುಧಃ॥

ಏವಂ ವ್ಯವಸಿತಂ ಕೇಚಿದವಿಜ್ಞಾಯ ಕುಬುದ್ಧಯಃ।
ಫಲಶ್ರುತಿಂ ಕುಸುಮಿತಾಂ ನ ವೇದಜ್ಞಾ ವದನ್ತಿ ಹಿ ॥೨೬॥

ಕಾಮಿನಃ ಕೃಪಣಾ ಲುಬ್ಧಾಃ ಪುಷ್ಪೇಷು ಫಲಬುದ್ಧಯಃ।
ಅಗ್ನಿಮುಗ್ಧಾ ಧೂಮತಾನ್ತಾಃ ಸ್ವಂ ಲೋಕಂ ನ ವಿದನ್ತಿ ತೇ ॥೨೭॥

ನ ತೇ ಮಾಮಙ್ಗ ಜಾನನ್ತಿ ಹೃದಿಸ್ಥಂ ಯ ಇದಂ ಯತಃ।
ವಿಕಾರಗಳಿಂದ ಕೂಡಿದ ಈ ಶರೀರವು ನಿನ್ನನ್ನು ಆಶ್ರಯಿಸಿಕೊಂಡಿದೆ. ಈ ಶರೀರವು ಹಿಂದೆಯೂ ಇರಲಿಲ್ಲ. ಮುಂದೆಯೂ ಇರುವುದಿಲ್ಲ. ಮಧ್ಯದಲ್ಲಿ ಕಾಣಿಸಿಕೊಂಡಿದೆ. ಇದನ್ನು ಮಾಯೆಯ ಕಾರ್ಯವೆಂದೇ ತಿಳಿಯಬೇಕು. ಉತ್ಪತ್ತಿ, ಸ್ಥಿತಿ, ವಿಪರಿಣಾಮ, ಬೆಳವಣಿಗೆ, ಕ್ಷಯ ಮತ್ತು ನಾಶ ಎಂಬ ಆರು ಭಾಗಗಳಿಂದ ಕೂಡಿದ ಈ ಶರೀರಕ್ಕೂ ಮತ್ತು ನಿನಗೂ ಯಾವ ಸಂಬಂಧವೂ ಇಲ್ಲ. ಮೂಲತಃ ಈ ಉತ್ಪತ್ತಿ-ಸ್ಥಿತಿ ಮೊದಲಾದ ಭಾಗಗಳೇ ಅಸತ್ತಾಗಿವೆ. ಶಾಶ್ವತವಾಗಿ ಉಳಿಯತಕ್ಕುವುಗಳಲ್ಲ.'*

ಉದ್ಧವನು ಹೇಳುತ್ತಾನೆ :

ಜ್ಞಾನಂ ವಿಶುದ್ಧಂ ವಿಪುಲಂ ಯಥೈತ-
ದ್ವೈರಾಗ್ಯವಿಜ್ಞಾನಯುತಂ ಪುರಾಣಮ್ ।
ಆಖ್ಯಾಹಿ ವಿಶ್ವೇಶ್ವರ ವಿಶ್ವಮೂರ್ತೇ
ತ್ವದ್ಭಕ್ತಿಯೋಗಂ ಚ ಮಹದ್ವಿಮೃಗ್ಯಮ್ ॥೮॥

"ವಿಶ್ವೇಶ್ವರನೇ! ವಿಶ್ವಮೂರ್ತಿಯೇ! ವೈರಾಗ್ಯದಿಂದಲೂ, ವಿಜ್ಞಾನದಿಂದಲೂ ಯುಕ್ತವಾದ ಪುರಾತನವಾದ ಮತ್ತು ವಿಶುದ್ಧವಾದ ಈ ನಿನ್ನ

---

*ಆಧ್ಯಾತ್ಮಿಕಾದಿ ಮುಬ್ಬಗೆಯ ವಿಕಾರದ ಪರಿಣಾಮವಾದ ದೇಹವೇ ಮುಂತಾದುದು ಮಾಯೆಯು, ಪರಮಾರ್ಥವಲ್ಲ. ಏಕೆಂದರೆ.: ಅದು ಮಧ್ಯದಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಹಗ್ಗದಲ್ಲಿ ಹಾವು ಮುಂತಾದುವು ಹೇಗೋ ಹಾಗೆ ಆರಂಭ ಮತ್ತು ಅಂತ್ಯಗಳಲ್ಲಿ ಇರುವುದಿಲ್ಲ. ವಿಕಾರಭೂತವಾದ ಜಗತ್ತಿನ ಉತ್ಪತ್ತ್ಯಾದಿಗಳು ಅವುಗಳಿಗೆ ಅಧಿಷ್ಠಾನವಾಗಿ ಸತ್ಯನಾಗಿರುವ ನಿನಗೆ ಇರುವುದಿಲ್ಲ. ಹಗ್ಗದಲ್ಲಿ ಹಾವು ಮೊದಲು ವಸ್ತುತಃ ಇರುವುದಿಲ್ಲ. ಮಧ್ಯದಲ್ಲಿ ಭ್ರಮೆಯಿಂದ ಅದು ಹಾವಾಗುತ್ತದೆ. ಕೊನೆಗೆ ಭ್ರಮೆಯು ಹೋದಮೇಲೆ ಅದು ಹಗ್ಗವೇ–ಎಂದು ತಿಳಿದುಬರುತ್ತದೆ. ಆದುದರಿಂದ ಆದಿ-ಅಂತ್ಯಗಳಲ್ಲಿ ಇಲ್ಲದೇ ಇದ್ದ ಹಾವು ಮಧ್ಯದಲ್ಲಿಯೂ ಪಾರಮಾರ್ಥಿಕವಾಗಿ ಇರುವುದಿಲ್ಲ. ಅಥವಾ ಆದ್ಯಂತಗಳಲ್ಲಿ ಇರುವುದೇ ಮಧ್ಯದಲ್ಲೂ ಇರಬೇಕು. ಅದಕ್ಕೆ ಜನ್ಮಾದಿಗಳಿಲ್ಲ. ಆದುದರಿಂದ ನೀನು ಆದ್ಯಂತಗಳಲ್ಲಿರುವ ನಿರ್ವಿಕಾರವಾದ ಬ್ರಹ್ಮವೇ ಆಗಿದ್ದೀಯೇ.

(ಶ್ರೀಧರೀಯ)

ಮಾಯಾಪರಿಣಾಮವಾದ ಶರೀರದಲ್ಲಿರುವ ಸಂಸಾರಿಯಾದ ನಿನ್ನಲ್ಲಿ ಉತ್ಪತ್ತಿ, ಸ್ಥಿತಿ ಪ್ರಳಯರೂಪವಾದ ವಿಕಾರವು ಶರೀರಸಂಬಂಧಕ್ಕೆ ಮೊದಲೇ ಇರಲಿಲ್ಲ. ಶರೀರ ಸಂಬಂಧವು ಹೋದ ಮೇಲೂ ಇರುವುದಿಲ್ಲ. ಆದುದರಿಂದ ಆದ್ಯಂತಗಳಲ್ಲಿ ಇಲ್ಲದೇ

ಜ್ಞಾನವನ್ನು ಸುದೃಢವಾಗಿ ಮನಸ್ಸಿನಲ್ಲಿ ನೆಲೆಗೊಳ್ಳುವಂತೆ ಹೇಳು. ಅಂತೆಯೇ ಬ್ರಹ್ಮನೇ ಮೊದಲಾದ ಮಹಾಪುರುಷರೂ ಅರಸುತ್ತಿರುವ ಭಕ್ತಿಯೋಗವನ್ನು ದಯಮಾಡಿ ಹೇಳು.

ತಾಪತ್ರಯೇಣಾಭಿಹತಸ್ಯ ಘೋರೇ
ಸನ್ತಪ್ಯಮಾನಸ್ಯ ಭವಾಧ್ವನೀಶ ।
ಪಶ್ಯಾಮಿ ನಾನ್ಯಚ್ಛರಣಂ ತವಾಂಘ್ರಿ-
ದ್ವನ್ದ್ವಾತಪತ್ರಾದಮೃತಾಭಿವರ್ಷಾತ್ ॥೯॥

ಆಧ್ಯಾತ್ಮಿಕ, ಆಧಿದೈವಿಕ ಮತ್ತು ಆಧಿಭೌತಿಕಗಳೆಂಬ ಮೂರು ತಾಪಗಳಿಂದ ಪೀಡಿತನಾಗಿ ಘೋರವಾದ ಸಂಸಾರಮಾರ್ಗದಲ್ಲಿ ಪರಿತಪಿಸುತ್ತಾ ಓಡುತ್ತಿರುವ ಮನುಷ್ಯನಿಗೆ ಅಮೃತದ ಮಳೆಯನ್ನು ಸುರಿಸುವ ನಿನ್ನ ಎರಡು ಅಡಿದಾವರೆಗಳೆಂಬ ಛತ್ರಿಯ ಹೊರತಾಗಿ ಬೇರಾವ ಉಪಾಯವನ್ನೂ ನಾನು ಕಾಣೆನು.*

ದಷ್ಟಂ ಜನಂ ಸಮ್ಪತಿತಂ ಬಿಲೇಽಸ್ಮಿನ್
ಕಾಲಾಹಿನಾ ಕ್ಷುದ್ರಸುಖೋರುತರ್ಷಮ್ ।
ಸಮುದ್ಧರೈನಂ ಕೃಪಯಾಽಪವರ್ಗ್ಯೈ-
ರ್ವಚೋಭಿರಾಸಿಞ್ಚ ಮಹಾನುಭಾವ ॥೧೦॥

ಇರುವ ಈ ಜನ್ಮಾದಿ ವಿಕಾರವು ದೇಹಕ್ಕೇ ಹೊರತು ನಿನಗೆ ಇರುವುದಿಲ್ಲ. ಅಸತ್ತಾಗಿರುವ ಈ ಶರೀರಕ್ಕೆ ಆದಿಯಲ್ಲೂ ಮತ್ತು ಅಂತ್ಯದಲ್ಲೂ ಯಾವ ಆತ್ಮಸ್ವರೂಪವು ಇದ್ದೇ ಇದೆಯೋ ಆ ಆತ್ಮಸ್ವರೂಪವು ಮಧ್ಯದಲ್ಲಿಯೂ ಇರುತ್ತದೆ. ಇದಕ್ಕೆ ವೃದ್ಧಿ-ಕ್ಷಯಾದಿಗಳಿಲ್ಲ. ದೇಹವು ಅಚೇತನ ಪರಿಣಾಮರೂಪ. ಜನ್ಮಾದಿ ವಿಕಾರಗಳನ್ನು ಹೊಂದುವುದು ಮತ್ತು ಅನಿತ್ಯವಾದುದು. ಆತ್ಮನು ವಿಕಾರರಹಿತನೂ ಮತ್ತು ನಿತ್ಯನೂ ಆಗಿದ್ದಾನೆ.
(ವೀರರಾಘವೀಯ)

*ತಾಪತ್ರಯಗಳು : ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳೆಂಬ ಮೂರು ವಿಧವಾದ ದುಃಖಗಳು. ಆಧ್ಯಾತ್ಮಿಕವು ಶರೀರ ಮತ್ತು ಮನಸ್ಸಿನ ಸಂಬಂಧವಾದ ದುಃಖ. ಇದರಲ್ಲಿ ಮೂರು ಬಗೆ. ಆದಿಬಲ ಪ್ರವೃತ್ತ.: ಶುಕ್ರ-ಶೋಣಿತ ದೋಷದಿಂದ ಉಂಟಾಗುವ ಕುಷ್ಠ, ಮೂಲವ್ಯಾಧಿ ಮುಂತಾದ ರೋಗಗಳು. ಬ್ರಹ್ಮಬಲ ಪ್ರವೃತ್ತ.: ತಂದೆ-ತಾಯಿಗಳ ಅತ್ಯಾಚಾರವೇ ಮುಂತಾದ ದೋಷಗಳಿಂದ ಶಿಶುವಿನ

ಮಹಾನುಭಾವನೇ! ಭಗವಂತ! ಸಂಸಾರವೆಂಬ ಪಾಳುಬಾವಿಯಲ್ಲಿ ಬಿದ್ದು ಕಾಲವೆಂಬ ಸರ್ಪದಿಂದ ಸತತವಾಗಿ ಕಚ್ಚಲ್ಪಡುತ್ತಿದ್ದರೂ ತುಚ್ಛವಾದ ಅತ್ಯಲ್ಪವಾದ ಪ್ರಾಪಂಚಿಕಸುಖಕ್ಕಾಗಿ ಹಾತೊರೆಯುತ್ತಿರುವ ಈ ದೀನಜನರನ್ನು ಮುಕ್ತಿಬೋಧಕಗಳಾದ ಮತ್ತು ಅಮೃತರೂಪವಾದ ದಿವ್ಯಗೀತೆಗಳಿಂದ ಅಭಿಷೇಚಿಸುವ ಅಂತೆಯೇ ಉದ್ಧರಿಸುವ ಕೃಪೆಮಾಡು."

ಶ್ರೀಭಗವಂತನು ಹೇಳುತ್ತಾನೆ :

"ಉದ್ಧವ! ಹಿಂದೆ ರಾಜನಾದ ಅಜಾತಶತ್ರುವು ನಮ್ಮೆಲ್ಲರ ಎದುರಿಗೆ ಧರ್ಮಾತ್ಮರಲ್ಲಿ ಶ್ರೇಷ್ಠನಾದ ಭೀಷ್ಮಪಿತಾಮಹನನ್ನು ಇದೇ ಪ್ರಶ್ನೆಯನ್ನೇ ಕೇಳಿದ್ದನು. ಭಾರತಮಹಾಯುದ್ಧವು ಮುಗಿದನಂತರ ಬಂಧು-ಮಿತ್ರರ ನಿಧನದಿಂದ ಕಳವಳಗೊಂಡಿದ್ದ ಯುಧಿಷ್ಠಿರನು ಹಲವಾರು ಧರ್ಮಗಳನ್ನು ಕೇಳಿ ತಿಳಿದುಕೊಂಡನಂತರದಲ್ಲಿ ಮೋಕ್ಷಧರ್ಮದ ವಿಷಯವಾಗಿಯೂ ಪ್ರಶ್ನಿಸಿದನು. ಆ ಸಮಯದಲ್ಲಿ ನಾನು ಭೀಷ್ಮನ ಬಾಯಿಂದ ಕೇಳಿದ ಜ್ಞಾನ-ವೈರಾಗ್ಯ-ವಿಜ್ಞಾನ- ಶ್ರದ್ಧೆ- ಭಕ್ತಿ–ಇತ್ಯಾದಿಗಳನ್ನೊಳಗೊಂಡ ಮೋಕ್ಷ ಧರ್ಮಗಳನ್ನು ನಿನಗೆ ಹೇಳುತ್ತೇನೆ.

ನವೈಕಾದಶ ಪಞ್ಚ ತ್ರೀನ್ಭಾವಾನ್ಭೂತೇಷು ಯೇನ ವೈ।
ಈಕ್ಷೇತಾಥೈಕಮಪ್ಯೇಷು ತಜ್ಜ್ಞಾನಂ ಮಮ ನಿಶ್ಚಿತಮ್ ॥೧೪॥

ಮೇಲೆ ಪರಿಣಾಮವಾಗುವ ಖಾಯಿಲೆಗಳು. ಪಂಗುತ್ವ (ಕುಂಟು) ಜಾತ್ಯಂಧತ್ವ (ಹುಟ್ಟುಕುರುಡು) ಮುಂತಾದುವು. ದೋಷಬಲ ಪ್ರವೃತ್ತ.: ಭಯ, ದುಷ್ಟಾಹಾರ ಸೇವನೆ, ದುರಾಚಾರಗಳಿಂದ ಉಂಟಾಗುವ ವ್ಯಾಧಿಗಳು. ಕಾಮ-ಕ್ರೋಧಾದಿ ಅರಿ ಷಡ್ವರ್ಗವೂ ಆಧ್ಯಾತ್ಮಿಕ ದೋಷವೇ ಆಗಿದೆ. ಆಧಿದೈವಿಕವೂ ಮೂರು ವಿಧ. ಋತುಧರ್ಮಗಳಿಂದ ಉಂಟಾಗುವ ಶೀತೋಷ್ಣ ಹವಾಮಾನ ಬದಲಾವಣೆ ಇತ್ಯಾದಿ ಗಳಿಂದ ಸಂಭವಿಸುವ ರೋಗಗಳು. ದೈವಬಲ ಪ್ರವೃತ್ತ.: ಭಗವದಪಚಾರ (ದೈವ ದ್ರೋಹ) ಆಭಿಚಾರಿಕ ಕೃತ್ಯಗಳು, ಸಿಡಿಲಿನ ಬಡಿತ, ಪಿಶಾಚಿಗಳ ಆವೇಶ–ಮುಂತಾ ದುವು. ಸ್ವಭಾವಬಲ ಪ್ರವೃತ್ತ.: ಹಸಿವು-ಬಾಯಾರಿಕೆ, ಮುಪ್ಪು ಇತ್ಯಾದಿಗಳಿಂದ ಪ್ರಾಪ್ತವಾದ ದುಃಖ. ದುರ್ಬಲನಾದವನಿಗೆ ಪ್ರಬಲನಾದವನಿಂದ ಸಂಭವಿಸುವ ಅಪಾಯಗಳು. ಹುಲಿ, ಆನೆ, ಸರ್ಪ ಇವುಗಳಿಂದ ಉಂಟಾಗುವ ದುಃಖ ಇವೆಲ್ಲವೂ ಆಧಿಭೌತಿಕ ತಾಪತ್ರಯದ ಆವಾಂತರ ಭೇದಗಳು.

ಪ್ರಕೃತಿ, ಪುರುಷ, ಮಹತ್ತತ್ತ್ವ, ಅಹಂಕಾರ, ಶಬ್ದ, ಸ್ಪರ್ಶ, ರೂಪ, ರಸ, ಗಂಧ–ಎಂಬ ಈ ಒಂಬತ್ತು. ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಹನ್ನೊಂದನೆಯದಾದ ಮನಸ್ಸು, ಭೂಮಿ, ವಾಯು, ಆಕಾಶ, ಜ್ಯೋತಿ, ಜಲಗಳೆಂಬ ಐದು ಮಹಾಭೂತಗಳು. ಸತ್ತ್ವ-ರಜಸ್ಸು ಮತ್ತು ತಮಸ್ಸುಗಳೆಂಬ ಮೂರು ಗುಣಗಳು. ಒಟ್ಟು ಇಪ್ಪತ್ತೆಂಟು ತತ್ತ್ವಗಳು. ಬ್ರಹ್ಮಾದಿಸ್ತಂಬಪರ್ಯಂತವಾಗಿ ಸಕಲಪ್ರಾಣಿಗಳಲ್ಲಿಯೂ ವ್ಯಾಪಿಸಿಕೊಂಡಿರುವ ಈ ಇಪ್ಪತ್ತೆಂಟು ತತ್ತ್ವಗಳನ್ನು ಯಾವುದರಿಂದ ಅರಿಯಬಹುದೋ ಮತ್ತು ಈ ಇಪ್ಪತ್ತೆಂಟು ತತ್ತ್ವಗಳಲ್ಲಿಯೂ ಅನುಗತನಾಗಿರತಕ್ಕವನು ಪರಮಾತ್ಮನೊಬ್ಬನೇ ಎಂಬುದನ್ನು ಯಾವುದರಿಂದ ಸಿದ್ಧಾಂತಿಸಬಹುದೋ ಅದೇ ಜ್ಞಾನವು–ಎಂದು ನನ್ನ ನಿಶ್ಚಿತವಾದ ಅಭಿಪ್ರಾಯವಾಗಿದೆ.

ಏತದೇವ ಹಿ ವಿಜ್ಞಾನಂ ನ ತಥೈಕೇನ ಯೇನ ಯತ್।
ಸ್ಥಿತ್ಯುತ್ಪತ್ತ್ಯಪ್ಯಯಾನ್ ಪಶ್ಯೇದ್ಭಾವಾನಾಂ ತ್ರಿಗುಣಾತ್ಮನಾಮ್ ॥೧೫॥

ಇಪ್ಪತ್ತೆಂಟು ತತ್ತ್ವಗಳಲ್ಲಿಯೂ ಪರಮಾತ್ಮನು ಅನುಗತನಾಗಿದ್ದಾನೆ ಎಂದು ಹೇಳುವುದು ಜ್ಞಾನ. ತತ್ತ್ವಗಳಾದಿಯಾಗಿ ಸಮಸ್ತವೂ ಪರಬ್ರಹ್ಮ ಸ್ವರೂಪವೇ ಎಂದು ಆತ್ಮಸಾಕ್ಷಾತ್ಕಾರದ ಅನುಭವದಿಂದ ತಿಳಿಯುವುದು ವಿಜ್ಞಾನ. ಆತ್ಮಸಾಕ್ಷಾತ್ಕಾರವೆಂಬ ಅಪರೋಕ್ಷಜ್ಞಾನವುಂಟಾದಲ್ಲಿ ಜೀವನು ಎಲ್ಲದರಲ್ಲಿಯೂ ಬ್ರಹ್ಮಭಾವವನ್ನೇ ಕಾಣುವನು. ಅವನಿಗೆ ಎಲ್ಲವೂ ಬ್ರಹ್ಮಮಯವಾಗಿಯೇ ತೋರುವುದು. ಸತ್ತ್ವ-ರಜಸ್ಸು ಮತ್ತು ತಮಸ್ಸುಗಳೆಂಬ ಮೂರು ಪ್ರಕಾರವಾದ ಗುಣಗಳಿಂದ ಕೂಡಿರುವ ಎಲ್ಲ ವಸ್ತುಗಳಲ್ಲಿಯೂ ಸ್ಥಿತಿ-ಉತ್ಪತ್ತಿ ಮತ್ತು ಲಯಗಳಿವೆಯೆಂಬುದನ್ನು ತಿಳಿಯಬೇಕು. ಇದು ವಿಜ್ಞಾನವು.*

---

*ಜ್ಞಾನ-ವಿಜ್ಞಾನ ಶಬ್ದಗಳಿಂದ ಕ್ರಮವಾಗಿ ಪರೋಕ್ಷಜ್ಞಾನ-ಶಾಸ್ತ್ರಜ್ಞಾನ ಮತ್ತು ಅಪರೋಕ್ಷ (ಅನುಭವ) ಜ್ಞಾನಗಳು ಹೇಳಲ್ಪಡುತ್ತವೆ. ಅತಃ ಪರೋ–ಕ್ಷಾಪರೋಕ್ಷ ಜ್ಞಾನೇ ಜ್ಞಾನ–ವಿಜ್ಞಾನ ಶಬ್ದಾಭ್ಯಾಂ ಉಚ್ಯೇತೇ । ಪರೋಕ್ಷ ಜ್ಞಾನಿಯು ದಿಙ್ಮೂಢನಂತೆ. ಆತನಿಗೆ ಭ್ರಮೆಯು ಹೋಗಿರುವುದಿಲ್ಲ. ಸದ್ವಸ್ತುವು

ಆದಾವನ್ತೇ ಚ ಮಧ್ಯೇ ಚ ಸೃಜಾತ್ಸೃಜ್ಯಂ ಯದನ್ವಿಯಾತ್।
ಪುನಸ್ತತ್ಪ್ರತಿಸಙ್ಕ್ರಾಮೇ ಯಚ್ಛಿಷ್ಯೇತ ತದೇವ ಸತ್ ॥೧೬॥

ಯಾವುದು ಆದಿಯಲ್ಲಿಯೂ (ಸೃಷ್ಟಿಯ ಕಾಲದಲ್ಲಿಯೂ) ಅಂತ್ಯ ಕಾಲದಲ್ಲಿಯೂ (ಪ್ರಳಯಕಾಲದಲ್ಲಿಯೂ) ಇದ್ದುಕೊಂಡು ಮಧ್ಯದಲ್ಲಿ ಕಾರ್ಯದಿಂದ ಕಾರ್ಯಾಂತರವನ್ನು ಅನುಸರಿಸಿಹೋಗುತ್ತಾ, ಅವುಗಳ ಲಯದಲ್ಲಿ ಯಾವುದು ಹಾಗೆಯೇ ಉಳಿದುಕೊಂಡಿರುತ್ತದೆಯೋ (ಸಕಲ ತತ್ತ್ವಗಳಿಗೂ ಪ್ರಳಯವಾದಾಗ ನಿರ್ವಿಕಾರವಾಗಿ ಉಳಿದಿರುವುದೋ) ಅದನ್ನೇ ಸದ್ರೂಪವಾದ ಆತ್ಮತತ್ತ್ವವೆಂದು ಅರಿಯಬೇಕು.

ಶ್ರುತಿಃ ಪ್ರತ್ಯಕ್ಷಮೈತಿಹ್ಯಮನುಮಾನಂ ಚತುಷ್ಟಯಮ್।
ಪ್ರಮಾಣೇಷ್ವನವಸ್ಥಾನಾದ್ವಿಕಲ್ಪಾತ್ ಸ ವಿರಜ್ಯತೇ* ॥೧೭॥

ಶ್ರುತಿವಾಕ್ಯಗಳ ಪ್ರಮಾಣ, ಪ್ರತ್ಯಕ್ಷಪ್ರಮಾಣ, ಆಪ್ತರು ಹೇಳುವ ಐತಿಹ್ಯ ಮತ್ತು ನಾಲ್ಕನೆಯದಾಗಿ ಅನುಮಾನಪ್ರಮಾಣ ಇವುಗಳಿಂದ

ಆತ್ಮನಿಂದ ಬೇರೆಯೆಂದೇ ತಿಳಿದಿರುತ್ತಾನೆ. ಅಪರೋಕ್ಷಜ್ಞಾನದಿಂದ ಇದು ಬಾಧಿತವಾಗಿ ಎಲ್ಲವೂ ಬ್ರಹ್ಮವೇ–ಎಂಬ ಅನುಭವ ಉಂಟಾಗುವುದು. (ಶ್ರೀಧರೀಯ)

ಪ್ರಕೃತಿ-ಪುರುಷರ ಯಾಥಾತ್ಮ್ಯವನ್ನು ತಿಳಿಯುವುದೇ ಜ್ಞಾನ. ಆ ಪ್ರಕೃತಿ-ಪುರುಷರಿಗಿಂತಲೂ ವಿಲಕ್ಷಣನಾದ ನನ್ನನ್ನೇ ಉಪಾಯವನ್ನಾಗಿಯೂ ಪ್ರಾಪ್ಯನನ್ನಾಗಿಯೂ ಯಾವುದರಿಂದ ತಿಳಿಯುತ್ತಾನೆಯೋ ಅದೇ ವಿಜ್ಞಾನವು.

ಪ್ರಕೃತಿಪುರುಷ ಯಾಥಾತ್ಮ್ಯ ವಿವೇಚನಮೇವ ಜ್ಞಾನಮ್ ।
ಪ್ರಕೃತಿ-ಪುರುಷ ವಿಲಕ್ಷಣೇನ ಏಕೇನ ಯೇನ ॥
ಮಯ್ಯೈವೋಪಾಯ ಭೂತೇನ ಯದೇಕಮ್ ।
ಮತ್ಸ್ವರೂಪಂ ಪ್ರಾಪ್ಯಮಿತಿ ಏತದೇವ ವಿಜ್ಞಾನಂ ॥ (ವೀರರಾಘವೀಯ)

---

* ಈ ವಾಕ್ಯವೇ ಯಜುರಾರಣ್ಯಕದಲ್ಲಿ.: ಸ್ಮೃತಿಃ ಪ್ರತ್ಯಕ್ಷಮೈತಿಹ್ಯಮ್ । ಅನುಮಾನಶ್ಚತುಷ್ಟಯಮ್ । ಎಂಬುದಾಗಿ ಬಂದಿದೆ.

ನೇಹ ನಾನಾಸ್ತಿ ಕಿಞ್ಚನ । ಮುಂತಾದ ಶ್ರುತಿವಾಕ್ಯಗಳು ವಸ್ತ್ರವೇ ಮುಂತಾದ ಕಾರ್ಯವು ವಾಸ್ತವವಾಗಿ ನೋಡಿದಾಗ ಅದರ ಕಾರಣವಾದ ದಾರವೇ ಮುಂತಾದ ಕಾರಣದಿಂದ ಬೇರೆಯಲ್ಲ. ದಾರ ಮುಂತಾದುವೇ ಆಗಿದೆ. ಹಾಗೆಯೇ ಕಾರ್ಯರೂಪವಾದ ಈ ಜಗತ್ತು ಕಾರಣರೂಪವಾದ ಬ್ರಹ್ಮದಿಂದ ಬೇರೆಯಲ್ಲ. ಬ್ರಹ್ಮವೇ ಆಗಿದೆ ಎಂಬುದು ಪ್ರತ್ಯಕ್ಷಾನುಭವ. ಐತಿಹ್ಯ ಎಂದರೆ ಮಹಾಜನರ ಪ್ರಸಿದ್ಧಿ.

ನೋಡಿದಾಗ ಈ ಜಗತ್ತು ಅಸ್ಥಿರವಾದುದು, ಅಸತ್ತು ; ವಿಕಾರವುಳ್ಳದ್ದು ಎಂದು ತಿಳಿದು ಜ್ಞಾನಿಯು ಇದರಿಂದ ವಿರಕ್ತನಾಗುತ್ತಾನೆ.

ಕರ್ಮಣಾಂ ಪರಿಣಾಮಿತ್ವಾದಾವಿರಿಞ್ಚಾದಮಙ್ಗಲಮ್ ।
ವಿಪಶ್ಚಿನ್ನಶ್ವರಂ ಪಶ್ಯೇದದೃಷ್ಟಮಪಿ ದೃಷ್ಟವತ್ ॥೧೮॥

ವಿದ್ವಾಂಸನಾದವನು ಯಜ್ಞ-ಯಾಗಾದಿ ಕರ್ಮಫಲಗಳ ಪರಿಣಾಮವಾಗಿ ಪ್ರಾಪ್ತವಾಗಬಹುದಾದ ಬ್ರಹ್ಮಲೋಕಪರ್ಯಂತವಾದ ಸ್ವರ್ಗಸುಖವೇ ಮೊದಲಾದ ನಾನಾಪ್ರಕಾರದ ಅದೃಷ್ಟಸುಖಗಳನ್ನು ಕೂಡ ಐಹಿಕಸುಖದಂತೆಯೇ ಅಶಾಶ್ವತವಾದುದೆಂದೂ ದುಃಖಮಯವಾದುದೆಂದೂ ತಿಳಿಯಬೇಕು.*

ಜಗತ್ತು ಮಿಥ್ಯೆ. ದೃಶ್ಯವಾಗಿರುವುದರಿಂದ, ಕಪ್ಪೇಚಿಪ್ಪಿನಲ್ಲಿ ಕಾಣುವ ಬೆಳ್ಳಿಯಂತೆ ಇತ್ಯಾದಿ ಅನುಮಾನ. ಈ ನಾಲ್ಕು ಪ್ರಮಾಣಗಳಿಂದಲೂ ಬಾಧಿತವಾಗುವುದರಿಂದ ಎಲ್ಲದರಲ್ಲಿಯೂ ಅನುಗತವಾಗಿರುವ ಆತ್ಮವಸ್ತುವನ್ನು ನೋಡುತ್ತಾ ಜ್ಞಾನಿಯು ಅದಕ್ಕೆ ವಿಕಲ್ಪವಾಗಿರುವ ಈ ಜಗತ್ತು ಮಿಥ್ಯೆಯಾಗಿರುವುದರಿಂದ ಅದರಲ್ಲಿ ವಿರಕ್ತನಾಗುತ್ತಾನೆ.

(ಶ್ರೀಧರೀಯ)

ಇಲ್ಲಿ ವೈರಾಗ್ಯವನ್ನು ಉಪದೇಶಮಾಡಲಾಗಿದೆ. ಮೇಲೆ ಹೇಳಿದ ಜ್ಞಾನದಿಂದ ಕೂಡಿದವನು ಶ್ರುತಿ, ಪ್ರತ್ಯಕ್ಷ, ಐತಿಹ್ಯ, ಅನುಮಾನ–ಎಂಬ ನಾಲ್ಕು ಪ್ರಮಾಣ

ಈ ಜ್ಞಾನ-ವಿಜ್ಞಾನಶಬ್ದಗಳು ಗೀತೆಯಲ್ಲಿ ಬರುತ್ತವೆ. ಅಲ್ಲಿ ಅವು ಕ್ರಮವಾಗಿ ಶಾಸ್ತ್ರಜ್ಞಾನ, ಅನುಭವಜ್ಞಾನಗಳೆಂದು ಶಾಂಕರಭಾಷ್ಯ. ಶುದ್ಧಜ್ಞಾನ ಮತ್ತು ವಿವಿಕ್ತವಿಷಯಕವಾದ ಜ್ಞಾನಗಳೆಂದು ರಾಮಾನುಜಭಾಷ್ಯ. ಗೀತೆಯಲ್ಲಿಯೇ 'ಜ್ಞಾನವನ್ನು ನೀನೇ ಯೋಗಸಿದ್ಧಿಯಲ್ಲಿ ನಿನ್ನಲ್ಲಿ ಅನುಭವದಿಂದ ತಿಳಿಯುತ್ತೀಯೆ'– **ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿನ್ದತಿ ।** ಎಂದು ಸಾರಿದೆ. ವಿಜ್ಞಾನವೆಂದರೆ ಬುದ್ಧಿ–ಎಂದು ಶಾಂಕರಭಾಷ್ಯದಲ್ಲೂ 'ಜೀವ'–ಎಂದು ರಂಗರಾಮಾನುಜ ಭಾಷ್ಯದಲ್ಲೂ ತೈತ್ತಿರೀಯೋಪನಿಷತ್ತಿನ ಭಾಷ್ಯದಲ್ಲೂ ಹೇಳಿದೆ. ಹೀಗೆ ಜ್ಞಾನ-ವಿಜ್ಞಾನಶಬ್ದಗಳಿಗೆ ಪ್ರಕರಣಕ್ಕೆ ತಕ್ಕಂತೆ ಬೇರೆ ಬೇರೆ ಅರ್ಥಗಳನ್ನು ಮಾಡಲಾಗಿದೆ.

---

* ಬ್ರಹ್ಮಲೋಕವನ್ನು ಶಾಶ್ವತಬ್ರಹ್ಮಲೋಕ–ಎಂದು ಕೆಲವು ಕಡೆ ಕರೆದಿರುತ್ತಾರೆ. ಆದರೆ ಜ್ಞಾನವನ್ನು ಪೂರ್ಣವಾಗಿ ಪಡೆಯದೆ ಬ್ರಹ್ಮಲೋಕವನ್ನು ಪುಣ್ಯಫಲದಿಂದ ಪಡೆದು ಅಲ್ಲಿಯ ಸುಖದಲ್ಲಿಯೇ ಮಗ್ನನಾಗಿದ್ದರೆ ಆತನಿಗೆ ಪುನರಾವೃತ್ತಿಯುಂಟು. ಆದ್ದರಿಂದ ಆ ಸುಖವನ್ನೇ ಇಲ್ಲಿ ಅಮಂಗಳವೆಂದು ಕರೆದಿದೆ.

ಭಕ್ತಿಯೋಗಃ ಪುರೈವೋಕ್ತಃ ಪ್ರೀಯಮಾಣಾಯ ತೇಽನಘ ।
ಪುನಶ್ಚ ಕಥಯಿಷ್ಯಾಮಿ ಮದ್ಭಕ್ತೇಃ ಕಾರಣಂ ಪರಮ್ ॥೧೯॥

ಅನಘನೇ! ಉದ್ಧವ! ಭಕ್ತಿಯೋಗದ ವಿಷಯವಾಗಿ ಈ ಹಿಂದೆಯೇ ನಿನಗೆ ಹೇಳಿದ್ದೇನೆ. ಅದನ್ನೇ ಪುನಃ ಕೇಳುವುದರಲ್ಲಿಯೇ ಪ್ರೀತಿಯೂ ಆಸಕ್ತಿಯೂ ಇರುವ ನಿನಗೆ ನನ್ನ ಭಕ್ತಿಗೆ ಶ್ರೇಷ್ಠವಾದ ಸಾಧನಗಳು ಯಾವುವೆಂಬುದನ್ನು ಹೇಳುತ್ತೇನೆ.

ಶ್ರದ್ಧಾಮೃತಕಥಾಯಾಂ ಮೇ ಶಶ್ವನ್ಮದನುಕೀರ್ತನಮ್।
ಪರಿನಿಷ್ಠಾ ಚ ಪೂಜಾಯಾಂ ಸ್ತುತಿಭಿಃ ಸ್ತವನಂ ಮಮ ॥೨೦॥

ಆದರಃ ಪರಿಚರ್ಯಾಯಾಂ ಸರ್ವಾಙ್ಗೈರಭಿವನ್ದನಮ್।
ಮದ್ಭಕ್ತಪೂಜಾಭ್ಯಧಿಕಾ ಸರ್ವಭೂತೇಷು ಮನ್ಮತಿಃ ॥೨೧॥

ಮದರ್ಥೇಷ್ವಙ್ಗಚೇಷ್ಟಾ ಚ ವಚಸಾ ಮದ್ಗುಣೇರಣಮ್।
ಮಯ್ಯರ್ಪಣಂ ಚ ಮನಸಃ ಸರ್ವಕಾಮವಿವರ್ಜನಮ್ ॥೨೨॥

ಗಳಿಂದ ಕರ್ಮಫಲಗಳನ್ನು ಗಮನಿಸಿ ಅವುಗಳಲ್ಲಿ ವಿರಕ್ತಿಹೊಂದುತ್ತಾನೆ. ಇದೇ ವೈರಾಗ್ಯವು. ೧) ಶ್ರುತಿಯಿಂದ ಸಿದ್ಧವಾಗುವ ಸ್ವರ್ಗಾದಿ ಫಲಗಳು. ೨) ಪ್ರತ್ಯಕ್ಷ ದಿಂದ ಸಿದ್ಧವಾಗುವ ಕೃಷಿಯೇ ಮುಂತಾದ ಕರ್ಮಗಳ ಫಲವಾದ ಅನ್ನಾದಿಗಳು. ೩)ಶ್ರುತಿಮೂಲವಾದ ಸ್ಮೃತಿ-ಪುರಾಣ-ಇತಿಹಾಸಾದಿ ಮಹಾಜನರ ವಚನಪ್ರಸಿದ್ಧಿ ಯಿಂದ ತಿಳಿದುಬರುವ ಸ್ಮಾರ್ತ, ಪೌರಾಣಿಕಾದಿ ಕರ್ಮಗಳ ಫಲಗಳು. ೪) ಅನು ಮಾನಸಿದ್ಧವಾದ ಆರೋಗ್ಯವೇ ಮುಂತಾದ ಫಲಗಳು ಅಥವಾ ಕೃಷ್ಯಾದಿ ಕರ್ಮ ಫಲಗಳು ಕ್ಷಯಹೊಂದುವಂತೆ ಯಜ್ಞಾದಿಗಳಿಂದ ಸಿದ್ಧಿಸುವ ಸಾಂಸಾರಿಕವಾದ ಪುಣ್ಯ ಫಲವು ಕ್ಷಯಹೊಂದುತ್ತದೆ–ಎಂಬ ಶ್ರುತಿಸಿದ್ಧವಾದ ಅನುಮಾನದಿಂದ ಸಿದ್ಧವಾದ ಫಲಗಳು–ಇವೆಲ್ಲವನ್ನೂ ಗಮನಿಸಿದಾಗ ಇವುಗಳಲ್ಲಿ ಜ್ಞಾನಿಯು ವೈರಾಗ್ಯವನ್ನು ತಾಳುತ್ತಾನೆ. **'ಯತ್ಕಿಂಚ ಜಗತ್ಯಾಂ ಜಗತ್'** ಇತ್ಯಾದಿ ಶ್ರುತಿಗಳ ಪ್ರಮಾಣದಂತೆ ಈ ಜಗತ್ತು ಅನಿತ್ಯ, ಪರಿಣಾಮ ಹೊಂದುವುದು. ೫) ಈ ಜಗತ್ತು ಪರಿಣಾಮಹೊಂದುವುದು ಎಂಬುದು ನಮ್ಮ ಪ್ರತ್ಯಕ್ಷ ಗೋಚರವಾಗುತ್ತದೆ. ಇದು ಅನಿತ್ಯ, ನಶ್ವರ–ಈ ಪ್ರಕೃತಿಯನ್ನು ಆಶ್ರಯಿಸಿರುವ ಕೃಷಿಯೇ ಮುಂತಾದ ಕರ್ಮ ಫಲಗಳು ಅನಿತ್ಯವಾಗಿರುವಂತೆಯೇ ಯಜ್ಞಾದಿ ಕರ್ಮಫಲಗಳೂ ಅನಿತ್ಯ, ನಶ್ವರ–ಎಂದು ಭಾವಿಸಿ ಜ್ಞಾನಿಯು ಈ ಜಗತ್ತಿನಲ್ಲೂ ಮತ್ತು ಕರ್ಮಫಲಗಳಲ್ಲಿಯೂ ವೈರಾಗ್ಯವನ್ನು ತಾಳುತ್ತಾನೆ.
(ವೀರರಾಘವೀಯ)

ಮದರ್ಥೇಽರ್ಥಪರಿತ್ಯಾಗೋ ಭೋಗಸ್ಯ ಚ ಸುಖಸ್ಯ ಚ।
ಇಷ್ಟಂ ದತ್ತಂ ಹುತಂ ಜಪ್ತಂ ಮದರ್ಥಂ ಯದ್ವ್ರತಂ ತಪಃ ॥೨೩॥

ಏವಂ ಧರ್ಮೈರ್ಮನುಷ್ಯಾಣಾಮುದ್ಧವಾತ್ಮನಿವೇದಿನಾಮ್।
ಮಯಿ ಸಞ್ಜಾಯತೇ ಭಕ್ತಿಃ ಕೋಽನ್ಯೋಽರ್ಥೋಽಸ್ಯಾವಶಿಷ್ಯತೇ ॥

ಪ್ರಿಯಸಖನೇ! ನನ್ನಲ್ಲಿ ಅನನ್ಯವಾದ ಭಕ್ತಿಭಾವವು ಹುಟ್ಟ ಬೇಕಾದರೆ ಸಾಧಕನು ನನ್ನ ಅಮೃತಮಯವಾದ ಕಥೆಗಳನ್ನು ಶ್ರದ್ಧೆ ಯಿಂದ ಕೇಳಬೇಕು. ನಿರಂತರವಾಗಿ ನನ್ನ ಪೂಜೆಯನ್ನೂ ಲೀಲಾಪ್ರಸಂಗ ಗಳನ್ನೂ ಸಂಕೀರ್ತನಮಾಡುತ್ತಿರಬೇಕು. ನನ್ನ ಪೂಜೆಯನ್ನೂ ಅತ್ಯಂತ ನಿಷ್ಠೆಯಿಂದ ಮಾಡಬೇಕು. ಸ್ತೋತ್ರಗಳ ಮೂಲಕವಾಗಿ ನನ್ನನ್ನು ಸ್ತುತಿಸಬೇಕು. ನನ್ನ ಸೇವೆಯನ್ನೂ ಪೂಜೆಯನ್ನೂ ಆದರಪೂರ್ವಕವಾಗಿ ಮಾಡಬೇಕು. ನನ್ನ ಪೂಜೆಗಿಂತಲೂ ವಿಶೇಷವಾಗಿ ನನ್ನ ಭಕ್ತರ ಪೂಜೆ ಯನ್ನು ಶ್ರದ್ಧಾಭಕ್ತಿಗಳಿಂದ ಮಾಡಬೇಕು. ಸಮಸ್ತಪ್ರಾಣಿಗಳಲ್ಲಿಯೂ ನಾನೇ ಇರುವೆನೆಂದು ಭಾವಿಸಬೇಕು. ನನ್ನ ಸಲುವಾಗಿ ಶುದ್ಧವಾದ ಅಂಗಚೇಷ್ಟೆಗಳನ್ನು (ನೃತ್ಯಾಭಿನಯಗಳನ್ನು) ಮಾಡಬೇಕು. ವಾಣಿಯ ಮೂಲಕವಾಗಿ ನನ್ನ ಗುಣಗಳನ್ನು ಗಾನಮಾಡುತ್ತಲೇ ಇರಬೇಕು. ಸಾಧಕನು ತನ್ನ ಮನಸ್ಸನ್ನು ಪೂರ್ಣವಾಗಿ ನನಗೇ ಅರ್ಪಿಸಿಬಿಡಬೇಕು. ಹಾಗೆಯೇ ಸಮಸ್ತಕಾಮನೆಗಳನ್ನೂ ಪರಿತ್ಯಜಿಸಬೇಕು. ಯಜ್ಞ-ದಾನ-ಹವನ-ಜಪ-ವ್ರತ-ತಪಸ್ಸು –ಇವೆಲ್ಲವನ್ನೂ ನನ್ನ ಪ್ರೀತಿಗಾಗಿಯೇ ಮಾಡ ಬೇಕು. ಎಲ್ಲವನ್ನೂ ನನಗೇ ಸಮರ್ಪಿಸಬೇಕು. ಉದ್ಧವ! ಯಾವ ಸಾಧಕನು ಈ ಧರ್ಮಗಳನ್ನು ಪರಿಪಾಲಿಸುವನೋ, ನನ್ನ ಪಾದಾರವಿಂದಗಳಲ್ಲಿ ಆತ್ಮನಿವೇದನಮಾಡಿಕೊಳ್ಳುವನೋ ಅಂತಹವನ ಹೃದಯದಲ್ಲಿ ನನ್ನ ಪ್ರೇಮಮಯವಾದ ಭಕ್ತಿಯ ಉದಯವಾಗುತ್ತದೆ. ಅಂತಹ ನನ್ನ ಭಕ್ತನಿಗೆ ಸಾಧಿಸಬೇಕಾದುದು ಯಾವುದು ತಾನೇ ಉಳಿದಿರುತ್ತದೆ?

ಯದಾಽತ್ಮನ್ಯರ್ಪಿತಂ ಚಿತ್ತಂ ಶಾನ್ತಂ ಸತ್ತ್ವೋಪಬೃಂಹಿತಮ್।
ಧರ್ಮಂ ಜ್ಞಾನಂ ಸವೈರಾಗ್ಯಮೈಶ್ವರ್ಯಂ ಚಾಭಿಪದ್ಯತೇ ॥೨೫॥

ಯಾವಾಗ ಸಾಧಕನು ಶಾಂತವೂ ಸತ್ತ್ವಗುಣದಿಂದ ಯುಕ್ತವೂ ಆದ ಚಿತ್ತವನ್ನು ನನಗೆ ಅರ್ಪಿಸಿಬಿಡುವನೋ ಆಗ ಅವನು ನನ್ನ ಅನುಗ್ರಹ ದಿಂದ ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ–ಇವೆಲ್ಲವನ್ನೂ ಪಡೆದು ಕೊಳ್ಳುತ್ತಾನೆ.

ಯದರ್ಪಿತಂ ತದ್ವಿಕಲ್ಪೇ ಇನ್ದ್ರಿಯೈಃ ಪರಿಧಾವತಿ ।
ರಜಸ್ವಲಂ ಚಾಸನ್ನಿಷ್ಠಂ ಚಿತ್ತಂ ವಿದ್ಧಿ ವಿಪರ್ಯಯಮ್ ॥೨೬॥

ಸಂಸಾರವು ವಿಧ-ವಿಧವಾದ ಕಲ್ಪನೆಗಳಿಂದ ತುಂಬಿಹೋಗಿದೆ. ಮನಸ್ಸನ್ನು ನನ್ನಲ್ಲಿ ಇಡುವುದಕ್ಕೆ ಬದಲಾಗಿ ಸಂಸಾರದಲ್ಲಿಯೇ ಲೀನ ಗೊಳಿಸಿದರೆ ಆ ಮನಸ್ಸು ಇಂದ್ರಿಯಗಳ ಬೆನ್ನಟ್ಟಿ ಓಡುತ್ತದೆ. ಅದರಲ್ಲಿ ರಜೋಗುಣದ ವೃದ್ಧಿಯಾಗುತ್ತದೆ. ಅಸದ್ವಸ್ತುಗಳಲ್ಲಿಯೇ ಅದು ನಿಷ್ಠವಾಗಿರುತ್ತದೆ. ಧರ್ಮ-ಜ್ಞಾನ-ವೈರಾಗ್ಯಗಳೆಲ್ಲವೂ ಲೀನವಾಗಿ ಹೋಗು ತ್ತವೆ. ಇವುಗಳಿಗೆ ಬದಲಾಗಿ ಅಧರ್ಮ-ಅಜ್ಞಾನ-ಶೋಕ-ಮೋಹಗಳು ಮನಸ್ಸಿನಲ್ಲಿ ತುಂಬಿಕೊಳ್ಳುತ್ತವೆ.

ಧರ್ಮೋ ಮದ್ಭಕ್ತಿಕೃತ್ ಪ್ರೋಕ್ತೋ ಜ್ಞಾನಂ ಚೈಕಾತ್ಮ್ಯದರ್ಶನಮ್।
ಗುಣೇಷ್ವಸಙ್ಗೋ ವೈರಾಗ್ಯಮೈಶ್ವರ್ಯಂ ಚಾಣಿಮಾದಯಃ ॥೨೭॥

ಉದ್ಧವ! ನನ್ನಲ್ಲಿ ಭಕ್ತಿಯುಂಟಾಗುವಂತೆ ಮಾಡುವುದೇ ಧರ್ಮ. ಸಕಲಪ್ರಾಣಿಗಳಲ್ಲಿಯೂ ಏಕಾತ್ಮಭಾವವೇ ಜ್ಞಾನ. ವಿಷಯಗಳಲ್ಲಿ ಮನಸ್ಸು ಸೇರದಿರುವಿಕೆಯೇ ವೈರಾಗ್ಯ. ಅಣಿಮಾದಿ ಅಷ್ಟಸಿದ್ಧಿಗಳೇ ಐಶ್ವರ್ಯ."

ಉದ್ಧವನು ಹೇಳುತ್ತಾನೆ :

ಯಮಃ ಕತಿವಿಧಃ ಪ್ರೋಕ್ತೋ ನಿಯಮೋ ವಾರಿಕರ್ಶನ।
ಕಃ ಶಮಃ ಕೋ ದಮಃ ಕೃಷ್ಣ ಕಾ ತಿತಿಕ್ಷಾ ಧೃತಿಃ ಪ್ರಭೋ ॥೨೮॥

"ರಿಪುಮರ್ದನನೇ! ಭಗವಂತ! ಯಮ-ನಿಯಮಗಳಲ್ಲಿ ಎಷ್ಟು ವಿಧಗಳಿವೆ? ಶಮವೆಂದರೇನು? ದಮವೆಂದರೇನು? ಅಂತೆಯೇ ತಿತಿಕ್ಷೆ ಎಂದರೇನು! ಧೃತಿ–ಎಂದರೇನು?

ಕಿಂ ದಾನಂ ಕಿಂ ತಪಃ ಶೌರ್ಯಂ ಕಿಂ ಸತ್ಯಮೃತಮುಚ್ಯತೇ।
ಕಸ್ತ್ಯಾಗಃ ಕಿಂ ಧನಂ ಚೇಷ್ಟಂ ಕೋ ಯಜ್ಞಃ ಕಾ ಚ ದಕ್ಷಿಣಾ ॥೨೯॥

ದಾನ-ತಪಸ್ಸು-ಶೌರ್ಯ-ಸತ್ಯ-ಋತ ಇವುಗಳ ಸ್ವರೂಪವೇನು? ತ್ಯಾಗವೆಂದರೇನು? ಇಷ್ಟವಾದ ಧನವೆಂದರೆ ಯಾವುದು? ಯಜ್ಞವೆಂದರೇನು? ದಕ್ಷಿಣೆಯ ಸ್ವರೂಪವೇನು?

ಪುಂಸಃ ಕಿಂಸ್ವಿದ್ಬಲಂ ಶ್ರೀಮನ್ಭಗೋ ಲಾಭಶ್ಚ ಕೇಶವ।
ಕಾ ವಿದ್ಯಾ ಹ್ರೀಃ ಪರಾ ಕಾ ಶ್ರೀಃ ಕಿಂ ಸುಖಂ ದುಃಖಮೇವ ಚ ॥೩೦॥

ಶ್ರೀಮಂತನಾದ ಕೇಶವನೇ! ಪುರುಷನಿಗೆ ನಿಶ್ಚಯವಾದ ಬಲವೆಂದರೆ ಯಾವುದು? ಐಶ್ವರ್ಯವೆಂದು ಯಾವುದಕ್ಕೆ ಹೇಳುತ್ತಾರೆ? ಲಾಭವೆಂದರೇನು? ವಿದ್ಯೆ–ಎಂದರೆ ಯಾವುದು? ಲಜ್ಜೆ-ಶ್ರೀ-ಸುಖ-ದುಃಖಗಳ ಸ್ವರೂಪವೇನು?

ಕಃ ಪಣ್ಡಿತಃ ಕಶ್ಚ ಮೂರ್ಖಃ ಕಃ ಪನ್ಥಾ ಉತ್ಪಥಶ್ಚ ಕಃ।
ಕಃ ಸ್ವರ್ಗೋ ನರಕಃ ಕಃ ಸ್ವಿತ್ಕೋ ಬನ್ಧುರುತ ಕಿಂ ಗೃಹಮ್ ॥೩೧॥

ಪಂಡಿತ ಮತ್ತು ಮೂರ್ಖರ ಲಕ್ಷಣಗಳೇನು? ಸನ್ಮಾರ್ಗ ಮತ್ತು ದುರ್ಮಾರ್ಗಗಳ ಲಕ್ಷಣಗಳೇನು? ಸ್ವರ್ಗವೆಂದರೇನು? ನರಕವೆಂದರೇನು? ಬಂಧುವು ಯಾರು? ಮನೆ–ಎಂಬುದೇನು?

ಕ ಆಢ್ಯಃ ಕೋ ದರಿದ್ರೋ ವಾ ಕೃಪಣಃ ಕಃ ಕ ಈಶ್ವರಃ।
ಏತಾನ್ ಪ್ರಶ್ನಾನ್ ಮಮ ಬ್ರೂಹಿ ವಿಪರೀತಾಂಶ್ಚ ಸತ್ಪತೇ ॥೩೨॥

ಸತ್ಪುರುಷರ ಪಾಲಕನೇ! ಶ್ರೀಮಂತನೆಂಬುವವನು ಯಾರು? ಅಂತೆಯೇ ದರಿದ್ರನಾರು? ಲೋಭಿಯು ಯಾರು? ಸ್ವಾಮಿಯು ಯಾರು? ನನ್ನ ಈ ಎಲ್ಲ ಪ್ರಶ್ನೆಗಳಿಗೂ ದಯಮಾಡಿ ಉತ್ತರಿಸುವ ಕೃಪೆಮಾಡು. ಇದಕ್ಕೆ ವಿರುದ್ಧವಾದ, ಅಶಮ–ಅದಮ ಇವೇ ಮುಂತಾದುವುಗಳ ಸ್ವರೂಪಗಳನ್ನು ವಿವರಿಸಿ ಹೇಳು.”

ಶ್ರೀಭಗವಂತನು ಹೇಳುತ್ತಾನೆ :

ಅಹಿಂಸಾ ಸತ್ಯಮಸ್ತೇಯಮಸಙ್ಗೋ ಹ್ರೀರಸಞ್ಚಯಃ।
ಆಸ್ತಿಕ್ಯಂ ಬ್ರಹ್ಮಚರ್ಯಂ ಚ ಮೌನಂ ಸ್ಥೈರ್ಯಂ
ಕ್ಷಮಾಭಯಮ್ ॥೩೩॥

ಶೌಚಂ ಜಪಸ್ತಪೋ ಹೋಮಃ ಶ್ರದ್ಧಾತಿಥ್ಯಂ ಮದರ್ಚನಮ್ ।
ತೀರ್ಥಾಟನಂ ಪರಾರ್ಥೇಹಾ ತುಷ್ಟಿರಾಚಾರ್ಯಸೇವನಮ್ ॥೩೪॥

ಏತೇ ಯಮಾಃ ಸನಿಯಮಾ ಉಭಯೋರ್ದ್ವಾದಶ ಸ್ಮೃತಾಃ।
ಪುಂಸಾಮುಪಾಸಿತಾಸ್ತಾತ ಯಥಾಕಾಮಂ ದುಹನ್ತಿ ಹಿ ॥೩೫॥

“ಅಹಿಂಸೆ, ಸತ್ಯ, ಅಸ್ತೇಯ, ಅಸಂಗ, ಲಜ್ಜೆ, ಅಸಂಚಯ, ಆಸ್ತಿಕ್ಯ, ಬ್ರಹ್ಮಚರ್ಯೆ, ಮೌನ, ಸ್ಥೈರ್ಯ, ಕ್ಷಮೆ, ಅಭಯ–ಈ ಹನ್ನೆರಡು ಯಮಗಳು. ಅಂತಃಶೌಚ, ಬಹಿಃಶೌಚ, ಜಪ, ತಪಸ್ಸು, ಹೋಮ, ಶ್ರದ್ಧೆ, ಆತಿಥ್ಯ, ನನ್ನ ಅರ್ಚನೆ, ತೀರ್ಥಯಾತ್ರೆ, ಪರೋಪಕಾರ ಮಾಡುವ ಅಭಿಲಾಷೆ, ತೃಪ್ತಿ, ಗುರುಶುಶ್ರೂಷೆ ಈ ಹನ್ನೆರಡೂ ನಿಯಮ ಗಳು. ಪ್ರವೃತ್ತಿಮಾರ್ಗದವರಿಗೂ ನಿವೃತ್ತಿಮಾರ್ಗದವರಿಗೂ ಈ ಯಮ-ನಿಯಮಗಳು ಸಮಾನವಾಗಿವೆ. ಎರಡು ಮಾರ್ಗದವರಿಗೂ ಯಮ-ನಿಯಮಗಳು ಮನಸೋದ್ದಿಷ್ಟವಾದ ಫಲಗಳನ್ನು ನೀಡುತ್ತವೆ.

ಶಮೋ ಮನ್ನಿಷ್ಠತಾ ಬುದ್ಧೇರ್ದಮ ಇನ್ದ್ರಿಯಸಂಯಮಃ ।
ತಿತಿಕ್ಷಾ ದುಃಖಸಮ್ಮರ್ಷೋ ಜಿಹ್ವೋಪಸ್ಥಜಯೋ ಧೃತಿಃ ॥೩೬॥

ಮನುಷ್ಯನ ಬುದ್ಧಿಯು ನನ್ನಲ್ಲಿ ನಿಷ್ಠೆಯನ್ನು ಹೊಂದಿರುವುದೇ ಶಮ. ಕೇವಲ ಇಂದ್ರಿಯವ್ಯಾಪಾರಗಳ ಶಮನವಲ್ಲ. ಇಂದ್ರಿಯನಿಗ್ರಹವೇ ದಮ. ಕೇವಲ ಕಳ್ಳಕಾಕರನ್ನು ದಮನಮಾಡುವುದೇ ಅಲ್ಲ. ಪ್ರಾಪ್ತ ವಾದ ದುಃಖವನ್ನು ಸಹಿಸಿಕೊಳ್ಳುವುದೇ ತಿತಿಕ್ಷೆ ಅಥವಾ ಕ್ಷಮೆ. ಭಾರ ವನ್ನು ಹೊರುವುದು ಕ್ಷಮೆಯಲ್ಲ. ನಾಲಿಗೆ ಮತ್ತು ಗುಹ್ಯೇಂದ್ರಿಯಗಳ ವೇಗವನ್ನು ತಡೆದುಕೊಳ್ಳುವುದೇ ಧೈರ್ಯ. ಕೇವಲ ವಿಪತ್ತುಗಳಿಗೆ ಹೆದರ ದಿರುವುದೇ ಧೈರ್ಯವಲ್ಲ.

ದಣ್ಡನ್ಯಾಸಃ ಪರಂ ದಾನಂ ಕಾಮತ್ಯಾಗಸ್ತಪಃ ಸ್ಮೃತಮ್।
ಸ್ವಭಾವವಿಜಯಃ ಶೌರ್ಯಂ ಸತ್ಯಂ ಚ ಸಮದರ್ಶನಮ್ ॥೩೭॥

ಪ್ರಾಣಿಗಳನ್ನು ದಂಡಿಸದಿರುವುದೇ ಉತ್ತಮವಾದ ದಾನ. ಕೇವಲ ಧನಾದಿಗಳನ್ನು ಕೊಡುವುದೇ ಇಲ್ಲ. ಕಾಮತೃಷ್ಣೆಯನ್ನು ತ್ಯಾಗ ಮಾಡುವುದೇ ತಪಸ್ಸು. ಕೃಚ್ಛ್ರ ಚಾಂದ್ರಾಯಣಾದಿಗಳನ್ನು ಮಾಡುವುದೇ ಅಲ್ಲ. ಹುಟ್ಟಿದಾಗಿನಿಂದ ಬಂದಿರುವ ಸ್ವಭಾವವನ್ನು ನಿಯಂತ್ರಿಸುವುದೇ ಶೌರ್ಯ. ಕೇವಲ ಹೊರಗಿನ ಪರಾಕ್ರಮವೇ ಶೌರ್ಯವಲ್ಲ. ಸಮ ಸ್ವರೂಪನಾದ ಪರಮಾತ್ಮನ ಸಾಕ್ಷಾತ್ಕಾರವೇ ಸತ್ಯ. ಇದ್ದುದನ್ನು ಇದ್ದಂತೆ ಹೇಳಿಬಿಡುವುದು ಮಾತ್ರವೇ ಸತ್ಯವಲ್ಲ.

ಋತಂ ಚ ಸೂನೃತಾ ವಾಣೀ ಕವಿಭಿಃ ಪರಿಕೀರ್ತಿತಾ।
ಕರ್ಮಸ್ವಸಙ್ಗಮಃ ಶೌಚಂ ತ್ಯಾಗಃ ಸಂನ್ಯಾಸ ಉಚ್ಯತೇ ॥೩೮॥

ಸತ್ಯವೂ, ಸುಮಧುರವೂ ಆದ ಮಾತನ್ನು ವಿದ್ವಾಂಸರು ಋತ ವೆಂದು ಕರೆಯುತ್ತಾರೆ. ಕರ್ಮಫಲಗಳಲ್ಲಿ ಆಸಕ್ತಿಯಿಲ್ಲದಿರುವುದೇ ಶೌಚ. ಕೇವಲ ಬಾಹ್ಯಶುದ್ಧಿ ಮಾತ್ರವೇ ಶೌಚವೆನಿಸುವುದಿಲ್ಲ. ಕರ್ಮಫಲಗಳ ತ್ಯಾಗವೇ ಸಂನ್ಯಾಸ.

ಧರ್ಮ ಇಷ್ಟಂ ಧನಂ ನೃಣಾಂ ಯಜ್ಞೋಽಹಂ ಭಗವತ್ತಮಃ ।
ದಕ್ಷಿಣಾ ಜ್ಞಾನಸನ್ದೇಶಃ ಪ್ರಾಣಾಯಾಮಃ ಪರಂ ಬಲಮ್ ॥೩೯॥

ಧರ್ಮವೇ ಮನುಷ್ಯನಿಗೆ ಅಭೀಷ್ಟವಾದ ಧನ. ಸರ್ವೇಶ್ವರೇಶ್ವರನಾದ ನಾನೇ ಯಜ್ಞನಾಗಿದ್ದೇನೆ. ಜ್ಞಾನೋಪದೇಶವೇ ಯಜ್ಞದಕ್ಷಿಣೆಯಾಗಿದೆ. ಪ್ರಾಣಾಯಾಮವೇ ಶ್ರೇಷ್ಠವಾದ ಬಲವಾಗಿದೆ.

ಭಗೋ ಮ ಐಶ್ವರೋ ಭಾವೋ ಲಾಭೋ ಮದ್ಭಕ್ತಿರುತ್ತಮಃ।
ವಿದ್ಯಾಽತ್ಮನಿ ಭಿದಾಬಾಧೋ ಜುಗುಪ್ಸಾ ಹ್ರೀರಕರ್ಮಸು ॥೪೦॥

ನನ್ನ ಅಣಿಮಾ-ಮಹಿಮಾ–ಇವೇ ಮುಂತಾದ ಐಶ್ವರ್ಯ ಸಂಪತ್ತಿಯೇ ಭಾಗ್ಯವು. ಧನ-ಕನಕಾದಿಗಳ ಸಂಗ್ರಹವು ಐಶ್ವರ್ಯವೆನಿಸು ವುದಿಲ್ಲ. ನನ್ನಲ್ಲಿ ಅನನ್ಯವಾದ ಭಕ್ತಿಭಾವವಿರುವುದೇ ಲಾಭವು. ಗೃಹ-

ಕ್ಷೇತ್ರಾದಿಗಳನ್ನು ಪಡೆದುಕೊಳ್ಳುವುದು ಲಾಭವೆನಿಸುವುದಿಲ್ಲ. ಆತ್ಮಭೇದವನ್ನು ಕಾಣದಿರುವುದೇ ವಿದ್ಯೆಯು. ಕೇವಲ ತಿಳಿವಳಿಕೆಯು ವಿದ್ಯೆಯಲ್ಲ. ನಿಂದ್ಯವಾದ ಕರ್ಮಗಳನ್ನು ಮಾಡುವುದರಲ್ಲಿ ಜುಗುಪ್ಸೆಯನ್ನು ಹೊಂದುವುದೇ ಲಜ್ಜೆಯು. ಕೇವಲ ನಾಚಿಕೆಯು ಲಜ್ಜೆಯೆನಿಸಿಕೊಳ್ಳುವುದಿಲ್ಲ.*

ಶ್ರೀರ್ಗುಣಾ ನೈರಪೇಕ್ಷ್ಯಾದ್ಯಾಃ ಸುಖಂ ದುಃಖಸುಖಾತ್ಯಯಃ।
ದುಃಖಂ ಕಾಮಸುಖಾಪೇಕ್ಷಾ ಪಣ್ಡಿತೋ ಬನ್ಧಮೋಕ್ಷವಿತ್ ॥೪೧॥

ವೈರಾಗ್ಯವೇ ಮೊದಲಾದ ಗುಣಗಳೇ ಕಾಂತಿದಾಯಕಗಳಾಗಿರುತ್ತವೆ. ಕನಕಾಂಗದ-ಕೇಯೂರಾದಿಗಳಲ್ಲ. ಸುಖ-ದುಃಖಗಳೆರಡನ್ನೂ ಮನಸ್ಸಿಗೆ ತಂದುಕೊಳ್ಳದಿರುವುದೇ ಸುಖ. ಭೋಗೋಪಭೋಗಗಳು ಸುಖವೆನಿಸುವುದಿಲ್ಲ. ವಿಷಯೋಪಭೋಗಗಳನ್ನು ಬಯಸುವುದೇ ದುಃಖ. ರೋಗ-ರುಜಿನಾದಿಗಳಲ್ಲ. ಬಂಧ ಮತ್ತು ಮೋಕ್ಷಗಳ ತತ್ತ್ವವನ್ನರಿತವನೇ ಪಂಡಿತನು. ಕೇವಲ ಶಾಸ್ತ್ರಾಭ್ಯಾಸಮಾಡಿದವನು ಪಂಡಿತನೆನಿಸಿಕೊಳ್ಳುವುದಿಲ್ಲ.

ಮೂರ್ಖೋ ದೇಹಾದ್ಯಹಮ್ಬುದ್ಧಿಃ ಪನ್ಥಾ ಮನ್ನಿಗಮಃ ಸ್ಮೃತಃ।
ಉತ್ಪಥಶ್ಚಿತ್ತವಿಕ್ಷೇಪ ಸರ್ಗಃ ಸತ್ತ್ವಗುಣೋದಯಃ ॥೪೨॥

ದೇಹ-ಗೇಹಾದಿಗಳಲ್ಲಿ ನಾನು-ನನ್ನದು ಎಂಬ ಭಾವನೆಯನ್ನು ಇಟ್ಟುಕೊಂಡಿರುವವನೇ ಮೂರ್ಖನು. ದಡ್ಡನಾದವನು ಮಾತ್ರವೇ ಮೂರ್ಖನಲ್ಲ. ನನ್ನನ್ನು ಹೊಂದಿಸುವ ಹಾದಿಯೇ ಮಾರ್ಗ. ಬೀದಿಯು ಮಾತ್ರವೇ ಮಾರ್ಗವೆನಿಸಿಕೊಳ್ಳುವುದಿಲ್ಲ. ಮನಸ್ಸಿಗೆ ಕ್ಷೋಭೆಯನ್ನುಂಟುಮಾಡುವುದೇ ದುರ್ಮಾರ್ಗ. ಕಳ್ಳಕಾಕರಿಂದಲೂ ದುಷ್ಟಮೃಗಗಳಿಂದಲೂ ವ್ಯಾಪ್ತವಾದ ಮಾರ್ಗವು ಮಾತ್ರವೇ ದುರ್ಮಾರ್ಗವೆನಿಸಿಕೊಳ್ಳುವುದಿಲ್ಲ. ಸತ್ತ್ವಗುಣದ ಉದಯವೇ ಸ್ವರ್ಗ. ಇಂದ್ರನ ಲೋಕವು ಮಾತ್ರವೇ ಸ್ವರ್ಗವಲ್ಲ.

---

* ಆತ್ಮನಿ ಭಿದಾಭಾವಃ: ಜೀವಾತ್ಮ ಪರಮಾತ್ಮನಲ್ಲಿ ಭೇದವನ್ನು ವರ್ಣಿಸದಿರುವಿಕೆ. (ಅದ್ವೈತಭಾಷ್ಯ)

ಎಲ್ಲ ಆತ್ಮಗಳೂ ಸಮ, ಜ್ಞಾನಾಕಾರ–ಎಂದು ಅಭೇದವನ್ನು ಭಾವಿಸುವುದು. (ವಿಶಿಷ್ಟಾದ್ವೈತಭಾಷ್ಯ)

ನರಕಸ್ತಮ ಉನ್ನಾಹೋ ಬನ್ಧುರ್ಗುರುರಹಂ ಸಖೇ।
ಗೃಹಂ ಶರೀರಂ ಮಾನುಷ್ಯಂ ಗುಣಾಢ್ಯೋ ಹ್ಯಾಢ್ಯ ಉಚ್ಯತೇ ॥೪೩॥

ತಮೋಗುಣದ ಆಧಿಕ್ಯವೇ ನರಕ. ತಾಮಿಸ್ರಾದಿಗಳು ಮಾತ್ರವೇ ನರಕಗಳಲ್ಲ. ತತ್ತ್ವಾರ್ಥಗಳನ್ನು ಉಪದೇಶಿಸುವವನೇ ಬಂಧು. ಪುತ್ರ-ಮಿತ್ರ-ಕಳತ್ರಾದಿಗಳಲ್ಲ. ತತ್ತ್ವೋಪದೇಶಕನಾದ ಅಂತಹ ಗುರುವು ನಾನೇ ಆಗಿದ್ದೇನೆ. ಮನುಷ್ಯನ ಶರೀರವೇ ಮನೆಯಾಗಿದೆ. ಉಪ್ಪರಿಗೆಯ ಮನೆಯು ಮಾತ್ರವೇ ಗೃಹವಲ್ಲ ಸುಗುಣವಿರುವವನೇ ಧನಿಕ. ಕೇವಲ ಹಣವನ್ನು ಕೂಡಿಟ್ಟವನು ಆಢ್ಯನೆನಿಸಿಕೊಳ್ಳುವುದಿಲ್ಲ.

ದರಿದ್ರೋ ಯಸ್ತ್ವಸನ್ತುಷ್ಟಃ ಕೃಪಣೋ ಯೋಽಜಿತೇನ್ದ್ರಿಯಃ ।
ಗುಣೇಷ್ವಸಕ್ತಧೀರೀಶೋ ಗುಣಸಙ್ಗೋ ವಿಪರ್ಯಯಃ ॥೪೪॥

ಎಷ್ಟು ಬಂದರೂ ಸಂತುಷ್ಟಿಯಿಲ್ಲದವನೇ ಬಡವನು. ಕೇವಲ ಹಣವಿಲ್ಲದವನು ಬಡವನಲ್ಲ. ಇಂದ್ರಿಯನಿಗ್ರಹವಿಲ್ಲದವನು ಕೃಪಣನು. ಹಣವನ್ನು ವೆಚ್ಚಮಾಡದೇ ಇರುವವನು ಮಾತ್ರವೇ ಕೃಪಣನಲ್ಲ. ಇಂದ್ರಿಯ ವಿಷಯಗಳಲ್ಲಿ ಯಾವನ ಬುದ್ಧಿಯು ಅಂಟಿಕೊಂಡಿಲ್ಲವೋ ಅವನೇ ಈಶನು. ವಿಷಯಸುಖಗಳಲ್ಲಿ ಆಸಕ್ತವಾದ ಬುದ್ಧಿಯಿರುವವನು ರಾಜನೇ ಆಗಿದ್ದರೂ ಈಶನಲ್ಲ.

ಉದ್ಧವ! ನಿನ್ನ ಎಲ್ಲ ಪ್ರಶ್ನೆಗಳಿಗೂ ಸಮಂಜಸವಾಗಿಯೇ ಉತ್ತರ ವನ್ನೂ ನೀಡಿದ್ದೇನೆ. ಗುಣ-ದೋಷಗಳ ಲಕ್ಷಣಗಳನ್ನು ಇನ್ನೂ ಹೆಚ್ಚಾಗಿ ವರ್ಣಿಸಿ ಹೇಳುವುದರಿಂದ ಪ್ರಯೋಜನವೇನಿದೆ? ಒಂದೇ ಮಾತಿನಲ್ಲಿ ಹೇಳುವುದಾದರೆ :

ಗುಣದೋಷದೃಶಿರ್ದೋಷೋ ಗುಣಸ್ತೂಭಯವರ್ಜಿತಃ ॥೪೫॥

ಒಂದು ವಸ್ತುವಿನಲ್ಲಿ ಗುಣ-ದೋಷಗಳನ್ನು ತಿಳಿಯಲು ಪ್ರಯತ್ನಿಸುವುದೇ ಮಹಾದೋಷವು. ಗುಣ-ದೋಷಗಳ ಕಡೆಗೆ ದೃಷ್ಟಿಯನ್ನು ಹಾಯಿಸದೆ ತಾಟಸ್ಥ್ಯಭಾವದಿಂದ ಶಾಂತನಾಗಿರುವುದೇ ಶ್ರೇಷ್ಠವಾದ ಗುಣವು.”

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಏಕಾದಶಸ್ಕಂಧದ ೧೯ನೆಯ ಅಧ್ಯಾಯವು ಮುಗಿಯಿತು.

ಜ್ಞಾನಯೋಗ-ಕರ್ಮಯೋಗ ಮತ್ತು ಭಕ್ತಿಯೋಗಗಳ ವಿವರಣೆ

ಗುಣ-ದೋಷಗಳೆರಡನ್ನೂ ವಿವೇಚಿಸಬಾರದೆಂದು ಹೇಳಿದ ಶ್ರೀಕೃಷ್ಣನ ಮಾತನ್ನು ಕೇಳಿ ಉದ್ಧವನು ಪ್ರಶ್ನಿಸುತ್ತಾನೆ :

ವಿಧಿಶ್ಚ ಪ್ರತಿಷೇಧಶ್ಚ ನಿಗಮೋ ಹೀಶ್ವರಸ್ಯ ತೇ।
ಅವೇಕ್ಷತೇಽರವಿನ್ದಾಕ್ಷ ಗುಣಂ ದೋಷಂ ಚ ಕರ್ಮಣಾಮ್ ॥೧॥

“ಅರವಿಂದಾಕ್ಷನೇ! ನಿನ್ನ ಆಜ್ಞಾರೂಪವಾದ ವೇದಗಳು ವಿಧಿ-ನಿಷೇಧಗಳನ್ನು ಪ್ರತಿಪಾದಿಸಿ ಹೇಳುತ್ತವೆ. ಅವು ಮಾಡಬೇಕಾದ ಸತ್ಕರ್ಮಗಳಿಗೆ ಗುಣರೂಪವಾದ ಪುಣ್ಯಫಲವನ್ನೂ, ಬಿಡಬೇಕಾದ ದುಷ್ಕರ್ಮಗಳಿಗೆ ದೋಷರೂಪವಾದ ಪಾಪಫಲವನ್ನೂ ಪ್ರತಿಪಾದಿಸುತ್ತವೆ.

ವರ್ಣಾಶ್ರಮವಿಕಲ್ಪಂ ಚ ಪ್ರತಿಲೋಮಾನುಲೋಮಜಮ್।
ದ್ರವ್ಯದೇಶವಯಃಕಾಲಾನ್ಸ್ವರ್ಗಂ ನರಕಮೇವ ಚ ॥೨॥

ಗುಣದೋಷಭಿದಾದೃಷ್ಟಿಮನ್ತರೇಣ ವಚಸ್ತವ।
ನಿಃಶ್ರೇಯಸಂ ಕಥಂ ನೃಣಾಂ ನಿಷೇಧವಿಧಿಲಕ್ಷಣಮ್ ॥೩॥

ನಿನ್ನ ಆಜ್ಞಾರೂಪವಾದ ಆ ವೇದವು ವರ್ಣಾಶ್ರಮಭೇದವನ್ನೂ, ಪ್ರತಿಲೋಮ ಮತ್ತು ಅನುಲೋಮರೂಪವಾದ ವರ್ಣಸಂಕರವನ್ನೂ, ಕರ್ಮಗಳಿಗೆ ಉಪಯುಕ್ತವಾದ ಮತ್ತು ಅನುಪಯುಕ್ತವಾದ ದ್ರವ್ಯ-ದೇಶ-ಆಯುಸ್ಸು-ಕಾಲ ಅಂತೆಯೇ ಇವುಗಳ ಫಲಸ್ವರೂಪವಾದ ಸ್ವರ್ಗ-ನರಕ ಇವುಗಳ ವಿಷಯವನ್ನೂ ಬೋಧಿಸುತ್ತದೆ. ಹೀಗಿರುವಾಗ–ಇದು–ಗುಣ–ಇದು ದೋಷ ಎಂದು ವಿವೇಚಿಸುವುದೇ ದೋಷ. ಗುಣ-ದೋಷಗಳನ್ನು ಎಣಿಸದಿರುವುದೇ ಗುಣ–ಎಂದು ನೀನೀಗ ಹೇಳಿದೆಯಲ್ಲವೇ? ಅದು ಹೇಗೆ ಸಮಂಜಸವಾಗುತ್ತದೆ? ಅದು ಗುಣ–ಇದು ದೋಷ ಎಂಬ ವಿವೇಚನೆಯೇ ಇಲ್ಲದಿದ್ದರೆ ವಿಧಿ-ನಿಷೇಧರೂಪವಾದ ನಿನ್ನ ವೇದವಾಣಿಗೆ ಅಸ್ತಿತ್ವವೆಲ್ಲಿಯದು? ವಿಧಿ-ನಿಷೇಧಗಳೇ ಇಲ್ಲದಿದ್ದರೆ ಜನರಿಗೆ ಶ್ರೇಯಸ್ಸಾದರೂ ಹೇಗೆ ಲಭಿಸುತ್ತದೆ?

ಪಿತೃದೇವಮನುಷ್ಯಾಣಾಂ ವೇದಶ್ಚಕ್ಷುಸ್ತವೇಶ್ವರ।
ಶ್ರೇಯಸ್ತ್ವನುಪಲಬ್ಧೇಽರ್ಥೇ ಸಾಧ್ಯಸಾಧನಯೋರಪಿ ॥೪॥

ಪಿತೃಗಳಿಗಾಗಲೀ, ದೇವತೆಗಳಿಗಾಗಲೀ, ಮನುಷ್ಯರಿಗಾಗಲೀ ನಿನ್ನ ವಾಣಿಯಾದ ವೇದವೇ ಮಾರ್ಗದರ್ಶಕವಾಗಿದೆ. ವೇದದ ಮೂಲಕವಾಗಿಯೇ ಸ್ವರ್ಗ-ಮೋಕ್ಷ ಇವೇ ಮೊದಲಾದ ಅದೃಶ್ಯವಸ್ತುಗಳ ತಿಳಿವಳಿಕೆಯುಂಟಾಗುತ್ತದೆ ಮತ್ತು 'ಈ ಕ್ರಿಯೆಗೆ ಇದು ಸಾಧ್ಯವಾಗುವ ಫಲ. ಈ ಫಲಕ್ಕೆ ಈ ಕರ್ಮವು ಸಾಧನವಾಗುತ್ತದೆ'–ಎಂಬುದನ್ನು ತಿಳಿಸಿಕೊಡುತ್ತದೆ.

ಗುಣದೋಷಭಿದಾದೃಷ್ಟಿರ್ನಿಗಮಾತ್ತೇ ನ ಹಿ ಸ್ವತಃ।
ನಿಗಮೇನಾಪವಾದಶ್ಚ ಭಿದಾಯಾ ಇತಿ ಹ ಭ್ರಮಃ ॥೫॥

ಪ್ರಭುವೇ! ಗುಣ-ದೋಷಗಳ ಭೇದದೃಷ್ಟಿಯು ನಿನ್ನದೇ ವಾಣಿಯಾದ ವೇದವಾಕ್ಯಗಳ ಅನುಸಾರವಾಗಿಯೇ ಇದೆ. ಇದು ಯಾರೊಬ್ಬರ ಕಲ್ಪನೆಯೂ ಅಲ್ಲ. ಈಗಲಾದರೋ ನಿನ್ನ ಸಾಕ್ಷಾತ್ತಾದ ವಾಣಿಯೇ ಗುಣ-ದೋಷಗಳ ಭೇದವನ್ನು ನಿಷೇಧಿಸುತ್ತದೆ. ನಿನ್ನ ವಾಣಿಗೆ (ವೇದಕ್ಕೆ) ನಿನ್ನ ವಾಣಿಯಿಂದ (ನಿನ್ನ ಈಗಿನ ಮಾತಿನಿಂದ) ಉಂಟಾಗಿರುವ ವಿರೋಧವನ್ನು ನೋಡಿ ನನ್ನ ಬುದ್ಧಿಯು ಭ್ರಮಿಸುತ್ತಿದೆ. ದಯಮಾಡಿ ನನ್ನ ಈ ಭ್ರಾಂತಿಯನ್ನು ತೊಲಗಿಸು."

ಶ್ರೀಭಗವಂತನು ಹೇಳುತ್ತಾನೆ :

ಯೋಗಾಸ್ತ್ರಯೋ ಮಯಾ ಪ್ರೋಕ್ತಾ ನೃಣಾಂ ಶ್ರೇಯೋವಿಧಿತ್ಸಯಾ।
ಜ್ಞಾನಂ ಕರ್ಮ ಚ ಭಕ್ತಿಶ್ಚ ನೋಪಾಯೋಽನ್ಯೋಽಸ್ತಿ ಕುತ್ರಚಿತ್ ॥

"ಪ್ರಿಯಸಖನೇ! ಮನುಷ್ಯರಿಗೆ ಶ್ರೇಯಸ್ಸನ್ನುಂಟುಮಾಡಬೇಕೆಂಬ ಆಶಯದಿಂದ ನಾನು ಅವರ ಉದ್ಧಾರಕ್ಕಾಗಿ ಮೂರು ಪ್ರಕಾರವಾದ ಯೋಗಗಳನ್ನು ಹೇಳಿರುತ್ತೇನೆ. ಜ್ಞಾನಯೋಗ, ಕರ್ಮಯೋಗ ಮತ್ತು ಭಕ್ತಿಯೋಗ–ಈ ಮೂರು ನಾನು ಮಾನವರ ಶ್ರೇಯಸ್ಸಿಗಾಗಿ ಹೇಳಿರುವ ಮೂರು ಯೋಗಗಳು. ಇವುಗಳನ್ನು ಬಿಟ್ಟರೆ ಶ್ರೇಯಸ್ಸಿಗೆ ಸಾಧನವಾದ ಬೇರೊಂದು ಮಾರ್ಗವೇ ಇಲ್ಲ.

ನಿರ್ವಿಣ್ಣಾನಾಂ ಜ್ಞಾನಯೋಗೋ ನ್ಯಾಸಿನಾಮಿಹ ಕರ್ಮಸು।
ತೇಷ್ವನಿರ್ವಿಣ್ಣಚಿತ್ತಾನಾಂ ಕರ್ಮಯೋಗಸ್ತು ಕಾಮಿನಾಮ್ ॥೭॥

ಕರ್ಮಗಳಲ್ಲಿ ಮತ್ತು ಕರ್ಮಫಲಗಳಲ್ಲಿ ವೈರಾಗ್ಯವನ್ನು ಹೊಂದಿ ಕರ್ಮವನ್ನು ತ್ಯಜಿಸಿರತಕ್ಕವರಿಗೆ ಜ್ಞಾನಯೋಗವು ಸಿದ್ಧಿಸುತ್ತದೆ. ಕರ್ಮಗಳಲ್ಲಿ ಮತ್ತು ಕರ್ಮಫಲಗಳಲ್ಲಿ ಪೂರ್ಣವೈರಾಗ್ಯಬುದ್ಧಿಯಿಲ್ಲದೇ ಇರುವ ಕಾಮಿಗಳಿಗೆ (ಕರ್ಮಫಲವನ್ನು ಅಪೇಕ್ಷಿಸುವವರಿಗೆ) ಕರ್ಮಯೋಗವು ಸಿದ್ಧಿಸುತ್ತದೆ.

ಯದೃಚ್ಛಯಾ ಮತ್ಕಥಾದೌ ಜಾತಶ್ರದ್ಧಸ್ತು ಯಃ ಪುಮಾನ್।
ನ ನಿರ್ವಿಣ್ಣೋ ನಾತಿಸಕ್ತೋ ಭಕ್ತಿಯೋಗೋಽಸ್ಯ ಸಿದ್ಧಿದಃ ॥೮॥

ಯಾವನು ದೈವೇಚ್ಛೆಯಿಂದ ಸೌಭಾಗ್ಯವಶಾತ್ ನನ್ನ ಕಥಾಶ್ರವಣ, ನಾಮಸಂಕೀರ್ತನ–ಇವೇ ಮೊದಲಾದುವುಗಳಲ್ಲಿ ಶ್ರದ್ಧೆಯುಳ್ಳವನಾಗಿರುವನೋ, ಕರ್ಮಗಳಲ್ಲಿ ಮತ್ತು ಕರ್ಮಫಲಗಳಲ್ಲಿ ಸಂಪೂರ್ಣವೈರಾಗ್ಯವಾಗಲೀ, ಆಸಕ್ತಿಯಾಗಲೀ ಇಲ್ಲದೇ ಇರುವನೋ ಅಂತಹವನಿಗೆ ಭಕ್ತಿಯೋಗವು ಸಿದ್ಧಿಸುತ್ತದೆ.

ತಾವತ್ ಕರ್ಮಾಣಿ ಕುರ್ವೀತ ನ ನಿರ್ವಿದ್ಯೇತ ಯಾವತಾ।
ಮತ್ಕಥಾಶ್ರವಣಾದೌ ವಾ ಶ್ರದ್ಧಾ ಯಾವನ್ನ ಜಾಯತೇ ॥೯॥

ಯಾವತ್ತಿನವರೆಗೆ ಕರ್ಮಗಳಲ್ಲಿ ಮತ್ತು ಕರ್ಮಫಲಗಳಲ್ಲಿ ವೈರಾಗ್ಯವು ಹುಟ್ಟುವುದಿಲ್ಲವೋ ಮತ್ತು ನನ್ನ ಕಥಾಶ್ರವಣ, ನಾಮಸಂಕೀರ್ತನ–ಇತ್ಯಾದಿಗಳಲ್ಲಿ ಶ್ರದ್ಧೆಯು ಹುಟ್ಟುವುದಿಲ್ಲವೋ ಅಂದಿನವರೆಗೂ ನಿತ್ಯ-ನೈಮಿತ್ತಿಕಕರ್ಮಗಳನ್ನು ಮಾಡುತ್ತಲೇ ಇರಬೇಕು. (ವೇದದಲ್ಲಿ ಹೇಳಿರುವ ವಿಧಿ-ನಿಷೇಧಗಳಿಗೆ ಅನುಸಾರವಾಗಿ ನಡೆದುಕೊಳ್ಳಲೇಬೇಕು.)

ಸ್ವಧರ್ಮಸ್ಥೋ ಯಜನ್ಯಜ್ಞೈರನಾಶೀಃ ಕಾಮ ಉದ್ಧವ।
ನ ಯಾತಿ ಸ್ವರ್ಗನರಕೌ ಯದ್ಯನ್ಯನ್ನ ಸಮಾಚರೇತ್ ॥೧೦॥

ಉದ್ಧವ! ಯಾವ ಪುರುಷನು ಸ್ವಧರ್ಮನಿಷ್ಠನಾಗಿರುತ್ತಾ ಕಾಮ್ಯಫಲಗಳಲ್ಲಿ ಅನಾಸಕ್ತನಾಗಿ ಯಜ್ಞಗಳಿಂದ ನನ್ನನ್ನು ಆರಾಧಿಸುವನೋ

ಅಂತಹವನು ಬೇರೆ ಯಾವ ಕರ್ಮಗಳನ್ನೂ ಆಚರಿಸದೇ ಇದ್ದರೂ ಸ್ವರ್ಗವನ್ನಾಗಲೀ, ನರಕವನ್ನಾಗಲೀ ಹೊಂದುವುದಿಲ್ಲ. ಫಲಾಭಿಸಂಧಿಯಿಲ್ಲದೆ (ನಿಷ್ಕಾಮ) ಕರ್ಮಗಳನ್ನು ಮಾಡುವ ಅಂತಹವನಿಗೆ ಸ್ವರ್ಗವಾಗಲೀ, ನರಕವಾಗಲೀ ಪ್ರಾಪ್ತವಾಗುವುದಿಲ್ಲ. ಅಂತಹವನು ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಲು ಅಧಿಕಾರಿಯಾಗುತ್ತಾನೆ.

ಅಸ್ಮಿಂಲ್ಲೋಕೇ ವರ್ತಮಾನಃ ಸ್ವಧರ್ಮಸ್ಥೋಽನಘಃ ಶುಚಿಃ ।
ಜ್ಞಾನಂ ವಿಶುದ್ಧಮಾಪ್ನೋತಿ ಮದ್ಭಕ್ತಿಂ ವಾ ಯದೃಚ್ಛಯಾ ॥೧೧॥

ಈ ಲೋಕದಲ್ಲಿದ್ದುಕೊಂಡು ಸ್ವಧರ್ಮ (ಆತ್ಮಧರ್ಮ) ನಿಷ್ಠನಾಗಿರುವ, ಪಾಪರಹಿತವಾದ ಪರಿಶುದ್ಧವಾದ ಮನಸ್ಸುಳ್ಳ ಸಾಧಕನು ಪರಿಶುದ್ಧವಾದ ಆತ್ಮಜ್ಞಾನವನ್ನಾದರೂ ಪಡೆಯುತ್ತಾನೆ. ಅಥವಾ ದೈವಯೋಗದಿಂದ ನನ್ನಲ್ಲಿ ದೃಢವಾದ ಭಕ್ತಿಭಾವವನ್ನಾದರೂ ಹೊಂದುತ್ತಾನೆ.

ಸ್ವರ್ಗಿಣೋಽಪ್ಯೇತಮಿಚ್ಛನ್ತಿ ಲೋಕಂ ನಿರಯಿಣಸ್ತಥಾ ।
ಸಾಧಕಂ ಜ್ಞಾನಭಕ್ತಿಭ್ಯಾಮುಭಯಂ ತದಸಾಧಕಮ್ ॥೧೨॥

ಪ್ರಿಯಸಖನೇ! ಜ್ಞಾನ-ಭಕ್ತಿಗಳಿಗೆ ಸಾಧಕವಾದ ಈ ಮನುಷ್ಯ ಶರೀರವನ್ನು ಸ್ವರ್ಗವಾಸಿಗಳಾದ ದೇವತೆಗಳೂ ಮತ್ತು ನರಕವಾಸಿಗಳಾದ ಪಾಪಿಷ್ಠರೂ ಬಯಸುತ್ತಾರೆ. ಏಕೆಂದರೆ : ಸ್ವರ್ಗದ ಶರೀರಗಳಾಗಲೀ ನರಕದ ಶರೀರಗಳಾಗಲೀ ಜ್ಞಾನ-ಭಕ್ತಿಗಳಿಗೆ ಸಾಧಕಗಳಾಗಲಾರವು.

ನ ನರಃ ಸ್ವರ್ಗತಿಂ ಕಾಂಕ್ಷೇನ್ನಾರಕಿಂ ವಾ ವಿಚಕ್ಷಣಃ।
ನೇಮಂ ಲೋಕಂ ಚ ಕಾಂಕ್ಷೇತ ದೇಹಾವೇಶಾತ್ಪ್ರಮಾದ್ಯತಿ ॥೧೩॥

ಆದುದರಿಂದ ಬುದ್ಧಿವಂತನಾದ ಮನುಷ್ಯನು ಸ್ವರ್ಗವನ್ನೂ ಬಯಸಬಾರದು. (ಸ್ವರ್ಗಪ್ರಾಪಕಗಳಾದ ಕಾಮ್ಯಕರ್ಮಗಳನ್ನೂ ಮಾಡಬಾರದು.) ಎಲ್ಲಕ್ಕಿಂತಲೂ ಮಿಗಿಲಾಗಿ ಪುನಃ ಮನುಷ್ಯನಾಗಿ ಹುಟ್ಟಬೇಕೆನ್ನುವ ಆಕಾಂಕ್ಷೆಯನ್ನೂ ಇಟ್ಟುಕೊಳ್ಳಬಾರದು. ದೇಹಾವೇಶ ದಿಂದ ಮನುಷ್ಯನು ಪ್ರಮಾದವೆಸಗುವುದೇ ಹೆಚ್ಚು.

ಏತದ್ವಿದ್ವಾನ್ ಪುರಾ ಮೃತ್ಯೋರಭವಾಯ ಘಟೇತ ಸಃ।
ಅಪ್ರಮತ್ತ ಇದಂ ಜ್ಞಾತ್ವಾ ಮರ್ತ್ಯಮಪ್ಯರ್ಥಸಿದ್ಧಿದಮ್ ॥೧೪॥

ಮನುಷ್ಯಶರೀರವು ಜ್ಞಾನ-ಭಕ್ತಿಗಳಿಗೆ ಸಾಧಕವಾದರೂ ಎಚ್ಚರದಪ್ಪದಿರುವವನಾದ ವಿದ್ವಾಂಸನು ಈ ಶರೀರವು ಮರಣಧರ್ಮವಿರತಕ್ಕದ್ದೆಂಬುದನ್ನು ಮನಗಾಣಬೇಕು. ಆದುದರಿಂದ ನಾವು ಸಾಯುವುದಕ್ಕೆ ಮುಂಚೆಯೇ ಹುಟ್ಟು-ಸಾವುಗಳಿಲ್ಲದ ಮೋಕ್ಷಪ್ರಾಪ್ತಿಗಾಗಿ ಜ್ಞಾನ-ಭಕ್ತಿಯೋಗದ ಮೂಲಕವಾಗಿ ಪ್ರಯತ್ನಿಸಬೇಕು.

ಛಿದ್ಯಮಾನಂ ಯಮೈರೇತೈಃ ಕೃತನೀಡಂ ವನಸ್ಪತಿಮ್।
ಖಗಃ ಸ್ವಕೇತಮುತ್ಸೃಜ್ಯ ಕ್ಷೇಮಂ ಯಾತಿ ಹ್ಯಲಮ್ಪಟಃ ॥೧೫॥

ಜಾಗರೂಕನಾಗಿರುವವನು ಸಂಗವನ್ನು ತೊರೆದು ಸುಖಿಯಾಗುವನು–ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಪಕ್ಷಿಯೊಂದು ಒಂದು ಮರದಲ್ಲಿ ಗೂಡುಕಟ್ಟಿಕೊಂಡು ಸಂಸಾರಮಾಡುತ್ತಿರುತ್ತದೆ. ಯಮಸದೃಶರಾದ, ಸ್ವಲ್ಪವಾದರೂ ಕರುಣೆಯಿಲ್ಲದ ಮನುಷ್ಯರು ಆ ವೃಕ್ಷವನ್ನು ಕತ್ತರಿಸಲು ಪ್ರಾರಂಭಿಸುತ್ತಾರೆ. ಪಕ್ಷಿಯು ಹಲವಾರು ವರ್ಷಗಳಿಂದ ಅಲ್ಲಿ ವಾಸವಾಗಿರುತ್ತಿದ್ದು ಅದನ್ನು ಪರಿತ್ಯಜಿಸಿಹೋಗಲು ಕಷ್ಟವಾದರೂ ಮುಂದಿನ ಕ್ಷಣದಲ್ಲಾಗುವ ಅಪಾಯವನ್ನು ನೆನೆದು ವೃಕ್ಷದಲ್ಲಿ ಆಸಕ್ತಿಯನ್ನಿಟ್ಟುಕೊಳ್ಳದೆ ಬೇರೆಯ ಕಡೆಗೆ ಹಾರಿಹೋಗಿ ಕ್ಷೇಮದಿಂದಿರುತ್ತದೆ.

ಅಹೋರಾತ್ರೈಶ್ಛಿದ್ಯಮಾನಂ ಬುದ್ಧ್ವಾಽಽಯುರ್ಭಯವೇಪಥುಃ ।
ಮುಕ್ತಸಙ್ಗಃ ಪರಂ ಬುದ್ಧ್ವಾ ನಿರೀಹ ಉಪಶಾಮ್ಯತಿ ॥೧೬॥

ತನ್ನ ಆಯುಷ್ಯವು ಹಗಲು-ರಾತ್ರಿಗಳೆಂಬ ಮರಕಟುಕರಿಂದ ಅನವರತವಾಗಿ ಕತ್ತರಿಸಲ್ಪಡುತ್ತಿರುವುದೆಂಬುದನ್ನು ತಿಳಿದವನು ಭಯದಿಂದ ನಡುಗುತ್ತಾನೆ. ಆದರೆ ನಿಸ್ಸಂಗನಾಗಿ, ದೇಹಾಭಿಮಾನವನ್ನು ತೊರೆದು, ಯಾವ ಆಸೆ-ಆಕಾಂಕ್ಷೆಗಳನ್ನೂ ಇಟ್ಟುಕೊಳ್ಳದೆ, ಜ್ಞಾನ-ಭಕ್ತಿಯೋಗಗಳ ಮೂಲಕವಾಗಿ ಪರತತ್ತ್ವವನ್ನೂ ತಿಳಿದವನು ಯಾವ ವಿಧವಾದ ಭಯವೂ ಇಲ್ಲದೆ ಶಾಂತನಾಗಿರುತ್ತಾನೆ.

ನೃದೇಹಮಾದ್ಯಂ ಸುಲಭಂ ಸುದುರ್ಲಭಂ
ಪ್ಲವಂ ಸುಕಲ್ಪಂ ಗುರುಕರ್ಣಧಾರಮ್।

ಮಯಾನುಕೂಲೇನ ನಭಸ್ವತೇರಿತಂ
ಪುಮಾನ್ ಭವಾಬ್ಧಿಂ ನ ತರೇತ್ಸ ಆತ್ಮಹಾ ॥೧೭॥

ಸಕಲಪುರುಷಾರ್ಥಸಾಧನೆಗೂ ಮೂಲಕಾರಣವಾದ, ಹಲವಾರು ಜನ್ಮಗ್ರಳಲ್ಲಿಯೂ ದುರ್ಲಭವಾಗಿದ್ದ ಈ ಮನುಷ್ಯಶರೀರವು ಯಾವುದೋ ಪುಣ್ಯವಿಶೇಷದಿಂದ ಸುಲಭವಾಗಿ ಸಿಕ್ಕಿಬಿಟ್ಟಿದೆ. ಸಂಸಾರಸಾಗರವನ್ನು ದಾಟಲು ಮಾನವಶರೀರವೆಂಬ ದೃಢವಾದ ನೌಕೆಯೂ ಸಿಕ್ಕಿಬಿಟ್ಟಿದೆ. ಸಂಸಾರಸಾಗರವನ್ನು ದಾಟಿಸಲು ಸಿದ್ಧನಾಗಿ ನಾವಿಕನೂ ಗುರುವಿನ ರೂಪದಲ್ಲಿ ದೊರೆತಿದ್ದಾನೆ.

ಉದ್ಧವ! ನಾನು ಗಾಳಿಯ ರೂಪವನ್ನು ಹೊಂದಿ ಅನುಕೂಲವಾದ ರೀತಿಯಲ್ಲಿ ಬೀಸುತ್ತಾ ಸಂಸಾರವೆಂಬ ಸಮುದ್ರವನ್ನು ದಾಟಿಸಲು ನೆರವಾಗುತ್ತಿದ್ದೇನೆ. ಮನುಷ್ಯಶರೀರವೆಂಬ ಅಂತಹ ಅಮೋಘವಾದ ನೌಕೆಯು ದೊರೆತಿರುವಾಗ ಯಾವನು ಘೋರವಾದ ಸಂಸಾರಸಾಗರವನ್ನು ದಾಟಲು ಪ್ರಯತ್ನಿಸುವುದಿಲ್ಲವೋ ಅಂತಹವನು ನಿಶ್ಚಯವಾಗಿಯೂ ಆತ್ಮಘಾತಕನೇ ಸರಿ.

ಯದಾಽರಮ್ಭೇಷು ನಿರ್ವಿಣ್ಣೋ ವಿರಕ್ತಃ ಸಂಯತೇನ್ದ್ರಿಯಃ ।
ಅಭ್ಯಾಸೇನಾತ್ಮನೋ ಯೋಗೀ ಧಾರಯೇದಚಲಂ ಮನಃ ॥೧೮॥

ಕರ್ಮಗಳಲ್ಲಿ (ಕರ್ಮಮಾರ್ಗದಲ್ಲಿ) ಮೋಕ್ಷವು ಸಿಕ್ಕದೆಂಬ ಕಾರಣದಿಂದ ಖೇದಗೊಂಡು ವೈರಾಗ್ಯವನ್ನು ಹೊಂದುವ ಯೋಗಿಯು ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಆತ್ಮಾನುಸಂಧಾನದ ಮೂಲಕವಾಗಿ ತನ್ನ ಮನಸ್ಸನ್ನು ಪರಮಾತ್ಮನಾದ ನನ್ನಲ್ಲಿ ನಿಶ್ಚಲರೂಪದಿಂದ ಸ್ಥಿರಗೊಳಿಸಬೇಕು.

ಧಾರ್ಯಮಾಣಂ ಮನೋ ಯರ್ಹಿ ಭ್ರಾಮ್ಯದಾಶ್ವನವಸ್ಥಿತಮ್।
ಅತನ್ದ್ರಿತೋಽನುರೋಧೇನ ಮಾರ್ಗೇಣಾತ್ಮವಶಂ ನಯೇತ್ ॥೧೯॥

(ಪರಮಾತ್ಮನಾದ ನನ್ನಲ್ಲಿ ಮನಸ್ಸನ್ನು ಸ್ಥಿರಗೊಳಿಸುವುದು ಅಷ್ಟು ಸುಲಭವೇನಲ್ಲ.) ಮನಸ್ಸನ್ನು, ಹೃತ್ಕಮಲಮಧ್ಯಸ್ತನಾಗಿರುವ ನನ್ನಲ್ಲಿ ಸ್ಥಿರಗೊಳಿಸಹೋದರೆ ಅದು ಅಲ್ಲಿ ಕ್ಷಣಕಾಲವಾದರೂ ಸ್ಥಿರವಾಗಿ ಉಳಿಯದೆ

ಹತೋಟಿಯನ್ನು ತಪ್ಪಿಸಿಕೊಂಡು ಎಲ್ಲೆಲ್ಲಿಗೋ ಓಡಿಹೋಗುತ್ತದೆ. ಅಂತಹ ಸಮಯದಲ್ಲಿ ಸಾವಧಾನತೆಯಿಂದ ಓಡಿಹೋದ ಮನಸ್ಸನ್ನು ಜಾಗರೂಕತೆಯಿಂದ (ಆಲಸ್ಯವನ್ನು ತೊರೆದು) ಹಿಂದಕ್ಕೆ ಕರೆತಂದು ನನ್ನಲ್ಲಿ ನೆಲೆಗೊಳಿಸಬೇಕು. ಸತತವಾದ ಅಭ್ಯಾಸದಿಂದ ಇದು ಸಾಧ್ಯವಾಗುವುದು.

ಮನೋಗತಿಂ ನ ವಿಸೃಜೇಜ್ಜಿತಪ್ರಾಣೋ ಜಿತೇನ್ದ್ರಿಯಃ ।
ಸತ್ತ್ವಸಮ್ಪನ್ನಯಾ ಬುದ್ಧ್ಯಾ ಮನ ಆತ್ಮವಶಂ ನಯೇತ್ ॥೨೦॥

ಪ್ರಾಣ-ಇಂದ್ರಿಯಗಳನ್ನು ಜಯಿಸಿದ ಸಾಧಕನು ಮನಸ್ಸಿನ ಚಾಂಚಲ್ಯವನ್ನು ಉಪೇಕ್ಷಿಸದೆ ಸತ್ತ್ವಸಂಪನ್ನವಾದ ಬುದ್ಧಿಯಿಂದ ಅದನ್ನು ಆತ್ಮಕ್ಕೆ ವಶವನ್ನಾಗಿಸಬೇಕು. (ಮನಸ್ಸನ್ನು ಆತ್ಮನಲ್ಲಿ ಸ್ಥಿರೀಕರಿಸಬೇಕು.)

ಏಷ ವೈ ಪರಮೋ ಯೋಗೋ ಮನಸಃ ಸಙ್ಗ್ರಹಃ ಸ್ಮೃತಃ।
ಹೃದಯಜ್ಞತ್ವಮನ್ವಿಚ್ಛನ್ದಮ್ಯಸ್ಯೇವಾರ್ವತೋ ಮುಹುಃ ॥೨೧॥

ಕುದುರೆಯನ್ನು ಪಳಗಿಸಲು ಇಚ್ಛಿಸಿದ ಕುದುರೇಸವಾರನು ಮೊದಲು ಆ ಕುದುರೆಯು ಹೋಗುವ ಕಡೆಗೇ ಲಗಾಮನ್ನು ಸಡಿಲಿಸಿಬಿಡುತ್ತಾನೆ. ಮರುಕ್ಷಣದಲ್ಲಿಯೇ ಪುನಃ ಲಗಾಮನ್ನು ಹಿಡಿದೆಳೆದು ತನ್ನ ಇಚ್ಛೆಗೆ ಅನುಸಾರವಾಗಿ ಆ ಕುದುರೆಯು ಹೋಗುವಂತೆ ಮಾಡುತ್ತಾನೆ. ಅದೇ ರೀತಿಯಲ್ಲಿ ಸಾಧಕನು ಓಡಿಹೋಗುವ ಮನಸ್ಸಿನ ಹಿಂದೆಯೇ ಸ್ವಲ್ಪದೂರ ಹೋಗಬೇಕು. ಮನಸ್ಸಿಗೆ ವಶನಾಗಿ ಮನಸ್ಸನ್ನು ಆತ್ಮನಲ್ಲಿ ನಿಲ್ಲಿಸಬೇಕೆನ್ನುವುದನ್ನು ಮರೆತುಬಿಡಬಾರದು. ಮನಸ್ಸಿನ ಹಿಂದೆ ಸ್ವಲ್ಪದೂರ ಹೋದರೂ ಪುನಃ ಅದನ್ನು ಹಿಂದಕ್ಕೆ ಜಾಗರೂಕತೆಯಿಂದ ಸೆಳೆದು ತಂದು ಹೃದಯಸ್ಥನಾದ ಪರಮಾತ್ಮನಲ್ಲಿ ನೆಲೆಗೊಳಿಸಬೇಕು. ಇದೇ ಪರಮಶ್ರೇಷ್ಠವಾದ ಯೋಗಮಾರ್ಗ.

ಸಾಙ್ಖ್ಯೇನ ಸರ್ವಭಾವಾನಾಂ ಪ್ರತಿಲೋಮಾನುಲೋಮತಃ।
ಭವಾಪ್ಯಯಾವನುಧ್ಯಾಯೇನ್ಮನೋ ಯಾವತ್ಪ್ರಸೀದತಿ ॥೨೨॥

ಸಾಂಖ್ಯಶಾಸ್ತ್ರದಲ್ಲಿ ಪ್ರಕೃತಿಯಿಂದ ಹಿಡಿದು ಶರೀರಪರ್ಯಂತವಾಗಿ ಯಾವ ಸೃಷ್ಟಿಯ ಕ್ರಮವನ್ನು ಹೇಳಿರುವುದೋ ಮತ್ತು ಶರೀರದಿಂದ

ಪ್ರಾರಂಭಿಸಿ ಪ್ರಕೃತಿಯವರೆಗೆ ಯಾವ ಇಪ್ಪತ್ತೈದು ತತ್ತ್ವಗಳ ಲಯವನ್ನು ಹೇಳಿರುವುದೋ ಅದನ್ನು ಮನಸ್ಸು ಶಾಂತವಾಗುವವರೆಗೂ ಚಿಂತಿಸುತ್ತಲೇ ಇರಬೇಕು. (ಜೀವನು ಹುಟ್ಟಿಬಂದ ಕ್ರಮ ಮತ್ತು ಲಯವಾಗುವ ವ್ಯುತ್ಕ್ರಮ–ಎರಡನ್ನೂ ಅನವರತವಾಗಿ ಚಿಂತಿಸುತ್ತಿದ್ದರೆ ಮನಸ್ಸು ಶಾಂತವಾಗಿಬಿಡುತ್ತದೆ.)

ನಿರ್ವಿಣ್ಣಸ್ಯ ವಿರಕ್ತಸ್ಯ ಪುರುಷಸ್ಯೋಕ್ತವೇದಿನಃ ।
ಮನಸ್ತ್ಯಜತಿ ದೌರಾತ್ಮ್ಯಂ ಚಿನ್ತಿತಸ್ಯಾನುಚಿನ್ತಯಾ ॥೨೩॥

ಸಂಸಾರದಲ್ಲಿ ಖೇದವನ್ನು ಹೊಂದಿ ವಿರಾಗಿಯಾದ ಸಾಧಕನು ಗುರುವಿನ ಉಪದೇಶದಂತೆ ಪದಾರ್ಥಗಳ ಉತ್ಪತ್ತಿ-ಲಯಗಳನ್ನೇ ಅನುಲೋಮ-ಪ್ರತಿಲೋಮಗಳಿಂದ ಸತತವಾಗಿ ಅನುಸಂಧಾನಮಾಡುವುದರಿಂದ ಅವನ ಮನಸ್ಸು ದೌರಾತ್ಮ್ಯವನ್ನು (ದೇಹಾತ್ಮಬುದ್ಧಿಯನ್ನು) ತ್ಯಜಿಸುತ್ತದೆ.

ಯಮಾದಿಭಿರ್ಯೋಗಪಥೈರಾನ್ವೀಕ್ಷಿಕ್ಯಾ ಚ ವಿದ್ಯಯಾ ।
ಮಮಾರ್ಚೋಪಾಸನಾಭಿರ್ವಾ ನಾನ್ಯೈರ್ಯೋಗ್ಯಂ ಸ್ಮರೇನ್ಮನಃ ॥೨೪॥

ಯಮ-ನಿಯಮ-ಆಸನ-ಪ್ರಾಣಾಯಾಮ–ಇವೇ ಮುಂತಾದ ಯೋಗಮಾರ್ಗಗಳಿಂದಾಗಲೀ, ವಸ್ತುತತ್ತ್ವವನ್ನು ಪರೀಕ್ಷಣ-ವೀಕ್ಷಣಗಳಿಂದ ತಿಳಿಯುವ ಆತ್ಮವಿದ್ಯೆಯಿಂದಾಗಲೀ, ನನ್ನ ಶ್ರೀವಿಗ್ರಹಗಳ ಅರ್ಚನೆ-ಉಪಾಸನೆಗಳಿಂದಾಗಲೀ (ಅಂದರೆ ಕರ್ಮಯೋಗ-ಜ್ಞಾನಯೋಗ ಮತ್ತು ಭಕ್ತಿಯೋಗಗಳಿಂದಾಗಲೀ) ಪರಮಪ್ರಾಪ್ಯನಾದ ನನ್ನನ್ನು ಸಾಧಕನ ಮನಸ್ಸು ಸ್ಮರಿಸಬೇಕು. ಬೇರೆ ಯಾವ ಮಾರ್ಗದಿಂದಲೂ ಸ್ಮರಿಸಲು ಸಾಧ್ಯವಾಗುವುದಿಲ್ಲ.

ಯದಿ ಕುರ್ಯಾತ್ಪ್ರಮಾದೇನ ಯೋಗೀ ಕರ್ಮ ವಿಗರ್ಹಿತಮ್ ।
ಯೋಗೇನೈವ ದಹೇದಂಹೋ ನಾನ್ಯತ್ತತ್ರ ಕದಾಚನ ॥೨೫॥

ಯೋಗಿಯಾದವನು ಪ್ರಮಾದವಶದಿಂದ ಕುತ್ಸಿತವಾದ ಕರ್ಮವನ್ನೇನಾದರೂ ಮಾಡಿಬಿಟ್ಟರೆ ಅದರ ಪಾಪವನ್ನು ಯೋಗಸಾಧನೆಯಿಂದಲೇ ನಿವಾರಿಸಿಕೊಳ್ಳಬೇಕು. (ಕೃಚ್ಛ್ರ–ಚಾಂದ್ರಾಯಣಾದಿ ಪ್ರಾಯಶ್ಚಿತ್ತಾದಿ

ಗಳನ್ನು ಮಾಡಿಕೊಳ್ಳಬೇಕಾಗಿಲ್ಲ. ಜ್ಞಾನಾಗ್ನಿಯಿಂದಲೇ ಆ ದೋಷವನ್ನು ಭಸ್ಮಮಾಡಬೇಕು.)

ಸ್ವೇ ಸ್ವೇಽಧಿಕಾರೇ ಯಾ ನಿಷ್ಠಾ ಸ ಗುಣಃ ಪರಿಕೀರ್ತಿತಃ।
ಕರ್ಮಣಾಂ ಜಾತ್ಯಶುದ್ಧಾನಾಮನೇನ ನಿಯಮಃ ಕೃತಃ।
ಗುಣದೋಷವಿಧಾನೇನ ಸಙ್ಗಾನಾಂ ತ್ಯಾಜನೇಚ್ಛಯಾ ॥೨೬॥

ವೇದದಲ್ಲಿ ಹೇಳಿರುವ ವಿಧಿಯೇ ಗುಣ, ನಿಷೇಧವೇ ದೋಷ–ಎಂದೇನೂ ಇಲ್ಲ. ಮನುಷ್ಯನಿಗೆ ತನ್ನ ತನ್ನ ಯೋಗ್ಯತಾನುಸಾರವಾಗಿ ಯಾವ ಯಾವ ಅಧಿಕಾರವು ಪ್ರಾಪ್ತವಾಗುತ್ತದೆಯೋ ಅದರಲ್ಲಿ ನಿಷ್ಠೆಯಿಂದಿರುವುದೇ ಗುಣ ವೆನಿಸುತ್ತದೆ. ಇದಕ್ಕೆ ವಿಪರೀತವಾದುದೇ ದೋಷವು. ಇದೇ ಗುಣ-ದೋಷ ಗಳ ನಿರ್ಣಯವು. ಎಲ್ಲ ಪ್ರಾಣಿಗಳಿಗೂ ಹುಟ್ಟಿನಿಂದಲೇ ಕರ್ಮದಲ್ಲಿ ಪ್ರವೃತ್ತಿ ಯಿರುತ್ತದೆ. ಈ ಕರ್ಮಪ್ರವೃತ್ತಿಯೇ ಅಶುದ್ಧವಾದದ್ದು ಮತ್ತು ಅನರ್ಥಕ್ಕೆ ಮೂಲವಾದುದು. ಇಂತಹ ಕರ್ಮಪ್ರವತ್ತಿಯನ್ನು ಮನುಷ್ಯ ರಲ್ಲಿ ಮೊಟಕುಗೊಳಿಸುವ ಸಲುವಾಗಿಯೇ ವಿಧಿ-ನಿಷೇಧಗಳು ಹೇಳಲ್ಪಟ್ಟಿವೆ. ನಿಷೇಧವಾಕ್ಯಗಳಿಂದ ಕರ್ಮದ ಪ್ರವೃತ್ತಿಯೇ ಮನುಷ್ಯರಲ್ಲಿ ನಿಂತುಹೋಗ ದಿದ್ದರೂ ಕರ್ಮಗಳ ಸಂಕೋಚವಂತೂ ಆಗುತ್ತದೆ. ವೇದನಿಷಿದ್ಧವಾದ ಕರ್ಮಗಳನ್ನಾದರೂ ಮನುಷ್ಯನು ಮಾಡಹೋಗುವುದಿಲ್ಲ. ವೇದದಲ್ಲಿ ಹೇಳಿ ರುವ ವಿಧಿ-ನಿಷೇಧಗಳ ಆಶಯವೇ ಮನುಷ್ಯನಲ್ಲಿ ವಿಷಯಾಸಕ್ತಿಯನ್ನು ತಪ್ಪಿಸಬೇಕೆನ್ನುವುದಾಗಿದೆ. ನಿಷೇಧವಾಕ್ಯಗಳು ಕರ್ಮಗಳಲ್ಲಿ ಸಂಕೋಚ ವನ್ನುಂಟುಮಾಡುವುದರ ಮೂಲಕ ಅನುಕ್ರಮವಾಗಿ ಪ್ರವೃತ್ತಿಮಾರ್ಗದಿಂದ ಮನುಷ್ಯನನ್ನು ನಿವೃತ್ತಿಗೊಳಿಸುವುದೇ ಶಾಸ್ತ್ರಗಳ ತಾತ್ಪರ್ಯವು.

ಜಾತಶ್ರದ್ಧೋ ಮತ್ಕಥಾಸು ನಿರ್ವಿಣ್ಣಃ ಸರ್ವಕರ್ಮಸು।
ವೇದ ದುಃಖಾತ್ಮಕಾನ್ ಕಾಮಾನ್ಪರಿತ್ಯಾಗೇಽಪ್ಯನೀಶ್ವರಃ ॥೨೭॥

ಯಾವಾತನಿಗೆ ನನ್ನ ಕಥಾಪ್ರಸಂಗಗಳನ್ನು ಕೇಳುವುದರಲ್ಲಿ ಹೆಚ್ಚಿನ ಶ್ರದ್ಧೆಯುಂಟಾಗುತ್ತದೆಯೋ ಅಂತಹವನಿಗೆ ಇತರ ಎಲ್ಲ ಕರ್ಮಗಳಲ್ಲಿಯೂ ಖೇದವುಂಟಾಗುವುದು ಅಥವಾ ವೈರಾಗ್ಯವುಂಟಾಗುವುದು ನಿಶ್ಚಯ. ಕಾಮ್ಯ ಕರ್ಮಗಳೆಲ್ಲವೂ ದುಃಖದಿಂದ ಕೂಡಿರತಕ್ಕುವು–ಎಂಬುದನ್ನು ಆತನು ತಿಳಿ

ದಿರುತ್ತಾನೆ. ಆದರೂ ಹುಟ್ಟಿನಿಂದಲೇ ಬಂದಿರುವ ಸ್ವಭಾವಜನ್ಯವಾದ ಕರ್ಮಗಳನ್ನು ಬಿಟ್ಟುಬಿಡಲು ಸಮರ್ಥನಾಗುವುದಿಲ್ಲ.

ತತೋ ಭಜೇತ ಮಾಂ ಪ್ರೀತಃ ಶ್ರದ್ಧಾಲುರ್ದೃಢನಿಶ್ಚಯಃ ।
ಜುಷಮಾಣಶ್ಚ ತಾನ್ಕಾಮಾನ್ ದುಃಖೋದರ್ಕಾಂಶ್ಚ ಗರ್ಹಯನ್ ॥೨೮॥

ಆದ್ದರಿಂದ ಸ್ವಭಾವಜನ್ಯವಾದ ಕರ್ಮಗಳನ್ನು ಬಿಡುವುದಕ್ಕೆ ಸಾಧ್ಯ ವಾಗದೇ ಇದ್ದರೂ ನನ್ನನ್ನು ಭಜಿಸುವುದರಿಂದ ಸಮಸ್ತದೋಷಗಳೂ ಪರಿಹಾರವಾಗುವುದೆಂದು ದೃಢವಾಗಿ ನಿಶ್ಚಯಿಸಿ, ಶ್ರದ್ಧಾಳುವಾಗಿ ಅತ್ಯಂತ ಪ್ರೀತಿಯಿಂದ ನನ್ನನ್ನು ಭಜಿಸುತ್ತಿರಬೇಕು. ವಿಷಯಸುಖಗಳನ್ನು ಅನುಭವಿ ಸುತ್ತಿದ್ದರೂ ಅವೆಲ್ಲವೂ ಪರಿಣಾಮದಲ್ಲಿ ದುಃಖವನ್ನೇ ಉಂಟುಮಾಡತಕ್ಕುವು ಗಳೆಂದು ಅವುಗಳನ್ನು ತೆಗಳುತ್ತಲೇ ಇರಬೇಕು. ಅನಿವಾರ್ಯವಾಗಿ ಸುಖ ರೂಪವಾದ ದುಃಖವನ್ನು ಅನುಭವಿಸುತ್ತಿದ್ದೇನೆಂದು ಭಾವಿಸಿಕೊಳ್ಳುತ್ತಿರ ಬೇಕು.

ಪ್ರೋಕ್ತೇನ ಭಕ್ತಿಯೋಗೇನ ಭಜತೋ ಮಾಸಕೃನ್ಮುನೇಃ ।
ಕಾಮಾ ಹೃದಯ್ಯಾ ನಶ್ಯನ್ತಿ ಸರ್ವೇ ಮಯಿ ಹೃದಿ ಸ್ಥಿತೇ ॥೨೯॥

ನಾನು ಈ ಹಿಂದೆ ಹೇಳಿದ ಭಕ್ತಿಯೋಗದ ಮಾರ್ಗದಿಂದ ನನ್ನನ್ನು ಸತತವಾಗಿ ಭಜಿಸುತ್ತಿದ್ದರೆ ಅಂತಹ ಮುನಿಯ ಹೃದಯಕಮಲದಲ್ಲಿ ನಾನು ಕಾಣಿಸಿಕೊಳ್ಳುತ್ತೇನೆ. ನನ್ನ ಉಪಸ್ಥಿತಿಯಿಂದಾಗಿ ಅವನ ಹೃದಯದಲ್ಲಿದ್ದ ಸಮಸ್ತವಾದ ಕಾಮನೆಗಳೂ ನಶಿಸಿಹೋಗುತ್ತವೆ.

ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ ।
ಕ್ಷೀಯನ್ತೇ ಚಾಸ್ಯ ಕರ್ಮಾಣಿ ಮಯಿ ದೃಷ್ಟೇಽಖಿಲಾತ್ಮನಿ ॥೩೦॥

ಹೃದಯಕಮಲದಲ್ಲಿ ಸರ್ವಾತ್ಮಕನಾದ ನನ್ನ ಸಾಕ್ಷಾತ್ಕಾರವಾಗುತ್ತಿ ದ್ದಂತೆಯೇ ಅಜ್ಞಾನರೂಪವಾದ ಹೃದಯಗ್ರಂಥಿಯು ಒಡೆದುಹೋಗುತ್ತದೆ. ಅದರ ಜೊತೆಯಲ್ಲಿಯೇ ಸಮಸ್ತಸಂಶಯಗಳ ನಿವಾರಣೆಯೂ ಆಗುತ್ತದೆ. ಕರ್ಮಗಳೂ ಮತ್ತು ಕರ್ಮಫಲಗಳೂ ಕ್ಷಯಿಸಿಹೋಗುತ್ತವೆ.

ತಸ್ಮಾನ್ಮದ್ಭಕ್ತಿಯುಕ್ತಸ್ಯ ಯೋಗಿನೋ ವೈ ಮದಾತ್ಮನಃ ।
ನ ಜ್ಞಾನಂ ನ ಚ ವೈರಾಗ್ಯಂ ಪ್ರಾಯಃ ಶ್ರೇಯೋ ಭವೇದಿಹ ॥೩೧॥

ಆದುದರಿಂದ ಯಾವ ಯೋಗಿಯು ನನ್ನಲ್ಲಿ ಅನನ್ಯಭಕ್ತಿಯುಳ್ಳವನಾಗಿರುವನೋ, ಸದಾಕಾಲದಲ್ಲಿಯೂ ನನ್ನ ಚಿಂತನೆಯಲ್ಲಿಯೇ ಮಗ್ನನಾಗಿರುವನೋ ಅಂತಹವನಿಗೆ ಜ್ಞಾನದಿಂದಾಗಲೀ ವೈರಾಗ್ಯದಿಂದಾಗಲೀ ಆಗಬೇಕಾದುದೇನೂ ಇಲ್ಲ. ಪ್ರಾಯಶಃ ನನ್ನಲ್ಲಿಡುವ ಅನನ್ಯಭಕ್ತಿಯಿಂದಲೇ ಅವನಿಗೆ ಪರಮಕಲ್ಯಾಣವುಂಟಾಗುತ್ತದೆ.

ಯತ್ಕರ್ಮಭಿರ್ಯತ್ತಪಸಾ ಜ್ಞಾನವೈರಾಗ್ಯತಶ್ಚ ಯತ್ ।
ಯೋಗೇನ ದಾನಧರ್ಮೇಣ ಶ್ರೇಯೋಭಿರಿತರೈರಪಿ ॥೩೨॥

ಸರ್ವಂ ಮದ್ಭಕ್ತಿಯೋಗೇನ ಮದ್ಭಕ್ತೋ ಲಭತೇಽಞ್ಜಸಾ ।
ಸ್ವರ್ಗಾಪವರ್ಗಂ ಮದ್ಧಾಮ ಕಥಞ್ಚಿದ್ಯದಿ ವಾಞ್ಛತಿ ॥೩೩॥

ನಿತ್ಯ-ನೈಮಿತ್ತಿಕ-ಕಾಮ್ಯಕರ್ಮಗಳು, ತಪಸ್ಸು, ಜ್ಞಾನ, ವೈರಾಗ್ಯ, ಯೋಗಾಭ್ಯಾಸ, ದಾನ, ಧರ್ಮ, ತೀರ್ಥಯಾತ್ರೆ–ಇವೇ ಮುಂತಾದ ಶ್ರೇಯಸ್ಸಾಧನಗಳಿಂದ ಯಾವ ಫಲಗಳನ್ನು ಪಡೆಯಬಹುದೋ ಅವೆಲ್ಲವನ್ನೂ ನನ್ನ ಭಕ್ತನು ಕೇವಲ ಭಕ್ತಿಯೋಗದಿಂದಲೇ ಅತಿಶೀಘ್ರವಾಗಿ ಪಡೆದುಕೊಳ್ಳುತ್ತಾನೆ. ಇಷ್ಟುಮಾತ್ರವಲ್ಲ. ಸ್ವರ್ಗ-ಮೋಕ್ಷ ಇವನ್ನೂ ಕೂಡ ನನ್ನ ಭಕ್ತನು ಬಯಸಿದ್ದೇ ಆದರೆ ಕ್ಷಣಮಾತ್ರದಲ್ಲಿ ಪಡೆದುಕೊಳ್ಳುತ್ತಾನೆ. ನನ್ನ ಭಕ್ತನಿಗೆ ಲಭಿಸದೇ ಇರುವ ವಸ್ತುವೇ ಯಾವುದೂ ಇಲ್ಲ. ಆದರೆ ನನ್ನ ಪ್ರೇಮೀಭಕ್ತನು ನನ್ನನ್ನು ಬಿಟ್ಟು ಬೇರೆ ಯಾವುದನ್ನೂ ಬಯಸುವುದೇ ಇಲ್ಲ.

ನ ಕಿಞ್ಚಿತ್ಸಾಧವೋ ಧೀರಾ ಭಕ್ತಾ ಹ್ಯೇಕಾನ್ತಿನೋ ಮಮ ।
ವಾಞ್ಛನ್ತ್ಯಪಿ ಮಯಾ ದತ್ತಂ ಕೈವಲ್ಯಮಪುನರ್ಭವಮ್ ॥೩೪॥

ನನ್ನಲ್ಲಿ ಅನನ್ಯಭಕ್ತಿಯನ್ನಿಟ್ಟುಕೊಂಡಿರುವ ಧೀರರೂ ಸಾಧುಗಳೂ ಆದ ನನ್ನ ಏಕಾಂತಭಕ್ತರು ಮರುಹುಟ್ಟಿಲ್ಲದ ಮೋಕ್ಷವನ್ನು ನಾನಾಗಿಯೇ ಕೊಡುತ್ತೇನೆಂದು ಹೇಳಿದರೂ ಅದನ್ನೂ ಅವರು ಬಯಸುವುದಿಲ್ಲ. ಉಳಿದ ನಶ್ವರವಾದ ವಸ್ತುಗಳ ವಿಷಯವಾಗಿ ಹೇಳುವುದೇನಿದೆ? ಭಕ್ತಿಗೆ ಯಾವ ಫಲವನ್ನೂ ಅವರು ಅಪೇಕ್ಷಿಸುವುದಿಲ್ಲ.

ನೈರಪೇಕ್ಷ್ಯಂ ಪರಂ ಪ್ರಾಹುರ್ನಿಃಶ್ರೇಯಸಮನಲ್ಪಕಮ್ ।
ತಸ್ಮಾನ್ನಿರಾಶಿಷೋ ಭಕ್ತಿರ್ನಿರಪೇಕ್ಷಸ್ಯ ಮೇ ಭವೇತ್ ॥೩೫॥

ಅಪೇಕ್ಷೆಯಿಲ್ಲದಿರುವುದೇ ಶ್ರೇಷ್ಠವಾದ ಮತ್ತು ಮಹತ್ತಾದ ಆತ್ಮ ಕಲ್ಯಾಣಕ್ಕೆ ಕಾರಣವಾಗುವುದೆಂದು ಭಕ್ತಶ್ರೇಷ್ಠರ ಅಭಿಪ್ರಾಯವಾಗಿದೆ. ಆದುದರಿಂದ ಯಾವನು ಯಾವ ಅಪೇಕ್ಷೆಯೂ ಇಲ್ಲದೇ ಇರುವನೋ ನಿಷ್ಕಾಮನಾಗಿರುವನೋ ಅಂತಹವನಿಗೆ ಮಾತ್ರವೇ ನಿರಪೇಕ್ಷನಾದ ನನ್ನಲ್ಲಿ ಅನನ್ಯವಾದ ಭಕ್ತಿಭಾವವುಂಟಾಗುತ್ತದೆ.

ನ ಮಯ್ಯೇಕಾನ್ತಭಕ್ತಾನಾಂ ಗುಣದೋಷೋದ್ಭವಾ ಗುಣಾಃ ।
ಸಾಧೂನಾಂ ಸಮಚಿತ್ತಾನಾಂ ಬುದ್ಧೇಃ ಪರಮುಪೇಯುಷಾಮ್ ॥

ಬುದ್ಧಿಗೂ ಆಚೆ ಇರುವ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡಿರುವ, ನನ್ನಲ್ಲಿಯೇ ಅನನ್ಯವಾದ ಭಕ್ತಿಭಾವವನ್ನೇ ಇಟ್ಟುಕೊಂಡಿರುವ, ಸರ್ವರಲ್ಲೂ ಸಮನಾದ ಭಾವನೆಯನ್ನು ಇಟ್ಟುಕೊಂಡಿರುವ ಸತ್ತ್ವಗುಣಪ್ರಧಾನರಾದ ಸಾಧುಗಳಿಗೆ ಗುಣ-ದೋಷರೂಪವಾದ ವಿಧಿ-ನಿಷೇಧಗಳಿಂದ ಪ್ರಾಪ್ತವಾಗುವ ಪಾಪ-ಪುಣ್ಯಗಳಾವುದೂ ಅಂಟುವುದಿಲ್ಲ. ಅಂತಹ ಪರಮೈ ಕಾಂತಿಗಳಾದ ಭಕ್ತರಿಗೆ ವಿಧಿ-ನಿಷೇಧಗಳೆಂಬುದಿಲ್ಲ.

ಏವಮೇತಾನ್ಮಯಾಽದಿಷ್ಟಾನನುತಿಷ್ಠನ್ತಿ ಮೇ ಪಥಃ ।
ಕ್ಷೇಮಂ ವಿನ್ದನ್ತಿ ಮತ್ಸ್ಥಾನಂ ಯದ್ಬ್ರಹ್ಮ ಪರಮಂ ವಿದುಃ ॥೩೭॥

ಉದ್ಧವ! ಹೀಗೆ ನನ್ನಿಂದ ಉಪದೇಶಿಸಲ್ಪಟ್ಟಿರುವ ಕರ್ಮಯೋಗ ಜ್ಞಾನಯೋಗ–ಭಕ್ತಿಯೋಗಮಾರ್ಗಗಳನ್ನು ಯಾರು ಅನುಸರಿಸುವರೋ ಅಂತಹವರು ನನ್ನ ಸ್ಥಾನವಾದ ವೈಕುಂಠವನ್ನು ಕ್ಷೇಮವಾಗಿ ತಲುಪುವರು ಮತ್ತು ಶ್ರೇಷ್ಠವಾದ ಪರಬ್ರಹ್ಮತತ್ತ್ವವನ್ನೂ ತಿಳಿಯುವರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಏಕಾದಶಸ್ಕಂಧದ ೨೦ನೆಯ ಅಧ್ಯಾಯವು ಮುಗಿಯಿತು.

——

ಗುಣ-ದೋಷವ್ಯವಸ್ಥೆಗಳ ಸ್ವರೂಪ ಮತ್ತು ಅವುಗಳ ರಹಸ್ಯ

ಶ್ರೀಭಗವಂತನು ಹೇಳುತ್ತಾನೆ :

ಯ ಏತಾನ್ಮತ್ಪಥೋ ಹಿತ್ವಾ ಭಕ್ತಿಜ್ಞಾನಕ್ರಿಯಾತ್ಮಕಾನ್ ।
ಕ್ಷುದ್ರಾನ್ಕಾಮಾಂಶ್ಚಲೈಃ ಪ್ರಾಣೈರ್ಜುಷನ್ತಃ ಸಂಸರನ್ತಿ ತೇ ॥೧॥

ಉದ್ಧವ! ನನ್ನ ಪ್ರಾಪ್ತಿಗೆ ಮೂರು ಮಾರ್ಗಗಳಿವೆ. ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗಗಳೆಂಬಿವೇ ಆ ಮೂರು ಮಾರ್ಗಗಳು. ಯಾರು ಈ ಮಾರ್ಗಗಳನ್ನು ಹಿಡಿಯದೇ ಚಂಚಲವಾದ ಇಂದ್ರಿಯಗಳ ಮೂಲಕವಾಗಿ ಕ್ಷುದ್ರವಾದ ಭೋಗಗಳನ್ನು ಉಪಭೋಗಿಸುವರೋ ಅಂತಹವರು ಹುಟ್ಟು-ಸಾವುಗಳ ರೂಪವಾದ ಸಂಸಾರದಲ್ಲಿ ಬಿದ್ದು ತೊಳಲುತ್ತಿರುತ್ತಾರೆ.

ಸ್ವೇ ಸ್ವೇಽಧಿಕಾರೇ ಯಾ ನಿಷ್ಠಾ ಸ ಗುಣಃ ಪರಿಕೀರ್ತಿತಃ ।
ವಿಪರ್ಯಯಸ್ತು ದೋಷಃ ಸ್ಯಾದುಭಯೋರೇಷ ನಿಶ್ಚಯಃ ॥೨॥

ತಮ್ಮ-ತಮ್ಮ ಅಧಿಕಾರಕ್ಕೆ ಅನುಸಾರವಾಗಿ ಅದಕ್ಕೆ ಸಂಬಂಧಿಸಿದ ಧರ್ಮದಲ್ಲಿ ನಿಷ್ಠೆಯಿಂದಿರುವುದೇ ಗುಣ. ನಿಷ್ಕಾಮಕರ್ಮಿಗಳಾದ ಸಾಧಕರಿಗೆ ಅವರ ಧರ್ಮವಾದ ಚಿತ್ತಶುದ್ಧಿಕರವಾದ ನಿತ್ಯ-ನೈಮಿತ್ತಿಕಕರ್ಮಗಳಲ್ಲಿ ನಿಷ್ಠೆಯಿಂದಿರುವುದೇ ಗುಣ. ಕರ್ಮಯೋಗಾವಲಂಬಿಗಳು ನಿತ್ಯ-ನೈಮಿತ್ತಿಕ ಕರ್ಮಗಳಲ್ಲಿ ನಿಷ್ಠೆಯಿಡದೇ ಇರುವುದು ದೋಷವೆನಿಸಿಕೊಳ್ಳುತ್ತದೆ. ಜ್ಞಾನನಿಷ್ಠರಿಗೆ ಜ್ಞಾನಸಾಧಕವಾದ ಯೋಗಾಭ್ಯಾಸವೇ ಗುಣವೆನಿಸುತ್ತದೆ. ಜ್ಞಾನನಿಷ್ಠರಾಗಿ ಯೋಗಾಭ್ಯಾಸಮಾಡದೇ ಇರುವುದು ಅವರಿಗೆ ದೋಷವೆನಿಸುತ್ತದೆ. ಅಂತೆಯೇ ಭಕ್ತಿಮಾರ್ಗಾನುಯಾಯಿಗಳಿಗೆ ಭಗವಂತನ ನಾಮಶ್ರವಣ ಮತ್ತು ಕೀರ್ತನಾದಿಗಳೇ ಗುಣವೆನಿಸುತ್ತದೆ. ಭಗವಂತನ ನಾಮಸಂಕೀರ್ತನವಿಲ್ಲದೇ ಇರುವುದು ಅವರಿಗೆ ದೋಷವೆನಿಸುತ್ತದೆ. ಆದುದರಿಂದ ಗುಣ-ದೋಷಗಳ ವ್ಯವಸ್ಥೆಯು ಅವರವರ ಅಧಿಕಾರವನ್ನು ಅನುಸರಿಸಿ ಅಥವಾ ಅವರವರ ಮಾರ್ಗವನ್ನು ಅನುಸರಿಸಿ ಇರುತ್ತದೆಯೇ ಹೊರತು ಯಾವುದೇ ವಸ್ತುವನ್ನೂ ಅನುಸರಿಸಿರುವುದಿಲ್ಲ. ಈ ಕಾರಣದಿಂದ ಒಬ್ಬ

ಸಾಧಕನಿಗೆ ಗುಣವಾದುದು ಮತ್ತೊಬ್ಬನಿಗೆ ದೋಷವಾಗಿ ಪರಿಣಮಿಸ ಬಹುದು.

ಶುದ್ಧ್ಯಶುದ್ಧೀ ವಿಧೀಯೇತೇ ಸಮಾನೇಷ್ವಪಿ ವಸ್ತುಷು ।
ದ್ರವ್ಯಸ್ಯ ವಿಚಿಕಿತ್ಸಾರ್ಥಂ ಗುಣದೋಷೌ ಶುಭಾಶುಭೌ ॥೩॥

ನೀರು ಒಂದೇ ಆಗಿದ್ದರೂ ಅಶುದ್ಧವಾದದ್ದು, ಶುದ್ಧವಾದದ್ದು ಎಂದು ಹೇಳುವಂತೆ ವಸ್ತುಗಳು ಸಮಾನವೇ ಆಗಿದ್ದರೂ ಶುದ್ಧಿ ಮತ್ತು ಅಶುದ್ಧಿ, ಗುಣ-ದೋಷ, ಶುಭ-ಅಶುಭ ಮುಂತಾಗಿ ಒಂದೇ ವಸ್ತುವನ್ನು ಎರಡು ಬಗೆಯಾಗಿ ಹೇಳಲಾಗುತ್ತದೆ. ಇದರ ಅಭಿಪ್ರಾಯವೇನೆಂದರೆ ಪ್ರತಿಯೊಂದು ವಸ್ತುವನ್ನೂ ನಿರೀಕ್ಷಿಸಿ ಪರೀಕ್ಷಿಸಬೇಕೆಂಬುದೇ ಆಗಿದೆ. ವಸ್ತುವಿನಲ್ಲಿ ಸಂದೇಹವನ್ನುಂಟುಮಾಡಿ ಅದನ್ನು ಕಂಡೊಡನೆ ಉಪಭೋಗಿಸ ಬೇಕೆಂಬ ಸ್ವಾಭಾವಿಕವಾದ ಚಾಪಲ್ಯವುಂಟಾಗದಿರಲೆಂದು ಸ್ವಾಭಾವಿಕ ಪ್ರವೃತ್ತಿಯನ್ನು ತಡೆಯುವ ಸಲುವಾಗಿ ಹೀಗೆ ಮಾಡಲಾಗಿದೆ.

ಧರ್ಮಾರ್ಥಂ ವ್ಯವಹಾರಾರ್ಥಂ ಯಾತ್ರಾರ್ಥಮಿತಿ ಚಾನಘ ।
ದರ್ಶಿತೋಽಯಂ ಮಯಾಽಚಾರೋ ಧರ್ಮಮುದ್ವಹತಾಂ ಧುರಮ್॥೪॥

"ಧರ್ಮೋದ್ಧಾರಕರ ಭಾರವನ್ನು ಕಡಿಮೆಮಾಡುವ ಸಲುವಾಗಿಯೂ ಧರ್ಮದ ಸಂಪಾದನೆಗಾಗಿಯೂ, ಲೌಕಿಕವಾದ ವ್ಯವಹಾರವನ್ನು ನಡೆಸುವ ಸಲುವಾಗಿಯೂ ಮತ್ತು ಜೀವನಯಾತ್ರೆಯನ್ನು ಸಾಗಿಸುವ ಸಲುವಾಗಿಯೂ ಈ ಆಚಾರವನ್ನು ನಾನು ಉಪದೇಶಮಾಡಿದ್ದೇನೆ.*

ಭೂಮ್ಯಂಬ್ವಗ್ನ್ಯನಿಲಾಕಾಶಾ ಭೂತಾನಾಂ ಪಞ್ಚ ಧಾತವಃ ।
ಆಬ್ರಹ್ಮಸ್ಥಾವರಾದೀನಾಂ ಶಾರೀರಾ ಆತ್ಮಸಂಯುತಾಃ ॥೫॥

ಪೃಥಿವೀ, ಜಲ, ಅಗ್ನಿ, ವಾಯು, ಆಕಾಶ–ಈ ಪಂಚಭೂತಗಳೂ ಬ್ರಹ್ಮನಿಂದ ಹಿಡಿದು ವೃಕ್ಷವೇ ಮೊದಲಾದ ಸ್ಥಾವರದವರೆಗಿನ ಸಮಸ್ತ ಪ್ರಾಣಿಗಳಿಗೂ ಮೂಲಕಾರಣಗಳಾಗಿವೆ. ಈ ಕಾರಣದಿಂದ, ಶರೀರದ ದೃಷ್ಟಿ

* ಧರ್ಮಮುದ್ವಾಹತಾ ಧುರಮ್–ಎಂಬ ಪಾಠವೂ ಇದೆ. ಧರ್ಮರೂಪವಾದ ಭಾರವನ್ನು ಹೊತ್ತಿರುವ ನನ್ನಿಂದ–ಎಂದು ಇದರ ಅರ್ಥವಾಗುತ್ತದೆ.

ಯಿಂದ ಎಲ್ಲವೂ ಪಂಚಭೂತಾತ್ಮಕವಾಗಿಯೇ ಇದ್ದು ಸರ್ವಸಮಾನವಾಗಿವೆ–ಅಂತೆಯೇ ಎಲ್ಲ ಪ್ರಾಣಿಗಳಲ್ಲಿಯೂ ಒಬ್ಬನೇ ಪರಮಾತ್ಮನಿದ್ದಾನೆ.

ವೇದೇನ ನಾಮರೂಪಾಣಿ ವಿಷಮಾಣಿ ಸಮೇಷ್ವಪಿ ।
ಧಾತುಷೂದ್ಧವ ಕಲ್ಪ್ಯನ್ತೇ ಏತೇಷಾಂ ಸ್ವಾರ್ಥಸಿದ್ಧಯೇ ॥೬॥

ಪ್ರಿಯಸಖನೇ! ಉದ್ಧವ! ಪಂಚಭೂತಗಳು ಸಮಸ್ತಪ್ರಾಣಿಗಳಲ್ಲಿಯೂ ಸಮಾನವಾಗಿದ್ದರೂ ವೇದದಲ್ಲಿ ಪ್ರತ್ಯೇಕ-ಪ್ರತ್ಯೇಕವಾಗಿ ಮನುಷ್ಯರನ್ನು ಬ್ರಾಹ್ಮಣ-ಕ್ಷತ್ರಿಯ- ವೈಶ್ಯ–ಶೂದ್ರ–ಮುಂತಾಗಿ ಹೆಸರಿಸಿದೆ. ಈ ನಾಲ್ಕು ವರ್ಗದವರಲ್ಲಿಯೂ ಪಂಚಭೂತಗಳು ಸಮಾನವಾಗಿರುವುದು ನಿಶ್ಚಯ. ಆದರೆ ಈ ನಾಲ್ವರಲ್ಲಿಯೂ ವಾಸನಾಮೂಲಕವಾದ ಪ್ರವೃತ್ತಿಗಳು ಬೇರೆ-ಬೇರೆಯಾಗಿರುತ್ತವೆ. ಆ ಪ್ರವೃತ್ತಿಗಳು ಶುದ್ಧವಾಗಿರಬಹುದು ಅಥವಾ ಅಶುದ್ಧವಾಗಿರಬಹುದು. ಅಶುದ್ಧವಾದ ಪ್ರವೃತ್ತಿಗಳನ್ನು ತಡೆಯುವ ಸಲುವಾಗಿ, ಸಂಕೋಚಗೊಳಿಸುವ ಸಲುವಾಗಿ ವಿಧಿ-ನಿಷೇಧಗಳೂ ಗುಣ-ದೋಷಗಳೂ ಹೇಳಲ್ಪಟ್ಟಿವೆ. ಅಶುದ್ಧವಾದ ಪ್ರವೃತ್ತಿಗಳನ್ನು ತಡೆಯುವುದರಿಂದ ಶುದ್ಧವಾದ ಪ್ರವೃತ್ತಿಗಳನ್ನು ಪ್ರೋತ್ಸಾಹಿಸುವುದರಿಂದ ಮನುಷ್ಯರಿಗೆ ಸ್ವಾರ್ಥಸಿದ್ಧಿಯಾಗಲೆಂಬುದೇ (ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ಪುರುಷಾರ್ಥಗಳು ಸಿದ್ಧಿಗಳು ಉಂಟಾಗಲೆಂಬುದೇ) ವೇದದ ಆಶಯವಾಗಿವೆ.

ದೇಶಕಾಲಾದಿಭಾವಾನಾಂ ವಸ್ತೂನಾಂ ಮಮ ಸತ್ತಮ ।
ಗುಣದೋಷೌ ವಿಧೀಯೇತೇ ನಿಯಮಾರ್ಥಂ ಹಿ ಕರ್ಮಣಾಮ್॥೭॥

ಕಾಮ್ಯಕರ್ಮಗಳಲ್ಲಿ ಮನುಷ್ಯರಿಗೆ ಸ್ವೇಚ್ಛಾಪ್ರವೃತ್ತಿಯುಂಟಾಗಬಾರದೆಂಬ ಮರ್ಯಾದೆಯನ್ನು ಮೀರಬಾರದೆಂಬ ಕಾರಣದಿಂದ ನಾನು ದೇಶ, ಕಾಲ, ಫಲ, ಅಧಿಕಾರ, ಸಂಗ್ರಹಯೋಗ್ಯವಾದ ಸಾಮಗ್ರಿಗಳನ್ನೂ–ಇವುಗಳಲ್ಲಿಯೂ ವಿಧಿ-ನಿಷೇಧಗಳನ್ನೂ ಗುಣ-ದೋಷಗಳನ್ನೂ ಕಲ್ಪಿಸಿದ್ದೇನೆ.

ಅಕೃಷ್ಣಸಾರೋ ದೇಶಾನಾಮಬ್ರಹ್ಮಣ್ಯೋಽಶುಚಿರ್ಭವೇತ್ ।
ಕೃಷ್ಣಸಾರೋಽಪ್ಯಸೌವೀರಕೀಕಟಾಸಂಸ್ಕೃತೇರಿಣಮ್ ॥೮॥

ದೇಶಗಳಲ್ಲಿ ಕೃಷ್ಣಸಾರಮೃಗವಿಲ್ಲದ ದೇಶವು ಅಪವಿತ್ರವಾದದ್ದು. ಯಜ್ಞಾದಿ ಕರ್ಮಗಳಿಗೆ ಅಯೋಗ್ಯವಾದುದು. ಅಂತೆಯೇ ಕೃಷ್ಣಭಕ್ತರಿಲ್ಲದ ದೇಶವೂ ಅಪವಿತ್ರವಾದುದು. ಯಜ್ಞಾದಿಕರ್ಮಗಳಿಗೆ ಅಯೋಗ್ಯವಾದುದು. ಕಪ್ಪುಜಿಂಕೆಗಳಿದ್ದರೂ ಸತ್ಪುರುಷರಿಲ್ಲದ ಕೀಕಟದೇಶವು ಕರ್ಮಾನುಷ್ಠಾನಗಳಿಗೆ ಶುದ್ಧವಾದ ಪ್ರದೇಶವಲ್ಲ. ಅಸಂಸ್ಕೃತವಾದ ಮ್ಲೇಚ್ಛರಿರುವ ದೇಶವೂ, ಚೌಳುಭೂಮಿಯೂ ಕರ್ಮಮಾಡಲು ಯೋಗ್ಯವಾದ ಭೂಮಿಯಲ್ಲ.

ಕರ್ಮಣ್ಯೋ ಗುಣವಾನ್ಕಾಲೋ ದ್ರವ್ಯತಃ ಸ್ವತ ಏವ ವಾ ।
ಯತೋ ನಿವರ್ತತೇ ಕರ್ಮ ಸ ದೋಷೋಽಕರ್ಮಕಃ ಸ್ಮೃತಃ ॥೯॥

ಯಾವ ಕಾಲದಲ್ಲಿ ಕರ್ಮಮಾಡಲು ಯೋಗ್ಯವಾದ ಸಾಮಗ್ರಿಗಳು ಪ್ರಯತ್ನವಿಲ್ಲದೆಯೇ ತಾವೇತಾವಾಗಿ ಯದೃಚ್ಛೆಯಿಂದ ಸಿಕ್ಕುವುವೋ ಆ ಕಾಲವೇ ಕರ್ಮಾನುಷ್ಠಾನಕ್ಕೆ ಶ್ರೇಷ್ಠವಾದ ಕಾಲವು. ಕರ್ಮಾನುಷ್ಠಾನಕ್ಕೆ ಸಮಸ್ತಸಾಮಗ್ರಿಗಳನ್ನು ಸಂಗ್ರಹಿಸಿಕೊಂಡಿದ್ದರೂ ಆಶೌಚದ ಕಾರಣ ದಿಂದಲೋ ಅರಾಜಕತೆಯ ಕಾರಣದಿಂದಲೋ ಕರ್ಮವು ನಿಂತುಹೋದರೆ ಆ ಕಾಲವನ್ನು ಕರ್ಮಾನುಷ್ಠಾನಕ್ಕೆ ಅಯೋಗ್ಯವಾದ ಕಾಲವೆಂದು ತಿಳಿಯಬೇಕು. ಅದನ್ನು ದೋಷಯುಕ್ತವಾದ ಕಾಲವೆಂದು ಭಾವಿಸಬೇಕು.

ದ್ರವ್ಯಸ್ಯ ಶುದ್ಧ್ಯಶುದ್ಧೀ ಚ ದ್ರವ್ಯೇಣ ವಚನೇನ ಚ ।
ಸಂಸ್ಕಾರೇಣಾಥ ಕಾಲೇನ ಮಹತ್ತ್ವಾಲ್ಪತಯಾಥವಾ ॥೧೦॥

ಶಕ್ತ್ಯಾಶಕ್ತ್ಯಾಥವಾ ಬುದ್ಧ್ಯಾ ಸಮೃದ್ಧ್ಯಾ ಚ ಯದಾತ್ಮನೇ ।
ಅಘಂ ಕುರ್ವನ್ತಿ ಹಿ ಯಥಾ ದೇಶಾವಸ್ಥಾನುಸಾರತಃ ॥೧೧॥

ಪದಾರ್ಥಗಳ ಶುದ್ಧಿ-ಅಶುದ್ಧಿಗಳು ದ್ರವ್ಯ-ವಚನ-ಸಂಸ್ಕಾರ-ಕಾಲ-ಮಹತ್ವ-ಅಲ್ಪತ್ವ–ಇತ್ಯಾದಿಗಳಿಂದಲೂ ಸಂಭವಿಸುತ್ತವೆ. (ವಸ್ತ್ರಾದಿಗಳು ನೀರಿನಿಂದ ಶುದ್ಧವಾಗುತ್ತವೆ. ಪಾತ್ರೆಗಳು ಹುಣಸೇಹಣ್ಣಿನೊಡನೆ ಬೆರೆಸಿದ ನೀರಿನಿಂದ ಶುದ್ಧವಾಗುತ್ತವೆ. ಗೋಮೂತ್ರದ ಸೇವನೆಯಿಂದ ಮನುಷ್ಯನು ಶುದ್ಧನಾಗುತ್ತಾನೆ. ಆದರೆ ಮನುಷ್ಯಮೂತ್ರದ ಸ್ಪರ್ಶದಿಂದಲೇ ಅಶುದ್ಧ

ನಾಗುತ್ತಾನೆ. ಒಂದು ವಸ್ತುವು ಶುದ್ಧವಾಗಿದೆಯೋ ಅಶುದ್ಧವಾಗಿದೆಯೋ–ಎಂಬ ಸಂದೇಹವುಂಟಾದಾಗ ಪೂರ್ವಗ್ರಹರಹಿತನಾಗಿ ಧರ್ಮೈಕನಿಷ್ಠನಾದ ಶ್ರೋತ್ರಿಯನಾದ ಬ್ರಾಹ್ಮಣನು ಶುದ್ಧವೆಂದು ಹೇಳಿದರೆ ಅದು ಶುದ್ಧವಾಗುತ್ತದೆ. ಅಶುದ್ಧವೆಂದು ಹೇಳಿದರೆ ಅಶುದ್ಧವೆಂದು ಭಾವಿಸಬೇಕು. ಪುಷ್ಪಗಳು ನೀರನ್ನು ಚಿಮುಕಿಸುವುದರಿಂದ ಶುದ್ಧವಾಗುತ್ತವೆ. ಮೂಸಿ ನೋಡುವುದರಿಂದ ಅಶುದ್ಧವಾಗುತ್ತವೆ. ಪೂಜೆಗೆ ಯೋಗ್ಯವಾಗುವುದಿಲ್ಲ. ಆಗ ತಾನೇ ಮಾಡಿದ ಅನ್ನವು ಶುದ್ಧವಾದದ್ದು. ತಂಗಳನ್ನ ಅಶುದ್ಧ. ದೇವರ ನೈವೇದ್ಯಕ್ಕೆ ಯೋಗ್ಯವಾಗುವುದಿಲ್ಲ. ದೊಡ್ಡ-ದೊಡ್ಡ ಸರೋವರಗಳ ಮತ್ತು ನದಿಗಳ ನೀರು ಯಾವಾಗಲೂ ಶುದ್ಧವಾಗಿರುತ್ತದೆ. ಅದಕ್ಕೆ ಸ್ಪರ್ಶದೋಷವಿಲ್ಲ. ಹಳ್ಳ-ಕೊಳ್ಳಗಳ ನೀರು ಅಶುದ್ಧವಾಗಿರುತ್ತದೆ. ಅದಕ್ಕೆ ಸ್ಪರ್ಶದೋಷವುಂಟು.)

ಶಕ್ತಿ, ಅಶಕ್ತಿ, ಬುದ್ಧಿ ಮತ್ತು ವೈಭವ–ಈ ಕಾರಣಗಳಿಂದಲೂ ಪವಿತ್ರತೆ ಅಥವಾ ಅಪವಿತ್ರತೆಗಳು ಉಂಟಾಗುತ್ತವೆ. ಇವೆಲ್ಲವೂ ದೇಶ, ಸ್ಥಾನ, ಬಾಲ್ಯ-ಯೌವನ-ವೃದ್ಧಾಪ್ಯ ಇತ್ಯಾದಿ ಅವಸ್ಥೆಗಳು ಇವುಗಳ ಅನುಸಾರವಾಗಿಯೇ ಆತ್ಮನಿಗೆ ಅಶುಚಿತ್ವವನ್ನೂ ತನ್ಮೂಲಕವಾಗಿ ಪಾಪ ವನ್ನೂ ಉಂಟುಮಾಡುತ್ತವೆ.

(ಧನೀ-ದರಿದ್ರ, ಬಲಿಷ್ಠ-ದುರ್ಬಲ, ಬುದ್ಧಿವಂತ-ಮೂರ್ಖ, ಉಪ ದ್ರವದಿಂದ ಕೂಡಿರುವವನು-ಸುಖವಾಗಿರುವವನು, ತರುಣ-ವೃದ್ಧ ಈ ಭೇದ ಗಳಿಂದಲೂ ಶುದ್ಧತೆ ಮತ್ತು ಅಶುದ್ಧತೆ–ಎಂಬುದು ವಿವೇಚಿಸಲ್ಪಡುತ್ತದೆ. ಶಕ್ತಿ-ಅಶಕ್ತಿ.: ಗ್ರಹಣಕಾಲಗಳು, ಕ್ರೂರವಾದ ಕಾಲ ಅಥವಾ ಅಶುಭದಿಂದ ಕೂಡಿರುವ ಕಾಲ. ಶಕ್ತನಾಗಿರುವವನು ಗ್ರಹಣಸಮಯಕ್ಕೆ ಮೊದಲು ಹನ್ನೆರಡು ತಾಸುಗಳಿಂದ ಉಪವಾಸವಿದ್ದು ಗ್ರಹಣಕಾಲದಲ್ಲಿ ಸ್ನಾನಮಾಡಿ ಜಪಾದಿಗಳನ್ನು ಮಾಡಿ ದಾನಗಳನ್ನು ಕೊಟ್ಟು ಶುದ್ಧನಾಗಬೇಕು. ಆದರೆ ಅಶಕ್ತನಿಗೆ, ರೋಗಿಗೆ–ಈ ನಿಯಮವು ಅನ್ವಯಿಸುವುದಿಲ್ಲ. ಅಂತಹವರು ಕೇವಲ ಮಂತ್ರಸ್ನಾನದಿಂದಲೇ ಶುದ್ಧರಾಗುತ್ತಾರೆ. ಜ್ಞಾನ-ಅಜ್ಞಾನ.: ಮೃತನಾಗಿ ಹತ್ತು ದಿವಸಗಳ ಒಳಗೆ ತಿಳಿದುಬಿಟ್ಟರೆ ಜ್ಞಾತಿಯಾದವನು ಪುನಃ ಹತ್ತು ದಿವಸಗಳವರೆಗೆ ಆಶೌಚವಿರಬೇಕು. ಸಾವಿನ ಜ್ಞಾನ

ದಿಂದ ಅಶುದ್ಧಿಯುಂಟಾಗುತ್ತದೆ. ಹತ್ತುದಿವಸಗಳ ಅವಧಿಯಲ್ಲಿ ತಿಳಿಯ ದಿದ್ದರೆ ಕೇವಲ ಸ್ನಾನದಿಂದ ಆಶೌಚವು ಪರಿಹಾರವಾಗುತ್ತದೆ. ಇದು ಅಜ್ಞಾನದಿಂದ ಶುದ್ಧಿ ಎನಿಸುತ್ತದೆ. ದೇಶ-ಕಾಲಗಳನ್ನೂ ಅನುಸರಿಸಿ ಜೀವಾತ್ಮನಿಗೆ ಪಾಪ-ಪುಣ್ಯಗಳು ಸಂಘಟಿಸುತ್ತವೆ. ಧರ್ಮ-ಕರ್ಮಗಳಿಗೆ ರಕ್ಷಣೆಯಿರುವ ದೇಶದಲ್ಲಿ ನಿತ್ಯ-ನೈಮಿತ್ತಿಕಕರ್ಮಗಳನ್ನೂ ಮಾಡದಿದ್ದರೆ, ಅದರಿಂದ ಕರ್ಮಲೋಪದ ಪಾಪವುಂಟಾಗುತ್ತದೆ. ಯಾವ ವಿಧವಾದ ರಕ್ಷಣೆಯೂ ಇಲ್ಲದ ದೇಶದಲ್ಲಿ ನಿತ್ಯಕರ್ಮಗಳನ್ನು ಮಾಡಲು ಸಾಧ್ಯವಾಗದಿದ್ದರೆ ಅದರಿಂದ ದೋಷವು ಸಂಭವಿಸುವುದಿಲ್ಲ. ವೃದ್ಧಾಪ್ಯದಲ್ಲಿ ರೋಗದ ಪರಿಸ್ಥಿತಿಯಲ್ಲಿ ಕರ್ಮಲೋಪವಾದರೆ ಅದರಿಂದ ದೋಷವುಂಟಾಗುವುದಿಲ್ಲ.

ಧಾನ್ಯದಾರ್ವಸ್ಥಿತನ್ತೂನಾಂ ರಸತೈಜಸಚರ್ಮಣಾಮ್ ।
ಕಾಲವಾಯ್ವಗ್ನಿಮೃತ್ತೋಯೈಃ ಪಾರ್ಥಿವಾನಾಂ ಯುತಾಯುತೈಃ ॥೧೨॥

ಧಾನ್ಯಗಳು, ಮರದ ಪಾತ್ರೆಗಳು, ಆನೆಯ ದಂತ, ನೂಲು, ಎಣ್ಣೆ-ತುಪ್ಪವೇ ಮೊದಲಾದ ರಸವಸ್ತುಗಳೂ, ಚಿನ್ನ-ಅಗ್ನಿ–ಇವೇ ಮೊದಲಾದ ತೈಜಸ ಪದಾರ್ಥಗಳೂ, ಹುಲಿ-ಜಿಂಕೆ–ಇವುಗಳ ಚರ್ಮಗಳೂ, ಮಣ್ಣಿನಿಂದ ತಯಾರಿಸಲ್ಪಟ್ಟ ಗಡಿಗೆ-ಇಟ್ಟಿಗೆ ಮುಂತಾದುವೂ ಕ್ರಮವಾಗಿ–ವಾಯುವಿನಿಂದ–ಅಗ್ನಿಯಿಂದ–ನೀರಿನಿಂದ–ಮಣ್ಣಿನಿಂದ ಅಥವಾ ಇವುಗಳ ಮಿಶ್ರಣದಿಂದ ಶುದ್ಧವಾಗುತ್ತವೆ. ದೇಶಕಾಲಾದಿಗಳ ಸಂಘಟನೆಯಿಂದಲೂ ಕೆಲವು ಪದಾರ್ಥಗಳು ಶುದ್ಧವಾಗುತ್ತವೆ. (ವರ್ಷಾಕಾಲದಲ್ಲಿ ನೀರು ತಿಳಿಯಾಗುವಂತೆ.)

ಅಮೇಧ್ಯಲಿಪ್ತಂ ಯದ್ಯೇನ ಗನ್ಧಂ ಲೇಪಂ ವ್ಯಪೋಹತಿ ।
ಭಜತೇ ಪ್ರಕೃತಿಂ ತಸ್ಯ ತಚ್ಛೌಚಂ ತಾವದಿಷ್ಯತೇ ॥೧೩॥

ಬಟ್ಟೆಗಳಾಗಲೀ, ಪಾತ್ರೆಗಳಾಗಲೀ ಇತರ ಯಾವುದೇ ವಸ್ತುವಾಗಲೀ ಕೊಳೆಯಾದಾಗ, ಕಶ್ಮಲವಸ್ತುವಿನಿಂದ ಲೇಪಿಸಲ್ಪಟ್ಟು ದುರ್ಗಂಧವು ಅವುಗಳಿಂದ ಹೊರಸೂಸುತ್ತಿರುವಾಗ, ಯಾವ ವಸ್ತುವಿನಿಂದ (ನೀರು-ಹುಣಸೇಹಣ್ಣು-ಸೀಗೇಪುಡಿ ಮುಂತಾದುವು.) ಕಶ್ಮಲದ ಲೇಪವೂ ದುರ್ವಾಸನೆಯೂ ಹೋಗಿ ಆ ವಸ್ತುವು ತನ್ನ ಪೂರ್ವರೂಪವನ್ನು ತಾಳುವುದೋ ಅಂತಹವೇ ಶುದ್ಧಿಗೊಳಿಸುವ ಪದಾರ್ಥಗಳೆನಿಸುತ್ತವೆ. (ತಾಮ್ರದ ಮತ್ತು ಹಿತ್ತಾಳೆಯ

ಪಾತ್ರೆಗಳಿಗೆ ಹುಣಸೇಹಣ್ಣು ಮತ್ತು ನೀರು ಶುದ್ಧಿಗೊಳಿಸುವ ವಸ್ತುಗಳಾಗುತ್ತವೆ. ಚಿನ್ನ-ಬೆಳ್ಳಿಗಳಿಗೆ ಬೆಂಕಿಯು ಶುದ್ಧಗೊಳಿಸುವ ವಸ್ತು. ಎಣ್ಣೆಯ ಲೇಪಕ್ಕೆ ಸೀಗೇಪುಡಿಯು ಶುದ್ಧಗೊಳಿಸುವ ವಸ್ತುವಾಗುತ್ತದೆ. ಬೆಳ್ಳಿಯ ಪಾತ್ರೆಗಳಿಗೆ ಸುಣ್ಣವು ಶುದ್ಧಗೊಳಿಸುವ ವಸ್ತುವಾಗುತ್ತದೆ–ಇತ್ಯಾದಿ.)

ಸ್ನಾನದಾನತಪೋಽವಸ್ಥಾವೀರ್ಯಸಂಸ್ಕಾರಕರ್ಮಭಿಃ ।
ಮತ್ಸ್ಮೃತ್ಯಾ ಚಾತ್ಮನಃ ಶೌಚಂ ಶುದ್ಧಃ ಕರ್ಮಾಚರೇದ್ದ್ವಿಜಃ ॥೧೪॥

ಮನುಷ್ಯನು ತನ್ನ ಶುದ್ಧಿಯನ್ನು ಸ್ನಾನದಿಂದಲೂ, ದಾನಮಾಡುವುದರಿಂದಲೂ, ತಪಸ್ಸಿನಿಂದಲೂ, ವಯಸ್ಸಿನಿಂದಲೂ, ಸ್ವಶಕ್ತಿಯಿಂದಲೂ ಉಪನಯನಾದಿ ಸಂಸ್ಕಾರಗಳಿಂದಲೂ, ನಿತ್ಯ-ನೈಮಿತ್ತಿಕಕರ್ಮಗಳಿಂದಲೂ, ಎಲ್ಲಕ್ಕಿಂತಲೂ ಮಿಗಿಲಾಗಿ ಮತ್ತು ಮುಖ್ಯವಾಗಿ ನನ್ನನ್ನು ಸತತವಾಗಿ ಸ್ಮರಿಸಿಕೊಳ್ಳುವುದರಿಂದಲೂ ಮಾಡಿಕೊಳ್ಳಬಹುದು. ಹೀಗೆ ಪರಿಶುದ್ಧರಾದ ನಂತರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ವಿಹಿತವಾದ ಕರ್ಮಗಳನ್ನು ಆಚರಿಸಬೇಕು.*

ಮನ್ತ್ರಸ್ಯ ಚ ಪರಿಜ್ಞಾನಂ ಕರ್ಮಶುದ್ಧಿರ್ಮದರ್ಪಣಮ್ ।
ಧರ್ಮಃ ಸಮ್ಪದ್ಯತೇ ಷಡ್ಭಿರಧರ್ಮಸ್ತು ವಿಪರ್ಯಯಃ ॥೧೫॥

ಮಂತ್ರದ ಪುನಶ್ಚರಣೆಯನ್ನು ಹೇಗೆ ಮಾಡಬೇಕೆಂಬುದನ್ನು ಸದ್ಗುರುವಿನ ಉಪದೇಶದ ಮೂಲಕವಾಗಿ ತಿಳಿಯುವುದೇ ಮಂತ್ರಕ್ಕೆ ಶುದ್ಧಿಯು. ಕರ್ಮದ ಫಲವನ್ನು ನನಗೆ ಅರ್ಪಿಸುವುದೇ ಕರ್ಮದ ಶುದ್ಧಿಯು. ಉದ್ಧವ! ಹೀಗೆ ದೇಶ, ಕಾಲ, ಪದಾರ್ಥ, ಕರ್ತಾ, ಮಂತ್ರ ಮತ್ತು ಕರ್ಮ ಈ ಆರು

---

*ಪುಂಡರೀಕಾಕ್ಷನ ಸ್ಮರಣೆಯಿಂದಲೇ ಅಂತಃಶುದ್ಧಿ ಮತ್ತು ಬಹಿಃಶುದ್ಧಿಯಾಗುವುದೆಂದು ಗರುಡಪುರಾಣದಲ್ಲಿ ಹೇಳಿದೆ.:

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ ।
ಯಃ ಸ್ಮರೇತ್ಪುಣ್ಡರೀಕಾಕ್ಷಂ ಸ ಬಾಹ್ಯಾಭ್ಯನ್ತರಃ ಶುಚಿಃ ॥

ಅಪವಿತ್ರನಾಗಿರಲಿ ; ಪವಿತ್ರನಾಗಿರಲಿ ; ಸಮಸ್ತವಾದ ದುರವಸ್ಥೆಯನ್ನೂ ಹೊಂದಿರಲಿ ; ಯಾವನು ಪುಂಡರೀಕಾಕ್ಷನನ್ನು ಸ್ಮರಿಸುವನೋ ಅಂತಹವನು ಅಂತಃಶುದ್ಧಿ–ಬಹಿಃಶುದ್ಧಿಯುಳ್ಳವನಾಗುತ್ತಾನೆ.

ಶುದ್ಧಿಗೊಳ್ಳುವುದರಿಂದ ಧರ್ಮವೂ ಇವು ಅಶುದ್ಧವಾಗಿದ್ದರೆ ಅಧರ್ಮವೂ ಉಂಟಾಗುತ್ತದೆ.

ಕ್ವಚಿದ್ಗುಣೋಽಪಿ ದೋಷಃ ಸ್ಯಾದ್ದೋಷೋಽಪಿ ವಿಧಿನಾ ಗುಣಃ ।
ಗುಣದೋಷಾರ್ಥನಿಯಮಸ್ತದ್ಭಿದಾಮೇವ ಬಾಧತೇ ॥೧೬॥

ಕೆಲವು ಸಂದರ್ಭದಲ್ಲಿ ಗುಣವೂ ದೋಷವಾಗಿ ಪರಿಣಮಿಸುತ್ತದೆ. ದೋಷವೂ ಕೂಡ ವೇದದ ನಿರ್ಣಯದಂತೆ ಗುಣವಾಗುವುದುಂಟು. ಯುದ್ಧವು ಕ್ಷತ್ರಿಯನಿಗೆ ಧರ್ಮ. ಬ್ರಾಹ್ಮಣನಿಗೆ ಅಧರ್ಮ. ಸ್ವಸ್ತ್ರೀಸಂಗವು ಗೃಹಸ್ಥನಿಗೆ ಧರ್ಮ. ಸಂನ್ಯಾಸಾಶ್ರಮಿಗೆ ಅಧರ್ಮ. ಕುಟುಂಬತ್ಯಾಗವು ಗೃಹಸ್ಥನಿಗೆ ಅಧರ್ಮ. ಮುಮುಕ್ಷುವಿಗೆ ಧರ್ಮ. ವಿರಕ್ತಿಯು ಬಂದೊಡನೆಯೇ ಕುಟುಂಬವನ್ನು ತ್ಯಜಿಸಿ ಹೊರಟುಬಿಡಬೇಕು. ಪ್ರತಿಗ್ರಹವು ಆಪತ್ಕಾಲದಲ್ಲಿ ಧರ್ಮ. ಆಪತ್ಕಾಲವಲ್ಲದಿದ್ದಾಗ ಅಧರ್ಮ. ವ್ಯಾಪಾರವು ವೈಶ್ಯನಿಗೆ ಧರ್ಮವಾಗಿದ್ದರೆ ಬ್ರಾಹ್ಮಣನಿಗೆ ಅದು ಅಧರ್ಮ. ಹೀಗೆ ಒಂದೇ ಕ್ರಿಯೆಯು ಕೆಲವರಿಗೆ ಧರ್ಮವಾಗಿಯೂ ಕೆಲವರಿಗೆ ಅಧರ್ಮವಾಗಿಯೂ ಪರಿಣಮಿಸುವುದರಿಂದ ಗುಣ-ದೋಷಗಳ ವಾಸ್ತವಿಕತೆಯನ್ನೇ ಖಂಡಿಸಿದಂತಾಗುತ್ತದೆ. ಗುಣ-ದೋಷಗಳ ಈ ಭೇದವು ಕಲ್ಪಿತವಾದದ್ದೆಂದು ನಿಶ್ಚಿತವಾಗುತ್ತದೆ. ಯಾವುದೂ ಯಾವಾಗಲೂ ಗುಣವಾಗಿಯೇ ಇರುವುದಿಲ್ಲ. ಯಾವುದೂ ಯಾವಾಗಲೂ ದೋಷವಾಗಿಯೂ ಇರುವುದಿಲ್ಲ. ದೇಶ-ಕಾಲ-ಕರ್ಮಗಳಿಗೆ ಅನುಸಾರವಾಗಿ ಧರ್ಮಾಧರ್ಮಗಳು ಅದಲುಬದಲಾಗುತ್ತಿರುತ್ತವೆ.

ಸಮಾನಕರ್ಮಾಚರಣಂ ಪತಿತಾನಾಂ ನ ಪಾತಕಮ್ ।
ಔತ್ಪತ್ತಿಕೋ ಗುಣಃ ಸಙ್ಗೋ ನ ಶಯಾನಃ ಪತತ್ಯಧಃ ॥೧೭॥

ಪತಿತನಲ್ಲದವನೂ ಪತಿತನಾದವನೂ ಏಕಮುಖವಾದ ಕುತ್ಸಿತಕರ್ಮವನ್ನು ಆಚರಿಸಿದರೆ ಪತಿತನಾಗದೇ ಇದ್ದವನು ಪತಿತನಾಗುತ್ತಾನೆ. ಪತಿತನಾಗಿದ್ದವನು ಮಹಾಪಾತಕಿ ಎನಿಸಬಹುದು. ಮಹಾಪಾತಕಿಯಾದ ನಂತರವೂ ಅದೇ ಪಾಪಕರ್ಮವನ್ನು ಮುಂದುವರಿಸಿದರೆ ಪಾಪದಲ್ಲಿಯೇ ಮುಳುಗಿಹೋಗಿರುವ ಅವನ ಬಳಿಯಲ್ಲಿ ಪುನಃ ಪುನಃ ಪಾಪವು ಸಂಗ್ರಹವಾಗುವುದಿಲ್ಲ. ಪಾಪಕ್ಕೆ ಅವನಲ್ಲಿ ಪ್ರವೇಶಿಸುವ ಅವಕಾಶವೇ ಇರುವು

ದಿಲ್ಲ. ತುಂಬಿತುಳುಕುತ್ತಿರುತ್ತದೆ. ಹತ್ತಾರು ಕೊಲೆಗಳನ್ನು ಮಾಡಿದವನು ಹತ್ತಾರು ಕೊಲೆಗಳನ್ನು ಮಾಡಿದುದಕ್ಕಾಗಿ ಏಕಕಾಲದಲ್ಲಿ ಶಿಕ್ಷೆಯನ್ನು ಅನುಭವಿಸುವಂತೆ ಮಹಾಪಾತಕಿಯು ಶಿಕ್ಷೆಯನ್ನು ಅನುಭವಿಸುತ್ತಾನೆ. ಸುರಾಪಾನಮಾಡಿ ಪತಿತನಾಗಿರುವ ಬ್ರಾಹ್ಮಣನಿಗೆ ಪುನಃ ಪುನಃ ಸುರಾಪಾನ ಮಾಡುವುದರಿಂದ ವೈಪರೀತ್ಯವೇನೂ ಆಗುವುದಿಲ್ಲ. ಪತಿತನಾದುದಕ್ಕೆ ತಕ್ಕುದಾದ ಶಿಕ್ಷೆಯನ್ನು ಅನುಭವಿಸುತ್ತಾನೆ. ಪತಿತನಾಗದಿರುವವನು ಸುರಾಪಾನ ಮಾಡಿದರೆ ಪತಿತನಾಗುತ್ತಾನೆ. ಒಮ್ಮೆ ಪತಿತನಾದನಂತರ ಪುನಃ ಪುನಃ ಆ ಪಾಪಕಾರ್ಯವನ್ನು ಮಾಡುತ್ತಲೇ ಇರುತ್ತಾನೆ. ಇದು ಅವನ ಸ್ವಭಾವವೇ ಆಗಿಬಿಡುತ್ತದೆ. ಗೃಹಸ್ಥನಾದವನಿಗೆ ಪ್ರಜಾಸಂಪತ್ತನ್ನು ಪಡೆಯಬೇಕಾದ ಅವಶ್ಯಕತೆ ಇರುವುದರಿಂದ ಸ್ವಸ್ತ್ರೀಸಂಗವೆಂಬುದು ಧರ್ಮವಾಗಿ ಪರಿಣಮಿಸುತ್ತದೆ. ಅದೇ ಸಂನ್ಯಾಸಿಗೆ ಸ್ತ್ರೀಸಂಗವು ಮಹಾಪಾಪಕರ. ಸಂನ್ಯಾಸಿಯಾದವನು ಒಮ್ಮೆ ಸ್ತ್ರೀಸಂಗಮಾಡಿದರೂ ಭ್ರಷ್ಟನಾಗಿಬಿಡುತ್ತಾನೆ. ಪತಿತನಾಗುತ್ತಾನೆ. ನೆಲದ ಮೇಲೆಯೇ ಮಲಗಿರುವವನಿಗೆ ಪುನಃ ಕೆಳಕ್ಕೆ ಬೀಳುವ ಭಯವೇ ಇರುವುದಿಲ್ಲವಲ್ಲವೇ?

ಯತೋ ಯತೋ ನಿವರ್ತೇತ ವಿಮುಚ್ಯೇತ ತತಸ್ತತಃ ।
ಏಷ ಧರ್ಮೋ ನೃಣಾಂ ಕ್ಷೇಮಃ ಶೋಕಮೋಹಭಯಾಪಹಃ ॥೧೮॥

ಆದಕಾರಣ ಗುಣ-ದೋಷಗಳನ್ನು ಹೇಳುವ ವೇದವಾಕ್ಯಗಳಿಗೆ ಸ್ವಾಭಾವಿಕವಾದ ಪ್ರವೃತ್ತಿಗೆ ಸಂಕೋಚವನ್ನು ಉಂಟುಮಾಡುವ ಮೂಲಕವಾಗಿ ನಿವೃತ್ತಿಮಾರ್ಗವನ್ನು ಅವಲಂಬಿಸುವಂತೆ ಆಗಬೇಕೆಂಬುದರಲ್ಲಿಯೇ ತಾತ್ಪರ್ಯ. ಮನುಷ್ಯನು ಕರ್ಮಮಾರ್ಗದಿಂದ ಎಷ್ಟೆಷ್ಟು ದೂರ ಹಿಂದಕ್ಕೆ ಸರಿಯುವನೋ ಅಷ್ಟಷ್ಟು ದೂರ ನಿವೃತ್ತಿಮಾರ್ಗದಲ್ಲಿ ಮುನ್ನಡೆಯುತ್ತಾನೆ. ಬಂಧನಗಳೆಲ್ಲವೂ ಒಂದೊಂದಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಶೋಕ-ಮೋಹ-ಭಯಗಳನ್ನು ಹೋಗಲಾಡಿಸತಕ್ಕ ಈ ನಿವೃತ್ತಿಧರ್ಮವೇ ಮನುಷ್ಯರಿಗೆ ಕ್ಷೇಮಕರವಾದುದು.

ವಿಷಯೇಷು ಗುಣಾಧ್ಯಾಸಾತ್ ಪುಂಸಃ ಸಙ್ಗಸ್ತತೋ ಭವೇತ್ ।
ಸಙ್ಗಾತ್ತತ್ರ ಭವೇತ್ಕಾಮಃ ಕಾಮಾದೇವ ಕಲಿರ್ನೃಣಾಮ್ ॥೧೯॥

ಕಲೇರ್ದುರ್ವಿಷಹಃ ಕ್ರೋಧಸ್ತಮಸ್ತಮನುವರ್ತತೇ ।
ತಮಸಾ ಗ್ರಸ್ಯತೇ ಪುಂಸಶ್ಚೇತನಾ ವ್ಯಾಪಿನೀ ದ್ರುತಮ್ ॥೨೦॥

ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳಲ್ಲಿ ಗುಣವಿದೆಯೆಂಬ (ಸುಖವಿರುವುದೆಂಬ) ಭ್ರಮೆಯಿಂದ ಜನರಿಗೆ ಅವುಗಳಲ್ಲಿ ಆಸಕ್ತಿಯುಂಟಾಗುತ್ತದೆ. ಆಸಕ್ತಿಯಿಂದಾಗಿ ಅವುಗಳನ್ನು ಉಪಭೋಗಿಸಬೇಕೆಂಬ ಅಪೇಕ್ಷೆಯುಂಟಾಗುತ್ತದೆ. ಅಂತಹ ಅಪೇಕ್ಷೆಗೆ ಅಡ್ಡಿಯುಂಟಾದರೆ ಅಪೇಕ್ಷೆಯ ಕಾರಣದಿಂದಲೇ ಮನುಷ್ಯರಲ್ಲಿ ಪರಸ್ಪರವಾಗಿ ಕಲಹವುಂಟಾಗುತ್ತದೆ. ಕಲಹದಿಂದಾಗಿ ತಡೆದುಕೊಳ್ಳಲು ಅಸಾಧ್ಯವಾದ ಕೋಪವು ಬರುತ್ತದೆ. ಕೋಪದಿಂದಾಗಿ ಯುಕ್ತಾಯುಕ್ತ ವಿವೇಚನೆಯೇ ಹೊರಟುಹೋಗಿ ಮನಸ್ಸನ್ನು ಅಂಧಕಾರವು ಆವರಿಸಿಬಿಡುತ್ತದೆ.

ತಯಾ ವಿರಹಿತಃ ಸಾಧೋ ಜನ್ತುಃ ಶೂನ್ಯಾಯ ಕಲ್ಪತೇ ।
ತತೋಽಸ್ಯ ಸ್ವಾರ್ಥವಿಭ್ರಂಶೋ ಮೂರ್ಚ್ಛಿತಸ್ಯ ಮೃತಸ್ಯ ಚ ॥೨೧॥

ಕಾರ್ಯಾಕಾರ್ಯವಿವೇಚನೆಯು ಹೋದನಂತರ ಮನುಷ್ಯನು ಸೊನ್ನೆಯಾಗಿಬಿಡುತ್ತಾನೆ. ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಮೃತನಾದವನಿಗೆ ಹೇಗೆ ಪುರುಷಾರ್ಥಗಳಿಲ್ಲವೋ ಅದೇರೀತಿಯಲ್ಲಿ ಕ್ರೋಧಮೂರ್ಛಿತನಾಗಿ ವಿವೇಕವನ್ನು ಕಳೆದುಕೊಂಡು ನಿಷ್ಪ್ರಯೋಜಕನಾದವನಿಗೆ ಯಾವ ಪುರುಷಾರ್ಥವೂ ಲಭಿಸುವುದಿಲ್ಲ. ಪುರುಷಾರ್ಥಗಳಿಂದ ಭ್ರಷ್ಟನಾಗುತ್ತಾನೆ.*

---

* ಶ್ರೀಕೃಷ್ಣನು ಗೀತೆಯಲ್ಲಿ.:

ಧ್ಯಾಯತೋ ವಿಷಯಾನ್ಪುಂಸಃ ಸಙ್ಗಸ್ತೇಷೂಪಜಾಯತೇ ।
ಸಙ್ಗಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧೋಽಭಿಜಾಯತೇ॥೬೨॥

ಕ್ರೋಧಾದ್ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿವಿಭ್ರಮಃ ।
ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ ॥೬೩॥

ಅಧ್ಯಾಯ-೨

ವಿಷಯಗಳನ್ನು ಕುರಿತು ಚಿಂತಿಸುವವನಿಗೆ ಅವುಗಳಲ್ಲಿ ಆಸಕ್ತಿಯುಂಟಾಗುತ್ತದೆ. ಆಸಕ್ತಿಯಿಂದ ವಿಷಯಗಳನ್ನು ಉಪಭೋಗಿಸುವ ಬಯಕೆಯುಂಟಾಗುತ್ತದೆ.

ವಿಷಯಾಭಿನಿವೇಶೇನ ನಾತ್ಮಾನಂ ವೇದ ನಾಪರಮ್ ।
ವೃಕ್ಷಜೀವಿಕಯಾ ಜೀವನ್ವ್ಯರ್ಥಂ ಭಸ್ತ್ರೇವ ಯಃ ಶ್ವಸನ್ ॥೨೨॥

ಇಂದ್ರಿಯವಿಷಯಗಳನ್ನೇ ಸದಾಕಾಲದಲ್ಲಿಯೂ ಚಿಂತಿಸುವುದರಿಂದ ಮನುಷ್ಯನು ಇಂದ್ರಿಯವಿಷಯಸ್ವರೂಪನೇ ಆಗಿಬಿಡುತ್ತಾನೆ. ತಾನು ಯಾರು? ತನ್ನ ಕರ್ತವ್ಯವೇನು?–ಎಂಬುದೊಂದೂ ಅವನಿಗೆ ತಿಳಿದಿರುವುದೇ ಇಲ್ಲ. ಸರ್ವದಾ ಕಾಮೋಪಭೋಗಗಳಲ್ಲಿಯೇ ಆಸಕ್ತನಾಗಿರುವ ಅವನ ಜೀವ ನವು ವೃಕ್ಷದಂತೆ ಜಡವಾಗಿರುತ್ತದೆ. ಕಮ್ಮಾರನ ತಿದಿಯಂತೆ ಅಂತಹವನು ವ್ಯರ್ಥವಾಗಿ ಉಸಿರಾಡುತ್ತಿರುತ್ತಾನೆ. ಅಂತಹವನಿಂದ ಯಾವ ಪ್ರಯೋಜನವೂ ಇಲ್ಲ.

ಫಲಶ್ರುತಿರಿಯಂ ನೃಣಾಂ ನ ಶ್ರೇಯೋ ರೋಚನಂ ಪರಮ್ ।
ಶ್ರೇಯೋವಿವಕ್ಷಯಾ ಪ್ರೋಕ್ತಂ ಯಥಾ ಭೈಷಜ್ಯರೋಚನಮ್ ॥೨೩॥

ಇಂತಹ ಕರ್ಮವನ್ನು ಮಾಡಿದರೆ ಇಂತಹ ಫಲವು ಸಿದ್ಧಿಸುತ್ತದೆ. 'ವಾಜಪೇಯಂ ಸ್ವರ್ಗಕಾಮೋ ಯಜೇತ'–ಮುಂತಾದ ವೇದದ ಫಲ ಶ್ರುತಿಯು ನಿಶ್ಚಯವಾಗಿಯೂ ಪರಮಾರ್ಥರೂಪವಾದ ಶ್ರೇಯಸ್ಸಿಗೆ ಸಾಧಕ ವಲ್ಲದಿದ್ದರೂ ಅಂತಿಮಗುರಿಯಾಗಿ ಅದು ಮನಸ್ಸನ್ನು ಶುದ್ಧಿಗೊಳಿಸುವುದರ ಮೂಲಕ ಪರಮಶ್ರೇಯಸ್ಸಿಗೆ ಸಾಧಕವಾಗುತ್ತದೆ. ಮಗುವಿಗೆ ಔಷಧಿಯನ್ನು ಕುಡಿಸಲು ಹೊರಟ ತಾಯಿಯು 'ಕಂದ! ಕುಡಿಯಪ್ಪ! ನಿನಗೆ ಸಕ್ಕರೆ ಕೊಡ್ತೀನಿ ; ಚೆಂಡುಕೊಡ್ತೀನಿ'–ಮುಂತಾಗಿ ಸವಿಮಾತುಗಳನ್ನಾಡುತ್ತಾ ಔಷಧಿಯನ್ನು ಕುಡಿಸಿ ಮಗುವಿನ ರೋಗಪರಿಹಾರವಾಗಲು ಕಾರಣಳಾಗು ವಂತೆ–ಶ್ರುತಿಯು ಫಲಶ್ರುತಿಗಳ ಮೂಲಕವಾಗಿ ಆತನು ಪುರುಷಾರ್ಥವನ್ನು ಸಾಧಿಸಲು ಅನುವುಮಾಡಿಕೊಡುತ್ತದೆ.*

ಬಯಕೆಗೆ ತಡೆಯುಂಟಾದಲ್ಲಿ ಕೋಪವುಂಟಾಗುತ್ತದೆ. ಕೋಪದಿಂದ ಮೋಹವುಂಟಾಗು ತ್ತದೆ. ಮೋಹದಿಂದ ವಿವೇಚನಾಶಕ್ತಿಯು ನಾಶವಾಗುತ್ತದೆ. ವಿವೇಚನಾಶಕ್ತಿಯು ನಾಶವಾದರೆ (ಬುದ್ಧಿಯು ನಾಶವಾದರೆ) ಅವನು ತಾನೇ ಹಾಳಾಗುತ್ತಾನೆ.

* ತಂದೆಯು ಔಷಧಿಯನ್ನು ಕುಡಿಸುವಾಗ ಮಗನಿಗೆ ಹೇಳುತ್ತಾನೆ : ಪಿಬ ನಿಮ್ಬಂ ಪ್ರದಾಸ್ಯಾಮಿ ಖಲು ತೇ ಖಣ್ಡುಲಡ್ಡುಕಾಮ್ । 'ಮಗು! ಈ ಬೇವಿನ ಕಷಾಯ ವನ್ನು ಕುಡಿ. ಈ ಲಡ್ಡುವನ್ನು ಕೊಡುವೆನು'–ಎಂದು ಆಸೆ ತೋರಿಸಿ ಔಷಧಿಯನ್ನು

ಉತ್ಪತ್ತ್ಯೈವ ಹಿ ಕಾಮೇಷು ಪ್ರಾಣೇಷು ಸ್ವಜನೇಷು ಚ ।
ಆಸಕ್ತಮನಸೋ ಮರ್ತ್ಯಾ ಆತ್ಮನೋಽನರ್ಥಹೇತುಷು ॥೨೪॥

ವಿಷಯಾಸಕ್ತವಾದ ಮನಸ್ಸಿನಿಂದ ಕೂಡಿರುವ ಮನುಷ್ಯರು ತಮ್ಮ ಅನರ್ಥಕ್ಕೆ ಕಾರಣಭೂತವಾದ ಕಾಮೋಪಭೋಗಗಳಲ್ಲಿಯೂ ಪ್ರಾಣಸದೃಶರಾದ ಬಂಧುಗಳಲ್ಲಿಯೂ ಹುಟ್ಟಿದಾಗಿನಿಂದಲೇ ಆಸಕ್ತಿಯುಳ್ಳವರಾಗಿರುತ್ತಾರೆ. (ಹುಟ್ಟುತ್ತಲೇ ಸಂಸಾರವು ಪ್ರಾರಂಭವಾಗಿಬಿಡುತ್ತದೆ.)

ನ ತಾನವಿದುಷಃ ಸ್ವಾರ್ಥಂ ಭ್ರಾಮ್ಯತೋ ವೃಜನಾಧ್ವನಿ ।
ಕಥಂ ಯುಞ್ಜ್ಯಾತ್ ಪುನಸ್ತೇಷು ತಾಂಸ್ತಮೋ ವಿಶತೋ ಬುಧಃ ॥

ಸ್ವರ್ಗಾದಿಫಲಗಳನ್ನು ಫಲಶ್ರುತಿಯಲ್ಲಿ ಹೇಳಿ ಕರ್ತೃಗಳ ಮನಸ್ಸನ್ನು ಶುದ್ಧಗೊಳಿಸಿ, ಪರಮಾರ್ಥಸಾಧನೆಗೆ ಪ್ರೇರಿಸುವುದೇ ವೇದದ ಪರಮೋದ್ದೇಶವಾಗಿರದಿದ್ದರೆ, ಪರಮಸುಖಕರವಾದ ಪುರುಷಾರ್ಥವೇನೆಂಬುದನ್ನೇ ಅರಿಯದೆ ಪಾಪಮಾರ್ಗದಲ್ಲಿ ಬಿದ್ದು ಒದ್ದಾಡುತ್ತಾ ಅಂಧತಮಸ್ಸಿಗೆ (ನರಕಕ್ಕೆ) ಪ್ರವೇಶಿಸುತ್ತಿರುವ ಮನುಷ್ಯರನ್ನು ಜ್ಞಾನಭಂಡಾರವೆನಿಸಿದ ವೇದವು ಪುನಃ ಪ್ರವೃತ್ತಿಮಾರ್ಗಕ್ಕೇಕೆ ಸೆಳೆಯುತ್ತಿದ್ದಿತು? (ವೇದವು ಪ್ರವೃತ್ತಿಮಾರ್ಗವನ್ನು ಉಪದೇಶಿಸುವಂತೆ ತೋರಿದರೂ ಜ್ಞಾನಭಂಡಾರವಾದ ವೇದಕ್ಕೆ ಮನುಷ್ಯರನ್ನು ಪ್ರವೃತ್ತಿಮಾರ್ಗದ ಮೂಲಕ ನಿವೃತ್ತಿಮಾರ್ಗಕ್ಕೆ ಸೆಳೆಯುವುದೇ ಪರಮೋದ್ದೇಶವಾಗಿದೆ.)

ಏವಂ ವ್ಯವಸಿತಂ ಕೇಚಿದವಿಜ್ಞಾಯ ಕುಬುದ್ಧಯಃ ।
ಫಲಶ್ರುತಿಂ ಕುಸುಮಿತಾಂ ನ ವೇದಜ್ಞಾ ವದನ್ತಿ ಹಿ ॥೨೬॥

ಅತಿಸೂಕ್ಷ್ಮವಾದ ಈ ವೇದರಹಸ್ಯವನ್ನು ತಿಳಿಯದ ಕುಬುದ್ಧಿಯುಳ್ಳ ಕೆಲವರು ಕರ್ಮಗಳಲ್ಲಿಯೇ ಆಸಕ್ತಿಯುಳ್ಳವರಾಗಿ ಪುಷ್ಪಗಳಂತೆ ಅಂದ-ಚೆಂದ

ಕುಡಿಸುತ್ತಾನೆ. ಸ್ವಲ್ಪ ಲಡ್ಡುವನ್ನೂ ಕೊಡುತ್ತಾನೆ. ಈ ವಾಕ್ಯಕ್ಕೆ ಆರೋಗ್ಯವು ಮುಖ್ಯಫಲ. ಲಡ್ಡುಗೆ ಅವಾಂತರಫಲ. ತಾಯಿಯು ಔಷಧವನ್ನು ಕುಡಿಸುವಾಗ ಮಗುವಿಗೆ ಹೇಳುತ್ತಾಳೆ : 'ಶಿಖಾ ತೇ ವರ್ಧತೇ ವತ್ಸ ಗುಡೂಚೀಂ ಶ್ರದ್ಧಯಾ ಪಿಬ । ಮಗು! ಗುಡೂಚಿಯನ್ನು (ಅಮೃತಬಳ್ಳಿ ರಸ) ಶ್ರದ್ಧೆಯಿಂದ ಕುಡಿ. ನಿನ್ನ ಜುಟ್ಟು ಬೆಳೆಯುವುದು.' ಇದಕ್ಕೆ ಆರೋಗ್ಯವೇ ಫಲ. ಗುಡೂಚೀ ಭಕ್ಷಣದಿಂದ ಜುಟ್ಟು ಬೆಳೆಯುವುದಿಲ್ಲವಾದ ಕಾರಣ ಅವಾಂತರಫಲವಿಲ್ಲ. (ಭಾವಾರ್ಥದೀಪಿಕಾ)

ದಿಂದ ಕೂಡಿರುವ ಸ್ವರ್ಣವೇ ಮೊದಲಾದ ಫಲಗಳ ವಿಷಯವಾಗಿ ವರ್ಣಿಸಿ ಹೇಳುತ್ತಾರೆ. ಆದರೆ ವೇದದ ತತ್ತ್ವಾರ್ಥವನ್ನು ತಿಳಿದವರು ಹಾಗೆಂದೂ ಹೇಳುವುದಿಲ್ಲ.

ಕಾಮಿನಃ ಕೃಪಣಾ ಲುಬ್ಧಾಃ ಪುಷ್ಪೇಷು ಫಲಬುದ್ಧಯಃ ।
ಅಗ್ನಿಮುಗ್ಧಾ ಧೂಮತಾನ್ತಾಃ ಸ್ವಂ ಲೋಕಂ ನ ವಿದನ್ತಿ ತೇ ॥೨೭॥

ಕಾಮುಕರೂ, ಐಹಿಕಸುಖಗಳಲ್ಲಿಯೇ ಆಸಕ್ತರಾದ ಕೃಪಣರೂ. ಲೋಭಿಗಳೂ ಪುಷ್ಪಗಳಂತೆ ತೋರಿಕೆಗೆ ಅಂದ-ಚೆಂದದಿಂದ ಕೂಡಿರುವ ಸ್ವರ್ಗಾದಿಗಳನ್ನೇ ಅಂತಿಮವಾಗಿ ಭಾವಿಸಿಕೊಂಡು, ಸ್ವರ್ಗಾದಿಫಲಗಳನ್ನು ಪಡೆಯುವ ಸಲುವಾಗಿ ಅಗ್ನಿಮುಗ್ಧರಾಗಿ ಸದಾಕಾಲದಲ್ಲಿಯೂ ಅಗ್ನಿಯಲ್ಲಿ ಹೋಮಗಳನ್ನು ಮಾಡುತ್ತಾ, ಹೊಗೆಯನ್ನು ಕುಡಿದು ಕುಡಿದು ಸೊರಗಿ ಹೋಗುತ್ತಾರೆ. ಆತ್ಮತತ್ತ್ವವನ್ನು ಅಂತಹವರೆಂದಿಗೂ ಅರಿಯುವುದೇ ಇಲ್ಲ.*

ನ ತೇ ಮಾಮಙ್ಗ ಜಾನನ್ತಿ ಹೃದಿಸ್ಥಂ ಯ ಇದಂ ಯತಃ ।
ಉಕ್ಥಶಸ್ತ್ರಾ ಹ್ಯಸುತೃಪೋ ಯಥಾ ನೀಹಾರಚಕ್ಷುಷಃ ॥೨೮॥

ಪ್ರಿಯಉದ್ಧವನೇ! ಶಸ್ತ್ರಕ್ರಿಯೆಗೆ ಕಾರಣವಾದ ಯಜ್ಞಾದಿಗಳನ್ನು ಮಾಡುತ್ತಾ ತಮ್ಮ ಪ್ರಾಣಗಳನ್ನು ಪೋಷಿಸುವುದರಲ್ಲಿಯೇ ನಿರತರಾದ ಕರ್ಮಠರು ಮಂಜಿನಿಂದ ಮಸುಕಾದ ಕಣ್ಣುಗಳುಳ್ಳವರಂತೆ ಅವರ ಹೃತ್ಕಮಲದಲ್ಲಿಯೇ ಇರುವ ನನ್ನನ್ನಾಗಲೀ, ಈ ವಿಶ್ವವು ನಾನೇ ಎಂಬುದನ್ನಾಗಲೀ ನನ್ನಿಂದಲೇ ಇದು ಹುಟ್ಟಿರುವುದೆಂಬುದನ್ನಾಗಲೀ ತಿಳಿದವರಾಗಿಲ್ಲ.+

---

*ಶ್ರುತಿವಾಕ್ಯ.: ಕಶ್ಚಿದ್ದ್ವಾ ಅಸ್ಮಾಲ್ಲೋಕಾತ್ಪ್ರೇತ್ಯ । ಆತ್ಮಾನಂ ವೇದ । ಅಯಮಹಮಸ್ಮೀತಿ। ಕಶ್ಚಿತ್ಸ್ವಂ ಲೋಕಂ ನ ಪ್ರಜಾನಾತಿ । ಅಗ್ನಿಮುಗ್ಧೋ ಹೈವ ಧೂಮತಾನ್ತ । ಭಗವದ್ಭಕ್ತನು ಪುರೂರವನಂತೆ ಈ ಲೋಕದಿಂದ ತೆರಳಿದ ಬಳಿಕ 'ನಾನು ಬ್ರಹ್ಮವಾಗಿದ್ದೇನೆ'–ಎಂದು ತಿಳಿದು ಮುಕ್ತನಾಗುವನು. ಕರ್ಮಜಡನು (ಹೋಮ-ಹವನಾದಿಗಳನ್ನೇ ಆವಲಂಬಿಸಿರತಕ್ಕವನು) ಜನನ-ಮರಣಪ್ರವಾಹದಲ್ಲಿಯೇ ಬಿದ್ದಿರುವನು.

+ಶ್ರುತಿವಾಕ್ಯ :

ನ ತಂ ವಿದಾಥ ಯ ಇದಂ ಜಜಾನಾನ್ಯದ್ಯುಷ್ಮಾಕಮನ್ತರಂ ಭವಾತಿ ।
ನೀಹಾರೇಣ ಪ್ರಾವೃತಾ ಜಲ್ಪ್ಯಾಚಾಸುತೃಪ ಉತ್ಥಶಾಸಶ್ಚರನ್ತಿ ॥

ತೇ ಮೇ ಮತಮವಿಜ್ಞಾಯ ಪರೋಕ್ಷಂ ವಿಷಯಾತ್ಮಕಾಃ ।
ಹಿಂಸಾಯಾಂ ಯದಿ ರಾಗಃ ಸ್ಯಾದ್ಯಜ್ಞ ಏವ ನ ಚೋದನಾ ॥೨೯॥

ಹಿಂಸಾವಿಹಾರಾ ಹ್ಯಾಲಬ್ಧೈಃ ಪಶುಭಿಃ ಸ್ವಸುಖೇಚ್ಛಯಾ ।
ಯಜನ್ತೇ ದೇವತಾ ಯಜ್ಞೈಃ ಪಿತೃಭೂತಪತೀನ್ಖಲಾಃ ॥೩೦॥

ಪ್ರಾಣಿಹಿಂಸೆಯಲ್ಲಿಯೂ ಮಾಂಸಭಕ್ಷಣದಲ್ಲಿಯೂ ಅಭಿರುಚಿಯಿದ್ದರೆ ಯಜ್ಞಶೇಷವಾದ ಮಾಂಸವನ್ನು ಭಕ್ಷಿಸಬಹುದೆಂದು ನಾನು ನಿಯಮವನ್ನು ಮಾಡಿರುವೆನೇ ಹೊರತು ಇದು ಮಾಂಸಭಕ್ಷಣೆಗೆ ಪ್ರಚೋದನೆಯಲ್ಲ. ಯಜ್ಞದಲ್ಲಿ ಮಾತ್ರವೇ ಯಜ್ಞಶೇಷವಾದ ಮಾಂಸವನ್ನು ತಿನ್ನಬಹುದು–ಎಂದಿರುವುದರಿಂದ ಯಜ್ಞವನ್ನು ಮಾಡಲಾಗದೇ ಮಾಂಸವನ್ನು ತಿನ್ನುವ ಪ್ರವೃತ್ತಿಯೂ ಇಲ್ಲವಾಗಬಹುದು. ಆದರೆ ವಿಷಯಸುಖದಲ್ಲಿಯೇ ಆಸಕ್ತರಾದ ಹಿಂಸಾಚಾರಿಗಳಾದ, ನೀಚರಾದ ಈ ಜನರು, ನನ್ನ ಪರೋಕ್ಷವಾದ ಈ ಅಭಿಪ್ರಾಯವನ್ನು ತಿಳಿದುಕೊಳ್ಳದೆ ತಮ್ಮ ಸುಖಕ್ಕಾಗಿ ಹಿಂಸಿಸಲ್ಪಟ್ಟ ಪಶುಗಳ ಮೂಲಕವಾಗಿ ಮಾಡಲ್ಪಡುವ ಯಜ್ಞಗಳಿಂದ ದೇವ-ಪಿತೃಗಳನ್ನೂ ಭೂತಪತಿಗಳನ್ನೂ ಆರಾಧಿಸುತ್ತಾರೆ.

ಸ್ವಪ್ನೋಪಮಮಮುಂ ಲೋಕಮಸನ್ತಂ ಶ್ರವಣಪ್ರಿಯಮ್ ।
ಆಶಿಷೋ ಹೃದಿ ಸಙ್ಕಲ್ಪ್ಯ ತ್ಯಜನ್ತ್ಯರ್ಥಾನ್ಯಥಾ ವಣಿಕ್ ॥೩೧॥

ಸ್ವರ್ಗಸುಖ ಎಂಬ ಪದವು ಕಿವಿಗಳಿಗೆ ಇಂಪಾಗಿ ಕೇಳಿಸುವುದೇ ಹೊರತು ಅದು ಹೇಗಿದೆ?–ಎಂಬುದು ಯಾರಿಗೂ ತಿಳಿಯದು. ಒಂದು ವೇಳೆ ಆ ಲೋಕವಿದ್ದರೂ ಅದೂ ಕೂಡ ಸ್ವಪ್ನಸದೃಶವಾದುದು. ಅನಿತ್ಯವಾದುದು ; ಅಂತಹ ಲೋಕವು ಬೇಕೆಂದು ಸಂಕಲ್ಪಿಸಿ ಕರ್ಮನಿಷ್ಠರು ಅಪಾರವಾದ ಧನದಿಂದ ಮಾತ್ರವೇ ಸಾಧ್ಯವಾಗುವ ಯಜ್ಞ-ಯಾಗಾದಿಗಳನ್ನು ಮಾಡುತ್ತಾರೆ. ವ್ಯಾಪಾರಿಯೊಬ್ಬನು ಅಧಿಕವಾದ ಹಣವನ್ನು ಗಳಿಸಲು ವ್ಯಾಪಾರ

ಯಾವ ಈಶ್ವರನು ಈ ಪ್ರಜೆಗಳನ್ನು ಸೃಷ್ಟಿಸಿದನೋ ಅವನನ್ನು ನೀವು ಅರಿಯಿರಿ. ನಿಮಗೆ ದೇಹಾದಿಗಳು ಅಂತರವಾಗಿರುವುವು. ಮಂಜಿನಂತಿರುವ ಅಜ್ಞಾನದಿಂದ ಗ್ರಸ್ತವಾದ ವಾದದಲ್ಲಿ ಪ್ರವೇಶಿಸಿ ತಾರ್ಕಿಕವಾಗಿ ಪ್ರಾಣಗಳನ್ನು ತೋಷಿಸಲು ಕರ್ಮಗಳನ್ನು ಉಪದೇಶಿಸುತ್ತಾ ಸಂಸಾರದಲ್ಲಿ ಅಲೆದಾಡುವಿರಿ. (ಭಾವಾರ್ಥದೀಪಿಕಾ)

ದಲ್ಲಿ ತಾನು ಗಳಿಸಿದ್ದ ಹಣವನ್ನು ತೊಡಗಿಸುವಂತೆ–ಈ ಕರ್ಮಠರು ಹೆಚ್ಚಿನ ಸುಖಕ್ಕಾಗಿ ಸುಖೋಪಭೋಗಗಳಿಗಾಗಿ ಸ್ವರ್ಗಪ್ರಾಪ್ತಿಗಾಗಿ ಆರ್ಜಿಸಿದ ಧನ ವನ್ನು ಯಜ್ಞಗಳಲ್ಲಿ ತೊಡಗಿಸುತ್ತಾರೆ. ವ್ಯಾಪಾರದಲ್ಲಿ ನಷ್ಟವಾಗಿ ವ್ಯಾಪಾರಿಗೆ ಹಾಕಿದ ಬಂಡವಾಳವೂ ಹೋಗಿಬಿಡುವಂತೆ ಯಜ್ಞಕ್ಕೆ ವಿಘ್ನವುಂಟಾಗಿ ಕರ್ಮನಿಷ್ಠನ ಯಜ್ಞವೇ ಹಾಳಾಗಿಬಿಡಬಹುದು. ಆಗ ಕರ್ಮಠನು ಉಭಯಭ್ರಷ್ಟನಾಗುತ್ತಾನೆ.

ರಜಃಸತ್ತ್ವತಮೋನಿಷ್ಠಾ ರಜಃಸತ್ತ್ವತಮೋಜುಷಃ ।
ಉಪಾಸತ ಇನ್ದ್ರಮುಖ್ಯಾನ್ದೇವಾದೀನ್ ನ ತಥೈವ ಮಾಮ್ ॥೩೨॥

ಸತ್ತ್ವ-ರಜಸ್ತಮೋಗುಣಗಳಿಂದ ಯುಕ್ತರಾಗಿರುವ ಇವರು ಸತ್ತ್ವ-ರಜಸ್ತಮೋಗುಣಯುಕ್ತರಾದ ಇಂದ್ರಾದಿ ದೇವತೆಗಳನ್ನು ಉಪಾಸಿಸುವರೇ ಹೊರತು ಶುದ್ಧಸತ್ತ್ವನಾದ ನನ್ನನ್ನು ಉಪಾಸನೆಮಾಡುವುದಿಲ್ಲ.*

ಇಷ್ಟ್ವೇಹ ದೇವತಾ ಯಜ್ಞೈರ್ಗತ್ವಾ ರಂಸ್ಯಾಮಹೇ ದಿವಿ ।
ತಸ್ಯಾನ್ತ ಇಹ ಭೂಯಾಸ್ಮ ಮಹಾಶಾಲಾ ಮಹಾಕುಲಾಃ ॥೩೩॥

---

*ಭಾರತಭೂಮಿಯಲ್ಲಿ ಸಾವಿರಾರು ದೇವತೆಗಳು ಏತಕ್ಕೆ ಆರಾಧಿಸಲ್ಪಡುತ್ತಿದ್ದಾರೆಂಬುದಕ್ಕೆ ಶ್ರೀಕೃಷ್ಣನ ಈ ಶ್ಲೋಕವು ಉತ್ತರರೂಪವಾಗಿದೆ. ಪ್ರತಿಯೊಬ್ಬ ಮನುಷ್ಯನೂ ಸತ್ತ್ವರಜಸ್ತಮೋಗುಣಗಳುಳ್ಳವನಾಗಿರುತ್ತಾನೆ. ಪ್ರತಿಯೊಬ್ಬನಲ್ಲಿಯೂ ಮಿಶ್ರವಾದ ಗುಣಗಳಿರುತ್ತವೆ. ಒಂದೇ ಗುಣವು ಯಾವನಲ್ಲಿಯೂ ಇರುವುದಿಲ್ಲ. ಸ್ವಲ್ಪ ವ್ಯತ್ಯಾಸದಲ್ಲಿ ಗುಣಮಿಶ್ರಣವಿರುತ್ತದೆ. ಸತ್ತ್ವ+ರಜಸ್ಸು, ರಜಸ್ಸು+ತಮಸ್ಸು, ರಜಸ್ಸು+ಸತ್ತ್ವ, ತಮಸ್ಸು+ರಜಸ್ಸು. ಹೀಗೆ ನೂರಾರು ಬಗೆಯಲ್ಲಿ ಇದರ ಪರಿವರ್ತನವಾಗುತ್ತದೆ. ಮನುಷ್ಯನು ಅವನಲ್ಲಿರುವ ಗುಣಕ್ಕೆ ಅನುಸಾರವಾಗಿ ತನ್ನ ಗುಣಗಳಿಗೆ ಅನುರೂಪವಾಗಿರುವ ದೇವತೆಗಳನ್ನು ಆರಿಸಿಕೊಳ್ಳುತ್ತಾನೆ. ಅವನಿಗೆ ಅದರಲ್ಲಿ ಸ್ವಾತಂತ್ರ್ಯವಿದೆ. ಇದೇ ನಮ್ಮ ಧರ್ಮದ ಹಿರಿಮೆ. ಶ್ರೀಕೃಷ್ಣನು ಗೀತೆಯಲ್ಲೂ ಇದನ್ನು ಸ್ಪಷ್ಟವಾಗಿ ಹೇಳುತ್ತಾನೆ.

ಯಜನ್ತೇ ಸಾತ್ತ್ವಿಕಾ ದೇವಾನ್ಯಕ್ಷರಕ್ಷಾಂಸಿ ರಾಜಸಾಃ ।
ಪ್ರೇತಾನ್ಭೂತಗಣಾಂಶ್ಚಾನ್ಯೇ ಯಜನ್ತೇ ತಾಮಸಾ ಜನಾಃ ॥

ಅಧ್ಯಾಯ ೧೭ ಶ್ಲೋಕ ೪

ಸಾತ್ತ್ವಿಕರು ದೇವತೆಗಳನ್ನು ಪೂಜಿಸುತ್ತಾರೆ. ರಾಜಸರು ಯಕ್ಷ–ರಾಕ್ಷಸರನ್ನು ಪೂಜಿಸುತ್ತಾರೆ. ತಾಮಸಗುಣದವರು ಪ್ರೇತ–ಭೂತಗಳನ್ನು ಪೂಜಿಸುತ್ತಾರೆ. ದೇವತೆ

ಉದ್ಧವ! ಕರ್ಮಠರ ಭಾವನೆಯು ಹೀಗಿರುತ್ತದೆ :

"ಯಜ್ಞಗಳಿಂದ ದೇವತೆಗಳನ್ನು ಪೂಜಿಸಿ ತೃಪ್ತಿಗೊಳಿಸಿ ಅವರ ಅನುಗ್ರಹದಿಂದ ಸ್ವರ್ಗಲೋಕಕ್ಕೆ ಹೋಗಿ ಅಲ್ಲಿರುವ ಸುಖೋಪಭೋಗಗಳನ್ನು ಅನುಭವಿಸುತ್ತೇವೆ. ಪುಣ್ಯವು ಮುಗಿದ ಮೇಲೆ ಪುನಃ ನಾವು ಭೂಲೋಕದಲ್ಲಿ ಮಹಾವಂಶದಲ್ಲಿ ಮಹಾಗೃಹಸ್ಥರಾಗಿ ಜನಿಸುತ್ತೇವೆ. ಪುನಃ ಶುಭಕರ್ಮಗಳನ್ನು ಮಾಡುತ್ತೇವೆ."

ಏವಂ ಪುಷ್ಪಿತಯಾ ವಾಚಾ ವ್ಯಾಕ್ಷಿಪ್ತಮನಸಾಂ ನೃಣಾಮ್ ।
ಮಾನಿನಾಂ ಚಾತಿಸ್ತಬ್ಧಾನಾಂ ಮದ್ವಾರ್ತಾಪಿ ನ ರೋಚತೇ ॥೩೪॥

ಹೀಗೆ ಕರ್ಮಠರು ಹೇಳಿಕೊಳ್ಳುವ, ಹೂವಿನಂತಹ ಅಂದ-ಚೆಂದವಾದ ಮಾತುಗಳಿಂದ ಯಾರ ಮನಸ್ಸು ಮರುಳಾಗುತ್ತದೆಯೋ ಅಂತಹ ದುರಭಿಮಾನಿಗಳಾದ ಮತ್ತು ಶಠರಾದ ಮನುಷ್ಯರಿಗೆ ನನ್ನ ಸಂಬಂಧವಾದ ಮಾತುಗಳೇ ರುಚಿಸುವುದಿಲ್ಲ.

ವೇದಾ ಬ್ರಹ್ಮಾತ್ಮವಿಷಯಸ್ತ್ರಿಕಾಣ್ಡವಿಷಯಾ ಇಮೇ ।
ಪರೋಕ್ಷವಾದಾ ಋಷಯಃ ಪರೋಕ್ಷಂ ಮಮ ಚ ಪ್ರಿಯಾಮ್ ॥೩೫॥

ಉದ್ಧವ! ವೇದದಲ್ಲಿ ಕರ್ಮಕಾಂಡ-ಜ್ಞಾನಕಾಂಡ ಮತ್ತು ಉಪಾಸನಾಕಾಂಡ–ಎಂಬ ಮೂರು ವಿಭಾಗಗಳಿವೆ. ಬ್ರಹ್ಮದ ಮತ್ತು ಜೀವಾತ್ಮನ ವಿಷಯವು ಇವುಗಳಲ್ಲಿ ಪ್ರತಿಪಾದಿತವಾಗಿದೆ. ಮಂತ್ರದ್ರಷ್ಟಾರರಾದ ಸಮಸ್ತ ಋಷಿಗಳೂ ಈ ವಿಷಯವನ್ನು ರಹಸ್ಯವಾಗಿ ಹೇಳಿದ್ದಾರೆ. ಜೀವಾತ್ಮ-ಪರಮಾತ್ಮರ ವಿಷಯವನ್ನು ಪರೋಕ್ಷವಾಗಿ ಹೇಳಬೇಕೆಂಬುದು ನನ್ನ ಅಭಿಮತವೂ ಆಗಿದೆ.*

ಗಳಲ್ಲಿಯೂ ಸಾತ್ತ್ವಿಕ-ರಾಜಸ-ತಾಮಸದೇವತೆಗಳೆಂಬ ವ್ಯತ್ಯಾಸವಿದೆ. ವಿಷ್ಣುವು ಸಾತ್ತ್ವಿಕದೇವತೆ. ಬ್ರಹ್ಮನು ರಾಜಸದೇವತೆ. ರುದ್ರನು ತಾಮಸ ದೇವತೆ. ಹೀಗೆ ಈ ಗುಣಗಳ ವಿಭಾಗ ದೇವತೆಗಳಲ್ಲಿಯೂ ಅವರ ಭಕ್ತರಾದ ಮನುಷ್ಯರಲ್ಲಿಯೂ ಇದೆ. ಆದರೆ ಬ್ರಹ್ಮ-ವಿಷ್ಣು-ರುದ್ರರು ಆಯಾ ಗುಣಗಳಿಗೆ ಅಧಿದೇವತೆಗಳೇ ಹೊರತು ಆ ಗುಣಗಳಿಗೆ ಅಧೀನರಲ್ಲ.

*ಬ್ರಹ್ಮತತ್ತ್ವವನ್ನು ಪ್ರತ್ಯಕ್ಷವಾಗಿ ಏಕೆ ಹೇಳಬಾರದೆಂದರೆ ಇದಕ್ಕೆ ಎಲ್ಲರೂ

ಶಬ್ದಬ್ರಹ್ಮ ಸುದುರ್ಬೋಧಂ ಪ್ರಾಣೇನ್ದ್ರಿಯಮನೋಮಯಮ್ ।
ಅನನ್ತಪಾರಂ ಗಮ್ಭೀರಂ ದುರ್ವಿಗಾಹ್ಯಂ ಸಮುದ್ರವತ್ ॥೩೬॥

ಶಬ್ದಬ್ರಹ್ಮವೆನಿಸಿದ ವೇದವು ಸುಲಭವಾಗಿ ತಿಳಿಯಲ್ಪಡತಕ್ಕುದಲ್ಲ. ಅದು ಸ್ಥೂಲವೆಂದೂ, ಸೂಕ್ಷ್ಮವೆಂದೂ ಎರಡು ಬಗೆಯಾಗಿರುವುದು. ಅವು ಗಳಲ್ಲಿ ತಿಳಿಯಲು ಅಶಕ್ಯವಾದ ಸೂಕ್ಷ್ಮರೂಪವು ಮೊದಲು ಪ್ರಾಣಮಯ ವಾಗಿ 'ಪರಾ' ಎಂಬ ಹೆಸರನ್ನು ಪಡೆದು ಬಳಿಕ ಮನೋಮಯವಾಗಿ 'ಪಶ್ಯಂತೀ' ಎಂಬ ಹೆಸರನ್ನು ಪಡೆದು, ಪುನಃ ವಾಕ್ಕಿಗೆ ವ್ಯಂಜಕವಾಗಿ ವಾಗಿಂದ್ರಿಯವೆನಿಸಿ 'ಮಧ್ಯಮಾ' ಎಂಬ ಹೆಸರನ್ನು ಪಡೆಯುವುದು. ಹೀಗೆ ಮೂರು ಪ್ರಕಾರ ವಾಗಿರುವ ಶಬ್ದಬ್ರಹ್ಮದ ಸ್ವರೂಪವು ತಿಳಿಯಲು ಅಶಕ್ಯವಾಗಿಯೂ, ದೇಶ-ಕಾಲಗಳಿಂದ ಪರಿಚ್ಛೇದವಿಲ್ಲದೆ ಸಮುದ್ರದಂತೆ ಅಪಾರವಾಗಿಯೂ, ಗೂಢಾರ್ಥ ಗರ್ಭಿತವಾಗಿಯೂ ಇರುವುದರಿಂದ ಬುದ್ಧಿಗೂ ಎಟುಕದೆಯೂ ಇರುವುದು.

ಮಯೋಪಬೃಂಹಿತಂ ಭೂಮ್ನಾ ಬ್ರಹ್ಮಣಾನನ್ತಶಕ್ತಿನಾ ।
ಭೂತೇಷು ಘೋಷರೂಪೇಣ ಬಿಸೇಷೂರ್ಣೇವ ಲಕ್ಷ್ಯತೇ ॥೩೭॥

ಪರಿಪೂರ್ಣನೂ, ಅಪಾರವಾದ ಶಕ್ತಿಯುಳ್ಳವನೂ, ಪರಬ್ರಹ್ಮ ಸ್ವರೂಪನೂ ಆದ ನನ್ನಿಂದ ಊರ್ಜಿತಗೊಳಿಸಲ್ಪಟ್ಟ ಶಬ್ದಬ್ರಹ್ಮವು ಕಮಲದ ದಂಟಿನಲ್ಲಿರುವ ದಾರದಂತೆ (ಸೂಕ್ಷ್ಮವಾಗಿದ್ದು) ಸಮಸ್ತಪ್ರಾಣಿಗಳಲ್ಲಿಯೂ ನಾದರೂಪದಿಂದ ರಕ್ಷಿಸಲ್ಪಡುತ್ತದೆ.

ಯಥೋರ್ಣನಾಭಿರ್ಹೃದಯಾದೂರ್ಣಾಮುದ್ವಮತೇ ಮುಖಾತ್ ।
ಆಕಾಶಾದ್ಘೋಷವಾನ್ಪ್ರಾಣೋ ಮನಸಾ ಸ್ಪರ್ಶರೂಪಿಣಾ ॥೩೮॥

ಛನ್ದೋಮಯೋಽಮೃತಮಯಃ ಸಹಸ್ರಪದವೀಂ ಪ್ರಭುಃ ।
ಓಂಕಾರಾದ್ವ್ಯಞ್ಜಿತಸ್ಪರ್ಶಸ್ವರೋಷ್ಮಾನ್ತಃಸ್ಥಭೂಷಿತಾಮ್ ॥೩೯॥

ಭಗವಾನ್ ಹಿರಣ್ಯಗರ್ಭನು ತಾನೇ ಸ್ವತಃ ವೇದಮೂರ್ತಿಯೂ ಅಮೃತಮಯನೂ ಆಗಿದ್ದಾನೆ. ಅವನಿಗೆ ಪ್ರಾಣವೇ ಉಪಾಧಿಯಾಗಿದೆ.

ಅಧಿಕಾರಿಗಳಾಗುವುದಿಲ್ಲ. ಅಂತಃಕರಣವು ಶುದ್ಧಿಯಾದನಂತರವೇ ಜೀವ-ಬ್ರಹ್ಮತತ್ತ್ವವನ್ನು ತಿಳಿಯಲು ಸಾಧ್ಯವಾಗುತ್ತದೆ. ದೇವತೆಗಳು ಪರೋಕ್ಷಪ್ರಿಯರೆಂದು ವೇದದಲ್ಲಿ ಹೇಳಿದೆ. ಪರೋಕ್ಷಪ್ರಿಯಾ ಇವ ಹಿ ದೇವಾಃ ।

ಅನಾಹತಶಬ್ದದ ಮೂಲಕವಾಗಿ ಅವನು ಅಭಿವ್ಯಕ್ತನಾಗುತ್ತಾನೆ. ಯಾವ ರೀತಿಯಲ್ಲಿ ಜೇಡರ ಹುಳುವು ತನ್ನ ಹೃದಯದಿಂದ ಊರ್ಣವೆಂಬ ಧಾತುವನ್ನು ಬಾಯಿಯ ಮೂಲಕವಾಗಿ ದಾರದ ರೂಪದಲ್ಲಿ ಹೊರಕ್ಕೆ ತರುವುದೋ ಮತ್ತು ಮನಸ್ಸುಬಂದಾಗ ಪುನಃ ಒಳಕ್ಕೆ ಸೆಳೆದುಕೊಳ್ಳುವುದೋ, ಅದೇ ರೀತಿಯಲ್ಲಿ ವೇದಮೂರ್ತಿಯಾದ ಹಿರಣ್ಯಗರ್ಭನು ಸ್ಪರ್ಶವೇ ಮೊದಲಾದ ವರ್ಣಗಳನ್ನು (ಅಕ್ಷರಗಳನ್ನು), ಸಂಕಲ್ಪಿಸುವ ಮನೋರೂಪವಾದ ನಿಮಿತ್ತಕಾರಣದ ಮೂಲಕವಾಗಿ ಹೃದಯಾಕಾಶದಿಂದ ಅನಂತವಾದ, ಅಪಾರವಾದ, ಅನೇಕವಾದ ಮಾರ್ಗಗಳಿಂದ ಶೋಭಿಸುವ ವೈಖರೀರೂಪವಾದ ವೇದವಾಣಿಯನ್ನು ತಾನೇ ಪ್ರಕಟಿಸುತ್ತಾನೆ. ಪುನಃ ತನ್ನಲ್ಲಿಯೇ ಲೀನಗೊಳಿಸುತ್ತಾನೆ. ಆ ವಾಣಿಯು ಹೃದ್ಗತವಾದ ಮತ್ತು ಸೂಕ್ಷ್ಮವಾದ ಓಂಕಾರದ ಮೂಲಕವಾಗಿ ಅಭಿವ್ಯಕ್ತವಾಗುವ 'ಕ' ಕಾರದಿಂದ 'ಮ' ಕಾರದವರೆಗಿನ ೨೫ ಸ್ಪರ್ಶಾಕ್ಷರಗಳಿಂದಲೂ 'ಅ' ಕಾರದಿಂದ 'ಔ' ಕಾರದವರೆಗಿನ ೯ ಸ್ವರಗಳಿಂದಲೂ, ಶ, ಷ, ಸ, ಹ ಎಂಬ ನಾಲ್ಕು ಊಷ್ಮಾಕ್ಷರಗಳಿಂದಲೂ, ಯ-ರ-ಲ-ವ–ಎಂಬ ನಾಲ್ಕು ಅಂತಸ್ಥವರ್ಣಗಳಿಂದಲೂ ವಿಭೂಷಿತವಾಗಿದೆ.

ವಿಚಿತ್ರಭಾಷಾವಿತತಾಂ ಛನ್ದೋಭಿಶ್ಚತುರುತ್ತರೈಃ ।
ಅನನ್ತಪಾರಾಂ ಬೃಹತೀಂ ಸೃಜತ್ಯಾಕ್ಷಿಪತೇ ಸ್ವಯಮ್ ॥೪೦॥

ಉತ್ತರೋತ್ತರವಾಗಿ ನಾಲ್ಕು-ನಾಲ್ಕು ವರ್ಣಗಳಿಂದ ವೃದ್ಧಿಹೊಂದುವ ಛಂದಸ್ಸುಗಳಿಂದ ಕೂಡಿರುವ ವೈಖರಿಯು ವಿಚಿತ್ರವಾದ ಭಾಷೆಗಳಿಂದ ವಿಸ್ತೃತವಾಗಿದೆ. ಇಂತಹ ಅಪಾರವಾದ ಬೃಹತಿಯನ್ನು ಹಿರಣ್ಯಗರ್ಭನು ತಾನೇ ಸೃಷ್ಟಿಸುತ್ತಾನೆ. ಪುನಃ ತನ್ನಲ್ಲಿಯೇ ಉಪಸಂಹರಿಸಿಕೊಳ್ಳುತ್ತಾನೆ.

ಗಾಯತ್ರ್ಯುಷ್ಣಿಗನುಷ್ಟುಪ್ ಚ ಬೃಹತೀ ಪಙ್ಕ್ತಿರೇವ ಚ ।
ತ್ರಿಷ್ಟುಬ್ಜಗತ್ಯತಿಚ್ಛನ್ದೋ ಹ್ಯತ್ಯಷ್ಟ್ಯತಿಜಗದ್ವಿರಾಟ್ ॥೪೧॥

ಉತ್ತರೋತ್ತರವಾಗಿ ನಾಲ್ಕು-ನಾಲ್ಕು ವರ್ಣಗಳಿಂದ ವೃದ್ಧಿಹೊಂದುವ ಕೆಲವು ಛಂದಸ್ಸುಗಳ ಹೆಸರುಗಳು ಹೀಗಿವೆ : ಗಾಯತ್ರೀ,

ಉಷ್ಣಿಕ್, ಅನುಷ್ಟುಪ್, ಬೃಹತೀ, ಪಂಕ್ತೀ, ತ್ರಿಷ್ಟುಪ್, ಜಗತೀ, ಅತ್ಯಷ್ಟಿ, ಅತಿಜಗತ್, ಅತಿವಿರಾಟ್.*

ಕಿಂ ವಿಧತ್ತೇ ಕಿಮಾಚಷ್ಟೇ ಕಿಮನೂದ್ಯ ವಿಕಲ್ಪಯೇತ್ ।
ಇತ್ಯಸ್ಯಾ ಹೃದಯಂ ಲೋಕೇ ನಾನ್ಯೋ ಮದ್ವೇದ ಕಶ್ಚನ ॥೪೨॥

ಈ ವೇದವಾಣಿಯು ಕರ್ಮಕಾಂಡದಲ್ಲಿ ಯಾವ ಕರ್ಮವನ್ನು ವಿಧಿಸುತ್ತದೆ?–ಯಾವ ಕರ್ಮವನ್ನು ನಿಷೇಧಿಸುತ್ತದೆ? ಉಪಾಸನಾ ಕಾಂಡದಲ್ಲಿ ಯಾವ ದೇವತೆಗಳನ್ನು ವರ್ಣಿಸುತ್ತದೆ? ಎಂಬ ವೇದರಹಸ್ಯವು ನನ್ನ ಹೊರತಾಗಿ ಬೇರೆ ಯಾರಿಗೂ ತಿಳಿಯದು.

ಮಾಂ ವಿಧತ್ತೇಽಭಿಧತ್ತೇ ಮಾಂ ವಿಕಲ್ಪ್ಯಾಪೋಹ್ಯತೇ ತ್ವಹಮ್ ।
ಏತಾವಾನ್ ಸರ್ವವೇದಾರ್ಥಃ ಶಬ್ದ ಆಸ್ಥಾಯ ಮಾಂ ಭಿದಾಮ್ ।
ಮಾಯಾಮಾತ್ರಮನೂದ್ಯಾನ್ತೇ ಪ್ರತಿಷಿಧ್ಯ ಪ್ರಸೀದತಿ ॥೪೩॥

ಉದ್ಧವ! ನಿಶ್ಚಯವಾಗಿ ಹೇಳುವುದಾದರೆ ವೇದವು ಕರ್ಮಕಾಂಡದಲ್ಲಿ ಯಜ್ಞಪುರುಷನಾದ ನನ್ನನ್ನೇ ಧರಿಸುತ್ತದೆ. ಉಪಾಸನಾಕಾಂಡವು ನನ್ನದೇ ಆಗಿರುವ ವಿಭಿನ್ನದೇವತೆಗಳ ಹೆಸರುಗಳಿಂದ ನನ್ನನ್ನೇ ಪ್ರಕಾಶಗೊಳಿಸುತ್ತದೆ. ಪುನಃ ಅದು ಜ್ಞಾನಕಾಂಡದಲ್ಲಿ ಆಕಾಶಾದಿ ಪ್ರಪಂಚವು ಆತ್ಮನಿಂದ ಜನಿಸಿತೆಂದು ಅಧ್ಯಾರೋಪಿಸಿ ಅನಂತರ ನಿಷೇಧಿಸುತ್ತದೆ. ವೇದವು ಪರಮಾರ್ಥ ಸ್ವರೂಪನಾದ ನನ್ನನ್ನು ಆಶ್ರಯಿಸಿ ಭೇದರೂಪವಾದ ಸಕಲ ಜಗತ್ತೂ ಮಾಯಾಮಾತ್ರವೇ ಹೊರತು ಆತ್ಮನಲ್ಲಿ ಲೇಶವಾದರೂ ಭೇದವಿಲ್ಲವೆಂದು ನಿಷೇಧಿಸಿ ಶಾಂತವಾಗುತ್ತದೆ. (ಬೀಜದ ಮೊಳಕೆಯಲ್ಲಿರುವವನೇ ಅದರ

* ಇಲ್ಲಿ ಮೊದಲನೆಯದಾಗಿ ಹೇಳಿರುವ ಗಾಯತ್ರಿಯು ೨೪ ಅಕ್ಷರಗಳುಳ್ಳ ಛಂದಸ್ಸು. ಚತುರ್ವಿಂಶತ್ಯಕ್ಷರಾ ಗಾಯತ್ರೀ (ಶ್ರುತಿಃ) ಇದಕ್ಕೆ ಮೊದಲಿನ ಛಂದಸ್ಸುಗಳು ಹೀಗಿವೆ.: ಉಕ್ತಾ–ಚತುರಕ್ಷರೀ, ಅತ್ಯುಕ್ತಾ–ಅಷ್ಟಾಕ್ಷರೀ, ಮಧ್ಯಾ–ದ್ವಾದಶಾಕ್ಷರೀ ಛಂದಸ್ಸು. ಪ್ರತಿಷ್ಠಾ–ಷೋಡಶಾಕ್ಷರೀ ಛಂದಸ್ಸು. ಸುಪ್ರತಿಷ್ಠಾ ವಿಂಶತ್ಯಕ್ಷರೀ ಛಂದಸ್ಸು. ಗಾಯತ್ರೀ–ಚತುರ್ವಿಂಶತ್ಯಕ್ಷರೀ ಛಂದಸ್ಸು. ಹೀಗೆ ನಾಲ್ಕು ನಾಲ್ಕು ಅಕ್ಷರಗಳನ್ನು ಹೆಚ್ಚಿಸುವುದರಿಂದ ಅನೇಕ ವಿಧವಾದ ಛಂದಸ್ಸುಗಳು ಆಗುವುವೆಂದು ತಿಳಿಯಬೇಕು.

ವಿಸ್ತಾರವಾದ ಬೇರುಗಳಲ್ಲಿಯೂ ಬುಡದಲ್ಲಿಯೂ ಹೆಗ್ಗೊಂಬೆ-ಕಿರುಗೊಂಬೆಗಳಲ್ಲಿಯೂ ಹರಡಿಕೊಂಡಿರುವಂತೆ ಪ್ರಣವಸ್ವರೂಪನಾದ ಪರಮೇಶ್ವರನೇ ಪ್ರಣವದ ವಿಸ್ತಾರಗಳಾದ ಸಕಲವೇದಶಾಖೆಗಳಲ್ಲಿಯೂ ಅರ್ಥಸ್ವರೂಪನಾಗಿ ಅನುವರ್ತಿಸಿಕೊಂಡಿದ್ದಾನೆ.)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಏಕಾದಶಸ್ಕಂಧದ ೨೧ನೆಯ ಅಧ್ಯಾಯವು ಮುಗಿಯಿತು.

ಏಕಾದಶಸ್ಕಂಧ ೨೨ನೆಯ ಅಧ್ಯಾಯ

ತತ್ತ್ವಗಳ ಸಂಖ್ಯೆ: ಪ್ರಕೃತಿ-ಪುರುಷರ ವಿಶ್ಲೇಷಣೆ

ಉದ್ಧವನು ಪ್ರಶ್ನಿಸುತ್ತಾನೆ :

ಕತಿ ತತ್ತ್ವಾನಿ ವಿಶ್ವೇಶ ಸಙ್ಖ್ಯಾತಾನ್ಯೃಷಿಭಿಃ ಪ್ರಭೋ ।
ನವೈಕಾದಶ ಪಞ್ಚ ತ್ರೀಣ್ಯಾತ್ಥ ತ್ವಮಿಹ ಶುಶ್ರುಮ ॥೧॥

"ಪ್ರಭುವೇ! ವಿಶ್ವೇಶ್ವರ! ಋಷಿಗಳು ತತ್ತ್ವಗಳು ಎಷ್ಟು ಸಂಖ್ಯೆಯಲ್ಲಿವೆಯೆಂದು ಹೇಳಿದ್ದಾರೆ? ನೀನಾದರೋ ಒಂಬತ್ತು-ಹನ್ನೊಂದು-ಐದು-ಮೂರು-ಒಟ್ಟು ಇಪ್ಪತ್ತೆಂಟು ತತ್ತ್ವಗಳಿವೆಯೆಂದು ಹೇಳಿರುವೆ. ಇದನ್ನು ನಾವು ನಿನ್ನಿಂದ ಕೇಳಿದ್ದೇವೆ.

ಕೇಚಿತ್ ಷಡ್ವಿಂಶತಿಂ ಪ್ರಾಹುರಪರೇ ಪಞ್ಚವಿಂಶತಿಮ್ ।
ಸಪ್ತೈಕೇ ನವ ಷಟ್ಕೇಚಿಚ್ಚತ್ವಾರ್ಯೇಕಾದಶಾಪರೇ ॥೨॥

ಕೆಲವು ಋಷಿಗಳು ತತ್ತ್ವಗಳ ಸಂಖ್ಯೆ ಇಪ್ಪತ್ತಾರು-ಎಂದು ಹೇಳುತ್ತಾರೆ. ಕೆಲವರು ಇಪ್ಪತ್ತೈದೆಂದು ಹೇಳುತ್ತಾರೆ. ಕೆಲವರು ತತ್ತ್ವಗಳು ಏಳು ಮಾತ್ರವೆಂದೂ, ಮತ್ತೆ ಕೆಲವರು ಒಂಬತ್ತೆಂದೂ, ಕೆಲವರು ಆರೆಂದೂ, ಕೆಲವರು ನಾಲ್ಕೆಂದೂ, ಕೆಲವರು ಹನ್ನೊಂದು ತತ್ತ್ವಗಳೆಂದೂ ಹೇಳುತ್ತಾರೆ.

ಕೇಚಿತ್ ಸಪ್ತದಶ ಪ್ರಾಹುಃ ಷೋಡಶೈಕೇ ತ್ರಯೋದಶ ।
ಏತಾವತ್ತ್ವಂ ಹಿ ಸಙ್ಖ್ಯಾನಾಮೃಷಯೋ ಯದ್ವಿವಕ್ಷಯಾ ।
ಗಾಯನ್ತಿ ಪೃಥಗಾಯುಷ್ಮನ್ನಿದಂ ನೋ ವಕ್ತುಮರ್ಹಸಿ ॥೩॥

ಹಾಗೆಯೇ ಕೆಲವರು ಋಷಿಗಳು ತತ್ತ್ವಗಳು ಹದಿನೇಳೆಂದೂ, ಕೆಲವರು ಹದಿನಾರೆಂದೂ, ಮತ್ತೆ ಕೆಲವರು ಹದಿಮೂರೆಂದೂ ಹೇಳುತ್ತಾರೆ.

ಕೃಷ್ಣಪರಮಾತ್ಮನೇ! ಹೀಗೆ ಋಷಿಗಳು ತತ್ತ್ವಗಳ ಸಂಖ್ಯೆಯಲ್ಲಿ ಭಿನ್ನ-ಭಿನ್ನವಾದ ಸಂಖ್ಯೆಗಳನ್ನು ಯಾವ ಅಭಿಪ್ರಾಯದಿಂದ ಹೇಳುತ್ತಾರೆ?

ಆಯುಷ್ಮಂತನೇ! ನೀನು ಈ ತತ್ತ್ವಗಳ ಸಂಖ್ಯೆಯನ್ನು ಖಚಿತವಾಗಿ ಹೇಳುವ ಕೃಪೆಮಾಡು."

ಶ್ರೀಭಗವಂತನು ಹೇಳುತ್ತಾನೆ :

ಯುಕ್ತಂ ಚ ಸನ್ತಿ ಸರ್ವತ್ರ ಭಾಷನ್ತೇ ಬ್ರಾಹ್ಮಣಾ ಯಥಾ ।
ಮಾಯಾಂ ಮದೀಯಾಮುದ್ಗೃಹ್ಯ ವದತಾಂ ಕಿಂ ನು ದುರ್ಘಟಮ್ ॥೪॥

"ಉದ್ಧವ! ವೇದಜ್ಞರಾದ ಬ್ರಾಹ್ಮಣರು ಈ ವಿಷಯದಲ್ಲಿ ಹೇಳುವ ಎಲ್ಲ ಮಾತುಗಳೂ ಯುಕ್ತವಾಗಿಯೇ ಕಾಣುತ್ತವೆ. ಸಮಸ್ತತತ್ತ್ವಗಳೂ ಎಲ್ಲದರಲ್ಲಿಯೂ ಅಂಶಭೂತಗಳಾಗಿವೆ. ನನ್ನ ಮಾಯೆಯನ್ನು ಅಂಗೀಕರಿಸಿ ಅದನ್ನೇ ನೆಲೆಯನ್ನಾಗಿಟ್ಟುಕೊಂಡು ಸಿದ್ಧಾಂತಿಸುವ ಈ ವಿದ್ವಾಂಸರು ಯಾವುದನ್ನು ತಾನೇ ಸಮನ್ವಯಿಸದೇ ಇದ್ದಾರು?

ನೈತದೇವಂ ಯಥಾಽತ್ಥ ತ್ವಂ ಯದಹಂ ವಚ್ಮಿ ತತ್ತಥಾ ।
ಏವಂ ವಿವದತಾಂ ಹೇತುಃ ಶಕ್ತಯೋ ಮೇ ದುರತ್ಯಯಾಃ ॥೫॥

'ನೀನು ಹೇಳುವ ತತ್ತ್ವಗಳ ಸಂಖ್ಯೆಯು ಶಾಸ್ತ್ರಸಮ್ಮತವಾಗಿಲ್ಲ. ನಾನು ಹೇಳುವ ತತ್ತ್ವಸಂಖ್ಯೆಯೇ ಶಾಸ್ತ್ರಸಮ್ಮತವಾಗಿದೆ. ತರ್ಕಬದ್ಧವಾಗಿದೆ'–ಮುಂತಾಗಿ ವಿವಾದಮಾಡುವವರಿಗೆ ನನ್ನ ಮಾಯೆಯಿಂದ ಹುಟ್ಟಿದ ದುರತಿಕ್ರಮವಾದ ಶಕ್ತಿಗಳೇ (ಸತ್ತ್ವಾದಿ ಗುಣಗಳೇ) ಮುಖ್ಯ ಕಾರಣಗಳಾಗಿವೆ.

ಯಾಸಾಂ ವ್ಯತಿಕರಾದಾಸೀದ್ವಿಕಲ್ಪೋ ವದತಾಂ ಪದಮ್ ।
ಪ್ರಾಪ್ತೇ ಶಮದಮೇಽಪ್ಯೇತಿ ವಾದಸ್ತಮನುಶಾಮ್ಯತಿ ॥೬॥

ಸಕಲ ವಿವಾದಗಳಿಗೂ ಕಾರಣಭೂತವಾದ ಸತ್ತ್ವಾದಿ ಶಕ್ತಿಗಳ ಕ್ಷೋಭೆ

ಯಿಂದಾಗಿ ವಿವಾದಮಾಡುವವರಿಗೆ ಭೇದವೆಂಬ ವಿಷಯವುಂಟಾಗುವುದು. ಅಂತರಿಂದ್ರಿಯ–ಬಹಿರಿಂದ್ರಿಯನಿಗ್ರಹರೂಪವಾದ ಶಮ-ದಮಾದಿಗಳು ಉಂಟಾದಲ್ಲಿ ನನ್ನ ದುರತಿಕ್ರಮವಾದ ಶಕ್ತಿಗಳ ಬಲವು ಕುಂದಿ ಭೇದವು ಶಾಂತವಾಗುವುದು. ಭೇದವು ಶಾಂತವಾದ ಕೂಡಲೇ ವಿವಾದವೂ ಶಾಂತ ವಾಗುವುದು. ಇಂದ್ರಿಯಗಳೆಲ್ಲವನ್ನೂ ಹತೋಟಿಯಲ್ಲಿಟ್ಟುಕೊಂಡಿರುವ ಯೋಗಿಗೆ ಯಾವ ಭೇದವೂ ಇಲ್ಲ.; ವಿವಾದವೂ ಇಲ್ಲ. ಸತ್ತ್ವಾದಿಗುಣಗಳೇ ಭೇದಕ್ಕೂ, ವಿವಾದಕ್ಕೂ ಕಾರಣಗಳು.

ಪರಸ್ಪರಾನುಪ್ರವೇಶಾತ್ತತ್ತ್ವಾನಾಂ ಪುರುಷರ್ಷಭ ।
ಪೌರ್ವಾಪರ್ಯಪ್ರಸಙ್ಖ್ಯಾನಂ ಯಥಾ ವಕ್ತುರ್ವಿವಕ್ಷಿತಮ್ ॥೭॥

ಪುರುಷಶ್ರೇಷ್ಠನೇ! ತತ್ತ್ವಗಳು ಪರಸ್ಪರವಾಗಿ ಒಂದರೊಡನೆ ಮತ್ತೊಂದು ಸೇರಿಕೊಳ್ಳುತ್ತವೆ. (ಅನುಪ್ರವೇಶಮಾಡುತ್ತವೆ.) ಆದುದರಿಂದ ವಕ್ತಾರನು (ವಾದಿಯು) ತತ್ತ್ವಗಳ ಸಂಖ್ಯೆ ಎಷ್ಟೆಂದು ಹೇಳುವನೋ ಅದಕ್ಕೆ ಅನುಸಾರವಾಗಿ ಕಾರಣವನ್ನು ಕಾರ್ಯದಲ್ಲಿಯೂ ಅಥವಾ ಕಾರ್ಯವನ್ನು ಕಾರಣದಲ್ಲಿಯೂ ಸೇರಿಸಿ ಹೇಳಿ ತಾನು ಹೇಳಿದ ಸಂಖ್ಯೆಯೇ ಸರಿ ಎಂದು ಸಮರ್ಥಿಸುತ್ತಾನೆ. ಕಾರ್ಯಕಾರಣಭಾವವೇ ಪೌರ್ವಾಪರ್ಯ. ಕಾರಣವು ಪೂರ್ವ, ಕಾರ್ಯವು ಅಪರ. ಕಾರಣವನ್ನಿಟ್ಟುಕೊಂಡರೆ ತತ್ತ್ವಗಳ ಸಂಖ್ಯೆ ಕಡಿಮೆಯಾಗುತ್ತದೆ. ಕಾರ್ಯವನ್ನಿಟ್ಟುಕೊಂಡರೆ ತತ್ತ್ವಗಳ ಸಂಖ್ಯೆ ಅಧಿಕವಾಗುತ್ತದೆ.

ಏಕಸ್ಮಿನ್ನಪಿ ದೃಶ್ಯನ್ತೇ ಪ್ರವಿಷ್ಟಾನೀತರಾಣಿ ಚ ।
ಪೂರ್ವಸ್ಮಿನ್ ವಾಪರಸ್ಮಿನ್ ವಾ ತತ್ತ್ವೇ ತತ್ತ್ವಾನಿ ಸರ್ವಶಃ ॥೮॥

ಒಂದೇ ತತ್ತ್ವದಲ್ಲಿ ಇತರ ಹಲವಾರು ತತ್ತ್ವಗಳು ಅನುಪ್ರವೇಶ ಮಾಡಿರುವುದು ಕಂಡುಬರುತ್ತದೆ. ಯಾವ ತತ್ತ್ವದಲ್ಲಿ ಬೇರೆ ಯಾವ ತತ್ತ್ವವು ಅನುಪ್ರವೇಶಮಾಡಬೇಕೆಂಬುದಕ್ಕೆ ಯಾವ ನಿಬಂಧನೆಯೂ ಇಲ್ಲ. ಕೆಲವು ವೇಳೆ ಮಡಕೆ-ವಸ್ತ್ರಗಳೇ ಮೊದಲಾದ ಕಾರ್ಯವಸ್ತುಗಳಲ್ಲಿ ಕಾರಣ ವಸ್ತುಗಳಾದ ಮಣ್ಣು–ನೂಲುಗಳು ಸೇರಿರುತ್ತವೆ. ಕೆಲವು ವೇಳೆ ಮಣ್ಣು–ನೂಲು ಮೊದಲಾದ ಕಾರಣವಸ್ತುಗಳು ಕಾರ್ಯವಸ್ತುಗಳಾದ

ಮಡಕೆ–ವಸ್ತ್ರಗಳಲ್ಲಿ ಅಂತರ್ಗತವಾಗಿರುತ್ತವೆ. ಮಣ್ಣು ಕಾರಣ ; ಗಡಿಗೆ ಕಾರ್ಯ. ಮಣ್ಣಿನಲ್ಲಿ ಸೂಕ್ಷ್ಮರೂಪದಿಂದ ಗಡಿಗೆ ಇರುತ್ತದೆ. ಗಡಿಗೆಯಲ್ಲಿ ಮಣ್ಣು ಅನುಗತವಾಗಿರುತ್ತದೆ. ಅಂತೆಯೇ ನೂಲು ಕಾರಣ ; ವಸ್ತ್ರ ಕಾರ್ಯ. ನೂಲಿನಲ್ಲಿ ಸೂಕ್ಷ್ಮರೂಪದಿಂದ ಬಟ್ಟೆಯಿರುತ್ತದೆ. ವಸ್ತ್ರದಲ್ಲಿ ನೂಲು ಅನುಗತವಾಗಿರುತ್ತದೆ.

ಪೌರ್ವಾಪರ್ಯಮತೋಽಮೀಷಾಂ ಪ್ರಸಙ್ಖ್ಯಾನಮಭೀಪ್ಸತಾಮ್ ।
ಯಥಾ ವಿವಿಕ್ತಂ ಯದ್ವಕ್ತ್ರಂ ಗೃಹ್ಣೀಮೋ ಯುಕ್ತಿಸಂಭವಾತ್ ॥೯॥

ಆದುದರಿಂದ ವಾದಿ-ಪ್ರತಿವಾದಿಗಳು ಯಾವ ಕಾರ್ಯದಲ್ಲಿ ಯಾವ ಕಾರಣವನ್ನು ಅಥವಾ ಯಾವ ಕಾರಣದಲ್ಲಿ ಯಾವ ಕಾರ್ಯವನ್ನು ಅಂತರ್ಭೂತಗೊಳಿಸಿ ತತ್ತ್ವಗಳ ಸಂಖ್ಯೆಯು ಇಷ್ಟೆಂದು ತಮ್ಮ ಮಾತಿನಲ್ಲಿ ನಿಶ್ಚಯಿಸಿ ಹೇಳುವರೋ ಅದನ್ನು ನಾವು ಅಂಗೀಕರಿಸುತ್ತೇವೆ. ಏಕೆಂದರೆ ಅವರ ಮಾತು ಯುಕ್ತಿಯುಕ್ತವಾಗಿರುತ್ತದೆ.

ಅನಾದ್ಯವಿದ್ಯಾಯುಕ್ತಸ್ಯ ಪುರುಷಸ್ಯಾತ್ಮವೇದನಮ್ ।
ಸ್ವತೋ ನ ಸಂಭವಾದನ್ಯಸ್ತತ್ತ್ವಜ್ಞೋ ಜ್ಞಾನದೋ ಭವೇತ್ ॥೧೦॥

ಇಪ್ಪತ್ತಾರು ಗುಣಗಳನ್ನು ಪ್ರತಿಪಾದಿಸುವವರು ಹೀಗೆ ಹೇಳುತ್ತಾರೆ : ಜೀವನು ಅನಾದಿಕಾಲದಿಂದಲೂ ಅವಿದ್ಯೆಯಿಂದ (ಅಜ್ಞಾನದಿಂದ) ಗ್ರಸ್ತ ನಾಗಿದ್ದಾನೆ. ಅವಿದ್ಯೆಯಿಂದ ಗ್ರಸ್ತನಾಗಿರುವವನಿಗೆ ತನಗೆ ತಾನೇ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದುದರಿಂದ ಆತ್ಮಜ್ಞಾನವನ್ನು ಪಡೆದುಕೊಳ್ಳುವ ಸಲುವಾಗಿಯೇ ಮತ್ತೊಬ್ಬ ತತ್ತ್ವಜ್ಞಾನ ಅವಶ್ಯಕತೆ ಇದ್ದೇ ಇರುತ್ತದೆ. (ಹೀಗೆ ಪ್ರಕೃತಿಯ ಕಾರ್ಯ-ಕಾರಣ ರೂಪವಾದ ಇಪ್ಪತ್ತುನಾಲ್ಕು ತತ್ತ್ವಗಳು. ಇಪ್ಪತ್ತೈದನೆಯವನು ಪುರುಷ. ಇಪ್ಪತ್ತಾರನೆಯವನು ಈಶ್ವರ ಹೀಗೆ ಒಟ್ಟು ಇಪ್ಪತ್ತಾರು ತತ್ತ್ವಗಳು.)

ಇಪ್ಪತ್ತೈದು ತತ್ತ್ವಗಳನ್ನು ಪ್ರತಿಪಾದಿಸುವವರು ಹೀಗೆ ಹೇಳುತ್ತಾರೆ.:

ಪುರುಷೇಶ್ವರಯೋರತ್ರ ನ ವೈಲಕ್ಷಣ್ಯಮಣ್ವಪಿ ।
ತದನ್ಯಕಲ್ಪನಾಪಾರ್ಥಾ ಜ್ಞಾನಂ ಚ ಪ್ರಕೃತೇರ್ಗುಣಃ ॥೧೧॥

'ಶರೀರದಲ್ಲಿರುವ ಜೀವಾತ್ಮನಿಗೂ, ಪರಮಾತ್ಮನಿಗೂ ಅಣುಮಾತ್ರವಾದರೂ ಅಂತರವಾಗಲೀ ಭೇದವಾಗಲೀ ಇರುವುದಿಲ್ಲ. ಆದುದರಿಂದ ಜೀವಾತ್ಮ-ಪರಮಾತ್ಮರಲ್ಲಿ ಭೇದವನ್ನು ಕಲ್ಪಿಸುವುದು ವ್ಯರ್ಥವೇ ಸರಿ. ಜ್ಞಾನವೆಂಬುದು ಸತ್ತ್ವಾತ್ಮಿಕವಾದ ಪ್ರಕೃತಿಯ ಗುಣವೇ ಆದ್ದರಿಂದ ಜೀವನಿಗೆ ಅದು ಸ್ವಭಾವಸಿದ್ಧವೇ ಆಗಿದೆ. (ಆದುದರಿಂದ ತತ್ತ್ವಗಳ ಸಂಖ್ಯೆ ಇಪ್ಪತ್ತೈದು.)

ಪ್ರಕೃತಿರ್ಗುಣಸಾಮ್ಯಂ ವೈ ಪ್ರಕೃತೇರ್ನಾತ್ಮನೋ ಗುಣಾಃ ।
ಸತ್ತ್ವಂ ರಜಸ್ತಮ ಇತಿ ಸ್ಥಿತ್ಯುತ್ಪತ್ತ್ಯನ್ತಹೇತವಃ ॥೧೨॥

ಸತ್ತ್ವ-ರಜಸ್ತಮಸ್ಸುಗಳೆಂಬ ಮೂರು ಗುಣಗಳ ಸಾಮ್ಯಾವಸ್ಥೆಯೇ ಪ್ರಕೃತಿಯಾಗಿದೆ. ಆದುದರಿಂದ ಸತ್ತ್ವವೇ ಮೊದಲಾದ ಗುಣಗಳು ಆತ್ಮನಿಗೆ ಸಂಬಂಧಿಸಿದುವುಗಳಲ್ಲ. ಕೇವಲ ಪ್ರಕೃತಿಗೆ ಸಂಬಂಧಿಸಿದುವುಗಳು. ಪ್ರಕೃತಿಯ ಈ ಮೂರು ಗುಣಗಳ ಮೂಲಕವಾಗಿ ಜಗತ್ತಿನ ಉತ್ಪತ್ತಿ-ಸ್ಥಿತಿ ಮತ್ತು ಲಯಗಳು ನಡೆಯುತ್ತಲೇ ಇರುತ್ತವೆ. ಇದರಿಂದ ಜ್ಞಾನವು ಆತ್ಮನ ಗುಣವಲ್ಲವೆಂಬುದೂ ಪ್ರಕೃತಿಯ ಗುಣವೆಂಬುದೂ ಸಿದ್ಧವಾಗುತ್ತದೆ.

ಸತ್ತ್ವಂ ಜ್ಞಾನಂ ರಜಃ ಕರ್ಮ ತಮೋಽಜ್ಞಾನಮಿಹೋಚ್ಯತೇ ।
ಗುಣವ್ಯತಿಕರಃ ಕಾಲಃ ಸ್ವಭಾವಃ ಸೂತ್ರಮೇವ ಚ ॥೧೩॥

ಈ ಪ್ರಸಂಗದಲ್ಲಿ ಸತ್ತ್ವಗುಣವನ್ನೇ ಜ್ಞಾನವೆಂದೂ ರಜೋಗುಣವನ್ನೇ ಕರ್ಮವೆಂದೂ ತಮೋಗುಣವನ್ನೇ ಅಜ್ಞಾನವೆಂದೂ ಹೇಳುತ್ತಾರೆ. ಗುಣಗಳಲ್ಲಿ ಕ್ಷೋಭೆಯನ್ನುಂಟುಮಾಡುವ ಈಶ್ವರನೇ ಕಾಲಪುರುಷನು. ಅರ್ಥಾತ್ ಮಹತ್ತತ್ತ್ವವೇ ಸ್ವಭಾವವಾಗಿದೆ. (ಆದುದರಿಂದ ಇಪ್ಪತ್ತೈದು ಅಥವಾ ಇಪ್ಪತ್ತಾರು ತತ್ತ್ವಗಳೆಂದು ಹೇಳುವ ಈ ಎರಡು ಸಿದ್ಧಾಂತಗಳು ಯುಕ್ತಿಯುಕ್ತವಾಗಿವೆ.)

ಪುರುಷಃ ಪ್ರಕೃತಿರ್ವ್ಯಕ್ತಮಹಙ್ಕಾರೋ ನಭೋಽನಿಲಃ ।
ಜ್ಯೋತಿರಾಪಃ ಕ್ಷಿತಿರಿತಿ ತತ್ತ್ವಾನ್ಯುಕ್ತಾನಿ ಮೇ ನವ ॥೧೪॥

(ತ್ರಿಗುಣಗಳು ನಶ್ವರಗಳಾದುದರಿಂದ ಪ್ರಕೃತಿಗಿಂತಲೂ ಭಿನ್ನವಾದುವುಗಳೆಂದು ಅಂಗೀಕರಿಸಲ್ಪಟ್ಟುದಾದರೆ ಆ ಮೂರು ಗುಣಗಳೂ

ಮೂರು ತತ್ತ್ವಗಳಾಗಿ ಒಟ್ಟು ಇಪ್ಪತ್ತೆಂಟು ತತ್ತ್ವಗಳಾಗುತ್ತವೆ.) ಪುರುಷ, ಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಆಕಾಶಾದಿ ಪಂಚಭೂತಗಳಿಗೆ ಕಾರಣಗಳಾದ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ಪಂಚತನ್ಮಾತ್ರೆಗಳು–ಒಟ್ಟು ಒಂಬತ್ತು. ನಾನು ಹೇಳಿರುವ ಈ ಒಂಬತ್ತು ತತ್ತ್ವಗಳೂ ಹಿಂದೆ ಹೇಳಿದ ಎರಡು ಪಕ್ಷಗಳವರಿಗೂ ಸಮಾನವಾಗಿವೆ.

ಶ್ರೋತ್ರಂ ತ್ವಗ್ದರ್ಶನಂ ಘ್ರಾಣೋ ಜಿಹ್ವೇತಿ ಜ್ಞಾನಶಕ್ತಯಃ ।
ವಾಕ್ಪಾಣ್ಯುಪಸ್ಥಪಾಯ್ವಂಘ್ರಿಕರ್ಮಾಣ್ಯಙ್ಗೋಭಯಂ ಮನಃ ॥೧೫॥

ಕಿವಿ, ಚರ್ಮ, ಕಣ್ಣು, ಮೂಗು, ನಾಲಿಗೆ–ಈ ಐದು ಜ್ಞಾನೇಂದ್ರಿಯಗಳು ಮತ್ತು ವಾಕ್, ಕೈ, ಕಾಲು, ಪಾಯು, ಉಪಸ್ಥ–ಈ ಐದು ಕರ್ಮೇಂದ್ರಿಯಗಳು. ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಈ ಎರಡಕ್ಕೂ ಸೇರುವ ಮನಸ್ಸೆಂಬುದು ಹನ್ನೊಂದನೆಯ ತತ್ತ್ವ.

ಶಬ್ದಃ ಸ್ಪರ್ಶೋ ರಸೋ ಗನ್ಧೋ ರೂಪಂ ಚೇತ್ಯರ್ಥಜಾತಯಃ ।
ಗತ್ಯುಕ್ತ್ಯುತ್ಸರ್ಗಶಿಲ್ಪಾನಿ ಕರ್ಮಾಯತನಸಿದ್ಧಯಃ ॥೧೬॥

ಶಬ್ದ-ಸ್ಪರ್ಶ-ರೂಪ-ರಸ-ಗಂಧ ತನ್ಮಾತ್ರೆಗಳ ಪರಿಣಾಮವಾಗಿ ಹುಟ್ಟಿದ ಆಕಾಶ-ವಾಯು-ಅಗ್ನಿ-ಜಲ-ಪೃಥ್ವೀ–ಈ ಐದು ಮಹಾಭೂತಗಳೂ ಸೇರಿ ಒಟ್ಟು ತತ್ತ್ವಗಳು ಇಪ್ಪತ್ತೈದು. ಗಮನ–ವಚನಗಳೂ, ಆದಾನ-ವಿಸರ್ಗ-ಆನಂದಗಳೂ ಕರ್ಮೇಂದ್ರಿಯಗಳ ಫಲಗಳೇ ಹೊರತು ತತ್ತ್ವಾಂತರಗಳಲ್ಲ.

ಸರ್ಗಾದೌ ಪ್ರಕೃತಿರ್ಹ್ಯಸ್ಯ ಕಾರ್ಯಕಾರಣರೂಪಿಣೀ ।
ಸತ್ತ್ವಾದಿಭಿರ್ಗುಣೈರ್ಧತ್ತೇ ಪುರುಷೋಽವ್ಯಕ್ತ ಈಕ್ಷತೇ ॥೧೭॥

ಸೃಷ್ಟಿಯ ಆರಂಭದಲ್ಲಿ ಕಾರ್ಯ (ಹನ್ನೊಂದು ಇಂದ್ರಿಯಗಳು ಮತ್ತು ಪಂಚಭೂತಗಳು–ಒಟ್ಟು ಹದಿನಾರು ತತ್ತ್ವಗಳು.) ಕಾರಣ (ಮಹತ್ತತ್ತ್ವವೇ ಮೊದಲಾದುವುಗಳು) ಇವುಗಳ ರೂಪದಲ್ಲಿ ಪ್ರಕೃತಿಯಿರುತ್ತದೆ. ಆ ಪ್ರಕೃತಿಯು ಸತ್ತ್ವ-ರಜಸ್ತಮೋಗುಣಗಳ ಸಹಾಯದಿಂದ ಜಗತ್ತಿನ ಉತ್ಪತ್ತಿ-ಸ್ಥಿತಿ ಮತ್ತು ಸಂಹಾರಗಳಿಗೆ ಸಂಬಂಧಿಸಿದ ಅವಸ್ಥೆ

ಯನ್ನು ಹೊಂದುತ್ತದೆ. ಅವ್ಯಕ್ತನಾದ ಪುರುಷನಾದರೋ ಪ್ರಕೃತಿ ಮತ್ತು ಅದರ ಅವಸ್ಥೆಗಳಿಗೆ ಕೇವಲ ಸಾಕ್ಷಿಮಾತ್ರನಾಗಿರುತ್ತಾನೆ.

ವ್ಯಕ್ತಾದಯೋ ವಿಕುರ್ವಾಣಾ ಧಾತವಃ ಪುರುಷೇಕ್ಷಯಾ ।
ಲಬ್ಧವೀರ್ಯಾಃ ಸೃಜನ್ತ್ಯಣ್ಡಂ ಸಂಹತಾಃ ಪ್ರಕೃತೇರ್ಬಲಾತ್ ॥೧೮॥

ಮಹತ್ತೇ ಮೊದಲಾದ ವ್ಯಕ್ತಧಾತುಗಳು ಒಟ್ಟಾಗಿ ಸೇರಿ ಸಾಕ್ಷಿಭೂತನಾದ ಪುರುಷನ ವೀಕ್ಷಣದಿಂದ ಶಕ್ತಿಯನ್ನು ಪಡೆದು ನಾನಾಪ್ರಕಾರವಾದ ವಿಕಾರಗಳನ್ನು ಹೊಂದಿ ಪ್ರಕೃತಿಯ ಬಲದಿಂದ ಬ್ರಹ್ಮಾಂಡವನ್ನು ಸೃಷ್ಟಿಸುತ್ತವೆ.

ಸಪ್ತೈವ ಧಾತವ ಇತಿ ತತ್ರಾರ್ಥಾಃ ಪಞ್ಚಖಾದಯಃ ।
ಜ್ಞಾನಮಾತ್ಮೋಭಯಾಧಾರಸ್ತತೋ ದೇಹೇನ್ದ್ರಿಯಾಸವಃ ॥೧೯॥

ಯಾವ ತತ್ತ್ವಜ್ಞರು ತತ್ತ್ವಗಳ ಸಂಖ್ಯೆ ಏಳುಮಾತ್ರವೆಂದು ಹೇಳುವರೋ ಅವರ ಸಿದ್ಧಾಂತದಲ್ಲಿ ಆಕಾಶ-ವಾಯು-ತೇಜಸ್ಸು-ಜಲ ಮತ್ತು ಪೃಥ್ವೀ–ಈ ಐದು ಪಂಚಮಹಾಭೂತಗಳು, ಆರನೆಯದಾಗಿ ಜೀವಾತ್ಮ, ಏಳನೆಯದಾಗಿ ದೃಶ್ಯಪ್ರಪಂಚಕ್ಕೂ ದ್ರಷ್ಟೃವಾದ, ಜೀವನಿಗೂ ಆಧಾರರೂಪನಾದ ಪರಮಾತ್ಮ. (ಈ ಮತದಲ್ಲಿ ಪ್ರಕೃತಿಯೇ ಮೊದಲಾದ ತತ್ತ್ವಗಳಿಗೆ ಕಾರಣರೂಪದಿಂದ ಆಕಾಶದಲ್ಲಿ ಅಂತರ್ಭಾವವಾಗುವುದು. ಈ ಏಳು ತತ್ತ್ವಗಳಿಂದ ದೇಹೇಂದ್ರಿಯ–ಪ್ರಾಣರೂಪಗಳಾದ ಸಕಲಕಾರ್ಯಗಳೂ ಉಂಟಾಗುವ ಕಾರಣ ದೇಹೇಂದ್ರಿಯಾದಿಗಳಿಗೂ ಕಾರ್ಯರೂಪದಿಂದ ಆಕಾಶದಲ್ಲಿ ಅಂತರ್ಭಾವವು. ಈ ಏಳು ತತ್ತ್ವಗಳೂ ಯಾವಾಗಲೂ ಒಂದನ್ನೊಂದು ಬಿಟ್ಟಿರುವುದಿಲ್ಲ.)

ಷಡಿತ್ಯತ್ರಾಪಿ ಭೂತಾನಿ ಪಞ್ಚ ಷಷ್ಠಃ ಪರಃ ಪುಮಾನ್ ।
ತೈರ್ಯುಕ್ತ ಆತ್ಮಸಮ್ಭೂತೈಃ ಸೃಷ್ಟ್ವೇದಂ ಸಮುಪಾವಿಶತ್ ॥೨೦॥

ತತ್ತ್ವಗಳು ಆರು ಮಾತ್ರ ಎಂದು ಹೇಳುವವರ ಸಿದ್ಧಾಂತದಲ್ಲಿ ಪಂಚಭೂತಗಳು ಐದು. ಆರನೆಯವನು ಪರಮಪುರುಷನಾದ ಪರಮಾತ್ಮ. ಸೃಷ್ಟಿಸಿದ ಪಂಚಭೂತಗಳೊಡನೆ ಕೂಡಿಕೊಂಡು ದೇಹವೇ ಮೊದಲಾದುವುಗಳನ್ನು ಸೃಷ್ಟಿಸುತ್ತಾನೆ ಮತ್ತು ಜೀವರ ರೂಪದಲ್ಲಿ ಪರಮಾತ್ಮನೇ ಆ ದೇಹಗಳಲ್ಲಿ

ಅನುಪ್ರವೇಶಮಾಡುತ್ತಾನೆ. (ಷಟ್ ತತ್ತ್ವಗಳ ಸಿದ್ಧಾಂತದ ಪ್ರಕಾರ ಜೀವನಿಗೆ ಪರಮಾತ್ಮನಲ್ಲಿಯೂ ಶರೀರವೇ ಮೊದಲಾದುವುಗಳಿಗೆ ಪಂಚಭೂತ ಗಳಲ್ಲಿಯೂ ಸಮಾವೇಶವಾಗುತ್ತದೆ.)

ಚತ್ವಾರ್ಯೇವೇತಿ ತತ್ರಾಪಿ ತೇಜ ಆಪೋಽನ್ನಮಾತ್ಮನಃ ।
ಜಾತಾನಿ ತೈರಿದಂ ಜಾತಂ ಜನ್ಮಾವಯವಿನಃ ಖಲು ॥೨೧॥

ಕಾರಣರೂಪದಲ್ಲಿ ಇರತಕ್ಕವುಗಳು ನಾಲ್ಕು ತತ್ತ್ವಗಳು ಮಾತ್ರವೇ–ಎಂದು ಪ್ರತಿಪಾದಿಸುವವರು ಆತ್ಮನಿಂದ ತೇಜಸ್ಸು-ಬಲ ಮತ್ತು ಪೃಥ್ವಿಗಳ ಉತ್ಪತ್ತಿಯಾಗುವುದೆಂದೂ, ಜಗತ್ತಿನಲ್ಲಿ ಸಮಸ್ತಪದಾರ್ಥಗಳೂ ಈ ನಾಲ್ಕು ತತ್ತ್ವಗಳಿಂದಲೇ ಹುಟ್ಟುವುವೆಂದೂ ಹೇಳುತ್ತಾರೆ. ಪೃಥಿವೀ, ಜಲ, ತೇಜಸ್ಸುಗಳು ಆತ್ಮದಿಂದಲೂ ಪೃಥಿವ್ಯಾದಿಗಳಿಂದ ಅವಯವ ಸಹಿತವಾದ ಜಗತ್ತೂ ಉಂಟಾಗುವುದು.

ಸಂಖ್ಯಾನೇ ಸಪ್ತದಶಕೇ ಭೂತಮಾತ್ರೇನ್ದ್ರಿಯಾಣಿ ಚ ।
ಪಞ್ಚ ಪಞ್ಚೈಕಮನಸಾ ಆತ್ಮಾ ಸಪ್ತದಶಃ ಸ್ಮೃತಃ ॥೨೨॥

ಹದಿನೇಳು ತತ್ತ್ವಗಳಿವೆಯೆಂದು ಹೇಳುವ ಮತ್ತೊಂದು ಸಿದ್ಧಾಂತದ ಪ್ರಕಾರ ಪಂಚಮಹಾಭೂತಗಳೂ, ಪಂಚತನ್ಮಾತ್ರೆಗಳೂ, ಪಂಚ ಜ್ಞಾನೇಂದ್ರಿಯಗಳೂ, ಹದಿನಾರನೆಯದಾಗಿ ಮನಸ್ಸು ಮತ್ತು ಹದಿನೇಳನೆಯದಾಗಿ ಆತ್ಮಾ–ಹೀಗೆ ಹದಿನೇಳು ತತ್ತ್ವಗಳು.

ತದ್ವತ್ ಷೋಡಶಸಙ್ಖ್ಯಾನೇ ಆತ್ಮೈವ ಮನ ಉಚ್ಯತೇ ।

ಮನಸ್ಸೇ ಆತ್ಮಾ–ಎಂದು ಹೇಳುವ ಮತವೂ ಇದೆ. ಅವರ ಪ್ರಕಾರ ತತ್ತ್ವಗಳು ಹದಿನಾರು.

ಭೂತೇನ್ದ್ರಿಯಾಣಿ ಪಞ್ಚೈವ ಮನ ಆತ್ಮಾ ತ್ರಯೋದಶ ॥೨೩॥

ತತ್ತ್ವಗಳು ಹದಿಮೂರೆಂದು ಪ್ರತಿಪಾದಿಸುವವರು ಪಂಚಭೂತಗಳು, ಪಂಚೇಂದ್ರಿಯಗಳು, ಮನಸ್ಸು, ಜೀವ-ಈಶ್ವರ ಎಂಬ ಇಬ್ಬರು ಆತ್ಮರು–ಒಟ್ಟು ತತ್ತ್ವಗಳು ಹದಿಮೂರೆಂದು ಹೇಳುತ್ತಾರೆ.

ಏಕಾದಶಶ್ಚ ಆತ್ಮಾಸೌ ಮಹಾಭೂತೇನ್ದ್ರಿಯಾಣಿ ಚ ।
ಅಷ್ಟೌ ಪ್ರಕೃತಯಶ್ಚೈವ ಪುರುಷಶ್ಚ ನವೇತ್ಯಥ ॥೨೪॥

ಹನ್ನೊಂದು ತತ್ತ್ವಗಳನ್ನು ಪ್ರತಿಪಾದಿಸುವವರು ಪಂಚಭೂತಗಳು, ಪಂಚಜ್ಞಾನೇಂದ್ರಿಯಗಳು, ಆತ್ಮಾ–ಒಟ್ಟು ಹನ್ನೊಂದು ತತ್ತ್ವಗಳೆಂದು ಹೇಳುತ್ತಾರೆ. ಹೀಗೆ ಪ್ರತಿಪಾದಿಸುವವರು ಜೀವ ಮತ್ತು ಮನಸ್ಸುಗಳನ್ನು ಆತ್ಮನಲ್ಲಿ ಅಂತರ್ಭಾವಗೊಳಿಸುತ್ತಾರೆ. ತತ್ತ್ವಗಳು ಒಂಭತ್ತು ಮಾತ್ರ–ಎಂದು ಪ್ರತಿಪಾದಿಸುವವರ ಮತದಲ್ಲಿ ಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಪಂಚತನ್ಮಾತ್ರಗಳು–ಎಂಬ ಅಷ್ಟಪ್ರಕೃತಿಗಳು. ಒಂಬತ್ತನೆ ಯವನು ಆತ್ಮಾ.

ಉದ್ಧವ! ಹೀಗೆ ಋಷಿ–ಮುನಿಗಳು ತತ್ತ್ವಗಳ ಸಂಖ್ಯೆಯನ್ನು ಭಿನ್ನ-ಭಿನ್ನವಾದ ರೀತಿಗಳಲ್ಲಿ ಪ್ರತಿಪಾದಿಸಿರುತ್ತಾರೆ. ಅವರು ಹೇಳಿರುವ ಸಂಖ್ಯೆಗಳೆಲ್ಲವೂ ಯುಕ್ತಿಯುಕ್ತವಾಗಿಯೇ ಇರುವುದರಿಂದ ಅವರ ಹೇಳಿಕೆ ಗಳು ಸಮುಚಿತವಾಗಿಯೇ ಇವೆ. ತತ್ತ್ವಜ್ಞಾನಿಯಾದವನು ಯಾವುದೇ ಮತದಲ್ಲಿಯೂ ದೋಷವನ್ನು ಕಾಣುವುದಿಲ್ಲ. ಅವನ ದೃಷ್ಟಿಯಲ್ಲಿ ಎಲ್ಲವೂ ಸಮಂಜಸವಾಗಿಯೇ ಇರುತ್ತದೆ. ತತ್ತ್ವವನ್ನು ತಿಳಿದ ವಿದ್ವಾಂಸರಿಗೆ ಯಾವುದು ತಾನೇ ಶೋಭಾಯಮಾನವಾಗಿ ಕಾಣುವುದಿಲ್ಲ? **ವಿದುಷಾಂ ಕಿಮಶೋಭನಮ್।**"

ಉದ್ಧವನು ಹೇಳುತ್ತಾನೆ:

ಪ್ರಕೃತಿಃ ಪುರುಷಶ್ಚೋಭೌ ಯದ್ಯಪ್ಯಾತ್ಮವಿಲಕ್ಷಣೌ ।
ಅನ್ಯೋನ್ಯಾಪಾಶ್ರಯಾತ್ ಕೃಷ್ಣ ದೃಶ್ಯತೇ ನ ಭಿದಾ ತಯೋಃ ॥೨೬॥

"ಪ್ರಕೃತಿ-ಪುರುಷ–ಎಂಬ ಈ ಎರಡು ತತ್ತ್ವಗಳು ತಮ್ಮ ಸ್ವರೂಪದಿಂದಲೇ ಭಿನ್ನವಾಗಿವೆ. ಪ್ರಕೃತಿಯ ಸ್ವಭಾವ ಜಡತ್ವ. ಚೈತನ್ಯ ಸ್ವರೂಪವಾದದ್ದು ಆತ್ಮಾ. ಹೀಗಿದ್ದರೂ ಅವು ಒಂದು ಮತ್ತೊಂದನ್ನು ಬಿಟ್ಟು ತೋರಿಕೊಳ್ಳುವುದಿಲ್ಲ. ಆದುದರಿಂದ ಪ್ರಕೃತಿ-ಪುರುಷರಲ್ಲಿ ಭೇದವೇ ಗೊತ್ತಾಗುವುದಿಲ್ಲ.

ಪ್ರಕೃತೌ ಲಕ್ಷ್ಯತೇ ಹ್ಯಾತ್ಮಾ ಪ್ರಕೃತಿಶ್ಚ ತಥಾಽತ್ಮನಿ ।
ಏವಂ ಮೇ ಪುಣ್ಡರೀಕಾಕ್ಷ ಮಹಾನ್ತಂ ಸಂಶಯಂ ಹೃದಿ ।
ಛೇತ್ತುಮರ್ಹಸಿ ಸರ್ವಜ್ಞ ವಚೋಭಿರ್ನಯನೈಪುಣ್ಯೈಃ ॥೨೭॥

ಪ್ರಕೃತಿಯ ಕಾರ್ಯವಾದ ದೇಹದಲ್ಲಿ ಆತ್ಮನು ಗೋಚರಿಸುವನು–ಆತ್ಮವಿದ್ದರೆ ಮಾತ್ರವೇ ಪ್ರಕೃತಿಸ್ವರೂಪವಾದ ದೇಹಕ್ಕೆ ಉಳಿವುಂಟು–ಅಲ್ಲದೆ ಪ್ರಕೃತಿಯ ಕಾರ್ಯವಾದ ಶರೀರದಲ್ಲಿ ಕುಳಿತು, ನಾನು–ಎಂದು ಹೇಳಿಕೊಳ್ಳುವ ಆತ್ಮನಿಗೆ ದೇಹದೊಡನೆ ಅಭೇದವೇ ತೋರುತ್ತದೆ. ಈ ಕಾರಣಗಳಿಂದ ಪ್ರಕೃತಿ-ಪುರುಷರಲ್ಲಿರುವ ಭೇದವು ತಿಳಿಯುವುದಿಲ್ಲ. ಪುಂಡರೀಕಾಕ್ಷನೇ! ಈ ಕಾರಣದಿಂದಾಗಿ ನನ್ನ ಹೃದಯದಲ್ಲಿ ದೊಡ್ಡದಾದ ಸಂಶಯವು ಹುಟ್ಟಿಕೊಂಡಿದೆ. ಸರ್ವಜ್ಞನೇ! ದೇವದೇವ! ಯುಕ್ತಿ ಯುಕ್ತವಾದ ಮತ್ತು ನೈಪುಣ್ಯದ ಮಾತುಗಳಿಂದ ನನ್ನ ಈ ಸಂಶಯವನ್ನು ಕತ್ತರಿಸಿಹಾಕಲು ನೀನು ಯೋಗ್ಯನಾಗಿರುವೆ.

ತ್ವತ್ತೋ ಜ್ಞಾನಂ ಹಿ ಜೀವಾನಾಂ ಪ್ರಮೋಷಸ್ತೇಽತ್ರ ಶಕ್ತಿತಃ ।
ತ್ವಮೇವ ಹ್ಯಾತ್ಮಮಾಯಾಯಾ ಗತಿಂ ವೇತ್ಥ ನ ಚಾಪರಃ ॥೨೮॥

ಭಗವಂತ! ನಿನ್ನ ಕೃಪೆಯಿಂದಲೇ ಜೀವರಿಗೆ ಜ್ಞಾನೋದಯವಾಗುತ್ತದೆ ಮತ್ತು ನಿನ್ನ ಮಾಯಾಶಕ್ತಿಯಿಂದಲೇ ಅವರಿಗೆ ಜ್ಞಾನದ ನಾಶವೂ ಆಗುತ್ತದೆ. ನಿನ್ನ ಆತ್ಮಸ್ವರೂಪಿಣಿಯಾದ ಮಾಯಾದೇವಿಯ ವಿಚಿತ್ರವಾದ ಗತಿಯನ್ನು ನೀನು ಮಾತ್ರವೇ ತಿಳಿದವನಾಗಿರುವೆ. ಬೇರೆ ಯಾರಿಗೂ ಅದು ತಿಳಿಯದು. ಆದುದರಿಂದ ನನ್ನ ಈ ಸಂಶಯವನ್ನು ನಿವಾರಿಸಲು ನೀನೇ ಸಮರ್ಥನಾಗಿರುವೆ."

ಶ್ರೀಭಗವಂತನು ಹೇಳುತ್ತಾನೆ :

ಪ್ರಕೃತಿಃ ಪುರುಷಶ್ಚೇತಿ ವಿಕಲ್ಪಃ ಪುರುಷರ್ಷಭ ।
ಏಷ ವೈಕಾರಿಕಃ ಸರ್ಗೋ ಗುಣವ್ಯತಿಕರಾತ್ಮಕಃ ॥೨೯॥

"ಉದ್ಧವ! ಪ್ರಕೃತಿ-ಪುರುಷ, ಶರೀರ-ಆತ್ಮ ಇವುಗಳಲ್ಲಿ ಭೇದವು ಅನೇಕಪ್ರಕಾರವಾಗಿವೆ. ವಿಕಾರ-ಅವಿಕಾರ, ಸಾಪೇಕ್ಷ-ನಿರಪೇಕ್ಷ, ಅಪ್ರಕಾಶ-ಪ್ರಕಾಶ–ಇವೇ ಮುಂತಾಗಿ ಪ್ರಕೃತಿ-ಪುರುಷರಲ್ಲಿ, ದೇಹ-ಆತ್ಮಗಳಲ್ಲಿ ಹಲವಾರು ಭೇದಗಳಿವೆ. ವಿಕಾರದಿಂದ ಕೂಡಿದ ಈ ದೇಹಾದಿಗಳ ಸಂಘಾತವು ಸತ್ತ್ವಾದಿಗುಣಗಳ ಕ್ಷೋಭೆಯಿಂದುಂಟಾದುದು.

ಮಮಾಙ್ಗ ಮಾಯಾ ಗುಣಮಯ್ಯನೇಕಧಾ
ವಿಕಲ್ಪಬುದ್ಧೀಶ್ಚ ಗುಣೈರ್ವಿಧತ್ತೇ ।

ವೈಕಾರಿಕಸ್ತ್ರಿವಿಧೋಽಧ್ಯಾತ್ಮಮೇಕ-
ಮಥಾಧಿದೈವಮಧಿಭೂತಮನ್ಯತ್ ॥೩೦॥

ಪ್ರಿಯಸಖನೇ! ನನ್ನ ಮಾಯೆಯು ತ್ರಿಗುಣಾತ್ಮಕವಾಗಿದೆ. ಅದು ತನ್ನ ಸತ್ತ್ವ-ರಜಸ್ತಮಗಳೆಂಬ ಗುಣಗಳಿಂದ ವಸ್ತುವಿನಲ್ಲಿ ಭೇದಬುದ್ಧಿಯನ್ನು ನಾನಾಪ್ರಕಾರವಾಗಿ ಹುಟ್ಟಿಸುತ್ತದೆ. ಹೀಗೆ ದೇಹಾದಿ ಸಂಘಾತವು ಅನೇಕ ವಿಕಾರಗಳಿಂದ ಕೂಡಿದ್ದರೂ ಸ್ಥೂಲವಾಗಿ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬ ಮೂರು ರೂಪಗಳನ್ನು ಪಡೆದಿದೆ.

ದೃಗ್ರೂಪಮಾರ್ಕಂ ವಪುರತ್ರ ರನ್ಧ್ರೇ
ಪರಸ್ಪರಂ ಸಿಧ್ಯತಿ ಯಃ ಸ್ವತಃ ಖೇ ।
ಆತ್ಮಾ ಯದೇಷಾಮಪರೋ ಯ ಆದ್ಯಃ
ಸ್ವಯಾನುಭೂತ್ಯಾಖಿಲಸಿದ್ಧಸಿದ್ಧಿಃ ।
ಏವಂ ತ್ವಗಾದಿ ಶ್ರವಣಾದಿ ಚಕ್ಷು-
ರ್ಜಿಹ್ವಾದಿ ನಾಸಾದಿ ಚ ಚಿತ್ತಯುಕ್ತಮ್ ॥೩೧॥

ನೇತ್ರೇಂದ್ರಿಯವು ಅಧ್ಯಾತ್ಮ. ನೇತ್ರೇಂದ್ರಿಯಕ್ಕೆ ವಿಷಯಭೂತವಾದ ರೂಪವು ಅಧಿಭೂತ. ನೇತ್ರಗೋಳದಲ್ಲಿರುವ ಸೂರ್ಯದೇವನ ಅಂಶವೇ ಅಧಿದೈವ. ಈ ಮೂರೂಕೂಡ ಒಂದು ಮತ್ತೊಂದರ ಆಶ್ರಯದಿಂದ ಸಿದ್ಧವಾಗುತ್ತದೆ. ಅಧ್ಯಾತ್ಮ-ಅಧಿಭೂತ ಮತ್ತು ಅಧಿದೈವ ಈ ಮೂರೂ ಪರಸ್ಪರ ಸಾಪೇಕ್ಷಗಳಾಗಿವೆ. ಚಕ್ಷುಸ್ಸಿನಿಂದ ರೂಪವು ತಿಳಿಯುತ್ತದೆ. ರೂಪವು ತಿಳಿಯಬೇಕಾದರೆ ನೇತ್ರೇಂದ್ರಿಯವಿರಲೇಬೇಕು. ಇಂದ್ರಿಯಗಳ ಚಾಲನೆಗೆ ಅಧಿಷ್ಠಾತೃದೇವತೆ ಇರಬೇಕು. ನೇತ್ರೇಂದ್ರಿಯದ ಅಧಿಷ್ಠಾತೃ ದೇವತೆ ನೇತ್ರರಂಧ್ರಪ್ರವಿಷ್ಟನಾದ ಸೂರ್ಯ. ಆದುದರಿಂದ ನೇತ್ರೇಂದ್ರಿಯಕ್ಕೆ ಸೂರ್ಯನೇ ಅಧಿದೈವ. ಆದರೆ ಆಕಾಶದಲ್ಲಿರುವ ಮಂಡಲಾತ್ಮಕನಾದ ಸೂರ್ಯನಿಗೆ ಯಾವುದರ ಅಪೇಕ್ಷೆಯೂ ಇಲ್ಲ. ಅವನು ಸ್ವತಃ ಸಿದ್ಧನು. ನೇತ್ರೇಂದ್ರಿಯದ ಅಪೇಕ್ಷೆ ಇಲ್ಲದೆಯೇ ಅವನು ಬೆಳಗುತ್ತಾನೆ. ಆದರೆ ರೂಪವು ಪ್ರಕಾಶಿಸಲು ಸೂರ್ಯನು ತನ್ನ ಅಂಶದಿಂದ ನೇತ್ರೇಂದ್ರಿಯದಲ್ಲಿ ಪ್ರವೇಶಿಸಲೇಬೇಕು. ಇದೇ ರೀತಿಯಲ್ಲಿ ಆತ್ಮನೂ ಅಧ್ಯಾತ್ಮ-ಅಧಿ

ಭೂತ ಮತ್ತು ಅಧಿದೈವಗಳಿಗೆ ಮೂಲಕಾರಣನಾಗಿದ್ದಾನೆ. ಅವುಗಳಿಗೆ ಸಾಕ್ಷೀಭೂತನಾಗಿದ್ದಾನೆ ಮತ್ತು ಅವುಗಳಿಂದ ಅತೀತನಾಗಿದ್ದಾನೆ. ಸ್ವತಃ ಸಿದ್ಧವಾದ ಪ್ರಕಾಶದಿಂದ ಸಮಸ್ತ ಪ್ರಕಾಶಗಳಿಗೂ ಪ್ರಕಾಶಕನಾಗಿದ್ದಾನೆ. ಚಕ್ಷುರಿಂದ್ರಿಯಕ್ಕಿರುವಂತೆಯೇ ತ್ವಕ್, ಶ್ರೋತ್ರ, ಜಿಹ್ವೆ, ನಾಸಿಕೆ, ಚಿತ್ತ ಇವೇ ಮೊದಲಾದುವುಗಳಿಗೂ ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕಗಳೆಂಬ ಮುಬ್ಬಗೆಯ ರೂಪಗಳಿವೆ. ತ್ವಗಿಂದ್ರಿಯವು ಅಧ್ಯಾತ್ಮ. ಸ್ಪರ್ಶವು ಅಧಿಭೂತ. ವಾಯುವು ಅಧಿದೈವ. ಶ್ರೋತ್ರೇಂದ್ರಿಯವು ಅಧ್ಯಾತ್ಮ. ಶಬ್ದವು ಅಧಿಭೂತ. ದಿಕ್ಕುಗಳು ಅಧಿದೈವ. ಜಿಹ್ವೆಯು ಅಧ್ಯಾತ್ಮ. ರಸವು ಅಧಿಭೂತ. ವರುಣನು ಅಧಿದೈವ. ಘ್ರಾಣವು ಅಧ್ಯಾತ್ಮ. ಗಂಧವು ಅಧಿಭೂತ. ಅಶ್ವಿನೀದೇವತೆಗಳು ಅಧಿದೈವ. ಚಿತ್ತವು ಅಧ್ಯಾತ್ಮ. ಚೇತಯ ತವ್ಯವು ಅಧಿಭೂತ. ವಾಸುದೇವನು ಅಧಿದೈವ. ಮನಸ್ಸು ಅಧ್ಯಾತ್ಮ. ಮಂತವ್ಯವು ಅಧಿಭೂತ. ಚಂದ್ರನು ಅಧಿದೈವ. ಬುದ್ಧಿಯು ಅಧ್ಯಾತ್ಮ ಬೋದ್ಧವ್ಯವು ಅಧಿಭೂತ. ಬ್ರಹ್ಮನು ಅಧಿದೈವ. ಅಹಂಕಾರವು ಅಧ್ಯಾತ್ಮ. ಅಹಂಕರ್ತವ್ಯವು ಅಧಿಭೂತ. ರುದ್ರನು ಅಧಿದೈವ.

ಯೋಽಸೌ ಗುಣಕ್ಷೋಭಕೃತೋ ವಿಕಾರಃ
ಪ್ರಧಾನಮೂಲಾನ್ಮಹತಃ ಪ್ರಸೂತಃ ।
ಅಹಂ ತ್ರಿವೃನ್ಮೋಹವಿಕಲ್ಪಹೇತು-
ರ್ವೈಕಾರಿಕಸ್ತಾಮಸ ಐನ್ದ್ರಿಯಶ್ಚ ॥೩೨॥

ಪ್ರಕೃತಿಯಿಂದ ಮಹತ್ತತ್ತ್ವವೂ ಮಹತ್ತತ್ತ್ವದಿಂದ ಅಹಂಕಾರವೂ ಹುಟ್ಟುವುದು. ಹೀಗೆ ಈ ಅಹಂಕಾರವು ಗುಣಗಳ ಕ್ಷೋಭೆಯಿಂದ ಹುಟ್ಟುವ ಪ್ರಕೃತಿಯ ಒಂದು ವಿಕಾರವೇ ಆಗಿದೆ. ಅಹಂಕಾರದಲ್ಲಿ ಸಾತ್ತ್ವಿಕಾಹಂಕಾರ ರಾಜಸಾಹಂಕಾರ ಮತ್ತು ತಾಮಸಾಹಂಕಾರಗಳೆಂಬ ಮೂರು ಭೇದಗಳಿವೆ. ಈ ಅಹಂಕಾರವೇ ಅಜ್ಞಾನವಾಗಿದೆ ಮತ್ತು ಸೃಷ್ಟಿಯ ವೈವಿಧ್ಯಕ್ಕೆ ಮೂಲಕಾರಣವಾಗಿದೆ.

ಆತ್ಮಾಽಪರಿಜ್ಞಾನಮಯೋ ವಿವಾದೋ
ಹ್ಯಸ್ತೀತಿ ನಾಸ್ತೀತಿ ಭಿದಾರ್ಥನಿಷ್ಠಃ ।

ವ್ಯರ್ಥೋಽಪಿ ನೈವೋಪರಮೇತ ಪುಂಸಾಂ
ಮತ್ತಃ ಪರಾವೃತ್ತಧಿಯಾಂ ಸ್ವಲೋಕಾತ್ ॥೩೩॥

ಉದ್ಧವ! ಆತ್ಮವು ಜ್ಞಾನಸ್ವರೂಪವಾಗಿದೆ. ಅದಕ್ಕೆ ಗುಣಗಳ ರೂಪವಾದ ಪದಾರ್ಥಗಳೊಡನೆ ಯಾವ ಸಂಬಂಧವೂ ಇಲ್ಲ. ಆತ್ಮವು ಜ್ಞಾನಸ್ವರೂಪವಾಗಿರುವುದೆಂಬ ವಿಷಯದಲ್ಲಿ ಯಾವುದೇ ವಿವಾದಕ್ಕೂ ಅವಕಾಶವೇ ಇಲ್ಲ. ಅಸ್ತಿ-ನಾಸ್ತಿ (ಇದೆ ; ಇಲ್ಲ) ಸಗುಣ-ನಿರ್ಗುಣ, ಭಾವ-ಅಭಾವ, ಸತ್ಯ-ಮಿಥ್ಯೆ—ಇವೇ ಮುಂತಾಗಿ ಜ್ಞಾನಸ್ವರೂಪವಾದ ಆತ್ಮದ ವಿಷಯದಲ್ಲಿ ಯಾವ ವಾದ-ವಿವಾದಗಳಿವೆಯೋ ಅವೆಲ್ಲಕ್ಕೂ ಭೇದದೃಷ್ಟಿಯೇ ಮೂಲಕಾರಣವಾಗಿದೆ. ಇಂತಹ ವಾದ-ವಿವಾದಗಳಿಂದ ಯಾವುದೇ ಪ್ರಯೋಜನವೂ ಇಲ್ಲವೆಂಬುದರಲ್ಲಿ ಸಂದೇಹವೇ ಇಲ್ಲ. ಈ ವಾದ-ವಿವಾದಗಳು ವ್ಯರ್ಥವೇ ಸರಿ.

ಈ ವಾದ-ವಿವಾದಗಳನ್ನೇ ಮುಂದುಮಾಡಿಕೊಂಡು ನನ್ನಿಂದಲೂ ಮತ್ತು ತಮ್ಮ ವಾಸ್ತವಿಕವಾದ ಸ್ವರೂಪದಿಂದಲೂ (ತಮ್ಮ ವಾಸ್ತವಿಕ ಸ್ವರೂಪನಾದ ನನ್ನಿಂದಲೂ) ವಿಮುಖರಾಗಿರುವರೋ ಅಂತಹವರು ಇಂತಹ ನಿಷ್ಪ್ರಯೋಜಕವಾದ ವಾದ-ವಿವಾದಗಳಿಂದ ಎಂದಿಗೂ ಮುಕ್ತರಾಗುವುದೇ ಇಲ್ಲ.”

ಉದ್ಧವನು ಪ್ರಶ್ನಿಸುತ್ತಾನೆ :

ತ್ವತ್ತಃ ಪರಾವೃತ್ತಧಿಯಃ ಸ್ವಕೃತೈಃ ಕರ್ಮಭಿಃ ಪ್ರಭೋ ।
ಉಚ್ಚಾವಚಾನ್ಯಥಾ ದೇಹಾನ್ ಗೃಹ್ಣನ್ತಿ ವಿಸೃಜನ್ತಿ ಚ ॥೩೪॥

ತನ್ಮಮಾಖ್ಯಾಹಿ ಗೋವಿನ್ದ ದುರ್ವಿಭಾವ್ಯಮನಾತ್ಮಭಿಃ ।
ನ ಹ್ಯೇತತ್ ಪ್ರಾಯಶೋ ಲೋಕೇ ವಿದ್ವಾಂಸಃ ಸನ್ತಿ ವಞ್ಚಿತಾಃ ॥

“ಪ್ರಭುವೇ! ನಿನ್ನಿಂದ ವಿಮುಖರಾಗಿ ಭೇದಬುದ್ಧಿಯನ್ನು ಹೊಂದಿರುವ ಮನುಷ್ಯರು ತಾವು ಮಾಡಿದ ಕರ್ಮಗಳಿಂದ ಉಚ್ಚವಾದ ಅಥವಾ ನೀಚವಾದ ಶರೀರಗಳನ್ನು ಹೇಗೆ ಪಡೆಯುತ್ತಾರೆ? ಪುನಃ ಯಾವರೀತಿಯಿಂದ ಆ ಶರೀರಗಳನ್ನವರು ಬಿಡುತ್ತಾರೆ? ವ್ಯಾಪಕನಾದ ಆತ್ಮನು ಏಕದೇಶವಾದ ಶರೀರದಲ್ಲಿ ಹೇಗೆ ಸೇರಿಕೊಳ್ಳುತ್ತಾನೆ ಮತ್ತು ಒಂದು ದೇಹದಿಂದ

ಮತ್ತೊಂದು ದೇಹಕ್ಕೆ ಹೇಗೆ ಹೋಗುತ್ತಾನೆ? ಆತ್ಮಜ್ಞಾನದಿಂದ ರಹಿತರಾದವರು ಇಂತಹ ಸೂಕ್ಷ್ಮ ವಿಷಯಗಳನ್ನು ಯೋಚಿಸಲು ಕೂಡ ಹೋಗುವುದಿಲ್ಲ. ಇಂತಹ ವಿಷಯಗಳನ್ನು ಖಚಿತವಾಗಿ ತಿಳಿಸುವ ವಿದ್ವಾಂಸರೂ ಸಿಕ್ಕುವುದಿಲ್ಲ. ಎಲ್ಲರೂ ಸಾಮಾನ್ಯವಾಗಿ ನಿನ್ನ ಮಾಯೆಯಿಂದ ವಂಚಿತರಾಗಿರುವುದೇ ಇದಕ್ಕೆ ಕಾರಣವಾಗಿದೆ. ಆದುದರಿಂದ ಕೃಪೆಯಿಟ್ಟು ಇದರ ರಹಸ್ಯವನ್ನು ನನಗೆ ಹೇಳು."

ಶ್ರೀಭಗವಂತನು ಹೇಳುತ್ತಾನೆ :

ಮನಃ ಕರ್ಮಮಯಂ ನೃಣಾಮಿನ್ದ್ರಿಯೈಃ ಪಞ್ಚಭಿರ್ಯುತಮ್ ।
ಲೋಕಾಲ್ಲೋಕಂ ಪ್ರಯಾತ್ಯನ್ಯ ಆತ್ಮಾ ತದನುವರ್ತತೇ ॥೩೬॥

"ಪ್ರಿಯ ಉದ್ಧವನೇ! ಮನುಷ್ಯರ ಮನಸ್ಸೆಂಬುದು ಕರ್ಮ ಸಂಸ್ಕಾರಗಳ ಪುಂಜವೇ ಆಗಿದೆ. ಕರ್ಮಸಂಸ್ಕಾರಕ್ಕೆ ಅನುಸಾರವಾಗಿ ಭೋಗ ಗಳನ್ನು ಉಪಭೋಗಿಸುವ ಸಲುವಾಗಿ ಮನಸ್ಸಿನೊಡನೆ ಪಂಚೇಂದ್ರಿಯ ಗಳೂ ಸೇರಿಯೇ ಇರುತ್ತವೆ. ಇದಕ್ಕೆ ಲಿಂಗಶರೀರವೆಂದು ಹೆಸರು. ಮನಸ್ಸಿನಿಂದಲೂ ಇಂದ್ರಿಯಗಳಿಂದಲೂ ಯುಕ್ತವಾದ ಈ ಲಿಂಗಶರೀರವು ಕರ್ಮಕ್ಕೆ ಅನುಸಾರವಾಗಿ ಒಂದು ಸ್ಥೂಲಶರೀರದಿಂದ ಮತ್ತೊಂದು ಸ್ಥೂಲ ಶರೀರಕ್ಕೂ ಒಂದು ಲೋಕದಿಂದ ಮತ್ತೊಂದು ಲೋಕಕ್ಕೂ ಹೋಗುತ್ತಿರುತ್ತದೆ ; ಬರುತ್ತಿರುತ್ತದೆ. ಆತ್ಮವು ಈ ಲಿಂಗಶರೀರದಿಂದ ಸರ್ವಥಾ ಭಿನ್ನವಾದದ್ದು. ಅದು ಸರ್ವವ್ಯಾಪಕವಾಗಿದ್ದು ಅದಕ್ಕೆ ಹೋಗುವುದೆಂಬುದಾಗಲೀ ಬರುವುದೆಂಬುದಾಗಲೀ ಯಾವುದೂ ಇಲ್ಲ. ಆದರೆ ಅದು ಯಾವಾಗ ಲಿಂಗಶರೀರವನ್ನು ತನ್ನದೆಂದೇ ಭಾವಿಸಿಕೊಂಡು ಅದರಲ್ಲಿ ಅಹಂಭಾವವನ್ನು ಹೊಂದುತ್ತದೆಯೋ ಆಗ ಅದು ಒಂದು ಶರೀರದಿಂದ ಮತ್ತೊಂದು ಶರೀರಕ್ಕೆ ಹೋಗಿ ಬರುವಂತೆ ಭಾಸವಾಗುತ್ತದೆ.

ಧ್ಯಾಯನ್ಮನೋಽನು ವಿಷಯಾನ್ದೃಷ್ಟಾನ್ ವಾನುಶ್ರುತಾನಥ ।
ಉದ್ಯತ್ಸೀದತ್ಕರ್ಮತನ್ತ್ರಂ ಸ್ಮೃತಿಸ್ತದನು ಶಾಮ್ಯತಿ ॥೩೭॥

ಮನಸ್ಸು ಕರ್ಮಗಳ ಅಧೀನವಾಗಿದೆ. ಕರ್ಮಾನುಗುಣವಾಗಿ ಶರೀರ ವನ್ನು ಹೊಂದಿದ ಆ ಮನಸ್ಸು ಕಣ್ಣುಗಳಿಂದ ನೋಡಿದ ಅಥವಾ ಕಿವಿಯಿಂದ

ಕೇಳಿದ ವಿಷಯಗಳನ್ನು ಕುರಿತು ಚಿಂತಿಸುತ್ತಲೇ ಇರುತ್ತದೆ. ಹಾಗೆಯೇ ಚಿಂತಿಸುತ್ತಾ ಅದು ಕ್ಷಣಮಾತ್ರದಲ್ಲಿ ವಿಷಯಗಳ ಆಕಾರವೇ ಆಗಿಬಿಡುತ್ತದೆ. ಹೀಗೆ ಪ್ರಸಕ್ತವಿಷಯಗಳಲ್ಲಿ ಲೀನವಾದ ಮನಸ್ಸು ಹಿಂದಿನದೆಲ್ಲವನ್ನೂ ಸಂಪೂರ್ಣವಾಗಿ ಮರೆತೇಬಿಡುತ್ತದೆ. ಹಿಂದಿನ ವಿಷಯಗಳಲ್ಲಿ ಹಿಂದಿನ ಜನ್ಮದಲ್ಲಿ ಅನುಭವಿಸಿದ ಕಷ್ಟ-ಸುಖಗಳ ವಿಷಯದಲ್ಲಿ ಸಂಪೂರ್ಣವಾಗಿ ವಿಸ್ಮೃತಿಯುಂಟಾಗುತ್ತದೆ.

ವಿಷಯಾಭಿನಿವೇಶೇನ ನಾತ್ಮಾನಂ ಯತ್ಸ್ಮರೇತ್ ಪುನಃ ।
ಜನ್ತೋರ್ವೈ ಕಸ್ಯಚಿದ್ಧೇತೋರ್ಮೃತ್ಯುರತ್ಯನ್ತವಿಸ್ಮೃತಿಃ ॥೩೮॥

ಕರ್ಮಾನುಗುಣವಾಗಿ ಪಡೆದ ನೂತನಶರೀರದ ಮೂಲಕವಾಗಿ ಹೊಂದಿದ ವಿಷಯಗಳಲ್ಲಿನ ತಲ್ಲೀನತೆಯಿಂದ ಮನಸ್ಸು ತನ್ನ ಹಿಂದಿನ ಶರೀರವನ್ನು ಸ್ಮರಿಸಿಕೊಳ್ಳುವುದೇ ಇಲ್ಲ. ಸ್ಮರಿಸಿಕೊಳ್ಳಲೂ ಸಾಧ್ಯವಾಗುವುದಿಲ್ಲ. ಯಾವುದೇ ಕಾರಣದಿಂದಾಗಲೀ ಅತ್ಯಂತ ವಿಸ್ಮೃತಿಯುಂಟಾಗುವುದೇ ಪ್ರಾಣಿಗಳಿಗೆ ಮರಣವೆನಿಸುತ್ತದೆ. ಮರಣವೆಂದರೆ ಶರೀರದ ನಾಶವಲ್ಲ. ಮನಸ್ಸಿನ ನಾಶವೂ ಅಲ್ಲ. ಪೂರ್ವಜನ್ಮದ ಸ್ಮೃತಿಯ ನಾಶವೇ ಮರಣ. (ವಿಷಯಗಳಲ್ಲಿನ ತಲ್ಲೀನತೆಯಿಂದಾಗಿ ಯಾವ ಜೀವನು ಆತ್ಮವನ್ನು ಸ್ಮರಿಸಿಕೊಳ್ಳುವುದಿಲ್ಲವೋ–ಯಾವುದೇ ಕಾರಣದಿಂದಲಾದರೂ ಮೂಲಸ್ವರೂಪವಾದ ಆತ್ಮನನ್ನು ಸ್ವಲ್ಪವಾದರೂ ಸ್ಮರಿಸಿಕೊಳ್ಳದಿರುವುದೇ ಮೃತ್ಯುವೆನಿಸುತ್ತದೆ.)

ಜನ್ಮ ತ್ವಾತ್ಮತಯಾ ಪುಂಸಃ ಸರ್ವಭಾವೇನ ಭೂರಿದ ।
ವಿಷಯಸ್ವೀಕೃತಿಂ ಪ್ರಾಹುರ್ಯಥಾ ಸ್ವಪ್ನಮನೋರಥಃ ॥೩೯॥

ಕರ್ಮದ ಫಲರೂಪದಲ್ಲಿ ಪ್ರಾಪ್ತವಾದ ಮತ್ತೊಂದು ಶರೀರವನ್ನು ‘ನಾನೇ–ಎಂದು ಸರ್ವಾತ್ಮನಾ ಜೀವನು ಭಾವಿಸಿಕೊಳ್ಳುವುದೇ ಅದಕ್ಕೆ ಪುನರ್ಜನ್ಮವೆನಿಸಿಕೊಳ್ಳುತ್ತದೆ. ಅದೇ ರೀತಿಯಲ್ಲಿ ಸ್ವಪ್ನಕಾಲೀನ ಮತ್ತು ಮನೋರಥಕಾಲೀನ–ಶರೀರದಲ್ಲಿ ಅಭಿಮಾನವನ್ನು ಇಟ್ಟುಕೊಳ್ಳುವುದಕ್ಕೆ ಸ್ವಪ್ನ ಮತ್ತು ಮನೋರಥವೆನ್ನುತ್ತಾರೆ.

ಸ್ವಪ್ನಂ ಮನೋರಥಂ ಚೇತ್ಥಂ ಪ್ರಾಕ್ತನಂ ನ ಸ್ಮರತ್ಯಸೌ ।
ತತ್ರ ಪೂರ್ವಮಿವಾತ್ಮನಮಪೂರ್ವಂ ಚಾನುಪಶ್ಯತಿ ॥೪೦॥

ಈಗಿನ ಶರೀರದಲ್ಲಿರುವ ಜೀವವು ಹಿಂದಿನ ಶರೀರವನ್ನು ಹೇಗೆ ಸ್ಮರಿಸಿ ಕೊಳ್ಳುವುದಿಲ್ಲವೋ ಹಾಗೆಯೇ ಸ್ವಪ್ನಾವಸ್ಥೆಯಲ್ಲಿ ಮತ್ತು ಮನೋರಥಾ ವಸ್ಥೆಯಲ್ಲಿರುವ ಜೀವವು ಹಿಂದಿನ ಸ್ವಪ್ನವನ್ನಾಗಲೀ, ಮನೋರಥ ವನ್ನಾಗಲೀ ಸ್ಮರಿಸಿಕೊಳ್ಳುವುದಿಲ್ಲ. ಸ್ವಪ್ನದಲ್ಲಾಗಲೀ ಮನೋರಥವನ್ನು ಕಲ್ಪಿಸಿಕೊಂಡ ಸಮಯದಲ್ಲಾಗಲೀ ಮನುಷ್ಯನು ಮೊದಲಿನಂತೆಯೇ ಇದ್ದರೂ ಹಿಂದಿದ್ದವನಲ್ಲವೆಂದೂ ಹೊಸಬನೆಂದೂ ಭಾವಿಸಿಕೊಳ್ಳುತ್ತಾನೆ. ಸ್ವಪ್ನ-ಮನೋರಥಾದಿ ಕಾಲಕ್ಕಿಂತ ಮೊದಲೇ ಅವನು ಅಸ್ತಿತ್ವದಲ್ಲಿದ್ದರೂ ಆ ಕಾಲದಲ್ಲಿ ತಾನು ಹುಟ್ಟಿದೆನೆಂದು ಜೀವನು ಭಾವಿಸಿಕೊಳ್ಳುವನು.

ಇನ್ದ್ರಿಯಾಯನಸೃಷ್ಟ್ಯೇದಂ ತ್ರೈವಿಧ್ಯಂ ಭಾತಿ ವಸ್ತುನಿ ।
ಬಹಿರನ್ತರ್ಭಿದಾಹೇತುರ್ಜನೋऽಸಜ್ಜನಕೃದ್ಯಥಾ ॥೪೧॥

ಇಂದ್ರಿಯಗಳಿಗೆ ಆಶ್ರಯವಾದ ಮನಸ್ಸಿನ ಸೃಷ್ಟಿಯಿಂದಲೇ ಮತ್ತು ಅದರ ಸಂಬಂಧದಿಂದಲೇ ಆತ್ಮವಸ್ತುವಿನಲ್ಲಿ ಉತ್ತಮ-ಮಧ್ಯಮ-ಅಧಮಗಳೆಂಬ ಮುಬ್ಬಗೆಯ ವಿಕಲ್ಪವು ಇರುವಂತೆ ಕಂಡುಬರುತ್ತದೆ. ಕೆಟ್ಟ ಹುಡುಗನಿಗೆ ಜನ್ಮವಿತ್ತ ತಂದೆಯಂತೆ ಜೀವನು ಭೇದರಹಿತನಾಗಿದ್ದರೂ ಅಂತರಂಗದ ಮತ್ತು ಬಹಿರಂಗದ ಭೇದಕ್ಕೆ ಕಾರಣನೋ ಎಂಬಂತೆ ಭಾಸವಾಗುತ್ತದೆ.*

ನಿತ್ಯದಾ ಹ್ಯಙ್ಗಭೂತಾನಿ ಭವನ್ತಿ ನ ಭವನ್ತಿ ಚ ।
ಕಾಲೇನಾಲಕ್ಷ್ಯವೇಗೇನ ಸೂಕ್ಷ್ಮತ್ವಾತ್ತನ್ನ ದೃಶ್ಯತೇ ॥೪೨॥

ಪ್ರಿಯಸಖನೇ! ಕಾಲದ ಗತಿಯು ಅತಿಸೂಕ್ಷ್ಮವಾದುದು. ಸಾಧಾರಣ

---

*ಅಸಜ್ಜನಕೃದ್ಯಥಾ=ಕೆಟ್ಟಮಗನನ್ನು ಹಡೆದವನು. ತಂದೆಯು ಶಾಂತಸ್ವಭಾವ ದವನಾಗಿಯೇ ಇರುತ್ತಾನೆ. ಮಗನ ದುಷ್ಕೃತ್ಯದಿಂದಾಗಿ ಅವನು ತೊಂದರೆಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ಇಷ್ಟವಿಲ್ಲದಿದ್ದರೂ ಮಗನ ಪಕ್ಷವನ್ನು ವಹಿಸಿ ಮಗನ ಶತ್ರುಗಳನ್ನು ತನ್ನ ಶತ್ರುಗಳೆಂದೇ ಪರಿಗಣಿಸಬೇಕಾಗುತ್ತದೆ. ಕೆಟ್ಟಮಗನು ತಂದೆಯನ್ನು ತನ್ನ ದುಷ್ಕೃತ್ಯಕ್ಕೆ ಒತ್ತಾಸೆ ನೀಡುವಂತೆ ಮಾಡಿ ಅವನನ್ನೂ ಅಪರಾಧಿಯನ್ನಾಗಿ ಮಾಡಿಬಿಡುತ್ತಾನೆ. ಅದೇ ರೀತಿಯಲ್ಲಿ ಕರ್ಮಫಲಗಳ ಪುಂಜವಾದ ಮನಸ್ಸಿನೊಡನೆ ಸೇರಿಕೊಂಡು ದೇಹವೇ ನಾನೆಂಬ ಬುದ್ಧಿಯನ್ನು ಹೊಂದಿ ಮೂರು ಪ್ರಕಾರವಾದ ವಿಕಾರಗಳನ್ನು ಜೀವನು ಹೊಂದುತ್ತಾನೆ.

ವಾಗಿ ಕಾಲಗತಿಯನ್ನು ನೋಡಲು ಸಾಧ್ಯವಾಗುವುದೇ ಇಲ್ಲ. ಅದರ ಮೂಲಕವಾಗಿ ಪ್ರತಿಕ್ಷಣದಲ್ಲಿಯೂ ಪ್ರಾಣಿಗಳ ಉತ್ಪತ್ತಿ ವಿನಾಶಗಳು ನಡೆಯುತ್ತಲೇ ಇರುತ್ತವೆ. ಕಾಲವು ಅತಿಸೂಕ್ಷ್ಮವಾದ ಕಾರಣದಿಂದ ಪ್ರತಿಕ್ಷಣದಲ್ಲಿಯೂ ನಿರಂತರವಾಗಿ ಆಗುತ್ತಿರುವ ಜನನ-ಮರಣಗಳನ್ನು ನೋಡಲು ಸಾಧ್ಯವಾಗುವುದಿಲ್ಲ.

ಯಥಾರ್ಚಿಷಾಂ ಸ್ರೋತಸಾಂ ಚ ಫಲಾನಾಂ ವಾ ವನಸ್ಪತೇಃ ।
ತಥೈವ ಸರ್ವಭೂತಾನಾಂ ವಯೋಽವಸ್ಥಾದಯಃ ಕೃತಾಃ ॥೪೩॥

ಸೋಽಯಂ ದೀಪೋಽರ್ಚಿಷಾಂ
ಯದ್ವತ್ಸ್ರೋತಸಾಂ ತದಿದಂ ಜಲಮ್ ।
ಸೋಽಯಂ ಪುಮಾನಿತಿ ನೃಣಾಂ
ಮೃಷಾ ಗೀರ್ಧೀರ್ಮೃಷಾಯುಷಾಮ್ ॥೪೪॥

ಕಾಲವೆಂಬುದು ಸಕಲಪ್ರಾಣಿಗಳಿಗೂ ಪ್ರತಿಕ್ಷಣದಲ್ಲಿಯೂ ಬಾಲ್ಯವೇ ಮೊದಲಾದ ಅವಸ್ಥೆಗಳನ್ನುಂಟುಮಾಡುತ್ತಿರುತ್ತದೆ. ಪ್ರವಾಹ ಒಂದೇ ಎಂಬಂತೆ ಕಾಣುತ್ತದೆ. ಪ್ರತಿಕ್ಷಣದಲ್ಲಿಯೂ ನೀರು ಬದಲಾವಣೆಯಾಗು ತ್ತಿರುವುದನ್ನು ನಾವು ಕಾಣುವುದಿಲ್ಲ. ಜ್ವಾಲೆಯು ಏಕಮುಖವಾಗಿರುವು ದನ್ನು ಕಾಣುತ್ತೇವೆ. ಅದು ಕ್ಷಣ-ಕ್ಷಣಕ್ಕೂ ವಿನಾಶಹೊಂದುತ್ತಿದೆಯೆಂಬು ದನ್ನು ನಾವು ಕಾಣುವುದಿಲ್ಲ. ಕಟ್ಟಿಗೆಯು ಭಸ್ಮವಾದನಂತರವೇ ಜ್ವಾಲೆಯು ವಿನಾಶಹೊಂದಿತೆಂದು ನಾವು ಭಾವಿಸುತ್ತೇವೆ. ಅಂತೆಯೇ ವೃಕ್ಷಗಳು ಪ್ರತಿಕ್ಷಣದಲ್ಲಿಯೂ ಬೆಳೆಯುತ್ತಲೇ ಇರುತ್ತವೆ. ಆದರೆ ಅದನ್ನು ನಾವು ಕಾಣುವುದಿಲ್ಲ. ಇವೆಲ್ಲವೂ ಕಾಲದ ಪರಿಣಾಮಗಳು. ದೀಪವನ್ನು ನೋಡಿ 'ಅದೇ ದೀಪವು ಇದು'–ಎಂದು ಹೇಳುವುದು ಸುಳ್ಳಾಗುತ್ತದೆ. ದೀಪವು ಅನವರತವಾಗಿ ವಿನಾಶಹೊಂದುತ್ತಲೇ ಇರುತ್ತದೆ. ಒಂದು ಕ್ಷಣದಲ್ಲಿ ನೋಡಿದ ದೀಪವನ್ನು ಮತ್ತೊಂದು ಕ್ಷಣದಲ್ಲಿ ನೋಡಲು ಸಾಧ್ಯವಾಗು ವುದೇ ಇಲ್ಲ. ಅದೇ ರೀತಿಯಲ್ಲಿ ಪ್ರವಾಹದ ಅದೇ ನೀರು–ಎಂದು ಹೇಳುವುದೂ ಸುಳ್ಳಾಗುತ್ತದೆ. ನೀರು ಕ್ಷಣಮಾತ್ರವಾದರೂ ನಿಲ್ಲುವುದಿಲ್ಲ.

ಹರಿಯುತ್ತಲೇ ಇರುತ್ತದೆ. ಆದುದರಿಂದ ನಾವು ಹಿಂದಿನ ಕ್ಷಣದಲ್ಲಿ ನೋಡಿದ ನೀರು ಈ ಕ್ಷಣದಲ್ಲಿ ಇರುವುದಿಲ್ಲ. ಅದೇ ರೀತಿಯಲ್ಲಿ ಮನುಷ್ಯನ ದೇಹವೂ ಕೂಡ ಪ್ರತಿಕ್ಷಣದಲ್ಲಿಯೂ ಅವಸ್ಥಾಭೇದದಿಂದ ವಿನಾಶಹೊಂದುತ್ತಾ ಹೊಸದಾಗಿ ಹುಟ್ಟಿಕೊಳ್ಳುತ್ತಲೇ ಇರುತ್ತದೆ. ಈ ರೀತಿಯಲ್ಲಿ ಹಲವಾರು ದೇಹಗಳು ಬದಲಾಯಿಸುತ್ತಿದ್ದು ಒಬ್ಬನನ್ನು ಕುರಿತು ಅವನೇ ಇವನು–ಎಂದು ಹೇಳುವುದು ಸುಳ್ಳೇ ಆಗುತ್ತದೆ. ವ್ಯರ್ಥವಾದ ಆಯುಷ್ಯವುಳ್ಳ ಅವಿವೇಕಿಗಳಿಗೆ ಸಾದೃಶ್ಯದಿಂದ ಅವನೇ–ಇವನು ಎಂಬ ಮಿಥ್ಯಾವಚನವೂ ಮಿಥ್ಯಾಬುದ್ಧಿಯೂ ಉಂಟಾಗುತ್ತದೆ.

ಮಾ ಸ್ವಸ್ಯ ಕರ್ಮಬೀಜೇನ ಜಾಯತೇ ಸೋಽಪ್ಯಯಂ ಪುಮಾನ್ ।
ಮ್ರಿಯತೇ ಪಾಮರೋ ಭ್ರಾನ್ತ್ಯಾ ಯಥಾಗ್ನಿರ್ದಾರುಸಂಯುತ ॥೪೫॥

ಅಜ್ಞಾನಿಯಾದವನು ಕೂಡ ತನ್ನ ಕರ್ಮಫಲದಿಂದ ಹುಟ್ಟುತ್ತಾನೆ ಅಥವಾ ಸಾಯುತ್ತಾನೆ ಎಂದು ಭಾವಿಸಬಾರದು. ಅಜ್ಞಾನಿಗೂ ಹುಟ್ಟು-ಸಾವುಗಳಿಲ್ಲ. ಅಜ್ಞಾನಿಯಲ್ಲಿರುವ ಜೀವಾತ್ಮನು ಕೂಡ ಹುಟ್ಟಿಲ್ಲದವನೂ ಅಮರನೂ ಆಗಿರುತ್ತಾನೆ. ಭ್ರಾಂತಿಯಿಂದಾಗಿ ಹುಟ್ಟಿದಂತೆಯೂ ಮರಣಹೊಂದಿದಂತೆಯೂ ಕಾಣುತ್ತಾನೆ. ಅಗ್ನಿಯು ಕಟ್ಟಿಗೆಯಲ್ಲಿ ಕಾಣಿಸಿಕೊಂಡಾಗ ಹುಟ್ಟಿದಂತೆಯೂ ಆರಿಹೋದಾಗ ವಿನಾಶಹೊಂದಿದಂತೆಯೂ ಕಾಣುತ್ತಾನೆ. ಆದರೆ ಅಗ್ನಿಗೆ ಹುಟ್ಟು-ಸಾವುಗಳಿಲ್ಲ. ಅಂತೆಯೇ ಜೀವಮಾತ್ರನಿಗೆ ಹುಟ್ಟು-ಸಾವುಗಳಿಲ್ಲ.*

ನಿಷೇಕಗರ್ಭಜನ್ಮಾನಿ ಬಾಲ್ಯಕೌಮಾರಯೌವನಮ್ ।
ವಯೋಮಧ್ಯಂ ಜರಾ ಮೃತ್ಯುರಿತ್ಯವಸ್ಥಾಸ್ತನೋರ್ನವ ॥೪೬॥

---

* ಶ್ರೀಕೃಷ್ಣನು ಗೀತೆಯಲ್ಲೂ ಇದನ್ನೇ ಹೇಳುತ್ತಾನೆ.:

ನ ಜಾಯತೇ ಮ್ರಿಯತೇ ವಾ ಕದಾಚಿನ್ನಾಯಂ ಭೂತ್ವಾ ಭವಿತಾ ವಾ ನ ಭೂಯಃ ।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ॥ (೨೦-೨)

ಇವನು ಹುಟ್ಟುವುದಿಲ್ಲ. ಇವನು ಎಂದೂ ಸಾಯುವುದೂ ಇಲ್ಲ. ಈಗ ಇದ್ದು ಮುಂದೆ ಇಲ್ಲದವನಾಗುವುದಿಲ್ಲ. ಆದುದರಿಂದ ಇವನು ಹುಟ್ಟಿಲ್ಲದವನು. ನಿತ್ಯನು,

ಉದ್ಧವ! ಗರ್ಭಾಧಾನ, ಗರ್ಭವೃದ್ಧಿ, ಜನ್ಮ, ಬಾಲ್ಯಾವಸ್ಥೆ, ಕುಮಾರಾವಸ್ಥೆ, ಯೌವನ, ಮಧ್ಯಮಾವಸ್ಥೆ, ಮುಪ್ಪು, ಮರಣ–ಎಂಬುದಾಗಿ ಶರೀರಕ್ಕೆ ಒಂಬತ್ತು ಅವಸ್ಥೆಗಳುಂಟು.+

ಏತಾ ಮನೋರಥಮಯೀರ್ಹ್ಯನ್ಯಸ್ಯೋಚ್ಚಾವಚಾಸ್ತನೂಃ ।
ಗುಣಸಙ್ಗಾದುಪಾದತ್ತೇ ಕ್ವಚಿತ್ ಕಶ್ಚಿಜ್ಜಹಾತಿ ಚ ॥೪೮॥

ಈ ಶರೀರವು ಜೀವದಿಂದ ಭಿನ್ನವಾಗಿದೆ. ಆದರೂ ಮನಃಕಲ್ಪಿತ ವಾದ ನಾನಾಬಗೆಯ ದೇಹದ ಅವಸ್ಥೆಗಳನ್ನು ಗುಣಸಂಗದಿಂದ ವಾಸನಾ ವಿಶೇಷದಿಂದ ಮನುಷ್ಯನು ಇವುಗಳು ತನ್ನವೇ'–ಎಂದು ಭಾವಿಸಿಕೊಳ್ಳು ತ್ತಾನೆ. ಕೆಲವು ವೇಳೆ ಯಾವನೋ ಒಬ್ಬನು ನನಗೂ ದೇಹಕ್ಕೂ ಸಂಬಂಧವಿಲ್ಲವೆಂಬುದನ್ನು ನಿಶ್ಚಯಿಸಿಕೊಂಡು ಅಂಗಿಯನ್ನು ತ್ಯಜಿಸುವಂತೆ ದೇಹತ್ಯಾಗಮಾಡುತ್ತಾನೆ.

ಆತ್ಮನಃ ಪಿತೃಪುತ್ರಾಭ್ಯಾಮನುಮೇಯೌ ಭವಾಪ್ಯಯೌ ।
ನ ಭವಾಪ್ಯಯವಸ್ತೂನಮಭಿಜ್ಞೋದ್ವಯಲಕ್ಷಣಃ ॥೪೯॥

ಮಗನ ಹುಟ್ಟುವಿಕೆಯಿಂದಲೂ ತಂದೆಯ ಮರಣದಿಂದಲೂ ಒಬ್ಬ ಮನುಷ್ಯನು ತನಗೂ ಹುಟ್ಟು-ಸಾವುಗಳಿವೆಯೆಂಬುದನ್ನು ಊಹಿಸಿಕೊಳ್ಳ ಬಹುದಾಗಿದೆ. ಹುಟ್ಟು-ಸಾವುಗಳ ಸ್ಮರಣೆಯು ಮನುಷ್ಯನಿಗಿರಲು ಸಾಧ್ಯ ವಿಲ್ಲ. ಆದುದರಿಂದ ಮಗನು ಹುಟ್ಟಿದುದನ್ನು ನೋಡಿ ತಾನೂ ಹಾಗೆಯೇ ಹುಟ್ಟಿದ್ದೆನೆಂದು ಭಾವಿಸಿಕೊಳ್ಳಬೇಕು. ಅಂತೆಯೇ ತಂದೆಯ ಮರಣವನ್ನು ನೋಡಿ ತನಗೂ ಮರಣವುಂಟೆಂಬುದನ್ನು ನಿರ್ಧರಿಸಿಕೊಳ್ಳಬೇಕು.

ವಸ್ತುಗಳ ಹುಟ್ಟು ಮತ್ತು ಸಾವುಗಳ ಈ ರಹಸ್ಯವನ್ನು ತಿಳಿದವನು

ಶಾಶ್ವತನು, ಪುರಾತನನು. ಕೊಲ್ಲಲ್ಪಡುವ ಶರೀರದೊಂದಿಗೆ ಇವನು ಕೊಲ್ಲಲ್ಪಡುವುದಿಲ್ಲ. ಇವನನ್ನು ಕೊಲ್ಲಲು ಸಾಧ್ಯವಿಲ್ಲ.

+ ಹುಟ್ಟಿನಿಂದ ಐದು ವರ್ಷಗಳವರೆಗೆ ಬಾಲ್ಯ. ಐದರಿಂದ ಹದಿನಾರು ವರ್ಷಗಳ ವರೆಗೆ ಕೌಮಾರ. ಹದಿನಾರರಿಂದ ಐವತ್ತು ವರ್ಷಗಳವರೆಗೆ ಯೌವನ. ಐವತ್ತರಿಂದ ಅರುವತ್ತು ವರ್ಷಗಳವರೆಗೆ ಮಧ್ಯಮಾವಸ್ಥೆ. ಅನಂತರ ಮುಪ್ಪು.

ಹುಟ್ಟು-ಸಾವುಗಳೆಂಬ ದ್ವಂದ್ವಕ್ಕೆ ಲಕ್ಷ್ಯನಾಗುವುದಿಲ್ಲ. ದೇಹವು ನಶ್ವರವೆಂದು ಭಾವಿಸಿ ಆತ್ಮಾರಾಮನಾಗಿರಲು ಪ್ರಯತ್ನಿಸುತ್ತಾನೆ.

ತರೋರ್ಬೀಜವಿಪಾಕಾಭ್ಯಾಂ ಯೋ ವಿದ್ವಾನ್ ಜನ್ಮಸಂಯಮೌ ।
ತರೋರ್ವಿಲಕ್ಷಣೋ ದ್ರಷ್ಟಾ ಏವಂ ದ್ರಷ್ಟಾ ತನೋಃ ಪೃಥಕ್ ॥೪೯॥

ವೃಕ್ಷಕ್ಕೆ ಬೀಜದಿಂದ ಜನ್ಮವನ್ನೂ ಪರಿಣಾಮದಲ್ಲುಂಟಾಗುವ ವೃಕ್ಷದ ನಾಶವನ್ನೂ ನೋಡುವ ತೋಟಗಾರನು ವೃಕ್ಷಕ್ಕಿಂತ ಬೇರೆಯಾಗಿಯೇ ಉಳಿಯುವನು. ಅಂತೆಯೇ ಸಾಕ್ಷೀಭೂತನಾದ ಆತ್ಮನು ನಶ್ವರವಾದ ದೇಹಕ್ಕಿಂತಲೂ ಬೇರೆಯೇ ಆಗಿರುವನು.

ಪ್ರಕೃತೇರೇವಮಾತ್ಮಾನಮವಿವಿಚ್ಯಾಬುಧಃ ಪುಮಾನ್ ।
ತತ್ತ್ವೇನ ಸ್ಪರ್ಶಸಮ್ಮೂಢಃ ಸಂಸಾರಂ ಪ್ರತಿಪದ್ಯತೇ ॥೫೦॥

ಹೀಗೆ ತತ್ತ್ವವಿವೇಕದಿಂದ ಪ್ರಕೃತಿಯ ಕಾರ್ಯವಾದ ದೇಹವನ್ನು ಆತ್ಮನಿಗಿಂತ ಬೇರೆಯೆಂದು ಭಾವಿಸಿ ತಿಳಿಯದಿರುವ ಮತ್ತು ಆತ್ಮನನ್ನೂ ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸದಿರುವ ಅವಿವೇಕಿಯು ವಿಷಯಸುಖ ಗಳಲ್ಲಿಯೇ ತಲ್ಲೀನನಾಗಿ ಪುನಃ ಪುನಃ ಸಂಸಾರದಲ್ಲಿಯೇ ಬಿದ್ದು ಒದ್ದಾಡುತ್ತಿರುತ್ತಾನೆ.

ಸತ್ತ್ವಸಙ್ಗಾದೃಷೀನ್ದೇವಾನ್ ರಜಸಾಸುರಮಾನುಷಾನ್ ।
ತಮಸಾ ಭೂತತಿರ್ಯಕ್ತ್ವಂ ಭ್ರಾಮಿತೋ ಯಾತಿ ಕರ್ಮಭಿಃ ॥೫೧॥

ಕರ್ಮಗಳಿಂದ ಭ್ರಮೆಗೊಳಿಸಲ್ಪಟ್ಟ ಮನುಷ್ಯನು ಸತ್ತ್ವಗುಣಯುಕ್ತವಾದ ಕರ್ಮಗಳಿಂದ ಋಷಿ-ದೇವತೆಗಳ ಜನ್ಮವನ್ನೂ, ರಜೋಗುಣಯುಕ್ತವಾದ ಕರ್ಮಗಳಿಂದ ಆಸುರ-ಮಾನವಜನ್ಮಗಳನ್ನೂ, ತಮೋಗುಣದಿಂದ ಯುಕ್ತವಾದ ಕರ್ಮಗಳಿಂದ ಭೂತಗಳು ಮತ್ತು ತಿರ್ಯಕ್ ಜಂತುಗಳ (ಪಶು-ಪಕ್ಷಿಗಳ) ಜನ್ಮವನ್ನೂ ಪಡೆದುಕೊಳ್ಳುತ್ತಾನೆ.

ನೃತ್ಯತೋ ಗಾಯತಃ ಪಶ್ಯನ್ಯಥೈವಾನುಕರೋತಿ ತಾನ್ ।
ಏವಂ ಬುದ್ಧಿಗುಣಾನ್ ಪಶ್ಯನ್ನನೀಹೋಽಪ್ಯನುಕಾರ್ಯತೇ ॥೫೨॥

ಯಾರದೋ ಗಾಯನವನ್ನು ಕೇಳಿದ ನೃತ್ಯವನ್ನು ನೋಡಿದ

ಮನುಷ್ಯನು ಗಾಯನವನ್ನೂ ಮತ್ತು ನೃತ್ಯವನ್ನೂ ತಾನೂ ಅನುಕರಿಸಲು ಹೋಗುವನೋ, ಅವರಂತೆ ತಾನೂ ತಾಳವನ್ನು ತಟ್ಟುವನೋ ಅದೇ ರೀತಿಯಲ್ಲಿ ಜೀವನು ಬುದ್ಧಿಯಲ್ಲಿರುವ ಶಬ್ದ-ಸ್ಪರ್ಶಾದಿಗಳನ್ನು ನೋಡಿ ಅದನ್ನು ತಾನೂ ಅನುಕರಿಸಲು ಹೋಗಿ ಕ್ರಮೇಣ ಅದರಲ್ಲಿಯೇ ತನ್ಮಯನಾಗಿಬಿಡುವನು. ದೃಶ್ಯವಾದ ಶರೀರದ ಧರ್ಮಗಳು ದ್ರಷ್ಟೃವಾದ ಆತ್ಮನಲ್ಲಿ ತೋರುವುವು.

ಯಥಾಂಭಸಾ ಪ್ರಚಲತಾ ತರವೋಽಪಿ ಚಲಾ ಇವ ।
ಚಕ್ಷುಷಾ ಭ್ರಾಮ್ಯಮಾಣೇನ ದೃಶ್ಯತೇ ಭ್ರಮತೀವ ಭೂಃ ॥೫೩॥

ನದಿಗಳಲ್ಲಿ, ಸರೋವರಗಳಲ್ಲಿ, ಕೆರೆಗಳಲ್ಲಿ ಇರುವ ನೀರು ಅಳ್ಳಾಡುತ್ತಿದ್ದರೆ ಅದರಲ್ಲಿ ಪ್ರತಿಬಿಂಬಿಸುತ್ತಿರುವ ತೀರಸ್ಥವಾದ ವೃಕ್ಷಗಳೂ ಅಳ್ಳಾಡುತ್ತಿರುವಂತೆ ಕಾಣುತ್ತವೆ. ಅಂತೆಯೇ ಪಿತ್ತವಿಕಾರದಿಂದ ಕಣ್ಣುಗಳು ತಿರುಗುತ್ತಿದ್ದರೆ ಸುತ್ತಲೂ ಭೂಮಿಯೇ ತಿರುಗುತ್ತಿರುವಂತೆ ಭಾಸವಾಗುತ್ತದೆ. ಈ ದೃಷ್ಟಾಂತದಂತೆ ಬುದ್ಧಿಯಲ್ಲಿರುವ ಶಬ್ದಾದಿ ಗುಣಗಳು ಆತ್ಮನಲ್ಲಿಯೂ ಇರುವಂತೆ ಭಾಸವಾಗುತ್ತದೆ.

ಯಥಾ ಮನೋರಥಧಿಯೋ ವಿಷಯಾನುಭವೋ ಮೃಷಾ ।
ಸ್ವಪ್ನದೃಷ್ಟಾಶ್ಚ ದಾಶಾರ್ಹ ತಥಾ ಸಂಸಾರ ಆತ್ಮನಃ ॥೫೪॥

ಮನಸ್ಸಿನಿಂದ ಕಲ್ಪಿತವಾದ ವಿಷಯಾನುಭವಗಳೂ, ಆಕಾಶಸೌಧಗಳೂ, ಕನಸ್ಸಿನಲ್ಲಿ ಕಂಡ ವಿಷಯಾನುಭವಗಳೂ ಎಷ್ಟು ಅಸತ್ಯವೋ ಅದೇ ರೀತಿಯಲ್ಲಿ ಸಂಸಾರದ ವಿಷಯಾನುಭವಗಳೂ ಆತ್ಮನಿಗೆ ಮಿಥ್ಯೆಯೇ ಸರಿ. ಆತ್ಮನು ನಿತ್ಯಶುದ್ಧನೂ, ನಿತ್ಯಬುದ್ಧನೂ, ಮುಕ್ತನೂ ಆಗಿರುತ್ತಾನೆ.

ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ ।
ಧ್ಯಾಯತೇ ವಿಷಯಾನಸ್ಯ ಸ್ವಪ್ನೇಽನರ್ಥಾಗಮೋ ಯಥಾ ॥೫೫॥

ಆತ್ಮನಿಗೆ ಈ ಸಂಸಾರವೆಂಬುದು ಮಿಥ್ಯೆಯೇ ಆಗಿದ್ದರೂ ವಿಷಯಗಳಿಗೆ ಆಶ್ರಯವಾಗಿರುವ ಬುದ್ಧಿಯ ಸಂಬಂಧವನ್ನು ಕಲ್ಪಿಸಿಕೊಂಡಿರುವ ಜೀವವು ಯಾವಾಗಲೂ ವಿಷಯಗಳನ್ನೇ ಕುರಿತು ಚಿಂತಿಸುತ್ತಿರುತ್ತದೆ. ಇದರಿಂದಾಗಿ ಜನ್ಮ-ಮೃತ್ಯುರೂಪವಾದ ಸಂಸಾರವು ಎಂದಿಗೂ ಬಿಟ್ಟು

ಹೋಗುವುದೇ ಇಲ್ಲ. ಸ್ವಪ್ನದಲ್ಲಿ ಕಾಣಿಸಿಕೊಳ್ಳುವ ಸರ್ಪದಂಶನ ವ್ಯಾಘ್ರಗರ್ಜನೆ–ಇವೇ ಮುಂತಾದ ಅನರ್ಥಪರಂಪರೆಗಳು ಎಚ್ಚರಗೊಂಡನಂತರ ಹೊರಟುಹೋಗುವಂತೆ ಜ್ಞಾನವೆಂಬ ಸೂರ್ಯನು ಉದಯಿಸಿದ ನಂತರವೇ ಆತ್ಮನು ಎಚ್ಚರಗೊಳ್ಳುವನು. ಸಂಸಾರವೆಂಬ ಭಯಂಕರದೃಶ್ಯವೂ ಅದೃಶ್ಯವಾಗಿ ಹೋಗುವುದು.

ತಸ್ಮಾದುದ್ಧವ ಮಾ ಭುಂಕ್ಷ್ವ ವಿಷಯಾನಸದಿನ್ದ್ರಿಯೈಃ ।
ಆತ್ಮಾಗ್ರಹಣನಿರ್ಭಾತಂ ಪಶ್ಯ ವೈಕಲ್ಪಿಕಂ ಭ್ರಮಮ್ ॥೫೬॥

ಆದುದರಿಂದ, ಉದ್ಧವನೇ! ಯಾವಾಗಲೂ ತೃಪ್ತವಾಗದಿರುವ ದುಷ್ಟವಾದ ಇಂದ್ರಿಯಗಳ ಮೂಲಕವಾಗಿ ವಿಷಯಸುಖಗಳನ್ನು ಅನುಭವಿಸಲು ಪ್ರಯತ್ನಿಸಬೇಡ. ಆತ್ಮಸ್ವರೂಪವನ್ನು ಅರಿಯದೇ ಇರುವುದರಿಂದ ದೇಹಾತ್ಮಬುದ್ಧಿಯಿಂದ ಕಲ್ಪಿತವಾಗಿರುವ ಈ ಪ್ರಪಂಚವನ್ನು ಕೇವಲ ಭ್ರಾಂತಿಯೆಂದು ತಿಳಿ.

ಕ್ಷಿಪ್ತೋಽವಮಾನಿತೋಽಸದ್ಭಿಃ ಪ್ರಲಬ್ಧೋಽಸೂಯಿತೋಽಥವಾ ।
ತಾಡಿತಃ ಸನ್ನಿಬದ್ಧೋ ವಾ ವೃತ್ತ್ಯಾ ವಾ ಪರಿಹಾಪಿತಃ ॥೫೭॥

ನಿಷ್ಠ್ಯುತೋ ಮೂತ್ರಿತೋ ವಾಜ್ಞೈರ್ಬಹುಧೈವಂ ಪ್ರಕಮ್ಪಿತಃ ।
ಶ್ರೇಯಸ್ಕಾಮಃ ಕೃಚ್ಛ್ರಗತ ಆತ್ಮನಾಽತ್ಮಾನಮುದ್ಧರೇತ್ ॥೫೮॥

ಉದ್ಧವ! ಶ್ರೇಯಸ್ಕರವಾದ ಆತ್ಮಜ್ಞಾನವನ್ನು ಸಂಪಾದಿಸಿ ಕೊಳ್ಳುವುದು ಸುಲಭಸಾಧ್ಯವೇನೂ ಅಲ್ಲ. ಅನಿರೀಕ್ಷಿತವಾದ ಕಷ್ಟಪರಂಪರೆಗಳೇ ಬಂದೊದಗುತ್ತವೆ. ದುಷ್ಟರು ಸುಮ್ಮನಿರುವುದಿಲ್ಲ. ನಾನಾಪ್ರಕಾರವಾದ ಉಪಟಳಗಳನ್ನು ಕೊಡುತ್ತಿರುತ್ತಾರೆ. ಆದರೂ ದೃಢಮನಸ್ಕನಾಗಿ ಶ್ರೇಯಸ್ಕರವಾದ ಆತ್ಮಜ್ಞಾನವನ್ನು ಸಂಪಾದಿಸಬೇಕು.

ಧ್ಯಾನಮಗ್ನನಾಗಿ ಕುಳಿತಿರುವಾಗ ದುಷ್ಟನಾದವನೊಬ್ಬನು ಅಲ್ಲಿಂದ ಕತ್ತುಹಿಡಿದು ದಬ್ಬಲಿ ; ಅವಮಾನಗೊಳಿಸಲಿ ; ಹಾಸ್ಯಮಾಡಲಿ ; ಹೊಟ್ಟೇಕಿಚ್ಚುಪಡಲಿ ; ಹೊಡೆಯಲಿ ; ಕಟ್ಟಿಹಾಕಲಿ ; ಜೀವನವೃತ್ತಿಯನ್ನು ಕಸಿದುಕೊಳ್ಳಲಿ ; ಮೈಮೇಲೆ ಬೀಳಲಿ ; ಮೂತ್ರೋತ್ಸರ್ಜನಮಾಡಲಿ ;

ಸ್ಥೈರಣೆಯನ್ನು ಕಳೆದುಕೊಳ್ಳದೆ ಎಷ್ಟೇ ಕಷ್ಟವಾದರೂ ಲೆಕ್ಕಿಸದೆ ಶ್ರೇಯಸ್ಕಾಮನಾದ ಪುರುಷನು ಸಾಧನೆಯನ್ನು ಮುಂದುವರಿಸಿ ತನ್ನಿಂದ ತನ್ನನ್ನು ಉದ್ಧರಿಸಿಕೊಳ್ಳಬೇಕು. ಆತ್ಮನಾತ್ಮಾನಮುದ್ಧರೇತ್"

ಉದ್ಧವನು ಹೇಳುತ್ತಾನೆ :

ಯಥೈವಮನುಬುಧ್ಯೇಯಂ ವದ ನೋ ವದತಾಂ ವರ ।
ಸುದುಸ್ಸಹಮಿಮಂ ಮನ್ಯೇ ಆತ್ಮನ್ಯಸದತಿಕ್ರಮಮ್ ॥೫೯॥

ವಿದುಷಾಮಪಿ ವಿಶ್ವಾತ್ಮನ್ ಪ್ರಕೃತಿರ್ಹಿ ಬಲೀಯಸೀ ।
ಋತೇ ತ್ವದ್ಧರ್ಮನಿರತಾನ್ ಶಾನ್ತಾಂಸ್ತೇ ಚರಣಾಲಯಾನ್ ॥೬೦॥

"ವಾಗ್ಮಿಗಳಲ್ಲಿ ಶ್ರೇಷ್ಠನಾಗಿರುವವನೇ! ಭಗವಂತ! ದುರ್ಜನರು ಮಾಡುವ ತಿರಸ್ಕಾರವನ್ನು ನಾನು ಸಹಿಸಲು ಅಸಾಧ್ಯವಾದುದೆಂದು ಭಾವಿಸುತ್ತೇನೆ. ದುಷ್ಕರ ಅಂತಹ ಉಪಟಳಗಳನ್ನು ನಾನು ಹೇಗೆತಾನೇ ಸಹಿಸಿಕೊಳ್ಳಲಿ? ನಿನ್ನ ಉಪದೇಶವನ್ನು ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಲಿ? ದಯಮಾಡಿ ಹೇಳು. ಯಾರು ನಿನ್ನ ಭಾಗವತಧರ್ಮದ ಆಚರಣೆಯಲ್ಲಿ ನಿರತರಾಗಿರುವರೋ, ನಿನ್ನ ಪಾದಕಮಲಗಳನ್ನೇ ಪರಮಾಶ್ರಯವನ್ನಾಗಿ ಹೊಂದಿರುವರೋ, ಶಾಂತಾತ್ಮರಾಗಿರುವರೋ ಅಂತಹವರನ್ನು ಬಿಟ್ಟು ವಿದ್ವಾಂಸರಾದವರಿಗೂ ಕೂಡ ದುಷ್ಕರ ಉಪಟಳಗಳನ್ನೂ ತಿರಸ್ಕಾರವನ್ನೂ ಸಹಿಸಿಕೊಂಡಿರಲು ಸಾಧ್ಯವಾಗುವುದಿಲ್ಲ. ಸ್ವಭಾವವೆಂಬುದು ವಿದ್ವಾಂಸರಿಗಾದರೂ ಅತಿಕ್ರಮಿಸಲಾಗದಷ್ಟು ಬಲವತ್ತರವಾದುದು. ಸಾಮಾನ್ಯಮನುಷ್ಯನ ಸ್ವಭಾವವು ಅಸಹನೆಯೇ ಹೊರತು ಶಾಂತವಲ್ಲ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಏಕಾದಶಸ್ಕಂಧದ ೨೨ನೆಯ ಅಧ್ಯಾಯವು ಮುಗಿಯಿತು.

——

ಸಹನಶೀಲನಾದ ಬ್ರಾಹ್ಮಣನ ಇತಿಹಾಸ

ಸ ಏವಮಾಶಂಸಿತ ಉದ್ಧವೇನ
ಭಾಗವತಮುಖ್ಯೇನ ದಾಶಾರ್ಹಮುಖ್ಯಃ ।
ಸಭಾಜಯನ್ ಭೃತ್ಯವಚೋ ಮುಕುನ್ದ-
ಸ್ತಮಾಬಭಾಷೇ ಶ್ರವಣೀಯವೀರ್ಯಃ ॥೧॥

"ಪರೀಕ್ಷಿತಮಹಾರಾಜ! ಭಾಗವತೋತ್ತಮನಾದ ಉದ್ಧವನು ಹೀಗೆ ಹೇಳಲು, ಕೇಳಲ್ಪಡಬೇಕಾದ ವೀರ್ಯಗಾಥೆಗಳುಳ್ಳವನಾಗಿದ್ದ, ದಾಶಾರ್ಹ ಮುಖ್ಯನಾದ ಶ್ರೀಕೃಷ್ಣನು ಸೇವಕನ ಮಾತನ್ನು ಪ್ರಶಂಸೆ ಮಾಡುತ್ತಾ ಅವನನ್ನು ಕುರಿತು ಹೇಳಿದನು...:

ಬಾರ್ಹಸ್ಪತ್ಯ ಸ ವೈ ನಾತ್ರ ಸಾಧುರ್ವೈ ದುರ್ಜನೇರಿತೈಃ ।
ದುರುಕ್ತೈರ್ಭಿನ್ನಮಾತ್ಮಾನಂ ಯಃ ಸಮಾಧಾತುಮೀಶ್ವರಃ ॥೨॥

ನ ತಥಾ ತಪ್ಯತೇ ವಿದ್ಧಃ ಪುಮಾನ್ ಬಾಣೈಃ ಸುಮರ್ಮಗೈಃ ।
ಯಥಾ ತುದನ್ತಿ ಮರ್ಮಸ್ಥಾ ಹ್ಯಸತಾಂ ಪರುಷೇಷವಃ ॥೩॥

ಬಾರ್ಹಸ್ಪತ್ಯನೇ! (ಬೃಹಸ್ಪತಿಯ ಶಿಷ್ಯನೇ!) ಉದ್ಧವ! ನೀನು ಹೇಳಿದ್ದು ನಿಜ. ದುರಾತ್ಮರಾಡುವ ಕೊಂಕಿನ ಮಾತುಗಳಿಂದ ನೋಯಿಸಲ್ಪಟ್ಟ ಮನಸ್ಸನ್ನು ಸಮಾಧಾನಗೊಳಿಸಲು ಸಮರ್ಥನಾದ ಸಾಧುಪುರುಷನು ಈ ಲೋಕದಲ್ಲಿಯೇ ಇಲ್ಲವೆನ್ನಬಹುದು. ದುರಾತ್ಮರಾಡುವ ದುರುಕ್ತಿಗಳು ಹೃದಯದಲ್ಲಿ ಎಷ್ಟು ಯಾತನೆಯನ್ನುಂಟುಮಾಡುತ್ತವೆಯೆಂದರೆ ಶತ್ರುವಾದ ವನು ಮರ್ಮಸ್ಥಳದಲ್ಲಿ ಪ್ರಯೋಗಿಸುವ ವಿಷಯುಕ್ತಬಾಣವು ಕೂಡ ಅಷ್ಟು ಯಾತನೆ ಯನ್ನುಂಟುಮಾಡುವುದಿಲ್ಲ. ಮರ್ಮಸ್ಥಳದಲ್ಲಿ ಪ್ರಯೋಗಿಸುವ ಬಾಣಗಳ ಗಾಯವಾದರೂ ಸ್ವಲ್ಪ ದಿವಸಗಳಲ್ಲಿಯೇ ಮಾಯಬಹುದು. ಆದರೆ ಹೃದಯವನ್ನು ಹೊಕ್ಕ ದುರಾತ್ಮರ ವಾಕ್ಶಲ್ಯಗಳಿಂದುಂಟಾಗುವ ಮನೋವ್ಯಾಧಿಯು ಪ್ರಾಣಾಂತ್ಯದವರೆಗೆ ಗುಣವಾಗುವುದೇ ಇಲ್ಲ.

ಪ್ರಿಯಸಖನೇ! ಈ ವಿಷಯದಲ್ಲಿ ಮಹಾಪುಣ್ಯಕರವಾದ ಇತಿಹಾಸ

ವೊಂದನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು. ದುರ್ಜನರಿಂದ ಅವಮಾನ ಗೊಳಿಸಲ್ಪಟ್ಟರೂ ಧೈರ್ಯವನ್ನು ಕಳೆದುಕೊಳ್ಳದೆ ಇದು ತನ್ನ ಪೂರ್ವಜನ್ಮದ ಕರ್ಮದ ಫಲವೆಂದು ಭಾವಿಸಿಕೊಂಡು ಸಮಾಧಾನದಿಂದಲೇ ಹೇಳಿದ ಭಿಕ್ಷುವಿನ ಗೀತೆಯಿದು.

ಹಿಂದಿನ ಕಾಲದಲ್ಲಿ ಉಜ್ಜಯಿನಿಯಲ್ಲಿ ಒಬ್ಬ ಬ್ರಾಹ್ಮಣನು ವಾಸ ವಾಗಿದ್ದನು. ಕೃಷಿ-ವಾಣಿಜ್ಯಾದಿ ವೃತ್ತಿಗಳಿಂದ ಅಪಾರವಾದ ಐಶ್ವರ್ಯ ವನ್ನು ಸಂಪಾದಿಸಿದ್ದ ಅವನು ಅತ್ಯಂತ ಕೃಪಣನೂ, ಕಾಮಿಯೂ, ಲೋಭಿಯೂ ಆಗಿದ್ದನು. ಆತನು ಮಾತು-ಮಾತಿಗೂ ಕೋಪಗೊಳ್ಳುತ್ತಿ ದ್ದನು. ಅವನು ತನ್ನ ಜ್ಞಾತಿಗಳನ್ನೂ, ಬಂಧುಗಳನ್ನೂ, ಅತಿಥಿಗಳನ್ನೂ ಒಳ್ಳೆಯ ಮಾತಿನಿಂದ ಕೂಡ ಆದರಿಸುತ್ತಿರಲಿಲ್ಲ. ಭೋಜನಾದಿಗಳಿಂದ ಸತ್ಕರಿಸುವುದೆಲ್ಲಿ ಬಂತು? ಹೀಗಾಗಿ ಅವನ ಮನೆಯ ಕಡೆ ಯಾರೂ ಸುಳಿಯುತ್ತಿರಲಿಲ್ಲ. ಅವನ ಮನೆಯೂ ಶೂನ್ಯಾಗಾರವಾಗಿದ್ದಿತು. ತಾನು ಗಳಿಸಿಟ್ಟಿದ್ದ ಅಪಾರವಾದ ಐಶ್ವರ್ಯದಿಂದ ತಾನಾದರೂ ಸುಖೋಪಭೋಗ ಗಳನ್ನು ಅನುಭವಿಸುತ್ತಿದ್ದನೇ?–ಎಂದರೆ : ಅದೂ ಇಲ್ಲ. ತನ್ನ ಸುಖ ಕ್ಕಾದರೂ ಬಿಡಿಗಾಸನ್ನೂ ವೆಚ್ಚಮಾಡುತ್ತಿರಲಿಲ್ಲ. ಹೀಗಾಗಿ ಆ ಬ್ರಾಹ್ಮ ಣನು ಕಡುಲೋಭಿಯಾಗಿದ್ದನು. ಕಡುಲೋಭಿಯೂ ದುಶ್ಶೀಲನೂ ಆಗಿರು ವವನನ್ನು ಕಂಡರೆ ಅವನ ಮಕ್ಕಳು-ಬಾಂಧವರೂ ಅವನಿಗೆ ದ್ರೋಹ ವನ್ನೆಸಗುವುದು ಸ್ವಾಭಾವಿಕ. ಅವನ ದುಃಸ್ವಭಾವವನ್ನು ಕಂಡು ಅವನ ಪತ್ನಿಯರೂ, ಹೆಣ್ಣುಮಕ್ಕಳೂ, ಗಂಡುಮಕ್ಕಳೂ ಸೇವಕರೂ ಸಂಕಟ ಪಡುತ್ತಿದ್ದರು. ಅವನಿಗೆ ಒಳ್ಳೆಯದಾಗಲೆಂದು ಯಾವ ಕಾರ್ಯವನ್ನೂ ಅವರು ಮಾಡುತ್ತಿರಲಿಲ್ಲ. ಅನಿಷ್ಟವನ್ನೇ ಬಯಸುತ್ತಿದ್ದರು. ತಾನೂ ತಿನ್ನದೇ ಇತರರಿಗೂ ಕೊಡದೇ ಯಕ್ಷನಂತೆ ಗಳಿಸಿದ ಐಶ್ವರ್ಯವನ್ನು ಸಂರಕ್ಷಿಸುತ್ತಿದ್ದ ಬ್ರಾಹ್ಮಣನಿಗೆ ಇಹ-ಪರಗಳೆರಡರಲ್ಲಿಯೂ ಸುಖವಿಲ್ಲ ವಾಯಿತು. ಉಭಯಲೋಕಗಳಿಂದಲೂ ಭ್ರಷ್ಟನಾದ ಧರ್ಮ-ಕರ್ಮ ಗಳಿಂದಲೂ ವಿಹೀನನಾಗಿದ್ದ ಅವನ ವಿಷಯದಲ್ಲಿ ಐಶ್ವರ್ಯಕ್ಕೆ ಭಾಗಿಗಳಾದ ಐವರೂ ಕುಪಿತರಾದರು. (ಪಂಚಮಹಾಯಜ್ಞಕ್ಕೆ ಭಾಗಿಗಳಾದ ದೇವತೆ

ಗಳು ಕುಪಿತರಾದರು.) ಪಂಚಮಹಾಯಜ್ಞಗಳ ದೇವತೆಗಳನ್ನು ತಿರಸ್ಕರಿಸಿದ ಕಾರಣದಿಂದಾಗಿ ಅವನು ಹಿಂದೆ ಮಾಡಿದ ಪುಣ್ಯದ ಅವಲಂಬನೆಯಿಂದ ಗಳಿಸಿದ್ದ ಐಶ್ವರ್ಯವು ಶಿಥಿಲವಾಗುತ್ತಾ ಬಂದಿತು. ಬಹಳವಾದ ಆಯಾಸದಿಂದಲೂ, ಪರಿಶ್ರಮದಿಂದಲೂ ಗಳಿಸಿಟ್ಟಿದ್ದ ಅಪಾರವಾದ ಅವನ ಐಶ್ವರ್ಯವು ಅವನ ಕಣ್ಮುಂದೆಯೇ ಹಾಳಾಗತೊಡಗಿತು. ಐಶ್ವರ್ಯದ ಸ್ವಲ್ಪ ಭಾಗವನ್ನು ಜ್ಞಾತಿಗಳು ದೋಚಿಕೊಂಡು ಹೋದರು. ಸ್ವಲ್ಪ ಭಾಗವನ್ನು ಕಳ್ಳಕಾಕರು ಕೊಳ್ಳೆಹೊಡೆದರು. ಅತಿವೃಷ್ಟಿ-ಅನಾವೃಷ್ಟಿ-ಅಗ್ನಿ– ಇವೇ ಮುಂತಾದ ದೈವಿಕವಾದ ಕಾರಣಗಳಿಂದ ಮತ್ತೊಂದು ಭಾಗ ಐಶ್ವರ್ಯವು ನಷ್ಟವಾಯಿತು. ಹೆಸರಿಗೆ ಮಾತ್ರವೇ ಬ್ರಾಹ್ಮಣನಾಗಿದ್ದ ಅವನ ಅಳಿದುಳಿದ ಐಶ್ವರ್ಯವನ್ನು ಆ ಊರಿನ ಜನರು ಲೂಟಿಮಾಡಿದರು. ರಾಜನು ದಂಡದ ರೂಪವಾಗಿ ಉಳಿದ ಅವನ ಆಸ್ತಿಯೆಲ್ಲವನ್ನು ಸ್ವಾಧೀನಪಡಿಸಿಕೊಂಡನು. ಉದ್ಧವ! ಹೀಗೆ ಅವನ ಅಪಾರವಾದ ಐಶ್ವರ್ಯವು ನಷ್ಟವಾಗಿ ಹೋಯಿತು. ಆ ಬಡಪಾಯಿಯು ತಾನು ಗಳಿಸಿದ ಐಶ್ವರ್ಯದಿಂದ ಧರ್ಮವನ್ನು ಸಂಪಾದಿಸಲಿಲ್ಲ. ತಾನದನ್ನು ಉಪಭೋಗಿಸಲೂ ಇಲ್ಲ. ಸ್ವಜನರು ಅವನನ್ನು ಉಪೇಕ್ಷಿಸತೊಡಗಿದರು. ಆ ಬ್ರಾಹ್ಮಣನು ಭಯಂಕರವಾದ ಚಿಂತೆಗೊಳಗಾದನು. ಅತುಲೈಶ್ವರ್ಯವನ್ನು ಕಳೆದು ಕೊಂಡು ಸಂಕಟಕ್ಕೊಳಗಾದ ಅವನು ಸುದೀರ್ಘವಾಗಿ ಆಲೋಚಿಸ ತೊಡಗಿದನು. ತಾನು ಮಾಡುತ್ತಿದ್ದ ದುಷ್ಕಾರ್ಯಕ್ಕಾಗಿ ಮನಸ್ಸು ಖೇದಗೊಂಡಿತು. ಕಣ್ಣಿನಲ್ಲಿ ನೀರು ಹರಿಯತೊಡಗಿತು. ಕಂಠವು ಗದ್ಗದಿತವಾಯಿತು. ಹೀಗೆಯೇ ಯೋಚಿಸುತ್ತಿರಲಾಗಿ ಇದ್ದಕ್ಕಿದ್ದಂತೆಯೇ ಅವನಲ್ಲಿ ವೈರಾಗ್ಯದ ಬುದ್ಧಿಯು ಉದಯಿಸಿತು. ಆಗ ಆ ಬ್ರಾಹ್ಮಣನು ತನ್ನಲ್ಲಿಯೇ ತಾನು ಹೇಳಿಕೊಂಡನು.

“ಅಯ್ಯೋ! ಕಷ್ಟ-ಕಷ್ಟ! ನಾನು ವ್ಯರ್ಥವಾಗಿ ಇದುವರೆವಿಗೂ ನನ್ನ ಈ ದೇಹವನ್ನು ಸವೆಸಿದೆನು. ಕೇವಲ ಧನಸಂಗ್ರಹಕ್ಕಾಗಿ ನಾನು ಇಷ್ಟು ಪರಿಶ್ರಮಿಸಿದೆನೇ ಹೊರತು ಧರ್ಮಕ್ಕಾಗಲೀ, ಕಾಮಕ್ಕಾಗಲೀ ನಾನಿದನ್ನು ವ್ಯಯಮಾಡಲೇ ಇಲ್ಲ.

ಪ್ರಾಯೇಣಾರ್ಥಾಃ ಕದರ್ಯಾಣಾಂ ನ ಸುಖಾಯ ಕದಾಚನ ।
ಇಹ ಚಾತ್ಮೋಪತಾಪಾಯ ಮೃತಸ್ಯ ನರಕಾಯ ಚ ॥೧೫॥

ಪ್ರಾಯಶಃ ಕಡುಲೋಭಿಗಳಾದವರ ಐಶ್ವರ್ಯವು ಸ್ವಸುಖಕ್ಕಾಗಲೀ ಇತರ ಯಾವುದೇ ಪ್ರಯೋಜನಕ್ಕಾಗಲೀ ವ್ಯಯಿಸಲ್ಪಡುವುದಿಲ್ಲ. ಅವರು ಗಳಿಸುವ ಐಶ್ವರ್ಯಕ್ಕೆ ಇಹದಲ್ಲಿ ಸಂಗ್ರಹಿಸಿಡುವುದಕ್ಕಾಗಿ ದೇಹಶ್ರಮ, ಪರದಲ್ಲಿ ನರಕವಾಸ–ಇಷ್ಟು ಮಾತ್ರವೇ ಪ್ರಯೋಜನ.

ಯಶೋ ಯಶಸ್ವಿನಾಂ ಶುದ್ಧಂ ಶ್ಲಾಘ್ಯಾ ಯೇ ಗುಣಿನಾಂ ಗುಣಾಃ ।
ಲೋಭಃ ಸ್ವಲ್ಪೋಽಪಿ ತಾನ್ಹನ್ತಿ ಶ್ವಿತ್ರೋ ರೂಪಮಿವೇಪ್ಸಿತಮ್ ॥೧೬॥

ಲೋಭವು ಸ್ವಲ್ಪ ಮಾತ್ರವೇ ಇದ್ದರೂ–ಅಲ್ಪವಾಗಿರುವ ತೊನ್ನು ರೂಪವನ್ನೇ ಕೆಡಿಸಿಬಿಡುವಂತೆ–ಯಶೋವಂತರ ಶುದ್ಧವಾದ ಯಶಸ್ಸನ್ನೂ ಗುಣವಂತರ ಶ್ಲಾಘನೀಯವಾದ ಗುಣಗಳನ್ನೂ ಕೆಡಿಸಿಬಿಡುತ್ತದೆ.

ಅರ್ಥಸ್ಯ ಸಾಧನೇ ಸಿದ್ಧೇ ಉತ್ಕರ್ಷೇ ರಕ್ಷಣೇ ವ್ಯಯೇ ।
ನಾಶೋಪಭೋಗ ಆಯಾಸಸ್ತ್ರಾಸಶ್ಚಿನ್ತಾ ಭ್ರಮೋ ನೃಣಾಮ್ ॥೧೭॥

ಮಾನವರಿಗೆ ಹಣವನ್ನು ಸಂಪಾದಿಸುವಾಗ ಆಯಾಸವಾಗುತ್ತದೆ. ಸಂಪಾದಿಸಿದ್ದನ್ನು ವೃದ್ಧಿಗೊಳಿಸುವಾಗ ಕಷ್ಟವಾಗುತ್ತದೆ. ರಕ್ಷಿಸುವಾಗ ಭಯವಾಗುತ್ತದೆ. ಖರ್ಚುಮಾಡಿದಾಗ ಚಿಂತೆಯಾಗುತ್ತದೆ. ಉಪ ಭೋಗಿಸುವಾಗ ಸಂಕಟವಾಗುತ್ತದೆ. ನಷ್ಟವಾಗಿ ಹೋದರಂತೂ ತಲೆಯೇ ತಿರುಗಿ ಹೋಗುತ್ತದೆ. ಬುದ್ಧಿಭ್ರಮಣೆಯಾಗುತ್ತದೆ.

ಸ್ತೇಯಂ ಹಿಂಸಾನೃತಂ ದಮ್ಭಃ ಕಾಮಃ ಕ್ರೋಧಃ ಸ್ಮಯೋ ಮದಃ ।
ಭೇದೋ ವೈರಮವಿಶ್ವಾಸಃ ಸಂಸ್ಪರ್ಧಾ ವ್ಯಸನಾನಿ ಚ ॥೧೮॥

ಏತೇ ಪಞ್ಚದಶಾನರ್ಥಾ ಹ್ಯರ್ಥಮೂಲಾ ಮತಾ ನೃಣಾಮ್ ।
ತಸ್ಮಾದನರ್ಥಮರ್ಥಾಖ್ಯಂ ಶ್ರೇಯೋಽರ್ಥೀ ದೂರತಸ್ತ್ಯಜೇತ್ ॥೧೯॥

ಕಳ್ಳತನ, ಹಿಂಸೆ, ಸುಳ್ಳುಹೇಳುವುದು, ದಂಭ, ಕಾಮ, ಕ್ರೋಧ, ಗರ್ವ, ಅಹಂಕಾರ, ಭೇದಬುದ್ಧಿ, ವೈರ, ಅಪನಂಬಿಕೆ, ಸ್ಪರ್ಧೆ, ಸ್ತ್ರೀಲಂಪ ಟುತ್ವ, ಜೂಜು ಮತ್ತು ಮದ್ಯ–ಈ ಹದಿನೈದು ಅನರ್ಥಗಳು ಮನುಷ್ಯ

ನಿಗೆ ಧನದ ಕಾರಣದಿಂದಲೇ ಒದಗಿಬರುತ್ತವೆ. ಆದುದರಿಂದ ಶ್ರೇಯಸ್ಸನ್ನು ಬಯಸುವವನು ಅರ್ಥವೆಂಬ ಹೆಸರನ್ನು ಹೊಂದಿರುವ ಅನರ್ಥದ ಮೊಟ್ಟೆಯನ್ನು ದೂರದಿಂದಲೇ ಪರಿತ್ಯಜಿಸಬೇಕು.

ಭಿದ್ಯನ್ತೇ ಭ್ರಾತರೋ ದಾರಾಃ ಪಿತರಃ ಸುಹೃದಸ್ತಥಾ ।
ಏಕಾಸ್ನಿಗ್ಧಾಃ ಕಾಕಿಣಿನಾ ಸದ್ಯಃ ಸರ್ವೇಽರಯಃ ಕೃತಾಃ ॥೨೦॥

ಏಕದೇಹದಂತೆ ವ್ಯವಹರಿಸುತ್ತಿದ್ದ ಅಣ್ಣ-ತಮ್ಮಂದಿರು, ಗಂಡ-ಹೆಂಡತಿಯರು, ತಂದೆ-ತಾಯಿಗಳು, ಗೆಳೆಯರೂ ಒಂದು ಕಾಸಿನ ನಿಮಿತ್ತವಾಗಿ ಜಗಳವಾಡಿ ಪರಸ್ಪರಸ್ನೇಹವನ್ನು ತೊರೆದು ಪರಸ್ಪರವೈರಿಗಳಾಗಿಬಿಡುತ್ತಾರೆ.

ಅರ್ಥೇನಾಲ್ಪೀಯಸಾ ಹ್ಯೇತೇ ಸಂರಬ್ಧಾ ದೀಪ್ತಮನ್ಯವಃ ।
ತ್ಯಜನ್ತ್ಯಾಶು ಸ್ಪೃಧೋ ಘ್ನನ್ತಿ ಸಹಸೋತ್ಸೃಜ್ಯ ಸೌಹೃದಮ್ ॥೨೧॥

ಕಡುಲೋಭಿಗಳಾದವರು ಸ್ವಲ್ಪಹಣಕ್ಕಾದರೂ ಕ್ಷೋಭೆಗೊಳ್ಳುತ್ತಾರೆ. ಸಿಟ್ಟಿನಿಂದ ಉರಿದುಬೀಳುತ್ತಾರೆ. ಹಲವಾರು ವರ್ಷಗಳಿಂದಲೂ ನಡೆದುಬಂದ ಸ್ನೇಹವನ್ನು ಹಣದ ಕಾರಣದಿಂದಾಗಿ ಕ್ಷಣಮಾತ್ರದಲ್ಲಿ ತ್ಯಜಿಸಿಬಿಡುತ್ತಾರೆ. ಚಿಕ್ಕಾಸಿಗೂ ಜಗಳವಾಡುವ ಆ ಲೋಭಿಗಳು ಸುಹೃದರನ್ನು ಕೊಲ್ಲುವುದಕ್ಕೂ ಹೇಸುವುದಿಲ್ಲ.

ಲಬ್ಧ್ವಾ ಜನ್ಮಾಮರಪ್ರಾರ್ಥ್ಯಂ ಮಾನುಷ್ಯಂ ತದ್ವಿಜಾಗ್ರ್ಯತಾಮ್ ।
ತದನಾದೃತ್ಯ ಯೇ ಸ್ವಾರ್ಥಂ ಘ್ನನ್ತಿ ಯಾನ್ತ್ಯಶುಭಾಂ ಗತಿಮ್ ॥೨೨॥

ಯಾರು ದೇವತೆಗಳೂ ಬಯಸುವ ಮನುಷ್ಯಜನ್ಮವನ್ನು ಅದರಲ್ಲಿಯೂ ಬ್ರಾಹ್ಮಣಜನ್ಮವನ್ನು ಪಡೆದು ತಮ್ಮ ವರ್ಣಾಶ್ರಮ ಧರ್ಮಗಳನ್ನು ಅನಾದರಿಸಿ ಆತ್ಮಹಿತವನ್ನು ಹಾಳುಮಾಡಿಕೊಳ್ಳುವರೋ ಅಂತಹವರು ದುರ್ಗತಿಯನ್ನೈದುವರು.

ಸ್ವರ್ಗಾಪವರ್ಗಯೋರ್ದ್ವಾರಂ ಪ್ರಾಪ್ಯ ಲೋಕಮಿಮಂ ಪುಮಾನ್ ।
ದ್ರವಿಣೇ ಕೋಽನುಷಜ್ಜೇತ ಮರ್ತ್ಯೋಽನರ್ಥಸ್ಯ ಧಾಮನಿ ॥೨೩॥

ಸ್ವರ್ಗ-ಮೋಕ್ಷಗಳಿಗೆ ಹೆಬ್ಬಾಗಿಲಿನಂತಿರುವ ಈ ಮನುಷ್ಯಲೋಕವನ್ನು

ಹೊಂದಿ ಯಾವ ಮನುಷ್ಯನು ತಾನೇ ಅನರ್ಥಕ್ಕೆ ತವರುಮನೆಯಂತಿರುವ ಹಣದ ವ್ಯವಹಾರದಲ್ಲಿ ತನ್ನನ್ನು ತಾನೇ ತೊಡಗಿಸಿಕೊಳ್ಳುತ್ತಾನೆ?

ದೇವರ್ಷಿಪಿತೃಭೂತಾನಿ ಜ್ಞಾತೀನ್ ಬನ್ಧೂಂಶ್ಚ ಭಾಗಿನಃ ।
ಅಸಂವಿಭಜ್ಯ ಚಾತ್ಮಾನಂ ಯಕ್ಷವಿತ್ತಃ ಪತತ್ಯಧಃ ॥೨೪॥

ಧನದ ಉಪಭೋಗಕ್ಕೆ ಭಾಗಿಗಳಾದ (ಹಕ್ಕುದಾರರಾದ) ದೇವರ್ಷಿ-ಪಿತೃಗಳನ್ನೂ, ಮನುಷ್ಯರನ್ನೂ, ಪ್ರಾಣಿಗಳನ್ನೂ, ಜ್ಞಾತಿ-ಬಾಂಧವರನ್ನೂ ಅನ್ನಾದಿಗಳಿಂದ ತೃಪ್ತಿಪಡಿಸದಿರುವ ಸುಖೋಪ ಭೋಗಗಳನ್ನು ತಾನೂ ಉಪಭೋಗಿಸದಿರುವ ಯಕ್ಷವಿತ್ತನು (ಯಕ್ಷನಂತೆ ಸಂಗ್ರಹಿಸಿದ ಧನವನ್ನು ರಕ್ಷಿಸುವುದರಲ್ಲಿಯೇ ಆಸಕ್ತನಾಗಿರತಕ್ಕ ನನ್ನಂತಹವನು) ಅಧೋಗತಿಗೆ ಹೋಗುತ್ತಾನೆ.

ವ್ಯರ್ಥಯಾರ್ಥೇಹಯಾ ವಿತ್ತಂ ಪ್ರಮತ್ತಸ್ಯ ವಯೋ ಬಲಮ್ ।
ಕುಶಲಾ ಯೇನ ಸಿಧ್ಯನ್ತಿ ಜರಠಃ ಕಿಂ ನು ಸಾಧಯೇ ॥೨೫॥

ಅಯ್ಯೋ! ನಾನು ನನ್ನ ಕರ್ತವ್ಯದಿಂದ ಚ್ಯುತನಾಗಿಬಿಟ್ಟೆನಲ್ಲವೇ? ಪ್ರಮತ್ತನಾಗಿದ್ದ ನಾನು ನನ್ನ ಆಯುಷ್ಯ, ಧನ, ಬಲ, ಪೌರುಷ–ಎಲ್ಲವನ್ನೂ ಹಾಳುಮಾಡಿಕೊಂಡುಬಿಟ್ಟೆನು. ವಿವೇಕಿಗಳಾದವರು ಇಂತಹ ಈ ಸಾಧನಸಂಪತ್ತಿಗಳಿಂದಲೇ ಮೋಕ್ಷವನ್ನೂ ಸಂಪಾದಿಸಿಕೊಂಡು ಬಿಡುತ್ತಿದ್ದರು. ಎಲ್ಲವನ್ನೂ ಕಳೆದುಕೊಂಡು ಮುದುಕನಾಗಿರುವ ನಾನು ಈಗ ಏನನ್ನು ತಾನೇ ಸಾಧಿಸಿಯೇನು?

ಕಸ್ಮಾತ್ ಸಙ್ಕ್ಲಿಶ್ಯತೇ ವಿದ್ವಾನ್ ವ್ಯರ್ಥಯಾರ್ಥೇಹಯಾಸಕೃತ್ ।
ಕಸ್ಯಚಿನ್ಮಾಯಯಾ ನೂನಂ ಲೋಕೋಽಯಂ ಸುವಿಮೋಹಿತಃ ॥೨೬॥

ನನ್ನಂತಹ ವಿದ್ವಾಂಸನೂ ಕೂಡ ವ್ಯರ್ಥವಾದ ಅರ್ಥಾಪೇಕ್ಷೆಯಿಂದ ಬಾರಿ-ಬಾರಿಗೂ ಕ್ಲೇಶಪಡುತ್ತಿರುವುದೇಕೆ? ನಿಶ್ಚಯವಾಗಿಯೂ ಯಾವನದೋ ಮಾಯೆಯಿಂದಾಗಿ ಈ ಲೋಕವು ಸಂಪೂರ್ಣವಾಗಿ ವಿಮೋಹಗೊಂಡಿದೆ.

ಕಿಂ ಧನೈರ್ಧನದೈರ್ವಾ ಕಿಂ ಕಾಮೈರ್ವಾ ಕಾಮದೈರುತ ।
ಮೃತ್ಯುನಾ ಗ್ರಸ್ಯಮಾನಸ್ಯ ಕರ್ಮಭಿರ್ವೋತ ಜನ್ಮದೈಃ ॥೨೭॥

ಕಾಲಸ್ವರೂಪನಾದ ಮೃತ್ಯುವಿನಿಂದ ನುಂಗಲ್ಪಡುತ್ತಿರುವವನಿಗೆ ಐಶ್ವರ್ಯಗಳಿಂದೇನಾಗಬೇಕಾಗಿದೆ? ಐಶ್ವರ್ಯವನ್ನು ಕೊಡುವ ದೇವತೆಗಳಿಂದಾಗಲೀ, ಮನುಷ್ಯರಿಂದಾಗಲೀ ಏನಾಗಬೇಕಾಗಿದೆ? ಕಾಮೋಪಭೋಗಗಳಿಂದೇನಾಗಬೇಕಾಗಿದೆ? ಕಾಮೋಪಭೋಗಗಳನ್ನು ಫಲರೂಪವಾಗಿ ಕೊಡುವ ಮತ್ತು ಹುಟ್ಟು-ಸಾವುಗಳೆಂಬ ಸಂಸಾರಚಕ್ರದಲ್ಲಿ ಸಿಕ್ಕಿಸುವ ಕಾಮ್ಯಕರ್ಮಗಳಿಂದಾದರೂ ಏನಾಗಬೇಕಾಗಿದೆ?

ನೂನಂ ಮೇ ಭಗವಾಂಸ್ತುಷ್ಟಃ ಸರ್ವದೇವಮಯೋ ಹರಿಃ ।
ಯೇನ ನೀತೋ ದಶಾಮೇತಾಂ ನಿರ್ವೇದಶ್ಚಾತ್ಮನಃ ಪ್ಲವಃ ॥೨೮॥

ಅಬ್ಬ! ನಿಶ್ಚಯವಾಗಿಯೂ ಸರ್ವದೇವಮಯನಾದ ಶ್ರೀಹರಿಯು ನನ್ನ ವಿಷಯದಲ್ಲಿ ಸಂತುಷ್ಟನಾಗಿದ್ದಾನೆ. ಸಂತುಷ್ಟನಾಗಿ ನನ್ನಲ್ಲಿದ್ದ ಸಕಲವನ್ನೂ ಅಪಹರಿಸಿ ನನ್ನನ್ನು ಈ ದುರ್ದೆಶೆಗೆ ಈಡುಮಾಡಿ ಸಂಸಾರವೆಂಬ ಸಮುದ್ರವನ್ನು ದಾಟಲು ದೋಣಿಯ ರೂಪವಾಗಿರುವ ವೈರಾಗ್ಯವನ್ನು ನನ್ನ ಮನಸ್ಸಿನಲ್ಲಿ ಕಲ್ಪಿಸಿದನಲ್ಲವೇ? ಎಂತಹ ಕರುಣಾಳುವಪ್ಪಾ ಆತನು!

ಸೋಽಹಂ ಕಾಲಾವಶೇಷೇಣ ಶೋಷಯಿಷ್ಯೇಽಙ್ಗಮಾತ್ಮನಃ ।
ಅಪ್ರಮತ್ತೋಽಖಿಲಸ್ವಾರ್ಥೇ ಯದಿ ಸ್ಯಾತ್ಸಿದ್ಧ ಆತ್ಮನಿ ॥೨೯॥

ಭಗವಂತನ ಅನುಗ್ರಹದಿಂದ ಸಂಸಾರವನ್ನು ದಾಟಲು ವೈರಾಗ್ಯವೆಂಬ ನಾವೆಯನ್ನು ಪಡೆದುಕೊಂಡಿರುವ ನಾನು, ನನ್ನ ಆಯುಷ್ಯವೇನಾದರೂ ಉಳಿದಿದ್ದರೆ, ಉಳಿದಿರುವ ಆ ನನ್ನ ಆಯುಷ್ಯದಲ್ಲಿ ಆತ್ಮಲಾಭದಲ್ಲಿಯೇ ಸಂತುಷ್ಟನಾಗಿರುತ್ತಾ ಪರಮಾರ್ಥಪ್ರಾಪ್ತಿಯಲ್ಲಿ ಜಾಗರೂಕನಾಗಿದ್ದುಕೊಂಡು, ಈ ಸಮಯದಲ್ಲಿಯೇ ನಾನು ತಪಸ್ಸನ್ನು ಮಾಡುತ್ತಾ ನನ್ನ ಶರೀರವನ್ನು ಶೋಷಿಸಿಬಿಡುತ್ತೇನೆ.

ತತ್ರ ಮಾಮನುಮೋದೇರನ್ದೇವಾಸ್ತ್ರಿಭುವನೇಶ್ವರಾಃ ।
ಮುಹೂರ್ತೇನ ಬ್ರಹ್ಮಲೋಕಂ ಖಟ್ವಾಙ್ಗಃ ಸಮಸಾಧಯತ್ ॥೩೦॥

ಮೂರು ಲೋಕಗಳಿಗೂ ಈಶ್ವರರಾದ ಬ್ರಹ್ಮಾದಿದೇವತೆಗಳು ಈ ನನ್ನ ಕಾರ್ಯವನ್ನು ಅನುಮೋದಿಸಿ ಅನುಗ್ರಹಿಸಬಹುದು. ಧ್ಯಾನಬಲದಿಂದ

ಖಟ್ವಾಂಗಮಹಾರಾಜನು ಬ್ರಹ್ಮಲೋಕವನ್ನು ಮುಹೂರ್ತಮಾತ್ರದಲ್ಲಿ ಸಾಧಿಸಿಬಿಟ್ಟನಲ್ಲವೇ!"*

ಶ್ರೀಭಗವಂತನು ಹೇಳುತ್ತಾನೆ :

"ಉದ್ಧವ! ಅವಂತೀದೇಶದ ಆ ದ್ವಿಜಶ್ರೇಷ್ಠನು ಮನಸ್ಸಿನಲ್ಲಿ ಹೀಗೆ ನಿರ್ಧರಿಸಿ 'ನಾನು-ನನ್ನದು'–ಎಂಬ ಹೃದಯದ ಗಂಟುಗಳನ್ನು ಬಿಚ್ಚಿಹಾಕಿ ಶಾಂತನೂ ಮೌನಿಯೂ ಆದ ಸಂನ್ಯಾಸಿ (ಭಿಕ್ಷು)ಯಾಗಿಬಿಟ್ಟನು. ಆ ಸಮಯದಲ್ಲಿ ಅವನಿಗೆ ಯಾವುದೇ ಸ್ಥಾನದಲ್ಲಾಗಲೀ, ವ್ಯಕ್ತಿಯಲ್ಲಾಗಲೀ, ವಸ್ತುವಿನಲ್ಲಾಗಲೀ ಆಸಕ್ತಿಯಿರಲಿಲ್ಲ. ಅವನು ತನ್ನ ಇಂದ್ರಿಯಗಳನ್ನೂ, ಮನಸ್ಸನ್ನೂ, ಪ್ರಾಣಗಳನ್ನೂ ವಶದಲ್ಲಿಟ್ಟುಕೊಂಡಿದ್ದನು. ಅವನು ಭೂಮಂಡಲದಲ್ಲಿ ಸ್ವೇಚ್ಛೆಯಿಂದ ಸಂಚರಿಸುತ್ತಿದ್ದನು. ಅವನು ಭಿಕ್ಷೆಗಾಗಿ ನಗರಕ್ಕಾಗಲೀ ಗ್ರಾಮಕ್ಕಾಗಲೀ ಹೋಗಲೇಬೇಕಾಗಿದ್ದಿತು. ತನ್ನನ್ನು ಯಾರೂ ಗುರುತಿಸದ ರೀತಿಯಲ್ಲಿ ನಗರ-ಗ್ರಾಮಗಳನ್ನು ಅವನು ಪ್ರವೇಶಿಸುತ್ತಿದ್ದನು.

ಹಿಂದೆ ಅವನನ್ನು ನೋಡಿದ್ದ ಕೆಲವರು ದುಷ್ಟರು ಅತ್ಯಂತವೃದ್ಧನೂ ಅವಧೂತನೂ ಆಗಿದ್ದ ಆ ಭಿಕ್ಷುವನ್ನು ಆ ವೇಷದಲ್ಲಿ ಕಂಡೊಡನೆಯೇ ನಾನಾಪ್ರಕಾರವಾದ ತಿರಸ್ಕಾರದ ಮಾತುಗಳಿಂದ ಅವನನ್ನು ಅವಮಾನ ಗೊಳಿಸುತ್ತಿದ್ದರು. ತಿರಸ್ಕಾರದ ಮಾತುಗಳನ್ನಾಡಿದರೂ ಅವನು ಮರು

---

*ಖಟ್ವಾಂಗನು ಸೂರ್ಯವಂಶದಲ್ಲಿ ಹುಟ್ಟಿದ ಪ್ರಸಿದ್ಧನಾದ ಒಬ್ಬ ರಾಜ. ಇವನಿಗೆ ದಿಲೀಪ–ಎಂಬ ಮತ್ತೊಂದು ಹೆಸರಿದ್ದಿತು. ಅವನು ಅತ್ಯಂತ ಪುಣ್ಯಶಾಲಿಯೂ ಮಹಾ ವೀರನೂ ಆಗಿದ್ದನು. ಒಮ್ಮೆ ದೇವೇಂದ್ರನ ಸಹಾಯಕ್ಕಾಗಿ ದೇವಲೋಕಕ್ಕೆ ಹೋಗಿ ರಾಕ್ಷಸರನ್ನು ಸಂಹರಿಸಿದನು. ದೇವತೆಗಳು ಸಂತುಷ್ಟರಾಗಿ ವರವನ್ನು ಬೇಡಿ ಕೊಳ್ಳುವಂತೆ ಹೇಳಿದರು. ಅವನು ಬೇರೆ ಯಾವ ವರವನ್ನೂ ಒಲ್ಲದೆ ತನ್ನ ಆಯುಃಪ್ರಮಾಣವು ಎಷ್ಟಿರುವುದೆಂಬುದನ್ನು ತಿಳಿಸಬೇಕೆಂದು ದೇವತೆಗಳನ್ನು ಕೇಳಿಕೊಂಡನು. ಇನ್ನು ಎರಡು ಯಾಮಗಳ ಕಾಲ ಮಾತ್ರವೇ ನಿನ್ನ ಆಯುಷ್ಯವೆಂದು ದೇವತೆಗಳು ಹೇಳಿದರು. ಆಗ ಒಡನೆಯೇ ದಿಲೀಪನು ದೇವಲೋಕದಿಂದ ತನ್ನ ರಾಜಧಾನಿಯಾದ ಅಯೋಧ್ಯೆಗೆ ಹಿಂದಿರುಗಿ ರಾಜ್ಯಭಾರವನ್ನು ಮಗನಿಗೆ ಒಪ್ಪಿಸಿ ಯೋಗಾರೂಢನಾಗಿ ಕುಳಿತು ದೇಹವನ್ನು ತ್ಯಜಿಸಿದನು. ಅಲ್ಪಕಾಲದಲ್ಲಿಯೇ ಧ್ಯಾನಬಲದಿಂದ ಬ್ರಹ್ಮಲೋಕವನ್ನು ಸೇರಿದನು. (ಪುರಾಣನಾಮ ಚೂಡಾಮಣಿ)

ಮಾತನಾಡದೆ ಮೌನಿಯಾಗಿದ್ದುದನ್ನು ನೋಡಿ ಕೆಲವರು ದುಷ್ಟರು ಅವನು ಹಿಡಿದಿದ್ದ ತ್ರಿದಂಡವನ್ನೇ ಕಸಿದುಕೊಂಡರು. ಕೆಲವರು ಭಿಕ್ಷಾಪಾತ್ರೆಯನ್ನೂ ಕಮಂಡಲುವನ್ನೂ ಕಸಿದುಕೊಂಡರು. ಕೆಲವರು ಕುಳಿತುಕೊಳ್ಳಲು ಇಟ್ಟುಕೊಂಡಿದ್ದ ಆ ಸನವನ್ನೇ ಅಪಹರಿಸಿದರು. ಮತ್ತೆ ಕೆಲವರು ಜಪಮಾಲೆಯನ್ನೇ ಕಸಿದುಕೊಂಡರು. ಕೆಲವರು ಚಿಂದಿಬಟ್ಟೆಗಳನ್ನೂ ನಾರುಬಟ್ಟೆಗಳನ್ನೂ ಕಿತ್ತುಕೊಂಡರು. ಕೆಲವರು ಕಸಿದುಕೊಂಡ ಬಟ್ಟೆಯನ್ನು ಹಿಂದಕ್ಕೆ ಕೊಟ್ಟು ಪುನಃ ಕಿತ್ತುಕೊಳ್ಳುತ್ತಿದ್ದರು. ಭಿಕ್ಷೆಯಿಂದ ದೊರೆತ ಅನ್ನವನ್ನು ಆ ಸಾಧುವು ನದಿಯ ತೀರದಲ್ಲಿ ಕುಳಿತು ತಿನ್ನುತ್ತಿರುವಾಗ ಪಾಪಿಷ್ಠರು ಅನ್ನದಮೇಲೆಯೇ ಮೂತ್ರೋತ್ಸರ್ಜನ ಮಾಡಿ ಸಾಲದೆಂಬಂತೆ ಅವನ ತಲೆಯ ಮೇಲೆ ಉಗುಳುತ್ತಿದ್ದರು. ಸಾಧುವು ಮಾತನಾಡಿದ್ದರೆ ಬಲಾತ್ಕಾರದಿಂದಾದರೂ ಮಾತನಾಡಿಸುತ್ತಿದ್ದರು. ಹಾಗೂ ಮಾತನಾಡದಿದ್ದರೆ ಹೊಡೆಯುತ್ತಿದ್ದರು. ಕೆಲವರು ಅವನನ್ನು ಮಾತಿನಿಂದ ಗದರಿಸುತ್ತಿದ್ದರು. ಕೆಲವರು "ಕಳ್ಳ! ಕಳ್ಳ! ಹಿಡಿದು ಕಟ್ಟಿಹಾಕಿರಿ"–ಎಂದು ಕೂಗುತ್ತಿದ್ದರು. ಕೆಲವರು ಹಿಂದು-ಮುಂದು ನೋಡದೆ ಹಗ್ಗದಿಂದ ಸಾಧುವಿನ ಕೈ-ಕಾಲುಗಳನ್ನು ಕಟ್ಟಿಹಾಕುತ್ತಿದ್ದರು. ಮತ್ತೆ ಕೆಲವರು "ಇವನು ಅನ್ಯಾಯದಿಂದ ಸಂಪಾದಿಸಿದ್ದ ಹಣವನ್ನೆಲ್ಲಾ ಕಳೆದುಕೊಂಡು ನಿರ್ಗತಿಕನಾಗಿ ಹೆಂಡತಿ-ಮಕ್ಕಳಿಂದಲೂ ತಿರಸ್ಕೃತನಾಗಿ ಹೊಟ್ಟೆಹೊರೆಯಲು ಬೇರೆಯ ಮಾರ್ಗವಿಲ್ಲದೆ ತ್ರಿದಂಡ ಸಂನ್ಯಾಸಿಯ ವೇಷವನ್ನು ಧರಿಸಿ ಭಿಕ್ಷೆಬೇಡಲು ಬಂದಿದ್ದಾನೆ"–ಎಂದು ನಿಂದಿಸುತ್ತಾ ಅವಮಾನಗೊಳಿಸುತ್ತಿದ್ದರು. ಮತ್ತೆ ಕೆಲವರು "ಇದೋ ನೋಡಿರಿ! ಇವನು ಮಹಾಮಹಿಮನು. ಹಿಮಾಲಯದಂತೆ ಧೈರ್ಯಶಾಲಿಯು. ಬಕಪಕ್ಷಿಯಂತೆ ದೃಢವಾದ ನಿಶ್ಚಯವುಳ್ಳವನು. ಮಾತನಾಡದೆಯೇ ತನ್ನ ಕಾರ್ಯವನ್ನು ಸಾಧಿಸಿಕೊಳ್ಳುತ್ತಾನೆ"–ಎಂದು ಹಾಸ್ಯಮಾಡುತ್ತಾ ಕೇಕೆಹಾಕಿಕೊಂಡು ನಗುವರು. ಮತ್ತೆ ಕೆಲವರು ಅವನ ಮುಂದೆ ನಿಂತು ಅಪಾನವಾಯುವನ್ನು ಬಿಡುವರು. ಕೆಲವರು ಅವನನ್ನು ಬೊಂಬೆಯನ್ನು ಆಟವಾಡಿಸುವಂತೆ ಆಟವಾಡಿಸುವರು. ಪಕ್ಷಿಗಳನ್ನು ಪಂಜರದಲ್ಲಿಡುವಂತೆ ಹಾಳುಮನೆಯಲ್ಲಿ ಕೂಡಿಹಾಕುವರು.

ಅವಧೂತನು ಇವೆಲ್ಲವನ್ನೂ ಸ್ವೈರಣೆಯಿಂದ ಯಾವ ಮಾತನ್ನೂ ಆಡದೆ ಸಹಿಸಿಕೊಳ್ಳುತ್ತಿದ್ದನು. ಅವನು ಕೆಲವು ವೇಳೆ ಜ್ವರವೇ ಮೊದಲಾದ ರೋಗಗಳಿಂದಾಗಿ ದೈಹಿಕವಾದ ಕಷ್ಟವನ್ನು ಅನುಭವಿಸಬೇಕಾಗುತ್ತಿದ್ದಿತು. ಬಿಸಿಲು-ಮಳೆ-ಗಾಳಿಗಳಿಗೆ ಸಿಕ್ಕಿ ದೈಹಿಕವಾದ ಕಷ್ಟವನ್ನು ಅನುಭವಿಸ ಬೇಕಾಗಿದ್ದಿತು. ದುರ್ಜನರ ಉಪಟಳಕ್ಕೆ ಸಿಕ್ಕಿ ಭೌತಿಕವಾದ ಕಷ್ಟಗಳನ್ನು ಅನುಭವಿಸಬೇಕಾಗುತ್ತಿದ್ದಿತು. ಈ ಎಲ್ಲ ಕಷ್ಟಗಳನ್ನೂ ಅವನು ತಾನು ಮಾಡಿದ ದುಷ್ಕರ್ಮಗಳ ಫಲವೆಂದೂ ಅದನ್ನು ಅನುಭವಿಸಿಯೇ ತೀರಿಸಬೇಕಾಗಿರುವುದೆಂದೂ ದೃಢವಾಗಿ ಭಾವಿಸಿದ್ದನು. ನೀಚಪುರುಷರು ಹಲವಾರು ರೀತಿಗಳಲ್ಲಿ ಅವನನ್ನು ಅವಮಾನಗೊಳಿಸುತ್ತಿದ್ದರೂ, ತಡೆದುಕೊಳ್ಳಲಾಗದಂತಹ ಶಿಕ್ಷೆಯನ್ನು ಕೊಡುತ್ತಿದ್ದರೂ, ಸಂನ್ಯಾಸಧರ್ಮ ದಿಂದ ಭ್ರಷ್ಟನನ್ನಾಗಿ ಮಾಡಲು ಸತತವಾಗಿ ಪ್ರಯತ್ನಿಸುತ್ತಿದ್ದರೂ ಅವಧೂತನು ತನ್ನ ಧರ್ಮದಲ್ಲಿ ಸ್ಥಿರವಾಗಿದ್ದುಕೊಂಡು, ಸಾತ್ವಿಕವಾದ ಧೈರ್ಯವನ್ನು ಅವಲಂಬಿಸಿ ಅರ್ಥಪೂರ್ಣವಾದ ಈ ಶ್ಲೋಕಗಳನ್ನು ಹಾಡಿದನು.

ನಾಯಂ ಜನೋ ಮೇ ಸುಖದುಃಖಹೇತು-
ರ್ನ ದೇವತಾಽತ್ಮಾ ಗ್ರಹಕರ್ಮಕಾಲಾಃ ।
ಮನಃ ಪರಂ ಕಾರಣಮಾಮನನ್ತಿ
ಸಂಸಾರಚಕ್ರಂ ಪರಿವರ್ತಯೇದ್ಯತ್ ॥೪೩॥

ನನ್ನ ಸುಖಕ್ಕೆ ಅಥವಾ ದುಃಖಕ್ಕೆ ಕಾರಣರು ಈ ಜನರಲ್ಲ. ದೇವತೆಗಳಲ್ಲ. ಈ ನನ್ನ ಶರೀರವೂ ಅಲ್ಲ. ಗ್ರಹಗಳಾಗಲೀ ಸತ್ಕರ್ಮ-ದುಷ್ಕರ್ಮಗಳಾಗಲೀ ಅಲ್ಲ. ಕಾಲವೂ ಅಲ್ಲ. ಶ್ರುತಿಗಳೂ ಮತ್ತು ಮಹಾತ್ಮರೂ ಮನುಷ್ಯನ ಸುಖ-ದುಃಖಗಳಿಗೆ ಮನಸ್ಸೇ ಪರಮಕಾರಣವೆಂದು ಹೇಳುತ್ತಾರೆ. ಮನಸ್ಸೇ ಈ ಸಂಸಾರಚಕ್ರವನ್ನು ತಿರುಗಿಸುತ್ತಿದೆ.

ಮನೋ ಗುಣಾನ್ವೈ ಸೃಜತೇ ಬಲೀಯ-
ಸ್ತತಶ್ಚ ಕರ್ಮಾಣಿ ವಿಲಕ್ಷಣಾನಿ ।
ಶುಕ್ಲಾನಿ ಕೃಷ್ಣಾನ್ಯಥ ಲೋಹಿತಾನಿ
ತೇಭ್ಯಃ ಸವರ್ಣಾಃ ಸೃತಯೋ ಭವನ್ತಿ ॥೪೪॥

ಬಲಿಷ್ಠವಾದ ಮನಸ್ಸು ಸತ್ವಾದಿ ಗುಣಗಳನ್ನು ಸೃಷ್ಟಿಸುತ್ತದೆ. ಆ ಗುಣವೃತ್ತಿಗಳಿಂದ ಭಿನ್ನ-ಭಿನ್ನವಾದ ಸಾತ್ತ್ವಿಕ-ರಾಜಸ-ತಾಮಸಕರ್ಮಗಳು ನಡೆಯುತ್ತವೆ. ಆ ಕರ್ಮಗಳಿಗೆ ಅನುಸಾರವಾಗಿ ಜೀವನಿಗೆ ದೇವ-ಮನುಷ್ಯ-ತಿರ್ಯಗ್ಯೋನಿಗಳಲ್ಲಿ ಜನ್ಮವು ಉಂಟಾಗುತ್ತದೆ.

ಅನೀಹ ಆತ್ಮಾ ಮನಸಾ ಸಮೀಹತಾ
ಹಿರಣ್ಮಯೋ ಮತ್ಸಖ ಉದ್ವಿಚಷ್ಟೇ ।
ಮನಃ ಸ್ವಲಿಙ್ಗಂ ಪರಿಗೃಹ್ಯ ಕಾಮಾನ್
ಜುಷನ್ ನಿಬದ್ಧೋ ಗುಣಸಙ್ಗತೋಽಸೌ ॥೪೫॥

ಮನಸ್ಸೇ ಸಮಸ್ತವಾದ ಗುಣವೃತ್ತಿಗಳನ್ನೂ ಸೃಷ್ಟಿಸುತ್ತದೆ. ಆತ್ಮವು ಮನಸ್ಸಿನೊಡನಿದ್ದರೂ ನಿಷ್ಕ್ರಿಯವಾಗಿರುತ್ತದೆ. ಜ್ಞಾನಶಕ್ತಿಪ್ರಧಾನವಾಗಿರುವ ಆ ಆತ್ಮವು ಜೀವಾತ್ಮನಾದ ನನಗೆ ಪುರಾತನಕಾಲದಿಂದಲೂ ಪ್ರಿಯಸಖನಾಗಿದೆ. ಅದು ಮನಸ್ಸಿನ ಕ್ರಿಯೆಗಳ ಸಂಗವಿಲ್ಲದೆ ಅವಿದ್ಯೆಗೊಳಗಾಗದೆ ತತ್ತ್ವಜ್ಞಾನದಿಂದ ಎಲ್ಲವನ್ನೂ ನೋಡುತ್ತಿರುತ್ತದೆ. ಜೀವವಾದರೋ ತನ್ನಲ್ಲಿ ಗುಣಗಳನ್ನೂ—ವಿಷಯಗಳನ್ನೂ ತೋರಿಸಿ ಕೊಳ್ಳುವ ಮನಸ್ಸನ್ನೇ ತಾನೆಂದೇ ಭಾವಿಸಿಕೊಳ್ಳುತ್ತದೆ. ಒಡನೆಯೇ ಅದು ಗುಣಗಳಿಗೆ ಕಟ್ಟುಬಿದ್ದು ವಿಷಯಸುಖಗಳನ್ನು ಅನುಭವಿಸುತ್ತದೆ. ಸಾಧಕನಾದವನು ಅಂತಹ ಮನಸ್ಸನ್ನು ಮೊದಲು ನಿಗ್ರಹಿಸಬೇಕು.

ದಾನಂ ಸ್ವಧರ್ಮೋ ನಿಯಮೋ ಯಮಶ್ಚ
ಶ್ರುತಂ ಚ ಕರ್ಮಾಣಿ ಚ ಸದ್ವ್ರತಾನಿ ।
ಸರ್ವೇ ಮನೋನಿಗ್ರಹಲಕ್ಷಣಾನ್ತಾಃ
ಪರೋ ಹಿ ಯೋಗೋ ಮನಸಃ ಸಮಾಧಿಃ ॥೪೬॥

ದಾನ, ಸ್ವಧರ್ಮಪರಿಪಾಲನೆ, ನಿಯಮ, ಯಮ, ವೇದಾಧ್ಯಯನ, ಸತ್ಕರ್ಮ, ಬ್ರಹ್ಮಚರ್ಯವೇ ಮೊದಲಾದ ಶ್ರೇಷ್ಠವ್ರತಗಳು—ಈ ಎಲ್ಲಕ್ಕೂ ಅಂತಿಮವಾದ ಫಲವೆಂದರೆ ಮನೋನಿಗ್ರಹವೇ ಆಗಿದೆ. ಮನಸ್ಸನ್ನು ನಿಗ್ರಹಿಸಿ ಪರಮಾತ್ಮನಲ್ಲಿ ಏಕಾಗ್ರಗೊಳಿಸುವುದೇ ಶ್ರೇಷ್ಠವಾದ ಯೋಗವೆನಿಸಿಕೊಳ್ಳುತ್ತದೆ.

ಸಮಾಹಿತಂ ಯಸ್ಯ ಮನಃ ಪ್ರಶಾನ್ತಂ
ದಾನಾದಿಭಿಃ ಕಿಂ ವದ ತಸ್ಯ ಕೃತ್ಯಮ್ ।
ಅಸಂಯತಂ ಯಸ್ಯ ಮನೋ ವಿನಶ್ಯ-
ದ್ದಾನಾದಿಭಿಶ್ಚೇದಪರಂ ಕಿಮೇಭಿಃ ॥೪೭॥

ಯಾವನ ಮನಸ್ಸು ಪರಮಾತ್ಮನಲ್ಲಿಯೇ ಏಕಾಗ್ರಗೊಂಡು ಶಾಂತವಾಗಿ ಬಿಟ್ಟಿರುವುದೋ ಅಂತಹವನಿಗೆ ದಾನವೇ ಮೊದಲಾದ ಇತರ ಸತ್ಕರ್ಮಗಳಿಂದ ಆಗಬೇಕಾದ್ದೇನಿದೆ? ಯಾವಾತನ ಮನಸ್ಸು ಪರಮಾತ್ಮನಲ್ಲಿ ಏಕಾಗ್ರವಾಗದೇ ವಿಷಯಸುಖಗಳಲ್ಲಿಯೇ ಅಲೆದಾಡುತ್ತಾ ಹಾಳಾಗಿಹೋಗಿರುತ್ತದೆಯೋ ಅಂತಹವನಿಗೆ ದಾನವೇ ಮೊದಲಾದ ಸತ್ಕರ್ಮಗಳನ್ನು ಮಾಡುವುದರಿಂದ ಯಾವ ಲಾಭವಿದೆ? ಮನಸ್ಸನ್ನು ನಿಗ್ರಹಿಸದೇ ಮಾಡುವ ಯಾವುದೇ ಕಾರ್ಯವೂ ವ್ಯರ್ಥವೇ ಸರಿ.

ಮನೋವಶೇಽನ್ಯೇ ಹ್ಯಭವನ್ ಸ್ಮ ದೇವಾ
ಮನಶ್ಚ ನಾನ್ಯಸ್ಯ ವಶಂ ಸಮೇತಿ ।
ಭೀಷ್ಮೋ ಹಿ ದೇವಃ ಸಹಸಃ ಸಹೀಯಾನ್
ಯುಂಜ್ಯಾದ್ವಶೇ ತಂ ಸ ಹಿ ದೇವದೇವಃ ॥೪೮॥

ಎಲ್ಲ ಇಂದ್ರಿಯಗಳೂ ಮನಸ್ಸಿಗೆ ವಶವಾಗಿರುತ್ತವೆ. ಮನಸ್ಸು ಹೇಳಿದಂತೆ ಕೇಳುತ್ತಿರುತ್ತವೆ. ಆದರೆ ಮನಸ್ಸು ಮಾತ್ರ ಯಾರ ವಶದಲ್ಲಿಯೂ ಇರುವುದಿಲ್ಲ. ಈ ಮನಸ್ಸೆಂಬುದು ಬಲಿಷ್ಠರಿಗಿಂತಲೂ ಅತ್ಯಂತ ಬಲಿಷ್ಠವಾದುದು. ಅತ್ಯಂತಭಯಂಕರವಾದ ದೇವತೆಯೇ ಆಗಿದೆ. ಯಾವನು ಇಂತಹ ಮನಸ್ಸನ್ನು ತನ್ನ ವಶದಲ್ಲಿ ಇಟ್ಟುಕೊಳ್ಳುವನೋ, ಮನಸ್ಸಿಗೆ ಅಧೀನನಾಗಿ ಇರುವುದಿಲ್ಲವೋ, ಅವನೇ ದೇವತೆಗಳಿಗೂ (ಸಮಸ್ತವಾದ ಇಂದ್ರಿಯಗಳಿಗೂ) ದೇವನು–ಸ್ವಾಮಿಯು–ಎನಿಸಿ ಕೊಳ್ಳುತ್ತಾನೆ.*

ತಂ ದುರ್ಜಯಂ ಶತ್ರುಮಸಹ್ಯವೇಗ-
ಮರುನ್ತುದಂ ತನ್ನ ವಿಜಿತ್ಯ ಕೇಚಿತ್ ।

---

* ಮನಸೋ ವಶೇ ಸರ್ವಮಿದಂ ಬಭೂವ । ನಾನ್ಯಸ್ಯಮನೋ ವಶಮನ್ವಿಯಾಯ। ಭೀಷ್ಮೋ ಹಿ ದೇವಃ ಸಹಸಃ ಸಹೀಯಾನ್ । ಎಂಬ ಯಜುರ್ವೇದ ಮಂತ್ರಾಭಿಪ್ರಾಯವೇ ಇಲ್ಲಿ ಉದ್ಧೃತವಾಗಿದೆ.

ಕುರ್ವನ್ತ್ಯಸದ್ವಿಗ್ರಹಮತ್ರ ಮರ್ತ್ಯಾ-
ರ್ಮಿತ್ರಾಣ್ಯುದಾಸೀನರಿಪೂನ್ವಿಮೂಢಾಃ ॥೪೯॥

ನಿಜವಾಗಿ ಹೇಳುವುದಾದರೆ ಚಾಂಚಲ್ಯಗುಣದಿಂದ ಕೂಡಿದ ಮನಸ್ಸೇ ಮನುಷ್ಯನಿಗೆ ಪರಮಶತ್ರು. ಇದರ ಆಕ್ರಮಣವು ಸಹಿಸಲು ಅಸಾಧ್ಯವಾದುದಾಗಿರುತ್ತದೆ. ಇದು ಕೇವಲ ಹೊರಗಿನ ಶರೀರವನ್ನು ಮಾತ್ರವಲ್ಲ ; ಮರ್ಮಸ್ಥಳಗಳನ್ನೂ ಕತ್ತರಿಸುತ್ತಿರುತ್ತದೆ. ಇದನ್ನು ಜಯಿಸುವುದು ಅತಿಕಷ್ಟಸಾಧ್ಯ. ಮನುಷ್ಯನು ಪ್ರಪ್ರಥಮವಾಗಿ ತನ್ನ ಅಂತರಂಗದಲ್ಲಿಯೇ ಅಡಗಿರುವ ಮನಸ್ಸೆಂಬ ಮಹಾಶತ್ರುವನ್ನು ಜಯಿಸಬೇಕು. ಮೂರ್ಖರಾದವರು ಈ ಒಳಗಿನ ಶತ್ರುವನ್ನು ಜಯಿಸಹೋಗದೆ ಇತರ ಮನುಷ್ಯರೊಡನೆ ಕದನವಾಡುತ್ತಿರುತ್ತಾರೆ. ಈ ಜಗತ್ತಿನಲ್ಲಿರುವ ಮನುಷ್ಯರನ್ನೇ ಮಿತ್ರರೆಂದೂ ಉದಾಸೀನರೆಂದೂ ಶತ್ರುಗಳೆಂದೂ ವಿಂಗಡಿಸುತ್ತಾರೆ. ಇಂತಹ ಮೂರ್ಖರಿಗೆ ಏನೆಂದು ಹೇಳೋಣ!

ದೇಹಂ ಮನೋಮಾತ್ರಮಿಮಂ ಗೃಹೀತ್ವಾ
ಮಮಾಹಮಿತ್ಯನ್ಧಧಿಯೋ ಮನುಷ್ಯಾಃ ।
ಏಷೋಽಹಮನ್ಯೋಽಯಮಿತಿ ಭ್ರಮೇಣ
ದುರನ್ತಪಾರೇ ತಮಸಿ ಭ್ರಮನ್ತಿ ॥೫೦॥

ಸಾಮಾನ್ಯವಾಗಿ ಮನುಷ್ಯರ ಬುದ್ಧಿಯು ಕುರುಡು-ಕುರುಡಾಗಿಯೇ ಇರುತ್ತದೆ. ಈ ಕಾರಣದಿಂದಲೇ ಅವರು ಮನಃಕಲ್ಪಿತವಾದ ಈ ಶರೀರವನ್ನು 'ನಾನು'–'ನನ್ನದು'–ಎಂದು ಹೇಳಿಕೊಳ್ಳುತ್ತಾರೆ. 'ಇಂತಹವನು ನಾನೇ. ಮಹಾರಾಜನ ಮೊಮ್ಮಗ. ಇವನು ಬೇರೆಯವ. ನನ್ನ ಶತ್ರು'–ಇತ್ಯಾದಿಯಾಗಿ ಹೇಳಿಕೊಳ್ಳುತ್ತಾ ಭ್ರಮೆಯಿಂದ ತುಂಬಿದವರಾಗಿ ದುರಂತವಾದ ಪಾರವಿರುವ ಸಂಸಾರದಲ್ಲಿ ಬಿದ್ದು ಒದ್ದಾಡುತ್ತಿರುತ್ತಾರೆ.

ಜನಸ್ತು ಹೇತುಃ ಸುಖದುಃಖಯೋಶ್ಚೇತ್
ಕಿಮಾತ್ಮನಶ್ಚಾತ್ರ ಹ ಭೌಮಯೋಸ್ತತ್ ।
ಜಿಹ್ವಾಂ ಕ್ವಚಿತ್ ಸನ್ದಶತಿ ಸ್ವದದ್ಭಿ-
ಸ್ತದ್ವೇದನಾಯಾಂ ಕತಮಾಯ ಕುಪ್ಯೇತ್ ॥೫೧॥

ಒಂದು ವೇಳೆ ಈ ಜನರೇ ಸುಖ-ದುಃಖಗಳಿಗೆ ಕಾರಣ ವೆನ್ನುವುದಾದರೆ ಅದರಲ್ಲಿ ಆತ್ಮನ ಸಂಬಂಧವೇನಿದೆ? ಏಕೆಂದರೆ ಸುಖ-ದುಃಖ ಗಳನ್ನುಂಟುಮಾಡುವುದೂ ಮೃಣ್ಮಯವಾದ ಶರೀರವೇ. ಉಪಭೋಗಿಸು ವುದೂ ಶರೀರವೇ. ಭೋಜನಾದಿಗಳ ಸಮಯದಲ್ಲಿ ಹಲ್ಲಿನಿಂದ ನಾಲಿಗೆಯನ್ನು ಕಡಿದುಕೊಂಡರೆ ಅಪರಾಧಿಗಳು ಯಾರಾಗುತ್ತಾರೆ? ಆ ವೇದನೆಯ ಸಲುವಾಗಿ ಯಾರ ಮೇಲೆ ಕೋಪಿಸಿಕೊಳ್ಳಬೇಕು? ಆದುದರಿಂದ ಸುಖ-ದುಃಖಗಳಿಗೆ ಮನಸ್ಸು ಕಾರಣವೇ ಹೊರತು ಮನುಷ್ಯನು ಕಾರಣನಲ್ಲ.

ದುಃಖಸ್ಯ ಹೇತುರ್ಯದಿ ದೇವತಾಸ್ತು
ಕಿಮಾತ್ಮನಸ್ತತ್ರ ವಿಕಾರಯೋಸ್ತತ್ ।
ಯದಙ್ಗಮಙ್ಗೇನ ನಿಹನ್ಯತೇ ಕ್ವಚಿತ್
ಕ್ರುಧ್ಯೇತ ಕಸ್ಮೈ ಪುರುಷಃ ಸ್ವದೇಹೇ ॥೫೨॥

ಸುಖ-ದುಃಖಗಳಿಗೆ ಕಾರಣವು ದೇವತೆಗಳು–ಎಂದು ಹೇಳುವ ಪಕ್ಷದಲ್ಲಿ ಆಗಲೂ ಆತ್ಮನಿಗೆ ಯಾವ ಹಾನಿಯಾಗುತ್ತದೆ? ದುಃಖಕ್ಕೆ ಕಾರಣರು ಇಂದ್ರಿಯಾಭಿಮಾನಿಗಳಾದ ದೇವತೆಗಳಾದರೆ ಅದನ್ನು ಉಪಭೋಗಿಸುವವರೂ ದೇವತೆಗಳೇ. ಹೇಗೆಂದರೆ ದೇವತೆಗಳಿಂದ ಅಧಿಷ್ಠಿತವಾದ ಇಂದ್ರಿಯಗಳ ಮೂಲಕವಾಗಿ ಒಬ್ಬನು ಮತ್ತೊಬ್ಬನಿಗೆ ತೊಂದರೆಕೊಡುತ್ತಾನೆ. ತೊಂದರೆಕೊಡುವುದೆಂದರೆ ಎದುರಾಳಿಯ ಇಂದ್ರಿಯಗಳನ್ನು (ಕೈ-ಕಾಲುಗಳನ್ನು) ಮುರಿಯುತ್ತಾನೆ. ಮುರಿದವನ ಕೈಗೆ ಯಾವುದು ಅಧಿಷ್ಠಾತೃವಾದ ದೇವತೆಯಾಗಿದೆಯೋ ಮುರಿಸಿಕೊಂಡವನ ಕೈಗೂ ಅದೇ ದೇವತೆಯಾಗಿರುತ್ತದೆ. ಎಲ್ಲರ ಅಂಗಗಳಿಗೂ ಅಧಿಷ್ಠಾತೃದೇವತೆ ಒಬ್ಬನೇ ಆದುದರಿಂದ ತನ್ನನ್ನೇ ತಾನು ಹೊಡೆದುಕೊಂಡಂತಾಗುತ್ತದೆ. ತನ್ನ ಕಾಲುಗಳೇ ಅನ್ಯೋನ್ಯವಾಗಿ ಬಡಿದುಕೊಂಡು ಪೆಟ್ಟಾದಾಗ ಯಾರ ಮೇಲೆ ಸಿಟ್ಟಾಗುವುದು? ಆದುದರಿಂದ ಸುಖ-ದುಃಖಗಳಿಗೆ ದೇವತೆಗಳೂ ಕಾರಣರಲ್ಲ. ಮನಸ್ಸೇ ಕಾರಣ.

ಆತ್ಮಾ ಯದಿ ಸ್ಯಾತ್ಸುಖದುಃಖಹೇತುಃ
ಕಿಮನ್ಯತಸ್ತತ್ರ ನಿಜಸ್ವಭಾವಃ ।

ನ ಹ್ಯಾತ್ಮನೋಽನ್ಯದ್ಯದಿ ತನ್ಮೃಷಾ ಸ್ಯಾತ್
ಕ್ರುಧ್ಯೇತ ಕಸ್ಮಾನ್ನ ಸುಖಂ ನ ದುಃಖಮ್ ॥೫೩॥

ಆತ್ಮವೇ ಸುಖ-ದುಃಖಗಳಿಗೆ ಕಾರಣವೆನ್ನುವುದಾದರೆ ಬೇರೆಯವರಿಂದ ಏನಾದಂತಾಯಿತು? ಬೇರೆಯವರಿಂದ ಏನೂ ಆಗಲಿಲ್ಲ. ಬೇರೆಯವರು ಸುಖ-ದುಃಖಗಳಿಗೆ ಕಾರಣರಲ್ಲ. ಆದುದರಿಂದ ಬೇರೆಯವರ ಮೇಲೆ ಕೋಪಗೊಳ್ಳುವ ಕಾರಣವಿಲ್ಲ. ಹಾಗಾದರೆ ಸುಖ-ದುಃಖಗಳು ಆತ್ಮನ ಸ್ವಭಾವದಲ್ಲಿಯೇ ಸೇರಿವೆಯೆಂದಾಗುತ್ತದೆ. ಹಾಗಿಲ್ಲದೆ ಇನ್ನೊಂದರಿಂದ ಆತ್ಮನಿಗೆ ಸುಖ-ದುಃಖಗಳಾಗುತ್ತದೆಂದು ಹೇಳುವುದಾದರೆ ಅದು ಮಿಥ್ಯೆ. ಏಕೆಂದರೆ : ಆತ್ಮನಿಂದ ವ್ಯತಿರಿಕ್ತವಾದದ್ದು ಯಾವುದೂ ಇಲ್ಲವೇ ಇಲ್ಲ. ಈ ಕಾರಣದಿಂದಾಗಿ ಆತ್ಮನಿಗೆ ಸುಖವೂ ಇಲ್ಲ ದುಃಖವೂ ಇಲ್ಲ. ಹೀಗಿರುವಾಗ ಕೋಪವು ಯಾರ ಮೇಲೆ? ಏತಕ್ಕೆ ಕೋಪಿಸಿಕೊಳ್ಳಬೇಕು?

ಗ್ರಹಾ ನಿಮಿತ್ತಂ ಸುಖದುಃಖಯೋಶ್ಚೇತ್
ಕಿಮಾತ್ಮನೋಽಜಸ್ಯ ಜನಸ್ಯ ತೇ ವೈ ।
ಗ್ರಹೈರ್ಗ್ರಹಸ್ಯೈವ ವದನ್ತಿ ಪೀಡಾಂ
ಕ್ರುಧ್ಯೇತ ಕಸ್ಮೈ ಪುರುಷಸ್ತತೋಽನ್ಯಃ ॥೫೪॥

ಗ್ರಹಗಳು ಮನುಷ್ಯನ ಸುಖ-ದುಃಖಗಳಿಗೆ ಕಾರಣವೆನ್ನುವುದಾದರೆ ಹುಟ್ಟು-ಸಾವುಗಳೇ ಇಲ್ಲದ ಆತ್ಮನಿಗೆ ಏನು ಹಾನಿ? ಗ್ರಹಗಳ ಪ್ರಭಾವವು ಹುಟ್ಟು-ಸಾವುಗಳಿರುವ ಶರೀರದ ಮೇಲಾಗಬಹುದು. ಗ್ರಹಗಳ ಪೀಡೆಯು ಅವುಗಳ ಪ್ರಭಾವವನ್ನು ಗ್ರಹಣಮಾಡುವ ಶರೀರಗಳ ಮೇಲಾಗುತ್ತದೆ. ಆತ್ಮವು ಇಂತಹ ಗ್ರಹಗಳಿಂತಲೂ ಮತ್ತು ಶರೀರಕ್ಕಿಂತಲೂ ಅತೀತವಾದುದು. (ಗ್ರಹಗಳಲ್ಲಿಯೇ ಶತ್ರು-ಮಿತ್ರ-ಸಮರಿರುತ್ತಾರೆ. ಗ್ರಹಗಳಿಂದಲೇ ಗ್ರಹಗಳಿಗೆ ತೊಂದರೆಯಾಗುತ್ತದೆಂದು ಹೇಳುತ್ತಾರೆ. ಪುರುಷನಿಗೆ ಗ್ರಹಗತಿಯಿಂದ ಅದರ ಲಗ್ನದಲ್ಲಿ ಜನಿಸಿದ ದೇಹದಲ್ಲಿ ಅಭಿಮಾನವಿಡುವುದರಿಂದ ಪೀಡೆಯುಂಟಾಗುವುದು.) ಹೀಗಿರುವಾಗ ಗ್ರಹಗಳ ಪ್ರಭಾವದಿಂದ ದೇಹಕ್ಕೆ ಪ್ರಾಪ್ತವಾಗುವ ಸುಖ-ದುಃಖಗಳಿಗಾಗಿ ಯಾರ ಮೇಲೆ ಕೋಪಿಸಿಕೊಳ್ಳುವುದು.?

ಕರ್ಮಾಸ್ತು ಹೇತುಃ ಸುಖದುಃಖಯೋಶ್ಚೇತ್
ಕಿಮಾತ್ಮನಸ್ತದ್ಧಿ ಜಡಾಜಡತ್ವೇ ।
ದೇಹಸ್ತ್ವಚಿತ್ ಪುರುಷೋಽಯಂ ಸುಪರ್ಣಃ
ಕ್ರುಧ್ಯೇತ ಕಸ್ಮೈ ನ ಹಿ ಕರ್ಮ ಮೂಲಮ್ ॥೫೫॥

ಮಾಡಿದ ಕರ್ಮವೇ ಸುಖ-ದುಃಖಗಳಿಗೆ ಕಾರಣವೆನ್ನುವುದಾದರೆ ಜಡನಲ್ಲಿರುವ ಚಿನ್ಮಯನಾದ ಆತ್ಮನಿಗೆ ಆಗುವ ಹಾನಿಯೇನು? ದೇಹವು ಜಡವಾದುದರಿಂದ ಅದಕ್ಕೆ ಕರ್ಮದಲ್ಲಿ ಪ್ರವೃತ್ತಿ ಉಂಟಾಗಲಾರದು. ಪುರುಷನು ಪೂರ್ಣಜ್ಞಾನಸ್ವರೂಪನು. ಅಸಂಗನು. ಹೀಗಿರುವಾಗ ಸುಖ-ದುಃಖಗಳಿಗೆ ಕಾರಣವೆಂದು ಹೇಳುವ ಕರ್ಮವೇ ಸಂಭವಿಸುವುದಿಲ್ಲ. ಹೀಗಿರುವಾಗ ಸಂಭವಿಸಿದ ಕಷ್ಟಕ್ಕಾಗಿ ಯಾರ ಮೇಲೆ ಕೋಪಗೊಳ್ಳಬೇಕು?

ಕಾಲಸ್ತು ಹೇತುಃ ಸುಖದುಃಖಯೋಶ್ಚೇತ್
ಕಿಮಾತ್ಮನಸ್ತತ್ರ ತದಾತ್ಮಕೋಽಸೌ ।
ನಾಗ್ನೇರ್ಹಿ ತಾಪೋ ನ ಹಿಮಸ್ಯ ತತ್ಸ್ಯಾತ್
ಕ್ರುಧ್ಯೇತ ಕಸ್ಮೈ ನ ಪರಸ್ಯ ದ್ವಂದ್ವಮ್ ॥೫೬॥

ಕಾಲವೇ ಮನುಷ್ಯನ ಸುಖ-ದುಃಖಗಳಿಗೆ ಕಾರಣವೆನ್ನುವುದಾದರೆ ಆಗಲೂ ಆತ್ಮನಿಗೆ ಆಗುವ ಹಾನಿಯೇನು? ಮಿಗಿಲಾಗಿ ಕಾಲನು ಆತ್ಮಸ್ವರೂಪನೇ ಆಗಿದ್ದಾನೆ. ಯಾವ ರೀತಿಯಲ್ಲಿ ಬೆಂಕಿಯು ಬೆಂಕಿಯನ್ನೇ ಸುಡಲಾರದೋ ಹಿಮವು ಹಿಮವನ್ನೇ ಶೀತಲಗೊಳಿಸಲಾರದೋ ಅದೇ ರೀತಿಯಲ್ಲಿ ಆತ್ಮಸ್ವರೂಪವಾದ ಕಾಲನು ತನ್ನ ಆತ್ಮನಿಗೇ ಸುಖ-ದುಃಖಗಳನ್ನುಂಟುಮಾಡಲಾರನು. ಹೀಗಿರುವಾಗ ಯಾರ ಮೇಲೆ ಕೋಪಿಸಿಕೊಳ್ಳಬೇಕು? ಆತ್ಮನಾದರೋ ಶೀತೋಷ್ಣ, ಸುಖ-ದುಃಖ ಇವೇ ಮುಂತಾದ ದ್ವಂದ್ವಗಳಿಂದ ಅತೀತನಾದವನು.

ನ ಕೇನಚಿತ್ ಕ್ವಾಪಿ ಕಥಞ್ಚನಾಸ್ಯ
ದ್ವಂದ್ವೋಪರಾಗಃ ಪರತಃ ಪರಸ್ಯ ।
ಯಥಾಹಮಃ ಸಂಸೃತಿರೂಪಿಣಃ ಸ್ಯಾ-
ದೇವಂ ಪ್ರಬುದ್ಧೋ ನ ಬಿಭೇತಿ ಭೂತೈಃ ॥೫೭॥

ಆತ್ಮನಿಂದ ಸುಖ-ದುಃಖಗಳುಂಟಾಗುವುದಿಲ್ಲ. ಪ್ರಕೃತಿಗಿಂತಲೂ ಅತೀತನಾದ ಆತ್ಮನಿಗೆ ಯಾರಿಂದಲೂ ಎಲ್ಲಿಯೂ ಯಾವುದೇ ಕಾರಣದಿಂದಲೂ ಸುಖ-ದುಃಖದ ದ್ವಂದ್ವಗಳ ಸಂಬಂಧವಿರುವುದಿಲ್ಲ. ಹುಟ್ಟು-ಸಾವುಗಳೆಂಬ ಸಂಸಾರಚಕ್ರದಲ್ಲಿ ಸಿಕ್ಕಿಕೊಂಡು ನರಳುವ ಅಹಂಕಾರಕ್ಕೆ ಸುಖ-ದುಃಖಾದಿ ದ್ವಂದ್ವಗಳುಂಟು. ಈ ರಹಸ್ಯವನ್ನು ಯಾವನು ತಿಳಿದಿರುವನೋ ಅವನು ಪ್ರಾಣಿಗಳಿಂದ ಯಾವ ಪ್ರಕಾರವಾದ ಭಯವನ್ನೂ ಹೊಂದುವುದಿಲ್ಲ. ಯಾವುದೇ ಪ್ರಾಣಿಗಳೂ ಅಂತಹವನನ್ನು ಭಯಪಡಿಸಲಾರವು.

ಏತಾಂ ಸ ಆಸ್ಥಾಯ ಪರಾತ್ಮನಿಷ್ಠಾ-
ಮಧ್ಯಾಸಿತಾಂ ಪೂರ್ವತಮೈರ್ಮಹರ್ಷಿಭಿಃ ।
ಅಹಂ ತರಿಷ್ಯಾಮಿ ದುರನ್ತಪಾರಂ
ತಮೋ ಮುಕುನ್ದಾಂಘ್ರಿನಿಷೇವಯೈವ ॥೫೮॥

ಪ್ರಾಚೀನರಾದ ದೊಡ್ಡ-ದೊಡ್ಡ ಋಷಿ-ಮುನಿಗಳು ಪರಮಾತ್ಮನಿಷ್ಠೆಯ ಈ ಮಾರ್ಗವನ್ನು ಆಶ್ರಯಿಸಿರುತ್ತಾರೆ. ನಾನೂ ಕೂಡ ಈ ಮಾರ್ಗವನ್ನೇ ಆಶ್ರಯಿಸಿ ಭಕ್ತಿ-ಮುಕ್ತಿಪ್ರದಾಯಕನಾದ ಭಗವಂತನ ಚರಣಕಮಲಗಳ ಸೇವೆಯ ಮೂಲಕವಾಗಿ ದುರಂತವಾದ ಸಂಸಾರ ಸಾಗರವನ್ನು ಅನಾಯಾಸವಾಗಿ ದಾಟುತ್ತೇನೆ.”

ಶ್ರೀಭಗವಂತನು ಹೇಳುತ್ತಾನೆ :

“ಉದ್ಧವ! ಆ ಬ್ರಾಹ್ಮಣನು ಅವಧೂತನಾದನಂತರ ನಷ್ಟವಾಗಿ ಹೋದ ಹಣದ ಕ್ಲೇಶವನ್ನು ಸಂಪೂರ್ಣವಾಗಿ ಕಳೆದುಕೊಂಡನು. ಪರಮಾತ್ಮನಿಷ್ಠೆಯ ಮಾರ್ಗವನ್ನು ಅವಲಂಬಿಸಿದ್ದರಿಂದಲೇ ಅವನ ಕ್ಲೇಶಗಳೆಲ್ಲವೂ ದೂರಸರಿದುವು. ಸಂಸಾರದಿಂದ ವಿರಕ್ತನಾಗಿ ಸಂನ್ಯಾಸವನ್ನು ಸ್ವೀಕರಿಸಿ ಸ್ವೇಚ್ಛೆಯಿಂದ ಭೂಮಂಡಲದಲ್ಲಿ ಸಂಚರಿಸುತ್ತಿದ್ದನು. ದುಷ್ಟಜನರು ಅವನಿಗೆ ಹಲವು ಬಗೆಯಲ್ಲಿ ಕಾಯಕ್ಲೇಶಗಳನ್ನುಂಟುಮಾಡಿದರೂ ಆ ಅವಧೂತಬ್ರಾಹ್ಮಣನು ತನ್ನ ಧರ್ಮದಿಂದ ವಿಚಲಿತನಾಗದೆ ಈ ಶ್ಲೋಕಗಳನ್ನು ಹಾಡಿದನು.

ಸುಖದುಃಖಪ್ರದೋ ನಾನ್ಯಃ ಪುರುಷಸ್ಯಾತ್ಮವಿಭ್ರಮಃ ।
ಮಿತ್ರೋದಾಸೀನರಿಪವಃ ಸಂಸಾರಸ್ತಮಸಃ ಕೃತಃ ॥೬೦॥

ಈ ಪ್ರಪಂಚದಲ್ಲಿ ಮನುಷ್ಯನಿಗೆ ಸುಖ-ದುಃಖಗಳನ್ನು ಬೇರೆ ಯಾವನೂ ಉಂಟುಮಾಡುವುದಿಲ್ಲ. ಬೇರೊಬ್ಬನು ತನ್ನ ಕಷ್ಟ-ಸುಖಗಳಿಗೆ ಕಾರಣನೆಂದು ಹೇಳುವುದು ಕೇವಲ ಮನಸ್ಸಿನ ಭ್ರಾಂತಿ. ಈ ಸಂಸಾರ ಮತ್ತು ಇದರಲ್ಲಿ ಮಿತ್ರ-ಉದಾಸೀನ-ಶತ್ರುಗಳು ಇರುವರೆಂಬುದೆಲ್ಲವೂ ಅಜ್ಞಾನದಿಂದ ಕಲ್ಪಿತವಾದುವುಗಳು.

ತಸ್ಮಾತ್ ಸರ್ವಾತ್ಮನಾ ತಾತ ನಿಗೃಹಣಾ ಮನೋ ಧಿಯಾ ।
ಮಯ್ಯಾವೇಶಿತಯಾ ಯುಕ್ತ ಏತಾವಾನ್ಯೋಗಸಙ್ಗ್ರಹಃ ॥೬೧॥

ಪ್ರಿಯಸಖನೇ! ಮನಸ್ಸೇ ಸಂಸಾರಕ್ಕೆ ಮೂಲ. ಆದುದರಿಂದ ಸರ್ವಪ್ರಕಾರದಿಂದಲೂ ಬುದ್ಧಿಯ ಮೂಲಕವಾಗಿ ಮನಸ್ಸನ್ನು ನಿಗ್ರಹಿಸು. ಹಾಗೆ ನಿಗ್ರಹಿಸಿದ ಮನಸ್ಸನ್ನು ಹೃದಯಕಮಲಸ್ಥನಾಗಿರುವ ನನ್ನಲ್ಲಿ ಸ್ಥಿರೀಕರಿಸು. ಸಮಸ್ತವಾದ ಯೋಗಸಾಧನದ ಸಾರಸಂಗ್ರಹವೂ ಇಷ್ಟೇ ಆಗಿದೆ.

ಬ್ರಹ್ಮನಿಷ್ಠವಾದ ಈ ಭಿಕ್ಷುಗೀತೆಯನ್ನು ಏಕಾಗ್ರಚಿತ್ತನಾಗಿ ಗುರುಮುಖೇನ ಕೇಳಬೇಕು. ಕೇಳಿದ್ದನ್ನು ಹೃದ್ಗತಮಾಡಿಕೊಳ್ಳಬೇಕು. ಸತ್ಪುರುಷರಿಗೂ ಬೋಧಿಸಬೇಕು. ಅಂತಹವನನ್ನು ಸುಖ-ದುಃಖಾದಿ ದ್ವಂದ್ವಗಳು ಬಾಧಿಸುವುದಿಲ್ಲ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಏಕಾದಶಸ್ಕಂಧದ ೨೩ನೆಯ ಅಧ್ಯಾಯವು ಮುಗಿಯಿತು.

ಏಕಾದಶಸ್ಕಂಧ ೨೪ನೆಯ ಅಧ್ಯಾಯ

ಸಾಂಖ್ಯಯೋಗ

ಶ್ರೀಭಗವಂತನು ಹೇಳುತ್ತಾನೆ :

ಅಥ ತೇ ಸಮ್ಪ್ರವಕ್ಷ್ಯಾಮಿ ಸಾಙ್ಖ್ಯಂ ಪೂರ್ವೈರ್ವಿನಿಶ್ಚಿತಮ್ ।
ಯದ್ವಿಜ್ಞಾಯ ಪುಮಾನ್ಸದ್ಯೋ ಜಹ್ಯಾದ್ವೈಕಲ್ಪಿಕಂ ಭ್ರಮಮ್ ॥

“ಉದ್ಧವ! ಮುಂದೆ ನಿನಗೆ ಪ್ರಾಚೀನರಾದ ಮಹರ್ಷಿಗಳು ಸಿದ್ಧಾಂತಿಸಿರುವ ಸಾಂಖ್ಯಯೋಗವನ್ನು ಹೇಳುತ್ತೇನೆ. ಇದನ್ನು ತಿಳಿದುಕೊಂಡ ಮನುಷ್ಯನು ಭೇದನಿಮಿತ್ತವಾದ ಭ್ರಮೆಯನ್ನು ಒಡನೆಯೇ ಬಿಟ್ಟುಬಿಡುತ್ತಾನೆ.

ಆಸೀಜ್ಞಾನಮಥೋ ಹ್ಯರ್ಥ ಏಕಮೇವಾವಿಕಲ್ಪಿತಮ್ ।
ಯದಾ ವಿವೇಕನಿಪುಣಾ ಆದೌ ಕೃತಯುಗೇಽಯುಗೇ ॥೨॥

ಯುಗಗಳಿಗಿಂತಲೂ ಹಿಂದಿನ ಪ್ರಳಯಕಾಲದಲ್ಲಿಯೂ ಸತ್ಯಯುಗದ ಆದಿಯಲ್ಲಿಯೂ ಭೇದಸ್ಫೂರ್ತಿಯಿರದ ವಿವೇಕಪೂರ್ಣರಾದ ಮನುಷ್ಯರಿದ್ದ ಕಾಲದಲ್ಲಿಯೂ ದ್ರಷ್ಟೃರೂಪವಾದ ಜ್ಞಾನವೂ ದೃಶ್ಯರೂಪವಾದ ಪ್ರಪಂಚವೂ ಭೇದವಿಲ್ಲದೇ ಒಂದೇ ಆಗಿ ಬ್ರಹ್ಮನಲ್ಲಿ ಲೀನವಾಗಿದ್ದಿತು. ಆಗಿನ ಕಾಲದ ಮನುಷ್ಯರೆಲ್ಲರೂ ಸದಾಕಾಲದಲ್ಲಿಯೂ ಬ್ರಹ್ಮಭಾವದಲ್ಲಿಯೇ ಇರುತ್ತಿದ್ದರು.

ತನ್ಮಾಯಾಫಲರೂಪೇಣ ಕೇವಲಂ ನಿರ್ವಿಕಲ್ಪಿತಮ್ ।
ವಾಙ್ಮನೋಽಗೋಚರಂ ಸತ್ಯಂ ದ್ವಿಧಾ ಸಮಭವದ್ಬೃಹತ್ ॥೩॥

ಬ್ರಹ್ಮವಸ್ತುವಿನಲ್ಲಿ ಯಾವುದೇ ವಿಧವಾದ ವಿಕಲ್ಪವೂ ಇಲ್ಲವೆಂಬುದರಲ್ಲಿ ಸಂದೇಹವೇ ಇಲ್ಲ. ಅದು ಕೇವಲವೂ ಅದ್ವಿತೀಯವೂ ಪರಮಸತ್ಯ ಸ್ವರೂಪವೂ ಆಗಿದೆ. ಅದೇ ಬ್ರಹ್ಮವಸ್ತುವೇ ಮಾಯೆಯ ಸಂಬಂಧದಿಂದಾಗಿ ಮಾತಿಗೂ ಮನಸ್ಸಿಗೂ ಗೋಚರವಾಗುವಂತೆ ಎರಡು ಭಾಗಗಳಾಗಿ ಒಡೆಯಿತು. ಪರಬ್ರಹ್ಮವಸ್ತುವು ವಾಙ್ಮನಸ್ಸುಗಳಿಗೆ ಗೋಚರಿಸತಕ್ಕುದಲ್ಲ.

ತಯೋರೇಕತರೋ ಹ್ಯರ್ಥಃ ಪ್ರಕೃತಿಃ ಸೋಭಯಾತ್ಮಿಕಾ ।
ಜ್ಞಾನಂ ತ್ವನ್ಯತಮೋ ಭಾವಃ ಪುರುಷಃ ಸೋಽಭಿಧೀಯತೇ ॥೪॥

ವಿಭಾಗವಾದ ಎರಡು ವಸ್ತುಗಳಲ್ಲಿ ಒಂದನ್ನು ಪ್ರಕೃತಿ–ಎನ್ನುತ್ತಾರೆ. ಇದು ಜಗತ್ತಿನಲ್ಲಿ ಕಾರ್ಯ-ಕಾರಣದ ರೂಪವನ್ನು ಧರಿಸಿದೆ. ಜ್ಞಾನಸ್ವರೂಪವಾದ ಮತ್ತೊಂದನ್ನು ಪುರುಷನೆಂದು ಕರೆಯುತ್ತಾರೆ.

ತಮೋ ರಜಃ ಸತ್ತ್ವಮಿತಿ ಪ್ರಕೃತೇರಭವನ್ಗುಣಾಃ ।
ಮಯಾ ಪ್ರಕ್ಷೋಭ್ಯಮಾಣಾಯಾಃ ಪುರುಷಾನುಮತೇನ ಚ ॥೫॥

ಉದ್ಧವ! ಜೀವಿಗಳ ಶುಭಾಶುಭಕರ್ಮಗಳಿಗೆ ಅನುಸಾರವಾಗಿ ನಾನೇ ಪ್ರಕೃತಿಯನ್ನು ಕ್ಷೋಭೆಗೊಳಿಸಿದೆನು. ಆಗ ಪ್ರಕೃತಿಯಿಂದ ಸತ್ತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ಮೂರು ಗುಣಗಳು ಪ್ರಕಟವಾದುವು.

ತೇಭ್ಯಃ ಸಮಭವತ್ಸೂತ್ರಂ ಮಹಾನ್ಸೂತ್ರೇಣ ಸಂಯುತಃ ।
ತತೋ ವಿಕುರ್ವತೋ ಜಾತೋಽಹಙ್ಕಾರೋ ಯೋ ವಿಮೋಹನಃ ॥೬॥

ಸತ್ತ್ವಾದಿಗುಣಗಳಿಂದ ಕ್ರಿಯಾಶಕ್ತಿಪ್ರಧಾನವಾದ ಸೂತ್ರವೂ ಜ್ಞಾನಶಕ್ತಿಪ್ರಧಾನವಾದ ಮಹತ್ತತ್ತ್ವವೂ ಪ್ರಕಟವಾದುವು. ಇವೆರಡೂ ಪರಸ್ಪರವಾಗಿ ಸೇರಿಕೊಂಡೇ ಇರುತ್ತವೆ. ಒಂದೇ ತತ್ತ್ವವು ಕ್ರಿಯಾಸಕ್ತಿ ಪ್ರಧಾನವಾದಾಗ ಸೂತ್ರವೆಂದೂ ಜ್ಞಾನಶಕ್ತಿಪ್ರಧಾನವಾದಾಗ ಮಹತ್ತತ್ತ್ವ ವೆಂದೂ ಕರೆಯಲ್ಪಡುತ್ತದೆ. ಮಹತ್ತತ್ತ್ವದಲ್ಲಿ ವಿಕಾರವುಂಟಾದನಂತರ ಅಹಂಕಾರವು ಹುಟ್ಟುತ್ತದೆ. ಈ ಅಹಂಕಾರವೇ ಜೀವಿಗಳನ್ನು ಮೋಹದಲ್ಲಿ ಮುಳುಗಿಸಿಬಿಡುತ್ತದೆ.

ವೈಕಾರಿಕಸ್ತೈಜಸಶ್ಚ ತಾಮಸಶ್ಚೇತ್ಯಹಂ ತ್ರಿವೃತ್ ।
ತನ್ಮಾತ್ರೇನ್ದ್ರಿಯಮನಸಾಂ ಕಾರಣಂ ಚಿದಚಿನ್ಮಯಃ ॥೭॥

ಆ ಅಹಂಕಾರವು ಸಾತ್ತ್ವಿಕಾಹಂಕಾರ, ರಾಜಸಾಹಂಕಾರ ಮತ್ತು ತಾಮಸಾಹಂಕಾರಗಳೆಂಬ ಮೂರು ವಿಧವಾಗಿದೆ. ಈ ಮೂರು ವಿಧವಾದ ಅಹಂಕಾರತತ್ತ್ವವು ಪಂಚತನ್ಮಾತ್ರೆಗಳಿಗೂ ಇಂದ್ರಿಯಗಳಿಗೂ ಮನಸ್ಸಿಗೂ ಕಾರಣವಾಗಿದೆ. ಆದುದರಿಂದ ಅಹಂಕಾರವು ಜಡಾತ್ಮಕವೂ ಚೇತನಾತ್ಮಕವೂ ಆಗಿದೆ.*

---

* ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ । ಆಕಾಶಾದ್ವಾಯುಃ । ವಾಯೋರಗ್ನಿಃ। ಇತ್ಯಾದಿ ಶ್ರುತಿವಚನಗಳಿಂದ ಮೊದಲು ಆಕಾಶಾದಿ ಪಂಚಭೂತಗಳು ಜನಿಸುವುವೆಂದೂ ಆ ಪಂಚೀಕೃತಗಳಾದ ಭೂತಗಳಿಂದ ಪ್ರಾಣಾದಿಕ್ರಮದಿಂದ ಸಮಷ್ಟಿ ರೂಪವಾದ ಲಿಂಗಶರೀರವೂ ಬ್ರಹ್ಮಾಂಡವೂ ಜನಿಸುವುದೆಂದೂ, ಅವುಗಳಲ್ಲಿ ವಿರಾಟ್ಪುರುಷನು ಪ್ರವೇಶಿಸುವನೆಂದೂ, ವಿರಾಟ್ಪುರುಷನಲ್ಲಿ ಅಂತರ್ಯಾಮಿಯಾದ ಶ್ರೀಮನ್ನಾರಾಯಣನು ಕ್ಷೀರಾಬ್ಧಿಯಲ್ಲಿ ಲೀಲಾಮೂರ್ತಿಯಾಗಿ ಶಯನಿಸುವನೆಂದೂ,

ಅರ್ಥಸ್ತನ್ಮಾತ್ರಿಕಾಜ್ಜಜ್ಞೇ ತಾಮಸಾದಿನ್ದ್ರಿಯಾಣಿ ಚ ।
ತೈಜಸಾದ್ದೇವತಾ ಆಸನ್ನೇಕಾದಶ ಚ ವೈಕೃತಾತ್ ॥೮॥

ತಾಮಸಾಹಂಕಾರದಿಂದ ಪಂಚತನ್ಮಾತ್ರೆಗಳೂ ಪಂಚತನ್ಮಾತ್ರೆಗಳಿಂದ ಪಂಚಭೂತಗಳೂ ಹುಟ್ಟಿದುವು. ಅದೇ ರೀತಿಯಲ್ಲಿ ರಾಜಸಾಹಂಕಾರದಿಂದ ಇಂದ್ರಿಯಗಳೂ ಸಾತ್ತ್ವಿಕಾಹಂಕಾರದಿಂದ ಹನ್ನೊಂದು ಮಂದಿ ಇಂದ್ರಿಯಾಧಿಷ್ಠಾತೃಗಳಾದ ದೇವತೆಗಳೂ ಹುಟ್ಟಿದರು.*

ಮಯಾ ಸಞ್ಚೋದಿತಾ ಭಾವಾಃ ಸರ್ವೇ ಸಂಹತ್ಯಕಾರಿಣಃ ।
ಅಣ್ಡಮುತ್ಪಾದಯಾಮಾಸುರ್ಮಮಾಯತನಮುತ್ತಮಮ್ ॥೯॥

ಈ ಎಲ್ಲ ಪದಾರ್ಥಗಳೂ ನನ್ನ ಪ್ರೇರಣೆಯಿಂದ ಒಂದೆಡೆಯಲ್ಲಿ ಸೇರಿ ಪರಸ್ಪರ ಮಿಶ್ರಣಮಾಡಿ ಬ್ರಹ್ಮಾಂಡರೂಪವಾದ ಈ ಅಂಡವನ್ನು ನಿರ್ಮಿಸಿದರು. ಈ ಅಂಡವು ನನಗೆ ಉತ್ತಮವಾದ ನಿವಾಸಸ್ಥಾನವಾಗಿದೆ.

ತಸ್ಮಿನ್ನಹಂ ಸಮಭವಮಣ್ಡೇ ಸಲಿಲಸಂಸ್ಥಿತೌ ।
ಮಮ ನಾಭ್ಯಾಮಭೂತ್ಪದ್ಮಂ ವಿಶ್ವಾಖ್ಯಂ ತತ್ರ ಚಾತ್ಮಭೂಃ ॥೧೦॥

ನೀರಿನ ಮಧ್ಯದಲ್ಲಿದ್ದ ಅಂಡದಲ್ಲಿ ನಾನು ನಾರಾಯಣರೂಪದಿಂದ ಪ್ರಕಟವಾದೆನು. ನನ್ನ ನಾಭಿಯಲ್ಲಿ 'ವಿಶ್ವ'–ಎಂಬ ಹೆಸರಿನ ಕಮಲವಿದ್ದಿತು. ಅದರಲ್ಲಿ ಸ್ವಯಂಭುವನಾದ ಬ್ರಹ್ಮನು ಆವಿರ್ಭವಿಸಿದನು.

ಅವನ ನಾಭಿಪದ್ಮದಲ್ಲಿ ವಿರಾಟ್ಪುರುಷನ ಭೋಗಮೂರ್ತಿಯಾದ ಚತುರ್ಮುಖನು ಜನಿಸುವನೆಂದೂ ಸೃಷ್ಟಿಕ್ರಮದಲ್ಲಿ ಹೇಳಲ್ಪಟ್ಟಿರುವುದು. ಆದರೂ ಚಿತ್ತಾಭಿವ್ಯಕ್ತ ಪೂರ್ವಕವಾಗಿ ಅಹಂಕಾರವುಂಟಾಗುವುದೆಂದ ಬಳಿಕ ಭೂತೇಂದ್ರಿಯಾದಿ ವ್ಯವಹಾರಗಳು ಉಂಟಾಗುವುದೆಂದೂ ಮಹದಾದಿ ಕ್ರಮದಿಂದ ಸೃಷ್ಟಿಯು ನಿರೂಪಿಸಲ್ಪಡುವುದೆಂದೂ ತಿಳಿಯಬೇಕು.
(ಭಾವಾರ್ಥದೀಪಿಕಾ)

---

*ಶ್ರೋತ್ರ, ತ್ವಕ್, ಚಕ್ಷುಸ್ಸು, ಜಿಹ್ವೆ ಮತ್ತು ಘ್ರಾಣ ಈ ಐದು ಜ್ಞಾನೇಂದ್ರಿಯಗಳು ವಾಕ್, ಪಾಣಿ, ಪಾದ, ಪಾಯೂ, ಉಪಸ್ಥ–ಈ ಐದು ಕರ್ಮೇಂದ್ರಿಯಗಳು. ಮನಸ್ಸು ಹನ್ನೊಂದನೆಯದು. ದಿಕ್, ವಾಯು, ಸೂರ್ಯ, ವರುಣ, ಅಶ್ವಿನೀದೇವತೆಗಳು, ಅಗ್ನಿ, ಇಂದ್ರ, ಉಪೇಂದ್ರ, ಮಿತ್ರ, ಪ್ರಜಾಪತಿ ಮತ್ತು ಚಂದ್ರ ಇವರು ಕ್ರಮವಾಗಿ ಜ್ಞಾನೇಂದ್ರಿಯಗಳಿಗೂ, ಕರ್ಮೇಂದ್ರಿಯಗಳಿಗೂ, ಮನಸ್ಸಿಗೂ ಅಧಿದೇವತೆಗಳು.

ಸೋऽಸೃಜತ್ತಪಸಾ ಯುಕ್ತೋ ರಜಸಾ ಮದನುಗ್ರಹಾತ್ ।
ಲೋಕಾನ್ಸಪಾಲಾನ್ ವಿಶ್ವಾತ್ಮಾ ಭೂರ್ಭುವಃಸ್ವರಿತಿ ತ್ರಿಧಾ ॥೧೧॥

ವಿಶ್ವವನ್ನೇ ಆತ್ಮವನ್ನಾಗಿ ಹೊಂದಿರುವ ಆ ಬ್ರಹ್ಮನು ಮೊದಲು ಕಠೋರವಾದ ತಪಸ್ಸನ್ನು ಮಾಡಿದನು. ಅನಂತರ ನನ್ನ ಅನುಗ್ರಹದಿಂದ ರಜೋಗುಣಯುಕ್ತನಾಗಿ ಭೂಃ, ಭುವಃ, ಸುವಃ, (ಭೂಲೋಕ, ಭುವರ್ಲೋಕ, ಸುವರ್ಲೋಕಗಳನ್ನೂ) ಅಥವಾ ಪೃಥ್ವೀ-ಅಂತರಿಕ್ಷ ಮತ್ತು ಸ್ವರ್ಗಲೋಕಗಳನ್ನೂ ಲೋಕಪಾಲಕರನ್ನೂ ಸೃಷ್ಟಿಸಿದನು. (ಭೂಲೋಕ ದಲ್ಲಿ ಪಾತಾಳಾದಿಗಳನ್ನೂ ಸುವರ್ಲೋಕದಲ್ಲಿ ಮಹರ್ಲೋಕಾದಿಗಳನ್ನೂ ಸೇರಿಸಿಕೊಳ್ಳಬೇಕು.)

ದೇವಾನಾಮೋಕ ಆಸೀತ್ಸ್ವರ್ಭೂತಾನಾಂ ಚ ಭುವಃ ಪದಮ್ ।
ಮರ್ತ್ಯಾದೀನಾಂ ಚ ಭೂರ್ಲೋಕಃ ಸಿದ್ಧಾನಾಂ ತ್ರಿತಯಾತ್ಪರಮ್ ॥

ಬ್ರಹ್ಮನು ದೇವತೆಗಳ ನಿವಾಸಕ್ಕಾಗಿ ಸುವರ್ಲೋಕವನ್ನೂ ಭೂತ ಪ್ರೇತಾದಿಗಳ ನಿವಾಸಕ್ಕಾಗಿ ಭುವರ್ಲೋಕವನ್ನೂ (ಅಂತರಿಕ್ಷವನ್ನೂ) ಮನುಷ್ಯರೇ ಮೊದಲಾದವರ ನಿವಾಸಕ್ಕಾಗಿ ಭೂರ್ಲೋಕವನ್ನೂ (ಭೂಲೋಕವನ್ನೂ) ಸಿದ್ಧಪಡಿಸಿಕೊಟ್ಟನು. ಈ ಮೂರು ಲೋಕಗಳ ಮೇಲಿರುವ ಮಹರ್ಲೋಕ–ತಪೋಲೋಕಗಳು ಸಿದ್ಧರಿಗೆ ನಿವಾಸಸ್ಥಾನಗಳಾದುವು.

ಅಧೋऽಸುರಾಣಾಂ ನಾಗಾನಾಂ ಭೂಮೇರೋಕೋऽಸೃಜತ್ಪ್ರಭುಃ ।
ತ್ರಿಲೋಕ್ಯಾಂ ಗತಯಃ ಸರ್ವಾಃ ಕರ್ಮಣಾಂ ತ್ರಿಗುಣಾತ್ಮನಾಮ್ ॥

ಸೃಷ್ಟಿಕಾರ್ಯದಲ್ಲಿ ಅತ್ಯಂತಸಮರ್ಥನಾದ ಬ್ರಹ್ಮನು ಅಸುರರ ಮತ್ತು ನಾಗಗಳ ವಾಸಕ್ಕಾಗಿ ಭೂಲೋಕದ ತಳಭಾಗದಲ್ಲಿ ಅತಲ-ವಿತಲ-ಸುತಲ ಇವೇ ಮುಂತಾದ ಏಳು ಪಾತಾಳಲೋಕಗಳನ್ನು ಸೃಷ್ಟಿಸಿದನು. ಸ್ವರ್ಗ-ಮರ್ತ್ಯ-ಪಾತಾಳ ಈ ಮೂರು ಲೋಕಗಳಲ್ಲಿಯೂ ತ್ರಿಗುಣಾತ್ಮಕವಾದ ಕರ್ಮಗಳಿಗೆ ಅನುಸಾರವಾಗಿ ವಿಧ-ವಿಧವಾದ ಗತಿಗಳು ದೊರೆಯುತ್ತವೆ.

ಯೋಗಸ್ಯ ತಪಸಶ್ಚೈವ ನ್ಯಾಸಸ್ಯ ಗತಯೋऽಮಲಾಃ ।
ಮಹರ್ಜನಸ್ತಪಃ ಸತ್ಯಂ ಭಕ್ತಿಯೋಗಸ್ಯ ಮದ್ಗತಿಃ ॥೧೪॥

ಯೋಗ, ತಪಸ್ಸು, ಸಂನ್ಯಾಸ–ಇವುಗಳ ಮೂಲಕವಾಗಿ ಮಹರ್ಲೋಕ,

ಜನೋಲೋಕ, ತಪೋಲೋಕ ಮತ್ತು ಸತ್ಯಲೋಕರೂಪವಾದ ಉತ್ತಮ ಗತಿಗಳು ಸಿಕ್ಕುತ್ತವೆ. ಭಕ್ತಿಯೋಗದಿಂದ ನನ್ನ ಪರಮಪದವೇ ಸಿಕ್ಕುತ್ತದೆ.

ಮಯಾ ಕಾಲಾತ್ಮಾನಾ ಧಾತ್ರಾ ಕರ್ಮಯುಕ್ತಮಿದಂ ಜಗತ್ ।
ಗುಣಪ್ರವಾಹ ಏತಸ್ಮಿನ್ನುನ್ಮಜ್ಜತಿ ನಿಮಜ್ಜತಿ ॥೧೫॥

ಸಮಗ್ರವಾದ ಈ ಜಗತ್ತು ಕರ್ಮದಿಂದಲೂ ಮತ್ತು ಅದರ ಸಂಸ್ಕಾರದಿಂದಲೂ ಯುಕ್ತವಾಗಿದೆ. ನಾನೇ ಕಾಲರೂಪನಾಗಿ ಅವರವರ ಕರ್ಮಗಳಿಗೆ ಅನುಸಾರವಾಗಿ ಗತಿಗಳನ್ನು ವಿಧಾನಮಾಡುತ್ತೇನೆ. ಇಂತಹ ಗುಣಪ್ರವಾಹದಲ್ಲಿ ಬಿದ್ದು ಜೀವನು ಕೆಲವೊಮ್ಮೆ ಮುಳುಗಿಹೋಗುತ್ತಾನೆ. ಕೆಲವೊಮ್ಮೆ ಮೇಲೆದ್ದು ತೇಲುತ್ತಾನೆ. ಕೆಲವು ವೇಳೆ ಅವನಿಗೆ ಅಧೋಗತಿಯು ಪ್ರಾಪ್ತವಾಗುತ್ತದೆ. ಕೆಲವು ವೇಳೆ ಪುಣ್ಯವಶದಿಂದ ಊರ್ಧ್ವಗತಿಯು ಪ್ರಾಪ್ತವಾಗುತ್ತದೆ.

ಅಣುರ್ಬೃಹತ್ ಕೃಶಃ ಸ್ಥೂಲೋ ಯೋ ಯೋ ಭಾವಃ ಪ್ರಸಿಧ್ಯತಿ ।
ಸರ್ವೋಽಪ್ಯುಭಯಸಂಯುಕ್ತಃ ಪ್ರಕೃತ್ಯಾ ಪುರುಷೇಣ ಚ ॥೧೬॥

ಜಗತ್ತಿನಲ್ಲಿ ಚಿಕ್ಕದು-ದೊಡ್ಡದು, ತೆಳ್ಳನೆಯದು-ದಪ್ಪವಾದದ್ದು ಮುಂತಾಗಿ ಎಷ್ಟು ಪದಾರ್ಥಗಳಿವೆಯೋ ಅವೆಲ್ಲವೂ ಪ್ರಕೃತಿ ಮತ್ತು ಪುರುಷರ ಸಂಯೋಗದಿಂದಲೇ ಸಿದ್ಧವಾಗಿವೆ.

ಯಸ್ತು ಯಸ್ಯಾದಿರನ್ತಶ್ಚ ಸ ವೈ ಮಧ್ಯಂ ಚ ತಸ್ಯ ಸನ್ ।
ವಿಕಾರೋ ವ್ಯವಹಾರಾರ್ಥೋ ಯಥಾ ತೈಜಸಪಾರ್ಥಿವಾಃ ॥೧೭॥

ಯದುಪಾದಾಯ ಪೂರ್ವಸ್ತು ಭಾವೋ ವಿಕುರುತೇಽಪರಮ್ ।
ಆದಿರನ್ತೋ ಯದಾ ಯಸ್ಯ ತತ್ಸತ್ಯಮಭಿಧೀಯತೇ ॥೧೮॥

ಯಾವ ಕಾರ್ಯವಸ್ತುವಿಗೆ ಯಾವುದು ಆದಿಯೋ ಮತ್ತು ಯಾವುದು ಅಂತ್ಯವೋ ಮಧ್ಯಾವಸ್ಥೆಯಲ್ಲೂ ಅದೇ ಇರುತ್ತದೆ. ಅದೇ ಸತ್ಯ. ವಿಕಾರ ವೆಂಬುದು ಕೇವಲ ವ್ಯವಹಾರಕ್ಕಾಗಿ ಕಲ್ಪನಾಮಾತ್ರವಾಗಿರುತ್ತದೆ. ಕುಂಡಲ-ಕಂಕಣಾದಿಗಳು ಚಿನ್ನದ ವಿಕಾರಗಳು. ಅಂತೆಯೇ ಮಡಕೆ-ಕುಡಿಕೆಗಳು ಮಣ್ಣಿನ ವಿಕಾರಗಳು. ಕುಂಡಲ-ಕಂಕಣಾದಿಗಳು ಮೊದಲು

ಬಂಗಾರವಾಗಿಯೇ ಇದ್ದುವು. ಮಡಕೆ-ಕುಡಿಕೆಗಳೂ ಮೊದಲು ಮಣ್ಣಾಗಿಯೇ ಇದ್ದುವು. ಮಧ್ಯದಲ್ಲಿ ವಿಕಾರವನ್ನು ಹೊಂದಿವೆ. ಕಡೆಯಲ್ಲಿ ಪುನಃ ಅವುಗಳ ಪೂರ್ವರೂಪವನ್ನೇ ಹೊಂದುತ್ತವೆ. ಅದೇ ಸತ್ಯವಾದದ್ದು. ಕಾರಣವೇ ಸತ್ಯ.

ಪೂರ್ವವಸ್ತುವು ಯಾವುದನ್ನು ಉಪಾದಾನಕಾರಣವನ್ನಾಗಿ ಸ್ವೀಕರಿಸಿ ಮತ್ತೊಂದು ವಸ್ತುವನ್ನು ಸೃಷ್ಟಿಸುವುದೋ ಮತ್ತು ಯಾವುದು ಸಮಸ್ತವಸ್ತುವಿನ ಆದಿಯಲ್ಲೂ ಮಧ್ಯದಲ್ಲೂ ಇರುತ್ತದೆಯೋ ಅಂತಹ ಪರಮಕಾರಣವೇ ಸತ್ಯವೆನಿಸುತ್ತದೆ.

ಪ್ರಕೃತಿರ್ಹ್ಯಸ್ಯೋಪಾದಾನಮಾಧಾರಃ ಪುರುಷಃ ಪರಃ ।
ಸತೋಽಭಿವ್ಯಞ್ಜಕಃ ಕಾಲೋ ಬ್ರಹ್ಮ ತತ್ತ್ರಿತಯಂ ತ್ವಹಮ್ ॥೧೯॥

ಈ ಪ್ರಪಂಚಕ್ಕೆ ಪ್ರಕೃತಿಯು ಉಪಾದಾನಕಾರಣವಾಗಿರುತ್ತದೆ. ಪ್ರಕೃತಿಗಿಂತಲೂ ಬೇರೆಯವನಾದ ಪುರುಷನು ಪ್ರಕೃತಿಗೆ ಆಧಾರಭೂತನಾಗಿದ್ದಾನೆ. ಪ್ರಕೃತಿಯನ್ನು ಪ್ರಕಾಶಗೊಳಿಸುವುದು ಕಾಲ. ಪ್ರಕೃತಿ, ಪುರುಷ ಮತ್ತು ಕಾಲ–ಈ ಮೂರೂ ವಸ್ತುತಃ ಬ್ರಹ್ಮಸ್ವರೂಪಗಳೇ ಆಗಿವೆ. ಅಂತಹ ಶುದ್ಧಬ್ರಹ್ಮನು ನಾನೇ ಆಗಿದ್ದೇನೆ.

ಸರ್ಗಃ ಪ್ರವರ್ತತೇ ತಾವತ್ಪೌರ್ವಾಪರ್ಯೇಣ ನಿತ್ಯಶಃ ।
ಮಹಾನ್ಗುಣವಿಸರ್ಗಾರ್ಥಃ ಸ್ಥಿತ್ಯನ್ತೋ ಯಾವದೀಕ್ಷಣಮ್ ॥೨೦॥

ಯಾವತ್ತಿನವರೆಗೆ ಪರಮಾತ್ಮನ ಈಕ್ಷಣಶಕ್ತಿಯು ತನ್ನ ಕಾರ್ಯವನ್ನು ಮಾಡುತ್ತಿರುತ್ತದೆಯೋ ಎಲ್ಲಿಯವರೆಗೆ ಅವನಿಗೆ ಪಾಲನಪ್ರವೃತ್ತಿಯಿರುತ್ತದೆಯೋ ಅಲ್ಲಿಯವರೆಗೂ ಜೀವಿಗಳ ಕರ್ಮಫಲದ ಉಪಭೋಗಕ್ಕಾಗಿ ಕಾರ್ಯ-ಕಾರಣರೂಪದಿಂದ ಅಥವಾ ತಂದೆ-ಮಕ್ಕಳ ರೂಪದಿಂದ ಈ ಸೃಷ್ಟಿಚಕ್ರವು ನಿರಂತರವಾಗಿ ಚಲಿಸುತ್ತಲೇ ಇರುತ್ತದೆ.

ವಿರಾಣ್ಮಯಾಽಽಸಾದ್ಯಮಾನೋ ಲೋಕಕಲ್ಪವಿಕಲ್ಪಕಃ ।
ಪಞ್ಚತ್ವಾಯ ವಿಶೇಷಾಯ ಕಲ್ಪತೇ ಭುವನೈಃ ಸಹ ॥೨೧॥

ಈ ಬ್ರಹ್ಮಾಂಡವು ವಿವಿಧಲೋಕಗಳ ಸೃಷ್ಟಿ-ಸ್ಥಿತಿ ಮತ್ತು ಸಂಹಾರ

ಗಳಿಗೆ ಲೀಲಾಭೂಮಿಯಾಗಿದೆ. ಯಾವಾಗ ನಾನು ಕಾಲರೂಪನಾಗಿ ಇದನ್ನು ವ್ಯಾಪಿಸಿಕೊಳ್ಳುವೆನೋ, ಪ್ರಳಯದ ಸಂಕಲ್ಪಮಾಡುವೆನೋ ಆಗ ಈ ಬ್ರಹ್ಮಾಂಡವು ಸಕಲಭುವನಗಳೊಡನೆ ವಿನಾಶರೂಪವಾದ ವಿಭಾಗಕ್ಕೆ ಯೋಗ್ಯವಾಗುತ್ತದೆ.

ಅನ್ನೇ ಪ್ರಲೀಯತೇ ಮರ್ತ್ಯಮನ್ನಂ ಧಾನಾಸು ಲೀಯತೇ ।
ಧಾನಾ ಭೂಮೌ ಪ್ರಲೀಯನ್ತೇ ಭೂಮಿರ್ಗನ್ಧೇ ಪ್ರಲೀಯತೇ ॥೨೨॥

ವ್ಯುತ್ಕ್ರಮವಾದರೀತಿಯಲ್ಲಿ ಒಂದರಲ್ಲೊಂದು ಲೀನವಾಗುವ ಪ್ರಕ್ರಿಯೆಯು ಹೀಗಿದೆ. ಪ್ರಾಣಿಗಳ ಶರೀರವು ಅನ್ನದಲ್ಲಿಯೂ, ಅನ್ನವು ಬೀಜದಲ್ಲಿಯೂ, ಬೀಜವು ಭೂಮಿಯಲ್ಲಿಯೂ, ಭೂಮಿಯು ಗಂಧತನ್ಮಾತ್ರೆಯಲ್ಲಿಯೂ ಲೀನವಾಗುತ್ತದೆ. (ಯಾವ ಅನ್ನದಿಂದ ಶರೀರವು ವೃದ್ಧಿಯನ್ನು ಹೊಂದುವುದೋ ಆ ಅನ್ನವು ನೂರುವರ್ಷಗಳ ಅನಾವೃಷ್ಟಿಯಿಂದ ಕ್ಷೀಣವಾಗುವುದು. ಆ ಅನ್ನದಲ್ಲಿಯೇ ಶರೀರವು ಲಯವಾಗುತ್ತದೆ. ಅನ್ನವು ಬೀಜಮಾತ್ರವಾಗಿಯೇ ಉಳಿಯುವ ಧಾನ್ಯದಲ್ಲಿ ಲೀನವಾಗುವುದು. ಬೀಜರೂಪಗಳಾದ ಧಾನ್ಯಗಳು ಭೂಮಿಯಲ್ಲಿ ಬಿತ್ತಲ್ಪಟ್ಟು ಮೊಳೆಯದೆ ಅಲ್ಲಿಯೇ ಲೀನವಾಗುವುವು. ಭೂಮಿಯು ಗಂಧದಲ್ಲಿ ಲೀನವಾಗುವುದು– ಎಂದರೆ ಪ್ರಳಯಕಾಲದ ಸೂರ್ಯನಿಂದ ಶೋಷಿಸಲ್ಪಟ್ಟುದಾಗಿಯೂ ಸಂಕರ್ಷಣಮುಖಾಗ್ನಿಯಿಂದ ದಗ್ಧವಾಗಿಯೂ ಸೂಕ್ಷ್ಮಭೂತವೆನಿಸಿದ ಗಂಧಮಾತ್ರದ ಸ್ವರೂಪದಿಂದ ಉಳಿದುಕೊಳ್ಳುವುದು.)

ಅಪ್ಸು ಪ್ರಲೀಯತೇ ಗನ್ಧ ಆಪಶ್ಚ ಸ್ವಗುಣೇ ರಸೇ ।
ಲೀಯತೇ ಜ್ಯೋತಿಷಿ ರಸೋ ಜ್ಯೋತೀ ರೂಪೇ ಪ್ರಲೀಯತೇ ॥

ಗಂಧವು ಜಲದಲ್ಲಿಯೂ, ಜಲವು ತನ್ನ ಗುಣವಾದ ರಸದಲ್ಲಿಯೂ, ರಸವು ತೇಜಸ್ಸಿನಲ್ಲಿಯೂ, ತೇಜಸ್ಸು ರೂಪದಲ್ಲಿಯೂ ಲೀನವಾಗುತ್ತದೆ. (ಗಂಧವು ನೂರುವರ್ಷಗಳ ಅತಿವೃಷ್ಟಿಯಿಂದ ವೃದ್ಧಿಯಾದ ಮಹಾಜಲದಲ್ಲಿ ಲೀನವಾಗುವುದು. ಆ ಜಲವು ತೇಜಸ್ಸಿನಿಂದ ಶೋಷಿಸಲ್ಪಟ್ಟುದಾಗಿ ತನ್ನ ಗುಣವಾದ ರಸದಲ್ಲಿ ಲಯವನ್ನು ಹೊಂದಿ ರಸಮಾತ್ರರೂಪದಿಂದ ನಿಲ್ಲುವುದು. ಬಳಿಕ ಆ ರಸವು ತೇಜಸ್ಸಿನಲ್ಲಿ ಲೀನವಾಗುವುದು. ತೇಜಸ್ಸು ವಾಯುವಿನಿಂದ

ತಿರಸ್ಕೃತವಾಗುವ ಕಾರಣ ರೂಪಮಾತ್ರವಾಗಿ ಆ ರೂಪದಲ್ಲಿಯೇ ಲೀನವಾಗುವುದು.)

ರೂಪಂ ವಾಯೌ ಸ ಚ ಸ್ಪರ್ಶೇ ಲೀಯತೇ ಸೋऽಪಿ ಚಾಮ್ಬರೇ ।
ಅಮ್ಬರಂ ಶಬ್ದತನ್ಮಾತ್ರ ಇನ್ದ್ರಿಯಾಣಿ ಸ್ವಯೋನಿಷು ॥೨೪॥

ರೂಪವು ವಾಯುವಿನಲ್ಲಿಯೂ, ವಾಯುವು ಸ್ಪರ್ಶದಲ್ಲಿಯೂ, ಸ್ಪರ್ಶವು ಆಕಾಶದಲ್ಲಿಯೂ, ಆಕಾಶವು ಶಬ್ದತನ್ಮಾತ್ರೆಯಲ್ಲಿಯೂ ಲೀನವಾಗುತ್ತವೆ. ಇಂದ್ರಿಯಗಳು ತಮಗೆ ಪ್ರವರ್ತಕರಾದ ಅಧಿಷ್ಠಾತೃದೇವತೆಗಳಲ್ಲಿಯೂ ಕಡೆಗೆ ರಾಜಸಾಹಂಕಾರದಲ್ಲಿಯೂ ಸಮಾವೇಶಗೊಳ್ಳುತ್ತವೆ.

(ರೂಪವು ವಾಯುವಿನಲ್ಲಿ ಲೀನವಾಗುವುದು. ಆ ವಾಯುವು ಕಾಲಪ್ರೇರಿತವಾದ ಆಕಾಶದಿಂದ ಗ್ರಸ್ತವಾಗಿ ಸ್ಪರ್ಶಮಾತ್ರವೆನಿಸಿ ಆಕಾಶದಲ್ಲಿ ಲೀನವಾಗುವುದು. ಆ ಆಕಾಶವು ಅಹಂಕಾರದಿಂದ ನುಂಗಲ್ಪಟ್ಟು ಶಬ್ದತನ್ಮಾತ್ರದಲ್ಲಿ ಅಡಗಿಹೋಗುವುದು. ಇದು ತಾಮಸಾಹಂಕಾರದ ಕಾರ್ಯಕ್ಕೆ ಶಬ್ದಪರ್ಯಂತವಾದ ಲಯವಾಗಿದೆ. ರಾಜಸಾಹಂಕಾರದ ಲಯಕ್ರಮವು ಹೀಗಿದೆ. ಪ್ರವೃತ್ತಿಯೇ ಸ್ವಭಾವವಾಗಿರುವ ಚಕ್ಷುವೇ ಮೊದಲಾದ ಇಂದ್ರಿಯಗಳು ತಮಗೆ ವಿಷಯಗಳಲ್ಲಿ ಪ್ರವೃತ್ತಿಯನ್ನುಂಟು ಮಾಡುವ ಸೂರ್ಯನೇ ಮೊದಲಾದ ಅಭಿಮಾನಿದೇವತೆಗಳಲ್ಲಿ ಲಯವನ್ನು ಹೊಂದುವುವು.)

ಯೋನಿರ್ವೈಕಾರಿಕೇ ಸೌಮ್ಯ ಲೀಯತೇ ಮನಸೀಶ್ವರೇ ।
ಶಬ್ದೋ ಭೂತಾದಿಮಪ್ಯೇತಿ ಭೂತಾದಿರ್ಮಹತಿ ಪ್ರಭುಃ ॥೨೫॥

ಸೌಮ್ಯನೇ! ಉದ್ಧವ! ರಾಜಸಾಹಂಕಾರವು ತನಗೆ ನಿಯಾಮಕವಾದ, ಸಾತ್ತ್ವಿಕಾಹಂಕಾರರೂಪವಾದ ಮನಸ್ಸಿನಲ್ಲಿಯೂ, ಶಬ್ದತನ್ಮಾತ್ರೆಯು ಪಂಚಭೂತಗಳಿಗೆ ಕಾರಣವಾದ ತಾಮಸಾಹಂಕಾರ ದಲ್ಲಿಯೂ, ಸಮಸ್ತಜಗತ್ತನ್ನೂ ವಿಮೋಹಗೊಳಿಸಲು ಸಮರ್ಥವಾದ ಮೂರು ವಿಧವಾದ ಅಹಂಕಾರಗಳು ಮಹತ್ತತ್ತ್ವದಲ್ಲಿಯೂ ಲೀನವಾಗುತ್ತವೆ.

(ಪರಮಾರ್ಥವಾಗಿ ಇಂದ್ರಿಯಗಳು ತಮಗೆ ಮುಖ್ಯಕಾರಣವಾದ

ರಾಜಸಾಹಂಕಾರದಲ್ಲಿ ಲೀನವಾಗುವುವು. ಸೂರ್ಯನೇ ಮೊದಲಾದ ಇಂದ್ರಿಯಾಭಿಮಾನಿದೇವತೆಗಳು ಸರ್ವೇಂದ್ರಿಯಗಳಿಗೂ ಪ್ರೇರಕವಾದುದರಿಂದ ನಿಯಾಮಕವಾದ ಮನಸ್ಸಿನಲ್ಲಿ ಲೀನವಾಗುವರು. ಆ ಮನಸ್ಸು ದೇವತೆಗಳಿಂದೊಡಗೂಡಿ ಸಾತ್ತ್ವಿಕಾಹಂಕಾರದಲ್ಲಿ ಲೀನವಾಗುವುದು. ತಾಮಸಾಹಂಕಾರಕಾರ್ಯವಾಗಿ ಉಳಿದಿರುವ ಶಬ್ದವು ತಾಮಸಾಹಂಕಾರದಲ್ಲಿಯೇ ಲೀನವಾಗುವುದು. ಹೀಗೆ ಸಮರ್ಥವಾಗಿರುವ ಅಹಂಕಾರತ್ರಯವೂ ಜಡಾಂಶವನ್ನುಳಿದು ಜ್ಞಾನ-ಕ್ರಿಯಾಶಕ್ತಿರೂಪವಾಗಿ ಮಹತ್ತತ್ತ್ವದಲ್ಲಿ ಲೀನವಾಗುವುದು.)

ಸ ಲೀಯತೇ ಮಹಾನ್ಸ್ವೇಷು ಗುಣೇಷು ಗುಣವತ್ತಮಃ ।
ತೇಽವ್ಯಕ್ತೇ ಸಮ್ಪ್ರಲೀಯನ್ತೇ ತತ್ಕಾಲೇ ಲೀಯತೇಽವ್ಯಯೇ ॥೨೬॥

ಗುಣಯುಕ್ತವಾದ ವಸ್ತುಗಳಲ್ಲಿ ಶ್ರೇಷ್ಠವಾದ ಮಹತ್ತತ್ತ್ವವು ತನ್ನ ಕಾರಣಗುಣಗಳಲ್ಲಿ ಲೀನವಾಗುತ್ತದೆ. ಗುಣಗಳು ಅವ್ಯಕ್ತಪ್ರಕೃತಿಯಲ್ಲಿಯೂ ಪ್ರಕೃತಿಯು ತನಗೆ ಪ್ರೇರಕವಾದ ಅವಿನಾಶಿಯಾದ ಕಾಲದಲ್ಲಿಯೂ ಲೀನವಾಗುತ್ತದೆ. (ಜ್ಞಾನಶಕ್ತಿ-ಕ್ರಿಯಾಶಕ್ತಿಮಾತ್ರರೂಪವಾಗಿರುವುದರಿಂದ ಗುಣಯುಕ್ತವಾದ ವಸ್ತುಗಳಲ್ಲಿ ಶ್ರೇಷ್ಠವಾದ ಆ ಮಹತ್ತತ್ತ್ವವು ಆ ಭಾವವನ್ನುಳಿದು ಸ್ವಕಾರಣಗಳಾದ ತ್ರಿಗುಣಗಳಲ್ಲಿ ಗುಣತ್ರಯರೂಪವಾಗಿ ಲೀನವಾಗುವುದು. ಆ ಗುಣಗಳು ಪ್ರಕೃತಿಯಲ್ಲಿ ಲಯವನ್ನು ಪಡೆದು ಸಾಮಾನ್ಯಾವಸ್ಥೆಯಿಂದ ನಿಲ್ಲುವುವು. ಆ ಪ್ರಕೃತಿಯು ಕ್ಷಣ-ನಿಮೇಷಾದಿ ವೃತ್ತಿಗಳಿಲ್ಲದ ಕಾಲದಲ್ಲಿ ಲಯವನ್ನು ಹೊಂದುವುದು. ಪ್ರಕೃತಿಯು ಕಾಲಾಧೀನವಾದುದರಿಂದ ಕಾಲದೊಡನೆ ಏಕೀಭವಿಸಿರುವುದು.)

ಕಾಲೋ ಮಾಯಾಮಯೇ ಜೀವೇ ಜೀವ ಆತ್ಮನಿ ಮಯ್ಯಜೇ ।
ಆತ್ಮಾ ಕೇವಲ ಆತ್ಮಸ್ಥೋ ವಿಕಲ್ಪಾಪಾಯಲಕ್ಷಣಃ ॥೨೭॥

ಕಾಲವು ಮಾಯಾಸಂಸೃಷ್ಟನಾದ ಜೀವನಲ್ಲಿಯೂ, ಜೀವನು, ಆತ್ಮನೂ ಹುಟ್ಟು-ಸಾವುಗಳಿಲ್ಲದವನೂ ಆದ ನನ್ನಲ್ಲಿಯೂ ಸೇರಿಹೋಗುತ್ತಾರೆ. ಆತ್ಮನು ಯಾವುದರಲ್ಲಿಯೂ ಲೀನವಾಗುವುದಿಲ್ಲ.

ಉಪಾಧಿರಹಿತವಾದ ತನ್ನ ಸ್ವರೂಪದಲ್ಲಿಯೇ ಸುಸ್ಥಿರನಾಗಿರುತ್ತಾನೆ. ಅವನು ಜಗತ್ತಿನ ಸೃಷ್ಟಿ ಮತ್ತು ಲಯಗಳಿಗೆ ಅಧಿಷ್ಠಾನವಾಗಿರುತ್ತಾನೆ.

(ಕಾಲವು, ಮಾಯಾಪ್ರವರ್ತಕವಾಗಿ ಸಕಲಪ್ರಾಣಿಗಳನ್ನೂ ಬದುಕಿಸುವ ಮಹಾಪುರುಷನಲ್ಲಿ ಲೀನವಾಗಿ ಆ ಪುರುಷರೂಪದಿಂದಿರುವುದು. ಆ ಪುರುಷನು ಪ್ರಕೃತಿಯಲ್ಲಿ ಲೀನನಾದ ಬಳಿಕ, ದೃಶ್ಯವಿಲ್ಲದ ಕಾರಣ ಪರಿಪೂರ್ಣದೃಗ್ರೂಪನಾಗಿ ನಿಲ್ಲುವನು. ಆತ್ಮನು ಪ್ರಪಂಚೋತ್ಪತ್ತಿ ಲಯಗಳ ಅಧಿಷ್ಠಾನತ್ವದಿಂದ ಜ್ಞಾಪಿಸಲ್ಪಡುವನಾದ ಕಾರಣ ನಿರುಪಾಧಿಕ ನಾದ ತನ್ನಲ್ಲಿಯೇ ಇರುವನು.)*

ಏವಮನ್ವೀಕ್ಷಮಾಣಸ್ಯ ಕಥಂ ವೈಕಲ್ಪಿಕೋ ಭ್ರಮಃ ।
ಮನಸೋ ಹೃದಿ ತಿಷ್ಠೇತ ವ್ಯೋಮ್ನೀವಾರ್ಕೋದಯೇ ತಮಃ ॥೨೮॥

ಉದ್ಧವ! ಈ ಪ್ರಕಾರವಾಗಿ ವಿವೇಚನೆಮಾಡಿ ವಿಷಯಗಳನ್ನು ತಿಳಿದುಕೊಳ್ಳುವವನ ಮನಸ್ಸಿನಲ್ಲಿ ಈ ಪ್ರಪಂಚದ ವಿಷಯದಲ್ಲಿ ಭ್ರಮೆಯು ಹೇಗೆತಾನೇ ಉಂಟಾದೀತು? ಒಂದು ವೇಳೆ ಭ್ರಮೆಯುಂಟಾದರೂ ಅದು ಹೃದಯದಲ್ಲಿ ಹೆಚ್ಚುಕಾಲ ಹೇಗೆತಾನೇ ಉಳಿದೀತು? ಸೂರ್ಯೋದಯವಾದನಂತರವೂ ಆಕಾಶದಲ್ಲಿ ಕತ್ತಲೆಯು ಉಳಿದಿರಲು ಸಾಧ್ಯವಾಗುವುದೇ?

ಏಷ ಸಾಙ್ಖ್ಯವಿಧಿಃ ಪ್ರೋಕ್ತಃ ಸಂಶಯಗ್ರನ್ಥಿಭೇದನಃ ।
ಪ್ರತಿಲೋಮಾನುಲೋಮಾಭ್ಯಾಂ ಪರಾವರದೃಶಾ ಮಯಾ ॥೨೯॥

ಪ್ರಿಯಸಖನೇ! ನಾನು ಕಾರ್ಯ-ಕಾರಣಗಳೆರಡಕ್ಕೂ ಸಾಕ್ಷಿಯಾಗಿದ್ದೇನೆ. ನಾನು ನಿನಗೆ ಸೃಷ್ಟಿಯಿಂದ ಪ್ರಳಯದವರೆಗೂ ಪ್ರಳಯದಿಂದ ಸೃಷ್ಟಿಯವರೆಗೂ ಸಾಂಖ್ಯವಿಧಿಯನ್ನು ಹೇಳಿರುತ್ತೇನೆ. ಈ ಸಾಂಖ್ಯವಿಧಿಯು ಸಂಶಯದ ಗಂಟನ್ನು ಕತ್ತರಿಸಿಹಾಕುತ್ತದೆ. ಪುರುಷನು ತನ್ನ ಸ್ವ-ಸ್ವರೂಪದಲ್ಲಿ ನಿಲ್ಲುತ್ತಾನೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಏಕಾದಶಸ್ಕಂಧದ ೨೪ನೆಯ ಅಧ್ಯಾಯವು ಮುಗಿಯಿತು. *

---

* ಈ ಅಧ್ಯಾಯದಲ್ಲಿ ಕಂಸದಲ್ಲಿ ಕೊಟ್ಟಿರುವ ವಿವರಣೆಗಳು ಮೋಟಗಾನಹಳ್ಳಿ ಸಂಸ್ಕರಣದ್ದು.

ಮೂರು ಗುಣವೃತ್ತಿಗಳ ನಿರೂಪಣೆ

ಶ್ರೀಭಗವಂತನು ಹೇಳುತ್ತಾನೆ :

ಗುಣಾನಾಮಸಮಿಶ್ರಾಣಾಂ ಪುಮಾನ್ ಯೇನ ಯಥಾ ಭವೇತ್ ।
ತನ್ಮೇ ಪುರುಷವರ್ಯೇದಮುಪಧಾರಯ ಶಂಸತಃ ॥೧॥

"ಪುರುಷಶ್ರೇಷ್ಠನೇ! ಉದ್ಧವ! ಒಬ್ಬೊಬ್ಬ ವ್ಯಕ್ತಿಯಲ್ಲಿಯೂ ಪ್ರತ್ಯೇಕ-ಪ್ರತ್ಯೇಕವಾದ ಗುಣಗಳು ಕಾಣಿಸಿಕೊಳ್ಳುತ್ತವೆ. ಈ ಕಾರಣ ದಿಂದಾಗಿಯೇ ಪ್ರಾಣಿಗಳ ಸ್ವಭಾವದಲ್ಲಿಯೇ ಮೂಲತಃ ಭೇದವಿರುತ್ತದೆ. ಸಮ್ಮಿಶ್ರವಾಗದ ಯಾವ ಗುಣದಿಂದ ಮನುಷ್ಯನಲ್ಲಿ ಯಾವ ವಿಧವಾದ ಸ್ವಭಾವವುಂಟಾಗುವುದೆಂಬುದನ್ನು ನಾನೀಗ ನಿನಗೆ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಶಮೋ ದಮಸ್ತಿತಿಕ್ಷೇಕ್ಷಾ ತಪಃ ಸತ್ಯಂ ದಯಾ ಸ್ಮೃತಿಃ ।
ತುಷ್ಟಿಸ್ತ್ಯಾಗೋಽಸ್ಪೃಹಾ ಶ್ರದ್ಧಾ ಹ್ರೀರ್ದಯಾದಿಃ ಸ್ವನಿರ್ವೃತಿಃ ॥೨॥

ಶಮ (ಮನೋನಿಗ್ರಹ), ದಮ (ಇಂದ್ರಿಯನಿಗ್ರಹ), ಸಹಿಷ್ಣುತೆ, ವಿವೇಕ, ತಪಸ್ಸು, ಸತ್ಯನಿಷ್ಠೆ, ದಯೆ, ಸ್ಮೃತಿ (ಪೂರ್ವಾಪರಾನುಸಂಧಾನ), ಸಂತೋಷ, ತ್ಯಾಗ, ವಿಷಯೋಪಭೋಗಗಳಲ್ಲಿ ಇಚ್ಛೆಯಿಲ್ಲದಿರುವುದು, ಶ್ರದ್ಧೆ, ಲಜ್ಜೆ (ಪಾಪಕಾರ್ಯಗಳನ್ನು ಮಾಡಲು ಸಂಕೋಚ), ಆತ್ಮನಿಷ್ಠೆ, ದಾನ, ವಿನಯ, ಸರಳತೆ–ಇವು ಸತ್ತ್ವಗುಣದ ವೃತ್ತಿಗಳು.

ಕಾಮ ಈಹಾ ಮದಸ್ತೃಷ್ಣಾ ಸ್ತಮ್ಭ ಆಶೀರ್ಭಿದಾ ಸುಖಮ್ ।
ಮದೋತ್ಸಾಹೋ ಯಶಃ ಪ್ರೀತಿರ್ಹಾಸ್ಯಂ ವೀರ್ಯಂ ಬಲೋದ್ಯಮಃ॥೩॥

ಇಚ್ಛೆ, ಪ್ರಯತ್ನ, ಮದ, ತೃಷ್ಣೆ (ತೃಪ್ತಿಯಿಲ್ಲದಿರುವುದು,) ಗರ್ವ, ಧನಕ್ಕಾಗಿ ದೇವತೆಗಳಲ್ಲಿ ಪ್ರಾರ್ಥನೆ, ಭೇದಬುದ್ಧಿ, ವಿಷಯಭೋಗ, ಮದವನ್ನು ತೀರಿಸಿಕೊಳ್ಳುವ ಜಗಳ–ಕದನಗಳಲ್ಲಿ ಉತ್ಸಾಹ, ಕೀರ್ತಿ ಕಾಮನೆ, ಸ್ತುತಿಪ್ರಿಯತೆ, ಹಾಸ್ಯ, ಪರಾಕ್ರಮ, ಹಿಡಿದ ಕೆಲಸವನ್ನು ಛಲದಿಂದ ಸಾಧಿಸುವುದು–ಇವು ರಜೋಗುಣದ ಪ್ರವೃತ್ತಿಗಳು.

ಕ್ರೋಧೋ ಲೋಭೋಽನೃತಂ ಹಿಂಸಾ ಯಾಚ್ಞಾ ದಮ್ಭಃ ಕ್ಲಮಃ ಕಲಿಃ ।
ಶೋಕಮೋಹೌ ವಿಷಾದಾರ್ತೀ ನಿದ್ರಾಽಶಾ ಭೀರನುದ್ಯಮಃ ॥೪॥

ಕ್ರೋಧ (ಅಸಹಿಷ್ಣುತೆ), ಲೋಭ, ಸುಳ್ಳುತನ, ಹಿಂಸೆ, ಯಾಚನೆ, ಡಂಭಾಚಾರ, ವ್ಯರ್ಥವಾದ ಶ್ರಮ, ಜಗಳ, ಶೋಕ, ಮೋಹ, ವಿಷಾದ, ದೈನ್ಯ, ಅತಿನಿದ್ರೆ, ಆಶೆ, ಭಯ, ಜಡತ್ವ–ಇವು ತಮೋಗುಣದ ವೃತ್ತಿಗಳು.

ಉದ್ಧವ! ಹೀಗೆ ನಾನು ನಿನಗೆ ಸತ್ತ್ವಗುಣ–ರಜೋಗುಣ–ತಮೋ ಗುಣಗಳು ಪ್ರತ್ಯೇಕ-ಪ್ರತ್ಯೇಕವಾಗಿ ಅಧಿಕಾಂಶವಿರುವ ವ್ಯಕ್ತಿಗಳ ವೃತ್ತಿಯನ್ನು ವರ್ಣಿಸಿ ಹೇಳಿದ್ದೇನೆ. ಉಳಿದ ವೃತ್ತಿಗಳನ್ನು ಹೀಗೆಯೇ ಊಹಿಸಬೇಕು. ಇನ್ನು ಸಮ್ಮಿಶ್ರಗುಣಗಳಿರುವವರ ವೃತ್ತಿಗಳನ್ನು ಹೇಳುವೆನು; ಕೇಳು:

ಸನ್ನಿಪಾತಸ್ತ್ವಹಮಿತಿ ಮಮೇತ್ಯುದ್ಧವ ಯಾ ಮತಿಃ ।
ವ್ಯವಹಾರಃ ಸನ್ನಿಪಾತೋ ಮನೋಮಾತ್ರೇನ್ದ್ರಿಯಾಸುಭಿಃ ॥೬॥

ಪ್ರಿಯಸಖನೇ! 'ನಾನು–ನನ್ನದು'–ಎಂಬ ಅಭಿಮಾನದಿಂದ ಕೂಡಿರುವ ಬುದ್ಧಿಯಲ್ಲಿ ಮೂರು ಗುಣಗಳ ಮಿಶ್ರಣವೂ ಇರುತ್ತದೆ. ಗುಣತ್ರಯಸಮ್ಮಿಶ್ರಣದ ಸಮಸ್ತವ್ಯವಹಾರವೂ ಮನಸ್ಸು, ತನ್ಮಾತ್ರೆಗಳು, ಇಂದ್ರಿಯಗಳು ಮತ್ತು ಪ್ರಾಣಗಳು ಇವುಗಳ ಮೂಲಕವಾಗಿ ನಡೆಯುತ್ತವೆ.

ಧರ್ಮೇ ಚಾರ್ಥೇ ಚ ಕಾಮೇ ಚ ಯದಾಸೌ ಪರಿನಿಷ್ಠಿತಃ ।
ಗುಣಾನಾಂ ಸನ್ನಿಕರ್ಷೋಽಯಂ ಶ್ರದ್ಧಾರತಿಧನಾವಹಃ ॥೭॥

ಮಾನವನು ಧರ್ಮಾರ್ಥಕಾಮಗಳಲ್ಲಿ ಸಂಲಗ್ನನಾದಾಗ ಸತ್ತ್ವಗುಣದಿಂದ ಶ್ರದ್ಧೆಯೂ, ರಜೋಗುಣದಿಂದ ಆಸಕ್ತಿಯೂ, ತಮೋ ಗುಣದಿಂದ ಧನವೂ ಪ್ರಾಪ್ತವಾಗುತ್ತವೆ. ಇದೂ ಕೂಡ ಗುಣಗಳ ಮಿಶ್ರಣವೇ ಆಗಿದೆ.

ಪ್ರವೃತ್ತಿಲಕ್ಷಣೇ ನಿಷ್ಠಾ ಪುಮಾನ್ಯರ್ಹಿ ಗೃಹಾಶ್ರಮೇ ।
ಸ್ವಧರ್ಮೇ ಚಾನು ತಿಷ್ಠೇತ ಗುಣಾನಾಂ ಸಮಿತಿರ್ಹಿ ಸಾ ॥೮॥

ಯಾವಾಗ ಮನುಷ್ಯನು ಪ್ರವೃತ್ತಿಮಾರ್ಗಲಕ್ಷಣಗಳಾದ ಕಾಮ್ಯ-

ಕರ್ಮಗಳಲ್ಲಿಯೂ, ಗೃಹಸ್ಥಾಶ್ರಮದಲ್ಲಿಯೂ, ಸ್ವಧರ್ಮಾಚರಣೆ ಯಲ್ಲಿಯೂ ಆಸಕ್ತಿಯುಳ್ಳವನಾಗಿರುವನೋ ಆಗ ಅವನಲ್ಲಿ ಗುಣತ್ರಯಗಳ ಸಮ್ಮಿಶ್ರಣ ವಿರುವುದೆಂದು ತಿಳಿಯಬೇಕು.

ಪುರುಷಂ ಸತ್ತ್ವಸಂಯುಕ್ತಮನುಮೀಯಾಚ್ಛಮಾದಿಭಿಃ ।
ಕಾಮಾದಿಭೀ ರಜೋಯುಕ್ತಂ ಕ್ರೋಧಾದ್ಯೈಸ್ತಮಸಾ ಯುತಮ್ ॥

ಮಾನಸಿಕವಾದ ಶಾಂತಿ, ಜಿತೇಂದ್ರಿಯತೆ–ಇತ್ಯಾದಿ ಗುಣಗಳಿಂದ ಸತ್ತ್ವಗುಣಪ್ರಧಾನನಾದ ಪುರುಷನನ್ನೂ, ಕಾಮಾದಿಗುಣಗಳಿಂದ ರಜೋ ಗುಣಯುಕ್ತನಾದ ಪುರುಷನನ್ನೂ, ಕ್ರೋಧಾದಿಗುಣಗಳಿಂದ ತಮೋಗುಣ ಯುಕ್ತನಾದ ಪುರುಷನನ್ನೂ ಗುರುತಿಸಬೇಕು.

ಯದಾ ಭಜತಿ ಮಾಂ ಭಕ್ತ್ಯಾ ನಿರಪೇಕ್ಷಃ ಸ್ವಕರ್ಮಭಿಃ ।
ತಂ ಸತ್ತ್ವಪ್ರಕೃತಿಂ ವಿದ್ಯಾತ್ಪುರುಷಂ ಸ್ತ್ರಿಯಮೇವ ವಾ ॥೧೦॥

ಪುರುಷನಾಗಲೀ, ಸ್ತ್ರೀಯಾಗಲೀ ಯಾರು ನಿಷ್ಕಾಮಭಾವದಿಂದ ತಮ್ಮ ನಿತ್ಯ-ನೈಮಿತ್ತಿಕಕರ್ಮಗಳ ಮೂಲಕವಾಗಿ ನನ್ನನ್ನು ಆರಾಧಿಸುವರೋ ಅಂತಹವರನ್ನು ಸಾತ್ತ್ವಿಕರೆಂದು ತಿಳಿಯಬೇಕು.

ಯದಾ ಆಶಿಷ ಆಶಾಸ್ಯ ಮಾಂ ಭಜೇತ ಸ್ವಕರ್ಮಭಿಃ ।
ತಂ ರಜಃಪ್ರಕೃತಿಂ ವಿದ್ಯಾದ್ಧಿಂಸಾಮಾಶಾಸ್ಯ ತಾಮಸಮ್ ॥೧೧॥

ಯಾವನು ಫಲಕಾಮನಾಗಿ ನಿತ್ಯ-ನೈಮಿತ್ತಿಕಕರ್ಮಗಳ ಮೂಲಕ ವಾಗಿ ನನ್ನನ್ನು ಆರಾಧಿಸುವನೋ ಅವನು ರಜೋಗುಣಿಯೆಂದು ತಿಳಿಯ ಬೇಕು. ಇತರರ ವಿನಾಶವನ್ನಾಶಿಸಿ ನನ್ನನ್ನು ಆರಾಧಿಸತಕ್ಕವನು ತಮೋ ಗುಣಿಯೆಂದು ತಿಳಿಯಬೇಕು.

ಸತ್ತ್ವಂ ರಜಸ್ತಮ ಇತಿ ಗುಣಾ ಜೀವಸ್ಯ ನೈವ ಮೇ ।
ಚಿತ್ತಜಾ ಯೈಸ್ತು ಭೂತಾನಾಂ ಸಜ್ಜಮಾನೋ ನಿಬಧ್ಯತೇ ॥೧೨॥

ಸತ್ತ್ವ-ರಜಸ್ತಮೋಗುಣಗಳ ಕಾರಣವು ಜೀವಿಯ ಚಿತ್ತವಾಗಿದೆ. ಈ ಗುಣಗಳಿಗೂ ನನಗೂ ಯಾವ ಸಂಬಂಧವೂ ಇಲ್ಲ. ಮನಸ್ಸಿನಲ್ಲಿ ಹುಟ್ಟಿ ಕೊಳ್ಳುವ ಈ ಮೂರು ಗುಣಗಳ ಮೂಲಕವಾಗಿ ಜೀವನು ಶರೀರದ ಮೇಲೆ

ಅಥವಾ ಧನಾದಿಗಳ ಮೇಲೆ ಆಸಕ್ತಿಯನ್ನು ಹೊಂದಿ ಬಂಧನದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾನೆ.

ಯದೇತರೌ ಜಯೇತ್ಸತ್ತ್ವಂ ಭಾಸ್ಕರಂ ವಿಶದಂ ಶಿವಮ್ ।
ತದಾ ಸುಖೇನ ಯುಜ್ಯೇತ ಧರ್ಮಜ್ಞಾನಾದಿಭಿಃ ಪುಮಾನ್ ॥೧೩॥

ಪ್ರಕಾಶಕವೂ, ನಿರ್ಮಲವೂ ಮತ್ತು ಶಾಂತವೂ ಆದ ಸತ್ತ್ವಗುಣವು ಇತರ ರಜಸ್ತಮೋಗುಣಗಳನ್ನು ಜಯಿಸಿದಾಗ ಮನುಷ್ಯನು ಸುಖ-ಶಾಂತಿಗಳನ್ನೂ ಧರ್ಮ-ಜ್ಞಾನಗಳನ್ನೂ ಪಡೆದುಕೊಳ್ಳುತ್ತಾನೆ.

ಯದಾ ಜಯೇತ್ತಮಃ ಸತ್ತ್ವಂ ರಜಃ ಸಙ್ಗಂ ಭಿದಾ ಚಲಮ್ ।
ತದಾ ದುಃಖೇನ ಯುಜ್ಯೇತ ಕರ್ಮಣಾ ಯಶಸಾ ಶ್ರಿಯಾ ॥೧೪॥

ಭೇದಬುದ್ಧಿಗೆ ಕಾರಣವಾದ ಆಸಕ್ತಿ ಮತ್ತು ಪ್ರವೃತ್ತಿಗಳೇ ಸ್ವಭಾವವಾಗಿರುವ ರಜೋಗುಣವು ಸತ್ತ್ವತಮೋಗುಣಗಳನ್ನು ಜಯಿಸಿದಾಗ ಮನುಷ್ಯನಿಗೆ ದುಃಖವೂ ಕರ್ಮಗಳಲ್ಲಿ ಆಸಕ್ತಿಯೂ ಉಂಟಾಗುತ್ತದೆ. ಇದರ ಫಲವಾಗಿ ಯಶಸ್ಸೂ ಐಶ್ವರ್ಯವೂ ಲಭಿಸುತ್ತವೆ.

ಯದಾ ಜಯೇದ್ರಜಃ ಸತ್ತ್ವಂ ತಮೋ ಮೂಢಂ ಲಯಂ ಜಡಮ್ ।
ಯುಜ್ಯೇತ ಶೋಕಮೋಹಾಭ್ಯಾಂ ನಿದ್ರಯಾ ಹಿಂಸಯಾಽಶಯಾ ॥

ಅಜ್ಞಾನದ ಸ್ವರೂಪವೂ, ಆಲಸ್ಯ ಮತ್ತು ಮೌಢ್ಯಸ್ವಭಾವದ್ದೂ ಆಗಿರುವ ತಮೋಗುಣವು ಸತ್ತ್ವ-ರಜೋಗುಣಗಳನ್ನು ಜಯಿಸಿ ಮೇಲೆ ಬಂದಾಗ ಮನುಷ್ಯನು ಆಶಾಬಡುಕನಾಗುತ್ತಾನೆ. ಶೋಕ-ಮೋಹಗಳಲ್ಲಿ ಮುಳುಗಿಹೋಗುತ್ತಾನೆ. ಪರಹಿಂಸೆಯೇ ಅವನ ಧರ್ಮವಾಗಿರುತ್ತದೆ. ನಿದ್ರೆ ಮತ್ತು ಆಲಸ್ಯಗಳಿಗೆ ವಶೀಭೂತನಾಗಿರುತ್ತಾನೆ.

ಯದಾ ಚಿತ್ತಂ ಪ್ರಸೀದೇತ ಇನ್ದ್ರಿಯಾಣಾಂ ಚ ನಿರ್ವೃತಿಃ ।
ದೇಹೇಽಭಯಂ ಮನೋಽಸಙ್ಗಂ ತತ್ಸತ್ತ್ವಂ ವಿದ್ಧಿ ಮತ್ಪದಮ್ ॥೧೬॥

ಯಾವಾಗ ಚಿತ್ತವು ಪ್ರಸನ್ನವಾಗಿರುವುದೋ, ಇಂದ್ರಿಯಗಳು ಶಾಂತ ವಾಗಿರುವುವೋ, ದೇಹವು ನಾಶವಾಗಿಬಿಡುವುದೆಂಬ ಭಯವಿಲ್ಲದೇ ಇರುವುದೋ, ಮನಸ್ಸಿಗೆ ವಿಷಯೋಪಭೋಗಗಳಲ್ಲಿ ಆಸಕ್ತಿ ಇರುವುದಿಲ್ಲವೋ

ಆಗ ಚಿತ್ತದಲ್ಲಿ ಸತ್ತ್ವಗುಣವು ವೃದ್ಧಿಯಾಗಿರುವುದೆಂದು ತಿಳಿಯಬೇಕು. ಉದ್ಧವ! ಸತ್ತ್ವಗುಣವೇ ನನ್ನ ಸ್ಥಾನವಾಗಿದೆ. ನನ್ನ ಪ್ರಾಪ್ತಿಗೆ ಮುಖ್ಯ ಸಾಧನವಾಗಿದೆ.

ವಿಕುರ್ವನ್ಕ್ರಿಯಯಾ ಚಾಧೀರನಿರ್ವೃತ್ತಿಶ್ಚ ಚೇತಸಾಮ್ ।
ಗಾತ್ರಾಸ್ವಾಸ್ಥ್ಯಂ ಮನೋ ಭ್ರಾನ್ತಂ ರಜಃ ಏತೈರ್ನಿಶಾಮಯ ॥೧೭॥

ಯಾವಾಗ ಕರ್ಮಗಳನ್ನು ಮಾಡುತ್ತಾ ಜೀವನ ಬುದ್ಧಿಯು ಚಂಚಲ ವಾಗುತ್ತಿರುತ್ತದೆಯೋ, ಜ್ಞಾನೇಂದ್ರಿಯಗಳು ಅಸಂತುಷ್ಟವಾಗಿರುವುವೋ, ಕರ್ಮೇಂದ್ರಿಯಗಳು ವಿಕಾರಯುಕ್ತವಾಗಿರುವುವೋ, ಮನಸ್ಸು ಭ್ರಾಂತ ವಾಗಿರುವುದೋ, ಶರೀರವು ಅಸ್ವಸ್ಥವಾಗಿರುವುದೋ–ಆಗ ರಜೋಗುಣವು ಚಿತ್ತವನ್ನು ಆಕ್ರಮಿಸಿಕೊಂಡಿರುವುದೆಂದು ತಿಳಿಯಬೇಕು.

ಸೀದಚ್ಚಿತ್ತಂ ವಿಲೀಯೇತ ಚೇತಸೋ ಗ್ರಹಣೇಽಕ್ಷಮಮ್ ।
ಮನೋ ನಷ್ಟಂ ತಮೋ ಗ್ಲಾನಿಸ್ತಮಸ್ತದುಪಧಾರಯ ॥೧೮॥

ಯಾವಾಗ ಚಿತ್ತವು ಜ್ಞಾನೇಂದ್ರಿಯಗಳ ಮೂಲಕವಾಗಿ ಶಬ್ದಾದಿ ವಿಷಯಗಳನ್ನು ಗ್ರಹಿಸಲು ಅಸಮರ್ಥವಾಗಿ ಹಿಂಜರಿದು ಖಿನ್ನವಾಗುವುದೋ, ಮನಸ್ಸು ಶೂನ್ಯವಾಗಿಬಿಡುವುದೋ, ಅಜ್ಞಾನಮಯವಾಗಿರುವುದೋ–ಆಗ ತಮೋಗುಣವು ಚಿತ್ತವನ್ನು ಆಕ್ರಮಿಸಿಕೊಂಡಿರುವುದೆಂದು ತಿಳಿಯಬೇಕು.

ಏಧಮಾನೇ ಗುಣೇ ಸತ್ತ್ವೇ ದೇವಾನಾಂ ಬಲಮೇಧತೇ ।
ಅಸುರಾಣಾಂ ಚ ರಜಸಿ ತಮಸ್ಯುದ್ಧವ ರಕ್ಷಸಾಮ್ ॥೧೯॥

ಉದ್ಧವ! ಸತ್ತ್ವಗುಣವು ವೃದ್ಧಿಹೊಂದುವುದರಿಂದ ದೇವತೆಗಳ ಬಲವು ಅಧಿಕವಾಗುತ್ತದೆ. ರಜೋಗುಣವು ವೃದ್ಧಿಹೊಂದುವುದರಿಂದ ಅಸುರರಿಗೆ ಬಲವು ಅಧಿಕವಾಗುತ್ತದೆ. ತಮೋಗುಣವು ವೃದ್ಧಿಹೊಂದುವುದರಿಂದ ರಾಕ್ಷಸರು ಬಲಿಷ್ಠರಾಗುತ್ತಾರೆ. (ಸತ್ತ್ವಗುಣವು ವೃದ್ಧಿಹೊಂದುವುದರಿಂದ ನಿವೃತ್ತಿಸ್ವಭಾವವುಳ್ಳ ಇಂದ್ರಿಯಗಳಿಗೆ ಬಲವು ಹೆಚ್ಚುವುದು. ರಜೋಗುಣವು ಬೆಳೆ ದಲ್ಲಿ ಪ್ರವೃತ್ತಿಸ್ವಭಾವವುಳ್ಳ ಇಂದ್ರಿಯಗಳಿಗೆ ಬಲವು ಹೆಚ್ಚುವುದು. ತಮೋ ಗುಣವು ವೃದ್ಧಿಯಾದಲ್ಲಿ ಮೋಹದ ಬಲವು ಬೆಳೆಯುವುದು. ಸತ್ತ್ವಗುಣ

ವೃದ್ಧಿಯಿಂದ ದೈವಶಕ್ತಿಯೂ ರಜೋಗುಣವೃದ್ಧಿಯಿಂದ ಅಸುರಶಕ್ತಿಯೂ ತಮೋಗುಣದ ವೃದ್ಧಿಯಿಂದ ರಾಕ್ಷಸಶಕ್ತಿಯೂ ಹೆಚ್ಚುವುದು.)

ಸತ್ತ್ವಾಜ್ಜಾಗರಣಂ ವಿದ್ಯಾದ್ರಜಸಾ ಸ್ವಪ್ನಮಾದಿಶೇತ್ ।
ಪ್ರಸ್ವಾಪಂ ತಮಸಾ ಜನ್ತೋಸ್ತುರೀಯಂ ತ್ರಿಷು ಸಂತತಮ್ ॥೨೦॥

ಸತ್ತ್ವಗುಣದಿಂದ ಜಾಗ್ರದವಸ್ಥೆಯೂ ರಜೋಗುಣದಿಂದ ಸ್ವಪ್ನಾವಸ್ಥೆಯೂ ತಮೋಗುಣದಿಂದ ಸುಷುಪ್ತ್ಯವಸ್ಥೆಯೂ ಉಂಟಾಗುತ್ತವೆ. ಈ ಮೂರರಲ್ಲಿಯೂ ಏಕಪ್ರಕಾರವಾಗಿ ವ್ಯಾಪಿಸಿಕೊಂಡಿರುವ ತುರೀಯವೇ ಪರತತ್ತ್ವವು. ಪರಬ್ರಹ್ಮಪರಮಾತ್ಮನು.

ಉಪರ್ಯುಪರಿ ಗಚ್ಛನ್ತಿ ಸತ್ತ್ವೇನ ಬ್ರಾಹ್ಮಣಾ ಜನಾಃ ।
ತಮಸಾಧೋಽಧ ಆಮುಖ್ಯಾದ್ರಜಸಾನ್ತರಚಾರಿಣಃ ॥೨೧॥

ಪುಣ್ಯಶೀಲರಾದ ಬ್ರಾಹ್ಮಣರು ಸತ್ತ್ವಗುಣದ ಮೂಲಕವಾಗಿ ಉತ್ತರೋತ್ತರವಾಗಿ ಉತ್ತಮಲೋಕಗಳಿಗೆ ಹೋಗುತ್ತಾರೆ. ತಮೋಗುಣದ ಮೂಲಕವಾಗಿ ಜೀವಿಗಳು ವೃಕ್ಷಾದಿ ಪರ್ಯಂತವಾದ ಅಧೋಗತಿಯನ್ನು ಹೊಂದುತ್ತಾರೆ. ರಜೋಗುಣದಿಂದ ಮಧ್ಯವರ್ತಿಯಾದ ಮನುಷ್ಯಜನ್ಮವು ಪ್ರಾಪ್ತವಾಗುತ್ತದೆ.

ಸತ್ತ್ವೇ ಪ್ರಲೀನಾಃ ಸ್ವರ್ಯಾನ್ತಿ ನರಲೋಕಂ ರಜೋಲಯಾಃ ।
ತಮೋಲಯಾಸ್ತು ನಿರಯಂ ಯಾನ್ತಿ ಮಾಮೇವ ನಿರ್ಗುಣಾಃ ॥೨೨॥

ಸತ್ತ್ವಗುಣವು ವೃದ್ಧಿಯಾಗಿದ್ದಾಗ ಯಾರು ಮರಣಹೊಂದುವರೋ ಅವರು ಸ್ವರ್ಗಕ್ಕೆ ಹೋಗುತ್ತಾರೆ. ರಜೋಗುಣವು ವೃದ್ಧಿಯಾಗಿದ್ದಾಗ ಮರಣಹೊಂದಿದವರು ಪುನಃ ಮನುಷ್ಯಲೋಕದಲ್ಲೇ ಹುಟ್ಟುತ್ತಾರೆ. ತಮೋಗುಣವು ವೃದ್ಧಿಸಿದಾಗ ಮರಣಹೊಂದಿದವರು ನರಕಕ್ಕೆ ಹೋಗುತ್ತಾರೆ. ಯಾರು ತ್ರಿಗುಣಾತೀತರಾಗಿ ಜೀವನ್ಮುಕ್ತರಾಗಿರುವರೋ ಅಂತಹವರು ನನ್ನನ್ನೇ ಸೇರುತ್ತಾರೆ.

ಮದರ್ಪಣಂ ನಿಷ್ಫಲಂ ವಾ ಸಾತ್ತ್ವಿಕಂ ನಿಜಕರ್ಮ ತತ್ ।
ರಾಜಸಂ ಫಲಸಙ್ಕಲ್ಪಂ ಹಿಂಸಾಪ್ರಾಯಾದಿ ತಾಮಸಮ್ ॥೨೩॥

ಕೇವಲ ನನ್ನ ಪ್ರೀತ್ಯರ್ಥವಾಗಿ ನಿಷ್ಕಾಮನೆಯಿಂದ ಮಾಡುವ ನಿತ್ಯ-ನೈಮಿತ್ತಿಕಕರ್ಮಗಳು ಸಾತ್ತ್ವಿಕಕರ್ಮಗಳೆನಿಸುತ್ತವೆ. ಫಲಾಪೇಕ್ಷೆಯಿಂದ ಮಾಡುವ ನಿತ್ಯ-ನೈಮಿತ್ತಿಕಕರ್ಮಗಳು ರಾಜಸಕರ್ಮಗಳು. ಮತ್ತೊಬ್ಬರ ವಿನಾಶಕ್ಕಾಗಿ ಮಾಡುವ ಹಿಂಸೆಯೇ ಪ್ರಧಾನವಾದ ಕರ್ಮಗಳು ತಾಮಸಕರ್ಮಗಳು.

ಕೈವಲ್ಯಂ ಸಾತ್ತ್ವಿಕಂ ಜ್ಞಾನಂ ರಜೋ ವೈಕಲ್ಪಿಕಂ ಚ ಯತ್ ।
ಪ್ರಾಕೃತಂ ತಾಮಸಂ ಜ್ಞಾನಂ ಮನ್ನಿಷ್ಠಂ ನಿರ್ಗುಣಂ ಸ್ಮೃತಮ್ ॥

ಆತ್ಮನು ದೇಹಾದಿಗಳಿಗಿಂತ ಅತಿರಿಕ್ತನಾದವನೆಂಬ ಜ್ಞಾನವು ಸಾತ್ತ್ವಿಕವು. ದೇಹಾದಿಗಳಲ್ಲಿ ಅಭಿಮಾನರೂಪವಾದ ಜ್ಞಾನವು ರಾಜಸವು. ದೇಹವೇ ಆತ್ಮವೆಂಬ ಜ್ಞಾನವು ತಾಮಸಜ್ಞಾನ. ಈ ಮೂರರಿಂದಲೂ ವಿಲಕ್ಷಣವಾದ ನನ್ನ ಸ್ವರೂಪದ ವಾಸ್ತವಿಕಜ್ಞಾನವು ನಿರ್ಗುಣಜ್ಞಾನವೆನ್ನಿಸಿಕೊಳ್ಳುತ್ತದೆ.

ವನಂ ತು ಸಾತ್ತ್ವಿಕೋ ವಾಸೋ ಗ್ರಾಮೋ ರಾಜಸ ಉಚ್ಯತೇ ।
ತಾಮಸಂ ದ್ಯೂತಸದನಂ ಮನ್ನಿಕೇತಂ ತು ನಿರ್ಗುಣಮ್ ॥೨೫॥

ಅರಣ್ಯದಲ್ಲಿ ವಾಸಮಾಡುವುದು ಸಾತ್ತ್ವಿಕವಾದ ವಾಸ. ಗ್ರಾಮದಲ್ಲಿ ವಾಸಮಾಡುವುದು ರಾಜಸಿಕವಾಸ. ಜೂಜುಕಟ್ಟೆಗಳಿರುವ ಸ್ಥಳದಲ್ಲಿ ವಾಸಮಾಡುವುದು ತಾಮಸಿಕವಾಸ. ಭಗವಂತನಾದ ನನ್ನ ಆಲಯದಲ್ಲಿ ವಾಸಮಾಡುವುದು (ಭಗವಂತನಾದ ನನ್ನನ್ನೇ ಸಂಪೂರ್ಣವಾಗಿ ಆಶ್ರಯಿಸಿರುವುದು) ನಿರ್ಗುಣವಾಸವೆನಿಸಿಕೊಳ್ಳುತ್ತದೆ. ತ್ರಿಗುಣಾತೀತ ಸ್ಥಿತಿಯ ವಾಸವೆನಿಸಿಕೊಳ್ಳುತ್ತದೆ.

ಸಾತ್ತ್ವಿಕಃ ಕಾರಕೋಽಸಙ್ಗೀ ರಾಗಾನ್ಧೋ ರಾಜಸಃ ಸ್ಮೃತಃ ।
ತಾಮಸಃ ಸ್ಮೃತಿವಿಭ್ರಷ್ಟೋ ನಿರ್ಗುಣೋ ಮದಪಾಶ್ರಯಃ ॥೨೬॥

ಅನಾಸಕ್ತಿಭಾವದಿಂದ ಕರ್ಮಗಳನ್ನು ಮಾಡುವವನು ಸಾತ್ತ್ವಿಕ. ಕರ್ಮಗಳಲ್ಲಿ ಆಸಕ್ತನಾಗಿ ಫಲಾಪೇಕ್ಷೆಯಿಂದ ಕರ್ಮಗಳನ್ನು ಮಾಡುವವನು ರಾಜಸ. ಪೂರ್ವಾಪರವಿವೇಚನೆಯಿಲ್ಲದೆ ವಿಧಿ-ನಿಯಮಗಳಿಲ್ಲದೆ ಕರ್ಮಮಾಡುವವನು ತಾಮಸ. ಇವರೆಲ್ಲರಿಂದಲೂ ಅತಿರಿಕ್ತನಾಗಿ ನನ್ನನ್ನೇ

ಪರಮಾಶ್ರಯನನ್ನಾಗಿ ಭಾವಿಸಿಕೊಂಡು ನಿರಹಂಕಾರದಿಂದ ಕರ್ಮ ಮಾಡುವವನು ನಿರ್ಗುಣಕರ್ತೃ.

ಸಾತ್ತ್ವಿಕ್ಯಾಧ್ಯಾತ್ಮಿಕೀ ಶ್ರದ್ಧಾ ಕರ್ಮಶ್ರದ್ಧಾ ತು ರಾಜಸೀ ।
ತಾಮಸ್ಯಧರ್ಮೇ ಯಾ ಶ್ರದ್ಧಾ ಮತ್ಸೇವಾಯಾಂ ತು ನಿರ್ಗುಣಾ ॥

ಆತ್ಮಜ್ಞಾನವಿಷಯಿಕವಾಗಿರುವುದು ಸಾತ್ತ್ವಿಕಶ್ರದ್ಧೆ. ಕರ್ಮ ವಿಷಯಿಕವಾಗಿರುವುದು ರಾಜಸಶ್ರದ್ಧೆ. ಅಧರ್ಮಕಾರ್ಯಗಳಲ್ಲಿಯೇ ಶ್ರದ್ಧೆಯಿರುವುದು ತಾಮಸಶ್ರದ್ಧೆ. ನನ್ನ ಸೇವೆಯಲ್ಲಿ ಆಸಕ್ತವಾಗಿರುವುದು ನಿರ್ಗುಣಶ್ರದ್ಧೆ.

ಪಥ್ಯಂ ಪೂತಮನಾಯಸ್ತಮಾಹಾರ್ಯಂ ಸಾತ್ತ್ವಿಕಂ ಸ್ಮೃತಮ್ ।
ರಾಜಸಂ ಚೇನ್ದ್ರಿಯಪ್ರೇಷ್ಠಂ ತಾಮಸಂ ಚಾರ್ತಿದಾಶುಚಿ ॥೨೮॥

ಆರೋಗ್ಯದಾಯಕವೂ, ಪವಿತ್ರವೂ, ಅನಾಯಾಸವಾಗಿ ದೊರಕುವುದೂ ಆದ ಆಹಾರವು ಸಾತ್ತ್ವಿಕಾಹಾರವೆನಿಸಿಕೊಳ್ಳುತ್ತದೆ. ರಸನೇಂದ್ರಿಯಕ್ಕೆ ರುಚಿಕರವಾದ ಆಹಾರವು ರಾಜಸಾಹಾರ. ದುಃಖಕರವಾದ ಮತ್ತು ಅಪವಿತ್ರವಾದ ಆಹಾರವು ತಾಮಸಾಹಾರ. ನನಗೆ ನಿವೇದಿಸಿದ್ದು ನಿರ್ಗುಣಾಹಾರ.

ಸಾತ್ತ್ವಿಕಂ ಸುಖಮಾತ್ಮೋತ್ಥಂ ವಿಷಯೋತ್ಥಂ ತು ರಾಜಸಮ್ ।
ತಾಮಸಂ ಮೋಹದೈನ್ಯೋತ್ಥಂ ನಿರ್ಗುಣಂ ಮದಪಾಶ್ರಯಮ್ ॥೨೯॥

ಆತ್ಮಜ್ಞಾನದಿಂದ ದೊರಕುವ ಸುಖವು ಸಾತ್ತ್ವಿಕಸುಖ. ವಿಷಯೋಪಭೋಗಗಳಿಂದ ಪ್ರಾಪ್ತವಾದ ಸುಖವು ರಾಜಸಸುಖ. ಅಜ್ಞಾನದಿಂದಲೂ ದೈನ್ಯದಿಂದಲೂ ಪ್ರಾಪ್ತವಾದ ಸುಖವು ತಾಮಸಸುಖ. ನನ್ನ ಅನುಗ್ರಹದಿಂದ ಪ್ರಾಪ್ತವಾದ ಶುದ್ಧಾತ್ಮಜ್ಞಾನದ ಸುಖವು ನಿರ್ಗುಣಸುಖ.

ದ್ರವ್ಯಂ ದೇಶಃ ಫಲಂ ಕಾಲೋ ಜ್ಞಾನಂ ಕರ್ಮ ಚ ಕಾರಕಃ ।
ಶ್ರದ್ಧಾವಸ್ಥಾಽಕೃತಿರ್ನಿಷ್ಠಾ ತ್ರೈಗುಣ್ಯಃ ಸರ್ವ ಏವ ಹಿ ॥೩೦॥

ಉದ್ಧವ! ಈ ಪ್ರಕಾರವಾಗಿ ದ್ರವ್ಯ (ವಸ್ತು), ದೇಶ (ಸ್ಥಾನ), ಫಲ, ಕಾಲ, ಜ್ಞಾನ, ಕರ್ಮ, ಕರ್ತಾ, ಶ್ರದ್ಧೆ, ಅವಸ್ಥೆ, ದೇವ-ಮನುಷ್ಯ-

ತಿರ್ಯಗಾದಿ ಶರೀರಗಳು ಮತ್ತು ನಿಷ್ಠೆ–ಈ ಎಲ್ಲವೂ ತ್ರಿಗುಣಾತ್ಮಕಗಳೇ ಆಗಿವೆ.

ಸರ್ವೇ ಗುಣಮಯಾ ಭಾವಾಃ ಪುರುಷಾವ್ಯಕ್ತಧಿಷ್ಠಿತಾಃ ।
ದೃಷ್ಟಂ ಶ್ರುತಮನುಧ್ಯಾತಂ ಬುದ್ಧ್ಯಾ ವಾ ಪುರುಷರ್ಷಭ ॥೩೧॥

ನರಶ್ರೇಷ್ಠನೇ! ಇಷ್ಟು ಮಾತ್ರವಲ್ಲ. ಜೀವ ಮತ್ತು ಪ್ರಕೃತಿಗೆ ಸಂಬಂಧಿಸಿದಂತೆ ಎಷ್ಟು ಭಾವಗಳಿವೆಯೋ ಅವೆಲ್ಲವೂ ಗುಣಾತ್ಮಕಗಳೇ ಆಗಿವೆ. ಕಣ್ಣಿಂದ ನೋಡಿದ್ದು, ಕಿವಿಯಿಂದ ಕೇಳಿದ್ದು, ಬುದ್ಧಿಯಿಂದ ಯೋಚಿಸಿದ್ದು ಈ ಎಲ್ಲ ಪದಾರ್ಥಗಳೂ ತ್ರಿಗುಣಾತ್ಮಕಗಳೇ ಆಗಿವೆ.

ಏತಾಃ ಸಂಸೃತಯಃ ಪುಂಸೋ ಗುಣಕರ್ಮನಿಬನ್ಧನಾಃ ।
ಯೇನೇಮೇ ನಿರ್ಜಿತಾಃ ಸೌಮ್ಯ ಗುಣಾ ಜೀವೇನ ಚಿತ್ತಜಾಃ ।
ಭಕ್ತಿಯೋಗೇನ ಮನ್ನಿಷ್ಠೋ ಮದ್ಭಾವಾಯ ಪ್ರಪದ್ಯತೇ ॥೩೨॥

ಜೀವನಿಗೆ ಎಷ್ಟು ಜನ್ಮಗಳು ಆಗಿಹೋಗಿವೆಯೋ ಅವೆಲ್ಲವೂ ಈ ಗುಣ-ಕರ್ಮಗಳ ಅನುಸಾರವಾಗಿಯೇ ಆಗಿವೆ. ತನ್ನ ಚಿತ್ತದಲ್ಲಿಯೇ ಹುಟ್ಟಿಕೊಂಡಿರುವ ಈ ಮೂರು ಗುಣಗಳನ್ನು ಯಾವನು ಗೆಲ್ಲುವನೋ ಅಥವಾ ಮೂರನ್ನೂ ವಿನಾಶಗೊಳಿಸಿ ಗುಣಾತೀತನಾಗುವನೋ–ಅಂತಹವನು ಭಕ್ತಿಯೋಗದಿಂದ ನನ್ನಲ್ಲಿಯೇ ನಿಷ್ಠೆಯನ್ನು ಹೊಂದಿ ನನ್ನ ಸ್ವರೂಪವಾದ ಮೋಕ್ಷಕ್ಕೆ ಯೋಗ್ಯನಾಗುತ್ತಾನೆ.

ತಸ್ಮಾದ್ದೇಹಮಿಮಂ ಲಬ್ಧ್ವಾ ಜ್ಞಾನವಿಜ್ಞಾನಸಮ್ಭವಮ್ ।
ಗುಣಸಙ್ಗಂ ವಿನಿರ್ಧೂಯ ಮಾಂ ಭಜನ್ತು ವಿಚಕ್ಷಣಾಃ ॥೩೩॥

ಉದ್ಧವ! ಈ ಮನುಷ್ಯಶರೀರವು ಅತ್ಯಂತ ದುರ್ಲಭವಾದುದು. ಆದರೆ ಈ ಶರೀರವೇ ಈ ಜ್ಞಾನ-ವಿಜ್ಞಾನಗಳೆರಡನ್ನೂ ಸಾಧಿಸಿಕೊಡುತ್ತದೆ. ಆದುದರಿಂದ ಈ ಮನುಷ್ಯಶರೀರವನ್ನು ಹೊಂದಿದ ಬಳಿಕ ವಿದ್ವಾಂಸನಾದವನು ಗುಣಗಳ ಸಂಗವನ್ನು ಸಂಪೂರ್ಣವಾಗಿ ತೊಡೆದುಹಾಕಿ, ನನ್ನನ್ನೇ ಅನನ್ಯಭಕ್ತಿಯಿಂದ ಭಜಿಸಬೇಕು.

ನಿಸ್ಸಙ್ಗೋ ಮಾಂ ಭಜೇದ್ವಿದ್ವಾನಪ್ರಮತ್ತೋ ಜಿತೇನ್ದ್ರಿಯಃ ।
ರಜಸ್ತಮಶ್ಚಾಭಿಜಯೇತ್ಸತ್ತ್ವಸಂಸೇವಯಾ ಮುನಿಃ ॥೩೪॥

ವಿಚಾರಶೀಲನಾದ ಪುರುಷನು ಜಾಗರೂಕನಾಗಿರುತ್ತಾ ಸತ್ತ್ವಗುಣವನ್ನೇ ಆಶ್ರಯಿಸುತ್ತಿದ್ದು ರಜೋಗುಣ ತಮೋಗುಣಗಳನ್ನು ಸಂಪೂರ್ಣವಾಗಿ ಜಯಿಸಬೇಕು. ಅವುಗಳನ್ನು ಮನಸ್ಸಿನಿಂದ ಕಿತ್ತುಹಾಕಬೇಕು. ಇಂದ್ರಿಯಗಳನ್ನು ವಶಪಡಿಸಿಕೊಂಡು ನನ್ನ ಸ್ವರೂಪವನ್ನೇ ಅನುಸಂಧಾನ ಮಾಡುತ್ತಾ ನಿಸ್ಸಂಗವಾಗಿ ನನ್ನನ್ನೇ ಭಜಿಸುತ್ತಿರಬೇಕು.

ಸತ್ತ್ವಂ ಚಾಭಿಜಯೇದ್ಯುಕ್ತೋ ನೈರಪೇಕ್ಷ್ಯೇಣ ಶಾನ್ತಧೀಃ ।
ಸಮ್ಪದ್ಯತೇ ಗುಣೈರ್ಮುಕ್ತೋ ಜೀವೋ ಜೀವಂ ವಿಹಾಯ ಮಾಮ್

ಯೋಗಯುಕ್ತನಾಗಿ ಚಿತ್ತವೃತ್ತಿಯನ್ನು ಶಾಂತಗೊಳಿಸಿ ನಿರಪೇಕ್ಷೆಯ ಮೂಲಕವಾಗಿ ಸತ್ತ್ವಗುಣವನ್ನೂ ಜಯಿಸಬೇಕು. ಈ ಪ್ರಕಾರವಾಗಿ ಮೂರು ಗುಣಗಳಿಂದಲೂ ಮುಕ್ತನಾದ ಜೀವನು ತನ್ನ ಜೀವಭಾವವನ್ನೂ (ಲಿಂಗಶರೀರವನ್ನೂ) ತೊರೆದು, ನನ್ನಲ್ಲಿಯೇ ಸೇರಿಹೋಗುತ್ತಾನೆ.

ಜೀವೋ ಜೀವವಿನಿರ್ಮುಕ್ತೋ ಗುಣೈಶ್ಚಾಶಯಸಮ್ಭವೈಃ ।
ಮಯ್ಯೈವ ಬ್ರಹ್ಮಣಾ ಪೂರ್ಣೋ ನ ಬಹಿರ್ನಾನ್ತರಶ್ಚರೇತ್ ॥೩೬॥

ಹೀಗೆ ಜೀವನು ಅಂತಃಕರಣದಲ್ಲಿ ಅಭಿವ್ಯಕ್ತವಾಗುವ ಮೂರುಗುಣಗಳಿಂದಲೂ, ಲಿಂಗಶರೀರದಿಂದಲೂ ಮುಕ್ತನಾಗಿ ಪರಮಾತ್ಮನಾದ ನನ್ನನ್ನು ಸೇರಿ ಪೂರ್ಣನಾಗುತ್ತಾನೆ. ನನ್ನಲ್ಲಿಯೇ ಸೇರಿಹೋಗುವ ಆತನಿಗೆ ಅಂತರ್ವ್ಯಾಪಾರವಾಗಲೀ ಬಹಿರ್ವ್ಯಾಪಾರವಾಗಲೀ ಯಾವುದೂ ಇರುವುದಿಲ್ಲ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಏಕಾದಶಸ್ಕಂಧದ ೨೫ನೆಯ ಅಧ್ಯಾಯವು ಮುಗಿಯಿತು.

ಏಕಾದಶಸ್ಕಂಧ ೨೬ನೆಯ ಅಧ್ಯಾಯ

ಪುರೂರವನ ವೈರಾಗ್ಯ

ಶ್ರೀಭಗವಂತನು ಹೇಳುತ್ತಾನೆ :

ಮಲ್ಲಕ್ಷಣಮಿಮಂ ಕಾಯಂ ಲಬ್ಧ್ವಾ ಮದ್ಧರ್ಮ ಆಸ್ಥಿತಃ ।
ಆನನ್ದಂ ಪರಮಾತ್ಮಾನಮಾತ್ಮಸ್ಥಂ ಸಮುಪೈತಿ ಮಾಮ್ ॥೧॥

ಉದ್ಧವ! ಈ ಮನುಷ್ಯಶರೀರವು ನನ್ನ ಸ್ವರೂಪಜ್ಞಾನಪ್ರಾಪ್ತಿಗೂ ನನ್ನ ಪ್ರಾಪ್ತಿಗೂ ಮುಖ್ಯಸಾಧನವಾಗಿದೆ. ಇಂತಹ ಅಮೂಲ್ಯವಾದ ಶರೀರವನ್ನು ಪಡೆದು ಯಾವ ಮನುಷ್ಯನು ನಿಶ್ಚಲವಾದ ಪ್ರೇಮದಿಂದ ನನ್ನಲ್ಲಿ ಭಕ್ತಿಭಾವವನ್ನು ಹೊಂದುತ್ತಾನೆಯೋ ಅಂತಹವನು ತನ್ನ ಅಂತಃಕರಣದಲ್ಲಿಯೇ ಇರುವ ಆನಂದಸ್ವರೂಪಪರಮಾತ್ಮನಾದ ನನ್ನನ್ನು ಹೊಂದುತ್ತಾನೆ.

ಗುಣಮಯ್ಯಾ ಜೀವಯೋನ್ಯಾ ವಿಮುಕ್ತೋ ಜ್ಞಾನನಿಷ್ಠಯಾ ।
ಗುಣೇಷು ಮಾಯಾಮಾತ್ರೇಷು ದೃಶ್ಯಮಾನೇಷ್ವವಸ್ತುತಃ ।
ವರ್ತಮಾನೋಽಪಿ ನ ಪುಮಾನ್ ಯುಜ್ಯತೇಽವಸ್ತುಭಿರ್ಗುಣೈಃ ॥೨॥

ಜೀವಗಳ ಸಮಸ್ತಯೋನಿಗಳೂ ಸಮಸ್ತಗತಿಗಳೂ ಗುಣಮಯಗಳಾಗಿಯೇ ಇರುತ್ತವೆ. ಸಾಧಕನು ಜ್ಞಾನನಿಷ್ಠೆಯ ಮೂಲಕವಾಗಿ ತ್ರಿಗುಣಾತ್ಮಕವಾದ ಮಾಯೆಯಿಂದ ಮುಕ್ತನಾಗುತ್ತಾನೆ. ಸತ್ತ್ವರಜಸ್ತಮೋಗುಣಗಳು ವಾಸ್ತವಿಕವಾಗಿ ಇರತಕ್ಕುವುಗಳಲ್ಲ. ಮಾಯಾಮಾತ್ರವಾದುವುಗಳು. ಜ್ಞಾನಿಯಾದವನು ಗುಣಗಳಿಂದ ಅಭಿಭೂತವಾದ ಇಂದ್ರಿಯಗಳಿಂದ ಕೂಡಿದ್ದರೂ ಅವುಗಳಲ್ಲಿಯೇ ವ್ಯವಹರಿಸುತ್ತಿದ್ದರೂ, ಅವುಗಳಿಂದ ಬಂಧಿಸಲ್ಪಡುವುದಿಲ್ಲ. ಗುಣಗಳಿಗೆ ವಾಸ್ತವಿಕವಾಗಿ ಸತ್ತೆ ಇಲ್ಲದಿರುವುದೇ ಇದಕ್ಕೆ ಕಾರಣವಾಗಿದೆ.

ಸಙ್ಗಂ ನ ಕುರ್ಯಾದಸತಾಂ ಶಿಶ್ನೋದರತೃಪಾಂ ಕ್ವಚಿತ್ ।
ತಸ್ಯಾನುಗಸ್ತಮಸ್ಯನ್ಧೇ ಪತತ್ಯನ್ಧಾನುಗಾನ್ಧವತ್ ॥೩॥

ಶಿಶ್ನೋದರಗಳನ್ನು ತೃಪ್ತಿಗೊಳಿಸುವುದರಲ್ಲಿಯೇ ಆಸಕ್ತರಾದವರ ಸಂಗವನ್ನು ಎಂದಿಗೂ ಮಾಡಬಾರದು. ಅಂತಹ ಅಸತ್ಪುರುಷರ ಸಹವಾಸವನ್ನು ಮಾಡುವವನು ಒಬ್ಬ ಕುರುಡನನ್ನು ಅವಲಂಬಿಸಿ ಮತ್ತೊಬ್ಬ ಕುರುಡನು ಹೋಗುವಂತೆ ಅಂಧತಮಸ್ಸಿನಲ್ಲಿ ಬೀಳುತ್ತಾನೆ.

ಉದ್ಧವ! ಹಿಂದೆ ಪುರೂರವನೆಂಬ ಮಹಾಯಶೋವಂತನಾದ ಚಕ್ರವರ್ತಿಯಿದ್ದನು. ಅವನು ಇಲಾ ಎಂಬುವಳ ಪುತ್ರನು. ಊರ್ವಶಿಯ ವಿರಸದಿಂದಾಗಿ ಅತ್ಯಂತಖಿನ್ನನಾಗಿದ್ದ ಅವನು ಶೋಕವನ್ನು ತಡೆದು

ಕೊಂಡು ವೈರಾಗ್ಯವನ್ನು ಹೊಂದಿ ಅನುಭವಸಿದ್ಧವಾದ ಈ ಶ್ಲೋಕಗಳನ್ನು ಹೇಳಿದನು. ತನ್ನನ್ನು ಪರಿತ್ಯಜಿಸಿ ಓಡಿಹೋಗುತ್ತಿದ್ದ ಉರ್ವಶಿಯ ಹಿಂದೆ ನಗ್ನನಾಗಿಯೇ ಹುಚ್ಚನಂತೆ ತಾನೂ ಓಡಿಹೋಗುತ್ತಾ ಪುರೂರವನು ಅತ್ಯಂತವಿಹ್ವಲನಾಗಿ ಕೂಗಿಕೊಂಡನು.

"ದೇವಿ! ನಿಷ್ಠುರಹೃದಯಳೇ! ಸ್ವಲ್ಪಹೊತ್ತಾದರೂ ನಿಂತುಕೋ, ಓಡಿಹೋಗಬೇಡ."

ಉದ್ಧವ! ಉರ್ವಶಿಯು ಪುರೂರವನ ಬುದ್ಧಿಯನ್ನು ಸಂಪೂರ್ಣವಾಗಿ ಅಪಹರಿಸಿಬಿಟ್ಟಿದ್ದಳು. ಅವಳೊಡನೆ ನಿರಂತರವಾಗಿ ಕಾಮೋಪಭೋಗಗಳನ್ನು ಅನುಭವಿಸುತ್ತಿದ್ದರೂ ಅವನಿಗೆ ತೃಪ್ತಿಯೆಂಬುದೇ ಇರಲಿಲ್ಲ. ಕ್ಷುದ್ರವಾದ ವಿಷಯಸುಖಗಳನ್ನು ಅನುಭವಿಸುತ್ತಾ ಅವನು ಹಲವಾರು ವರ್ಷಗಳನ್ನು ಹಲವಾರು ದಿವಸಗಳಂತೆ ಕಳೆದುಬಿಟ್ಟನು. ಅವನಿಗೆ ವರ್ಷದಲ್ಲಿ ಎಷ್ಟುದಿವಸಗಳು ಕಳೆದುಹೋದುವು? ಎಷ್ಟು ದಿವಸಗಳು ಉಳಿದಿವೆ–ಎಂಬುದೇ ತಿಳಿಯುತ್ತಿರಲಿಲ್ಲ. ಉರ್ವಶಿಯು ಪರಿತ್ಯಜಿಸಿಹೋದನಂತರ ವಿವೇಕವುಂಟಾಗಿ ಅವನು ಈ ಮಾತುಗಳನ್ನು ತನ್ನಲ್ಲಿಯೇ ಹೇಳಿಕೊಂಡನು.

ಅಹೋ ಮೇ ಮೋಹವಿಸ್ತಾರಃ ಕಾಮಕಶ್ಮಲಚೇತಸಃ ।
ದೇವ್ಯಾ ಗೃಹೀತಕಣ್ಠಸ್ಯ ನಾಯುಃ ಖಣ್ಡಾ ಇಮೇ ಸ್ಮೃತಾಃ ॥೭॥

ಕಾಮದಿಂದ ಕಲುಷಿತವಾದ ಬುದ್ಧಿಯಿಂದ ಕೂಡಿದ ನನ್ನ ವ್ಯಾಮೋಹದ ವಿಸ್ತಾರವೆಷ್ಟೆಂಬುದನ್ನಾದರೂ ನೋಡಿರಿ! ದೇವಿಯ ತೋಳುಗಳ ತೆಕ್ಕೆಯಲ್ಲಿ ಸಿಕ್ಕಿಬಿದ್ದ ನನಗೆ ನನ್ನ ಆಯುಷ್ಯದಲ್ಲಿ ಎಷ್ಟು ವರ್ಷಗಳು ಉರುಳಿಹೋದವೆಂಬ ಪರಿವೆಯೇ ಇಲ್ಲವಾಯಿತಲ್ಲಾ! ವಿಸ್ಮೃತಿಗೂ ಒಂದು ಎಲ್ಲೆಯಿರಬೇಡವೇ?

ನಾಹಂ ವೇದಾಭಿನಿರ್ಮುಕ್ತಃ ಸೂರ್ಯೋ ವಾಭ್ಯುದಿತೋಽಮುಯಾ ।
ಮುಷಿತೋ ವರ್ಷಪೂಗಾನಾಂ ಬತಾಹಾನಿ ಗತಾನ್ಯುತ ॥೮॥

ಇವಳೊಡನೆ ನಾನು ರಮಿಸುತ್ತಿದ್ದ ಕಾಲದಲ್ಲಿ ನನಗೆ ಸೂರ್ಯನು ಯಾವಾಗ ಮುಳುಗಿದನೆಂಬುದಾಗಲೀ ಯಾವಾಗ ಹುಟ್ಟಿದನೆಂಬುದಾಗಲೀ

ತಿಳಿಯುತ್ತಲೇ ಇರಲಿಲ್ಲ. ಅಯ್ಯೋ! ಮೋಸಹೋದೆನು. ಎಷ್ಟೋ ದಿವಸಗಳು ಎಷ್ಟೋ ವರ್ಷಗಳು ಹೀಗೆಯೇ ಕಳೆದುಹೋದುವಲ್ಲವೇ?

ಅಹೋ ಮೇ ಆತ್ಮಸಮ್ಮೋಹೋ ಯೇನಾತ್ಮಾ ಯೋಷಿತಾಂ ಕೃತಃ ।
ಕ್ರೀಡಾಮೃಗಶ್ಚಕ್ರವರ್ತೀ ನರದೇವಶಿಖಾಮಣಿಃ ॥೯॥

ನನ್ನ ಮನಸ್ಸನ್ನು ಎಂತಹ ಮೋಹವು ಆವರಿಸಿಬಿಟ್ಟಿದ್ದಿತು! ಅಚ್ಚರಿಯ ವಿಷಯವೇ ಸರಿ. ನರದೇವಶಿಖಾಮಣಿಯೂ ಚಕ್ರವರ್ತಿಯೂ ಆದ ಪುರೂರವನು ಹೆಂಗಸರ ಆಟದ ಮೃಗವಾಗಿಬಿಟ್ಟಿದ್ದನಲ್ಲವೇ!

ಸಪರಿಚ್ಛದಮಾತ್ಮಾನಂ ಹಿತ್ವಾ ತೃಣಮಿವೇಶ್ವರಮ್ ।
ಯಾನ್ತೀಂ ಸ್ತ್ರಿಯಂ ಚಾನ್ವಗಮಂ ನಗ್ನ ಉನ್ಮತ್ತವದ್ರುದನ್ ॥೧೦॥

ಶ್ವೇತಚ್ಛತ್ರವೇ ಮೊದಲಾದ ರಾಜಯೋಗ್ಯವಾದ ಮರ್ಯಾದೆಗಳಿಂದ ಕೂಡಿರುವ, ಭೂಮಂಡಲಕ್ಕೆ ಒಡೆಯನಾದ ನನ್ನನ್ನು ಕಸದಕಡ್ಡಿಗಿಂತಲೂ ಕಡೆಯಾಗಿ ಭಾವಿಸಿ ಹೊರಟುಹೋಗುತ್ತಿದ್ದ ಸ್ತ್ರೀಯನ್ನು ಹುಚ್ಚನಂತೆ ಬೆತ್ತಲೆಯಾಗಿಯೇ ಗೋಳಾಡುತ್ತಾ ಹಿಂಬಾಲಿಸಿ ಹೋದೆನಲ್ಲವೇ? ನನ್ನಂತಹ ಮೂರ್ಖರು ಬೇರೆ ಯಾರುತಾನೇ ಇದ್ದಾರು!

ಕುತಸ್ತಸ್ಯಾನುಭಾವಃ ಸ್ಯಾತ್ತೇಜ ಈಶತ್ವಮೇವ ವಾ ।
ಯೋಽನ್ವಗಚ್ಛಂ ಸ್ತ್ರಿಯಂ ಯಾನ್ತೀಂ ಖರವತ್ಪಾದತಾಡಿತಃ ॥೧೧॥

ಹೆಣ್ಣುಕತ್ತೆಯು ಹಿಂದಿನಿಂದ ಒದೆಯುತ್ತಿದ್ದರೂ ಅದನ್ನು ಲೆಕ್ಕಿಸದೆ ಅದರ ಹಿಂದೆಯೇ ಹೋಗುವ ಗಂಡುಕತ್ತೆಯಂತೆ–ನನ್ನನ್ನು ಹುಲ್ಲಿಗೆ ಸಮಾನವಾಗಿ ಕಂಡು ಬಿಟ್ಟುಹೋಗುತ್ತಿದ್ದ ಹೆಂಗಸಿನ ಹಿಂದೆ ಅಂಗಲಾಚಿ ಬೇಡಿಕೊಳ್ಳುತ್ತಾ ನಾನೂ ಹೋಗಿಬಿಟ್ಟಿದ್ದೆನು. ಇಂತಹ ಕುರುಡು ವ್ಯಾಮೋಹದಿಂದ ಕೂಡಿರುವ ನನ್ನಲ್ಲಿ ಯಾವ ಪ್ರಭಾವವಿದ್ದೀತು? ಯಾವ ತೇಜಸ್ಸಿದ್ದೀತು? ಯಾವ ಸ್ವಾಮಿತ್ವವಿದ್ದೀತು?

ಕಿಂ ವಿದ್ಯಯಾ ಕಿಂ ತಪಸಾ ಕಿಂ ತ್ಯಾಗೇನ ಶ್ರುತೇನ ವಾ ।
ಕಿಂ ವಿವಿಕ್ತೇನ ಮೌನೇನ ಸ್ತ್ರೀಭಿರ್ಯಸ್ಯ ಮನೋ ಹೃತಮ್ ॥೧೨॥

ಯಾವನ ಮನಸ್ಸನ್ನು ಸ್ತ್ರೀಯರು ಅಪಹರಿಸಿರುತ್ತಾರೋ ಅವರಿಗೆ

ಎಷ್ಟು ವಿದ್ಯೆಯಿದ್ದರೇನು ಫಲ? ಅವನು ಮಾಡಿರುವ ತಪಸ್ಸಿಗೆ ಯಾವ ಪ್ರಯೋಜನವಿದೆ? ಅವನು ಮಾಡಿದ ತ್ಯಾಗಕ್ಕೇನು ಪ್ರಯೋಜನ? ಅವನಿಗೆ ವೇದಾರ್ಥಜ್ಞಾನವಿದ್ದರೇನು ಪ್ರಯೋಜನ? ಸ್ತ್ರೀಜಿತನಿಗೆ ಏಕಾಂತವಾಸದ ಪ್ರಯೋಜನವೇನು? ಮೌನವ್ರತವಾದರೂ ಯಾವ ಫಲವನ್ನು ಕೊಡುತ್ತದೆ?

ಸ್ವಾರ್ಥಸ್ಯಾಕೋವಿದಂ ಧಿಙ್ಮಾಂ ಮೂರ್ಖಂ ಪಣ್ಡಿತಮಾನಿನಮ್ ।
ಯೋಽಹಮೀಶ್ವರತಾಂ ಪ್ರಾಪ್ಯ ಸ್ತ್ರೀಭಿರ್ಗೋಖರವಜ್ಜಿತಃ ॥೧೩॥

ನಾನೇ ಮಹಾಪಂಡಿತನೆಂದು ಭಾವಿಸಿಕೊಂಡು ಹಿತವೆಂದರೇನೆಂಬುದನ್ನೇ ತಿಳಿಯದಿರುವ ಕಡುಮೂರ್ಖನಾದ ನನಗೆ ಧಿಕ್ಕಾರವಿರಲಿ! ರಾಜಾಧಿರಾಜನ ಪದವಿಯನ್ನು ಹೊಂದಿಯೂ ಹೋರಿಯಂತೆ ; ಗಂಡುಕತ್ತೆಯಂತೆ ಒಬ್ಬ ಹೆಂಗಸಿಗೆ ಸೋತುಹೋದೆನಲ್ಲವೇ?

ಸೇವತೋ ವರ್ಷಪೂಗಾನ್ಮೇ ಉರ್ವಶ್ಯಾ ಅಧರಾಸವಮ್ ।
ನ ತೃಪ್ಯತ್ಯಾತ್ಮಭೂಃ ಕಾಮೋ ವಹ್ನಿರಾಹುತಿಭಿರ್ಯಥಾ ॥೧೪॥

ಅಗ್ನಿಗೆ ಎಷ್ಟು ಆಹುತಿಯನ್ನು ಕೊಟ್ಟರೂ ತೃಪ್ತಿಯಾಗುವುದಿಲ್ಲವಷ್ಟೇ. ಅಂತೆಯೇ ಪ್ರಿಯತಮೆಯಾದ ಉರ್ವಶಿಯ ಅಧರಾಮೃತವನ್ನು ಎಷ್ಟು ಪಾನಮಾಡಿದರೂ ನನಗೆ ತೃಪ್ತಿಯುಂಟಾಗಲಿಲ್ಲ.

ಪುಂಶ್ಚಲ್ಯಾಪಹೃತಂ ಚಿತ್ತಂ ಕೋ ನ್ವನ್ಯೋ ಮೋಚಿತುಂ ಪ್ರಭುಃ ।
ಆತ್ಮಾರಾಮೇಶ್ವರಮೃತೇ ಭಗವನ್ತಮಧೋಕ್ಷಜಮ್ ॥೧೫॥

ವೇಶ್ಯೆಯೊಬ್ಬಳಿಂದ ಅಪಹೃತವಾದ ಮನಸ್ಸನ್ನು ಬಿಡಿಸಿಕೊಳ್ಳಲು ಆತ್ಮಾರಾಮನೂ, ಈಶ್ವರನೂ ಆದ ಭಗವಂತನೊಬ್ಬನನ್ನು ಬಿಟ್ಟು ಬೇರೆ ಯಾರು ತಾನೇ ಸಮರ್ಥರಾಗುವರು?

ಬೋಧಿತಸ್ಯಾಪಿ ದೇವ್ಯಾ ಮೇ ಸೂಕ್ತವಾಕ್ಯೇನ ದುರ್ಮತೇಃ ।
ಮನೋಗತೋ ಮಹಾಮೋಹೋ ನಾಪಯಾತ್ಯಜಿತಾತ್ಮನಃ ॥೧೬॥

"ನೀನು ನನ್ನಲ್ಲಿ ಅನುರಾಗವಿಟ್ಟು ಅನಂತರ ವ್ಯರ್ಥವಾಗಿ ದುಃಖಿಸಬೇಡ"–ಎಂಬುದಾಗಿ ಈ ಮೊದಲೇ ದೇವಿಯಾದ ಉರ್ವಶಿಯು ಹಿತವಚನ

ವನ್ನು ನನಗೆ ಹೇಳಿದ್ದಳು. ಹಾಗೆ ಅವಳು ಎಚ್ಚರಿಸಿದ್ದರೂ ಜಿತೇಂದ್ರಿಯನಲ್ಲದ ನನ್ನ ಮನಸ್ಸಿನ ಮಹಾಮೋಹವು ಅಳಿದುಹೋಗಲಿಲ್ಲ.*

ಕಿಮೇತಯಾ ನೋಽಪಕೃತಂ ರಜ್ಜ್ವಾ ವಾ ಸರ್ಪಚೇತಸಃ ।
ರಜ್ಜುಸ್ವರೂಪಾವಿದುಷೋ ಯೋಽಹಂ ಯದಜಿತೇನ್ದ್ರಿಯಃ ॥೧೭॥

ನಾನೇ ನನ್ನ ಇಂದ್ರಿಯಗಳನ್ನು ಜಯಿಸಲಾರದೆ ವಿಷಯ ಲಂಪಟನಾಗಿದ್ದೇನೆ. ಇದರಲ್ಲಿ ಊರ್ವಶಿಯು ಮಾಡಿದ ಅಪರಾಧವಾದರೂ ಏನಿದೆ? ಹಗ್ಗದ ಸ್ವರೂಪವನ್ನೇ ತಿಳಿಯದವನು ಅದನ್ನು ಸರ್ಪವೆಂದು ಭ್ರಮಿಸಿ ತಳಮಳಿಸಿದರೆ ಅದರಲ್ಲಿ ಹಗ್ಗದ ದೋಷವೇನಿದೆ?

ಕ್ವಾಯಂ ಮಲೀಮಸಃ ಕಾಯೋ ದೌರ್ಗನ್ಧ್ಯಾದ್ಯಾತ್ಮಕೋಽಶುಚಿಃ ।
ಕ್ವ ಗುಣಾಃ ಸೌಮನಸ್ಯಾದ್ಯಾ ಹ್ಯಧ್ಯಾಸೋಽವಿದ್ಯಯಾ ಕೃತಃ ॥೧೮॥

ದುರ್ಗಂಧದಿಂದ ತುಂಬಿಕೊಂಡಿರುವ, ಮಲಿನವೂ, ಅಶುಚಿಯೂ ಆಗಿರುವ ಈ ದೇಹವೆಲ್ಲಿ? ಒಳ್ಳೆಯ ಮನಸ್ಸನ್ನು ಹೊಂದಿರುವಿಕೆಯೇ ಮುಂತಾದ ಸದ್ಗುಣಗಳೆಲ್ಲಿ? ಸ್ತ್ರೀಯರ ಶರೀರವು ಪುಷ್ಪಾದಿಗಳಂತೆ ಸುಗಂಧಯುಕ್ತವೂ ಸುಂದರವೂ ಆಗಿದೆಯೆಂಬ ಭಾವನೆಯು ಭ್ರಮೆಯು. ಅಜ್ಞಾನದಿಂದ ಉಂಟಾದುದು.

ಪಿತ್ರೋಃ ಕಿಂ ಸ್ವಂ ನು ಭಾರ್ಯಾಯಾಃ ಸ್ವಾಮಿನೋಽಗ್ನೇಃ ಶ್ವಗೃಧ್ರಯೋಃ ।
ಕಿಮಾತ್ಮನಃ ಕಿಂ ಸುಹೃದಾಮಿತಿ ಯೋ ನಾವಸೀಯತೇ ॥೧೯॥

---

* ಊರ್ವಶಿಯು ಹೇಳಿರುವ ಸೂಕ್ತವು ಋಗ್ವೇದದಲ್ಲಿ ಹೀಗೆ ಬರುತ್ತದೆ :

ಪುರೂರವೋ ಮಾ ಮೃಥಾ ಮಾ ಪ್ರಪಪ್ತೋ ಮಾ ತ್ವಾ ವೃಕಾಸೋ ಅಶಿವಾಸ ಉಕ್ಷನ್।
ನ ವೈ ಸ್ತ್ರೈಣಾನಿ ಸನ್ತಿ ಸಾಲಾವೃಕಾನಾಂ ಹೃದಯಾನ್ಯೇತಾಃ ॥

ಪುರೂರವನೇ! ಸಾಯಬೇಡ. ವ್ಯಥೆಗೊಳ್ಳಬೇಡ. ಅಮಂಗಳಕರವಾದ ಇಂದ್ರಿಯಗಳೆಂಬ ತೋಳಗಳು ನಿನ್ನನ್ನು ಭಕ್ಷಿಸದಿರಲಿ. ಸ್ತ್ರೀಯರಿಗೆ ಪುರುಷರಲ್ಲಿ ಸಹಜವಾದ ಸ್ನೇಹ–ವಿಶ್ವಾಸಗಳಿರುವುದಿಲ್ಲ. ಸ್ತ್ರೀಯರ ಮನಸ್ಸು ನಾಯಿಗಳ ಮನಸ್ಸಿನಂತೆ ಹೊಸ-ಹೊಸ ವಸ್ತುಗಳನ್ನು ಬಯಸುವುದು.

ಈ ದೇಹವು ಯಾರಿಗೆ ಸೇರಿದ್ದು? ಜನ್ಮದಾತರಾದ ತಾಯಿ-ತಂದೆಗಳಿಗೆ ಸೇರಿದ್ದೇ? ವಿವಾಹಮಾಡಿಕೊಂಡ ಪತ್ನಿಗೆ ಸೇರಿದ್ದೇ? ಅನ್ನವನ್ನಿಟ್ಟು ರಕ್ಷಿಸುವ ಒಡೆಯನಿಗೆ ಸೇರಿದ್ದೇ? ಅಂತಿಮವಾಗಿ ಅಗ್ನಿಯಲ್ಲೇ ದಹಿಸಬೇಕಾಗಿರುವುದರಿಂದ ಈ ದೇಹವು ಅಗ್ನಿಗೆ ಸೇರಿದ್ದೇ? ದೇಹವನ್ನು ದಹಿಸದಿದ್ದರೆ ನಾಯಿ-ನರಿಗಳು ತಿಂದುಹಾಕುತ್ತವೆ. ಆದುದರಿಂದ ಇದು ನಾಯಿ-ನರಿಗಳಿಗೂ ರಣಹದ್ದುಗಳಿಗೂ ಸೇರಿದ್ದೇ? ಬೇರೆ ಯಾರಿಗೂ ಅಲ್ಲದೆ ಆತ್ಮನಿಗೇ ಸೇರಿದ್ದೇ? ಅಥವಾ ಇದನ್ನು ಬಹಳವಾಗಿ ಪ್ರೀತಿಸುವ ಸ್ನೇಹಿತರಿಗೆ ಸೇರಿದ್ದೇ? ಬಹಳವಾಗಿ ಯೋಚಿಸಿ ವಿಚಾರಿಸಿದರೂ ಇದನ್ನು ನಿಶ್ಚಯಿಸಿ ಹೇಳಲು ಸಾಧ್ಯವಾಗುವುದೇ ಇಲ್ಲ.

ತಸ್ಮಿನ್ ಕಲೇವರೇಽಮೇಧ್ಯೇ ತುಚ್ಛನಿಷ್ಠೇ ವಿಷಜ್ಜತೇ ।
ಅಹೋ ಸುಭದ್ರಂ ಸುನಸಂ ಸುಸ್ಮಿತಂ ಚ ಮುಖಂ ಸ್ತ್ರಿಯಃ ॥೨೦॥

ಸತ್ತುಹೋದೊಡನೆ ಕ್ರಿಮಿಗಳ ರೂಪದಲ್ಲಿಯೂ, ಮಲದ ರೂಪದಲ್ಲಿಯೂ, ಭಸ್ಮದ ರೂಪದಲ್ಲಿಯೂ ಪರಿಣಾಮವನ್ನು ಹೊಂದುವ ಅಶುಚಿಯಾದ ಈ ದೇಹದ ವಿಷಯದಲ್ಲಿ ಮನುಷ್ಯನು ವಿಮೋಹಗೊಳ್ಳುತ್ತಾನೆ. ಸ್ತ್ರೀಯರ ಮುಖವನ್ನು ನೋಡಿದೊಡನೆಯೇ ವಿಮೋಹಿತನಾಗುವ ಪುರುಷನು 'ಅಬ್ಬ! ಎಷ್ಟು ಸುಂದರವಾದ ಮುಖ! ಮೂಗು ತಾನೇ ಎಷ್ಟು ಸುಂದರವಾಗಿದೆ! ಕಣ್ಣುಗಳಂತೂ ಕಮಲದಳದ ಸೊಬಗನ್ನು ಮೀರಿಸುತ್ತವೆ. ಕಿರುನಗೆಯಂತೂ ಮನಸ್ಸನ್ನು ಅಲ್ಲೋಲ-ಕಲ್ಲೋಲಗೊಳಿಸುತ್ತದೆ'—ಮುಂತಾಗಿ ಹೇಳಿಕೊಂಡು ಆನಂದಿಸುತ್ತಾನೆ.

ತ್ವಙ್ಮಾಂಸರುಧಿರಸ್ನಾಯುಮೇದೋಮಜ್ಜಾಸ್ಥಿಸಂಹತೌ ।
ವಿಣ್ಮೂತ್ರಪೂಯೇ ರಮತಾಂ ಕೃಮೀಣಾಂ ಕಿಯದನ್ತರಮ್ ॥೨೧॥

ಚರ್ಮ, ಮಾಂಸ, ರಕ್ತ, ನರ, ಮೇದಸ್ಸು, ಮಜ್ಜೆ-ಎಲುಬುಗಳು—ಎಂಬ ಸಪ್ತಧಾತುಗಳ ಸೇರುವಿಕೆಯಿಂದ ಕಲ್ಪಿತವಾಗಿರುವ ಮಲ-ಮೂತ್ರಪೂರ್ಣವಾಗಿರುವ ಸ್ತ್ರೀಶರೀರದಲ್ಲಿ ರಮಿಸುವ ನಮ್ಮಂತಹವರಿಗೂ ಮತ್ತು ಕ್ರಿಮಿಗಳಿಗೂ ಇರುವ ವ್ಯತ್ಯಾಸವಾದರೂ ಏನು?

ಅಥಾಪಿ ನೋಪಸಜ್ಜೇತ ಸ್ತ್ರೀಷು ಸ್ತ್ರೈಣೇಷು ಚಾರ್ಥವಿತ್ ।
ವಿಷಯೇನ್ದ್ರಿಯಸಂಯೋಗಾನ್ಮನಃ ಕ್ಷುಭ್ಯತಿ ನಾನ್ಯಥಾ ॥೨೨॥

ಆದುದರಿಂದ ತನಗೆ ಒಳ್ಳೆಯದಾಗಬೇಕೆಂದು ಬಯಸುವ ಮನುಷ್ಯನು ಕುತ್ಸಿತಸ್ತ್ರೀಯರ ಮತ್ತು ಸ್ತ್ರೀಲಂಪಟರಾದ ಪುರುಷರ ಸಹವಾಸವನ್ನು ಮಾಡಲೇಬಾರದು. ಸ್ತ್ರೀಯರಿಗೆ ಸಂಬಂಧಿಸಿದ ವಸ್ತುಗಳಲ್ಲಿಯೂ ಆಸಕ್ತಿಯನ್ನು ಇಟ್ಟುಕೊಳ್ಳಬಾರದು. ವಿಷಯಗಳೊಡನೆ ಇಂದ್ರಿಯಗಳ ಸಂಯೋಗವಾದರೆ ಮನಸ್ಸು ಕ್ಷೋಭೆಗೊಳ್ಳುತ್ತದೆ. ಇಂದ್ರಿಯಗಳಿಗೆ ವಿಷಯಗಳ ಸಂಬಂಧವೇ ಇಲ್ಲದಿದ್ದರೆ ಮನಸ್ಸು ಶಾಂತವಾಗಿರುತ್ತದೆ.

ಅದೃಷ್ಟಾದಶ್ರುತಾದ್ಭಾವಾನ್ನ ಭಾವ ಉಪಜಾಯತೇ ।
ಅಸಂಪ್ರಯುಞ್ಜತಃ ಪ್ರಾಣಾನ್ಶಾಮ್ಯತಿ ಸ್ತಿಮಿತಂ ಮನಃ ॥೨೩॥

ಸ್ತ್ರೀಯರ ಹಾವ-ಭಾವಗಳನ್ನೇ ನೋಡದಿದ್ದರೆ ; ಕೇಳದಿದ್ದರೆ ನಮಗೆ ಅವರಲ್ಲಿ ಪ್ರೀತಿಯ ಭಾವವೇನೂ ಉಂಟಾಗುವುದಿಲ್ಲ. ನೋಡದೇ ಇರುವುದರಿಂದ ಮತ್ತು ಕೇಳದೇ ಇರುವುದರಿಂದ ಮನಸ್ಸಿನ ಮೇಲೆ ಯಾವವಿಧವಾದ ಪರಿಣಾಮವೂ ಆಗದೆ ಅದು ಸ್ತಿಮಿತವೂ ಶಾಂತವೂ ಆಗಿರುತ್ತದೆ.

ತಸ್ಮಾತ್ ಸಙ್ಗೋ ನ ಕರ್ತವ್ಯಃ ಸ್ತ್ರೀಷು ಸ್ತ್ರೈಣೇಷು ಚೇನ್ದ್ರಿಯೈಃ ।
ವಿದುಷಾಂ ಚಾಪ್ಯವಿಶ್ರಬ್ಧಃ ಷಡ್ವರ್ಗಃ ಕಿಮು ಮಾದೃಶಾಮ್ ॥೨೪॥

ಆದುದರಿಂದ ಸ್ತ್ರೀಯರ ವಿಷಯದಲ್ಲಾಗಲೀ ಸ್ತ್ರೀಯರಿಗೆ ಸಂಬಂಧಿಸಿದ ವಿಚಾರಗಳಲ್ಲಾಗಲೀ ಇಂದ್ರಿಯಗಳು ಆಸಕ್ತವಾಗಿರಬಾರದು. ಮನಸ್ಸಿನಿಂದ ಕೂಡಿದ ಪಂಚೇಂದ್ರಿಯಗಳು ವಿದ್ವಾಂಸರಿಗೂ ಕೂಡ ನಂಬಲು ಅರ್ಹವಾದುವುಗಳಲ್ಲ. ವಿದ್ವಾಂಸರ ಮನಸ್ಸನ್ನೂ ಅವು ಕ್ಷೋಭೆ ಗೊಳಿಸುವುದಾದರೆ ನಮ್ಮಂತಹವರ ಪಾಡೇನು?"

ಉದ್ಧವ! ಹೀಗೆ ರಾಜರಾಜೇಶ್ವರನಾದ ಪುರೂರವನು ಶ್ಲೋಕಗಳನ್ನು ಹಾಡುತ್ತಾ ಉರ್ವಶಿಯ ಲೋಕವನ್ನು ತ್ಯಜಿಸಿಬಿಟ್ಟನು. ಜ್ಞಾನೋದಯವುಂಟಾಗಿ ಮೋಹದಿಂದಲೂ ಮುಕ್ತನಾದನು. ಹೃದಯ

ದಲ್ಲಿಯೇ ಆತ್ಮಸ್ವರೂಪನಾದ ನನ್ನನ್ನು ಸಾಕ್ಷಾತ್ಕರಿಸಿಕೊಂಡು ಶಾಂತನಾಗಿದ್ದನು.

ತತೋ ದುಸ್ಸಙ್ಗಮುತ್ಸೃಜ್ಯ ಸತ್ಸು ಸಜ್ಜೇತ ಬುದ್ಧಿಮಾನ್ ।
ಸನ್ತ ಏತಸ್ಯ ಚ್ಛಿನ್ದನ್ತಿ ಮನೋವ್ಯಾಸಙ್ಗಮುಕ್ತಿಭಿಃ ॥೨೬॥

ಈ ಕಾರಣಗಳಿಂದ ಬುದ್ಧಿವಂತನಾದವನು ದುಷ್ಟಜನರ ಸಂಗವನ್ನು ತೊರೆದು ಸಜ್ಜನರ ಸಹವಾಸವನ್ನು ಮಾಡಬೇಕು. ಸತ್ಪುರುಷರು ಇವನ ಮನಸ್ಸಿನೊಡನಿರುವ ವಿಷಯಗಳ ಸಂಗವನ್ನು ಒಳ್ಳೆಯ ಮಾತುಗಳಿಂದ ಕತ್ತರಿಸಿಹಾಕುತ್ತಾರೆ.

ಸನ್ತೋಽನಪೇಕ್ಷಾ ಮಚ್ಚಿತ್ತಾಃ ಪ್ರಶಾನ್ತಾಃ ಸಮದರ್ಶಿನಃ ।
ನಿರ್ಮಮಾ ನಿರಹಙ್ಕಾರಾ ನಿರ್ದ್ವನ್ದ್ವಾ ನಿಷ್ಪರಿಗ್ರಹಾಃ ॥೨೭॥

ಸತ್ಪುರುಷರು ಯಾರೆಂದರೆ : ಯಾವವಿಧವಾದ ಅಪೇಕ್ಷೆಯೂ ಇಲ್ಲದವರು. ನಿಷ್ಕಾಮರು. ಯಾವಾಗಲೂ ನನ್ನಲ್ಲಿಯೇ ಮನಸ್ಸನ್ನು ಇಟ್ಟಿರುವವರು. ಶಾಂತಮನಸ್ಕರು. ಎಲ್ಲರನ್ನೂ ಸಮವಾಗಿ ಕಾಣತಕ್ಕವರು. ಅಹಂಕಾರ-ಮಮಕಾರಗಳಿಲ್ಲದವರು. ಶೀತೋಷ್ಣ-ಸುಖ-ದುಃಖಾದಿ ಜೋಡಿಗಳಿಂದ ಅತೀತರಾದವರು. ಪ್ರತಿಗ್ರಹವನ್ನು ಮಾಡದೇ ಇರತಕ್ಕವರು. ಇಂತಹವರು ಸತ್ಪುರುಷರೆನಿಸಿಕೊಳ್ಳುತ್ತಾರೆ.

ತೇಷು ನಿತ್ಯಂ ಮಹಾಭಾಗ ಮಹಾಭಾಗೇಷು ಮತ್ಕಥಾಃ ।
ಸಮ್ಭವನ್ತಿ ಹಿತಾ ನೃಣಾಂ ಜುಷತಾಂ ಪ್ರಪುನನ್ತ್ಯಘಮ್ ॥೨೮॥

ಮಹಾಭಾಗ್ಯಶಾಲಿಯೇ! ಮಹಾಭಾಗ್ಯಶಾಲಿಗಳಾದ ಆ ಸತ್ಪುರುಷರ ಸನ್ನಿಧಿಯಲ್ಲಿ ನನ್ನ ಕಥಾಪ್ರಸಂಗಗಳು ನಡೆಯುತ್ತಲೇ ಇರುತ್ತವೆ. ಅಂತಹ ನನ್ನ ಲೀಲಾಪ್ರಸಂಗಗಳು ಮನುಷ್ಯರಿಗೆ ಹಿತವನ್ನು ಉಂಟುಮಾಡುತ್ತವೆ. ಸತ್ಪುರುಷರ ಸಹವಾಸಮಾಡುವವರ ಸಮಸ್ತಪಾಪಗಳೂ ಪರಿಹಾರವಾಗುತ್ತವೆ.

ತಾ ಯೇ ಶೃಣ್ವನ್ತಿ ಗಾಯನ್ತಿ ಹ್ಯನುಮೋದನ್ತಿ ಚಾದೃತಾಃ ।
ಮತ್ಪರಾಃ ಶ್ರದ್ದಧಾನಾಶ್ಚ ಭಕ್ತಿಂ ವಿನ್ದನ್ತಿ ತೇ ಮಯಿ ॥೨೯॥

ಯಾರು ಆದರಪೂರ್ವಕವಾಗಿ ಶ್ರದ್ಧೆಯಿಂದ ನನ್ನ ಲೀಲಾಪ್ರಸಂಗ

ಗಳನ್ನು ಕೇಳುವರೋ, ಗಾನಮಾಡುವರೋ, ಇಂತಹ ಲೀಲಾಪ್ರಸಂಗಗಳನ್ನು ನಡೆಸಲು ಪ್ರೋತ್ಸಾಹಿಸುವರೋ ಅಂತಹವರು ನನ್ನನ್ನೇ ಸಂಪೂರ್ಣವಾಗಿ ಆಶ್ರಯಿಸಿ ನನ್ನಲ್ಲಿ ಪರಮಭಕ್ತಿಯುಳ್ಳವರಾಗುತ್ತಾರೆ.

ಭಕ್ತಿಂ ಲಬ್ಧವತಃ ಸಾಧೋಃ ಕಿಮನ್ಯದವಶಿಷ್ಯತೇ ।
ಮಯ್ಯನನ್ತಗುಣೇ ಬ್ರಹ್ಮಣ್ಯಾನನ್ದಾನುಭವಾತ್ಮನಿ ॥೩೦॥

ಅನಂತಗುಣಪರಿಪೂರ್ಣನೂ, ಬ್ರಹ್ಮಾನಂದಸ್ವರೂಪನೂ, ಅನುಭವಾತ್ಮಕನೂ ಆದ ನನ್ನಲ್ಲಿ ಅನನ್ಯಭಕ್ತಿಭಾವವನ್ನು ಹೊಂದಿರುವ ಸತ್ಪುರುಷನಿಗೆ ಬೇಕಾದ ವಸ್ತುವು ಬೇರೆ ಯಾವುದು ತಾನೇ ಇರುತ್ತದೆ? ನನ್ನ ಭಕ್ತನಿಗೆ ನನ್ನನ್ನು ಬಿಟ್ಟು ಬೇರೆ ಯಾವುದೂ ಬೇಕಾಗುವುದಿಲ್ಲ.

ಯಥೋಪಶ್ರಯಮಾಣಸ್ಯ ಭಗವನ್ತಂ ವಿಭಾವಸುಮ್ ।
ಶೀತಂ ಭಯಂ ತಮೋಽಪ್ಯೇತಿ ಸಾಧೂನ್ಸಂಸೇವತಸ್ತಥಾ ॥೩೧॥

ಅಗ್ನಿಯನ್ನು ಆಶ್ರಯಿಸಿರತಕ್ಕವರಿಗೆ ಶೀತವೂ, (ಸರ್ಪಾದಿಗಳಿಂದ) ಭಯವೂ, ಕತ್ತಲೆಯೂ ನಿವಾರಣೆಯಾಗುವಂತೆ ಸತ್ಪುರುಷರನ್ನು ಸೇವಿಸುವವರಿಗೆ ಶೀತರೂಪವಾದ ಕರ್ಮಜಾಡ್ಯವೂ ಭಯರೂಪವಾದ ಸಂಸಾರವೂ ತಮಸ್ಸಿನರೂಪವಾದ ಅಜ್ಞಾನವೂ ಹೋಗಿಬಿಡುತ್ತವೆ.

ನಿಮಜ್ಜ್ಯೋನ್ಮಜ್ಜತಾಂ ಘೋರೇ ಭವಾಬ್ಧೌ ಪರಮಾಯನಮ್ ।
ಸನ್ತೋ ಬ್ರಹ್ಮವಿದಃ ಶಾನ್ತಾ ನೌರ್ದೃಢೇವಾಪ್ಸು ಮಜ್ಜತಾಮ್ ॥೩೨॥

ನೀರಿನಲ್ಲಿ ಮುಳುಗಿಹೋಗುತ್ತಿರುವವರಿಗೆ ಗಟ್ಟಿಯಾದ ನೌಕೆಯು ಪರಮತಾರಕವಾಗುವಂತೆ ಘೋರವಾದ ಸಂಸಾರಸಾಗರದಲ್ಲಿ ಮುಳುಗೇಳುತ್ತಿರುವವರಿಗೆ ಬ್ರಹ್ಮವಿದರಾದ, ಶಾಂತಾತ್ಮರಾದ ಸತ್ಪುರುಷರು ಪರಮಾಶ್ರಯರಾಗುತ್ತಾರೆ.*

ಅನ್ನಂ ಹಿ ಪ್ರಾಣಿನಾಂ ಪ್ರಾಣ ಆರ್ತಾನಾಂ ಶರಣಂ ತ್ವಹಮ್ ।
ಧರ್ಮೋ ವಿತ್ತಂ ನೃಣಾಂ ಪ್ರೇತ್ಯ ಸನ್ತೋಽರ್ವಾಗ್ಬಿಭ್ಯ-
ತೋಽರಣಮ್॥೩೩॥

---

*ಹೋಲಿಕೆ.: ತ್ರಿಜಗತಿ ಸಜ್ಜನಸಂಗತಿರೇಕಾ ಭವತಿ ಭವಾರ್ಣವತರಣೇ ನೌಕಾ ।
(ಭಜಗೋವಿಂದಂ ಸ್ತೋತ್ರ)

ಯಾವರೀತಿಯಲ್ಲಿ ಅನ್ನದಿಂದ ಪ್ರಾಣಿಗಳ ಪ್ರಾಣದ ರಕ್ಷಣೆಯಾಗುತ್ತದೆಯೋ ಹಾಗೆಯೇ ನಾನು ಆರ್ತರಾದವರಿಗೆ ಶರಣ್ಯನಾಗಿರುತ್ತೇನೆ. ಪರಲೋಕಗಾಮಿಗಳಾದ ಮನುಷ್ಯರಿಗೆ ಧರ್ಮವೇ ಹೇಗೆ ಧನಪ್ರಾಯವಾಗಿರುವುದೋ ಅಂತೆಯೇ ಸಂಸಾರದಿಂದ ಭಯಗೊಂಡಿರುವವರಿಗೆ ಸತ್ಪುರುಷರೇ ಪರಮಾಶ್ರಯರಾಗುತ್ತಾರೆ.

ಸನ್ತೋ ದಿಶನ್ತಿ ಚಕ್ಷೂಂಷಿ ಬಹಿರರ್ಕಃ ಸಮುತ್ಥಿತಃ ।
ದೇವತಾ ಬಾನ್ಧವಾಃ ಸನ್ತಃ ಸನ್ತ ಆತ್ಮಾಹಮೇವ ಚ ॥೩೪॥

ನನ್ನ ಪ್ರಿಯಭಕ್ತರಾದ ಸತ್ಪುರುಷರಾದರೋ ಮನುಷ್ಯರಿಗೆ ಜ್ಞಾನ ದೃಷ್ಟಿಯನ್ನು ಕೊಡುತ್ತಾರೆ. ಸೂರ್ಯನಾದರೋ ಬಹಿರ್ದೃಷ್ಟಿಯನ್ನು ಕೊಡುತ್ತಾನೆ. ಅದೂ ಕೂಡ ತಾನು ಉದಯಿಸಿದಾಗ ಕೊಡುತ್ತಾನೆ. ಸಂತರು ಕೊಡುವ ಅಂತರ್ದೃಷ್ಟಿಯಿಂದ ಸಾಧಕರು ಯಾವಾಗಬೇಕಾದರೂ ಕೋಟಿಸೂರ್ಯಪ್ರಭನಾದ ಪರಮಾತ್ಮನನ್ನು ಕಂಡುಕೊಳ್ಳಬಹುದು. ಆದುದರಿಂದ ಸತ್ಪುರುಷರು ಅನುಗ್ರಹಿಸುವ ಸಾಕ್ಷಾತ್ ದೇವತೆಗಳೇ ಆಗಿದ್ದಾರೆ. ಹಿತೈಷಿಗಳಾದ ಬಂಧುಗಳಾಗಿದ್ದಾರೆ. ಅವರು ನನಗೆ ಪ್ರಿಯವಾದ ಆತ್ಮಸ್ವರೂಪವೇ ಆಗಿದ್ದಾರೆ. ಹೆಚ್ಚೇನು ಹೇಳಲಿ?–ಉದ್ಧವ! ನಾನೇ ಸತ್ಪುರುಷರ ಸ್ವರೂಪದಲ್ಲಿದ್ದೇನೆ.

ಉದ್ಧವ! ಹಿಂದಿನ ಕಥಾಪ್ರಸಂಗವನ್ನು ಮುಗಿಸುತ್ತೇನೆ. ಆತ್ಮಸಾಕ್ಷಾತ್ಕಾರವಾಗುತ್ತಲೇ ಇಲಾನಂದನನಾದ ಪುರೂರವಸನು ಊರ್ವಶಿಯ ಲೋಕದಲ್ಲಿ ಊರ್ವಶಿಯೊಡನೆ ಇರಬೇಕೆನ್ನುವ ಆಸೆಯನ್ನು ಬಿಟ್ಟುಬಿಟ್ಟನು. ಅವನ ಆಸಕ್ತಿಗಳೆಲ್ಲವೂ ಒಂದೊದಾಗಿ ಕಳಚಿಬಿದ್ದು ಹೋದುವು. ಅನಂತರ ಅವನು ಆತ್ಮಾರಾಮನಾಗಿ ಸ್ವೇಚ್ಛೆಯಿಂದ ಭೂಮಂಡಲದಲ್ಲಿ ಸಂಚರಿಸತೊಡಗಿದನು."

ಮಹಾಪುರಾಣವೂ ಪಾರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಏಕಾದಶಸ್ಕಂಧದ ೨೬ನೆಯ ಅಧ್ಯಾಯವು ಮುಗಿಯಿತು.

——

ಕ್ರಿಯಾಯೋಗದ ವರ್ಣನೆ

ಉದ್ಧವನು ಹೇಳುತ್ತಾನೆ :

ಕ್ರಿಯಾಯೋಗಂ ಸಮಾಚಕ್ಷ್ವ ಭವದಾರಾಧನಂ ಪ್ರಭೋ ।
ಯಸ್ಮಾತ್ತ್ವಾಂ ಯೇ ಯಥಾರ್ಚನ್ತಿ ಸಾತ್ವತಾಂ ಸಾತ್ವತರ್ಷಭ ॥೧॥

“ಭಕ್ತವತ್ಸಲನಾದ ಕೃಷ್ಣನೇ! ಯಾವ ಕ್ರಿಯಾಯೋಗವನ್ನು ಆಶ್ರಯಿಸಿ ಭಕ್ತಜನರು ಯಾವ ಪ್ರಕಾರದಿಂದ ಮತ್ತು ಯಾವ ಉದ್ದೇಶದಿಂದ ನಿನ್ನನ್ನು ಆರಾಧಿಸುತ್ತಾರೆ? ನೀನು ನಿನ್ನ ಆರಾಧನಾರೂಪವಾದ ಆ ಕ್ರಿಯಾಯೋಗದ ವರ್ಣನೆಯನ್ನು ಮಾಡು.

ದೇವರ್ಷಿಗಳಾದ ನಾರದರು, ಭಗವಾನ್ ವ್ಯಾಸರು, ಆಚಾರ್ಯರಾದ ಬೃಹಸ್ಪತಿಗಳು–ಇವರೇ ಮುಂತಾದ ದೊಡ್ಡ-ದೊಡ್ಡ ಋಷಿ-ಮುನಿಗಳು, ಕ್ರಿಯಾಯೋಗದ ಮೂಲಕವಾಗಿ ನಿನ್ನನ್ನು ಆರಾಧಿಸುವುದೇ ಮನುಷ್ಯರಿಗೆ ಪರಮಶ್ರೇಯಸ್ಕರವಾದುದೆಂದು ಹೇಳುತ್ತಾರೆ. ಈ ಕ್ರಿಯಾಯೋಗವು ಮೊದಲು ನಿನ್ನ ಮುಖಾರವಿಂದದಿಂದಲೇ ಹೊರಬಂದಿತು. ಹಾಗೆ ನಿನ್ನ ಮುಖಾರವಿಂದದಿಂದಲೇ ಹೊರಟ ಈ ಕ್ರಿಯಾಯೋಗವನ್ನು ಮೊದಲು ಬ್ರಹ್ಮನು ಗ್ರಹಿಸಿ ಅನಂತರ ಇದನ್ನು ತನ್ನ ಮಕ್ಕಳಾದ ಭೃಗುವೇ ಮೊದಲಾದವರಿಗೆ ಉಪದೇಶಿಸಿದನು. ನಿನ್ನ ಮಗನಾದ ಭಗವಾನ್ ಭವನು ಈ ಕ್ರಿಯಾಯೋಗವನ್ನೇ ತನ್ನ ಪತ್ನಿಯಾದ ಭವಾನಿಗೂ ಉಪದೇಶಿಸಿದನು.

ಮಾನದನೇ! ಪ್ರಭುವೇ! ಕೃಷ್ಣ! ಈ ಕ್ರಿಯಾಯೋಗವು ಬ್ರಾಹ್ಮಣ-ಕ್ಷತ್ರಿಯರೇ ಮೊದಲಾದ ನಾಲ್ಕು ವರ್ಣದವರಿಗೂ ಬ್ರಹ್ಮಚಾರಿ-ಗೃಹಸ್ಥ–ಇವರೇ ಮೊದಲಾದ ಚತುರಾಶ್ರಮಿಗಳಿಗೂ ಪರಮಶ್ರೇಯಸ್ಕರವಾಗಿದೆ. ಸ್ತ್ರೀ-ಶೂದ್ರಾದಿಗಳಿಗೂ ಈ ಕ್ರಿಯಾಯೋಗವು ಎಲ್ಲಕ್ಕಿಂತಲೂ ಶ್ರೇಷ್ಠವಾದ ಸಾಧನಾಪದ್ಧತಿಯೆಂದು ನಾನು ಭಾವಿಸಿದ್ದೇನೆ.

ಕಮಲನಯನನೇ! ಶ್ಯಾಮಸುಂದರನೇ! ನೀನು ಶಂಕರನೇ ಮೊದಲಾದ ಜಗದೀಶ್ವರರಿಗೂ ಈಶ್ವರನಾಗಿರುವೆ. ನಾನು ನಿನ್ನ ಪಾದಾರವಿಂದ

ಗಳಲ್ಲಿಯೇ ಅನುರಕ್ತನಾಗಿರುವ ಭಕ್ತನಾಗಿರುತ್ತೇನೆ. ನೀನು ಕೃಪೆಮಾಡಿ, ನನ್ನನ್ನು ಈ ಭವಬಂಧನದಿಂದ ಮುಕ್ತಿಗೊಳಿಸುವ ಕ್ರಿಯಾಯೋಗದ ವಿಧಿ-ನಿಯಮಗಳನ್ನು ವರ್ಣಿಸಿ ಹೇಳು."

ಶ್ರೀಭಗವಂತನು ಹೇಳುತ್ತಾನೆ :

"ಉದ್ಧವ! ಅಪಾರವಾಗಿರುವ ಕರ್ಮಕಾಂಡಕ್ಕೆ ಅಂತ್ಯವೆಂಬುದೇ ಇಲ್ಲ. ಎಷ್ಟು ಹೇಳಿದರೂ ಅದು ಮುಗಿಯುವುದೇ ಇಲ್ಲ. ಆದುದರಿಂದ ನಾನು ಇದನ್ನು ಸಂಕ್ಷೇಪವಾಗಿ ಮೊದಲಿನಿಂದ ಕಡೆಯವರೆಗೂ ವರ್ಣಿಸಿ ಹೇಳುತ್ತೇನೆ.

ವೈದಿಕಸ್ತಾನ್ತ್ರಿಕೋ ಮಿಶ್ರ ಇತಿ ಮೇ ತ್ರಿವಿಧೋ ಮಖಃ ।
ತ್ರಯಾಣಾಮೀಪ್ಸಿತೇನೈವ ವಿಧಿನಾ ಮಾಂ ಸಮರ್ಚಯೇತ್ ॥೭॥

ನನ್ನ ಪೂಜಾವಿಧಿಯು ವೈದಿಕ, ತಾಂತ್ರಿಕ ಮತ್ತು ಮಿಶ್ರ–ಎಂಬ ಮೂರು ಪ್ರಕಾರಗಳಲ್ಲಿದೆ. ಈ ಮೂರು ವಿಧಿಗಳಲ್ಲಿ ನನ್ನ ಭಕ್ತರು ಯಾವುದು ಅವರಿಗೆ ಅನುಕೂಲವಾಗಿ ಕಾಣುವುದೋ ಆ ವಿಧಿಯನ್ನು ಅನುಸರಿಸಿ ನನ್ನ ಆರಾಧನೆಯನ್ನು ಮಾಡಬಹುದು.

ಯದಾ ಸ್ವನಿಗಮೇನೋಕ್ತಂ ದ್ವಿಜತ್ವಂ ಪ್ರಾಪ್ಯ ಪೂರುಷಃ ।
ಯಥಾ ಯಜೇತ ಮಾಂ ಭಕ್ತ್ಯಾ ಶ್ರದ್ಧಯಾ ತನ್ನಿಬೋಧ ಮೇ ॥೮॥

ತನ್ನ ವೇದಶಾಖೆಗೆ ಹೇಳಿರುವ ರೀತಿಯಲ್ಲಿ ದ್ವಿಜನು ಉಪನಯನ ಸಂಸ್ಕಾರವನ್ನು ಮಾಡಿಕೊಂಡು ಭಕ್ತಿಯಿಂದಲೂ, ಶ್ರದ್ಧೆಯಿಂದಲೂ ಕೂಡಿದವನಾಗಿ ಯಾವ ರೀತಿಯಲ್ಲಿ ನನ್ನನ್ನು ಅರ್ಚಿಸಬೇಕೆಂಬುದನ್ನು ಹೇಳುವೆನು. ಸಾವಧಾನಚಿತ್ತದಿಂದ ಕೇಳು :

ಅರ್ಚಾಯಾಂ ಸ್ಥಣ್ಡಿಲೇಽಗ್ನೌ ವಾ ಸೂರ್ಯೇ ವಾಪ್ಸು ಹೃದಿ ದ್ವಿಜೇ।
ದ್ರವ್ಯೇಣ ಭಕ್ತಿಯುಕ್ತೋಽರ್ಚೇತ್ಸ್ವಗುರುಂ ಮಾಮಮಾಯಯಾ ॥೯॥

"ಆತ್ಮಗುರುವಾದ ನನ್ನನ್ನು ಭಕ್ತಿಪೂರ್ವಕವಾಗಿ ನಿಷ್ಕಾಮಭಾವದಿಂದ ನನ್ನ ಪ್ರತೀಕದಲ್ಲಾಗಲೀ, ವೇದಿಯಲ್ಲಾಗಲೀ, ಅಗ್ನಿಯಲ್ಲಾಗಲೀ, ನೀರಿನಲ್ಲಾಗಲೀ, ಹೃದಯದಲ್ಲಾಗಲೀ ಅಥವಾ ಜ್ಞಾನಿಯಾದ ಬ್ರಾಹ್ಮಣನಲ್ಲಾಗಲೀ ಆವಾಹನೆಮಾಡಿಕೊಂಡು ಆರಾಧನೆಮಾಡಬೇಕು.

ಪೂರ್ವಂ ಸ್ನಾನಂ ಪ್ರಕುರ್ವೀತ ಧೌತದನ್ತೋಽಙ್ಗಶುದ್ಧಯೇ ।
ಉಭಯೈರಪಿ ಚ ಸ್ನಾನಂ ಮನ್ತ್ರೈರ್ಮೃದ್ಗ್ರಹಣಾದಿನಾ ॥೧೦॥

ಉಪಾಸಕನಾದವನು ಪ್ರಾತಃಕಾಲದಲ್ಲಿ ಹಲ್ಲುಗಳನ್ನುಜ್ಜಿಕೊಂಡು ಶರೀರಶುದ್ಧಿಗಾಗಿ ಸ್ನಾನವನ್ನು ಮಾಡಬೇಕು. ಬಳಿಕ ವೈದಿಕ ಮತ್ತು ತಾಂತ್ರಿಕಗಳೆಂಬ ಎರಡು ಪ್ರಕಾರಗಳಿಂದಲೂ ಮಂತ್ರಪೂರ್ವಕವಾಗಿ ಮೃತ್ತಿಕೆ ಮುಂತಾದುವುಗಳನ್ನು ಲೇಪಿಸಿಕೊಂಡು ಸ್ನಾನಮಾಡಬೇಕು.

ಸನ್ಧ್ಯೋಪಾಸ್ತ್ಯಾದಿಕರ್ಮಾಣಿ ವೇದೇನಾಚೋದಿತಾನಿ ಮೇ ।
ಪೂಜಾಂ ತೈಃ ಕಲ್ಪಯೇತ್ ಸಮ್ಯಕ್ಸಙ್ಕಲ್ಪಃ ಕರ್ಮಪಾವನೀಮ್ ॥

ಅನಂತರ ವೇದೋಕ್ತವಾದ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಮಾಡಬೇಕು. ಬಳಿಕ ನನ್ನ ಆರಾಧನೆಗಾಗಿಯೇ ದೃಢವಾದ ಸಂಕಲ್ಪವನ್ನು ಮಾಡಿ ವೈದಿಕ ಮತ್ತು ತಾಂತ್ರಿಕವಿಧಿಗಳಿಂದ, ಕರ್ಮಬಂಧನದಿಂದ ವಿಮುಕ್ತಿಯನ್ನು ಹೊಂದಿಸುವ ನನ್ನ ಪೂಜೆಯನ್ನು ಮಾಡಬೇಕು.

ಶೈಲೀ ದಾರುಮಯೀ ಲೌಹೀ ಲೇಪ್ಯಾ ಲೇಖ್ಯಾ ಚ ಸೈಕತೀ ।
ಮನೋಮಯೀ ಮಣಿಮಯೀ ಪ್ರತಿಮಾಷ್ಟವಿಧಾ ಸ್ಮೃತಾ ॥೧೨॥

ನನ್ನ ಪ್ರತಿಮೆಗಳು ಕಲ್ಲಿನಲ್ಲಿ ಕೆತ್ತಿದುದು, ಲೋಹದಿಂದ ಎರಕ ಹೊಯ್ದುಮಾಡಿದುದು, ಮರದಲ್ಲಿ ಕೆತ್ತಿದುದು, ಮಣ್ಣು ಮೊದಲಾದುವುಗಳಿಂದ ಮಾಡಿದುದು, ಚಿತ್ರರೂಪದಲ್ಲಿ ಬರೆದಿರುವುದು, ಮರಳಿನಲ್ಲಿ ಕಲ್ಪಿಸಿಕೊಂಡುದು, ಮನಸ್ಸಿನಲ್ಲಿ ಕಲ್ಪಿಸಿಕೊಂಡುದು, ಮಣಿಗಳಿಂದ ಮಾಡಿದುದು–ಎಂಬುದಾಗಿ ಎಂಟು ಪ್ರಕಾರಗಳಾಗಿವೆ.

ಚಲಾಚಲೇತಿ ದ್ವಿವಿಧಾ ಪ್ರತಿಷ್ಠಾ ಜೀವಮನ್ದಿರಮ್ ।
ಉದ್ವಾಸಾವಾಹನೇ ನ ಸ್ತಃ ಸ್ಥಿರಾಯಾಮುದ್ಧವಾರ್ಚನೇ ॥೧೩॥

ಉದ್ಧವ! ಭಗವಂತನಿಗೆ ನೆಲೆಯಾದ ಅರ್ಚಾಮೂರ್ತಿಯು ಸ್ಥಿರ ಮೂರ್ತಿಯೆಂದೂ, ಚರಮೂರ್ತಿಯೆಂದೂ ಎರಡು ಪ್ರಕಾರವಾಗಿರುವುದು. ಸ್ಥಿರಮೂರ್ತಿಯ ಅರ್ಚನೆಯಲ್ಲಿ ಆವಾಹನೆ-ವಿಸರ್ಜನೆಗಳಿಲ್ಲ.

ಅಸ್ಥಿರಾಯಾಂ ವಿಕಲ್ಪಃ ಸ್ಯಾತ್ಸ್ಥಣ್ಡಿಲೇ ತು ಭವೇದ್ದ್ವಯಮ್ ।
ಸ್ನಪನಂ ತ್ವವಿಲೇಪ್ಯಾಯಾಮನ್ಯತ್ರ ಪರಿಮಾರ್ಜನಮ್ ॥೧೪॥

ಚರಮೂರ್ತಿಗಳ ಪೂಜೆಯಲ್ಲಿ ಆವಾಹನೆ-ವಿಸರ್ಜನೆಗಳನ್ನು ಮಾಡುವುದೂ ಉಂಟು.; ಮಾಡದಿರುವುದೂ ಉಂಟು. (ಚರಮೂರ್ತಿಯಾದ ಸಾಲಿಗ್ರಾಮದಲ್ಲಿ ಆವಾಹನೆ-ವಿಸರ್ಜನೆಗಳಿಲ್ಲ.) ನೆಲದಮೇಲಿಟ್ಟ ಪ್ರತಿಮೆಗಳಲ್ಲಿ ಆವಾಹನೆ ವಿಸರ್ಜನೆಗಳೆರಡೂ ಉಂಟು. ಮಣ್ಣಿನಿಂದ ಮಾಡಿದ್ದು, ಕೈಯಲ್ಲಿ ಬರೆದ ಚಿತ್ರ–ಇವುಗಳಿಗೆ ಮಂತ್ರಪೂರ್ವಕವಾದ ಮಾರ್ಜನವೇ ಹೊರತು ಸಾಕ್ಷಾತ್ ಸ್ನಾನವಿಲ್ಲ. ಮೃಣ್ಮಯವಾದ ಚರಮೂರ್ತಿಯನ್ನೂ ಚಿತ್ರದಲ್ಲಿ ಬಿಡಿಸಿರುವ ಚರಮೂರ್ತಿಯನ್ನೂ ಬಿಟ್ಟು ಉಳಿದ ಚರಮೂರ್ತಿಗಳಿಗೂ ಸ್ಥಿರಮೂರ್ತಿಗಳಿಗೂ ಸ್ನಾನವುಂಟು.

ದ್ರವ್ಯೈಃ ಪ್ರಸಿದ್ಧೈರ್ಮದ್ಯಾಗಃ ಪ್ರತಿಮಾದಿಷ್ವಮಾಯಿನಃ ।
ಭಕ್ತಸ್ಯ ಚ ಯಥಾಲಬ್ಧೈರ್ಹೃದಿ ಭಾವೇನ ಚೈವ ಹಿ ॥೧೫॥

ಸುಪ್ರಸಿದ್ಧವಾದ, ಶ್ರೇಷ್ಠವಾದ ಪೂಜಾಸಾಮಗ್ರಿಗಳನ್ನು ತಂದು ಪ್ರತಿಮೆಯೇ ಮುಂತಾದುವುಗಳಲ್ಲಿ ನನ್ನ ಪೂಜೆಯನ್ನು ಮಾಡಬೇಕು. ನಿಷ್ಕಾಮಭಕ್ತನಾದವನು, ಯಾವ ವಿಧವಾದ ಆಯಾಸವೂ ಇಲ್ಲದೆ ಯಾವ ಪೂಜಾಸಾಮಗ್ರಿಗಳು (ಪತ್ರ-ಪುಷ್ಪ-ಫಲ-ಜಲ-ಇತ್ಯಾದಿ) ಸಿಕ್ಕುತ್ತವೆಯೋ ಅವುಗಳಿಂದಲೇ ನನ್ನನ್ನು ಪೂಜಿಸಬಹುದು. ಅದು ಸಾಧ್ಯವಾಗದಿದ್ದರೆ ನನ್ನ ಮನೋಮಯಮೂರ್ತಿಯನ್ನು ಹೃದಯದಲ್ಲಿ ಕಲ್ಪಿಸಿಕೊಂಡು ಮನಸ್ಸಿನಿಂದ ಕಲ್ಪಿತವಾದ ವಸ್ತುಗಳಿಂದಲೇ ಭಾವನಾಪೂರ್ಣನಾಗಿ ನನ್ನನ್ನು ಆರಾಧಿಸಬಹುದು.

ಸ್ನಾನಾಲಙ್ಕರಣಂ ಪ್ರೇಷ್ಠಮರ್ಚಾಯಾಮೇವ ತೂದ್ಧವ ।
ಸ್ಥಣ್ಡಿಲೇ ತತ್ತ್ವವಿನ್ಯಾಸೋ ವಹ್ನಾವಾಜ್ಯಪ್ಲುತಂ ಹವಿಃ ॥೧೬॥

ಉದ್ಧವ! ಸ್ನಾನ ವಸ್ತ್ರ-ಆಭರಣಾದಿಗಳನ್ನು ಶಿಲಾಮಯವಾದ ಅಥವಾ ಲೋಹಮಯವಾದ ನನ್ನ ಪ್ರತಿಮೆಗಳಲ್ಲಿ ಪೂಜೆಗೆ ವಿನಿಯೋಗಿಸಬೇಕು. ಇದು ನನಗೆ ಪ್ರಿಯವಾಗುತ್ತದೆ. ಚತುರಶ್ರವಾದ ಮತ್ತು ಮಂತ್ರಪೂತವಾದ ಭೂಮಿಯಲ್ಲಿ ತತ್ತ್ವವಿನ್ಯಾಸಮಾಡಬೇಕು. ಅಗ್ನಿಯಲ್ಲಿ ನನ್ನನ್ನು ಪೂಜಿಸುವುದಾದರೆ ಅದರಲ್ಲಿ ನನ್ನನ್ನು ಆವಾಹನೆಮಾಡಿ ಆಜ್ಯಮಿಶ್ರವಾದ ಹವಿಸ್ಸನ್ನು ಅದರಲ್ಲಿ ನನಗೆ ಸಮರ್ಪಿಸಬೇಕು.

ಸೂರ್ಯೇ ಚಾಭ್ಯರ್ಹಣಂ ಪ್ರೇಷ್ಠಂ ಸಲಿಲೇ ಸಲಿಲಾದಿಭಿಃ ।
ಶ್ರದ್ಧಯೋಪಾಹೃತಂ ಪ್ರೇಷ್ಠಂ ಭಕ್ತೇನ ಮಮ ವಾರ್ಯಪಿ ॥೧೭॥

ಸೂರ್ಯನಲ್ಲಿ ನನ್ನನ್ನು ಉಪಾಸಿಸುವುದಾದರೆ ಅರ್ಘ್ಯಪ್ರದಾನವೂ ಮತ್ತು ಉಪಸ್ಥಾನವೂ ನನಗೆ ಅತ್ಯಂತಪ್ರಿಯವಾಗುತ್ತದೆ. ನೀರಿನಿಂದ ತರ್ಪಣಾದಿಗಳ ಮೂಲಕವಾಗಿ ಉಪಾಸನೆಮಾಡುವುದು ನನಗೆ ಪ್ರಿಯವಾಗುತ್ತದೆ. ನನ್ನ ಭಕ್ತನಿಂದ ಶ್ರದ್ಧಾಭಕ್ತಿಪೂರ್ವಕವಾಗಿ ಅರ್ಪಿಸಲ್ಪಟ್ಟ ಒಂದು ಬೊಗಸೆ ನೀರೂ ಕೂಡ ನನಗೆ ಪರಮಪ್ರಿಯವಾಗುತ್ತದೆ.

ಭೂರ್ಯಪ್ಯಭಕ್ತೋಪಹೃತಂ ನ ಮೇ ತೋಷಾಯ ಕಲ್ಪತೇ ।
ಗನ್ಧೋ ಧೂಪಃ ಸುಮನಸೋ ದೀಪೋಽನ್ನಾದ್ಯಂ ಚ ಕಿಂ ಪುನಃ ॥

ಭಕ್ತನಲ್ಲದವನು ದಂಭಾಚಾರಕ್ಕಾಗಿ ಅಮೂಲ್ಯವಾದ ಪೂಜಾಸಾಮಗ್ರಿಗಳನ್ನು ತಂದರ್ಪಿಸಿದರೂ ಅದರಿಂದ ನನಗೆ ಸಂತೋಷ ವೇನೂ ಆಗುವುದಿಲ್ಲ. ನನ್ನ ಭಕ್ತನು ಶ್ರದ್ಧಾಭಕ್ತಿಪೂರ್ವಕವಾಗಿ ಸಮರ್ಪಿಸುವ ಒಂದು ಬೊಗಸೆ ನೀರಿನಿಂದಲೇ ನಾನು ತೃಪ್ತನಾಗುವಾಗ ಅದೇ ನನ್ನ ಭಕ್ತನು ಶ್ರಮವಹಿಸಿ ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯಾದಿಗಳನ್ನೂ ಸಮರ್ಪಿಸಿದರೆ ನಾನು ಅತ್ಯಂತ ಪ್ರಸನ್ನನಾಗುವೆನೆಂಬುದರಲ್ಲಿ ವಿಶೇಷವೇನಿದೆ?

ಶುಚಿಃ ಸಂಭೃತಸಮ್ಭಾರಃ ಪ್ರಾಗ್ದರ್ಭೈಃ ಕಲ್ಪಿತಾಸನಃ ।
ಆಸೀನಃ ಪ್ರಾಗುದಗ್ವಾರ್ಚೇದರ್ಚಾಯಾಮಥ ಸಮ್ಮುಖಃ ॥೧೯॥

ಉಪಾಸಕನು ಪೂಜಾಸಾಮಗ್ರಿಗಳೆಲ್ಲವನ್ನೂ ಮೊದಲೇ ಸಿದ್ಧಪಡಿಸಿ ಕೊಂಡು, ಶುಚಿಯಾಗಿ, ಪೂರ್ವಾಗ್ರವಾಗಿ ದರ್ಭೆಗಳನ್ನು ಹಾಸಿ ಆಸನವನ್ನು ಮಾಡಿಕೊಂಡು, ಪೂರ್ವಾಭಿಮುಖವಾಗಿ ಅಥವಾ ಉತ್ತರಾಭಿಮುಖವಾಗಿ ಕುಳಿತುಕೊಳ್ಳಬೇಕು. ಪೂಜಾವಿಗ್ರಹವು ಸ್ಥಿರವಾದ ಅರ್ಚಾವಿಗ್ರಹವಾಗಿದ್ದರೆ ಅದಕ್ಕೆ ಅಭಿಮುಖವಾಗಿ ಕುಳಿತುಕೊಂಡು ಪೂಜಿಸಬೇಕು.

ಕೃತನ್ಯಾಸಃ ಕೃತನ್ಯಾಸಾಂ ಮದರ್ಚಾಂ ಪಾಣಿನಾಽಮೃಜೇತ್ ।
ಕಲಶಂ ಪ್ರೋಕ್ಷಣೀಯಂ ಚ ಯಥಾವದುಪಸಾದಯೇತ್ ॥೨೦॥

ಪ್ರಸನ್ನವಾದ ಮನಸ್ಸಿನಿಂದ ಪೂರ್ವಾಗ್ರದ ದರ್ಭಾಸನದಲ್ಲಿ ಕುಳಿತ ನಂತರ (ಆಚಮನ-ಪ್ರಾಣಾಯಾಮ-ಸಂಕಲ್ಪಾದಿಗಳನ್ನು ಮಾಡಿ) ಅಂಗನ್ಯಾಸ-ಕರನ್ಯಾಸಗಳನ್ನು ಮಾಡಬೇಕು. ಅನಂತರ ನನ್ನ ಪ್ರತೀಕದಲ್ಲಿ ಮೂಲಮಂತ್ರವನ್ನು ನ್ಯಾಸಮಾಡಿ ನಿರ್ಮಾಲ್ಯಾದಿಗಳು ಇಲ್ಲದಂತೆ ಕೈಯಿಂದ ನನ್ನ ಪ್ರತಿಮೆಯನ್ನು ಒರೆಸಬೇಕು. ಅನಂತರ ಪ್ರೋಕ್ಷಣೀಪಾತ್ರೆಯನ್ನೂ ನೀರುತುಂಬಿದ ಕಲಶವನ್ನೂ ಗಂಧ- ಪುಷ್ಪಾದಿಗಳಿಂದ ಅಲಂಕರಿಸಬೇಕು.

ತದದ್ಭಿರ್ದೇವಯಜನಂ ದ್ರವ್ಯಾಣ್ಯಾತ್ಮಾನಮೇವ ಚ ।
ಪ್ರೋಕ್ಷ್ಯ ಪಾತ್ರಾಣಿ ತ್ರೀಣ್ಯದ್ಭಿಸ್ತೈಸ್ತೈರ್ದ್ರವ್ಯೈಶ್ಚ ಸಾಧಯೇತ್ ॥೨೧॥

ಅನಂತರ ಪ್ರೋಕ್ಷಣೀಪಾತ್ರೆಯ ನೀರಿನಿಂದ ಪೂಜಾಸ್ಥಳವನ್ನೂ ಪೂಜಾದ್ರವ್ಯಗಳನ್ನೂ ಪ್ರೋಕ್ಷಿಸಬೇಕು ಮತ್ತು ತನ್ನನ್ನೂ ಪ್ರೋಕ್ಷಿಸಿಕೊಳ್ಳ ಬೇಕು. ಬಳಿಕ ಪಾದ್ಯ-ಅರ್ಘ್ಯ-ಆಚಮನೀಯಗಳಿಗಾಗಿ ಮೂರು ಚಿಕ್ಕ-ಚಿಕ್ಕ ಬಟ್ಟಲುಗಳಲ್ಲಿ ಪೂರ್ಣಕಲಶದಿಂದ ನೀರನ್ನು ತುಂಬಿಡಬೇಕು. ಅವುಗಳಲ್ಲಿ ಪೂಜಾಪದ್ಧತಿಗೆ ಅನುಸಾರವಾಗಿ ದ್ರವ್ಯಗಳನ್ನು ಹಾಕಿ ಸಂಸ್ಕರಿಸಬೇಕು.*

ಪಾದ್ಯಾರ್ಘ್ಯಾಚಮನೀಯಾರ್ಥಂ ತ್ರೀಣಿ ಪಾತ್ರಾಣಿ ದೈಶಿಕಃ ।
ಹೃದಾ ಶೀರ್ಷ್ಣಾಥ ಶಿಖಯಾ ಗಾಯತ್ರ್ಯಾ ಚಾಭಿಮನ್ತ್ರಯೇತ್ ॥೨೨॥

ಅನಂತರ ಪೂಜಕನು ಪಾದ್ಯ-ಅರ್ಘ್ಯ-ಆಚಮನೀಯಪಾತ್ರೆಗಳನ್ನು

---

*ಅರ್ಘ್ಯ-ಪಾದ್ಯಾದಿಗಳನ್ನು ಯಾವ ಯಾವ ವಸ್ತುಗಳಿಂದ ಸಂಸ್ಕರಿಸಬೇಕೆಂಬುದನ್ನು ಭಾವಾರ್ಥದೀಪಿಕಾ ವ್ಯಾಖ್ಯಾನಕಾರರು ಹೀಗೆ ಹೇಳಿದ್ದಾರೆ.:

ಪಾದ್ಯೇ ಶ್ಯಾಮಾಕ ದೂರ್ವಾಬ್ಜ ವಿಷ್ಣುಕ್ರಾನ್ತಾದಿ ಲಿಪ್ಯತೇ ।
ಗನ್ಧಪುಷ್ಪಾಕ್ಷತಯವಕುಶಾಗ್ರತಿಲಸರ್ಷಪಾಃ ॥
ದೂರ್ವಾಚೇತಿ ಕ್ರಮಾದರ್ಘ್ಯೇ ದ್ರವ್ಯಾಷ್ಟಕಮುದೀರಿತಮ್ ।
ಜಾತೀಲವಙ್ಗಕಙ್ಕೋಲೈರ್ಮತಮಾಚಮನೀಯಕಮ್ ॥

ಪಾದ್ಯದ ಬಟ್ಟಲಿನಲ್ಲಿ ಶ್ಯಾಮಾಕ, ದೂರ್ವೆ, ಕಮಲ, ವಿಷ್ಣುಕ್ರಾಂತ ಮೊದಲಾದುವುಗಳನ್ನು ಸೇರಿಸಬೇಕು. ಅರ್ಘ್ಯದ ಬಟ್ಟಲಿನಲ್ಲಿ ಗಂಧ, ಪುಷ್ಪ, ಅಕ್ಷತೆ, ಯವ, ಕುಶಾಗ್ರ, ಎಳ್ಳು, ಬಿಳಿಸಾಸುವೆ, ಗರಿಕೆ–ಎಂಬ ಎಂಟು ದ್ರವ್ಯಗಳನ್ನು ಸೇರಿಸಬೇಕು. ಆಚಮನತೀರ್ಥದ ಬಟ್ಟಲಿನಲ್ಲಿ ಜಾಜೀಹೂವು, ಲವಂಗ, ಕಂಕೋಲ–ಎಂಬ ಮಂಗಳದ್ರವ್ಯಗಳನ್ನು ಸೇರಿಸಬೇಕು.

ಅನುಕ್ರಮವಾಗಿ ಹೃದಯಮಂತ್ರ, ಶಿರೋಮಂತ್ರ ಮತ್ತು ಶಿಖಾ ಮಂತ್ರಗಳಿಂದ ಅಭಿಮಂತ್ರಿಸಿ ಕಡೆಯದಾಗಿ ಆ ಮೂರು ಪಾತ್ರೆಗಳನ್ನೂ ಗಾಯತ್ರೀಮಂತ್ರದಿಂದ ಅಭಿಮಂತ್ರಿಸಬೇಕು.

ಪಿಣ್ಡೇ ವಾಯ್ವಗ್ನಿಸಂಶುದ್ಧೇ ಹೃತ್ಪದ್ಮಸ್ಥಾಂ ಪರಾಂ ಮಮ ।
ಅಣ್ವೀಂ ಜೀವಕಲಾಂ ಧ್ಯಾಯೇನ್ನಾದಾನ್ತೇ ಸಿದ್ಧಭಾವಿತಾಮ್ ॥೨೩॥

ಶರೀರವು ವಾಯು ಮತ್ತು ಅಗ್ನಿಗಳಿಂದ ಶುದ್ಧವಾದ ಬಳಿಕ ಹೃದಯ ಕಮಲದಲ್ಲಿರುವ ನಾದದ ಕಡೆಯಲ್ಲಿ ಸಿದ್ಧರಿಂದ ಸಾಕ್ಷಾತ್ಕರಿಸಲ್ಪಟ್ಟ, ಸೂಕ್ಷ್ಮವಾದ ಮತ್ತು ಶ್ರೇಷ್ಠವಾದ ನನ್ನ ಜೀವಕಲೆಯನ್ನು ಧ್ಯಾನಿಸಬೇಕು.*

ತಯಾಽತ್ಮಭೂತಯಾ ಪಿಣ್ಡೇ ವ್ಯಾಪ್ತೇ ಸಮ್ಪೂಜ್ಯ ತನ್ಮಯಃ ।
ಆವಾಹ್ಯಾರ್ಚಾದಿಷು ಸ್ಥಾಪ್ಯ ನ್ಯಸ್ತಾಙ್ಗಂ ಮಾಂ ಪ್ರಪೂಜಯೇತ್ ॥

ಉದ್ಧವ! ಆ ಜೀವಕಲೆಯು ಆತ್ಮಸ್ವರೂಪವೇ ಆಗಿದೆ. ಯಾವಾಗ ಅದರ ತೇಜಸ್ಸಿನಿಂದ ಅಂತಃಕರಣವೂ ಶರೀರವೂ ತುಂಬಿಹೋಗುತ್ತದೆಯೋ ಆಗ ಮಾನಸಿಕವಾದ ಉಪಚಾರಗಳಿಂದ ಮನಸ್ಸಿನಲ್ಲಿಯೇ ಜೀವಕಲಾರೂಪನಾದ ನನ್ನ ಪೂಜೆಯನ್ನು ಮಾಡಬೇಕು. ಅನಂತರ ತನ್ಮಯನಾಗಿ ಆ ನನ್ನ

---

* ಭೂತಶುದ್ಧಿ ಅಥವಾ ಶರೀರಶುದ್ಧಿ–ಇದನ್ನು ದೀಪಿನೀಕಾರರು ಹೀಗೆ ವಿವರಿಸಿದ್ದಾರೆ.: ಪೂಜಕನು ಪಾಪಪುರುಷರೂಪವಾದ ತನ್ನ ದೇಹವನ್ನು ಶುದ್ಧಿಗೊಳಿಸಿಕೊಳ್ಳಬೇಕಾದರೆ ಧೂಮ್ರವರ್ಣವೂ ಪಾಪಶೋಷಕವೂ ಆದ 'ಯಂ'–ಎಂಬ ಬೀಜಾಕ್ಷರವನ್ನು ಮೊದಲು ವಾಮನಾಸಾಪುಟದಲ್ಲಿ ೧೬ ಸಲ ಜಪಿಸಿ, ಅನಂತರ ಮನಸ್ಸಿನಿಂದ ನಾಭಿಮಂಡಲಕ್ಕೊಯ್ದು ಪುನಃ ೬೪ ಸಲ ಜಪಿಸಿ, ಕುಂಭಕಮಾಡುವುದರಿಂದ ಎಬ್ಬಿಸಲ್ಪಟ್ಟ ವಾಯುವಿನಿಂದ ಮೊದಲು ಶೋಷಣಗೊಳಿಸಬೇಕು. ಬಳಿಕ ಮೂಲಾಧಾರಗತವಾದ ಅಗ್ನಿಯನ್ನೆಬ್ಬಿಸುವ 'ರಂ'–ಎಂಬ ಅಗ್ನಿಬೀಜವನ್ನು ಮೇಲೆ ಹೇಳಿದ ವಾಯುವಿನೊಡನೆ ಸೇರಿಸಿ ದಕ್ಷಿಣ ನಾಸಾಪುಟದಲ್ಲಿ ೧೬ ಸಲ ಜಪಿಸಿ ಮೂಲಾಧಾರಕ್ಕೊಯ್ದು ಪುನಃ ೬೪ ಸಲ ಜಪಿಸಿ ಕುಂಭಕಮಾಡುವುದರಿಂದ ಎಬ್ಬಿಸಲ್ಪಟ್ಟ ಅಗ್ನಿಯಿಂದ ದಹಿಸಬೇಕು. ಬಳಿಕ 'ವಂ'–ಎಂಬ ಅಮೃತಬೀಜವನ್ನು ಎಡಹೊಳ್ಳೆಯಲ್ಲಿ ೧೬ ಸಲ ಜಪಿಸಿ ಬಳಿಕ ಲಲಾಟದಲ್ಲಿರುವ ಚಂದ್ರಮಂಡಲಕ್ಕೊಯ್ದು ೬೪ ಸಲ ಜಪಿಸಿ ಕುಂಭಕಮಾಡುವುದರಿಂದ ಮಳೆಗರೆಯುವ ಚಂದ್ರಮಂಡಲದ ಅಮೃತಧಾರೆಗಳಿಂದ ನೆನೆಯಿಸಿ ಅಮೃತಮಯವನ್ನಾಗಿ ಮಾಡಬೇಕು. ಇಂತಹ ಶರೀರವು ಭಗವದಾರಾಧನೆಗೆ ಯೋಗ್ಯವಾಗುವುದು. ಇದಕ್ಕೆ ಭೂತಶುದ್ಧಿಯೆಂದು ಹೆಸರು. ಕಲಿಯುಗ

ಚಿನ್ಮಯಸ್ವರೂಪವನ್ನೇ ತನ್ನ ಮುಂದಿರುವ ವಿಗ್ರಹಗಳಲ್ಲಿ ಆವಾಹನೆಮಾಡಿ ಸ್ಥಾಪಿಸಬೇಕು. ಅನಂತರ ಪುನಃ ಅಂಗನ್ಯಾಸ-ಕರನ್ಯಾಸಗಳನ್ನು ಮಾಡಿ ಆ ವಿಗ್ರಹದಲ್ಲಿ ನನ್ನ ಪೂಜೆಯನ್ನು ಮಾಡಬೇಕು.

ಪಾದ್ಯೋಪಸ್ಪರ್ಶಾರ್ಹಣಾದೀನುಪಚಾರಾನ್ಪ್ರಕಲ್ಪಯೇತ್ ।
ಧರ್ಮಾದಿಭಿಶ್ಚ ನವಭಿಃ ಕಲ್ಪಯಿತ್ವಾऽಸನಂ ಮಮ ॥೨೫॥

ಪದ್ಮಮಷ್ಟದಲಂ ತತ್ರ ಕರ್ಣಿಕಾಕೇಸರೋಜ್ಜ್ವಲಮ್ ।
ಉಭಾಭ್ಯಾಂ ವೇದತನ್ತ್ರಾಭ್ಯಾಂ ಮಹ್ಯಂ ತೂಭಯಸಿದ್ಧಯೇ ॥೨೬॥

ಧರ್ಮಾದಿಗಳನ್ನೂ ನವಶಕ್ತಿಗಳನ್ನೂ ಪೀಠದಲ್ಲಿ ಆವಾಹಿಸಿ ಅನಂತರ ಅದರ ಮಧ್ಯದಲ್ಲಿ ಕರ್ಣಿಕಾ–ಕೇಸರಗಳಿಂದ ಪ್ರಕಾಶಿಸುವ ಅಷ್ಟದಳ ಪದ್ಮವನ್ನು ರಚಿಸಿ ಭಕ್ತಿ-ಮುಕ್ತಿಗಳನ್ನು ಪಡೆಯುವುದಕ್ಕಾಗಿ ಅದರ ಮಧ್ಯದಲ್ಲಿರುವ ನನಗೆ ವೈದಿಕವಿಧಿಯಿಂದಲೂ, ತಾಂತ್ರಿಕವಿಧಿಯಿಂದಲೂ ಪಾದ್ಯ, ಆಚಮನ, ಅರ್ಘ್ಯವೇ ಮುಂತಾದ ಉಪಚಾರಗಳನ್ನು ಮಾಡಬೇಕು.*

ದಲ್ಲಿ ಭೂತಶುದ್ಧಿಯಿಲ್ಲದೇ ಪೂಜೆಮಾಡಿದರೆ ಅದು ಅಭಿಚಾರಿಕವಾಗುವುದು. ಭೂತ ಶುದ್ಧಿಂ ವಿನಾ ದೇವಿ ಕಲೌ ಪೂಜಾಭಿಚಾರವತ್ ।

*ದೀಪಿನೀ ವ್ಯಾಖ್ಯಾನಕಾರರು ಪೀಠಪೂಜಾಕ್ರಮವನ್ನು ಹೀಗೆ ವಿವರಿಸಿದ್ದಾರೆ :

ಭಗವಂತನ ಆಸನವನ್ನು ಮಣಿಮಯವಾದ ಮಂಚವನ್ನಾಗಿ ಭಾವಿಸಿ ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯಗಳೆಂಬ ನಾಲ್ಕನ್ನು ಆಗ್ನೇಯ, ನೈಋತ್ಯ, ವಾಯವ್ಯ, ಈಶಾನ್ಯದಿಕ್ಕುಗಳ ಪಾದಗಳನ್ನಾಗಿಯೂ–ಅಧರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯಗಳೆಂಬ ನಾಲ್ಕನ್ನು ಪೂರ್ವ-ಪಶ್ಚಿಮ-ದಕ್ಷಿಣೋತ್ತರ ಪಾದಗಳನ್ನಾಗಿಯೂ ನ್ಯಾಸಮಾಡಿ ಆ ಮಂಚಕ್ಕೆ ತ್ರಿಗುಣಗಳೆಂಬ ಹಲಗೆಗಳನ್ನು ಜೋಡಿಸಿ ಅದರ ಅಷ್ಟ ದಿಕ್ಕುಗಳಲ್ಲಿಯೂ ಕ್ರಮವಾಗಿ ವಿಮಲಾ, ಉತ್ಕರ್ಷಿಣೀ, ಜ್ಞಾನಾ, ಕ್ರಿಯಾ, ಯೋಗಾ, ಪ್ರಹ್ವೀ, ಸತ್ಯಾ, ಈಶಾನಾ–ಎಂಬ ಅಷ್ಟಶಕ್ತಿಗಳನ್ನೂ ಮಧ್ಯದಲ್ಲಿ ಅನುಗ್ರಹಾ–ಎಂಬ ಶಕ್ತಿಯನ್ನೂ ನ್ಯಾಸಮಾಡಬೇಕು. ಹೀಗೆ ಪೀಠವನ್ನು ಕಲ್ಪಿಸಿ ಅದರ ಮಧ್ಯದಲ್ಲಿ ಅಷ್ಟದಳ ಪದ್ಮವನ್ನು ನೆಲೆಗೊಳಿಸಿ, ಅದರ ಕರ್ಣಿಕಾಮಧ್ಯದಲ್ಲಿ ಕೇಸರರೂಪಗಳಾದ ತ್ರಿಗುಣಗಳ ಉಪರಿಭಾಗದಲ್ಲಿ ನೆಲೆಸಿರುವ ಚಂದ್ರ-ಸೂರ್ಯಾಗ್ನಿಮಂಡಲಗಳಿಂದ ಪ್ರಕಾಶಮಾನವಾದ ಸರ್ವೋನ್ನತಸ್ಥಾನದಲ್ಲಿರುವ ಭಗವಂತನನ್ನು ಆರಾಧಿಸಬೇಕು. ಇದು ನವಶಕ್ತ್ಯಾವರಣ ಪೂರ್ವಕವಾದ ಪೂಜೆಯು.

ಸುದರ್ಶನಂ ಪಾಞ್ಚಜನ್ಯಂ ಗದಾಸೀಷುಧನುರ್ಹಲಾನ್ ।
ಮುಸಲಂ ಕೌಸ್ತುಭಂ ಮಾಲಾಂ ಶ್ರೀವತ್ಸಂ ಚಾನುಪೂಜಯೇತ್ ॥

ಸುದರ್ಶನಚಕ್ರ, ಪಾಂಚಜನ್ಯಶಂಖ, ಗದೆ, ಖಡ್ಗ, ಬಾಣ, ಧನುಸ್ಸು, ಹಲ, ಮುಸಲಗಳೆಂಬ ಆಯುಧಗಳನ್ನೂ ಕೌಸ್ತುಭ, ವನಮಾಲೆ, ಶ್ರೀವತ್ಸಗಳನ್ನೂ ಅನುಕ್ರಮವಾಗಿ ಪೂಜಿಸಬೇಕು.

ನನ್ದಂ ಸುನನ್ದಂ ಗರುಡಂ ಪ್ರಚಣ್ಡಂ ಚಣ್ಡಮೇವ ಚ ।
ಮಹಾಬಲಂ ಬಲಂ ಚೈವ ಕುಮುದಂ ಕುಮುದೇಕ್ಷಣಮ್ ॥೨೮॥

ದುರ್ಗಾಂ ವಿನಾಯಕಂ ವ್ಯಾಸಂ ವಿಷ್ವಕ್ಸೇನಂ ಗುರೂನ್ಸುರಾನ್ ।
ಸ್ವೇ ಸ್ವೇ ಸ್ಥಾನೇ ತ್ವಭಿಮುಖಾನ್ಪೂಜಯೇತ್ ಪ್ರೋಕ್ಷಣಾದಿಭಿಃ ॥೨೯॥

ನಂದ, ಸುನಂದ, ಪ್ರಚಂಡ, ಚಂಡ, ಮಹಾಬಲ, ಬಲ, ಕುಮುದ, ಕುಮುದೇಕ್ಷಣ–ಈ ಎಂಟು ಮಂದಿ ನನ್ನ ಪಾರ್ಷದರನ್ನು ಎಂಟು ದಿಕ್ಕುಗಳಲ್ಲಿಯೂ ಸ್ಥಾಪಿಸಿ ಪೂಜಿಸಬೇಕು. ಗರುಡನನ್ನು ಎದುರುಗಡೆಯಲ್ಲಿ ಸ್ಥಾಪಿಸಿ ಪೂಜಿಸಬೇಕು. ಬಳಿಕ ದುರ್ಗೆ-ವಿನಾಯಕ-ವ್ಯಾಸ-ವಿಷ್ವಕ್ಸೇನರನ್ನು ನಾಲ್ಕುಮೂಲೆಗಳಲ್ಲಿ ಸ್ಥಾಪಿಸಿ ಪೂಜಿಸಬೇಕು. ಬಲಭಾಗದಲ್ಲಿ ಗುರುಗಳನ್ನೂ ಪೂರ್ವವೇ ಮೊದಲಾದ ಎಂಟು ದಿಕ್ಕುಗಳಲ್ಲಿ ಇಂದ್ರನೇ ಮೊದಲಾದ ಅಷ್ಟದಿಕ್ಪಾಲಕರನ್ನೂ ಸ್ಥಾಪಿಸಿ ಪ್ರೋಕ್ಷಣ, ಪಾದ್ಯ, ಅರ್ಘ್ಯಪ್ರದಾನಾದಿಗಳ ಕ್ರಮದಲ್ಲಿ ಪೂಜೆಮಾಡಬೇಕು.

ಚನ್ದನೋಶೀರಕರ್ಪೂರಕುಙ್ಕುಮಾಗುರುವಾಸಿತೈಃ ।
ಸಲಿಲೈಃ ಸ್ನಾಪಯೇನ್ಮನ್ತ್ರೈರ್ನಿತ್ಯದಾ ವಿಭವೇ ಸತಿ ॥೩೦॥

ಐಶ್ವರ್ಯದ ವೈಭವವಿದ್ದಲ್ಲಿ ಪ್ರತಿನಿತ್ಯವೂ ಚಂದನ, ಲಾಮಂಚ, ಪಚ್ಚಕರ್ಪೂರ, ಕುಂಕುಮಕೇಸರಿ, ಅಗುರು–ಇವೇ ಮುಂತಾದ ಸುಗಂಧದ್ರವ್ಯಗಳಿಂದ ಸುವಾಸಿತವಾದ ಜಲದಿಂದ ಮಂತ್ರಪೂರ್ವಕವಾಗಿ ನನಗೆ ಸ್ನಾನಮಾಡಿಸಬೇಕು.

ಸ್ವರ್ಣಘರ್ಮಾನುವಾಕೇನ ಮಹಾಪುರುಷವಿದ್ಯಯಾ ।
ಪೌರುಷೇಣಾಪಿ ಸೂಕ್ತೇನ ಸಾಮಭೀ ರಾಜನಾದಿಭಿಃ ॥೩೧॥

ಸ್ವರ್ಣಘರ್ಮಾನುವಾಕದಿಂದಲೂ, ಮಹಾಪುರುಷವಿದ್ಯೆಯಿಂದಲೂ

ಪುರುಷಸೂಕ್ತದಿಂದಲೂ ರಾಜನಾದಿ ಸಾಮಗಳಿಂದಲೂ ನನಗೆ ಅಭಿಷೇಕ ವನ್ನು ಮಾಡಬೇಕು.*

ವಸ್ತ್ರೋಪವೀತಾಭರಣಪತ್ರಸ್ರಗ್ಗನ್ಧಲೇಪನೈಃ ।
ಅಲಙ್ಕುರ್ವೀತ ಸಪ್ರೇಮ ಮದ್ಭಕ್ತೋ ಮಾಂ ಯಥೋಚಿತಮ್ ॥೩೨॥

ಅಭಿಷೇಕವಾದನಂತರದಲ್ಲಿ ನನ್ನ ಭಕ್ತನು ನನ್ನ ಶ್ರೀವಿಗ್ರಹವನ್ನು ಚೆನ್ನಾಗಿ ಒರೆಸಿ ವಸ್ತ್ರ, ಯಜ್ಞೋಪವೀತ, ಆಭರಣ, ಪತ್ರ** ಪುಷ್ಪಮಾಲೆ, ಗಂಧ ಮತ್ತು ಚಂದನಗಳಿಂದ ಪ್ರೇಮಪೂರ್ವಕವಾಗಿ ನನ್ನನ್ನು ಸಿಂಗರಿಸ ಬೇಕು.

ಪಾದ್ಯಮಾಚಮನೀಯಂ ಚ ಗನ್ಧಂ ಸುಮನಸೋಽಕ್ಷತಾನ್ ।
ಧೂಪದೀಪೋಪಹಾರ್ಯಾಣಿ ದದ್ಯಾನ್ಮೇ ಶ್ರದ್ಧಯಾರ್ಚಕಃ ॥೩೩॥

ಮನಸ್ಸಿಗೆ ತೃಪ್ತಿಯಾಗುವಂತೆ ಪರಮಪ್ರೀತಿಯಿಂದ ನನ್ನನ್ನು ಅಲಂಕರಿಸಿದನಂತರ ಭಕ್ತನಾದ ಅರ್ಚಕನು, ಶ್ರದ್ಧೆಯಿಂದ ಪಾದ್ಯ-ಆಚಮನ

---

*ಸ್ವರ್ಣಘರ್ಮಾನುವಾಕಃ-ಸುವರ್ಣಂ ಘರ್ಮಂ ಪರಿವೇದ ವೇನಮ್ । ಇನ್ದ್ರಸ್ಯಾತ್ಮಾನಂ ದಶಧಾ ಚರನ್ತಮ್ ॥ ಅನ್ತಃಸಮುದ್ರೇ ಮನಸಾ ಚರನ್ತಮ್ । ಬ್ರಹ್ಮಾನ್ವವಿನ್ದದ್ದಶ ಹೋತಾರಮರ್ಣೇ ॥ ಇತ್ಯಾದಿ (ಯಜುರಾರಣ್ಯಕ-ತೃತೀಯ ಪ್ರಶ್ನೆ-ಅನುವಾಕ ೧೧) ಮಹಾಪುರುಷವಿದ್ಯೆ.: ಜಿತಂತೇ ಪುಣ್ಡರೀಕಾಕ್ಷ ನಮಸ್ತೇ ವಿಶ್ವಭಾವನ। ಸುಬ್ರಹ್ಮಣ್ಯ ನಮಸ್ತೇಽಸ್ತು ಮಹಾಪುರುಷ ಪೂರ್ವಜ ॥ ಎಲೈ ಕಮಲಾಕ್ಷನೇ! ಜಗತ್ಕರ್ತನೇ! ಸುಬ್ರಹ್ಮಣ್ಯನೇ! ನೀನೇ ಸರ್ವೋತ್ಕೃಷ್ಟನು. ನಿನಗೆ ನಮಸ್ಕಾರವು. **ಪುರುಷಸೂಕ್ತ :** ಸಹಸ್ರಶೀರ್‌ಷಾ ಪುರುಷಃ । ಸಹಸ್ರಾಕ್ಷಃ ಸಹಸ್ರಪಾತ್ । ಸ ಭೂಮಿಂ ವಿಶ್ವತೋ ವೃತ್ವಾ । ಅತ್ಯತಿಷ್ಠದ್ದಶಾಙ್ಗುಲಮ್ ॥ (ಯಜುರಾಣ್ಯಕ, ತೃತೀಯ ಪ್ರಶ್ನೆ ಅನುವಾಕ ೧೨-೧೩) **ರಾಜನ-ತ್ರಾಹಿಣ ಸಾಮಗಳು :** ಇನ್ದ್ರನ ರೋಮೇ ಮಧಿಕಾ ಹವನ್ತ—ಈ ಋಕ್ಕಿನಲ್ಲಿರುವ ಗಾನಗಳು. **ಮಂತ್ರಾರ್ಥ :** ಅತಿಶಯಜ್ಞಾನವುಳ್ಳ ಮನುಷ್ಯನು ಪರಮೇಶ್ವರನನ್ನು ಉದ್ದೇಶಿಸಿ ಹೋಮರೂಪವಾದ ಯಾಗವನ್ನು ಮಾಡಬೇಕು.

ಪತ್ರ : ಮನುಷ್ಯನ ಮುಖ ಮೊದಲಾದ ಅಂಗಗಳಲ್ಲಿ ಕಸ್ತೂರಿ, ಚಂದನವೇ ಮೊದಲಾದ ಸುಗಂಧದ್ರವ್ಯಗಳಿಂದ ಬರೆಯುವ ಚಿತ್ರಕ್ಕೆ ಪತ್ರವೆಂದು ಹೆಸರು.

ಗಳನ್ನು ಸಮರ್ಪಿಸಿ ಗಂಧವನ್ನು ಪೂಸಿ ಪುಷ್ಪ-ಅಕ್ಷತೆಗಳಿಂದ ಸಂಪೂಜಿಸಿ ಧೂಪವನ್ನು ಹೊತ್ತಿಸಿ ದೀಪವನ್ನು ಬೆಳಗಬೇಕು. ಉಪಹಾರಗಳನ್ನು ಸಮರ್ಪಿಸಬೇಕು.

ಗುಡಪಾಯಸಸರ್ಪೀಂಷಿ ಶಷ್ಕುಲ್ಯಾಪೂಪಮೋದಕಾನ್ ।
ಸಂಯಾವದಧಿಸೂಪಾಂಶ್ಚ ನೈವೇದ್ಯಂ ಸತಿ ಕಲ್ಪಯೇತ್ ॥೩೪॥

ಅನುಕೂಲಕ್ಕೆ ತಕ್ಕಂತೆ ಬೆಲ್ಲ-ಪಾಯಸ, ತುಪ್ಪ, ಚಕ್ಕುಲಿ, ಅಪೂಪ (ವಡೆ), ಎರೆಯಪ್ಪ, ಸಜ್ಜಪ್ಪ, ಅತಿರಸ, ಒಬ್ಬಟ್ಟು, ಸಿಹಿಕಡುಬು, ಲಾಡು, ಮೊಸರು, ತೊವ್ವೆ ಇವುಗಳನ್ನು ನೈವೇದ್ಯವನ್ನಾಗಿ ಅರ್ಪಿಸಬೇಕು.

ಅಭ್ಯಙ್ಗೋನ್ಮರ್ದನಾದರ್ಶದನ್ತಧಾವಾಭಿಷೇಚನಮ್ ।
ಅನ್ನಾದ್ಯಗೀತನೃತ್ಯಾದಿ ಪರ್ವಣಿ ಸ್ಯುರುತಾನ್ವಹಮ್ ॥೩೫॥

ನನ್ನ ಶ್ರೀವಿಗ್ರಹಕ್ಕೆ ದಂತಧಾವನ, ಎಣ್ಣೆ, ಮಜ್ಜನ, ಅಂಗಗಳನ್ನು ಒತ್ತುವಿಕೆ, ಪಂಚಾಮೃತಾಭಿಷೇಕ, ಅಲಂಕಾರ, ಕನ್ನಡಿಸೇವೆ, ಅನ್ನ-ಭಕ್ಷ್ಯಗಳ ನೈವೇದ್ಯ ಇತ್ಯಾದಿಗಳನ್ನು ಪ್ರತಿನಿತ್ಯವೂ ಮಾಡಬೇಕು. ನೃತ್ಯಗೀತಾದಿಗಳ ಸೇವೆಯನ್ನು ನಿತ್ಯವಾಗಿಯೂ ಮಾಡಬಹುದು. ಸೌಕರ್ಯವಿಲ್ಲದಿದ್ದರೆ ಪರ್ವದಿವಸಗಳಲ್ಲಾದರೂ ಮಾಡಬೇಕು.

ವಿಧಿನಾ ವಿಹಿತೇ ಕುಣ್ಡೇ ಮೇಖಲಾಗರ್ತವೇದಿಭಿಃ ।
ಅಗ್ನಿಮಾಧಾಯ ಪರಿತಃ ಸಮೂಹೇತ್ಪಾಣಿನೋದಿತಮ್ ॥೩೬॥

ಪೂಜಕನು ತನ್ನ ಗೃಹ್ಯೋಕ್ತವಿಧಿಯಿಂದ ನಿರ್ಮಿತವಾದ, ಮೇಖಲೆ, ಗರ್ತ, ವೇದಿ ಇವುಗಳಿಂದ ಕೂಡಿದ ಕುಂಡದಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಿ ಪ್ರಜ್ವಲಿಸುತ್ತಿರುವ, ಸುತ್ತಲೂ ಹರಡಿಕೊಂಡಿರುವ ಅಗ್ನಿಯನ್ನು ಕೈಯಿಂದ ಒಂದೆಡೆಯಲ್ಲಿ ಸೇರಿಸಬೇಕು.

ಪರಿಸ್ತೀರ್ಯಾಥ ಪರ್ಯುಕ್ಷೇದನ್ವಾಧಾಯ ಯಥಾವಿಧಿ ।
ಪ್ರೋಕ್ಷಣ್ಯಾಸಾದ್ಯ ದ್ರವ್ಯಾಣಿ ಪ್ರೋಕ್ಷ್ಯಾಗ್ನೌ ಭಾವಯೇತ
ಮಾಮ್॥೩೭॥

ಬಳಿಕ ಹೋಮಕುಂಡದ ನಾಲ್ಕು ಕಡೆಗಳಲ್ಲಿಯೂ ಪರಿಸ್ತರಣವನ್ನು

ಹಾಸಿ, ಪ್ರೋಕ್ಷಣಪಾತ್ರೆಯಲ್ಲಿರುವ ಜಲದಿಂದ ಸುತ್ತಲೂ ಪ್ರೋಕ್ಷಿಸಿ ಸ್ವಗೃಹ್ಯೋಕ್ತವಾದ ವಿಧಿಯಿಂದಲೂ, ವ್ಯಾಹೃತಿಗಳಿಂದಲೂ, ಸಮಿತ್ಪ್ರಕ್ಷೇಪಾದಿ ರೂಪವಾದ ಅನ್ವಾಧಾನವೆಂಬ ಕರ್ಮವನ್ನು ಮಾಡಿ, ಅಗ್ನಿಗೆ ಉತ್ತರ ಭಾಗದಲ್ಲಿ ಹೋಮಕ್ಕೆ ಉಪಯುಕ್ತವಾದ ದ್ರವ್ಯಗಳನ್ನಿಟ್ಟು ಪ್ರೋಕ್ಷಣ ಪಾತ್ರದಲ್ಲಿರುವ ನೀರಿನಿಂದ ಪ್ರೋಕ್ಷಿಸಿ, ಅನಂತರ ಆ ಅಗ್ನಿಯಲ್ಲಿ ನನ್ನನ್ನು ಧ್ಯಾನಮಾಡಬೇಕು.

ತಪ್ತಜಾಮ್ಬೂನದಪ್ರಖ್ಯಂ ಶಙ್ಖಚಕ್ರಗದಾಮ್ಬುಜೈಃ ।
ಲಸಚ್ಚತುರ್ಭುಜಂ ಶಾನ್ತಂ ಪದ್ಮಕಿಞ್ಜಲ್ಕವಾಸಸಮ್ ॥೩೮॥

ಸ್ಫುರತ್ಕಿರೀಟಕಟಕಕಟಿಸೂತ್ರವರಾಙ್ಗದಮ್ ।
ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭಂ ವನಮಾಲಿನಮ್ ॥೩೯॥

ಪುಟಕ್ಕೆ ಹಾಕಿದ ಬಂಗಾರದಂತೆ ಹೊಂಬಣ್ಣದಿಂದ ಬೆಳಗುವ ಶರೀರ ದಿಂದ ಕೂಡಿರುವ, ಶಂಖ, ಚಕ್ರ, ಗದೆ ಮತ್ತು ಕಮಲಗಳಿಂದ ಸಮಲಂಕೃತ ವಾದ ನಾಲ್ಕು ಭುಜಗಳಿಂದ ಸಂಪನ್ನನಾಗಿರುವ, ಶಾಂತವಾದ ಮುಖಭಾವ ದಿಂದಿರುವ, ಕಮಲದ ಕೇಸರದಂತೆ ನವುರಾಗಿರುವ ಪೀತಾಂಬರವನ್ನುಟ್ಟಿ ರುವ, ಕಿರೀಟ-ಕಂಕಣ-ಕಟಿಸೂತ್ರ-ಭುಜಕೀರ್ತಿಗಳಿಂದ ಕಂಗೊಳಿಸುತ್ತಿರುವ, ವಕ್ಷಃಸ್ಥಳದಲ್ಲಿ ಶ್ರೀವತ್ಸದ ಚಿಹ್ನೆಯನ್ನೂ ಕೌಸ್ತುಭಮಣಿಯನ್ನೂ ಧರಿಸಿರುವ, ವನಮಾಲೆಯಿಂದೊಪ್ಪುವ ನನ್ನ ದಿವ್ಯಮಂಗಳವಿಗ್ರಹವನ್ನು ಧ್ಯಾನಿಸಬೇಕು.

ಧ್ಯಾಯನ್ನಭ್ಯರ್ಚ್ಯ ದಾರೂಣಿ ಹವಿಷಾಭಿಘೃತಾನಿ ಚ ।
ಪ್ರಾಸ್ಯಾಜ್ಯಭಾಗಾವಾಘಾರೌ ದತ್ತ್ವಾ ಚಾಜ್ಯಪ್ಲುತಂ ಹವಿಃ ॥೪೦॥

ಜುಹುಯಾನ್ಮೂಲಮನ್ತ್ರೇಣ ಷೋಡಶರ್ಚಾವದಾನತಃ ।
ಧರ್ಮಾದಿಭ್ಯೋ ಯಥಾನ್ಯಾಯಂ ಮನ್ತ್ರೈಃ ಸ್ವಿಷ್ಟಕೃತಂ ಬುಧಃ ॥೪೧॥

ತುಪ್ಪದಿಂದ ನೆನೆಸಲ್ಪಟ್ಟ ಒಣಗಿದ ಸಮಿತ್ತುಗಳನ್ನು ಅಗ್ನಿಯಲ್ಲಿ ಸಮರ್ಪಿಸಿ, ಅನಂತರ ಆಘಾರವೆಂಬ ಹೆಸರುಳ್ಳ ಆಜ್ಯಹೋಮಗಳನ್ನು ಮಾಡಿ ತುಪ್ಪದಿಂದ ನೆನೆಸಲ್ಪಟ್ಟ ಹವಿಸ್ಸನ್ನು ಶಾಸ್ತ್ರೋಕ್ತಪ್ರಮಾಣದಿಂದ ಹೋಮಮಾಡಬೇಕು. ಅಷ್ಟಾಕ್ಷರೀಮಂತ್ರದಿಂದಲೂ ಹದಿನಾರು ಋಕ್ಕು

ಗಳುಳ್ಳ ಪುರುಷಸೂಕ್ತದಿಂದಲೂ ಅವದಾನಕ್ರಮದಿಂದ (ಒಂದೊಂದು ಋಕ್ಕಿಗೂ ಒಂದೊಂದು ಆಹುತಿ–ಎಂಬ ಕ್ರಮದಿಂದ) ತುಪ್ಪದಲ್ಲಿ ನೆನೆಸಿದ ಹವಿಸ್ಸನ್ನು ಹೋಮಮಾಡಬೇಕು. ಸ್ವಾಹಾಂತವಾದ ನಾಮಮಂತ್ರ ಗಳಿಂದ ಆವರಣದೇವತೆಗಳಾದ ಧರ್ಮಾದಿಗಳಿಗೆ ಹವಿಸ್ಸನ್ನು ಅರ್ಪಿಸಿ **'ಅಗ್ನಯೇ ಸ್ವಿಷ್ಟಕೃತೇ ಸ್ವಾಹಾ'**-ಎಂಬ ಮಂತ್ರದಿಂದ ಸ್ವಿಷ್ಟ ಕೃದ್ಧೋಮವನ್ನು ಮಾಡಬೇಕು.

ಅಭ್ಯರ್ಚ್ಯಾಥ ನಮಸ್ಕೃತ್ಯ ಪಾರ್ಷದೇಭ್ಯೋ ಬಲಿಂ ಹರೇತ್ ।
ಮೂಲಮನ್ತ್ರಂ ಜಪೇದ್ಬ್ರಹ್ಮ ಸ್ಮರನ್ನಾರಾಯಣಾತ್ಮಕಮ್ ॥೪೨॥

ಅನಂತರ ಯಜ್ಞೇಶ್ವರನಲ್ಲಿ ಅಂತರ್ಯಾಮಿಯಾಗಿರುವ ಭಗವಂತ ನನ್ನು ಪುನಃ ಪೂಜಿಸಿ–ನಮಸ್ಕರಿಸಿ, ನಂದನೇ ಮೊದಲಾದ ಪಾರ್ಷದ ರನ್ನುದ್ದೇಶಿಸಿ ಪೂರ್ವದಿಕ್ಕಿನಿಂದ ಪ್ರಾರಂಭಿಸಿ ಎಂಟು ದಿಕ್ಕುಗಳಲ್ಲಿ ಬಲಿ ಪ್ರದಾನಮಾಡಬೇಕು. ಅನಂತರ ಶ್ರೀವಿಗ್ರಹವಿರುವ ಪೂಜಾಸ್ಥಾನಕ್ಕೆ ಬಂದು ಶ್ರೀವಿಗ್ರಹದ ಮುಂದೆ ಕುಳಿತು ಪರಬ್ರಹ್ಮಸ್ವರೂಪನಾದ ನಾರಾಯಣನನ್ನು ಸ್ಮರಿಸುತ್ತಾ ಶಕ್ತ್ಯನುಸಾರವಾಗಿ ಮೂಲಮಂತ್ರವನ್ನು ಜಪಿಸಬೇಕು.

ದತ್ತ್ವಾಽಽಚಮನಮುಚ್ಛೇಷಂ ವಿಷ್ವಕ್ಸೇನಾಯ ಕಲ್ಪಯೇತ್ ।
ಮುಖವಾಸಂ ಸುರಭಿಮತ್ತಾಮ್ಬೂಲಾದ್ಯಮಥಾರ್ಹಯೇತ್ ॥೪೨॥

ಅನಂತರ ಭಗವಂತನಿಗೆ ಭೋಜನಸಮಾಪ್ತಿಯಾಯಿತೆಂದು ಭಾವಿಸಿ ಕೊಂಡು ಸ್ವಾದೋದಕ, ಹಸ್ತೋದಕ, ಹಸ್ತಪ್ರಕ್ಷಾಲನ, ಪಾದಪ್ರಕ್ಷಾಲನಗಳ ಮೂಲಕವಾಗಿ ಆಚಮನವನ್ನಿತ್ತು, ಉಚ್ಛಿಷ್ಟವನ್ನು ವಿಷ್ವಕ್ಸೇನನಿಗೆ ಸಮರ್ಪಿಸಬೇಕು. ಅನಂತರ ಸುಗಂಧಯುಕ್ತವಾದ ತಾಂಬೂಲವನ್ನು ಸ್ವಾಮಿಗೆ ಸಮರ್ಪಿಸಿ ಪುನಃ ಪುಷ್ಪಾಂಜಲಿಯಿಂದ ಆರಾಧಿಸಬೇಕು.

ಉಪಗಾಯನ್ಗೃಣನ್ ನೃತ್ಯನ್ಕರ್ಮಾಣ್ಯಭಿನಯನ್ ಮಮ ।
ಮತ್ಕಥಾಃ ಶ್ರಾವಯನ್ ಶೃಣ್ವನ್ಮುಹೂರ್ತಂ ಕ್ಷಣಿಕೋ ಭವೇತ್॥

ಪುಷ್ಪಾಂಜಲಿಯನ್ನು ಸಮರ್ಪಿಸಿದನಂತರ ನನ್ನ ಮಹಿಮೆಯನ್ನು ಕುರಿತು ಹಾಡಬೇಕು. ಹೊಗಳಬೇಕು. ನನ್ನ ಶ್ರೀವಿಗ್ರಹದ ಮುಂದೆ ನರ್ತನ ಮಾಡಬೇಕು. ನನ್ನ ಲೀಲೆಗಳನ್ನು ಅಭಿನಯದ ಮೂಲಕವಾಗಿ ತೋರಿಸ

ಬೇಕು. ನನ್ನ ಕರ್ಣಾನಂದಕರವಾದ ಲೀಲಾಪ್ರಸಂಗಗಳನ್ನು ಇತರರಿಗೆ ಹೇಳಬೇಕು. ಸಮಯಗಳಲ್ಲಿ ಇತರರಿಂದ ಕೇಳಬೇಕು. ಆನಂದಪರವಶನಾಗಿ ಹೀಗೆ ನನ್ನ ಶ್ರೀವಿಗ್ರಹದಲ್ಲಿಯೇ ತನ್ಮಯನಾಗಿ ಮುಹೂರ್ತಕಾಲವನ್ನು ಕ್ಷಣದಂತೆ ಕಳೆಯಬೇಕು.

ಸ್ತವೈರುಚ್ಚಾವಚೈಃ ಸ್ತೋತ್ರೈಃ ಪೌರಾಣೈಃ ಪ್ರಾಕೃತೈರಪಿ ।
ಸ್ತುತ್ವಾ ಪ್ರಸೀದ ಭಗವನ್ನಿತಿ ವನ್ದೇತ ದಣ್ಡವತ್ ॥೪೫॥

ಪ್ರಾಚೀನರಾದ ಋಷಿ-ಮುನಿಗಳಿಂದ ರಚಿಸಲ್ಪಟ್ಟ ಮತ್ತು ಪ್ರಾಕೃತರಾದ ಭಕ್ತರಿಂದ ಕಟ್ಟಲ್ಪಟ್ಟ ಚಿಕ್ಕ-ದೊಡ್ಡ ಸ್ತೋತ್ರಗಳಿಂದ ಭಗವಂತನನ್ನು ಸ್ತುತಿಸಿ ಕೈಜೋಡಿಸಿಕೊಂಡು 'ಭಗವಂತನೇ! ಪ್ರಸನ್ನನಾಗು'–ಎಂದು ಪ್ರಾರ್ಥಿಸಿಕೊಂಡು ದಂಡದಂತೆ ಸಾಷ್ಟಾಂಗಪ್ರಣಾಮಮಾಡಬೇಕು.

ಶಿರೋ ಮತ್ಪಾದಯೋಃ ಕೃತ್ವಾ ಬಾಹುಭ್ಯಾಂ ಚ ಪರಸ್ಪರಮ್ ।
ಪ್ರಪನ್ನಂ ಪಾಹಿ ಮಾಮೀಶ ಭೀತಂ ಮೃತ್ಯುಗ್ರಹಾರ್ಣವಾತ್ ॥೪೬॥

ಅರ್ಚಕನು ತನ್ನ ಶಿರಸ್ಸನ್ನು ನನ್ನ ಪಾದಗಳ ಮೇಲಿರಿಸಿಕೊಂಡು ಅವನ ಬಲಗೈಯಿಂದ ನನ್ನ ಬಲದ ಕಾಲನ್ನು, ಎಡಗೈಯಿಂದ ಎಡಗಾಲನ್ನು ಭದ್ರವಾಗಿ ಹಿಡಿದುಕೊಂಡು ಹೃದಯಾಂತರಾಳದಿಂದ ಪ್ರಾರ್ಥಿಸಿಕೊಳ್ಳಬೇಕು. "ಈಶನೇ! ದಯಾಮಯನೇ! ಮೃತ್ಯುಗ್ರಸ್ತನಾದ, ಸಂಸಾರಸಾಗರದಿಂದ ಭಯಗೊಂಡಿರುವ ಶರಣಾಗತನಾಗಿರುವ ನನ್ನನ್ನು ಕಾಪಾಡು."

ಇತಿ ಶೇಷಾಂ ಮಯಾ ದತ್ತಾಂ ಶಿರಸ್ಯಾಧಾಯ ಸಾದರಮ್ ।
ಉದ್ವಾಸಯೇಚ್ಚೇದುದ್ವಾಸ್ಯಂ ಜ್ಯೋತಿರ್ಜ್ಯೋತಿಷಿ ತತ್ಪುನಃ ॥೪೭॥

ಹೀಗೆ ದೈನ್ಯದಿಂದ ಪ್ರಾರ್ಥನೆಯನ್ನು ಮಾಡಿಕೊಂಡು, ಪುಷ್ಪಪ್ರಸಾದವನ್ನು ನಾನೇ ನನ್ನ ಕತ್ತಿನಿಂದ ತೆಗೆದುಕೊಡುತ್ತಿರುವೆನೆಂಬುದಾಗಿ ಭಾವಿಸಿಕೊಳ್ಳುತ್ತಾ, ಪುಷ್ಪಮಾಲಿಕೆಯನ್ನು ನನ್ನ ಶ್ರೀವಿಗ್ರಹದಿಂದ ತೆಗೆದುಕೊಂಡು ಕಣ್ಣಿಗೊತ್ತಿಕೊಂಡು ಶಿರಸ್ಸಿನಲ್ಲಿ ಧರಿಸಬೇಕು. ವಿಸರ್ಜನೆಮಾಡಬೇಕಾಗಿದ್ದರೆ ಶ್ರೀವಿಗ್ರಹದಲ್ಲಿರುವ ದಿವ್ಯಜ್ಯೋತಿಯು ಹೊರಬರುತ್ತಿರುವುದೆಂದೂ ತನ್ನ (ಭಕ್ತನ) ಹೃತ್ಕಮಲದಲ್ಲಿರುವ ಜ್ಯೋತಿಯೊಡನೆ ಲೀನವಾಗುತ್ತಿರುವುದೆಂದೂ ಭಾವಿಸಿಕೊಂಡು ವಿಸರ್ಜನತಂತ್ರವನ್ನು ಮುಗಿಸಬೇಕು.

ಅರ್ಚಾದಿಷು ಯದಾ ಯತ್ರ ಶ್ರದ್ಧಾ ಮಾಂ ತತ್ರ ಚಾರ್ಚಯೇತ್ ।
ಸರ್ವಭೂತೇಷ್ವಾತ್ಮನಿ ಚ ಸರ್ವಾತ್ಮಾಹಮವಸ್ಥಿತಃ ॥೪೮॥

ಉದ್ಧವ! ನನ್ನ ಅರ್ಚನೆಗೆ ಹೇಳಿರುವ ಹಲವಾರು ಪ್ರತಿಮೆಗಳಲ್ಲಿ ಯಾವ ಪ್ರತಿಮೆಯಲ್ಲಿ ಯಾವಾಗ ಪೂಜೆಮಾಡಲು ಶ್ರದ್ಧೆಯುಂಟಾಗುವುದೋ ಆಗಲೇ ಆ ಪ್ರತಿಮೆಯಲ್ಲಿ ನನ್ನನ್ನು ಅರ್ಚಿಸಬೇಕು. ಪ್ರತಿಮೆಗಳಲ್ಲಿ ಯಾವುದೇ ತಾರತಮ್ಯವೂ ಇಲ್ಲ. ಸರ್ವಾತ್ಮನಾದ ನಾನು ಸಕಲ ಪ್ರಾಣಿಗಳಲ್ಲಿಯೂ ಸಕಲಪ್ರಾಣಿಗಳ ಹೃದಯಗಳಲ್ಲಿಯೂ ಸರ್ವದಾ ನೆಲೆಸಿರುತ್ತೇನೆ.

ಏವಂ ಕ್ರಿಯಾಯೋಗಪಥೈಃ ಪುಮಾನ್ ವೈದಿಕತಾನ್ತ್ರಿಕೈಃ ।
ಅರ್ಚನ್ನುಭಯತಃ ಸಿದ್ಧಿಂ ಮತ್ತೋ ವಿನ್ದತ್ಯಭೀಪ್ಸಿತಾಮ್ ॥೪೯॥

ಹೀಗೆ ಸಾಧಕನಾದ ಮನುಷ್ಯನು, ವೈದಿಕವಾದ ಮತ್ತು ತಾಂತ್ರಿಕವಾದ ಕ್ರಿಯಾಯೋಗದ ಮಾರ್ಗಗಳಿಂದ ಅರ್ಚಿಸುತ್ತಾ ಇಹ-ಪರಗಳೆರಡರಲ್ಲಿಯೂ ತನಗೆ ಅಭೀಷ್ಟವಾದ ಸಿದ್ಧಿಯನ್ನು ನನ್ನಿಂದ ಪಡೆದುಕೊಳ್ಳುತ್ತಾನೆ.

ಮದರ್ಚಾಂ ಸಮ್ಪ್ರತಿಷ್ಠಾಪ್ಯ ಮನ್ದಿರಂ ಕಾರಯೇದ್ದೃಢಮ್ ।
ಪುಷ್ಪೋದ್ಯಾನಾನಿ ರಮ್ಯಾಣಿ ಪೂಜಾಯಾತ್ರೋತ್ಸವಾಶ್ರಿತಾನ್ ॥೫೦॥

ಆಢ್ಯನಾಗಿರುವ ಭಕ್ತನು ನನ್ನ ಶ್ರೀವಿಗ್ರಹವನ್ನು ಪ್ರತಿಷ್ಠಾಪಿಸಿ ದೃಢವಾದ ದೇವಸ್ಥಾನವನ್ನು ಕಟ್ಟಿಸಬೇಕು. ಸುತ್ತಲೂ ರಮ್ಯವಾದ ಪುಷ್ಪೋದ್ಯಾನಗಳನ್ನು ಬೆಳೆಸಬೇಕು. ನಿತ್ಯೋತ್ಸವ-ರಥೋತ್ಸವಗಳಿಗೆ ಬೇಕಾದ ಸೌಕರ್ಯವನ್ನು ಒದಗಿಸಬೇಕು.

ಪೂಜಾದೀನಾಂ ಪ್ರವಾಹಾರ್ಥಂ ಮಹಾಪರ್ವಸ್ವಥಾನ್ವಹಮ್ ।
ಕ್ಷೇತ್ರಾಪಣಪುರಗ್ರಾಮಾನ್ದತ್ತ್ವಾ ಮತ್ಸಾರ್ಷ್ಟಿತಾಮಿಯಾತ್ ॥೫೧॥

ನನ್ನ ನಿತ್ಯಪೂಜೆ ಮತ್ತು ಪರ್ವದಿವಸಗಳಲ್ಲಿ ವಿಶೇಷಪೂಜೆ ನಿತ್ಯೋತ್ಸವ-ರಥೋತ್ಸವಗಳು ಅವಿಚ್ಛಿನ್ನವಾಗಿ ನಡೆಯಲು ಸಾಧ್ಯವಾಗುವಂತೆ ಆಢ್ಯರಾದ ಭಕ್ತಜನರು ಹೊಲ-ಗದ್ದೆಗಳನ್ನೂ, ಅಂಗಡಿಗಳನ್ನೂ, ಪಟ್ಟಣಗಳನ್ನೂ, ಗ್ರಾಮಗಳನ್ನೂ ಉಂಬಳಿಯಾಗಿ ಕೊಡಬೇಕು. ಇದರಿಂದ

ಅವರಿಗೆ ನನ್ನ ಐಶ್ವರ್ಯಕ್ಕೆ ಸಮಾನವಾದ ಐಶ್ವರ್ಯವು ನನ್ನ ಅನುಗ್ರಹದಿಂದ ದೊರಕುತ್ತದೆ.

ಪ್ರತಿಷ್ಠಯಾ ಸಾರ್ವಭೌಮಂ ಸದ್ಮನಾ ಭುವನತ್ರಯಮ್ ।
ಪೂಜಾದಿನಾ ಬ್ರಹ್ಮಲೋಕಂ ತ್ರಿಭಿರ್ಮತ್ಸಾಮ್ಯತಾಮಿಯಾತ್ ॥೫೨॥

ನನ್ನ ಶ್ರೀವಿಗ್ರಹವನ್ನು ಪ್ರತಿಷ್ಠಾಪಿಸುವುದರಿಂದ ಏಕಚ್ಛತ್ರಾಧಿಪತ್ಯವನ್ನೂ, ನನಗೆ ಮಂದಿರವನ್ನು (ಆಲಯವನ್ನು) ಕಲ್ಪಿಸುವುದರಿಂದ ತ್ರೈಲೋಕ್ಯಾಧಿಪತ್ಯವನ್ನೂ, ನನ್ನ ಪೂಜೆ ಮುಂತಾದುವನ್ನು ಮಾಡುವುದರಿಂದ ಬ್ರಹ್ಮಲೋಕವನ್ನೂ ಈ ಮೂರನ್ನೂ ಮಾಡುವುದರಿಂದ ನನ್ನ ಸಾಮ್ಯವನ್ನೂ ಭಕ್ತನು ಪಡೆದುಕೊಳ್ಳುತ್ತಾನೆ.

ಮಾಮೇವ ನೈರಪೇಕ್ಷ್ಯೇಣ ಭಕ್ತಿಯೋಗೇನ ವಿನ್ದತಿ ।
ಭಕ್ತಿಯೋಗಂ ಸ ಲಭತೇ ಏವಂ ಯಃ ಪೂಜಯೇತ ಮಾಮ್ ॥೫೩॥

ಯಾವನು ನಿಷ್ಕಾಮನಾಗಿ ಮೇಲೆ ಹೇಳಿದಂತೆ ನನ್ನನ್ನು ಪೂಜಿಸುವನೋ ಅವನಿಗೆ ನನ್ನ ಭಕ್ತಿಯೋಗವು ಪ್ರಾಪ್ತವಾಗುತ್ತದೆ. ನಿರಪೇಕ್ಷವಾದ ಭಕ್ತಿಯೋಗದ ಮೂಲಕವಾಗಿ, ಆ ನನ್ನ ಪ್ರೇಮೀಭಕ್ತನು ನನ್ನನ್ನೇ ಪಡೆದುಕೊಳ್ಳುತ್ತಾನೆ.

ಯಃ ಸ್ವದತ್ತಾಂ ಪರೈರ್ದತ್ತಾಂ ಹರೇತ ಸುರವಿಪ್ರಯೋಃ ।
ವೃತ್ತಿಂ ಸ ಜಾಯತೇ ವಿಡ್ಭುಗ್ವರ್ಷಾಣಾಮಯುತಾಯುತಮ್ ॥೫೪॥

ದೇವ-ಬ್ರಾಹ್ಮಣರಿಗೆ ತಾನೇಕೊಟ್ಟ ಉಂಬಳಿಯನ್ನಾಗಲೀ ಇತರರು ಕೊಟ್ಟ ಉಂಬಳಿಯನ್ನಾಗಲೀ ಯಾವನು ಅಪಹರಿಸುವನೋ ಅಂತಹವನು ಕೋಟಿ ವರ್ಷಗಳವರೆಗೆ ಅಮೇಧ್ಯದಲ್ಲಿನ ಕ್ರಿಮಿಯಾಗಿರುತ್ತಾನೆ.

ಕರ್ತುಶ್ಚ ಸಾರಥೇರ್ಹೇತೋರನುಮೋದಿತುರೇವ ಚ ।
ಕರ್ಮಣಾಂ ಭಾಗಿನಃ ಪ್ರೇತ್ಯ ಭೂಯೋ ಭೂಯಸಿ ತತ್ಫಲಮ್ ॥೫೫॥

ಇಂತಹ ಮಹಾಪಾಪಿಷ್ಠವಾದ ಮತ್ತು ಹೇಯವಾದ ಕೆಲಸಕ್ಕೆ ಯಾರು ಸಹಾಯಮಾಡುವರೋ ಯಾರು ಪ್ರೇರಕರಾಗಿರುವರೋ ಮತ್ತು ಯಾರು ಅನುಮೋದಕರಾಗಿರುವರೋ ಅಂತಹವರಿಗೂ ಇದೇ ವಿಧವಾದ ದುಷ್ಫಲವು ಪ್ರಾಪ್ತವಾಗುತ್ತದೆ. ಏಕೆಂದರೆ ಇವರೆಲ್ಲರೂ ಪಾಪಿಷ್ಠವಾದ

ದೇವ-ಬ್ರಾಹ್ಮಣರ ಸ್ವತ್ತಿನ ಅಪಹಾರದಲ್ಲಿ ಭಾಗಿಗಳಾಗಿರುತ್ತಾರೆ. ಆದರೆ ಈ ಪಾಪಕಾರ್ಯಸಾಧನೆಗೆ ಯಾರು–ಎಷ್ಟು ಸಹಾಯವೆಸಗಿರುತ್ತಾರೆಯೋ ಅದಕ್ಕೆ ಅನುಗುಣವಾಗಿ ಅವರು ಹೆಚ್ಚು ಅಥವಾ ಕಡಿಮೆಯಾಗಿ ನರಕ ವಾಸವನ್ನು ಅನುಭವಿಸುತ್ತಾರೆ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಏಕಾದಶಸ್ಕಂಧದ ೨೭ನೆಯ ಅಧ್ಯಾಯವು ಮುಗಿಯಿತು.

ಏಕಾದಶಸ್ಕಂಧ ೨೮ನೆಯ ಅಧ್ಯಾಯ

ಪರಮಾರ್ಥನಿರೂಪಣೆ

ಶ್ರೀಭಗವಂತನು ಹೇಳುತ್ತಾನೆ :

ಪರಸ್ವಭಾವಕರ್ಮಾಣಿ ನ ಪ್ರಶಂಸೇನ್ನ ಗರ್ಹಯೇತ್ ।
ವಿಶ್ವಮೇಕಾತ್ಮಕಂ ಪಶ್ಯನ್ಪ್ರಕೃತ್ಯಾ ಪುರುಷೇಣ ಚ ॥೧॥

ಪರಸ್ವಭಾವಕರ್ಮಾಣಿ ಯಃ ಪ್ರಶಂಸತಿ ನಿನ್ದತಿ ।
ಸ ಆಶು ಭ್ರಶ್ಯತೇ ಸ್ವಾರ್ಥಾದಸತ್ಯಭಿನಿವೇಶತಃ ॥೨॥

"ಉದ್ಧವ! ವ್ಯವಹಾರದಲ್ಲಿ ದಾನಿಗಳು ಸ್ತುತಿಗೆ ಅರ್ಹರಾದವರೆಂದೂ ದತ್ತಾಪಹಾರಿಗಳು ನಿಂದೆಗೆ ಅರ್ಹರಾದವರೆಂದೂ ಹೇಳಲ್ಪಡುತ್ತಿದ್ದರೂ ವಿವೇಕಿಯಾದ ಪುರುಷನು ಮೂಲಪ್ರಕೃತಿಯಿಂದಲೂ ಮತ್ತು ಪುರುಷನಿಂದಲೂ ಕೂಡಿರುವ ಜಗತ್ತನ್ನು ಏಕಾತ್ಮವನ್ನಾಗಿ ನೋಡುತ್ತಾ ಇತರರ ಸಾತ್ತ್ವಿಕಸ್ವಭಾವವನ್ನು ಹೊಗಳಲೂಬಾರದು ; ರಾಜಸ-ತಾಮಸ ಸ್ವಭಾವಗಳನ್ನು ತೆಗಳಲೂಬಾರದು. ಯಾವ ಪುರುಷನು ಇತರರ ಸ್ವಭಾವ ಕರ್ಮಗಳನ್ನು ಹಳಿಯುವನೋ ಅಥವಾ ಹೊಗಳುವನೋ ಅಂತಹವನು ಅಸತ್ತಾದ ಪ್ರಪಂಚದಲ್ಲಿ ಆಸಕ್ತನಾಗಿರುವುದರಿಂದ ಜ್ಞಾನನಿಷ್ಠಾರೂಪವಾದ ತನ್ನ ಪುರುಷಾರ್ಥದಿಂದ ಭ್ರಷ್ಟನಾಗುತ್ತಾನೆ.*

---

*ಪ್ರಕೃತಿ-ಪುರುಷರೆಲ್ಲರಿಗೂ ಜ್ಞಾನಾನಂದಸ್ವರೂಪನಾದ, ತ್ರಿಗುಣಾತೀತನಾಗಿ ನಿರ್ವಿಕಾರನಾದ ವಾಸುದೇವನೇ ಆತ್ಮನಾಗಿದ್ದಾನೆ. ಆತನನ್ನು ಮಾತ್ರವೇ ಅನುಸಂಧಾನ ಮಾಡಬೇಕು. ಆತನನ್ನು ಬಿಟ್ಟು ತ್ರಿಗುಣಗಳಿಗೆ ಒಳಪಟ್ಟು ವಿಕಾರಿಗಳಾಗಿರುವ ಪ್ರಕೃತಿ-ಪುರುಷರನ್ನು ಅನುಸಂಧಾನಮಾಡಬಾರದು. ಅವರನ್ನು ನಿಂದಿಸಿದರೆ

ತೈಜಸೇ ನಿದ್ರಯಾಽಪನ್ನೇ ಪಿಣ್ಡಸ್ಥೋ ನಷ್ಟಚೇತನಃ ।
ಮಾಯಾಂ ಪ್ರಾಪ್ನೋತಿ ಮೃತ್ಯುಂ ವಾ ತದ್ವನ್ನಾನಾರ್ಥದೃಕ್ ಪುಮಾನ್ ॥೩॥

ಉದ್ಧವ! ಎಲ್ಲ ಇಂದ್ರಿಯಗಳೂ ರಾಜಸಾಹಂಕಾರದ ಕಾರ್ಯವೇ ಆಗಿದೆ. ಅವುಗಳೆಲ್ಲವೂ ನಿದ್ರಿಸಿದಾಗ ಶರೀರಾಭಿಮಾನಿಯಾದ ಜೀವನು ಕೂಡ ಚೇತನಾರಹಿತನಾಗುತ್ತಾನೆ. ಅರ್ಥಾತ್ ಆ ಜೀವಕ್ಕೆ ಹೊರಗಿನ ಶರೀರದ ಸ್ಮೃತಿಯೇ ಇರುವುದಿಲ್ಲ. ಮನಸ್ಸಾದರೂ ಲೀನವಾಗದೇ ಉಳಿದು ಕೊಂಡಿದ್ದಲ್ಲಿ ಅದು ಮಾಯಾರೂಪವಾದ ಕನಸಿನಲ್ಲಿ ತನ್ನ ಹಿಂದಿನ ಕರ್ಮ ಗಳ ಫಲವನ್ನು ಸವಿಯುತ್ತಾ ಓಡಾಡುತ್ತಿರುತ್ತದೆ. ಅಂತಹ ಮನಸ್ಸೂ ಲೀನವಾಗಿಬಿಟ್ಟರೆ ಜೀವನವು ಮೃತ್ಯುರೂಪವಾದ ಗಾಢನಿದ್ರೆಯಲ್ಲಿ ಅಥವಾ ಸುಷುಪ್ತ್ಯವಸ್ಥೆಯಲ್ಲಿ ಲೀನವಾಗಿಬಿಡುತ್ತದೆ. ಅಂತೆಯೇ ಪ್ರಪಂಚದಲ್ಲಿ ಅಭಿನಿವೇಶವುಳ್ಳ ಪುರುಷನು ವಿಕ್ಷೇಪವನ್ನು (ಲಯವನ್ನು) ಪಡೆಯುವನು. ಸುಷುಪ್ತಿಗೆ ಅಭಿಮಾನಿಯಾದ ಪ್ರಾಜ್ಞನ ಸಂಬಂಧದಿಂದ ಜಾಗ್ರದಭಿಮಾನಿ ಯಾದ ವಿಶ್ವನಿಗೆ ಯಾವ ರೀತಿಯಲ್ಲಿ ವಿಷಯಭೋಗನಾಶರೂಪವಾದ ಭ್ರಂಶವುಂಟೋ ಅದೇ ರೀತಿಯಲ್ಲಿ ಅನಾತ್ಮಸಂಬಂಧದಿಂದ ಆತ್ಮನಿಗೂ ಸ್ವರೂಪಭ್ರಂಶವುಂಟು.*

ಅಥವಾ ಸ್ತುತಿಸಿದರೆ ಅದರಿಂದ ಅವರ ಅನುಸಂಧಾನವಾಗಿ ಅವರ ಗುಣ-ದೋಷಗಳು ನಮಗೆ ಅಂಟಿಕೊಳ್ಳುತ್ತವೆ. ಆದುದರಿಂದ ಪರನಿಂದೆ-ಪರಸ್ತುತಿಗಳೆರಡನ್ನೂ ಮಾಡ ಬಾರದು. ಇದಲ್ಲದೇ ಪರನಿಂದನೆಯನ್ನು ಮಾಡಿದರೆ ಅವರ ಪಾಪಗಳು ನಮಗೆ ಅಂಟಿ ಕೊಳ್ಳುತ್ತವೆ. 'ಮಾಡಿದವರ ಪಾಪ ಆಡಿದವರ ಬಾಯಲ್ಲಿ'–ಎಂಬಂತೆ. ಇತರರನ್ನು ಸ್ತುತಿಮಾಡುವುದೂ ಅವಿವೇಕ. ಅಲ್ಪಗುಣವುಳ್ಳ ಇತರರನ್ನು ಸ್ತುತಿಸುವ ಬದಲು ಅನಂತಕಲ್ಯಾಣಗುಣಪರಿಪೂರ್ಣನಾದ ಪರಮಾತ್ಮನನ್ನೇ ಸ್ತುತಿಸಿದರೆ ಮಹಾಶ್ರೇಯಸ್ಸು

---

*ಕನಸಿನಲ್ಲಿರುವ ಜೀವನು ಗಾಢನಿದ್ರೆಯಲ್ಲಿ ಮುಳುಗಿದಾಗ ಜ್ಞಾನಶೂನ್ಯನಾಗಿ ಸತ್ತವನಂತೆ ಆಗುತ್ತಾನೆ. ಹಾಗೆಯೇ ಏಕಮಾತ್ರ ಪರಮಾರ್ಥವಾಗಿ ಸರ್ವಾತ್ಮನಾಗಿರುವ ಪರಮಾತ್ಮನನ್ನು ಬಿಟ್ಟು ದೇಹಾತ್ಮಭಾವದಿಂದ ನಾನಾರ್ಥಗಳನ್ನು ನೋಡುವವನು ಮಾಯೆಯಲ್ಲಿ ಮುಳುಗುತ್ತಾನೆ ಅಥವಾ ಸಾವನ್ನು ಅಪ್ಪುತ್ತಾನೆ. (ಆದುದರಿಂದ ಅದ್ವೈತವಾದ ಆತ್ಮನನ್ನೇ ಎಲ್ಲದರಲ್ಲೂ ಅನುಸಂಧಾನಮಾಡಬೇಕು.)

ಕಿಂ ಭದ್ರಂ ಕಿಮಭದ್ರಂ ವಾ ದ್ವೈತಸ್ಯಾವಸ್ತುನಃ ಕಿಯತ್ ।
ವಾಚೋದಿತಂ ತದನೃತಂ ಮನಸಾ ಧ್ಯಾತಮೇವ ಚ ॥೪॥

ಯಾವುದು ಕೆಟ್ಟುದು? ಎಂಬ ಪ್ರಶ್ನೆಯಾಗಲೀ ಯಾವ ವಸ್ತುವು ಎಷ್ಟು ಒಳ್ಳೆಯದು? ಎಷ್ಟು ಕೆಟ್ಟುದು?—ಎಂಬ ಪ್ರಶ್ನೆಯಾಗಲೀ ಉದ್ಭವಿಸುವುದೇ ಇಲ್ಲ. ವಿಶ್ವದಲ್ಲಿರುವ ಸಮಸ್ತವಸ್ತುಗಳನ್ನೂ ಮಾತಿನಿಂದ ಹೆಸರಿಸಲು ಸಾಧ್ಯವಾಗುತ್ತದೆ ಮತ್ತು ಮನಸ್ಸಿನಿಂದ ಯೋಚಿಸಲು ಸಾಧ್ಯವಾಗುತ್ತದೆ. ಆದುದರಿಂದ ಇವೆಲ್ಲವೂ, ಅನಿತ್ಯ-ಅಸತ್ಯ—ಎಂಬುದು ಸ್ಪಷ್ಟವಾಗಿಯೇ ಇದೆ.

ಛಾಯಾಪ್ರತ್ಯಾಹ್ವಯಾಭಾಸಾ ಹ್ಯಸನ್ತೋಽಪ್ಯರ್ಥಕಾರಿಣಃ ।
ಏವಂ ದೇಹಾದಯೋ ಭಾವಾ ಯಚ್ಛನ್ತ್ಯಾಮೃತ್ಯುತೋ ಭಯಮ್ ॥

ಪ್ರತಿಬಿಂಬ, ಪ್ರತಿಧ್ವನಿ, ಕಾಗೆಬಂಗಾರ-ಬೆಳ್ಳಿ ರಜ್ಜು-ಸರ್ಪ ಇವೇ ಮುಂತಾದುವು ಮಿಥ್ಯೆಯಾದರೂ ಹೇಗೆ ವ್ಯವಹಾರದಲ್ಲಿ ಕಾರ್ಯಕಾರಿಗಳಾಗಿ

ಉಂಟಾಗುತ್ತದೆ. ಪೂರ್ಣತೆಗೆ ನಮ್ಮನ್ನು ಒಯ್ಯುತ್ತದೆ. ಅಲ್ಪನನ್ನು ಸ್ತುತಿಸಿದರೆ ನಮಗೂ ಅಲ್ಪತೆ ಉಂಟಾಗುವುದು. ಆದುದರಿಂದ ನಿಂದಾ-ಸ್ತುತಿಗಳಲ್ಲಿ ಕಾಲವ್ಯಯ ಮಾಡದೆ ಸರ್ವಾತ್ಮನಾದ ವಾಸುದೇವನನ್ನೇ ಅನುಸಂಧಾನಮಾಡುತ್ತಿರಬೇಕು. ಇತರರು ತಮ್ಮ ಪ್ರಕೃತಿಸ್ವಭಾವದಿಂದ ಮಾಡುವ ಕರ್ಮಗಳನ್ನು ಕುರಿತು ನಿಂದಾ-ಸ್ತುತಿಗಳನ್ನು ಮಾಡುವವನು ಅಸತ್ತಾದ ದೇಹದಲ್ಲಿ ಆತ್ಮಾಭಿಮಾನವುಳ್ಳ ಅವಿವೇಕಿಯಾಗುತ್ತಾನೆ. ಸರ್ವರಿಗೂ ಆತ್ಮಭೂತನಾಗಿರುವ ಪರಮಾತ್ಮನ ಜ್ಞಾನದಿಂದ ಭ್ರಷ್ಟನಾಗುತ್ತಾನೆ.

ಪರಸ್ವಭಾವಕರ್ಮಾಣಿ—ಎಂಬುದಕ್ಕೆ ವಿಜಯಧ್ವಜೀಯರು ಹೀಗೆ ವ್ಯಾಖ್ಯೆ ಮಾಡಿರುತ್ತಾರೆ : ಜೀವೇಶ್ವರರ ಸತ್ಯವಾದ ಭೇದವನ್ನು ಸೈರಿಸದವನು ಪರಸು—ಎಂದರೆ ಶತ್ರುವು. ಅವನ ಸ್ವಭಾವಕರ್ಮಗಳನ್ನು ಹೊಗಳಬಾರದು. ಪರ—ಎಂಬುದಕ್ಕೆ ಹರಿಭಕ್ತನೆಂಬ ಮತ್ತೊಂದು ಅರ್ಥವನ್ನು ಹೇಳಿ ಹರಿಭಕ್ತನು ಅವನ ಸ್ವಭಾವ ಕರ್ಮಗಳನ್ನು ದೂಷಿಸಬಾರದು—ಎಂದು ಅರ್ಥಮಾಡಿರುತ್ತಾರೆ.

ಸ್ತುತಿ-ನಿಂದೆಗಳು ದ್ವೈತಭಾವವಿದ್ದಾಗಲೇ ಬರತಕ್ಕವುಗಳು. ಸರ್ವವೂ ಏಕಾತ್ಮಕವೆಂಬ ಅದ್ವೈತನಿಷ್ಠೆಯಲ್ಲಿ ಸ್ತುತಿ-ನಿಂದೆಗಳಿಗೆ ಅವಕಾಶವಿಲ್ಲ. ಸಾಧಕನು ಈ ನಿಷ್ಠೆಯನ್ನು ಅಭ್ಯಾಸ ಮಾಡಬೇಕು—ಎಂಬುದು ಈ ಶ್ಲೋಕದ ಅಭಿಪ್ರಾಯ.

(ರಾಮಾಯಣಪ್ರಕಾಶನ ಸಮಿತಿ ಸಂಸ್ಕರಣ)

ಬಿಡುತ್ತವೆಯೋ ರಜ್ಜುವು ಸರ್ಪರೂಪದಲ್ಲಿ ಪರಿಣಮಿಸಿ ಭಯವನ್ನುಂಟು ಮಾಡುವುದೋ ಅದೇ ರೀತಿಯಲ್ಲಿ ದೇಹಾದಿ ಪದಾರ್ಥಗಳು ಮಿಥ್ಯೆಯಾಗಿದ್ದರೂ ಸಾಯುವವರೆಗೂ ಮಿಥ್ಯೆಯಲ್ಲವೆಂಬ ಭ್ರಮೆಯಿಂದ ಭಯವನ್ನು ಉಂಟುಮಾಡುತ್ತಲೇ ಇರುತ್ತವೆ.

ಆತ್ಮೈವ ತದಿದಂ ವಿಶ್ವಂ ಸೃಜ್ಯತೇ ಸೃಜತಿ ಪ್ರಭುಃ ।
ತ್ರಾಯತೇ ತ್ರಾತಿ ವಿಶ್ವಾತ್ಮಾ ಹ್ರಿಯತೇ ಹರತೀಶ್ವರಃ ॥೬॥

ಆದುದರಿಂದ ಈ ಎಲ್ಲ ವಿಶ್ವವೂ ಆತ್ಮಮಯವೇ ಆಗಿದೆ. ಆತ್ಮನನ್ನು ಬಿಟ್ಟು ಬೇರೊಂದು ವಸ್ತುವೇ ಇಲ್ಲ. ಪ್ರಭುವಾದ ಪರಮಾತ್ಮನೊಬ್ಬನೇ ಈಶ್ವರರೂಪದಿಂದ ಜಗತ್ತನ್ನು ಸೃಷ್ಟಿಸುತ್ತಾನೆ, ರಕ್ಷಿಸುತ್ತಾನೆ, ಸಂಹರಿಸುತ್ತಾನೆ ಮತ್ತು ತನ್ನ ಶರೀರ ಅಥವಾ ಉಪಾಧಿಯಾದ ಪ್ರಪಂಚರೂಪದಿಂದ ಸೃಷ್ಟಿಸಲ್ಪಡುವವನೂ, ರಕ್ಷಿಸಲ್ಪಡುವವನೂ, ಸಂಹರಿಸಲ್ಪಡುವವನೂ ಅವನೇ ಆಗಿದ್ದಾನೆ.

ತಸ್ಮಾನ್ನಹ್ಯಾತ್ಮನೋಽನ್ಯಸ್ಮಾದನ್ಯೋ ಭಾವೋ ನಿರೂಪಿತಃ ।
ನಿರೂಪಿತೇಯಂ ತ್ರಿವಿಧಾ ನಿರ್ಮೂಲಾ ಭಾತಿರಾತ್ಮನಿ ।
ಇದಂ ಗುಣಮಯಂ ವಿದ್ಧಿ ತ್ರಿವಿಧಂ ಮಾಯಯಾ ಕೃತಮ್ ॥೭॥

ಆದುದರಿಂದ ಆತ್ಮವಸ್ತುವಿಗಿಂತ ಇನ್ನೊಂದು ಭಾವಪದಾರ್ಥವು ಯಾವುದೂ ಕಂಡುಬರುವುದಿಲ್ಲ. ಆತ್ಮನಲ್ಲಿ ನಿರೂಪಿಸಲ್ಪಟ್ಟಿರುವ ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳೆಂಬ ಮುಬ್ಬಗೆಯಾದ ಪ್ರತೀಕಗಳು ನಿರಾಧಾರಗಳಾದುದರಿಂದ ಭ್ರಾಂತಿಯೇ ಹೊರತು ಸತ್ಯವಲ್ಲ. ಗುಣಮಯವೆನಿಸಿ ಆಧ್ಯಾತ್ಮಿಕಾದಿ ಭೇದಗಳಿಂದ ಮೂರು ವಿಧವಾಗಿರುವ ಈ ದೇಹಾದಿ ಪ್ರಪಂಚವು ಮಾಯೆಯಿಂದಲೇ ಕಲ್ಪಿತವಾದುದೆಂದು ತಿಳಿ.

ಏತದ್ವಿದ್ವಾನ್ ಮದುದಿತಂ ಜ್ಞಾನವಿಜ್ಞಾನನೈಪುಣಮ್ ।
ನ ನಿಂದತಿ ನ ಚ ಸ್ತೌತಿ ಲೋಕೇ ಚರತಿ ಸೂರ್ಯವತ್ ॥೮॥

ಉದ್ಧವ! ನಾನು ನಿನಗೆ ಜ್ಞಾನ-ವಿಜ್ಞಾನಗಳ ಕುಶಲತೆಯನ್ನು ಹೇಳಿರುತ್ತೇನೆ. ಯಾವನು ಈ ನನ್ನ ಮಾತುಗಳ ರಹಸ್ಯವನ್ನು ತಿಳಿದಿರುವನೋ ಅಂತಹವನು ಯಾರೊಬ್ಬರನ್ನೂ ನಿಂದಿಸುವುದೂ ಇಲ್ಲ ;

ಸ್ತುತಿಸುವುದೂ ಇಲ್ಲ. ಸೂರ್ಯನಂತೆ ಯಾವುದಕ್ಕೂ ಅಂಟಿಕೊಳ್ಳದೇ ಸರ್ವಸಮಭಾವದಿಂದ ಲೋಕದಲ್ಲಿ ಸಂಚರಿಸುತ್ತಿರುತ್ತಾನೆ.

ಪ್ರತ್ಯಕ್ಷೇಣಾನುಮಾನೇನ ನಿಗಮೇನಾತ್ಮಸಂವಿದಾ ।
ಆದ್ಯನ್ತವದಸಜ್ಜ್ಞಾತ್ವಾ ನಿಸ್ಸಙ್ಗೋ ವಿಚರೇದಿಹ ॥೯॥

ಪ್ರತ್ಯಕ್ಷ, ಅನುಮಾನ, ಶಾಸ್ತ್ರ ಮತ್ತು ಆತ್ಮಾನುಭೂತಿ–ಇವೇ ಮುಂತಾದ ಸಮಸ್ತ ಪ್ರಮಾಣಗಳಿಂದಲೂ ಉತ್ಪತ್ತಿ ಮತ್ತು ವಿನಾಶಗಳಿರುವ ಜಗತ್ತು ಅಸದ್ವಸ್ತುವೆಂದು ಸಿದ್ಧವಾಗುತ್ತದೆ. ಈ ರಹಸ್ಯವಿಷಯವನ್ನು ತಿಳಿದು ಸಾಧಕನು ಅಂತಹ ಅನಿತ್ಯವಾದ ಜಗತ್ತಿನೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳದೆ ನಿಸ್ಸಂಗನಾಗಿ ಸಂಚರಿಸುತ್ತಿರಬೇಕು."

ಉದ್ಧವನು ಹೇಳುತ್ತಾನೆ :

ನೈವಾತ್ಮನೋ ನ ದೇಹಸ್ಯ ಸಂಸೃತಿರ್ದ್ರಷ್ಟೃದೃಶ್ಯಯೋಃ ।
ಅನಾತ್ಮಸ್ವದೃಶೋರೀಶ ಕಸ್ಯ ಸ್ಯಾದುಪಲಭ್ಯತೇ ॥೧೦॥

"ಭಗವಂತ! ಆತ್ಮನು ದ್ರಷ್ಟಾ-ದೃಶ್ಯ. ಆತ್ಮನು ಸ್ವಯಂಪ್ರಕಾಶನು. ದೇಹವು ಜಡ. ಅಲ್ಲವೇ? ಇಂತಹ ಪರಿಸ್ಥಿತಿಯಲ್ಲಿ ಜನ್ಮ-ಮೃತ್ಯು ರೂಪವಾದ ಸಂಸಾರವು ಜಡವಾದ ಶರೀರಕ್ಕೂ ಇರಲು ಸಾಧ್ಯವಿಲ್ಲ. ಸ್ವಯಂಪ್ರಕಾಶನಾದ ಆತ್ಮನಿಗೂ ಇರಲು ಸಾಧ್ಯವಿಲ್ಲ. ಆದರೆ ನಮಗಿಂದು ಸಂಸಾರವಿದೆ. ನಾವು ಸಂಸಾರಸಾಗರದಲ್ಲಿ ಬಿದ್ದು ನರಳುತ್ತಿದ್ದೇವೆ. ಇದು ಹೇಗಾಯಿತು?

ಆತ್ಮಾವ್ಯಯೋಽಗುಣಃ ಶುದ್ಧಃ ಸ್ವಯಞ್ಜ್ಯೋತಿರನಾವೃತಃ ।
ಅಗ್ನಿವದ್ದಾರುವದಚಿದ್ದೇಹಃ ಕಸ್ಯೇಹ ಸಂಸೃತಿಃ ॥೧೧॥

ಆತ್ಮವು ಅವಿನಾಶಿ. ಪ್ರಾಕೃತ ಮತ್ತು ಅಪ್ರಾಕೃತವಾದ ಗುಣಗಳಿಂದ ರಹಿತವಾದುದು. ಶುದ್ಧವೂ ಸ್ವಯಂಪ್ರಕಾಶವೂ ಆಗಿರತಕ್ಕದ್ದು. ಯಾವುದೇ ಆವರಣದಿಂದಲೂ ರಹಿತವಾದದ್ದು. ಶರೀರವಾದರೋ ನಾಶವಾಗತಕ್ಕುದು. ಗುಣಸಹಿತವಾದುದು. ಅಶುದ್ಧವಾದುದು. ಪ್ರಕಾಶಿಸಲ್ಪಡತಕ್ಕುದು. ಆವರಣದಿಂದ ಯುಕ್ತವಾದುದು. ಆತ್ಮವು ಅಗ್ನಿಯಂತೆ ಪ್ರಕಾಶಮಾನವಾದುದು. ಶರೀರವು ಕಟ್ಟಿಗೆಯಂತೆ ಅಚೇತನವಾದುದು.

ಆದರೂ ಇದಕ್ಕೆ ಜನ್ಮ-ಮೃತ್ಯುರೂಪವಾದ ಸಂಸಾರವಿದೆ. ಈ ಸಂಸಾರ ಯಾರಿಗೆ? ನನ್ನ ಈ ಪ್ರಶ್ನೆಗೆ ಉತ್ತರಿಸಿ ನನ್ನ ಸಂದೇಹವನ್ನು ನಿವಾರಿಸುವ ಕೃಪೆಮಾಡು ; ಕೃಷ್ಣ!"

ಶ್ರೀಭಗವಂತನು ಹೇಳುತ್ತಾನೆ :

ಯಾವದ್ದೇಹೇನ್ದ್ರಿಯಪ್ರಾಣೈರಾತ್ಮನಃ ಸಂನಿಕರ್ಷಣಮ್ ।
ಸಂಸಾರಃ ಫಲವಾಂಸ್ತಾವದಪಾರ್ಥೋಽಪ್ಯವಿವೇಕಿನಃ ॥೧೨॥

"ಪ್ರಿಯಉದ್ಧವನೇ! ಈ ಸಂಸಾರವು ಅನರ್ಥಕರವೆಂಬುದು ನಿಜ. ಆದರೂ ಎಲ್ಲಿಯವರೆಗೆ ದೇಹ-ಇಂದ್ರಿಯ-ಪ್ರಾಣಗಳೊಡನೆ ಆತ್ಮನ ಸಂಬಂಧವಿರುವುದೋ ಅಲ್ಲಿಯವರೆಗೂ ಇದು ಪುರುಷಾರ್ಥಪರವೆಂದೇ ಅನ್ನಿಸುತ್ತದೆ.

ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ ।
ಧ್ಯಾಯತೋ ವಿಷಯಾನಸ್ಯ ಸ್ವಪ್ನೇಽನರ್ಥಾಗಮೋ ಯಥಾ ॥೧೩॥

ಸ್ವಪ್ನದಲ್ಲಿ ಅನೇಕಪ್ರಕಾರವಾದ ವಿಪತ್ತುಗಳುಂಟಾಗುತ್ತವೆ. ವಾಸ್ತವವಾಗಿ ಆ ವಿಪತ್ತುಗಳು ಇರುವುದಿಲ್ಲ. ಆದರೂ ಸ್ವಪ್ನವು ಕಳೆಯುವವರೆಗೂ ಆ ವಿಪತ್ತುಗಳಿಂದ ಪಾರಾಗುವುದಕ್ಕಾಗುವುದಿಲ್ಲ. ಅದೇ ರೀತಿಯಲ್ಲಿ ಸಂಸಾರವೆಂಬುದು ಇಲ್ಲದೇ ಇದ್ದರೂ ಯಾವನು ಅದರಲ್ಲಿ ಪ್ರತೀತವಾಗುವ ವಿಷಯಗಳನ್ನು ಕುರಿತು ಸದಾಕಾಲದಲ್ಲಿಯೂ ಚಿಂತಿಸುತ್ತಿರುತ್ತಾನೆಯೋ ಅಂತಹವನಿಗೆ ಜನ್ಮ-ಮೃತ್ಯುರೂಪವಾದ ಸಂಸಾರದ ನಿವೃತ್ತಿಯು ಆಗುವುದೇ ಇಲ್ಲ.

ಯಥಾ ಹ್ಯಪ್ರತಿಬುದ್ಧಸ್ಯ ಪ್ರಸ್ವಾಪೋ ಬಹ್ವನರ್ಥಭೃತ್ ।
ಸ ಏವ ಪ್ರತಿಬುದ್ಧಸ್ಯ ನ ವೈ ಮೋಹಾಯ ಕಲ್ಪತೇ ॥೧೪॥

ನಿದ್ರೆಯಿಂದ ಎಚ್ಚರಗೊಳ್ಳದೇ ಇರುವವನಿಗೆ ಸ್ವಪ್ನವು ಅನರ್ಥಕಾರಿಯೂ ಆಪತ್ಕಾರಿಯೂ ಆಗಿರುತ್ತದೆ. ಆದರೆ ಎಚ್ಚೆತ್ತನಂತರ ಅವನಿಗೆ ಯಾವುದೇ ವಿಧವಾದ ಕನಸಿಗೆ ಸಂಬಂಧಿಸಿದ ಮೋಹವಾಗಲೀ ಶೋಕವಾಗಲೀ ಇರುವುದಿಲ್ಲ. ಅದೇ ರೀತಿಯಲ್ಲಿ ಜಾಗ್ರದವಸ್ಥೆಯೂ ದೀರ್ಘಕಾಲದ ಸ್ವಪ್ನವೆಂದು ಭಾವಿಸಿ ಎಚ್ಚೆತ್ತುಕೊಂಡು ಭಕ್ತಿ-ಜ್ಞಾನಮಾರ್ಗ

ವನ್ನು ಹಿಡಿದವನಿಗೆ ಶೋಕ-ಮೋಹಗಳು ನಿರಂತರವಾಗಿರುವುದಿಲ್ಲ. ಪರಮಾತ್ಮನ ಸಾಕ್ಷಾತ್ಕಾರವು ಲಭಿಸುತ್ತದೆ.

ಶೋಕಹರ್ಷಭಯಕ್ರೋಧಲೋಭಮೋಹಸ್ಪೃಹಾದಯಃ ।
ಅಹಙ್ಕಾರಸ್ಯ ದೃಶ್ಯನ್ತೇ ಜನ್ಮಮೃತ್ಯುಶ್ಚ ನಾತ್ಮನಃ ॥೧೫॥

ಉದ್ಧವ! ಶೋಕ, ಹರ್ಷ, ಭಯ, ಕ್ರೋಧ, ಲೋಭ, ಮೋಹ, ಇಚ್ಛೆ, ಹುಟ್ಟು-ಸಾವು ಇವೆಲ್ಲವೂ ದೇಹಾಭಿಮಾನಿಯಾದ ಜೀವನಲ್ಲಿ ಕಂಡುಬರುತ್ತವೆ. ಶುದ್ಧಾತ್ಮನಿಗೆ ಇವುಗಳಾವುದರ ಸಂಪರ್ಕವೂ ಇರುವುದಿಲ್ಲ.*

ದೇಹೇನ್ದ್ರಿಯಪ್ರಾಣಮನೋಽಭಿಮಾನೋ
ಜೀವೋಽನ್ತರಾತ್ಮಾ ಗುಣಕರ್ಮಮೂರ್ತಿಃ ।
ಸೂತ್ರಂ ಮಹಾನಿತ್ಯುರುಧೇವ ಗೀತಃ
ಸಂಸಾರ ಆಧಾವತಿ ಕಾಲತನ್ತ್ರಃ ॥೧೬॥

ದೇಹ, ಇಂದ್ರಿಯ, ಪ್ರಾಣ, ಮನಸ್ಸು ಮುಂತಾದುವುಗಳಲ್ಲಿ 'ನಾನು-ನನ್ನದು'—ಎಂದು ಅಭಿಮಾನಿಸಿದಾಗ ಅಂತರ್ಗತನಾಗಿರುವ ಜೀವನು ಗುಣ-ಕರ್ಮಗಳಿಂದ ಕಲ್ಪಿತವಾದ ಲಿಂಗಶರೀರವನ್ನು ಹೊಂದುತ್ತಾನೆ. ಇದನ್ನೇ ಸೂತ್ರಾತ್ಮನೆಂದೂ ಮಹತ್ತತ್ತ್ವವೆಂದೂ ಕರೆಯುತ್ತಾರೆ. ಜೀವಾತ್ಮನಿಗೆ ಇನ್ನೂ ಹಲವಾರು ನಾಮಧೇಯಗಳೂ ಇವೆ. ಗುಣ-ಕರ್ಮಮಯನಾದ ಜೀವಾತ್ಮನು ಕಾಲರೂಪಿಯಾದ ಪರಮೇಶ್ವರನಿಗೆ ಅಧೀನನಾಗಿದ್ದುಕೊಂಡು ಹುಟ್ಟು-ಸಾವುಗಳಿಂದ ಕೂಡಿದ ಈ ಸಂಸಾರದಲ್ಲಿ ಇಲ್ಲಿಂದಲ್ಲಿಗೂ ಅಲ್ಲಿಂದಿಲ್ಲಿಗೂ (ಶರೀರದಿಂದ-ಶರೀರಕ್ಕೆ) ಹೋಗಿ-ಬರುತ್ತಿರುತ್ತಾನೆ.

ಅಮೂಲಮೇತದ್ಬಹುರೂಪರೂಪಿತಂ
ಮನೋವಚಃಪ್ರಾಣಶರೀರಕರ್ಮ ।

---

*ಸುಪ್ತೇಽಹಮೀ ನ ದೃಶ್ಯನ್ತೇ ಸುಖದೋಷಪ್ರವೃತ್ತಯಃ ।
ಅತಸ್ತಸ್ಯೈವ ಸಂಸಾರೋ ನ ಮೇ ಸಂಸೃತಿ ಸಾಕ್ಷಿಣಃ ॥

ಅಹಂಕಾರವು ಲೀನವಾದ ಸುಷುಪ್ತಿಯಲ್ಲಿ ಸುಖ-ದುಃಖಾದಿಗಳಾವುವೂ ಇರುವುದಿಲ್ಲ. ಆದುದರಿಂದ ಸಂಸಾರವೆಂಬುದು ಅಹಂಕಾರಕ್ಕೇ ಹೊರತು ಅಹಂಕಾರಸಾಕ್ಷಿಯಾದ ನನಗಲ್ಲ. (ಭಾವಾರ್ಥದೀಪಿಕಾ)

ಜ್ಞಾನಾಸಿನೋಪಾಸನಯಾ ಶಿತೇನ-
ಚ್ಛಿತ್ತ್ವಾ ಮುನೇರ್ಗಾಂ ವಿಚರತ್ಯತೃಷ್ಣಃ ॥೧೭॥

ವಾಸ್ತವವಾಗಿ ಉದ್ಧವ! ಮನಸ್ಸು, ಮಾತು, ಪ್ರಾಣ ಮತ್ತು ಶರೀರಗಳು ಅಹಂಕಾರದ ಕಾರ್ಯಗಳೇ ಆಗಿವೆ. ಅಹಂಕಾರವೆಂಬುದು ಬುಡವೇ ಇಲ್ಲದ್ದು. ಆದರೂ ದೇವ-ಮನುಷ್ಯರೇ ಮೊದಲಾದ ಅನೇಕ ರೂಪಗಳಿಂದ ಇದು ಹೆಸರುವಾಸಿಯಾಗಿದೆ. ಮನನಶೀಲನಾದ ಮುನಿಯು ತೀಕ್ಷ್ಣವಾದ ಉಪಾಸನೆಯಿಂದ ಸಂಪಾದಿಸಿದ ಜ್ಞಾನವೆಂಬ ಖಡ್ಗದಿಂದ ದೇಹಾದಿಗಳಲ್ಲಿ ಅಭಿಮಾನವನ್ನು ಹುಟ್ಟಿಸುವ ಅಹಂಕಾರದ ಮೂಲೋಚ್ಛೇದನವನ್ನು ಮಾಡಿ ಯಾವ ವಿಧವಾದ ಆಸೆ-ಆಕಾಂಕ್ಷೆಗಳೂ ಇಲ್ಲದವನಾಗಿ ಪೃಥ್ವಿಯಲ್ಲಿ ಸಂಚರಿಸುತ್ತಾನೆ.

ಜ್ಞಾನಂ ವಿವೇಕೋ ನಿಗಮಸ್ತಪಶ್ಚ
ಪ್ರತ್ಯಕ್ಷಮೈತಿಹ್ಯಮಥಾನುಮಾನಮ್ ।
ಆದ್ಯನ್ತಯೋರಸ್ಯ ಯದೇವ ಕೇವಲಂ
ಕಾಲಶ್ಚ ಹೇತುಶ್ಚ ತದೇವ ಮಧ್ಯೇ ॥೧೮॥

ತತ್ತ್ವಗಳ ಸ್ವರೂಪವನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಚೆನ್ನಾಗಿ ಮನದಟ್ಟಾಗುವಂತೆ ತಿಳಿದುಕೊಳ್ಳುವುದೇ ಜ್ಞಾನ. ಅದೇ ವಿವೇಕ. ಇದಕ್ಕೆ ಸಾಧನಗಳೆಂದರೆ ವೇದ, ತಪಸ್ಸು ಪ್ರತ್ಯಕ್ಷ–ಎಂದರೆ ಸ್ವಾನುಭವ, ಐತಿಹ್ಯವೆಂದರೆ ಗುರೂಪದೇಶ, ಅನುಮಾನ (ತರ್ಕ), ಇವುಗಳೇ ಸಾಧನಗಳು. ಈ ಸಾಧನಗಳ ಮೂಲಕವಾಗಿ ತಿಳಿದುಬರುವುದೇನೆಂದರೆ ಈ ಪ್ರಪಂಚದ ಆದಿಯಲ್ಲಿ ಮತ್ತು ಅಂತ್ಯದಲ್ಲಿ ಪ್ರಕಾಶಕವೂ ಕಾರಣವೂ ಆದ ಯಾವ ಒಂದೇ ವಸ್ತುವು ಸತ್ಯರೂಪವಾಗಿದ್ದಿತೋ ಅದೇ ವಸ್ತುವೇ ಮಧ್ಯಕಾಲದಲ್ಲಿಯೂ ಜಗದ್ರೂಪವಾಗಿ ತೋರುವುದೇ ಹೊರತು ಅದಕ್ಕಿಂತ ಬೇರೆಯದು ಯಾವುದೂ ಇಲ್ಲ.

ಯಥಾ ಹಿರಣ್ಯಂ ಸ್ವಕೃತಂ ಪುರಸ್ತಾತ್
ಪಶ್ಚಾಚ್ಚ ಸರ್ವಸ್ಯ ಹಿರಣ್ಮಯಸ್ಯ ।
ತದೇವ ಮಧ್ಯೇ ವ್ಯವಹಾರ್ಯಮಾಣಂ
ನಾನಾಪದೇಶೈರಹಮಸ್ಯ ತದ್ವತ್ ॥೧೯॥

ಉದ್ಧವ! ಚಿನ್ನದಿಂದ ಕುಂಡಲ-ಕಂಕಣ-ಕಟಿಸೂತ್ರ ಮುಂತಾಗಿ ಅನೇಕ ಬಗೆಯ ಆಭರಣಗಳನ್ನು ಮಾಡುತ್ತಾರೆ. ಆಭರಣಗಳ ರೂಪದಲ್ಲಿಯೂ ಅದು ಚಿನ್ನವೇ ಆಗಿರುತ್ತದೆ. ಆಭರಣಗಳನ್ನು ಮಾಡುವ ಮೊದಲೂ ಅದು ಚಿನ್ನವೇ ಆಗಿದ್ದಿತು. ಕುಂಡಲ-ಕಂಕಣಾದಿಗಳನ್ನು ಮಾಡಿಸಿದಾಗ ಅದು ಚಿನ್ನವೇ ಆಗಿದ್ದರೂ ವ್ಯಾವಹಾರಿಕವಾಗಿ ಕುಂಡಲ-ಕಂಕಣಗಳೆಂಬ ಹೆಸರನ್ನು ಪಡೆಯಿತು. ಆದರೆ ಅದು ಚಿನ್ನಕ್ಕಿಂತ ಬೇರೆಯಾಗಲಿಲ್ಲ. ಒಡವೆಗಳನ್ನು ಅಳಿಸಿದಾಗ ಪುನಃ ಅದು ಚಿನ್ನವಾಗಿಯೇ ರೂಪಗೊಂಡಿತು. ಅಂತೆಯೇ ಈ ವಿಶ್ವದ ಆದಿಯಲ್ಲಿ, ಅಂತ್ಯದಲ್ಲಿ ಮತ್ತು ಮಧ್ಯದಲ್ಲಿ ನಾನೊಬ್ಬನೇ ಇರತಕ್ಕವನು. ಈ ಜಗತ್ತಿಗೆ ಕಾರಣಭೂತನಾದ ನಾನೇ ನಾನಾವಿಧವಾದ ವ್ಯವಹಾರಗಳಿಗೂ ವಿಷಯನಾಗಿರತಕ್ಕವನೇ ಹೊರತು ನನಗಿಂತ ಬೇರೆಯಾದ ಜಗತ್ತಿಲ್ಲ.

ವಿಜ್ಞಾನಮೇತತ್ತ್ರಿಯವಸ್ಥಮಙ್ಗ
ಗುಣತ್ರಯಂ ಕಾರಣಕಾರ್ಯಕರ್ತೃ ।
ಸಮನ್ವಯೇನ ವ್ಯತಿರೇಕತಶ್ಚ
ಯೇನೈವ ತುರ್ಯೇಣ ತದೇವ ಸತ್ಯಮ್ ॥೨೦॥

ಪ್ರಿಯಸಖನೇ! ಮನಸ್ಸಿಗೆ ಜಾಗ್ರತ್-ಸ್ವಪ್ನ ಮತ್ತು ಸುಷುಪ್ತಿಗಳೆಂಬ ಮೂರು ಅವಸ್ಥೆಗಳಿವೆ. ಇದಕ್ಕೆ ಕಾರಣಗಳಾದುವುಗಳು ಸತ್ತ್ವ-ರಜಸ್ಸು ಮತ್ತು ತಮಸ್ಸುಗಳೆಂಬ ಮೂರು ಗುಣಗಳು. ಈ ಗುಣತ್ರಯಕಾರ್ಯಗಳಾದ ಆಧ್ಯಾತ್ಮ(ಇಂದ್ರಿಯಗಳು) ಆಧಿಭೂತ (ಪೃಥಿವ್ಯಾದಿಗಳು) ಆಧಿದೈವ (ಕರ್ತಾ) ಎಂಬ ಮೂರು ವಿಧವಾಗಿರುವ ಈ ಜಗತ್ತು ಯಾವ ನಾಲ್ಕನೆಯದಾದ (ತುರೀಯವಾದ) ಪರಬ್ರಹ್ಮವಸ್ತುವಿನ ವ್ಯಾಪ್ತಿಯಿಂದ ಪ್ರಕಾಶಿಸುವುದೋ, ಸಮಾಧಿಸ್ಥಿತಿಯಲ್ಲಿಯೂ ಯಾವುದು ವಿಶೇಷವಾಗಿ ಪ್ರಕಾಶಿಸುವುದೋ ಅದೇ ಸತ್ಯಸ್ವರೂಪವು.

ನ ಯತ್ಪುರಸ್ತಾದುತ ಯನ್ನ ಪಶ್ಚಾ-
ನ್ಮಧ್ಯೇ ಚ ತನ್ನ ವ್ಯಪದೇಶಮಾತ್ರಮ್ ।
ಭೂತಂ ಪ್ರಸಿದ್ಧಂ ಚ ಪರೇಣ ಯದ್ಯತ್
ತದೇವ ತತ್ಸ್ಯಾದಿತಿ ಮೇ ಮನೀಷಾ ॥೨೧॥

ಉದ್ಧವ! ಸೃಷ್ಟಿಗೆ ಮೊದಲು ಯಾವುದು ಇರಲಿಲ್ಲವೋ ಪ್ರಳಯವಾದನಂತರವೂ ಯಾವುದು ಇರುವುದಿಲ್ಲವೋ ಅಂತಹ ಜಗತ್ತು ಮಧ್ಯದಲ್ಲಿಯೂ ಇರುವುದಿಲ್ಲವೆಂದು ತಿಳಿಯಬೇಕು. ಮಧ್ಯದಲ್ಲಿ ಕಾಣುತ್ತಿರುವ ಈ ಪ್ರಪಂಚವು ವ್ಯವಹಾರಮಾತ್ರವಾಗಿಯೂ ನಾಮಮಾತ್ರವಾಗಿಯೂ ಇರುತ್ತದೆ. ಯಾವುದು (ಯಾವ ಜಗತ್ತು) ಮತ್ತೊಂದರಿಂದ (ಪರಬ್ರಹ್ಮವಸ್ತುವಿನಿಂದ) ಜನಿಸಿ ಆ ಬ್ರಹ್ಮವಸ್ತುವಿನಿಂದಲೇ ಪ್ರಕಾಶಿಸಲ್ಪಡುವುದೋ ಆ ವಸ್ತುವು ತನಗೆ ಕಾರಣವೂ ಪ್ರಕಾಶಕವೂ ಆದ ಆ ಅನ್ಯವಸ್ತುವಿನ (ಪರಬ್ರಹ್ಮವಸ್ತುವಿನ) ವಿಸ್ತಾರವೇ ಹೊರತು ಬೇರೆಯಲ್ಲ.

ಅವಿದ್ಯಮಾನೋಽಪ್ಯವಭಾಸತೇ ಯೋ
ವೈಕಾರಿಕೋ ರಾಜಸಸರ್ಗ ಏಷಃ ।
ಬ್ರಹ್ಮ ಸ್ವಯಂಜ್ಯೋತಿರತೋ ವಿಭಾತಿ
ಬ್ರಹ್ಮೇನ್ದ್ರಿಯಾರ್ಥಾತ್ಮ ವಿಕಾರಚಿತ್ರಮ್ ॥೨೨॥

ರಾಜಸವಿಕಾರಮಯವಾದ ಯಾವ ಈ ಜಗತ್ತಿರುವುದೋ ಅದು ಮಿಥ್ಯೆಯಾದರೂ ಸ್ವಯಂಪ್ರಕಾಶನಾದ ಆತ್ಮನಿಂದ ಪ್ರಕಾಶವನ್ನು ಪಡೆದು ದೃಶ್ಯವಾಗಿ ಕಾಣುತ್ತದೆ. ಆದುದರಿಂದ ಶ್ರೋತ್ರವೇ ಮೊದಲಾದ ಇಂದ್ರಿಯ ರೂಪದಲ್ಲಿ, ಶಬ್ದ-ಸ್ಪರ್ಶಾದಿ ವಿಷಯಗಳ ರೂಪದಲ್ಲಿ, ಮನಸ್ಸಿನ ರೂಪದಲ್ಲಿ, ದೇವತೆಗಳ ರೂಪದಲ್ಲಿ, ಆಕಾಶವೇ ಮೊದಲಾದ ಪಂಚಭೂತಗಳ ರೂಪದಲ್ಲಿ ಬ್ರಹ್ಮವಸ್ತುವೇ ಪ್ರಕಾಶಿಸುತ್ತದೆ. ಸಮಸ್ತವೂ ಬ್ರಹ್ಮಮಯವೇ ಆಗಿದೆ.

ಏವಂ ಸ್ಫುಟಂ ಬ್ರಹ್ಮವಿವೇಕಹೇತುಭಿಃ
ಪರಾಪವಾದೇನ ವಿಶಾರದೇನ ।
ಛಿತ್ತ್ವಾಽಽತ್ಮಸನ್ದೇಹಮುಪಾರಮೇತ
ಸ್ವಾನನ್ದತುಷ್ಟೋಽಖಿಲಕಾಮುಕೇಭ್ಯಃ ॥೨೩॥

ಪ್ರಿಯಸಖನೇ! ಶ್ರವಣ-ಮನನ-ನಿದಿಧ್ಯಾಸನ ಮತ್ತು ಸ್ವಾನುಭೂತಿಗಳು ಬ್ರಹ್ಮತತ್ತ್ವಸಾಧನೆಗೆ ಸಾಧಕಗಳಾಗಿವೆ. ಆತ್ಮಾನಾತ್ಮವಿವೇಚನೆಯಲ್ಲಿ ಕೃಪಾಳುವಾದ ಬ್ರಹ್ಮಜ್ಞಾನಿಯಾದ ಗುರುದೇವನೂ ಸಹಾಯಕನಾಗು

ತ್ತಾನೆ. ಈ ಎಲ್ಲ ಸಾಧನಗಳಿಂದ ದೇಹಾದಿಗಳೇ ಮೊದಲಾದ ಅನಾತ್ಮವಸ್ತುಗಳನ್ನು ನಿಷೇಧಿಸಬೇಕು. ಹೀಗೆ ಅನಾತ್ಮವಸ್ತುಗಳನ್ನು ನಿಷೇಧಿಸುತ್ತಾ ಆತ್ಮವಿಷಯಕವಾದ ಸಂದೇಹಗಳನ್ನು ಛಿನ್ನ-ಭಿನ್ನಗೊಳಿಸಿ ತನ್ನ ಆನಂದಸ್ವರೂಪನಾದ ಆತ್ಮನಲ್ಲಿಯೇ ಮಗ್ನನಾಗಬೇಕು. ಮತ್ತು ಸಮಸ್ತವಾದ ವಿಷಯವಾಸನೆಗಳಿಂದಲೂ ರಹಿತನಾಗಬೇಕು.

ನಾತ್ಮಾ ವಪುಃ ಪಾರ್ಥಿವಮಿನ್ದ್ರಿಯಾಣಿ
ದೇವಾ ಹ್ಯಸುರ್ವಾಯುರ್ಜಲಂ ಹುತಾಶಃ ।
ಮನೋಽನ್ನಮಾತ್ರಂ ಧಿಷಣಾ ಚ ಸತ್ತ್ವ-
ಮಹಙ್ಕೃತಿಃ ಖಂ ಕ್ಷಿತಿರರ್ಥಸಾಮ್ಯಮ್ ॥೨೪॥

ಉದ್ಧವ! ಅನಾತ್ಮವಸ್ತುಗಳನ್ನು ಈ ರೀತಿಯಲ್ಲಿ ನಿಷೇಧ ಗೊಳಿಸಬೇಕು. ಮಡಕೆಯಂತೆ ಶರೀರವು ಕೂಡ ಪೃಥ್ವಿಯ ವಿಕಾರವಾದುದರಿಂದ ಆತ್ಮವಲ್ಲ. ವಾಯು, ಇಂದ್ರಿಯಗಳು, ಅವುಗಳ ಅಧಿಷ್ಠಾತೃದೇವತೆಗಳು, ಪ್ರಾಣ, ಜಲ, ಅಗ್ನಿ ಮತ್ತು ಮನಸ್ಸು—ಇವುಗಳೂ ಆತ್ಮವಲ್ಲ. ಏಕೆಂದರೆ ಇವುಗಳ ಧಾರಣ-ಪೋಷಣೆಗಳೂ ಶರೀರದಂತೆ ಅನ್ನದ ಮೂಲಕವಾಗಿ ಆಗುತ್ತದೆ. ಬುದ್ಧಿ, ಚಿತ್ತ, ಅಹಂಕಾರ, ಪೃಥ್ವೀ, ಶಬ್ದ-ಸ್ಪರ್ಶಾದಿ ತನ್ಮಾತ್ರೆಗಳು ಪ್ರಕೃತಿ—ಇವುಗಳು ಕೂಡ ಘಟದಂತೆ ಜಡಪದಾರ್ಥಗಳಾದುದರಿಂದ ಆತ್ಮವಲ್ಲ.

ಸಮಾಹಿತೈಃ ಕಃ ಕರಣೈರ್ಗುಣಾತ್ಮಭಿ-
ರ್ಗುಣೋ ಭವೇನ್ಮತ್ಸುವಿವಿಕ್ತಧಾಮ್ನಃ ।
ವಿಕ್ಷಿಪ್ಯಮಾಣೈರುತ ಕಿಂ ನು ದೂಷಣಂ
ಘನೈರುಪೇತೈರ್ವಿಗತೈ ರವೇಃ ಕಿಮ್ ॥೨೫॥

ಪ್ರಿಯಸಖನೇ! ಹೀಗೆ ನನ್ನ ನಿಜಸ್ವರೂಪವನ್ನು ಆತ್ಮಾನಾತ್ಮ ವಿವೇಕದಿಂದ ವಿಂಗಡಿಸಿ ತಿಳಿದುಕೊಂಡಿರುವ ಜ್ಞಾನಿಗೆ—ಸೂರ್ಯನಿಗೆ ಮೋಡಗಳು ಮುತ್ತುವುದರಿಂದಾಗಲೀ ದೂರಸರಿದು ಹೋಗುವುದರಿಂದಾ ಗಲೀ ಯಾವ ಗುಣ-ದೋಷಗಳೂ ಬಾಧಿಸದೇ ಇರುವಂತೆ ತ್ರಿಗುಣಾತ್ಮಕವಾದ

ಬುದ್ಧೀಂದ್ರಿಯಗಳು ನಿಶ್ಚಲವಾಗುವುದರಿಂದಾಗಲೀ ಚಂಚಲವಾಗುವುದರಿಂದಾಗಲೀ ಯಾವ ವಿಧವಾದ ಗುಣ-ದೋಷಗಳೂ ಉಂಟಾಗುವುದಿಲ್ಲ.

ಯಥಾ ನಭೋ ವಾಯ್ವನಲಾಮ್ಬುಭೂಗುಣೈ-
ರ್ಗತಾಗತೈರ್ವರ್ತುಗುಣೈರ್ನ ಸಜ್ಜತೇ ।
ತಥಾಕ್ಷರಂ ಸತ್ತ್ವರಜಸ್ತಮೋಮಲೈ-
ರಹಂಮತೇಃ ಸಂಸೃತಿಹೇತುಭಿಃ ಪರಮ್ ॥೨೬॥

ಯಾವ ರೀತಿಯಲ್ಲಿ ಆಕಾಶವು ವಾಯುವಿನಿಂದ ಶೋಷಿಸಲ್ಪಡುವುದಿಲ್ಲವೋ, ಅಗ್ನಿಯಿಂದ ದಹಿಸಲ್ಪಡುವುದಿಲ್ಲವೋ, ನೀರಿನಿಂದ ನೆನೆಸಲ್ಪಡುವುದಿಲ್ಲವೋ, ಭೂಮಿಯಿಂದ ಧೂಳಿ-ಧೂಸರಿತವಾಗುವುದಿಲ್ಲವೋ, ಋತುಧರ್ಮಗಳಾದ ಶೀತೋಷ್ಣಗಳಿಂದ ಯಾವ ವಿಧವಾದ ಪರಿಣಾಮವನ್ನೂ ಹೊಂದುವುದಿಲ್ಲವೋ–ಅದೇ ರೀತಿಯಲ್ಲಿ ಅಹಂಕಾರಕ್ಕಿಂತ ಅತೀತನಾದ ಅಕ್ಷರನಾದ ಪರಮಾತ್ಮನ ವಿಷಯದಲ್ಲಿ ಸಂಸಾರಕ್ಕೆ ಕಾರಣಗಳಾದ ಸತ್ತ್ವರಜಸ್ತಮೋಗುಣಗಳು ಯಾವ ವಿಧವಾದ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಪರಮಾತ್ಮನಿಗೆ ಈ ತ್ರಿಗುಣಗಳಿಂದ ಯಾವ ದೋಷವೂ ಉಂಟಾಗುವುದಿಲ್ಲ.

ತಥಾಪಿ ಸಙ್ಗಃ ಪರಿವರ್ಜನೀಯೋ
ಗುಣೇಷು ಮಾಯಾರಚಿತೇಷು ತಾವತ್ ।
ಮದ್ಭಕ್ತಿಯೋಗೇನ ದೃಢೇನ ಯಾವ-
ದ್ರಜೋ ನಿರಸ್ಯೇತ ಮನಃಕಷಾಯಃ ॥೨೭॥

ಆದರೂ ಎಂದಿನವರೆಗೆ ನನ್ನಲ್ಲಿಟ್ಟಿರುವ ದೃಢವಾದ ಭಕ್ತಿಯೋಗದ ಮೂಲಕವಾಗಿ ರಜೋಗುಣರೂಪವಾದ ಮನಸ್ಸಿನ ಕಷಾಯವು ಇಂಗಿಹೋಗಿರುವುದಿಲ್ಲವೋ ಅಂದಿನವರೆಗೂ ಮಾಯಾನಿರ್ಮಿತವಾದ ಶಬ್ದಾದಿ ವಿಷಯಗಳ ಸಂಗವನ್ನು ಸಂಪೂರ್ಣವಾಗಿ ತೊರೆಯಬೇಕು.

ಯಥಾಽಮಯೋಽಸಾಧುಚಿಕಿತ್ಸಿತೋ ನೃಣಾಂ
ಪುನಃ ಪುನಃ ಸನ್ತುದತಿ ಪ್ರರೋಹನ್ ।
ಏವಂ ಮನೋಽಪಕ್ವಕಷಾಯಕರ್ಮ
ಕುಯೋಗಿನಂ ವಿಧ್ಯತಿ ಸರ್ವಸಙ್ಗಮ್ ॥೨೮॥

ರೋಗಕ್ಕೆ ಸರಿಯಾಗಿ ಚಿಕಿತ್ಸೆಯಾಗದಿದ್ದರೆ ಅದು ಪುನಃ ಪುನಃ ಉಲ್ಬಣಿಸಿ ಉಪದ್ರವವನ್ನು ಮನುಷ್ಯನಿಗೆ ಕೊಡುತ್ತಲೇ ಇರುತ್ತದೆ. ಅದೇ ರೀತಿಯಲ್ಲಿ ಯೋಗಿಯಾದವನು ಮನೋರೋಗಕ್ಕೆ ಶಮ-ದಮಾದಿಗಳ ಮೂಲಕ ಚಿಕಿತ್ಸೆಯನ್ನು ಮಾಡುತ್ತಲೇ ಇರುತ್ತಾನೆ. ಆದರೂ ರಾಗ-ದ್ವೇಷಾದಿಗಳಿಂದ ಕೂಡಿದ ಕರ್ಮಸಂಸ್ಕಾರಗಳು ಸಂಪೂರ್ಣವಾಗಿ ತೊಲಗದೇ ಇದ್ದಾಗ ಪುತ್ರ-ಕಳತ್ರಾದಿಗಳಲ್ಲಿಯೂ ಆಸಕ್ತಿಯನ್ನು ಹೊಂದಿರುವ ಮನಸ್ಸು ಜ್ಞಾನಸಿದ್ಧಿಯಾಗದಿರುವ ಸರ್ವಸಂಗನಾದ ಯೋಗಿಯನ್ನು ಜ್ಞಾನಯೋಗದಿಂದ ಭ್ರಷ್ಟಗೊಳಿಸಿಬಿಡುತ್ತದೆ.

ಕುಯೋಗಿನೋ ಯೇ ವಿಹತಾನ್ತರಾಯೈ-
ರ್ಮನುಷ್ಯಭೂತೈಸ್ತ್ರಿದಶೋಪಸೃಷ್ಟೈಃ ।
ತೇ ಪ್ರಾಕ್ತನಾಭ್ಯಾಸಬಲೇನ ಭೂಯೋ
ಯುಞ್ಜನ್ತಿ ಯೋಗಂ ನ ತು ಕರ್ಮತನ್ತ್ರಮ್ ॥೨೮॥

ಅತ್ಯಲ್ಪವಾದ ಮನಸ್ಸಿನ ವಿಕ್ಷೇಪದಿಂದಲೇ ಯೋಗಿಯು ಯೋಗಭ್ರಷ್ಟನಾಗಿ ಬಿಡುವುದಾದರೆ ಅಂತಹ ಯೋಗಾಭ್ಯಾಸದಿಂದ ಆಗುವ ಪ್ರಯೋಜನವಾದರೂ ಏನು? ಎಂದರೆ :

ಸಂಪೂರ್ಣವಾಗಿ ಜ್ಞಾನಸಿದ್ಧಿಯನ್ನು ಪಡೆಯದ ಯೋಗಿಯು ದೇವತೆಗಳ ಪ್ರೇರಣೆಯಂತೆ ಮನುಷ್ಯರೂಪದಲ್ಲಿರುವ ಹೆಂಡತಿ-ಮಕ್ಕಳ ಮೂಲಕವಾಗಿ ಬಂದೊದಗುವ ವಿಘ್ನಗಳಿಂದ ಪೀಡಿತನಾಗಿ ಯೋಗ ಭ್ರಷ್ಟನಾದರೂ ಅವನು ಅವಸಾನಹೊಂದಿದನಂತರ ಜನ್ಮಾಂತರದಲ್ಲಿ ಹಿಂದಿನ ಜನ್ಮದಲ್ಲಾದ ಅಭ್ಯಾಸಬಲದಿಂದ ಯೋಗಮಾರ್ಗವನ್ನು ಮುಂದು ವರಿಸುವನೇ ಹೊರತು ಪುನಃ ಕರ್ಮಮಾರ್ಗವನ್ನು ಆಶ್ರಯಿಸುವುದಿಲ್ಲ.*

---

*ಯಸ್ಮಾತ್ತದೇತೇಷಾಂ ನ ಪ್ರಿಯಂ ಯದೇತನ್ಮನುಷ್ಯಾ ವಿದ್ಯುಃ ಇತಿ ।

ತಮಗಿಂತಲೂ ಮನುಷ್ಯರು ನಿಕೃಷ್ಟರೆನಿಸಿರುವುದರಿಂದ ಅವರು ಬ್ರಹ್ಮಜ್ಞಾನವನ್ನು ಪಡೆಯುವುದು ದೇವತೆಗಳಿಗೆ ಪ್ರಿಯವಲ್ಲ. ಆದಕಾರಣ ಅವರು ವಿಘ್ನಮಾಡುವರು. ಸಾಧನಮಾರ್ಗದಿಂದ ವಿಚಲಿತನಾದ ವ್ಯಕ್ತಿಯು ಸಿದ್ಧಿಯನ್ನು ಗಳಿಸದೇ ಉಭಯ

ಕರೋತಿ ಕರ್ಮ ಕ್ರಿಯತೇ ಚ ಜನ್ತುಃ
ಕೇನಾಪ್ಯಸೌ ಚೋದಿತ ಆನಿಪಾತಾತ್ ।
ನ ತತ್ರ ವಿದ್ವಾನ್ಪ್ರಕೃತೌ ಸ್ಥಿತೋಽಪಿ
ನಿವೃತ್ತತೃಷ್ಣಃ ಸ್ವಸುಖಾನುಭೂತ್ಯಾ ॥೩೦॥

ಉದ್ಧವ! ಜೀವನು ತನ್ನ ಹಿಂದಿನ ಜನ್ಮದಲ್ಲಾದ ಸಂಸ್ಕಾರದಿಂದ ಪ್ರೇರಿತನಾಗಿ ಹುಟ್ಟಿದಾಗಿನಿಂದ ಸಾಯುವವರೆಗೂ ಕರ್ಮಗಳಲ್ಲಿಯೇ ತೊಡಗಿರುತ್ತಾನೆ. ತಾನು ಮಾಡಿದ ಕರ್ಮಗಳಲ್ಲಿ ಇಷ್ಟವಾದ ಮತ್ತು ಅನಿಷ್ಟವಾದ ಬುದ್ಧಿಯನ್ನು ಇಟ್ಟುಕೊಂಡು ಅದಕ್ಕೆ ಅನುಸಾರವಾಗಿ ಹರ್ಷ-ವಿಷಾದವೇ ಮೊದಲಾದ ವಿಕಾರಗಳನ್ನು ಹೊಂದುತ್ತಾನೆ. ಬ್ರಹ್ಮತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡಿರುವ ಯೋಗಿಯು ಯಾವುದೋ ಪ್ರಕೃತಿಭೂತವಾದ ಶರೀರದಲ್ಲಿಯೇ ಇದ್ದರೂ ಹಿಂದಿನ ಜನ್ಮದ ಸಂಸ್ಕಾರಕ್ಕೆ ಅನುಸಾರವಾಗಿ ಕರ್ಮಗಳನ್ನು ಮಾಡುತ್ತಿದ್ದರೂ ಅವುಗಳಲ್ಲಿ ಇಷ್ಟಾನಿಷ್ಟಬುದ್ಧಿಯನ್ನಿಟ್ಟುಕೊಂಡು ಹರ್ಷ-ವಿಷಾದ ಇವೇ ಮೊದಲಾದ ವಿಕಾರಗಳನ್ನು ಹೊಂದುವುದಿಲ್ಲ. ಏಕೆಂದರೆ ಆನಂದರೂಪವಾದ ಆತ್ಮಸಾಕ್ಷಾತ್ಕಾರದಿಂದ ಅವನ ಸಂಸಾರಸಂಬಂಧವಾದ ಸಮಸ್ತ ಆಶಾಪಾಶಗಳೂ ಕತ್ತರಿಸಿಹೋಗಿರುತ್ತವೆ.

ತಿಷ್ಠನ್ತಿಮಾಸೀನಮುತ ವ್ರಜನ್ತಂ
ಶಯಾನಮುಕ್ಷನ್ತಮದನ್ತಮನ್ನಮ್ ।
ಸ್ವಭಾವಮನ್ಯತ್ಕಿಮಪೀಹಮಾನ-
ಮಾತ್ಮಾನಮಾತ್ಮಸ್ಥಮತಿರ್ನ ವೇದ ॥೩೧॥

ಯಾವನು ತನ್ನ ಸ್ವರೂಪದಲ್ಲಿ ನೆಲೆಗೊಂಡಿರುವನೋ ಆತ್ಮದರ್ಶನ

ಭ್ರಷ್ಟನಾಗಿ ತುಂಡು ಮೋಡದ ಹಾಗೆ ಹಾಳಾಗುವುದಿಲ್ಲವೇ?–ಎಂಬ ಅರ್ಜುನನ ಪ್ರಶ್ನೆಗೆ ಶ್ರೀಕೃಷ್ಣನು ಶ್ರೀಗೀತೆಯಲ್ಲಿ ಸಮಾಧಾನ ಹೇಳುತ್ತಾನೆ.

ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ ।
ನ ಹಿ ಕಲ್ಯಾಣಕೃತ್ಕಶ್ಚಿದ್ದುರ್ಗತಿಂ ತಾತ ಗಚ್ಛತಿ ॥ (೬-೪೦)

ಯೋಗಭ್ರಷ್ಟನಿಗೆ ಇಹಪರಗಳಲ್ಲಿ ಎಲ್ಲಿಯೂ ಕೆಡುಕಿಲ್ಲ. ಒಳ್ಳೆಯದನ್ನು ಮಾಡಿದವನು ಎಂದೂ ಕೆಡುವುದಿಲ್ಲ.

ದಿಂದುಂಟಾದ ಆನಂದದಲ್ಲಿ ಮುಳುಗಿಹೋಗಿರುವ ಅಂತಹ ಬ್ರಹ್ಮಜ್ಞಾನಿಗೆ ತನ್ನ ಶರೀರವು ನಿಂತಿರುವುದೆಂಬ, ಕುಳಿತಿರುವುದೆಂಬ, ಚಲಿಸುತ್ತಿದೆಯೆಂಬ, ಮಲಗಿರುವುದೆಂಬ, ಮೂತ್ರವನ್ನು ವಿಸರ್ಜಿಸುತ್ತಿರುವುದೆಂಬ, ಅನ್ನವನ್ನು ತಿನ್ನುತ್ತಿರುವುದೆಂಬ ಅಥವಾ ಬೇರೆ ಯಾವುದಾದರೂ ಸ್ವಾಭಾವಿಕವಾದ ಕರ್ಮವನ್ನು ಮಾಡುತ್ತಿರುವುದೆಂಬ ಅರಿವೇ ಇರುವುದಿಲ್ಲ. ಆತ್ಮಜ್ಞಾನಿಗೆ ಸಮಸ್ತವೂ ಬ್ರಹ್ಮಮಯವಾಗಿಯೇ ತೋರುವುದರಿಂದ 'ನಾನು ನನ್ನದು'–ಎಂಬ ಅಹಂಕಾರವೂ ಹೋಗಿರುವುದರಿಂದ ಬ್ರಹ್ಮದ ಹೊರತಾಗಿ ಬೇರಾವುದರ ಅರಿವೂ ಅವನಿಗಿರುವುದಿಲ್ಲ.

ಯದಿ ಸ್ಮ ಪಶ್ಯತ್ಯಸದಿನ್ದ್ರಿಯಾರ್ಥಂ
ನಾನಾನುಮಾನೇನ ವಿರುದ್ಧಮನ್ಯತ್ ।
ನ ಮನ್ಯತೇ ವಸ್ತುತಯಾ ಮನೀಷೀ
ಸ್ವಾಪ್ನಂ ಯಥೋತ್ಥಾಯ ತಿರೋದಧಾನಮ್ ॥೩೨॥

ಆತ್ಮಸಾಕ್ಷಾತ್ಕಾರಮಾಡಿಕೊಂಡಿರುವ ಯೋಗಿಯು ಒಮ್ಮೆ ಬಹಿರ್ಮುಖಗಳಾದ ಅಸತ್ತಾದ ಇಂದ್ರಿಯಗಳಿಂದ ಅವುಗಳ ವಿಷಯಗಳಾದ ರೂಪಾದಿಗಳನ್ನು ನೋಡಿದರೂ ಅವುಗಳು ತನ್ನ ಆತ್ಮಕ್ಕಿಂತ ಭಿನ್ನವಾದುವುಗಳೆಂದು ತಿಳಿದುಕೊಳ್ಳುವುದಿಲ್ಲ. ಏಕೆಂದರೆ ಅವುಗಳ ಸತ್ತೆಯು ಯುಕ್ತಿಯಿಂದಾಗಲೀ ಪ್ರಮಾಣದಿಂದಾಗಲೀ ಸ್ವಾನುಭೂತಿ ಯಿಂದಾಗಲೀ ಸಿದ್ಧವಾಗುವುದಿಲ್ಲ. ಯಾವ ರೀತಿಯಲ್ಲಿ ನಿದ್ರೆಯು ಕಳೆದನಂತರ ಸ್ವಪ್ನದಲ್ಲಿ ನೋಡಿದ ಪದಾರ್ಥಗಳನ್ನು ಯಾವನೂ ಸತ್ಯವೆಂದು ಭಾವಿಸುವುದಿಲ್ಲವೋ ಅದೇ ರೀತಿಯಲ್ಲಿ ಜ್ಞಾನಿಯಾದವನು ತನಗಿಂತ ಭಿನ್ನವಾಗಿ ಕಾಣುವ ಯಾವುದೇ ಪದಾರ್ಥವನ್ನೂ ಸತ್ಯವಾದದ್ದೆಂದು ಭಾವಿಸುವುದಿಲ್ಲ.

ಪೂರ್ವಂ ಗೃಹೀತಂ ಗುಣಕರ್ಮಚಿತ್ರ-
ಮಜ್ಞಾನಮಾತ್ಮನ್ಯವಿವಿಕ್ತಮಙ್ಗ ।
ನಿವರ್ತತೇ ತತ್ಪುನರೀಕ್ಷಯೈವ
ನ ಗೃಹ್ಯತೇ ನಾಪಿ ವಿಸೃಜ್ಯ ಆತ್ಮಾ ॥೩೩॥

ಅನೇಕ ಪ್ರಕಾರವಾದ ಗುಣ ಮತ್ತು ಕರ್ಮಗಳಿಂದ ಯುಕ್ತವಾದ

ದೇಹೇಂದ್ರಿಯಗಳೇ ಮೊದಲಾದುವು, ಮೊದಲು ಅಜ್ಞಾನದ ಕಾರಣದಿಂದಾಗಿ ಆತ್ಮನೊಡನೆ ಏಕೀಭವಿಸಿದಂತೆ ಕಾಣುತ್ತಿದ್ದುವು. ನನ್ನ ದೇಹ, ನನ್ನ ಕೈ, ನನ್ನ ಕಾಲು ಮುಂತಾಗಿ ದೇಹಾತ್ಮಬುದ್ಧಿಯುಂಟಾಗಿದ್ದಿತು. ಅಜ್ಞಾನವು ನಿವಾರಣೆಯಾಗುವುದರ ಜೊತೆಯಲ್ಲಿಯೇ ದೇಹಾತ್ಮ ಬುದ್ಧಿಯು ಹೋಗಿಬಿಡುತ್ತದೆ. ಇದರ ಅರ್ಥ ಅಜ್ಞಾನಿಯು ಜ್ಞಾನವನ್ನು ತ್ಯಾಗಮಾಡಿದ್ದಾನೆಂದಾಗಲೀ ಜ್ಞಾನಿಯು ಆತ್ಮವನ್ನು ಗ್ರಹಣಮಾಡಿದ್ದಾನೆಂದಾಗಲೀ ಅಲ್ಲ. ಆತ್ಮನು ಯಾರಿಂದಲೂ ಗ್ರಹಿಸಲ್ಪಡ ತಕ್ಕವನೂ ಅಲ್ಲ, ತ್ಯಜಿಸಲ್ಪಡತಕ್ಕವನೂ ಅಲ್ಲ. ದೇಹಾತ್ಮಬುದ್ಧಿಯೇ ಅಜ್ಞಾನ. ದೇಹಾತ್ಮಬುದ್ಧಿಯಿಲ್ಲದಿರುವುದೇ ಜ್ಞಾನ. ಅಜ್ಞಾನದಿಂದ ದೇಹಾತ್ಮಬುದ್ಧಿಯಿರುತ್ತದೆ. ಜ್ಞಾನದಿಂದ ದೇಹಾತ್ಮಬುದ್ಧಿಯು ನಿರಸನವಾಗುತ್ತದೆ.

ಯಥಾ ಹಿ ಭಾನೋರುದಯೋ ನೃಚಕ್ಷುಷಾಂ
ತಮೋ ನಿಹನ್ಯಾನ್ನ ತು ಸದ್ವಿಧತ್ತೇ ।
ಏವಂ ಸಮೀಕ್ಷಾ ನಿಪುಣಾ ಸತೀ ಮೇ
ಹನ್ಯಾತ್ತಮಿಸ್ರಂ ಪುರುಷಸ್ಯ ಬುದ್ಧೇಃ ॥೩೪॥

ಸೂರ್ಯೋದಯವು ಮನುಷ್ಯರ ಕಣ್ಣುಗಳಿಗೆ ಆವರಣ ರೂಪವಾಗಿರುವ ಕತ್ತಲೆಯನ್ನು ಹೋಗಲಾಡಿಸುತ್ತದೆ. ಆದರೆ ಕತ್ತಲು ಹೋದೊಡನೆಯೇ ಕಾಣಬರುವ ಪದಾರ್ಥಗಳನ್ನು ಸೂರ್ಯೋದಯವು ನಿರ್ಮಿಸುವುದಿಲ್ಲ. ಅದೇ ರೀತಿಯಲ್ಲಿ ತನಗೆ ಸಮ್ಯಜ್ಞಾನವಾದೊಡನೆಯೇ ಬುದ್ಧಿಗೆ ಆವರಣರೂಪವಾಗಿರುವ ಅಜ್ಞಾನವು ಹೊರಟುಹೋಗುತ್ತದೆ. ಅಜ್ಞಾನವು ಹೊರಟುಹೋದೊಡನೆಯೇ ಸ್ವತಃ ಸಿದ್ಧವಾಗಿರುವ ಸತ್ಯಸ್ವರೂಪವಾದ ಆತ್ಮದರ್ಶನವಾಗುತ್ತದೆ.

ಏಷ ಸ್ವಯಂಜ್ಯೋತಿರಜೋಽಪ್ರಮೇಯೋ
ಮಹಾನುಭೂತಿಃ ಸಕಲಾನುಭೂತಿಃ ।
ಏಕೋಽದ್ವಿತೀಯೋ ವಚಸಾಂ ವಿರಾಮೇ
ಯೇನೇಷಿತಾ ವಾಗಸವಶ್ಚರನ್ತಿ ॥೩೫॥

ಈ ಆತ್ಮವು ಸ್ವಯಂಪ್ರಕಾಶದಿಂದ ಕೂಡಿರತಕ್ಕದ್ದು. ಹುಟ್ಟಿಲ್ಲ

ದುದು. ಪ್ರಮಾಣಕ್ಕೆ ಸಿಕ್ಕದುದು. ಅವಿಚ್ಛಿನ್ನವಾದ ಸ್ವರೂಪಜ್ಞಾನವುಳ್ಳದ್ದು. ಸರ್ವಾನುಭವಸ್ವರೂಪವಾದುದು. ಏಕಮೇವಾದ್ವಿತೀಯವಾದುದು. (ಸಜಾತೀಯ-ವಿಜಾತೀಯರಹಿತವಾದುದು) ಆತ್ಮನ ಪ್ರೇರಣೆಯಿಂದಲೇ ವಾಕ್ಕು ಮತ್ತು ಪ್ರಾಣಗಳು ಕಾರ್ಯಪ್ರವೃತ್ತವಾಗುತ್ತವೆ.*

ಏತಾವಾನಾತ್ಮಸಂಮೋಹೋ ಯದ್ವಿಕಲ್ಪಸ್ತು ಕೇವಲೇ ।
ಆತ್ಮನ್ನೃತೇ ಸ್ವಮಾತ್ಮಾನಮವಲಮ್ಬೋ ನ ಯಸ್ಯ ಹಿ ॥೩೬॥

ಅದ್ವಿತೀಯವಾದ ಆತ್ಮತತ್ತ್ವದಲ್ಲಿ ಅರ್ಥಹೀನವಾದ ನಾಮಗಳ ಮೂಲಕವಾಗಿ ಭೇದವನ್ನು ಕಲ್ಪಿಸುವುದು ಮಾನಸಿಕಭ್ರಮೆ ಅಥವಾ ಅಜ್ಞಾನ. ಅಂತಹ ಅಜ್ಞಾನಕ್ಕೂ ಕೂಡ ಆತ್ಮನ ಹೊರತಾಗಿ ಬೇರೊಂದು ಅಧಿಷ್ಠಾನವೇ ಇಲ್ಲ ; ಆಶ್ರಯವೇ ಇಲ್ಲ. ಬೆಳ್ಳಿಯ ಭ್ರಮೆಗೆ ಕಪ್ಪೇಚಿಪ್ಪೇ ಆಶ್ರಯವಾಗಿರುವಂತೆ–ಭೇದರೂಪವಾದ ಪ್ರಪಂಚಭ್ರಮೆಗೆ ಆತ್ಮವೇ ಆಶ್ರಯ. ಬೇರೆಯ ಆಶ್ರಯವೇ ಇಲ್ಲ. ಆದುದರಿಂದ ಸಮಸ್ತವೂ ಬ್ರಹ್ಮಮಯವೇ ಆಗಿದೆ.

ಯನ್ನಾಮಾಕೃತಿಭಿರ್ಗ್ರಾಹ್ಯಂ ಪಞ್ಚವರ್ಣಮಬಾಧಿತಮ್ ।
ವ್ಯರ್ಥೇನಾಪ್ಯರ್ಥವಾದೋಽಯಂ ದ್ವಯಂ ಪಣ್ಡಿತಮಾನಿನಾಮ್ ॥

ತಾವೇ ಮಹಾಪಂಡಿತರೆಂದು ಭಾವಿಸಿಕೊಂಡುಬಿಟ್ಟಿರುವ ಕೆಲವರು 'ಈ ಪಾಂಚಭೌತಿಕವಾದ ಭೇದಪ್ರಪಂಚವು ವಿಭಿನ್ನನಾಮಗಳ ಮತ್ತು

---

* ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ । ಯೇನೇಷಿತಂ ಪತತಿ ಪ್ರೇಷಿತಂ ತಮಃ । ತೇನ ಪ್ರಾಣಃ ಪ್ರಥಮಃ ಪ್ರೈತಿ ಯಕ್ತ । ಶ್ರೋತ್ರಸ್ಯ ಶ್ರೋತಂ ಮನಸೋ ಮನಃ । ಯದ್ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ । ಚಕ್ಷುಷಶ್ಚಕ್ಷುಃ ।

ಆತ್ಮನನ್ನು ಶ್ರುತಿಗಳು ಬಣ್ಣಿಸಲಾರವು. ಮನಸ್ಸು ತಿಳಿಯಲಾರದು. ಆತ್ಮನಿಂದ ಪ್ರೇರಿತಗಳಾಗಿಯೇ ಮನಸ್ಸು, ಪ್ರಾಣ, ವಾಕ್ಕು ಮೊದಲಾದುವು ತಮ್ಮ-ತಮ್ಮ ಕೆಲಸಗಳನ್ನು ಮಾಡುತ್ತವೆ. ಆತ್ಮನು ಕಿವಿಗೆ ಕಿವಿಯು, ಮನಸ್ಸಿಗೆ ಮನಸ್ಸು, ವಾಕ್ಕಿಗೆ ವಾಕ್ಕು, ಪ್ರಾಣಕ್ಕೆ ಪ್ರಾಣವು, ಚಕ್ಷುಸ್ಸಿಗೆ ಚಕ್ಷುಸ್ಸೂ ಆಗಿರುವನು. ಎಂದರೆ ಆಯಾ ರೂಪದಿಂದ ಆಯಾ ಇಂದ್ರಿಯಗಳಿಗೆ ಶಕ್ತಿಯನ್ನು ಕೊಡುವನು. (ತೈತ್ತರೀಯ-ಕೇನ ಉಪನಿಷತ್ತುಗಳು.)

ರೂಪಗಳ ರೂಪದಲ್ಲಿ ಇಂದ್ರಿಯಗಳ ಮೂಲಕವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಆದುದರಿಂದ ಇದು ಅಬಾಧಿತ ಸತ್ಯವಾಗಿದೆ. ಇದಕ್ಕೆ ವಿರುದ್ಧವಾದ ವಾದವು ಕೇವಲ ಅರ್ಥವಾದವೇ ಸರಿ'–ಎಂದು ವಾದಿಸುತ್ತಾರೆ. ಆದರೆ ಅವರ ಈ ವಾದವು ಅರ್ಥಹೀನ. ಇದು ಕೇವಲ ಮಾತಿನ ಆಡಂಬರವೇ ಆಗಿದೆ. ಏಕೆಂದರೆ : ಇಂದ್ರಿಯಗಳಿಗೆ ಪ್ರತ್ಯೇಕವಾದ ಸತ್ತೆಯೇ (ಇರುವಿಕೆಯೇ) ಸಿದ್ಧವಾಗುವುದಿಲ್ಲ. ಹೀಗಿರುವಾಗ ಅದು ಬೇರೆಯದನ್ನು ಪ್ರಮಾಣೀಕರಿಸಲಾದರೂ ಹೇಗೆ ಸಾಧ್ಯವಾಗುತ್ತದೆ? ಇಂದ್ರಿಯಗ್ರಾಹ್ಯವಾದ ಮಾತ್ರದಿಂದ ಪ್ರಪಂಚವು ಸತ್ಯವಾಗಿ ಬಿಡುವುದಿಲ್ಲ.

ಯೋಗಿನೋಽಪಕ್ವಯೋಗಸ್ಯ ಯುಂಜತಃ ಕಾಯ ಉತ್ಥಿತೈಃ ।
ಉಪಸರ್ಗೈರ್ವಿಹನ್ಯೇತ ತತ್ರಾಯಂ ವಿಹಿತೋ ವಿಧಿಃ ॥೩೮॥

ಉದ್ಧವ! ಯೋಗಸಾಧನೆಯು ಪೂರ್ಣವಾಗದೆಯೇ ಸಾಧಕನೊಬ್ಬನಿಗೆ ಶರೀರವು ರೋಗಾದಿ ಉಪದ್ರವಗಳಿಂದ ಪೀಡಿತವಾದರೆ ಆಗ ಈ ವಿಧಿನಿಯಮಗಳನ್ನು ಪರಿಪಾಲಿಸಬೇಕು.

ಯೋಗಧಾರಣಯಾ ಕಾಂಶ್ಚಿದಾಸನೈರ್ಧಾರಣಾನ್ವಿತೈಃ ।
ತಪೋಮನ್ತ್ರೌಷಧೈಃ ಕಾಂಶ್ಚಿದುಪಸರ್ಗಾನ್ವಿನಿರ್ದಹೇತ್ ॥೩೯॥

ಶೀತೋಷ್ಣಗಳ ವೈಪರೀತ್ಯದಿಂದ ಪೀಡಿತನಾಗಿದ್ದರೆ ಚಂದ್ರ-ಸೂರ್ಯರನ್ನು ಧಾರಣೆಮಾಡುವುದರ ಮೂಲಕವಾಗಿ ಸರಿಪಡಿಸಿಕೊಳ್ಳಬೇಕು. ವಾಕ್‌ಸಂಬಂಧವಾದ ರೋಗಗಳಿದ್ದರೆ–ವಾಯುಧಾರಣಾಯುಕ್ತವಾದ ಆಸನಗಳ ಮೂಲಕವಾಗಿ ಪರಿಹರಿಸಿಕೊಳ್ಳಬೇಕು. ಗ್ರಹ-ಸರ್ಪಾದಿಗಳಿಂದ ಪೀಡನೆಯಿದ್ದರೆ ತಪಸ್ಸು-ಮಂತ್ರ ಮತ್ತು ಔಷಧಿಗಳ ಮೂಲಕವಾಗಿ ಪರಿಹರಿಸಿಕೊಳ್ಳಬೇಕು.

ಕಾಂಶ್ಚಿನ್ಮಮಾನುಧ್ಯಾನೇನ ನಾಮಸಙ್ಕೀರ್ತನಾದಿಭಿಃ ।
ಯೋಗೇಶ್ವರಾನುವೃತ್ತ್ಯಾ ವಾ ಹನ್ಯಾದಶುಭದಾನ್ ಶನೈಃ ॥೪೦॥

ಕಾಮ-ಕ್ರೋಧಾದಿಗಳಿಂದ ಉಂಟಾಗುವ ವಿಘ್ನವನ್ನು ನಿರಂತರವಾದ ನನ್ನ ಧ್ಯಾನದಿಂದಲೂ ನಾಮಸಂಕೀರ್ತನದಿಂದಲೂ ಪರಿಹರಿಸಿಕೊಳ್ಳಬೇಕು. ಅಧಃಪತನದಕಡೆಗೆ ಮೆಲ್ಲ-ಮೆಲ್ಲನೆ ಒಯ್ಯುತ್ತಿರುವ ದಂಭ-ಮದ–ಇವೇ

ಮೊದಲಾದುವುಗಳಿಂದ ಉಂಟಾಗುವ ವಿಘ್ನವನ್ನು ಮಹಾಪುರುಷರಾದ ಯೋಗೇಶ್ವರರ ಸೇವೆಮಾಡುವುದರಿಂದ ಪರಿಹರಿಸಿಕೊಳ್ಳಬೇಕು.

ಕೇಚಿದ್ದೇಹಮಿಮಂ ಧೀರಾಃ ಸುಕಲ್ಪಂ ವಯಸಿ ಸ್ಥಿರಮ್ ।
ವಿಧಾಯ ವಿವಿಧೋಪಾಯೈರಥ ಯುಞ್ಜನ್ತಿ ಸಿದ್ಧಯೇ ॥೪೧॥

ನಹಿ ತತ್ಕುಶಲಾದೃತ್ಯಂ ತದಾಯಾಸೋ ಹ್ಯಪಾರ್ಥಕಃ ।
ಅನ್ತವತ್ತ್ವಾಚ್ಛರೀರಸ್ಯ ಫಲಸ್ಯೇವ ವನಸ್ಪತೇಃ ॥೪೨॥

ಕೆಲವರು ಮನನಶೀಲರಾದ ಯೋಗಿಗಳು ವಿಧ-ವಿಧವಾದ ಉಪಾಯಗಳ ಮೂಲಕವಾಗಿ ಈ ಶರೀರವನ್ನು ಸುದೃಢವಾಗಿಯೂ ಯೌವನಾವಸ್ಥೆಯಲ್ಲಿಯೂ ಸ್ಥಿರಗೊಳಿಸಿ ಅಣಿಮಾದಿಸಿದ್ಧಿಗಳನ್ನು ಪಡೆದುಕೊಳ್ಳುವ ಸಲುವಾಗಿ ಯೋಗಸಾಧನೆಯನ್ನು ಮುಂದುವರಿಸುತ್ತಾರೆ. ಆದರೆ ಬುದ್ಧಿವಂತರಾದವರು ಈ ಅಭಿಪ್ರಾಯವನ್ನು ಸಮಾದರಿಸುವುದಿಲ್ಲ. ಇದೊಂದು ವ್ಯರ್ಥವಾದ ಪ್ರಯಾಸವೆಂದು ಅವರು ಭಾವಿಸುತ್ತಾರೆ. ವೃಕ್ಷದಲ್ಲಿರುವ ಹಣ್ಣು ಎಂದಾದರೊಂದು ದಿನ ಅವಶ್ಯವಾಗಿ ಬಿದ್ದುಹೋಗುವಂತೆ ಈ ಶರೀರವು ಕೂಡ ಹಲವಾರು ಶತಮಾನಗಳನಂತರವಾದರೂ ಬಿದ್ದು ಹೋಗುತ್ತದೆ. ಅಂತಹ ನಶ್ವರವಾದ ಶರೀರವನ್ನು ಯೋಗಸಾಧನೆಯ ಮೂಲಕ ರಕ್ಷಿಸಿಕೊಂಡಿರುವುದು ವ್ಯರ್ಥಪ್ರಯತ್ನವೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಯೋಗಂ ನಿಷೇವತೋ ನಿತ್ಯಂ ಕಾಯಶ್ಚೇತ್ಕಲ್ಪತಾಮಿಯಾತ್ ।
ತಚ್ಛ್ರದ್ದಧ್ಯಾನ್ನ ಮತಿಮಾನ್ಯೋಗಮುತ್ಸೃಜ್ಯ ಮತ್ಪರಃ ॥೪೩॥

ಒಂದು ವೇಳೆ ನಿರಂತರವಾದ ಯೋಗಾಭ್ಯಾಸದಿಂದ ಒಬ್ಬ ಸಾಧಕನಿಗೆ ಸುದೃಢವಾದ ಶರೀರವೇ ಪ್ರಾಪ್ತವಾಗಿಬಿಡಬಹುದು. ಆದರೆ ಬುದ್ಧಿವಂತನಾದ ಯೋಗಿಗೆ ಸುದೃಢವಾದ ಶರೀರವನ್ನು ಪಡೆದುಕೊಳ್ಳುವುದೇ ಪರಮಾರ್ಥವಾಗಿಬಿಡಬಾರದು. ಅವನು ಯೋಗಾಭ್ಯಾಸವನ್ನು ಅಲ್ಲಿಗೇ ನಿಲ್ಲಿಸದೆ ಮುಂದುವರಿಸಿ ನನ್ನ ಪ್ರಾಪ್ತಿಗಾಗಿ ಸತತಪ್ರಯತ್ನಮಾಡಬೇಕು.

ಯೋಗಚರ್ಯಾಮಿಮಾಂ ಯೋಗೀ ವಿಚರನ್ಮದಪಾಶ್ರಯಃ ।
ನಾನ್ತರಾಯೈರ್ವಿಹನ್ಯೇತ ನಿಃಸ್ಪೃಹಃ ಸ್ವಸುಖಾನುಭೂಃ ॥೪೪॥

ಯಾವ ಸಾಧಕನು ನನ್ನನ್ನು ಆಶ್ರಯಿಸಿ ನಾನು ಹೇಳಿರುವ ಯೋಗಮಾರ್ಗದಲ್ಲಿಯೇ ನಿರತನಾಗಿರುವನೋ ಅಂತಹವನಿಗೆ ಯೋಗಮಾರ್ಗದಲ್ಲಿ ಯಾವುದೇ ವಿಧವಾದ ವಿಘ್ನಗಳೂ ಉಂಟಾಗಲಾರವು. ಅವನ ಸಮಸ್ತವಾದ (ಐಹಿಕ-ಆಮುಷ್ಮಿಕ) ಕಾಮನೆಗಳೂ ಹೋಗುತ್ತವೆ. ಆತನು ಯಾವಾಗಲೂ ಆತ್ಮಾನಂದದಲ್ಲಿಯೇ ಮುಳುಗಿರುತ್ತಾನೆ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಏಕಾದಶಸ್ಕಂಧದ ೨೮ನೆಯ ಅಧ್ಯಾಯವು ಮುಗಿಯಿತು.

ಏಕಾದಶಸ್ಕಂಧ ೨೯ನೆಯ ಅಧ್ಯಾಯ

ಭಾಗವತಧರ್ಮಗಳ ನಿರೂಪಣೆ : ಉದ್ಧವನ ಬದರಿಕಾಶ್ರಮಪ್ರಸ್ಥಾನ

ಉದ್ಧವನು ಹೇಳುತ್ತಾನೆ :

ಸುದುಶ್ಚರಾಮಿಮಾಂ ಮನ್ಯೇ ಯೋಗಚರ್ಯಾಮನಾತ್ಮನಃ ।
ಯಥಾಂಜಸಾ ಪುಮಾನ್ ಸಿದ್ಧ್ಯೇತ್ತನ್ಮೇ ಬ್ರೂಹ್ಯಂಜಸಾಚ್ಯುತ ॥೧॥

"ಭಗವಂತ! ದಯಾಮಯ! ಅಚ್ಯುತನೇ! ಮನಸ್ಸನ್ನು ವಶದಲ್ಲಿ ಇಟ್ಟುಕೊಳ್ಳದೇ ಇರತಕ್ಕವನಿಗೆ ನೀನು ಹೇಳಿದ ಯೋಗಮಾರ್ಗವು ಅತ್ಯಂತ ಕಠಿಣವಾದದ್ದೆಂದೇ ನನ್ನ ಭಾವನೆಯಾಗಿದೆ. ಆದುದರಿಂದ ನೀನು ನಿನ್ನ ಪರಮಪದಪ್ರಾಪ್ತಿಗೆ ಬೇರೆ ಯಾವುದಾದರೂ ಸರಳವೂ ಸುಗಮವೂ ಆಗಿರುವ ಮಾರ್ಗವನ್ನು ಹೇಳುವ ಕೃಪೆಮಾಡು.

ಪ್ರಾಯಶಃ ಪುಣ್ಡರೀಕಾಕ್ಷ ಯುಞ್ಜನ್ತೋ ಯೋಗಿನೋ ಮನಃ ।
ವಿಷೀದನ್ತ್ಯಸಮಾಧಾನಾನ್ಮನೋನಿಗ್ರಹಕರ್ಶಿತಾಃ ॥೨॥

ಕಮಲಾಕ್ಷನೇ! ನಿನಗೆ ತಿಳಿದಿರುವಂತೆ ಹೆಚ್ಚು ಮಂದಿ ಯೋಗಿಗಳು ತಮ್ಮ ಮನಸ್ಸನ್ನು ಏಕಾಗ್ರಗೊಳಿಸಲು ಪ್ರಯತ್ನಿಸುತ್ತಲೇ ಇರುತ್ತಾರೆ. ಬಹಳವಾಗಿ ಪ್ರಯತ್ನಿಸಿದರೂ ಅವರು ಮನಸ್ಸನ್ನು ವಶಪಡಿಸಿಕೊಳ್ಳಲು ಅಥವಾ ಏಕಾಗ್ರಗೊಳಿಸಲು ಸಫಲರಾಗದೆ ಅಸಮಾಧಾನದಿಂದ ವಿಷಾದಿಸುತ್ತಾರೆ.

ಅಥಾತ ಆನನ್ದದುಘಂ ಪದಾಮ್ಬುಜಂ
ಹಂಸಾಃ ಶ್ರಯೇರನ್ನರವಿನ್ದಲೋಚನ ।
ಸುಖಂ ನು ವಿಶ್ವೇಶ್ವರ ಯೋಗಕರ್ಮಭಿ-
ಸ್ತ್ವನ್ಮಾಯಯಾಮೀ ವಿಹತಾ ನ ಮಾನಿನಃ ॥೩॥

ಪುಂಡರೀಕಾಕ್ಷನೇ! ಈ ಕಾರಣದಿಂದಲೇ ಹಂಸಪಕ್ಷಿಗಳಂತೆ ಸದಾಚಾರ ವಿವೇಕದಲ್ಲಿ ನಿಪುಣರಾದ ಸಾಧಕರು ಸಮಸ್ತವಾದ ಆನಂದವನ್ನೂ ದಯಪಾಲಿಸುವ ನಿನ್ನ ಪಾದಾರವಿಂದಗಳನ್ನು ನಿರಾಯಾಸವಾಗಿ ಅನನ್ಯ ಭಕ್ತಿಯಿಂದ ಆರಾಧಿಸುತ್ತಾರೆ. ಯೋಗಾಭ್ಯಾಸಾದಿ ಗಳಿಂದ ಅಲ್ಪ-ಸ್ವಲ್ಪ ಶಕ್ತಿಯನ್ನು ಗಳಿಸಿ ಗರ್ವಿತರಾಗುವ ಯೋಗಿಗಳು ನಿನ್ನ ಮಾಯೆಯಿಂದ ಮರುಳಾಗಿ ನಿನ್ನ ಪಾದಾರವಿಂದಗಳನ್ನು ಆಶ್ರಯಿಸುವುದಿಲ್ಲ.

ಕಿಂ ಚಿತ್ರಮಚ್ಯುತ ತವೈತದಶೇಷಬನ್ಧೋ
ದಾರೇಷ್ವನನ್ಯಶರಣೇಷು ಯದಾತ್ಮಸಾತ್ತ್ವಮ್ ।
ಯೋಽರೋಚಯತ್ಸಹ ಮೃಗೈಃ ಸ್ವಯಮೀಶ್ವರಾಣಾಂ
ಶ್ರೀಮತ್ಕಿರೀಟತಟಪೀಡಿತಪಾದಪೀಠಃ ॥೪॥

ಪ್ರಭುವೇ! ನೀನು ಸಮಸ್ತರ ಹಿತೈಷಿಯೂ ಸುಹೃದನೂ ಆಗಿರುವೆ. ಅನನ್ಯಶರಣರಾದ ಬಲಿಯೇ ಮುಂತಾದ ಸೇವಕರಿಗೆ ಕೂಡ ನೀನು ಅಧೀನನಾಗಿರುವೆ. ಇದು ನಿನ್ನ ವಿಷಯದಲ್ಲಿ ಅಚ್ಚರಿಯ ಮಾತೇನಲ್ಲ. ಇಂತಹ ನೀನು ರಾಮಾವತಾರವನ್ನೆತ್ತಿದ್ದಾಗ ಪ್ರೇಮಪರವಶನಾಗಿ ಮೃಗ ಗಳಾದ ವಾನರರೊಡನೆ ಮೈತ್ರಿಯನ್ನು ಬೆಳೆಸಿದೆಯಲ್ಲವೇ? ವಿಶ್ವೇಶ್ವರನೇ! ಅಚ್ಯುತನೇ! ಲೋಕಪಾಲರಾದ ಬ್ರಹ್ಮನೇ ಮೊದಲಾದ ದೇವತೆಗಳು ತೇಜೋಮಯವಾದ ಕಿರೀಟಗಳಿಂದ ಸತತವಾಗಿ ಉಜ್ಜಲ್ಪಡುವ ಪಾದಪೀಠ ವುಳ್ಳವನಾಗಿರುವೆ. ನಿನ್ನ ಚರಣಾರವಿಂದಗಳಿರುವ ಕಾಲುಮಣೆಗೆ ಕಿರೀಟಧಾರಿಗಳಾದ ಲೋಕಪಾಲರು ಕಿರೀಟಾಗ್ರಗಳಿಂದ ನಮಸ್ಕರಿಸುತ್ತಲೇ ಇರುತ್ತಾರೆ.

ತಂ ತ್ವಾಖಿಲಾತ್ಮದಯಿತೇಶ್ವರಮಾಶ್ರಿತಾನಾಂ
ಸರ್ವಾರ್ಥದಂ ಸ್ವಕೃತವಿದ್ವಿಸೃಜೇತ ಕೋ ನು ।

ಕೋ ವಾ ಭಜೇತ್ಕಿಮಪಿ ವಿಸ್ಮೃತಯೇಽನುಭೂತ್ಯೈ
ಕಿಂ ವಾ ಭವೇನ್ನ ತವ ಪಾದರಜೋಜುಷಾಂ ನಃ ॥೫॥

ಪ್ರಿಯಸಖನೇ! ನೀನು ಸಮಸ್ತರಿಗೂ ಪ್ರಿಯತಮನೂ ಸ್ವಾಮಿಯೂ ಆತ್ಮಸ್ವರೂಪನೂ ಆಗಿರುವೆ. ನೀನು ನಿನ್ನ ಅನನ್ಯಶರಣರಾದ ಭಕ್ತರಿಗೆ ಸಮಸ್ತವನ್ನೂ ದಯಪಾಲಿಸುವೆ. ಬಲಿ-ಪ್ರಹ್ಲಾದರೇ ಮೊದಲಾದ ಭಕ್ತ ಶ್ರೇಷ್ಠರಿಗೆ ನೀನು ಮಾಡಿದ ಅನುಗ್ರಹವನ್ನು ತಿಳಿದನಂತರ ಯಾವನು ತಾನೇ ನಿನ್ನನ್ನು ಪರಿತ್ಯಜಿಸುತ್ತಾನೆ?

ವಿವೇಕಿಯಾದ ಯಾವನು ತಾನೇ ಇಂದ್ರಿಯಗಳ ಭೋಗಕ್ಕಾಗಿ ಮತ್ತು ಅದರ ಮೂಲಕ ನಿನ್ನನ್ನು ಮರೆಯುವುದಕ್ಕಾಗಿ ನಿನ್ನನ್ನು ಬಿಟ್ಟು ಮತ್ತೊಂದನ್ನು ಭಜಿಸಲು ಹೋಗುವನು? ನಿನ್ನ ಪಾದಧೂಳಿಯನ್ನೇ ನಂಬಿರುವ ನಮಗೆ ಯಾವುದು ತಾನೇ ಸಿದ್ಧಿಸಲಾರದು?

ನೈವೋಪಯನ್ತ್ಯಪಚಿತಿಂ ಕವಯಸ್ತವೇಶ
ಬ್ರಹ್ಮಾಯುಷಾಪಿ ಕೃತಮೃದ್ಧಮುದಃ ಸ್ಮರನ್ತಃ ।
ಯೋಽನ್ತರ್ಬಹಿಸ್ತನುಭೃತಾಮಶುಭಂ ವಿಧುನ್ವ-
ನ್ನಾಚಾರ್ಯ ಚೈತ್ಯವಪುಷಾ ಸ್ವಗತಿಂ ವ್ಯನಕ್ತಿ ॥೬॥

ಭಗವಂತ! ನೀನು ಸಮಸ್ತಪ್ರಾಣಿಗಳ ಅಂತರಂಗದಲ್ಲಿ ಅಂತರ್ಯಾಮಿಯ ರೂಪದಲ್ಲಿದ್ದು ಪ್ರಾಣಿಗಳ ವಾಸನಾರೂಪವಾದ ಅಶುಭವನ್ನು ಹೋಗಲಾಡಿಸುವೆ. ಬಹಿರಂಗದಲ್ಲಿ ಸದ್ಗುರುವಿನ ರೂಪದಲ್ಲಿದ್ದು ಬ್ರಹ್ಮವಿದ್ಯೆಯನ್ನು ಉಪದೇಶಿಸಿ ನಿನ್ನ ಸ್ವರೂಪವನ್ನೂ ತೋರಿಸಿಕೊಡುವೆ. ಬ್ರಹ್ಮನ ಆಯುಷ್ಯವನ್ನು ಪಡೆದರೂ ನಿನ್ನ ಉಪಕಾರವನ್ನು ತೀರಿಸಲು ಸಾಧ್ಯವಾಗುವುದಿಲ್ಲ. ಹೀಗೆ ಅಂತರಂಗ ದಲ್ಲಿಯೂ ಬಹಿರಂಗದಲ್ಲಿಯೂ ನಿರ್ವ್ಯಾಜದಿಂದ ಉಪಕರಿಸುತ್ತಿರುವ ನಿನ್ನನ್ನು ಬ್ರಹ್ಮವಿದರು ಪರಮಾನಂದದಿಂದ ಪ್ರತಿಕ್ಷಣದಲ್ಲಿಯೂ ಸ್ಮರಿಸಿಕೊಳ್ಳುತ್ತಾರೆ."

ಶ್ರೀಶುಕಮುನಿಗಳು ಹೇಳುತ್ತಾರೆ :

"ಪರೀಕ್ಷಿತಮಹಾರಾಜ! ಭಗವಾನ್ ಶ್ರೀಕೃಷ್ಣನು ಬ್ರಹ್ಮನೇ ಮೊದಲಾದ ಲೋಕೇಶ್ವರರಿಗೂ ಈಶ್ವರನಾಗಿದ್ದಾನೆ. ಸತ್ತ್ವ-ರಜಸ್ತ

ಮೋಗುಣಗಳ ಮೂಲಕವಾಗಿ ಅವನೇ ಬ್ರಹ್ಮ-ವಿಷ್ಣು-ರುದ್ರರ ರೂಪವನ್ನು ಧರಿಸಿ ಜಗತ್ತಿನ ಉತ್ಪತ್ತಿ-ಸ್ಥಿತಿ-ಲಯಗಳೆಂಬ ಆಟವಾಡುತ್ತಾನೆ. ಯಾವಾಗ ಉದ್ಧವನು ಅನುರಾಗಪೂರ್ಣವಾದ ಮನಸ್ಸಿನಿಂದ ಶ್ರೀಕೃಷ್ಣನನ್ನು ಹೀಗೆ ಪ್ರಶ್ನಿಸಿದನೋ ಆಗ ದಯಾಮಯನಾದ ಭಗವಂತನು ಮಂದಹಾಸವನ್ನು ಬೀರುತ್ತಾ ಪ್ರೇಮಪೂರ್ವಕವಾಗಿ ಉತ್ತರಿಸಲು ತೊಡಗಿದನು.

"ಅಬ್ಬ! ಇಂತಹ ಪ್ರಶ್ನೆಯನ್ನು ನೀನು ಕೇಳಿದೆಯಲ್ಲವೇ? ಅತ್ಯಂತ ಮಂಗಳಕರವಾದ ನನ್ನ ಧರ್ಮಗಳನ್ನು ನಿನಗೆ ನಾನು ಅತ್ಯಂತ ಸಂತಸದಿಂದಲೇ ಹೇಳುತ್ತೇನೆ. ನಾನು ಹೇಳಿರುವ ಯಾವ ಧರ್ಮಗಳನ್ನು ಶ್ರದ್ಧೆಯಿಂದ ಆಚರಿಸುವ ಮನುಷ್ಯನು, ಜಯಿಸಲು ಅಸಾಧ್ಯವಾದ ಮೃತ್ಯುವನ್ನೂ ಕೂಡ ಜಯಿಸಬಲ್ಲನೋ ಅಂತಹ ಭಾಗವತಧರ್ಮಗಳನ್ನು ನಾನು ನಿನಗೆ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಕುರ್ಯಾತ್ ಸರ್ವಾಣಿ ಕರ್ಮಾಣಿ ಮದರ್ಥಂ ಶನಕೈಃ ಸ್ಮರನ್ ।
ಮಯ್ಯರ್ಪಿತಮನಶ್ಚಿತ್ತೋ ಮದ್ಧರ್ಮಾತ್ಮಮನೋರತಿಃ ॥೯॥

ಪ್ರಿಯಸಖನೇ! ನನ್ನ ಭಕ್ತನು ತಾನು ಮಾಡುವ ಸಮಸ್ತಕರ್ಮಗಳನ್ನೂ ನನ್ನ ಸಲುವಾಗಿಯೇ ಮಾಡಬೇಕು. ಕರ್ಮಗಳನ್ನು ಅವಸರಿಸದೆ ನಿಧಾನವಾಗಿ ಮಾಡಬೇಕು. ಹೀಗೆ ಕರ್ಮಗಳನ್ನು ಮಾಡುವಾಗ ಕ್ಷಣ-ಕ್ಷಣಕ್ಕೂ ನನ್ನನ್ನು ಸ್ಮರಿಸಿಕೊಳ್ಳುತ್ತಲೇ ಇರಬೇಕು. ಹೀಗೆ ನನ್ನ ಧರ್ಮಗಳಲ್ಲಿ ಪ್ರೀತಿಯುಳ್ಳವನಾಗಿ ಅಭ್ಯಾಸಮಾಡಿದರೆ ಕೆಲವು ದಿವಸಗಳಲ್ಲಿಯೇ ಅವನ ಮನಸ್ಸು ಮತ್ತು ಚಿತ್ತಗಳು ನನ್ನಲ್ಲಿಯೇ ಸಮರ್ಪಿತಗಳಾಗಿಬಿಡುತ್ತವೆ.

ದೇಶಾನ್ಪುಣ್ಯಾನಾಶ್ರಯೇತ ಮದ್ಭಕ್ತೈಃ ಸಾಧುಭಿಃ ಶ್ರಿತಾನ್ ।
ದೇವಾಸುರಮನುಷ್ಯೇಷು ಮದ್ಭಕ್ತಾಚರಿತಾನಿ ಚ ॥೧೦॥

ನನ್ನ ಭಕ್ತರಾದ ಸಾಧುಗಳಿಂದ ಆಶ್ರಯಿಸಲ್ಪಟ್ಟಿರುವ ಪುಣ್ಯದೇಶ ಗಳನ್ನು ಆಶ್ರಯಿಸಿಕೊಂಡಿರಬೇಕು. ಭಕ್ತಜನರು ವಾಸಮಾಡುವ ಅಥವಾ

ವಾಸಮಾಡಿದ ಸ್ಥಳದಲ್ಲಿ ವಾಸಮಾಡಬೇಕು. ದೇವಾಸುರ-ಮನುಷ್ಯರಲ್ಲಿ ನನ್ನ ಭಕ್ತರಾದವರು ಯಾವ ವಿಧವಾದ ಆಚರಣೆಗಳನ್ನಿಟ್ಟುಕೊಂಡಿದ್ದರೋ ಅಂತಹುದೇ ಆಚರಣೆಗಳನ್ನು ಇಟ್ಟುಕೊಳ್ಳಬೇಕು.

ಪೃಥಕ್ ಸತ್ರೇಣ ವಾ ಮಹ್ಯಂ ಪರ್ವಯಾತ್ರಾಮಹೋತ್ಸವಾನ್ ।
ಕಾರಯೇದ್ಗೀತನೃತ್ಯಾದ್ಯೈರ್ಮಹಾರಾಜವಿಭೂತಿಭಿಃ ॥೧೧॥

ಪರ್ವದಿವಸಗಳಲ್ಲಿ ಬಂಧು-ಮಿತ್ರರೊಡನೆ ಕೂಡಿಕೊಂಡೋ ಅಥವಾ ತಾನೊಬ್ಬನೇ ಪ್ರತ್ಯೇಕವಾಗಿಯೋ ಮಹಾರಾಜೋಚಿತವಾದ ನೃತ್ಯ-ಗೀತ-ವಾದ್ಯ-ಛತ್ರ-ಚಾಮರಾದಿಗಳಿಂದ ನನ್ನ ಯಾತ್ರೆ-ಮಹೋತ್ಸವಾದಿಗಳನ್ನು ನಡೆಸಬೇಕು.

ಮಾಮೇವ ಸರ್ವಭೂತೇಷು ಬಹಿರನ್ತರಪಾವೃತಮ್ ।
ಈಕ್ಷೇತಾತ್ಮನಿ ಚಾತ್ಮಾನಂ ಯಥಾ ಖಮಮಲಾಶಯಃ ॥೧೨॥

ಶುದ್ಧಾಂತಃಕರಣನಾಗಿರುವ ನನ್ನ ಭಕ್ತನು ಆಕಾಶದಂತೆ, ಹೊರಗೆ ಮತ್ತು ಒಳಗೆ ಪರಿಪೂರ್ಣನಾಗಿರುವ ಮತ್ತು ಆವರಣಶೂನ್ಯನಾಗಿರುವ ಪರಮಾತ್ಮನಾದ ನನ್ನನ್ನು ಸಮಸ್ತಪ್ರಾಣಿಗಳಲ್ಲಿಯೂ ಮತ್ತು ನನ್ನ ಹೃತ್ಕಮಲದಲ್ಲಿಯೂ ಇರತಕ್ಕವನೆಂದು ತಿಳಿದುಕೊಳ್ಳಬೇಕು.

ಇತಿ ಸರ್ವಾಣಿ ಭೂತಾನಿ ಮದ್ಭಾವೇನ ಮಹಾದ್ಯುತೇ ।
ಸಭಾಜಯನ್ಮನ್ಯಮಾನೋ ಜ್ಞಾನಂ ಕೇವಲಮಾಶ್ರಿತಃ ॥೧೩॥

ತೇಜೋಮಯನಾದ ಉದ್ಧವನೇ! ಹೀಗೆ ಕೇವಲ ಜ್ಞಾನವನ್ನೇ ಆಶ್ರಯಿಸಿ ಸಮಸ್ತಪ್ರಾಣಿಗಳನ್ನೂ ನನ್ನ ಸ್ವರೂಪಗಳೇ—ಎಂದು ಭಾವಿಸಿ ಸಮಾದರಿಸತಕ್ಕವನು ಸಮದರ್ಶಿಯಾದ ಪಂಡಿತನೆಂಬುದು ನನ್ನ ಅಭಿಪ್ರಾಯವಾಗಿದೆ.

ಬ್ರಾಹ್ಮಣೇ ಪುಲ್ಕಸೇ ಸ್ತೇನೇ ಬ್ರಹ್ಮಣ್ಯೇಽರ್ಕೇ ಸ್ಫುಲಿಙ್ಗಕೇ ।
ಅಕ್ರೂರೇ ಕ್ರೂರಕೇ ಚೈವ ಸಮದೃಕ್ಪಣ್ಡಿತೋ ಮತಃ ॥೧೪॥

ಬ್ರಾಹ್ಮಣ-ಚಾಂಡಾಲ, ಕಳ್ಳ-ಬ್ರಾಹ್ಮಣಭಕ್ತ, ಸೂರ್ಯ-ಬೆಂಕಿಯ

ಕಿಡಿ, ಕ್ರೂರಿಯಲ್ಲದವನು ಮತ್ತು ಕ್ರೂರಿ ಇವರಲ್ಲಿ ಸಮದೃಷ್ಟಿಯನ್ನು ಹೊಂದಿರುವವನು ಪಂಡಿತನೆಂದು ನನ್ನ ಅಭಿಮತವಾಗಿದೆ.*

ನರೇಷ್ವಭೀಕ್ಷ್ಣಂ ಮದ್ಭಾವಂ ಪುಂಸೋ ಭಾವಯತೋಽಚಿರಾತ್ ।
ಸ್ಪರ್ಧಾಸೂಯಾತಿರಸ್ಕಾರಾಃ ಸಾಹಙ್ಕಾರಾ ವಿಯನ್ತಿ ಹಿ ॥೧೫॥

ಎಲ್ಲ ಮನುಷ್ಯರಲ್ಲಿಯೂ ನನ್ನ ಭಗವದ್ಭಾವವನ್ನೇ ಭಾವಿಸುವ ಪುರುಷನಿಗೆ ಬಹಳ ಬೇಗ ಅಹಂಕಾರದಿಂದ ಕೂಡಿದ, ಸ್ವಾರ್ಥ-ಅಸೂಯೆ-ತಿರಸ್ಕಾರಾದಿಗಳು ನಾಶವಾಗಿಬಿಡುತ್ತವೆ. ತನ್ನ ಆತ್ಮವನ್ನೇ ಎದುರಾಳಿಯ ಹೃದಯದಲ್ಲಿಯೂ ಕಾಣುವುದರಿಂದ ಅವನು ಯಾರೊಡನೆಯೂ ಸ್ಪರ್ಧಿಸಲು ಹೋಗುವುದಿಲ್ಲ.

ವಿಸೃಜ್ಯ ಸ್ಮಯಮಾನಾನ್ಸ್ವಾನ್ದೃಶಂ ವ್ರೀಡಾಂ ಚ ದೈಹಿಕೀಮ್ ।
ಪ್ರಣಮೇದ್ದಣ್ಡವದ್ಭೂಮಾವಾಶ್ವಚಾಣ್ಡಾಲಗೋಖರಮ್ ॥೧೬॥

ತನ್ನವರೇ ಹಾಸ್ಯಮಾಡಿಕೊಂಡು ನಗುತ್ತಿದ್ದರೂ ಅದನ್ನು ಲೆಕ್ಕಿಸಬಾರದು. ತಾನು ಉಚ್ಚ ಮತ್ತೊಬ್ಬನು ನೀಚ–ಮುಂತಾಗಿ ದೇಹಸ್ಥಿತಿಯಿಂದ ಯಾವುದನ್ನೂ ಪರಿಗಣಿಸಬಾರದು. ಸಮಸ್ತಪ್ರಾಣಿಗಳಲ್ಲಿಯೂ ಪರಮಾತ್ಮನು ವ್ಯಾಪ್ತನಾಗಿದ್ದಾನೆ. ನನ್ನಲ್ಲಿರುವ ಪರಮಾತ್ಮನೇ ಬೇರೆಯ ಪ್ರಾಣಿಗಳಲ್ಲಿಯೂ ಇದ್ದಾನೆ–ಎಂಬುದನ್ನು ದೃಢಪಡಿಸಿಕೊಂಡು ಲಜ್ಜೆ ಯನ್ನು ತೊರೆದು, ಹಾದಿಯಲ್ಲಿ ಸಿಕ್ಕುವ ನಾಯಿ-ಚಾಂಡಾಲ-ಗೋವು, ಹೇಸರಗತ್ತೆ ಇವುಗಳಲ್ಲಿಯೂ ನನ್ನಲ್ಲಿರುವ ಆತ್ಮನೇ ಇದ್ದಾನೆಂದು ಭಾವಿಸಿಕೊಂಡು ಭೂಮಿಯಲ್ಲಿ ಬಿದ್ದು ದೀರ್ಘದಂಡನಮಸ್ಕಾರವನ್ನು ಮಾಡಬೇಕು.

ಯಾವತ್ಸರ್ವೇಷು ಭೂತೇಷು ಮದ್ಭಾವೋ ನೋಪಜಾಯತೇ ।
ತಾವದೇವಮುಪಾಸೀತ ವಾಙ್ಮನಃಕಾಯವೃತ್ತಿಭಿಃ ॥೧೭॥

---

*ಇದೇ ಅಭಿಪ್ರಾಯವನ್ನು ಶ್ರೀಕೃಷ್ಣನು ಗೀತೆಯಲ್ಲಿ ಹೀಗೆ ಹೇಳಿದ್ದಾನೆ.:

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಣ್ಡಿತಾಃ ಸಮದರ್ಶಿನಃ ॥ (೧೮-೫)

ಪಂಡಿತರಾದವರು ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣನಲ್ಲಿಯೂ, ಗೋವಿ ನಲ್ಲಿಯೂ, ಆನೆಯಲ್ಲಿಯೂ, ನಾಯಿಯಲ್ಲಿಯೂ, ಚಂಡಾಲನಲ್ಲಿಯೂ ಸಮದೃಷ್ಟಿಯುಳ್ಳವರಾಗಿರುತ್ತಾರೆ.

ಉದ್ಧವ! ಎಲ್ಲಿಯವರೆಗೆ ಸಮಸ್ತಪ್ರಾಣಿಗಳಲ್ಲಿಯೂ ಭಗವದ್ಭಾವನೆಯು ಉಂಟಾಗುವುದಿಲ್ಲವೋ, ಸರ್ವಸಮದೃಷ್ಟಿಯಿರುವುದಿಲ್ಲವೋ ಅಲ್ಲಿಯವರೆಗೂ ಮಾತು, ಮನಸ್ಸು ಮತ್ತು ಶರೀರಗಳ ಸಂಕಲ್ಪ ಮತ್ತು ಕರ್ಮಗಳ ಮೂಲಕವಾಗಿ ಈ ವಿಧವಾಗಿ ನನ್ನ ಉಪಾಸನೆಯನ್ನು ಮಾಡುತ್ತಿರಬೇಕು.

ಸರ್ವಂ ಬ್ರಹ್ಮಾತ್ಮಕಂ ತಸ್ಯ ವಿದ್ಯಯಾಽತ್ಮಮನೀಷಯಾ ।
ಪರಿಪಶ್ಯನ್ನುಪರಮೇತ್ಸರ್ವತೋ ಮುಕ್ತಸಂಶಯಃ ॥೧೮॥

ಯಾವಾಗ ಸಾಧಕನು ಸರ್ವತ್ರ ಆತ್ಮಬುದ್ಧಿಯನ್ನೂ ಬ್ರಹ್ಮಬುದ್ಧಿಯನ್ನೂ ಅಭ್ಯಾಸಮಾಡುವನೋ ಆಗ ಅತ್ಯಲ್ಪದಿವಸಗಳಲ್ಲಿಯೇ ಆತನಿಗೆ ಜ್ಞಾನೋದಯವುಂಟಾಗಿ ಸಮಸ್ತವೂ ಬ್ರಹ್ಮಮಯವಾಗಿಯೇ ಕಾಣುತ್ತದೆ. ಹಾಗೆ ಸರ್ವತ್ರಸಮದೃಷ್ಟಿಯು ಬಂದನಂತರ ಸಮಸ್ತ ಸಂದೇಹಗಳೂ ತಾವೇತಾವಾಗಿ ನಿವಾರಣೆಯಾಗುತ್ತವೆ. ಹೀಗೆ ಅವನು ನನ್ನ ಸಾಕ್ಷಾತ್ಕಾರವನ್ನು ಮಾಡಿಕೊಂಡು ಎಲ್ಲೆಲ್ಲಿಯೂ ಬ್ರಹ್ಮವನ್ನೇ ಕಾಣುತ್ತಾ ಸಂಸಾರಕ್ಕೆ ಸಂಬಂಧಿಸಿದ ಸಮಸ್ತಕ್ರಿಯೆಗಳಿಂದಲೂ ಉಪರತನಾಗುತ್ತಾನೆ.

ಅಯಂ ಹಿ ಸರ್ವಕಲ್ಪಾನಾಂ ಸಧ್ರೀಚೀನೋ ಮತೋ ಮಮ ।
ಮದ್ಭಾವಃ ಸರ್ವಭೂತೇಷು ಮನೋವಾಕ್ಕಾಯವೃತ್ತಿಭಿಃ ॥೧೯॥

ಸಮಸ್ತಪ್ರಾಣಿಗಳಲ್ಲಿಯೂ ಮತ್ತು ಸಮಸ್ತಪದಾರ್ಥಗಳಲ್ಲಿಯೂ ಕೂಡ ಮಾತು-ಮನಸ್ಸು ಮತ್ತು ಶರೀರಗಳ ಮೂಲಕವಾಗಿ ನಾನೆಂಬ ಆತ್ಮಭಾವನೆಯನ್ನೇ ಇಟ್ಟುಕೊಂಡು ಸಾಧನೆಯನ್ನು ಮಾಡುವುದು ಉಳಿದ ಎಲ್ಲ ವಿಧವಾದ ಸಾಧನೆಗಳಿಗಿಂತಲೂ ಶ್ರೇಷ್ಠವಾದುದೆಂದು ನಾನು ಭಾವಿಸುತ್ತೇನೆ.

ನಹ್ಯಙ್ಗೋಪಕ್ರಮೇ ಧ್ವಂಸೋ ಮದ್ಧರ್ಮಸ್ಯೋದ್ಧವಾಣ್ವಪಿ ।
ಮಯಾ ವ್ಯವಸಿತಃ ಸಮ್ಯಙ್ನಿರ್ಗುಣತ್ವಾದನಾಶಿಷಃ ॥೨೦॥

ಪ್ರಿಯಸಖನೇ! ಇದೇ ನನ್ನ ಭಾಗವತಧರ್ಮವಾಗಿದೆ. ಈ ಧರ್ಮವನ್ನು ಒಂದು ಬಾರಿ ಪ್ರಾರಂಭಿಸಿಬಿಟ್ಟರೆ ಯಾವುದೇ ಪ್ರಕಾರದಿಂದಲೂ

ಅದಕ್ಕೆ ಒಂದಣುವಿನಷ್ಟೂ ನಾಶವುಂಟಾಗುವುದಿಲ್ಲ. ಏಕೆಂದರೆ: ಇದು ನಿಷ್ಕಾಮಕರ್ಮ. ತ್ರಿಗುಣಗಳ ಸಂಬಂಧವಿಲ್ಲದ್ದು. ಮೇಲಾಗಿ ನನ್ನಿಂದಲೇ ಈ ಧರ್ಮವು ಚೆನ್ನಾಗಿ ನಿರ್ಣಯಿಸಿ ಹೇಳಲ್ಪಟ್ಟಿದೆ.*

ಯೋ ಯೋ ಮಯಿ ಪರೇ ಧರ್ಮಃ ಕಲ್ಪ್ಯತೇ ನಿಷ್ಫಲಾಯ ಚೇತ್ ।
ತದಾಯಾಸೋ ನಿರರ್ಥಃ ಸ್ಯಾದ್ಭಯಾದೇರಿವ ಸತ್ತಮ ॥೨೧॥

ಭಾಗವತಧರ್ಮಮಾರ್ಗದಲ್ಲಿ ಸಾಧಕನಿಗೆ ಯಾವುದೇ ವಿಧವಾದ ಅಡೆ–ತಡೆಗಳೂ ಉಂಟಾಗುವುದಿಲ್ಲ. ಈ ಭಾಗವತಧರ್ಮದ ಸಾಧಕನು ಸಮಯಗಳಲ್ಲಿ ಭಯ-ಶೋಕಾದಿಗಳಿಂದ ಓಡಬೇಕಾಗಿ ಬಂದರೂ ಅಳಬೇಕಾಗಿ ಬಂದರೂ ಆ ಸಮಯಲ್ಲಿ ಇಂತಹ ನಿರರ್ಥಕವಾದ ಕರ್ಮ

---

*ಹೋಲಿಕೆ.: ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ॥
(ಶ್ರೀಗೀತಾ)

ಸರ್ವಾತ್ಮಕ ಬ್ರಹ್ಮೋಪಾಸನೆಯೆಂಬ ಯಾವ ನನ್ನ ಈ ಧರ್ಮವುಂಟೋ ಅದನ್ನು ಆರಂಭಿಸಿಬಿಟ್ಟರೆ ಅದು ಎಂದೂ ಎಳ್ಳಷ್ಟೂ ನಾಶಹೊಂದುವುದಿಲ್ಲ. ಅದಕ್ಕೆ ಎಳ್ಳಷ್ಟೂ ಫಲರಾಹಿತ್ಯವಿಲ್ಲ. ಫಲವು ಸಿದ್ಧಿಸಿಯೇ ಸಿದ್ಧಿಸುವುದು. ಅದು ನನ್ನ ನಿಶ್ಚಯವಾಗಿದೆ.
ಶ್ರೀಗೀತೆಯಲ್ಲಿ :ನ ಹಿ ಕಲ್ಯಾಣ ಕೃತ್ಕಶ್ಚಿತ್ ದುರ್ಗತಿಂ ತಾತ ಗಚ್ಛತಿ ।
ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ॥

ಎಂದು ಹೇಳಿರುವಂತೆ. ಏಕೆಂದರೆ : ನಾನು ಉಪದೇಶಿಸಿದ ಧರ್ಮವು ನಿಷ್ಕಾಮವಾದುದು. ಗುಣಬಂಧನಕ್ಕೆ ಕಾರಣವಾಗದೇ ಇರುವುದು. ಏಕೆಂದರೆ : ಈ ಧರ್ಮವನ್ನು ಸರಿಯಾಗಿ ಪ್ರಾರಂಭಮಾಡಿಬಿಟ್ಟರೆ ಸಾಕು. ಒಡನೆಯೇ ಅಥವಾ ಕಾಲಾಂತರದಲ್ಲಿ ಗುಣತ್ರಯಸಂಬಂಧವಿಲ್ಲದೇ ಇರುವಿಕೆಯನ್ನು ಉಂಟುಮಾಡಿಯೇ ಮಾಡುತ್ತದೆ. ಆ ಧರ್ಮವನ್ನು ಉಪಕ್ರಮಮಾಡಿದರೇ ಈ ಫಲವಿರುವಾಗ ಇನ್ನು ನನ್ನ ಆ ಧರ್ಮಕ್ಕೆ ಧ್ವಂಸವು ಎಂದಿಗೂ ಇಲ್ಲವೆಂಬುದನ್ನು ಹೇಳಬೇಕಾಗಿಲ್ಲ.
(ವೀರರಾಘವೀಯ)

ನಿಷ್ಕಾಮವಾದ ನನ್ನ ಈ ಧರ್ಮವನ್ನು ಆರಂಭಿಸಿದ ಬಳಿಕ ಅದಕ್ಕೆ ಎಳ್ಳಷ್ಟೂ ನಾಶವಿಲ್ಲ. ಫಲವೈಗುಣ್ಯವೇ ಮುಂತಾದುವುಗಳಿಂದ ಕಿಂಚಿತ್ತೂ ನಾಶವಿಲ್ಲ. ಏಕೆಂದರೆ : ಗುಣರಹಿತನಾದ ನಾನೇ ಇದನ್ನು ಚೆನ್ನಾಗಿ ನಿರ್ಣಯಮಾಡಿರುತ್ತೇನೆ. ಮನುವೇ ಮುಂತಾದವರ ಮೂಲಕ ನಿರ್ಣಯವಾಗಿ ಹೇಳದೇ ನಾನೇ ನೇರವಾಗಿ ನಿರ್ಣಯಿಸಿ ಹೇಳಿದ್ದೇನೆ. (ಶ್ರೀಧರೀಯ)

ಗಳನ್ನು ಕೂಡ ನನಗೆ ಸಮರ್ಪಿಸಿಬಿಟ್ಟರೆ ಆ ಓಡುವುದು, ಅಳುವುದು ಕೂಡ ಧರ್ಮವಾಗಿಯೇ ಪರಿಣಮಿಸುತ್ತವೆ. ಹೀಗಿರುವಾಗ ಭಾಗವತ ಧರ್ಮಕ್ಕೆ ನಾಶವಾದರೂ ಹೇಗೇತಾನೇ ಉಂಟಾದೀತು?*

ಏಷಾ ಬುದ್ಧಿಮತಾಂ ಬುದ್ಧಿರ್ಮನೀಷಾ ಚ ಮನೀಷಿಣಾಮ್ ।
ಯತ್ಸತ್ಯಮನೃತೇನೇಹ ಮರ್ತ್ಯೇನಾಪ್ನೋತಿ ಮಾಮೃತಮ್ ॥೨೨॥

ಪ್ರಾಣಸಖನೇ! ವಿನಾಶಿಯಾದ ಮತ್ತು ಅಸತ್ಯವಾದ ಈ ಶರೀರದ ಮೂಲಕವಾಗಿ ಅವಿನಾಶಿಯೂ ಸತ್ಯಸ್ವರೂಪನೂ ಆದ ನನ್ನನ್ನು ಪಡೆದುಕೊಳ್ಳುವುದೇ ಬುದ್ಧಿಶಾಲಿಗಳಲ್ಲಿರುವ ವಿವೇಕ ; ಚತುರರ ಚಾತುರ್ಯ. ಇದೇನೂ ಸಾಮಾನ್ಯವಿಷಯವಲ್ಲ.

ಏಷ ತೇಽಭಿಹಿತಃ ಕೃತ್ಸ್ನೋ ಬ್ರಹ್ಮವಾದಸ್ಯ ಸಙ್ಗ್ರಹಃ ।
ಸಮಾಸವ್ಯಾಸವಿಧಿನಾ ದೇವಾನಾಮಪಿ ದುರ್ಗಮಃ ॥೨೩॥

ಉದ್ಧವ! ಹೀಗೆ ನಾನು ನಿನಗೆ ಸಮಗ್ರವಾದ ಬ್ರಹ್ಮವಿದ್ಯೆಯ ರಹಸ್ಯವನ್ನು ಸಂಗ್ರಹವಾಗಿಯೂ ವಿಸ್ತಾರವಾಗಿಯೂ ಹೇಳಿರುತ್ತೇನೆ. ಇದು ಕೇವಲ ಮನುಷ್ಯರಿಗೆ ಮಾತ್ರವಲ್ಲ ; ದೇವತೆಗಳಿಗೂ ತಿಳಿದುಕೊಳ್ಳಲು ಅಸಾಧ್ಯವಾದುದು.

ಅಭೀಕ್ಷ್ಣಶಸ್ತೇ ಗದಿತಂ ಜ್ಞಾನಂ ವಿಸ್ಪಷ್ಟಯುಕ್ತಿಮತ್ ।
ಏತದ್ವಿಜ್ಞಾಯ ಮುಚ್ಯೇತ ಪುರುಷೋ ನಷ್ಟಸಂಶಯಃ ॥೨೪॥

---

*ಚಿಂತಿಸುವುದು, ಕಣ್ಣು ಮಿಟಿಕಿಸುವುದು ಇವೇ ಮುಂತಾದ ವ್ಯಾಪಾರಗಳೇ ಆಗಲೀ, ಕೇವಲ ಆಯಾಸಾತ್ಮಕವಾದ ಕರ್ಮಗಳೇ ಆಗಲೀ ಫಲಾಭಿಸಂಧಿಯನ್ನು ಬಿಟ್ಟು ಪರಮಪುರುಷನಾದ ನನಗೆ ಸಮರ್ಪಿಸಿಬಿಟ್ಟರೆ ;

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ ಬುಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್।
ಕರೋಮಿ ಯದ್ಯತ್ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯಾಮಿ॥

ಎಂಬ ಭಾವದಿಂದ ಅವು ನನಗೆ ಸಮರ್ಪಿಸಲ್ಪಟ್ಟರೆ ಅದು ಧರ್ಮವೇ ಆಗುತ್ತದೆ. ಹೇಗೆಂದರೆ : ಕಂಸಾದಿಗಳಲ್ಲಿದ್ದ ಭಯವೂ, ಗೋಪಿಯರಲ್ಲಿದ್ದ ಕಾಮವೂ, ಶಿಶುಪಾಲನೇ ಮುಂತಾದವರಲ್ಲಿದ್ದ ದ್ವೇಷವೂ, ನಿರರ್ಥಕವೂ ಕೇವಲ ಆಯಾಸಕರವೂ

ನಾನು ಸುಸ್ಪಷ್ಟವಾಗಿ ಮತ್ತು ಯುಕ್ತಿಯುಕ್ತವಾಗಿ ಯಾವ ಬ್ರಹ್ಮಜ್ಞಾನದ ವರ್ಣನೆಯನ್ನು ಪುನಃ-ಪುನಃ ಮಾಡಿರುವೆನೋ ಅದನ್ನು ತಿಳಿದವನ ಹೃದಯದಲ್ಲಿ ಸಂಶಯವೆಂಬ ಗಂಟು ಛಿನ್ನ-ಭಿನ್ನವಾಗಿ ಹೋಗುತ್ತದೆ. ಒಡನೆಯೇ ಅವನು ಮುಕ್ತನಾಗುತ್ತಾನೆ.

ಸುವಿವಿಕ್ತಂ ತವ ಪ್ರಶ್ನಂ ಮಯ್ಯೈತದಪಿ ಧಾರಯೇತ್ ।
ಸನಾತನಂ ಬ್ರಹ್ಮಗುಹ್ಯಂ ಪರಂ ಬ್ರಹ್ಮಾಧಿಗಚ್ಛತಿ ॥೨೫॥

ಉದ್ಧವ! ನಾನು ನಿನ್ನ ಪ್ರಶ್ನೆಗಳಿಗೆ ಸಮುಚಿತವಾಗಿ ಉತ್ತರವನ್ನು ಕೊಟ್ಟಿರುತ್ತೇನೆ. ಯಾವ ಮನುಷ್ಯನು ನಮ್ಮ ಈ ಪ್ರಶ್ನೋತ್ತರಗಳನ್ನು ವಿಚಾರಪೂರ್ವಕವಾಗಿ ಧಾರಣಮಾಡುವನೋ ಅವನು ವೇದಗಳಿಗೂ ಪರಮ ರಹಸ್ಯವಾಗಿರುವ ಸನಾತನಪರಬ್ರಹ್ಮತತ್ತ್ವವನ್ನು ತಿಳಿದುಕೊಳ್ಳುತ್ತಾನೆ.

ಯ ಏತನ್ಮಮ ಭಕ್ತೇಷು ಸಮ್ಪ್ರದದ್ಯಾತ್ಸುಪುಷ್ಕಲಮ್ ।
ತಸ್ಯಾಹಂ ಬ್ರಹ್ಮದಾಯಸ್ಯ ದದಾಮ್ಯಾತ್ಮಾನಮಾತ್ಮನಾ ॥೨೬॥

ಯಾವಾತನು ಈ ಪರಬ್ರಹ್ಮವಿದ್ಯೆಯನ್ನು ನನ್ನ ಭಕ್ತರಿಗೆ ಪುಷ್ಕಳವಾಗಿ, ಉದಾರವಾಗಿ, ಸುಸ್ಪಷ್ಟವಾಗಿ ಉಪದೇಶಿಸುವನೋ ಅಂತಹ ಬ್ರಹ್ಮವಿದ್ಯಾದಾನಿಗೆ ನನ್ನನ್ನೇ ನಾನು ಕೊಟ್ಟುಕೊಂಡುಬಿಡುತ್ತೇನೆ.

ಯ ಏತತ್ಸಮಧೀಯೀತ ಪವಿತ್ರಂ ಪರಮಂ ಶುಚಿ ।
ಸ ಪೂಯೇತಾಹರಹರ್ಮಾಂ ಜ್ಞಾನದೀಪೇನ ದರ್ಶಯನ್ ॥೨೭॥

ಪ್ರಿಯಸಖನೇ! ಉದ್ಧವ! ನಮ್ಮ ಈ ಬ್ರಹ್ಮವಿದ್ಯಾಸಂವಾದವು

ಆಗಿದ್ದರೂ ಅವು ನನ್ನನ್ನು ಕುರಿತು ಹರಿಯುತ್ತಿದ್ದುದರಿಂದ ಅವು ಮೋಕ್ಷಫಲವನ್ನು ಕೊಡಲಿಲ್ಲವೇ? ಅದರಂತೆ– ಎಂದು ತಿಳಿಯುವುದು. (ವೀರರಾಘವೀಯ)

ಲೌಕಿಕವಾದ ಯಾವ ನಿರರ್ಥಕವಾದ ವ್ಯಾಪಾರವುಂಟೋ ಅದೂ ಕೂಡ ನಿಷ್ಕಾಮಭಾವದಿಂದ ನನಗೆ ಅರ್ಪಿಸಲ್ಪಟ್ಟರೆ ಧರ್ಮವೇ ಆಗಿಬಿಡುವುದು. ಉದಾಹರಣೆ : ಭಯ-ಶೋಕಗಳಿಂದ ಉಂಟಾದ ಪಲಾಯನ, ಕೂಗಿಕೊಳ್ಳುವಿಕೆ–ಮುಂತಾದ ಲೌಕಿಕ ವ್ಯಾಪಾರಗಳನ್ನೂ ನನಗೆ ಅರ್ಪಿಸಿದರೆ ಅದು ಧರ್ಮವೇ ಆಗಿಬಿಡುವುದು. ಹೀಗಿರುವಾಗ ನನ್ನದೇ ಆದ ಧರ್ಮಕ್ಕೆ ಅಳಿವಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

(ಶ್ರೀಧರೀಯ)

ಪರಮಪವಿತ್ರವಾದುದು. ಇತರರನ್ನೂ ಪವಿತ್ರಗೊಳಿಸತಕ್ಕದ್ದು. ನಮ್ಮ ಈ ಪವಿತ್ರತಮವಾದ ಸಂವಾದವನ್ನು ಯಾವನು ಅನುದಿನವೂ ಇತರರಿಗೂ ಕೇಳಿಸುವಂತೆ ಪಾರಾಯಣಮಾಡುವನೋ ಅಂತಹವನು ಈ ಜ್ಞಾನದೀಪದ ಮೂಲಕವಾಗಿ ಇತರರಿಗೂ ನನ್ನ ದರ್ಶನವನ್ನು ಮಾಡಿಸುವುದರಿಂದ ಪರಮಪವಿತ್ರನಾಗುತ್ತಾನೆ.

ಯ ಏತಚ್ಛ್ರದ್ಧಯಾ ನಿತ್ಯಮವ್ಯಗ್ರಃ ಶೃಣುಯಾನ್ನರಃ ।
ಮಯಿ ಭಕ್ತಿಂ ಪರಾಂ ಕುರ್ವನ್ಕರ್ಮಭಿರ್ನ ಸ ಬಧ್ಯತೇ ॥೨೮॥

ಯಾವನು ನಮ್ಮ ಈ ಬ್ರಹ್ಮಜ್ಞಾನದ ಸಂವಾದವನ್ನು ಶ್ರದ್ಧಾಪೂರ್ವಕವಾಗಿ ಮತ್ತು ಏಕಾಗ್ರಚಿತ್ತನಾಗಿ ಅನುದಿನವೂ ಶ್ರವಣ ಮಾಡುವನೋ ಅಂತಹವನಿಗೆ ನನ್ನಲ್ಲಿ ಪರಾಭಕ್ತಿಯುಂಟಾಗಿ ಯಾವುದೇ ಕರ್ಮಗಳಿಂದಲೂ ಅವನು ಬಂಧಿಸಲ್ಪಡುವುದಿಲ್ಲ. (ಅಂತಹವನಿಗೆ ಯಾವ ಕರ್ಮಬಂಧನವೂ ಇರುವುದಿಲ್ಲ.)

ಅಪ್ಯುದ್ಧವ ತ್ವಯಾ ಬ್ರಹ್ಮ ಸಖೇ ಸಮವಧಾರಿತಮ್ ।
ಅಪಿ ತೇ ವಿಗತೋ ಮೋಹಃ ಶೋಕಶ್ಚಾಸೌ ಮನೋಭವಃ ॥೨೯॥

ಪ್ರಿಯಸಖನೇ! ಉದ್ಧವ! ನೀನು ಚೆನ್ನಾಗಿ ಬ್ರಹ್ಮತತ್ತ್ವದ ಸ್ವರೂಪವನ್ನು ತಿಳಿದುಕೊಂಡೆಯಾ? ನಿನ್ನ ಮನಸ್ಸಿನ ಶೋಕ-ಮೋಹಗಳು ದೂರವಾದುವೇ?*

ನೈತತ್ತ್ವಯಾ ದಾಮ್ಭಿಕಾಯ ನಾಸ್ತಿಕಾಯ ಶಠಾಯ ಚ ।
ಅಶುಶ್ರೂಷೋರಭಕ್ತಾಯ ದುರ್ವಿನೀತಾಯ ದೀಯತಾಮ್ ॥೩೦॥

ಉದ್ಧವ! ನೀನು ಈ ಬ್ರಹ್ಮತತ್ತ್ವದ ರಹಸ್ಯವನ್ನು ದಾಂಭಿಕನಿಗಾಗಲೀ, ನಾಸ್ತಿಕನಿಗಾಗಲೀ, ಶಠನಿಗಾಗಲೀ, ಶ್ರದ್ಧೆಯಿಲ್ಲದವನಿಗಾಗಲೀ,

---

*ಶ್ರೀಕೃಷ್ಣನು ಗೀತೆಯಲ್ಲಿ ಅರ್ಜುನನನ್ನು ಕುರಿತು ಹೇಳುತ್ತಾನೆ.:

ಕಚ್ಚಿದೇತಚ್ಛ್ರುತಂ ಪಾರ್ಥ ತ್ವಯೈಕಾಗ್ರೇಣ ಚೇತಸಾ ।
ಕಚ್ಚಿದಜ್ಞಾನಸಂಮೋಹಃ ಪ್ರನಷ್ಟಸ್ತೇ ಧನಂಜಯ ॥ (೭೨-೧೮)

ಪಾರ್ಥನೇ! ನೀನು ಇದನ್ನು ಏಕಾಗ್ರಚಿತ್ತನಾಗಿ ಕೇಳಿದೆಯಾ? ನಿನಗೆ ಅಜ್ಞಾನದಿಂದ ಉಂಟಾಗಿದ್ದ ಮೋಹವು ಕಳೆದುಹೋಯಿತೇ?

ಭಕ್ತಿಯಿಲ್ಲದವನಿಗಾಗಲೀ, ಉದ್ಧಟನಿಗಾಗಲೀ ಯಾವಾಗಲೂ ಹೇಳಬಾರದು.*

ಏತೈರ್ದೋಷೈರ್ವಿಹೀನಾಯ ಬ್ರಹ್ಮಣ್ಯಾಯ ಪ್ರಿಯಾಯ ಚ ।
ಸಾಧವೇ ಶುಚಯೇ ಬ್ರೂಯಾದ್ಭಕ್ತಿಃ ಸ್ಯಾಚ್ಛೂದ್ರಯೋಷಿತಾಮ್ ॥

ದಂಭವೇ ಮೊದಲಾದ ಈ ದೋಷಗಳಿಂದ ರಹಿತನಾದ ಬ್ರಾಹ್ಮಣ ಭಕ್ತನಿಗೂ, ವೇದಾಧ್ಯಯನಮಾಡಿರುವವನಿಗೂ, ಬ್ರಾಹ್ಮಣಪ್ರಿಯನಿಗೂ, ಸಾಧುವಿಗೂ, ಸತ್ಪುರುಷರ ಸಹವಾಸದಿಂದ ಪವಿತ್ರನಾಗಿರತಕ್ಕವನಿಗೂ ಈ ಬ್ರಹ್ಮತತ್ತ್ವದ ರಹಸ್ಯವನ್ನು ಹೇಳಬೇಕು. ಶೂದ್ರರಿಗೂ ಸ್ತ್ರೀಯರಿಗೂ ನನ್ನಲ್ಲಿ ಭಕ್ತಿಯಿರುವುದಾದರೆ ಅವರಿಗೂ ಈ ಬ್ರಹ್ಮತತ್ತ್ವವನ್ನು ಹೇಳಬಹುದು.

ನೈತದ್ವಿಜ್ಞಾಯ ಜಿಜ್ಞಾಸೋರ್ಜ್ಞಾತವ್ಯಮವಶಿಷ್ಯತೇ ।
ಪೀತ್ವಾ ಪೀಯೂಷಮಮೃತಂ ಪಾತವ್ಯಂ ನಾವಶಿಷ್ಯತೇ ॥೩೨॥

ಅತ್ಯಂತರುಚಿಕರವಾದ ಅಮೃತವನ್ನು ಕುಡಿದ ಬಳಿಕ ಹೇಗೆ ಬೇರೆ ಕುಡಿಯಬೇಕಾದ್ದು ಯಾವುದೂ ಇರುವುದಿಲ್ಲವೋ–ಅದೇ ರೀತಿಯಲ್ಲಿ ಅಮೃತಾನಂದವನ್ನೀಯುವ ಈ ಬ್ರಹ್ಮತತ್ತ್ವವನ್ನು ತಿಳಿದ ಜಿಜ್ಞಾಸುವಿಗೆ ತಿಳಿಯಬೇಕಾದುದು ಬೇರೆ ಯಾವುದೂ ಇರುವುದಿಲ್ಲ.

ಜ್ಞಾನೇ ಕರ್ಮಣಿ ಯೋಗೇ ಚ ವಾರ್ತಾಯಾಂ ದಣ್ಡಧಾರಣೇ ।
ಯಾವಾನರ್ಥೋ ನೃಣಾಂ ತಾತ ತಾವಾಂಸ್ತೇऽಹಂ ಚತುರ್ವಿಧಃ ॥೩೩॥

ಪ್ರಿಯಸಖನೇ! ಉದ್ಧವ! ಮನುಷ್ಯರಿಗೆ ಜ್ಞಾನ, ಕರ್ಮ, ಯೋಗ, ವಾಣಿಜ್ಯ ಮತ್ತು ದಂಡನೀತಿ ಇವುಗಳಿಂದ ಕ್ರಮವಾಗಿ ಮೋಕ್ಷ, ಧರ್ಮ, ಕಾಮ ಮತ್ತು ಅರ್ಥರೂಪವಾದ ಫಲಗಳು ಪ್ರಾಪ್ತವಾಗುತ್ತವೆ. ಆದರೆ

---

*ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನನ್ನು ಕುರಿತು ಹೇಳುತ್ತಾನೆ :

ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ ।
ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋऽಭ್ಯಸೂಯತಿ ॥(೬೭-೧೮)

ಇದನ್ನು ತಪಸ್ವಿಯಲ್ಲದವನಿಗೂ, ಭಕ್ತನಲ್ಲದವನಿಗೂ, ಗುರುಶುಶ್ರೂಷೆಯನ್ನು ಮಾಡದವನಿಗೂ, ನನ್ನಲ್ಲಿ ಅಸೂಯೆ ಇರುವವನಿಗೂ ಹೇಳಬಾರದು.

ನಿನ್ನಂತಹ ಅನನ್ಯಭಕ್ತರಿಗೆ ಆ ನಾಲ್ಕು ಪುರುಷಾರ್ಥಗಳ ಫಲವೂ ನಾನೇ ಆಗಿರುತ್ತೇನೆ.

ಮರ್ತ್ಯೋ ಯದಾ ತ್ಯಕ್ತಸಮಸ್ತಕರ್ಮಾ
ನಿರ್ವೇದಿತಾತ್ಮಾ ವಿಚಿಕೀರ್ಷಿತೋ ಮೇ ।
ತದಾಮೃತತ್ವಂ ಪ್ರತಿಪದ್ಯಮಾನೋ
ಮಯಾಽತ್ಮಭೂಯಾಯ ಚ ಕಲ್ಪತೇ ವೈ ॥೩೪॥

ಯಾವಾಗ ಮನುಷ್ಯನು ಸಮಸ್ತಕರ್ಮ (ಫಲ)ಗಳನ್ನೂ ಪರಿತ್ಯಜಿಸಿ ನನ್ನಲ್ಲಿ ಆತ್ಮಸಮರ್ಪಣವನ್ನು ಮಾಡಿಕೊಳ್ಳುವನೋ ಆಗ ಅವನು ನನ್ನ ಉಪಾಸನೆಯನ್ನು ಮಾಡಲು ಸಂಪೂರ್ಣವಾಗಿ ಯೋಗ್ಯನಾಗುವನು. ಆ ಉಪಾಸನೆಯಿಂದ ಮೋಕ್ಷವನ್ನೂ, ನನ್ನ ಐಶ್ವರ್ಯಕ್ಕೆ ಸಮಾನವಾದ ಐಶ್ವರ್ಯವನ್ನೂ ಪಡೆದುಕೊಳ್ಳುವನು ಮತ್ತು ನನ್ನಲ್ಲಿ ಸೇರಿಕೊಳ್ಳುವುದಕ್ಕೂ ಅರ್ಹನಾಗುವನು.”

ಶ್ರೀಶುಕಮುನಿಗಳು ಹೇಳುತ್ತಾರೆ :

“ಪರೀಕ್ಷಿತಮಹಾರಾಜ! ಆ ವೇಳೆಗೆ ಉದ್ಧವನು ಯೋಗಮಾರ್ಗದ ಸಮಗ್ರವಾದ ಉಪದೇಶವನ್ನು ಪಡೆದುಕೊಂಡಿದ್ದನು. ಭಗವಂತನ ಈ ಮಾತನ್ನು ಕೇಳಿ ಉದ್ಧವನ ಕಣ್ಣುಗಳಲ್ಲಿ ಆನಂದಬಾಷ್ಪವು ತುಂಬಿಕೊಂಡಿತು. ಪ್ರೇಮದ ಆಧಿಕ್ಯದಿಂದಾಗಿ ಗಂಟಲು ಕಟ್ಟಿಹೋಯಿತು. ಬಾಯಿಂದ ಮಾತುಗಳೇ ಹೊರಡಲಿಲ್ಲ. ಯಾವ ಮಾತನ್ನೂ ಆಡದೆ ಕೈಮುಗಿದುಕೊಂಡು ಉದ್ಧವನು ಶ್ರೀಕೃಷ್ಣನ ಮುಂದೆ ನಿಂತಿದ್ದನು. ಅವನು ಮನಸ್ಸು ಪ್ರೇಮಾವೇಶದಿಂದ ವಿಹ್ವಲವಾಗಿಬಿಟ್ಟಿದ್ದಿತು. ಪ್ರೇಮಾವೇಶವನ್ನು ಧೈರ್ಯದಿಂದ ತಡೆಹಿಡಿದು, ತಾನು ಕೃತಾರ್ಥನಾದೆನೆಂದು ಭಾವಿಸಿಕೊಂಡ ಉದ್ಧವನು, ತಲೆಯಿಂದ ಶ್ರೀಕೃಷ್ಣನ ದಿವ್ಯಚರಣಾರವಿಂದಗಳನ್ನು ಸ್ಪರ್ಶಿಸಿ (ತಲೆಬಾಗಿ ಶ್ರೀಕೃಷ್ಣನ ಪಾದಾರವಿಂದಗಳಿಗೆ ನಮಸ್ಕರಿಸಿ) ಬಳಿಕ ಕೈಮುಗಿದುಕೊಂಡು ತನ್ನ ಗೆಳೆಯನಾದ ಆ ಯದುಶ್ರೇಷ್ಠನಿಗೆ ಹೇಳಿದನು :

ವಿದ್ರಾವಿತೋ ಮೋಹಮಹಾನ್ಧಕಾರೋ
ಯ ಆಶ್ರಿತೋ ಮೇ ತವ ಸಂನಿಧಾನಾತ್ ।

ವಿಭಾವಸೋಃ ಕಿಂ ನು ಸಮೀಪಗಸ್ಯ
ಶೀತಂ ತಮೋ ಭೀಃ ಪ್ರಭವನ್ತ್ಯಜಾದ್ಯ ॥೩೭॥

“ಭಗವಂತನೇ! ಇಷ್ಟು ದಿವಸಗಳವರೆಗೆ ನನ್ನನ್ನು ಆಶ್ರಯಿಸಿಕೊಂಡಿದ್ದ ಅಜ್ಞಾನವೆಂಬ ಕಗ್ಗತ್ತಲು ನಿನ್ನ ದಿವ್ಯಸಾನ್ನಿಧ್ಯದಿಂದಾಗಿ ಓಡಿಹೋಯಿತು. ಬೆಂಕಿಯ ಸಮೀಪದಲ್ಲಿರುವವನಿಗೆ ಚಳಿಯ ಭಯವಿರುವುದೇ? ಕತ್ತಲು ಕಾಣಿಸುವುದೇ? ಕ್ರಿಮಿ-ಕೀಟಾದಿಗಳಿಂದ ಭಯವಿರುವುದೇ? ಹಾಗೆಯೇ ನಿನ್ನ ಸಾನ್ನಿಧ್ಯವೊಂದಿದ್ದರೆ ಯಾವುದೇ ವಿಧವಾದ ಅಜ್ಞಾನವೂ, ಹೃದಯದಲ್ಲಿ ಉಳಿಯುವುದಿಲ್ಲ.*

ಪ್ರತ್ಯರ್ಪಿತೋ ಮೇ ಭವತಾನುಕಂಪಿನಾ
ಭೃತ್ಯಾಯ ವಿಜ್ಞಾನಮಯಃ ಪ್ರದೀಪಃ ।
ಹಿತ್ವಾ ಕೃತಜ್ಞಸ್ತವ ಪಾದಮೂಲಂ
ಕೋಽನ್ಯತ್ಸಮೀಯಾಚ್ಛರಣಂ ತ್ವದೀಯಮ್ ॥೩೮॥

“ಭಗವಂತ! ನಿನ್ನ ಮನೋಮೋಹಕವಾದ ಮಾಯೆಯಿಂದ ನನ್ನ ಜ್ಞಾನದೀಪವೇ ಅಪಹೃತವಾಗಿಬಿಟ್ಟಿದ್ದಿತು. ಆದರೆ ದಯಾಮಯನಾದ ನಿನ್ನ ಕೃಪೆಯಿಂದಾಗಿ ಆ ಜ್ಞಾನದೀಪವು ಸೇವಕನಾದ ನನಗೆ ಪುನಃ ದೊರೆಯುವಂತಾಯಿತು. ಹೀಗಿರುವಾಗ ನಿನ್ನ ಕೃಪಾಪ್ರಸಾದದ ಅನುಭವ ವನ್ನು ಪಡೆದುಕೊಂಡನಂತರವೂ ನಿನ್ನ ಚರಣಕಮಲಗಳ ಆಶ್ರಯವನ್ನು ಬಿಟ್ಟು ಬೇರೆಯವರನ್ನು ಆಶ್ರಯಿಸಲು ಯಾವನು ತಾನೇ ಹೋಗುತ್ತಾನೆ?

ವೃಕ್ಣಶ್ಚ ಮೇ ಸುದೃಢಃ ಸ್ನೇಹಪಾಶೋ
ದಾಶಾರ್ಹವೃಷ್ಣ್ಯನ್ಧಕಸಾತ್ವತೇಷು ।

---

*ಗೀತೆಯಲ್ಲಿಯೂ ಶ್ರೀಕೃಷ್ಣನು: ಕಚ್ಚಿದಜ್ಞಾನಸಂಮೋಹಃ ಪ್ರಣಷ್ಟಸ್ತೇ ಧನಂಜಯ॥ (ಅಧ್ಯಾಯ ೧೮-ಶ್ಲೋಕ ೭೨)

ನಿನ್ನ ಅಜ್ಞಾನದಿಂದಾಗಿದ್ದ ಮೋಹವು ಕಳೆಯಿತೇ?–ಎಂಬ ಪ್ರಶ್ನೆಗೆ ಅರ್ಜುನನು ಹೇಳುತ್ತಾನೆ :

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ ।
ಸ್ಥಿತೋಽಸ್ಮಿ ಗತಸನ್ದೇಹಃ ಕರಿಷ್ಯೇ ವಚನಂ ತವ॥(೭೩-೧೮)

ನಿನ್ನ ಅನುಗ್ರಹದಿಂದ ನನ್ನ ಮೋಹವು (ಅಜ್ಞಾನವು) ತೊಲಗಿತು. ಸಂಶಯ ಗಳೆಲ್ಲವೂ ನಿವಾರಣೆಯಾದುವು. ಇನ್ನು ನೀನು ಹೇಳಿದಂತೆ ಮಾಡುವೆನು.

ಪ್ರಸಾರಿತಃ ಸೃಷ್ಟಿವಿವೃದ್ಧಯೇ ತ್ವಯಾ
ಸ್ವಮಾಯಯಾ ಹ್ಯಾತ್ಮಸುಬೋಧಹೇತಿನಾ ॥೩೯॥

ಪ್ರಿಯಸಖನೇ! ನೀನು ನಿನ್ನ ಮಾಯೆಯಿಂದ ಸೃಷ್ಟಿಕಾರ್ಯವನ್ನು ವೃದ್ಧಿಸುವ ಸಲುವಾಗಿ ದಾಶಾರ್ಹ, ವೃಷ್ಣಿ, ಅಂಧಕ ಮತ್ತು ಸಾತ್ವತ ವಂಶೀಯ ಯಾದವರೊಡನೆ ನನ್ನ ಸುದೃಢವಾದ ಸ್ನೇಹಪಾಶವನ್ನು ಕಲ್ಪಿಸಿದ್ದೆ. ಈಗ ಅದೇ ನೀನು ನಿನ್ನ ಆತ್ಮಬೋಧವೆಂಬ ತೀಕ್ಷ್ಣವಾದ ಕತ್ತಿಯಿಂದ ಆ ಸ್ನೇಹಬಂಧನವನ್ನು ಅನಾಯಾಸವಾಗಿ ಕತ್ತರಿಸಿಹಾಕಿದೆ.

ನಮೋಽಸ್ತು ತೇ ಮಹಾಯೋಗಿನ್ಪ್ರಪನ್ನಮನುಶಾಧಿ ಮಾಮ್ ।
ಯಥಾ ತ್ವಚ್ಚರಣಾಮ್ಭೋಜೇ ರತಿಃ ಸ್ಯಾದನಪಾಯಿನೀ ॥೪೦॥

ಮಹಾಯೋಗೇಶ್ವರನೇ! ನಿನಗೆ ನೂರು-ನೂರು ನಮಸ್ಕಾರಗಳಿರಲಿ. ನಿನ್ನ ಚರಣಕಮಲಗಳಲ್ಲಿ ನನಗೆ ನಿರಂತರವಾದ, ಅಪಾಯರಹಿತವಾದ, ಪ್ರೇಮಮಯವಾದ ಅನನ್ಯಭಕ್ತಿಭಾವವುಂಟಾಗುವ ರೀತಿಯಲ್ಲಿ ಶರಣಾಗತನಾಗಿರುವ ನನಗೆ ಆಜ್ಞಾಪಿಸು."

ಶ್ರೀಭಗವಂತನು ಹೇಳುತ್ತಾನೆ :

"ಉದ್ಧವ! ನೀನು ನನ್ನ ಆಜ್ಞಾನುಸಾರವಾಗಿ ಬದರೀ ಎಂಬ ಹೆಸರಿನ ನನ್ನ ಆಶ್ರಮಕ್ಕೆ ಹೋಗು. ಅಲ್ಲಿ ನನ್ನ ಪಾದತೀರ್ಥೋದಕ ವೆನಿಸಿದ ಅಲಕನಂದಾನದಿಯಲ್ಲಿ ಸ್ನಾನಾಚಮನಗಳನ್ನು ಮಾಡಿ ಶುದ್ಧನಾಗು. ಉದ್ಧವ! ಅಲಕನಂದಾನದಿಯ ದರ್ಶನಮಾತ್ರದಿಂದಲೇ ನಿನ್ನ ಸಮಸ್ತ ಪಾಪಗಳೂ ನಷ್ಟವಾಗಿ ಹೋಗುತ್ತವೆ. ಅಲ್ಲಿ ನೀನು ವಲ್ಕಲವನ್ನು ಧರಿಸಿ ಕಾಡಿನಲ್ಲಿ ಸಿಕ್ಕುವ ಗೆಡ್ಡೆ-ಗೆಣಸುಗಳನ್ನು ತಿನ್ನುತ್ತಾ, ಭೋಗಗಳ ಮೇಲಿನ ಅಪೇಕ್ಷೆಯನ್ನು ತೊರೆದು ನಿಸ್ಪೃಹನಾಗಿರು. ಶೀತೋಷ್ಣ, ಸುಖ-ದುಃಖಾದಿ ದ್ವಂದ್ವಗಳನ್ನು ಸೈರಿಸಿಕೊ. ಸುಶೀಲನೂ, ಜಿತೇಂದ್ರಿಯನೂ ಶಾಂತನೂ ಆಗಿರು. ಏಕಾಗ್ರವಾದ ಬುದ್ಧಿಯಿಂದ ಕೂಡಿದವನಾಗಿ ನನ್ನ ಸ್ವರೂಪ ಜ್ಞಾನದಲ್ಲಿಯೂ ಮತ್ತು ಜ್ಞಾನಾನು ಭವದಲ್ಲಿಯೂ ತತ್ಪರನಾಗಿರು. ನನ್ನಿಂದ ಏನನ್ನು ಕಲಿತೆಯೋ ಆ ಭಾಗವತಧರ್ಮವನ್ನು ನೀನು ಏಕಾಂತ ದಲ್ಲಿ ಕುಳಿತು ಚಿಂತಿಸುತ್ತಾ ಅದರ ಫಲರೂಪವಾದ ಆತ್ಮಾನಂದವನ್ನು

ಅನುಭವಿಸು. ನಿನ್ನ ಮಾತು–ಮನಸ್ಸುಗಳನ್ನು ನನ್ನಲ್ಲಿಯೇ ನೆಲೆಗೊಳಿಸು. ನಾನು ಹೇಳಿರುವ ಭಾಗವತಧರ್ಮದ ಆಚರಣೆಯಲ್ಲಿಯೇ ಯಾವಾಗಲೂ ನಿರತನಾಗಿರು. ಅನಂತರ ನೀನು ಸತ್ತ್ವ-ರಜಸ್ತಮೋಗುಣಗಳನ್ನೂ ಆ ಗುಣಗಳಿಂದ ಪ್ರಾಪ್ತವಾಗುವ ಮಾರ್ಗಗಳನ್ನೂ ದಾಟಿ ಪರಮಾರ್ಥ ಸ್ವರೂಪನಾದ ನನ್ನನ್ನೇ ಸೇರುವೆ.”

ಶ್ರೀಶುಕಮುನಿಗಳು ಹೇಳುತ್ತಾರೆ :

“ಪರೀಕ್ಷಿತಮಹಾರಾಜ! ಭಗವಂತನು ಹೀಗೆ ಉದ್ಧವನಿಗೆ ಉಪದೇಶಿಸಲು ಭಕ್ತೋತ್ತಮನಾದ ಉದ್ಧವನು ಭಗವಂತನನ್ನು ಪ್ರದಕ್ಷಿಣೆ ಮಾಡಿ ಅವನ ಚರಣಾರವಿಂದಗಳಲ್ಲಿ ಮುಡಿಯನ್ನಿರಿಸಿದನು. ಉದ್ಧವನು ಸಂಯೋಗ-ವಿಯೋಗದಿಂದ ಉಂಟಾಗುವ ಸುಖ-ದುಃಖಗಳ ದ್ವಂದ್ವದಿಂದ ಅತೀತನಾಗಿದ್ದುದು ನಿಜ. ಆದರೂ ಭಗವಂತನನ್ನು ಬಿಟ್ಟು ಹೊರಡುವ ಸಮಯದಲ್ಲಿ ಉದ್ಧವನ ಮನಸ್ಸು ಪ್ರೇಮಾವೇಶದಿಂದ ತುಂಬಿ ಹೋಯಿತು. ಆ ಭರದಲ್ಲಿ ಉದ್ಧವನು ತನ್ನ ಕಣ್ಣೀರಿನ ಕೋಡಿಯಿಂದಲೇ ಭಗವಂತನ ದಿವ್ಯಚರಣಾರವಿಂದಗಳನ್ನು ತೊಳೆದುಬಿಟ್ಟನು. ಉದ್ಧವನಿಗೆ ಶ್ರೀಕೃಷ್ಣನ ಮೇಲಿನ ಸ್ನೇಹವು ತ್ಯಜಿಸಲು ಅಸಾಧ್ಯವಾದುದಾಗಿದ್ದಿತು. ಶ್ರೀಕೃಷ್ಣನ ವಿಯೋಗದ ಕಲ್ಪನೆಯಿಂದಲೇ ಉದ್ಧವನು ಕಾತರನಾಗಿ ಬಿಟ್ಟಿದ್ದನು. ಅವನನ್ನು ಬಿಟ್ಟು ಹೋಗುವ ಸಾಮರ್ಥ್ಯವು ಉದ್ಧವನಿಗೆ ಇರಲಿಲ್ಲ. ಸ್ವಲ್ಪ ಸಮಯಾನಂತರ ಒಡೆಯನ ದಿವ್ಯಪಾದುಕೆಗಳನ್ನು ತಲೆಯಮೇಲಿಟ್ಟುಕೊಂಡು ಅಲ್ಲಿಂದ ಹೊರಟನು. ಆಗಲೂ ಅವನಿಗೆ ಶ್ರೀಕೃಷ್ಣನನ್ನು ಬಿಟ್ಟು ಹೋಗಲು ಸಾಧ್ಯವಾಗಲಿಲ್ಲ. ಪುನಃ ಹಿಂದಿರುಗಿ ಬಂದು ಶ್ರೀಕೃಷ್ಣನ ಚರಣಕಮಲಗಳಿಗೆ ಹತ್ತಾರು ಬಾರಿ ನಮಸ್ಕರಿಸಿದನು. ಅನ್ಯಮಾರ್ಗವೇ ಇಲ್ಲ. ಶ್ರೀಕೃಷ್ಣನನ್ನು ಬಿಟ್ಟು ಅವನ ಆಜ್ಞೆಯಂತೆ ಬದರಿಗೆ ಹೋಗಲೇಬೇಕು. ಭಾರವಾದ ಹೃದಯದಿಂದ ಹಿಂದು-ಹಿಂದಕ್ಕೆ ನೋಡುತ್ತಲೇ ಉದ್ಧವನು ಶ್ರೀಕೃಷ್ಣನನ್ನು ಶರೀರಮಾತ್ರದಿಂದ ಅಗಲಿದನು. ಮಹಾಭಗವದ್ಭಕ್ತನಾದ ಭಾಗವತೋತ್ತಮನಾದ ಉದ್ಧವನು ತನ್ನ ಸ್ವಾಮಿಯ ಶ್ರೀವಿಗ್ರಹವನ್ನು ತನ್ನ ಹೃದಯಗುಹೆಯಲ್ಲಿರಿಸಿಕೊಂಡು

ಗೆಳೆಯನ ಬದರಿಕಾಶ್ರಮಕ್ಕೆ ತೆರಳಿದನು. ಅಲ್ಲವನು ತಪೋಮಯವಾದ ಜೀವನವನ್ನು ನಡೆಸುತ್ತಾ ಜಗತ್ತಿನ ಏಕಮಾತ್ರ ಹಿತೈಷಿಯಾದ ಭಗವಾನ್ ಶ್ರೀಕೃಷ್ಣನ ಉಪದೇಶಾನುಸಾರವಾಗಿ ಭಾಗವತಧರ್ಮವನ್ನು ಆಚರಿಸುತ್ತಿದ್ದು, ಗೆಳೆಯನು ಹೇಳಿದ್ದಂತೆ ಕಡೆಗೆ ಅಮೃತಮಯವಾದ ಶ್ರೀಹರಿಯ ಪರಮಪದವನ್ನು ಸೇರಿಕೊಂಡನು.

ಪರೀಕ್ಷಿತಮಹಾರಾಜ! ಭಗವಾನ್ ಶಂಕರನೇ ಮೊದಲಾದ ಯೋಗೇಶ್ವರರೂ ಸಚ್ಚಿದಾನಂದಸ್ವರೂಪನಾದ ಶ್ರೀಕೃಷ್ಣನ ಪಾದಸೇವೆಯನ್ನು ಮಾಡುತ್ತಿರುತ್ತಾರೆ. ಅಂತಹ ಯೋಗೇಶ್ವರೇಶ್ವರನು ಸ್ವತಃ ತನ್ನ ಮುಖಾರವಿಂದದಿಂದಲೇ ಪರಮಪ್ರೇಮೀಭಕ್ತನಾದ ಉದ್ಧವನಿಗೆ ಭಾಗವತ ಧರ್ಮವೆಂಬ ಈ ಜ್ಞಾನಾಮೃತವನ್ನು ವಿತರಿಸಿದನು. ಈ ಜ್ಞಾನಾಮೃತವು ಆನಂದಮಹಾಸಾಗರದ ಸಾರವೇ ಆಗಿದೆ. ಇದನ್ನು ಶ್ರದ್ಧಾ-ಭಕ್ತಿಯುಕ್ತನಾಗಿ ಯಾವನು ಸೇವಿಸುವನೋ ಅವನು ಒಡನೆಯೇ ಮುಕ್ತನಾಗಿಬಿಡುತ್ತಾನೆ. ಅಂತಹ ಪ್ರೇಮಿಭಕ್ತನ ಸಂಗದಿಂದ ವಿಶ್ವವೇ ಮುಕ್ತವಾಗಿ ಬಿಡುತ್ತದೆ.

ಭವಭಯಮಪಹನ್ತುಂ ಜ್ಞಾನವಿಜ್ಞಾನಸಾರಂ
ನಿಗಮಕೃದುಪಜಹ್ರೇ ಭೃಙ್ಗವದ್ವೇದಸಾರಮ್ ।
ಅಮೃತಮುದಧಿತಶ್ಚಾಪಾಯಯದ್ಭೃತ್ಯವರ್ಗಾನ್
ಪುರುಷಮೃಷಭಮಾದ್ಯಂ ಕೃಷ್ಣಸಂಜ್ಞಂ ನತೋಽಸ್ಮಿ ॥

ಪರೀಕ್ಷಿತಮಹಾರಾಜ! ದುಂಬಿಯು ಯಾವ ರೀತಿಯಲ್ಲಿ ಬಗೆ-ಬಗೆಯ ಪುಷ್ಪಗಳಿಂದ ಮಧುವನ್ನು ಸಂಗ್ರಹಿಸುತ್ತದೆಯೋ–ಅದೇ ರೀತಿಯಲ್ಲಿ ವೇದಗಳ ಪ್ರಕಾಶಕನಾದ ಶ್ರೀಕೃಷ್ಣನು ಭಕ್ತರನ್ನು ಸಂಸಾರಸಾಗರದಿಂದ ಮುಕ್ತಿಗೊಳಿಸುವ ಸಲುವಾಗಿ ಜ್ಞಾನ-ವಿಜ್ಞಾನಸಾರಭೂತವಾದ ಈ ವೇದಸಾರವನ್ನು ಸಂಗ್ರಹಿಸಿದನು. ಮುಪ್ಪು-ಸಾವುಗಳ ಭಯವನ್ನು ಹೋಗಲಾಡಿಸುವ ಸಲುವಾಗಿ ಕ್ಷೀರಸಮುದ್ರವನ್ನು ಕಡೆದು ಅಮೃತವನ್ನು ಪಡೆದು ಅದನ್ನು ಕ್ರಮವಾಗಿ ನಿವೃತ್ತಿಮಾರ್ಗಿಗಳಾದ ಮತ್ತು ಪ್ರವೃತ್ತಿ ಮಾರ್ಗಿಗಳಾದ ಭಕ್ತರಿಗೆ ಕುಡಿಸಿದನು. ಪುರುಷೋತ್ತಮನಾದ ಭಗವಾನ್

ಶ್ರೀಕೃಷ್ಣನು ಸಮಸ್ತ ಜಗತ್ತಿಗೂ ಮೂಲಕಾರಣನಾಗಿದ್ದಾನೆ. ಅಂತಹ ಪರಮಪುರುಷನ ಚರಣಕಮಲಗಳಿಗೆ ನಮಸ್ಕರಿಸುತ್ತೇನೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಏಕಾದಶಸ್ಕಂಧದ ೨೯ನೆಯ ಅಧ್ಯಾಯವು ಮುಗಿಯಿತು.

ಏಕಾದಶಸ್ಕಂಧ ೩೦ನೆಯ ಅಧ್ಯಾಯ

ಯದುಕುಲದ ಸಂಹಾರ

ಪರೀಕ್ಷಿದ್ರಾಜನು ಪ್ರಶ್ನಿಸುತ್ತಾನೆ :

ತತೋ ಮಹಾಭಾಗವತ ಉದ್ಧವೇ ನಿರ್ಗತೇ ವನಮ್ ।
ದ್ವಾರವತ್ಯಾಂ ಕಿಮಕರೋದ್ಭಗವಾನ್ ಭೂತಭಾವನಃ ॥೧॥

“ಪೂಜ್ಯರೇ! ಮಹಾಭಾಗವತನಾದ ಉದ್ಧವನು ಬದರೀವನಕ್ಕೆ ಹೊರಟುಹೋದನಂತರ ಪ್ರಾಣಿಗಳ ಧಾರಕನೂ ಮತ್ತು ನಿಯಾಮಕನೂ ಆದ ಭಗವಾನ್ ಶ್ರೀಕೃಷ್ಣನು ಮುಂದೇನು ಮಾಡಿದನು?–ಎಂಬುದನ್ನು ಹೇಳಿರಿ.

ಯದುವಂಶಶಿರೋಮಣಿಯಾದ ಭಗವಾನ್ ಶ್ರೀಕೃಷ್ಣನು ತನ್ನ ಕುಲವು ಬ್ರಾಹ್ಮಣರ ಶಾಪದಿಂದ ಗ್ರಸ್ತವಾದನಂತರ ಸಮಸ್ತರ ಕಣ್ಣುಗಳಿಗೂ ಆನಂದಕರವಾಗಿದ್ದ ಲೀಲಾಮಾನುಷವಿಗ್ರಹವನ್ನು ಹೇಗೆ ಪರಿತ್ಯಜಿಸಿದನು? ಶ್ರೀಕೃಷ್ಣನ ಪ್ರೇಮಿಗಳಾದ ಅಬಲೆಯರಾದ ಗೋಪಿಯರಿಗೆ ಶ್ರೀಕೃಷ್ಣನ ಶ್ರೀವಿಗ್ರಹದಲ್ಲಿ ನೆಟ್ಟುಹೋಗಿದ್ದ ತಮ್ಮ ಕಣ್ಣುಗಳನ್ನು ಹಿಂದಕ್ಕೆ ತೆಗೆದು ಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆತನ ರೂಪ-ಸೌಂದರ್ಯಗಳನ್ನು ಕೇಳಿದ ಸತ್ಪುರುಷರ ಕಿವಿಗಳ ಮೂಲಕವಾಗಿ ಅಂತಃಕರಣವನ್ನು ಪ್ರವೇಶಿಸಿದ ಆತನ ದಿವ್ಯಮಂಗಳ ವಿಗ್ರಹದಲ್ಲಿ ನೆಟ್ಟುಹೋಗಿದ್ದ ಸತ್ಪುರುಷರ ಮನಸ್ಸು ಹಿಂದಕ್ಕೆ ಬರುತ್ತಿರಲಿಲ್ಲ. ಅದರ ಕಾಂತಿಯು ಕವಿಗಳ ಕವಿತೆಗಳಿಗೆ ಉಲ್ಲಾಸವನ್ನುಂಟುಮಾಡುತ್ತಿದ್ದಿತು. ಅಂತಹ ಕವಿತೆಗಳು ಜಗತ್ಪೂಜ್ಯ ವಾಗಿಯೂ ಇರುತ್ತಿದ್ದುವು. ಅರ್ಜುನನ ರಥದಲ್ಲಿ ಸಾರಥಿಯಾಗಿ ಕುಳಿತಿದ್ದ ಭಗವಂತನ ದಿವ್ಯರೂಪವನ್ನು ಮರಣಸಮಯದಲ್ಲಿ ನೋಡುತ್ತಿದ್ದ ವೀರ

ಯೋಧರು ಭಗವಂತನ ಸಾರೂಪ್ಯಮುಕ್ತಿಯನ್ನೇ ಪಡೆದುಕೊಂಡುಬಿಟ್ಟರು. ಅಂತಹ ದಿವ್ಯಮಂಗಳವಿಗ್ರಹನಾದ ಶ್ರೀಕೃಷ್ಣನು ತನ್ನ ದಿವ್ಯರೂಪವನ್ನು ಹೇಗೆ ತ್ಯಜಿಸಿದನು?"

ಶ್ರೀಶುಕಮುನಿಗಳು ಹೇಳುತ್ತಾರೆ :

"ಪರೀಕ್ಷಿತಮಹಾರಾಜ! ದಿವಿಯಲ್ಲಿಯೂ, ಭುವಿಯಲ್ಲಿಯೂ, ಅಂತರಿಕ್ಷದಲ್ಲಿಯೂ ಕಾಣಿಸಿಕೊಳ್ಳುತ್ತಿದ್ದ ಮಹೋತ್ಪಾತಗಳನ್ನು ಕಂಡು ಶ್ರೀಕೃಷ್ಣನು ಸುಧರ್ಮಾಮಹಾಸಭೆಯಲ್ಲಿ ಕುಳಿತಿದ್ದ ಯದುವೀರರನ್ನು ಕುರಿತು ಹೇಳಿದನು :

"ಯದುಕುಲಶ್ರೇಷ್ಠರೇ! ಘೋರವಾದ ಈ ಮಹೋತ್ಪಾತಗಳು ದ್ವಾರಕೆಯಲ್ಲಿ ಯಮರಾಜನ ಧ್ವಜಗಳಂತೆಯೇ ಕಾಣಿಸಿಕೊಳ್ಳುತ್ತಿವೆ. ಆದುದರಿಂದ ಈ ದ್ವಾರಕೆಯಲ್ಲಿ ನಾವು ಮುಹೂರ್ತಕಾಲವೂ ಕೂಡ ಇರಬಾರದು. ಸ್ತ್ರೀಯರು, ಬಾಲಕರು ಮತ್ತು ವೃದ್ಧರು ಈ ಕೂಡಲೇ ಇಲ್ಲಿಂದ ಶಂಖೋದ್ಧಾರಕ್ಷೇತ್ರಕ್ಕೆ ಹೋಗಲಿ. ಸರಸ್ವತೀನದಿಯು ಪಶ್ಚಿಮದಿಕ್ಕಿಗೆ ಹರಿಯುವ ಪ್ರಭಾಸಕ್ಷೇತ್ರಕ್ಕೆ ನಾವೆಲ್ಲರೂ ಹೋಗೋಣ. ಅಲ್ಲಿ ನಾವು ಸ್ನಾನಮಾಡಿ ಶುಚಿಯಾಗಿ ಉಪವಾಸವ್ರತದಿಂದಿರುತ್ತಾ ಏಕಾಗ್ರವಾದ ಮನಸ್ಸಿನಿಂದ ಕೂಡಿದವರಾಗಿ, ಅಭಿಷೇಕ–ಗಂಧಲೇಪನಾದಿ ಪೂಜಾವಿಧಾನಗಳಿಂದ ದೇವತೆಗಳನ್ನು ಪೂಜಿಸೋಣ. ಅನಂತರ ಮಹಾಭಾಗ್ಯಶಾಲಿಗಳಾದ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿ ಕೊಂಡು ಗೋವು, ಭೂಮಿ, ಹಿರಣ್ಯ–ಇವೇ ಮುಂತಾದ ವಸ್ತುಗಳಿಂದಲೂ ಆನೆ, ಕುದುರೆ, ರಥ, ಗೃಹ–ಇವೇ ಮುಂತಾದುವುಗಳ ದಾನಗಳಿಂದಲೂ ಬ್ರಾಹ್ಮಣರನ್ನು ಸತ್ಕರಿಸೋಣ.

ವಿಧಿರೇಷ ಹ್ಯರಿಷ್ಟಘ್ನೋ ಮಙ್ಗಲಾಯನಮುತ್ತಮಮ್ ।
ದೇವದ್ವಿಜಗವಾಂ ಪೂಜಾ ಭೂತೇಷು ಪರಮೋ ಭವಃ ॥೯॥

ಅರಿಷ್ಟಗಳನ್ನು ಧ್ವಂಸಮಾಡುವ ಈ ವಿಧಿ-ನಿಯಮಗಳು ಶ್ರೇಷ್ಠವಾದ ಮಂಗಳಮಾರ್ಗಗಳಾಗಿವೆ. ಗೋ-ಬ್ರಾಹ್ಮಣ-ದೇವತೆಗಳ ಪೂಜೆಯು ಪ್ರಾಣಿಗಳಿಗೆ ಪರಮಶ್ರೇಯಸ್ಕರವಾದುದು."

ಪರೀಕ್ಷಿತಮಹಾರಾಜ! ಭಗವಾನ್ ಶ್ರೀಕೃಷ್ಣನ ಈ ಮಾತುಗಳನ್ನು ಕೇಳಿ ಸಮಸ್ತಯದುವಂಶೀಯವೃದ್ಧರೂ ಹಾಗೆಯೇ ಆಗಲೆಂದು ಹೇಳಿ ಶ್ರೀಕೃಷ್ಣನ ಸಲಹೆಗೆ ಸಮ್ಮತಿಸಿ ನೌಕೆಗಳ ಮೂಲಕವಾಗಿ ಸಮುದ್ರವನ್ನು ದಾಟಿ ಅಲ್ಲಿಂದ ಮುಂದಕ್ಕೆ ರಥಗಳಲ್ಲಿ ಕುಳಿತು ಪ್ರಭಾಸಕ್ಷೇತ್ರವನ್ನು ಸೇರಿದರು. ಆ ಪ್ರಭಾಸಕ್ಷೇತ್ರದಲ್ಲಿ ಯದುವಂಶೀಯರ ದೇವತೆಯಾಗಿದ್ದ ಶ್ರೀಕೃಷ್ಣನ ಆದೇಶದಂತೆ ಯಾದವರೆಲ್ಲರೂ ಒಟ್ಟಾಗಿ ಸೇರಿ ಪರಮಭಕ್ತಿ ಯಿಂದ ಸಮಸ್ತಶ್ರೇಯಸ್ಸಿಗೂ ಕಾರಣಭೂತವಾದ ಎಲ್ಲ ವಿಧವಾದ ಶಾಂತಿ ಕರ್ಮಗಳನ್ನೂ ಯಥಾವಿಧಿಯಾಗಿ ಆಚರಿಸಿದರು. ಬ್ರಾಹ್ಮಣಶಾಪದ ಪರಿಣಾಮವಾಗಿ ದೈವದಿಂದಲೇ ಭ್ರಷ್ಟವಾಗಿ ಹೋದ ಬುದ್ಧಿಯಿಂದ ಕೂಡಿದ್ದ ಯಾದವರು ಆ ಮಹಾಪುಣ್ಯಕ್ಷೇತ್ರವಾದ ಪ್ರಭಾಸದಲ್ಲಿ ಮಹಾಪಾನವೆಂಬ ಹೆಸರನ್ನು ಹೊಂದಿದ್ದ ಮೈರೇಯವೆಂಬ ಮದ್ಯವನ್ನು ಕಂಠಪೂರ್ತಿಯಾಗಿ ಕುಡಿದರು. ಮದ್ಯದ ಪಾನದಿಂದ ಬುದ್ಧಿ ಕೆಟ್ಟುಹೋಗುವುದಲ್ಲವೇ? ಮಹಾಪಾನದಿಂದ ಗರ್ವಿಷ್ಠರಾಗಿ, ಶ್ರೀಕೃಷ್ಣನ ಮಾಯೆಯಿಂದ ವಿಮೂಢ ರಾಗಿದ್ದ ಯದುವೀರರಿಗೆ ಪರಸ್ಪರವಾಗಿ ಕದನವು ಪ್ರಾರಂಭವಾಯಿತು. ಆ ಸಮಯದಲ್ಲಿ ಅವರು ಕ್ರೋಧಾಭಿಭೂತರಾಗಿ ಒಬ್ಬರನ್ನೊಬ್ಬರು ಕೊಲ್ಲಲು ನಿಶ್ಚಯಿಸಿ ಧನುರ್ಬಾಣಗಳಿಂದಲೂ, ಕತ್ತಿಗಳಿಂದಲೂ, ಭಲ್ಲಗಳಿಂದಲೂ, ಗದೆಗಳಿಂದಲೂ, ತೋಮರಗಳಿಂದಲೂ, ಋಷ್ಟಿಗಳಿಂದಲೂ ಮತ್ತು ಹಲವಾರು ಇತರ ಆಯುಧಗಳಿಂದಲೂ ಆ ಸಮುದ್ರತೀರದಲ್ಲಿ ಪರಸ್ಪರವಾಗಿ ಆಕ್ರಮಣಮಾಡಿದರು. ಮದಾಂಧರಾಗಿದ್ದ ಯಾದವರು ರಥಗಳ ಮೇಲೂ, ಆನೆಗಳ ಮೇಲೂ, ಕುದುರೆಗಳ ಮೇಲೂ, ಕತ್ತೆಗಳ ಮೇಲೂ, ಒಂಟೆಗಳ ಮೇಲೂ, ಹೋರಿಗಳ ಮೇಲೂ, ಕೋಣಗಳ ಮೇಲೂ, ಹೇಸರಕತ್ತೆಗಳ ಮೇಲೂ, ಮನುಷ್ಯರ ಮೇಲೂ ಕುಳಿತು ಪರಸ್ಪರವಾಗಿ ಒಬ್ಬರನ್ನು ಮತ್ತೊಬ್ಬರು ಬಾಣಗಳಿಂದ ಗಾಯಗೊಳಿಸಲು ಪ್ರಾರಂಭಿಸಿದರು. ಕಾಡಾನೆ ಗಳು ಪರಸ್ಪರವಾಗಿ ದಂತಗಳಿಂದ ತಿವಿದಾಡುವಂತೆ–ಮಹಾಗರ್ವಿಷ್ಠರಾಗಿದ್ದ ಯದುವೀರರು ಪರಸ್ಪರವಾಗಿ ಬಡಿದಾಡತೊಡಗಿದರು. ಎಲ್ಲರ ವಾಹನಗಳ ಧ್ವಜಗಳೂ ಹಾರಾಡುತ್ತಿದ್ದುವು. ಕಾಲಾಳುಗಳು ಕೂಡ ಪರಸ್ಪರವಾಗಿ ಯುದ್ಧಮಾಡತೊಡಗಿದರು. ಮೊದಲಿನಿಂದಲೂ ಪರಸ್ಪರವಾಗಿ ಮಾತ್ಸರ್ಯ

ವನ್ನು ಹೊಂದಿದ್ದ ಪ್ರದ್ಯುಮ್ನ-ಸಾಂಬರೂ, ಅಕ್ರೂರ-ಭೋಜರೂ, ಅನಿರುದ್ಧ-ಸಾತ್ಯಕಿಗಳೂ, ಸುಭದ್ರ-ಸಂಗ್ರಾಮಜಿತರೂ, ಶ್ರೀಕೃಷ್ಣನ ಸೋದರನಾದ ಗದನೂ, ಶ್ರೀಕೃಷ್ಣನ ಮಗನಾದ ಗದನೂ, ಸುಮಿತ್ರ-ಅಸುರಥರೂ ಅತ್ಯಂತಕ್ರುದ್ಧರಾಗಿ ಪರಸ್ಪರವಾಗಿ ಹೋರಾಡತೊಡಗಿದರು. ಮದದಿಂದ ಕುರುಡರಾಗಿ ಹೋಗಿದ್ದ ಮತ್ತು ಮುಕುಂದನ ಮಾಯೆಯಿಂದ ವಿಮೋಹಿತರಾಗಿದ್ದ ನಿಶಠ, ಉಲ್ಮುಕ, ಸಹಸ್ರಜಿತ್, ಶತಜಿತ್, ಭಾನು ಮುಂತಾದ ಯದುವೀರರು ಪರಸ್ಪರವಾಗಿ ಆಕ್ರಮಿಸಿ ಒಬ್ಬರು ಮತ್ತೊಬ್ಬರನ್ನು ಕೊಂದುಹಾಕಿದರು. ದಾಶಾರ್ಹ, ವೃಷ್ಣಿ, ಅಂಧಕ, ಭೋಜ, ಸಾತ್ವತ, ಮಧು, ಅರ್ಬುದ, ಮಾಥುರ, ಶೂರಸೇನ, ವಿಸರ್ಜನ, ಕುಕುರ, ಕುಂತಿ ಇವರೇ ಮೊದಲಾದ ಯದುವಂಶೀಯರು ಪರಸ್ಪರವಾಗಿ ಸೌಹಾರ್ದವನ್ನೂ ಸ್ನೇಹಭಾವವನ್ನೂ ತೊರೆದು ಪರಸ್ಪರವಾಗಿ ಕಾದಾಡಿ ಅಸುನೀಗಿದರು. ವಿವೇಚನೆಯೇ ಇಲ್ಲದೆ ಮೂಢರಾಗಿ ಹೋಗಿದ್ದ ಮಕ್ಕಳು ತಂದೆಯೊಡನೆ ಯುದ್ಧಮಾಡುತ್ತಿದ್ದರು. ಸೋದರರು, ಸೋದರರೊಡನೆ, ತಂಗಿಯರ ಮಕ್ಕಳೊಡನೆ, ದೌಹಿತ್ರರೊಡನೆ, ಚಿಕ್ಕಪ್ಪ-ದೊಡ್ಡಪ್ಪರೊಡನೆ, ಸೋದರಳಿಯರು ಸೋದರಮಾವಂದಿರೊಡನೆ, ಮಿತ್ರರು–ಮಿತ್ರರೊಡನೆ, ಆಪ್ತರು-ಆಪ್ತರೊಡನೆ, ದಾಯಾದಿಗಳು–ಜ್ಞಾತಿಗಳೊಡನೆ ಯುದ್ಧಮಾಡುತ್ತಾ ಎದುರಾಳಿಯನ್ನು ಸಂಹರಿಸಿ ತಾವೂ ಹತರಾಗುತ್ತಿದ್ದರು. ಬಾಣಗಳೆಲ್ಲವೂ ಮುಗಿದುಹೋಗಲಾಗಿ, ಧನುಸ್ಸುಗಳೆಲ್ಲವೂ ಭಗ್ನವಾಗಲಾಗಿ, ಶಸ್ತ್ರಗಳೂ ಮುಗಿಯಲು ಸಮುದ್ರತೀರದಲ್ಲಿ ಬೆಳೆದಿದ್ದ ಏರಕಗಳೆಂಬ ಹುಲ್ಲನ್ನು ಮುಷ್ಟಿಯಲ್ಲಿ ಹಿಡಿದು ಎದುರಾಳಿಯನ್ನು ಪ್ರಹರಿಸತೊಡಗಿದರು.

ಯಾದವರು ಮುಷ್ಟಿಗಳಲ್ಲಿ ಹಿಡಿದಿದ್ದ ಆ ಏರಕಹುಲ್ಲುಗಳು ವಜ್ರಾಯುಧಸದೃಶವಾದ ಪರಿಘಗಳಾದುವು. ಅಂತಹ ಪರಿಘಾಯುಧಗಳಿಂದ ಆ ಯಾದವರು ತಮ್ಮ ಎದುರಾಳಿಗಳನ್ನು ಶತ್ರುಗಳೆಂದು ಭಾವಿಸಿ ಪ್ರಹರಿಸಿದರು. ಶ್ರೀಕೃಷ್ಣನು ಅವರನ್ನು ತಡೆಯಲು ಹೋದಾಗ ಅವನನ್ನೂ ಶತ್ರುವೆಂದೇ ಭಾವಿಸಿ ಆ ದುಷ್ಟಯಾದವರು ಪ್ರಹರಿಸತೊಡಗಿದರು. ಶ್ರೀಕೃಷ್ಣನನ್ನು ವೈರಿಯೆಂದು ಭಾವಿಸಿದಂತೆಯೇ ಬಲಭದ್ರನನ್ನೂ ವೈರಿಯೆಂದು ಭಾವಿಸಿದ ಆತತಾಯಿಗಳಾದ ಯಾದವರು ಶ್ರೀಕೃಷ್ಣನ ಮಾಯೆಯಿಂದ

ವಿಮೋಹಿತರಾಗಿ ಬಲಭದ್ರನನ್ನೂ ಸಂಹರಿಸಲು ನಿಶ್ಚಯಿಸಿ ಮುನ್ನುಗ್ಗಿ ಹೋದರು. ಕುರುನಂದನನೇ! ಪರೀಕ್ಷಿತ! ಆ ಸಮಯದಲ್ಲಿ ಬಲರಾಮ-ಕೃಷ್ಣರೂ ಕ್ರುದ್ಧರಾದರು. ಪರಿಘಾಯುಧರೂಪವಾಗಿದ್ದ ಏರಕಾಹುಲ್ಲನ್ನು ಮುಷ್ಟಿಗಳಿಂದ ಹಿಡಿದು ಘೋರವಾಗಿದ್ದ ಆ ಮಹಾಯುದ್ಧದಲ್ಲಿ ಕಂಡ-ಕಂಡ ಯಾದವರೆಲ್ಲರನ್ನೂ ಸಂಹರಿಸುತ್ತಾ ರಣರಂಗದಲ್ಲಿ ಸಂಚರಿಸುತ್ತಿದ್ದರು. ಬ್ರಾಹ್ಮಣಶಾಪದಿಂದ ಗ್ರಸ್ತರಾಗಿದ್ದ ಮತ್ತು ಶ್ರೀಕೃಷ್ಣನ ಮಾಯೆಯಿಂದ ವಿಮೋಹಿತರಾಗಿದ್ದ ಯಾದವರ ಪರಸ್ಪರ ಸ್ಪರ್ಧೆಯಿಂದ ಹುಟ್ಟಿದ ಕ್ರೋಧವು ಬಿದಿರುಮೆಳೆಯು ಪರಸ್ಪರ ಸಂಘರ್ಷಣೆಯಿಂದ ಹೊತ್ತಿಕೊಂಡು ಅರಣ್ಯವನ್ನೇ ದಹಿಸಿಬಿಡುವಂತೆ ಯಾದವಕುಲವನ್ನೇ ನಾಶಮಾಡಿಬಿಟ್ಟಿತು. ಹೀಗೆ ಸಮಸ್ತವಾದ ತನ್ನ ಯಾದವಕುಲಗಳೆಲ್ಲವೂ ವಿನಾಶಹೊಂದಲಾಗಿ ಶ್ರೀಕೇಶವನು ಕೌರವ-ಪಾಂಡವರ ಯುದ್ಧದನಂತರ ಉಳಿದುಕೊಂಡಿದ್ದ ಭೂಭಾರವೂ ಯಾದವರ ವಿನಾಶದಿಂದಾಗಿ ಇಳಿದುಹೋಯಿತೆಂದು ಭಾವಿಸಿಕೊಂಡನು.

ಅನಂತರ ಬಲರಾಮನು ಸಮುದ್ರತೀರದಲ್ಲಿ ಕುಳಿತು ಪರಮಾತ್ಮನ ಧ್ಯಾನರೂಪವಾದ ಯೋಗವನ್ನವಲಂಬಿಸಿ, ಏಕಾಗ್ರಚಿತ್ತನಾಗಿ ಆತ್ಮವನ್ನು ಪರಮಾತ್ಮನಲ್ಲಿ ಲೀನಗೊಳಿಸಿ ಮನುಷ್ಯಲೋಕವನ್ನು ತ್ಯಜಿಸಿದನು. ಬಲ ರಾಮನ ನಿರ್ಯಾಣವನ್ನು ನೋಡಿದ ದೇವಕಿಯ ಮಗನಾದ ಭಗವಾನ್ ಶ್ರೀಕೃಷ್ಣನು ಒಂದು ಅಶ್ವತ್ಥವೃಕ್ಷದ ಬಳಿಗೆ ಹೋಗಿ ಅದರ ನೆರಳಿನಲ್ಲಿ ನೆಲದ ಮೇಲೆ ಸುಮ್ಮನೆ ಕುಳಿತನು. ಚತುರ್ಭುಜಗಳುಳ್ಳ ಸ್ವಪ್ರಕಾಶದಿಂದ ಜಗ-ಜಗಿಸುವ ಆಕಾರವನ್ನು ಹೊಂದಿದವನಾಗಿ, ಹೊಗೆಯಿಲ್ಲದ ಅಗ್ನಿಯಂತೆ ತನ್ನ ತೇಜಸ್ಸಿನಿಂದ ನಾಲ್ಕು ದಿಕ್ಕುಗಳನ್ನೂ ಬೆಳಗುತ್ತಿದ್ದನು. ಆ ಸಮಯ ದಲ್ಲಿ ಶ್ರೀಕೃಷ್ಣನು ವಕ್ಷಃಸ್ಥಳದಲ್ಲಿ ಶ್ರೀವತ್ಸದ ಚಿಹ್ನೆಯನ್ನು ಹೊಂದಿದ್ದನು. ಮೇಘಶ್ಯಾಮನಾಗಿದ್ದನು. ಪುಟಕ್ಕೆ ಹಾಕಿದ ಚಿನ್ನದಂತೆ ತೇಜೋಮಯ ನಾಗಿದ್ದನು. ಸುಂದರವಾದ ಮತ್ತು ಮಂದಹಾಸದಿಂದ ಕೂಡಿದ ಮುಖ ಕಮಲವುಳ್ಳವನಾಗಿದ್ದನು. ಕಪೋಲಗಳಲ್ಲಿ ನೀಲವಾದ ಗುಂಗುರುಕೂದಲು ಗಳು ಮನೋಹರವಾಗಿ ರಂಜಿಸುತ್ತಿದ್ದುವು. ಅವನಿಗೆ ಸುಂದರವೂ ಸುಕುಮಾರವೂ ಆದ ನೇತ್ರಗಳಿದ್ದುವು. ಕಿವಿಗಳಲ್ಲಿ ಮಕರಕುಂಡಲಗಳು ಜಗ-ಜಗಿಸುತ್ತಿದ್ದುವು. ಅವನು ಸೊಂಟದಲ್ಲಿ ಉಡಿದಾರದಿಂದಲೂ, ಕಂಕುಳಲ್ಲಿ

ಯಜ್ಞೋಪವೀತದಿಂದಲೂ, ತಲೆಯಲ್ಲಿ ಕಿರೀಟದಿಂದಲೂ, ಕೈಗಳಲ್ಲಿ ಕಂಕಣದಿಂದಲೂ, ತೋಳುಗಳಲ್ಲಿ ಬಾಜೂ-ಬಂದಿಗಳಿಂದಲೂ, ಕುತ್ತಿಗೆಯಲ್ಲಿ ಹಾರದಿಂದಲೂ, ಕಾಲುಗಳಲ್ಲಿ ಕಾಲ್ಕಡಗಗಳಿಂದಲೂ, ಬೆರಳುಗಳಲ್ಲಿ ಮುದ್ರೆಯುಂಗುರಗಳಿಂದಲೂ, ವಕ್ಷಃಸ್ಥಳದಲ್ಲಿ ಕೌಸ್ತುಭಮಣಿಯಿಂದಲೂ ಸಮಲಂಕೃತನಾಗಿದ್ದನು. ಮುಡಿಯಿಂದ ಅಡಿಯವರೆಗೂ ಜೋತುಬಿದ್ದಿದ್ದ ವನಮಾಲೆಯಿಂದ ಶೋಭಿಸುತ್ತಿದ್ದನು. ಮೂರ್ತಿಮತ್ತಾಗಿ ನಿಂತಿದ್ದ ತನ್ನ ಆಯುಧಗಳಿಂದ ಸೇವಿಸಲ್ಪಡುತ್ತಿದ್ದನು. ತನ್ನ ಬಲತೊಡೆಯ ಮೇಲೆ ಪದ್ಮದಂತೆ ಕೆಂಪಾದ ಮತ್ತು ಸುಂದರವಾಗಿದ್ದ ಎಡಗಾಲನ್ನಿಟ್ಟುಕೊಂಡು ಶ್ರೀಕೃಷ್ಣನು ಕುಳಿತಿದ್ದನು.

ಹಿಂದೆ ಸಾಂಬನ ಹೊಟ್ಟೆಯಿಂದ ಹೊರಬಂದ ಒನಕೆಯಲ್ಲಿ ಉಳಿದಿದ್ದ ಕಬ್ಬಿಣದ ತುಂಡನ್ನು ಜರಾ ಎಂಬ ವ್ಯಾಧನು ಬಾಣದ ಅಲುಗನ್ನಾಗಿ ಮಾಡಿಕೊಂಡಿದ್ದನಲ್ಲವೇ? ಅದೇ ಬಾಣದಿಂದಲೇ ಜರಾವ್ಯಾಧನು ದೂರದಿಂದ ಕಂಡ ಶ್ರೀಕೃಷ್ಣನ ಪಾದವನ್ನು ಮೃಗವೆಂದು ಭ್ರಮಿಸಿ ಅದರಮೇಲೆ ಬಾಣಪ್ರಯೋಗಮಾಡಿದನು. ಪ್ರಹರಿಸಿದ ಮೃಗವನ್ನರಸುತ್ತಾ ಹತ್ತಿರಕ್ಕೆ ಬಂದಾಗ ತಾನು ಪ್ರಹರಿಸಿದ್ದು ಚತುರ್ಭುಜನಾದ ಶ್ರೀಕೃಷ್ಣನನ್ನು ಎಂಬುದು ಜರನಿಗೆ ತಿಳಿದುಹೋಯಿತು. ತಾನು ಮಾಡಿದ ತಪ್ಪಿಗಾಗಿ ಅತ್ಯಂತ ಭಯಗೊಂಡ ಜರನು ಅಸುರರಿಗೆ ಶತ್ರುವಾದ ಶ್ರೀಕೃಷ್ಣನ ಪಾದಾರವಿಂದಗಳಿಗೆ ಅಡ್ಡಬಿದ್ದು ಪ್ರಾರ್ಥಿಸಿದನು.

ಅಜಾನತಾ ಕೃತಮಿದಂ ಪಾಪೇನ ಮಧುಸೂದನ ।
ಕ್ಷನ್ತುಮರ್ಹಸಿ ಪಾಪಸ್ಯ ಉತ್ತಮಶ್ಲೋಕ ಮೇಽನಘ ॥೩೭॥

“ಮಧುಸೂದನನೇ! ದಯಾಮಯ! ಪಾಪಿಷ್ಠನಾದ ನಾನು ತಿಳಿಯದೆಯೇ ಈ ಪಾಪಕಾರ್ಯವನ್ನು ಮಾಡಿಬಿಟ್ಟೆನು. ಉತ್ತಮಶ್ಲೋಕನೇ! ಅನಘನೇ! ಪಾಪಿಷ್ಠನಾದ ನಾನು ಮಾಡಿದ ಈ ಮಹಾ ಪಾಪಕಾರ್ಯವನ್ನು ನೀನು ಕ್ಷಮಿಸಬೇಕು.

ಯಸ್ಯಾನುಸ್ಮರಣಂ ನೃಣಾಮಜ್ಞಾನಧ್ವಾನ್ತನಾಶನಮ್ ।
ವದನ್ತಿ ತಸ್ಯ ತೇ ವಿಷ್ಣೋ ಮಯಾಽಸಾಧು ಕೃತಂ ಪ್ರಭೋ ॥೩೮॥

ವಿಷ್ಣುವೇ! ಭಗವಂತ! ಯಾವನ ಕೇವಲ ಸ್ಮರಣೆಯೇ ಮನುಷ್ಯರ ಅಜ್ಞಾನವೆಂಬ ಕಗ್ಗತ್ತಲೆಯನ್ನು ಹೊಗಲಾಡಿಸುವುದೆಂದು ಸತ್ಪುರುಷರು ಹೇಳುವರೋ ಅಂತಹ ಮಹಾಮಹಿಮನಾದ ನಿನಗೆ ನಾನು ಕೆಟ್ಟದ್ದನ್ನು ಮಾಡಿಬಿಟ್ಟೆನಲ್ಲವೇ? ಪ್ರಭೋ!

ತನ್ಮಾಽಶು ಜಹಿ ವೈಕುಣ್ಠ ಪಾಪ್ಮಾನಂ ಮೃಗಲುಬ್ಧಕಮ್ ।
ಯಥಾ ಪುನರಹಂ ತ್ವೇವಂ ನ ಕುರ್ಯಾಂ ಸದತಿಕ್ರಮಮ್ ॥೩೭॥

ವೈಕುಂಠನೇ! ಪಾಪಿಷ್ಠನಾದ ಮೃಗಲೋಭಿಯಾದ ನನ್ನನ್ನು ಬೇಗ ಸಂಹರಿಸಿಬಿಡು. ನಾನು ಪುನಃ ಸತ್ಪುರುಷರಿಗೆ ಅಪರಾಧವನ್ನು ಮಾಡದಂತಾಗಲಿ.

ಯಸ್ಯಾತ್ಮಯೋಗರಚಿತಂ ನ ವಿದುರ್ವಿರಿಞ್ಚೋ
ರುದ್ರಾದಯೋಽಸ್ಯ ತನಯಾಃ ಪತಯೋ ಗಿರಾಂ ಯೇ ।
ತ್ವನ್ಮಾಯಯಾ ಪಿಹಿತದೃಷ್ಟಯ ಏತದಞ್ಜಃ
ಕಿಂ ತಸ್ಯ ತೇ ವಯಮಸದ್ಗತಯೋ ಗೃಣೀಮಃ ॥೩೮॥

ಭಗವಂತ! ಸಮಸ್ತವಿದ್ಯೆಗಳ ಪಾರದರ್ಶಿಯಾಗಿರುವ ಬ್ರಹ್ಮನಾಗಲೀ ಆತನ ಪುತ್ರರಾದ ರುದ್ರಾದಿಗಳಾಗಲೀ ನಿನ್ನ ಯೋಗಮಾಯಾವಿಲಾಸವನ್ನರಿಯರು. ಏಕೆಂದರೆ :ಬ್ರಹ್ಮಾದಿಗಳ ದೃಷ್ಟಿಗಳನ್ನು ಕೂಡ ನಿನ್ನ ಯೋಗ ಮಾಯೆಯು ಆವರಿಸಿಕೊಂಡುಬಿಟ್ಟಿದೆ. ಹೀಗಿರುವಾಗ ನನ್ನಂತಹ ಪಾಪ ಯೋನಿಯಲ್ಲಿ ಹುಟ್ಟಿರುವ ಪಾಪಿಷ್ಠರು ನಿನ್ನ ಮಹಿಮೆಯನ್ನು ಹೇಗೆ ತಾನೇ ತಿಳಿದೇವು? ವರ್ಣಿಸಬಲ್ಲೆವು?"

ಶ್ರೀಭಗವಂತನು ಹೇಳುತ್ತಾನೆ :

ಮಾ ಭೈರ್ಜರೇ ತ್ವಮುತ್ತಿಷ್ಠ ಕಾಮ ಏಷ ಕೃತೋ ಹಿ ಮೇ ।
ಯಾಹಿ ತ್ವಂ ಮದನುಜ್ಞಾತಃ ಸ್ವರ್ಗಂ ಸುಕೃತಿನಾಂ ಪದಮ್ ॥೩೯॥

"ಜರಾವ್ಯಾಧನೇ! ಹೆದರಬೇಡ. ಮೇಲೇಳು. ನನಗೆ ಇಷ್ಟವಾದದ್ದನ್ನೇ ನೀನು ಮಾಡಿರುವೆ. ನನ್ನಿಂದ ಅನುಜ್ಞಾತನಾದ ನೀನು ಸತ್ಪುರುಷರಿಗೆ ಲಭ್ಯವಾಗುವ ಸ್ವರ್ಗಲೋಕಕ್ಕೆ ಹೋಗು."

ಪರೀಕ್ಷಿತಮಹಾರಾಜ! ಕರ್ಮಕ್ಕೆ ವಶನಾಗದೆ ತನ್ನ ಸಂಕಲ್ಪದಿಂದಲೇ ಶರೀರಧಾರಿಯಾಗಿದ್ದ ಭಗವಂತನಾದ ಶ್ರೀಕೃಷ್ಣನಿಂದ ಹೀಗೆ ಆದೇಶಿಸಲ್ಪಟ್ಟ ಜರಾವ್ಯಾಧನು ಭಗವಂತನನ್ನು ಮೂರು ಬಾರಿ ಪ್ರದಕ್ಷಿಣೆಮಾಡಿ ಬಳಿಕ ಸಾಷ್ಟಾಂಗನಮಸ್ಕಾರವನ್ನು ಮಾಡಿ, ಆ ವೇಳೆಗೆ ಸ್ವರ್ಗಲೋಕದಿಂದ ಬಂದಿದ್ದ ದಿವ್ಯವಾದ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಹೊರಟುಹೋದನು. ಅದೇ ಸಮಯದಲ್ಲಿ ಶ್ರೀಕೃಷ್ಣನಿರುವ ಸ್ಥಳವನ್ನು ಹುಡುಕುತ್ತಾ ಬರುತ್ತಿದ್ದ ಶ್ರೀಕೃಷ್ಣನ ಸಾರಥಿಯಾದ ದಾರುಕನು, ಶ್ರೀಕೃಷ್ಣನು ಕಂಠದಲ್ಲಿ ಧರಿಸಿದ್ದ ತುಳಸೀಮಾಲೆಯ ಸುಗಂಧಯುಕ್ತವಾದ ವಾಯುವನ್ನೇ ಬಹಳ ದೂರದಿಂದ ಆಘ್ರಾಣಿಸುತ್ತಾ ಅದನ್ನೇ ಅನುಸರಿಸಿ ಬಂದು ಶ್ರೀಕೃಷ್ಣನನ್ನು ಸೇರಿದನು. ಶ್ರೀಕೃಷ್ಣನು ಅಶ್ವತ್ಥವೃಕ್ಷದ ಕೆಳಗೆ ಕುಳಿತಿರುವುದನ್ನು ದಾರುಕನು ನೋಡಿದನು. ಸಹಿಸಲು ಅಸಾಧ್ಯವಾದ ತೇಜಸ್ಸಿನಿಂದ ಕೂಡಿದ್ದ ಆಯುಧಗಳು ಮೂರ್ತಿಮತ್ತಾಗಿ ಬಂದು ಅವನ ಸೇವೆಯಲ್ಲಿ ನಿರತವಾಗಿದ್ದುವು. ಶ್ರೀಕೃಷ್ಣನನ್ನು ನೋಡಿದೊಡನೆಯೇ ದಾರುಕನ ಹೃದಯದಲ್ಲಿದ್ದ ಪ್ರೇಮರಸವು ಉಕ್ಕಿಹರಿಯಿತು. ಕಣ್ಣುಗಳಲ್ಲಿ ನೀರುತುಂಬಿಕೊಂಡಿತು. ಒಡನೆಯೇ ರಥದಿಂದ ಕೆಳಕ್ಕೆ ಧುಮುಕಿ ಶ್ರೀಕೃಷ್ಣನ ಕಾಲುಗಳಿಗೆ ಅಡ್ಡಬಿದ್ದು ಪ್ರಾರ್ಥಿಸಿಕೊಂಡನು :

ಅಪಶ್ಯತಸ್ತ್ವಚ್ಚರಣಾಮ್ಬುಜಂ ಪ್ರಭೋ
ದೃಷ್ಟಿಃ ಪ್ರಣಷ್ಟಾ ತಮಸಿ ಪ್ರವಿಷ್ಟಾ ।
ದಿಶೋ ನ ಜಾನೇ ನ ಲಭೇ ಚ ಶಾನ್ತಿಂ
ಯಥಾ ನಿಶಾಯಾಮುಡುಪೇ ಪ್ರಣಷ್ಟೇ ॥೪೩॥

"ಪ್ರಭುವೇ! ನಿನ್ನ ಚರಣಾರವಿಂದಗಳನ್ನು ಕಾಣದಿರುವ ನನ್ನ ಕಣ್ಣುಗಳು ಹಾಳಾಗಿಹೋಗಿವೆ. ಸುತ್ತಲೂ ಕತ್ತಲು ಕವಿದಿದೆ. ಚಂದ್ರನಿಲ್ಲದ ಅಂಧಕಾರದ ರಾತ್ರಿಯಂತೆ ಚಂದ್ರಸ್ವರೂಪನಾದ ನೀನು ಕಾಣದೇ ಇರುವುದರಿಂದ ನನಗೆ ದಿಕ್ಕೇ ತೋರದಾಗಿದೆ. ಶಾಂತಿಯು ಸಿಕ್ಕದಾಗಿದೆ."

ಪರೀಕ್ಷಿತಮಹಾರಾಜ! ದಾರುಕನು ಹೀಗೆ ಹೇಳುತ್ತಿರುವಾಗಲೇ ಗರುಡನ ಲಾಂಛನವನ್ನು ಹೊಂದಿದ್ದ ಆ ಶ್ರೀಕೃಷ್ಣನ ರಥವು ಅಶ್ವ-ಧ್ವಜ

ಸಮೇತವಾಗಿ ಆಕಾಶಕ್ಕೆ ಹಾರಿಹೋಯಿತು. ಮೂರ್ತಿಮತ್ತಾಗಿ ನಿಂತಿದ್ದ ಶ್ರೀಕೃಷ್ಣನ ಆಯುಧಗಳು ಕೂಡ ರಥವನ್ನೇ ಅನುಸರಿಸಿ ಹೊರಟು ಹೋದುವು. ಅದನ್ನು ಕಂಡು ಬೆಕ್ಕಸಬೆರಗಾದ ಸೂತನಿಗೆ ಜನಾರ್ದನನು ಹೇಳುತ್ತಾನೆ :

ಗಚ್ಛ ದ್ವಾರವತೀಂ ಸೂತ ಜ್ಞಾತೀನಾಂ ನಿಧನಂ ಮಿಥಃ ।
ಸಙ್ಕರ್ಷಣಸ್ಯ ನಿರ್ಯಾಣಂ ಬನ್ಧುಭ್ಯೋ ಬ್ರೂಹಿ ಮದ್ದಶಾಮ್ ॥

"ಸೂತ! ಪ್ರಿಯದಾರುಕನೇ! ನೀನೀಗಲೇ ದ್ವಾರವತಿಗೆ ಹೋಗು. ಜ್ಞಾತಿಬಾಂಧವರು ಪರಸ್ಪರವಾಗಿ ಕಾದಾಡಿ ಮೃತರಾದುದನ್ನೂ ಬಲರಾಮನು ಯೋಗಮಾರ್ಗವನ್ನು ಅವಲಂಬಿಸಿ ನಿರ್ಯಾಣಹೊಂದಿದನೆಂಬುದನ್ನೂ, ನನ್ನ ಈ ಪರಿಸ್ಥಿತಿಯನ್ನೂ ಬಂಧುಗಳಿಗೆ ತಿಳಿಹೇಳು. ನನ್ನ ಈ ಆದೇಶವನ್ನು ಅವರಿಗೆ ತಿಳಿಯಪಡಿಸು.

ದ್ವಾರಕಾಯಾಂ ಚ ನ ಸ್ಥೇಯಂ ಭವದ್ಭಿಶ್ಚ ಸ್ವಬನ್ಧುಭಿಃ ।
ಮಯಾ ತ್ಯಕ್ತಾಂ ಯದುಪುರೀಂ ಸಮುದ್ರಃ ಪ್ಲಾವಯಿಷ್ಯತಿ ॥೪೭॥

"ನೀವೂ ನಿಮ್ಮ ಬಂಧುಗಳೂ ಇನ್ನು ಮುಂದೆ ದ್ವಾರಕೆಯಲ್ಲಿರಬಾರದು. ನಾನು ಬಿಟ್ಟುಹೋದ ದ್ವಾರಕಾಪಟ್ಟಣವನ್ನು ಸಮುದ್ರವು ಮುಳುಗಿಸಿಬಿಡುತ್ತದೆ.

ಸ್ವಂ ಸ್ವಂ ಪರಿಗ್ರಹಂ ಸರ್ವೇ ಆದಾಯ ಪಿತರೌ ಚ ನಃ ।
ಅರ್ಜುನೇನಾವಿತಾಃ ಸರ್ವೇ ಇನ್ದ್ರಪ್ರಸ್ಥಂ ಗಮಿಷ್ಯಥ ॥೪೮॥

ಸಮಸ್ತರೂ ಅವರವರ ಧನ-ಸಂಪತ್ತುಗಳನ್ನು ತೆಗೆದುಕೊಂಡು ನನ್ನ ತಾಯಿ-ತಂದೆಗಳನ್ನೂ ಕರೆದುಕೊಂಡು ಅರ್ಜುನನಿಂದ ರಕ್ಷಿಸಲ್ಪಟ್ಟವರಾಗಿ ಇಂದ್ರಪ್ರಸ್ಥಕ್ಕೆ ಹೋಗಿರಿ."

ಹೀಗೆ ಬಂಧುಗಳಿಗೆ ಹೇಳಬೇಕಾದ ಮಾತನ್ನು ಹೇಳಿದನಂತರ ಶ್ರೀಕೃಷ್ಣನು ದಾರುಕನಿಗೆ ಪುನಃ ಹೇಳುತ್ತಾನೆ :

ತ್ವಂ ತು ಮದ್ಧರ್ಮಮಾಸ್ಥಾಯ ಜ್ಞಾನನಿಷ್ಠ ಉಪೇಕ್ಷಕಃ ।
ಮನ್ಮಾಯಾರಚನಾಮೇತಾಂ ವಿಜ್ಞಾಯೋಪಶಮಂ ವ್ರಜ ॥೪೯॥

"ದಾರುಕ! ನೀನಾದರೋ ನಾನು ಉಪದೇಶಿಸಿದ ಭಾಗವತಧರ್ಮ

ವನ್ನು ಆಶ್ರಯಿಸಿ ಜ್ಞಾನನಿಷ್ಠನಾಗಿ ಎಲ್ಲದರಲ್ಲಿಯೂ ಆಸಕ್ತಿಯನ್ನು ತ್ಯಜಿಸು. ಇದೆಲ್ಲವೂ ನನ್ನ ಮಾಯೆಯ ಲೀಲಾವಿಲಾಸವೆಂದು ಭಾವಿಸಿ ಶಾಂತನಾಗಿರು."

ಪರೀಕ್ಷಿತ! ಭಗವಂತನ ಈ ಆದೇಶವನ್ನು ಪಡೆದು ದಾರುಕನು ಶ್ರೀಕೃಷ್ಣನಿಗೆ ಪ್ರದಕ್ಷಿಣೆಯನ್ನು ಮಾಡಿ, ಅವನ ಎರಡು ಕಾಲುಗಳನ್ನೂ ತಲೆಯ ಮೇಲಿಟ್ಟುಕೊಂಡು ನಮಸ್ಕರಿಸಿ, ಭಾರವಾದ ಮನಸ್ಸಿನಿಂದ ದ್ವಾರಕೆಗೆ ತೆರಳಿದನು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಏಕಾದಶಸ್ಕಂಧದ ೩೦ನೆಯ ಅಧ್ಯಾಯವು ಮುಗಿಯಿತು.

ಏಕಾದಶಸ್ಕಂಧ ೩೧ನೆಯ ಅಧ್ಯಾಯ

ಭಗವಂತನು ಸ್ವಧಾಮಕ್ಕೆ ತೆರಳಿದುದು

ಶ್ರೀಶುಕಮುನಿಗಳು ಹೇಳುತ್ತಾರೆ :

ಅಥ ತತ್ರಾಗಮದ್ಬ್ರಹ್ಮಾ ಭವಾನ್ಯಾ ಚ ಸಮಂ ಭವಃ ।
ಮಹೇನ್ದ್ರಪ್ರಮುಖಾ ದೇವಾ ಮುನಯಃ ಸಪ್ರಜೇಶ್ವರಾಃ ॥೧॥

ಪಿತರಃ ಸಿದ್ಧಗನ್ಧರ್ವಾ ವಿದ್ಯಾಧರಮಹೋರಗಾಃ ।
ಚಾರಣಾ ಯಕ್ಷರಕ್ಷಾಂಸಿ ಕಿನ್ನರಾಪ್ಸರಸೋ ದ್ವಿಜಾಃ ॥೨॥

ದ್ರಷ್ಟುಕಾಮಾ ಭಗವತೋ ನಿರ್ಯಾಣಂ ಪರಮೋತ್ಸುಕಾಃ ।
ಗಾಯನ್ತಶ್ಚ ಗೃಣನ್ತಶ್ಚ ಶೌರೇಃ ಕರ್ಮಾಣಿ ಜನ್ಮ ಚ ॥೩॥

ವವೃಷುಃ ಪುಷ್ಪವರ್ಷಾಣಿ ವಿಮಾನಾವಲಿಭಿರ್ನಭಃ ।
ಕುರ್ವನ್ತಃ ಸಙ್ಕುಲಂ ರಾಜನ್ಭಕ್ತ್ಯಾ ಪರಮಯಾ ಯುತಾಃ ॥೪॥

"ಪರೀಕ್ಷಿತಮಹಾರಾಜ! ದಾರುಕನು ಶ್ರೀಕೃಷ್ಣನ ಆದೇಶದಂತೆ ದ್ವಾರಕೆಗೆ ಹೊರಟುಹೋದನಂತರ ಬ್ರಹ್ಮಾ, ಶಿವ-ಪಾರ್ವತಿಯರು, ಇಂದ್ರನೇ ಮೊದಲಾದ ಲೋಕಪಾಲಕರು, ಮರೀಚಿಯೇ ಮೊದಲಾದ

ಪ್ರಜಾಪತಿಗಳು, ದೊಡ್ಡ-ದೊಡ್ಡ ಋಷಿ-ಮುನಿಗಳು, ಪಿತೃದೇವತೆಗಳು, ಸಿದ್ಧರು, ಗಂಧರ್ವ-ವಿದ್ಯಾಧರರು, ನಾಗರು, ಚಾರಣರು, ಯಕ್ಷ-ರಾಕ್ಷಸರು, ಕಿನ್ನರರು, ಅಪ್ಸರೆಯರು, ಗರುಡಲೋಕದ ವಿಭಿನ್ನಜಾತಿಯ ಪಕ್ಷಿಗಳು, ಮೈತ್ರೇಯನೇ ಮೊದಲಾದ ಬ್ರಾಹ್ಮಣರು–ಇವರೆಲ್ಲರೂ ಭಗವಾನ್ ಶ್ರೀಕೃಷ್ಣನ ಪರಂಧಾಮಗಮನವನ್ನು ನೋಡುವ ಸಲುವಾಗಿ ಅತ್ಯಂತ ಉತ್ಸುಕತೆಯಿಂದ ಅಲ್ಲಿಗೆ ಆಗಮಿಸಿದರು. ಅವರೆಲ್ಲರೂ ಶ್ರೀಕೃಷ್ಣನ ಜನ್ಮೋತ್ಸವ ಮತ್ತು ಲೀಲಾಪ್ರಸಂಗಗಳನ್ನು ಗಾನಮಾಡುತ್ತಲೂ ವರ್ಣನೆ ಮಾಡುತ್ತಲೂ ಇದ್ದರು. ಅವರು ಕುಳಿತಿದ್ದ ಸಾವಿರಾರು ವಿಮಾನಗಳಿಂದ ಆಕಾಶವೇ ತುಂಬಿಹೋಗಿದ್ದಿತು. ಅವರೆಲ್ಲರೂ ಅತ್ಯಂತ ಭಕ್ತಿಭಾವದಿಂದ ಶ್ರೀಕೃಷ್ಣನ ಮೇಲೆ ಹೂಮಳೆಗರೆಯುತ್ತಿದ್ದರು.

ಭಗವಾನ್ಪಿತಾಮಹಂ ವೀಕ್ಷ್ಯ ವಿಭೂತೀರಾತ್ಮನೋ ವಿಭುಃ ।
ಸಂಯೋಜ್ಯಾತ್ಮನಿ ಚಾತ್ಮಾನಂ ಪದ್ಮನೇತ್ರೇ ನ್ಯಮೀಲಯತ್ ॥೫॥

ಸರ್ವವ್ಯಾಪಕನಾದ ಭಗವಾನ್ ಶ್ರೀಕೃಷ್ಣನು ಬ್ರಹ್ಮನನ್ನೂ ಮತ್ತು ತನ್ನ ವಿಭೂತಿಸ್ವರೂಪರಾದ ದೇವತೆಗಳನ್ನೂ ನೋಡಿ ಆತ್ಮವನ್ನು ತನ್ನ ಸ್ವ-ಸ್ವರೂಪದಲ್ಲಿ ಸ್ಥಿರಗೊಳಿಸಿ ನೇತ್ರಾರವಿಂದಗಳನ್ನು ಮುಚ್ಚಿಕೊಂಡನು.

ಲೋಕಾಭಿರಾಮಾಂ ಸ್ವತನುಂ ಧಾರಣಾಧ್ಯಾನಮಙ್ಗಲಮ್ ।
ಯೋಗಧಾರಣಯಾಽಗ್ನೇಯ್ಯಾಽದಗ್ಧ್ವಾ ಧಾಮಾವಿಶತ್ಸ್ವಕಮ್ ॥೬॥

ಭಗವಂತನ ಶ್ರೀವಿಗ್ರಹವು ಉಪಾಸಕರ ಧ್ಯಾನಕ್ಕೂ ಮತ್ತು ಧಾರಣಕ್ಕೂ ಮಂಗಳಮಯವಾದ ಆಧಾರವಾಗಿದೆ ಮತ್ತು ಸಮಸ್ತಲೋಕಗಳಿಗೂ ಶ್ರೀವಿಗ್ರಹವು ಪರಮರಮಣೀಯವಾದ ಆಶ್ರಯವಾಗಿದೆ. ಈ ಕಾರಣದಿಂದಲೇ ಶ್ರೀಕೃಷ್ಣನು ಯೋಗಿಗಳಂತೆ ಅಗ್ನಿದೇವತಾಸಂಬಂಧಿಯಾದ ಯೋಗಧಾರಣೆಯಿಂದ ತನ್ನ ದಿವ್ಯವಾದ ಶ್ರೀವಿಗ್ರಹವನ್ನು ಸುಟ್ಟು ಹಾಕಲಿಲ್ಲ. ಹಾಗೆಯೇ ತನ್ನ ಧಾಮಕ್ಕೆ ತೆರಳಿದನು.

ಶ್ರೀಕೃಷ್ಣನು ಪರಂಧಾಮಕ್ಕೆ ಹೋಗುತ್ತಿರಲಾಗಿ ಸ್ವರ್ಗದಲ್ಲಿ ದೇವದುಂದುಭಿಗಳು ಮೊಳಗಿದುವು. ಆಕಾಶದಿಂದ ದಿವ್ಯಕುಸುಮಗಳು ಉದುರಿದುವು. ಶ್ರೀಕೃಷ್ಣನು ಈ ಲೋಕವನ್ನು ತ್ಯಜಿಸಿದೊಡನೆಯೇ

ಭೂಲೋಕದಲ್ಲಿ ಅವನ ಜೊತೆಯಲ್ಲೇ ಇದ್ದ ಸತ್ಯ-ಧರ್ಮ-ಧೃತಿ-ಕೀರ್ತಿ-ಶ್ರೀ—ಇವೆಲ್ಲವೂ ಅವನನ್ನು ಅನುಸರಿಸಿಯೇ ಹೊರಟುಹೋದುವು. ಭಗವಾನ್ ಶ್ರೀಕೃಷ್ಣನ ಗತಿಯು ಮಾತಿಗೂ, ಮನಸ್ಸಿಗೂ ಅತೀತವಾದುದು. ಅವನ ದಿವ್ಯಗತಿಯನ್ನು ಯಾರೂ ತಿಳಿಯಲಾರರು. ಭಗವಂತನು ತನ್ನ ಧಾಮವನ್ನು ಪ್ರವೇಶಿಸುತ್ತಿದ್ದಾಗ ಬ್ರಹ್ಮನೇ ಮೊದಲಾದ ದೇವತೆಗಳಿಗೂ ಕೂಡ ಶ್ರೀಕೃಷ್ಣನ ಸ್ವಧಾಮಪ್ರವೇಶವನ್ನು ನೋಡಲು ಸಾಧ್ಯವಾಗಲಿಲ್ಲ. ಈ ಘಟನೆಯಿಂದಾಗಿ ಅವರೆಲ್ಲರೂ ಅತ್ಯಂತವಿಸ್ಮಿತರಾದರು. ಮಿಂಚು ಮೇಘಮಂಡಲವನ್ನು ಬಿಟ್ಟು ಯಾವಾಗ ಆಕಾಶವನ್ನು ಪ್ರವೇಶಿಸುತ್ತದೆಂಬುದನ್ನು ಮನುಷ್ಯನು ನೋಡಲಾರನು. ಅದೇ ರೀತಿಯಲ್ಲಿ ದೇವತೆಗಳು ಕೂಡ ಶ್ರೀಕೃಷ್ಣನ ಗತಿಯನ್ನು ಕಾಣಲಾರರು. ಬ್ರಹ್ಮ-ರುದ್ರಾದಿಗಳಾದರೋ ಶ್ರೀಕೃಷ್ಣನ ಸ್ವಧಾಮಪ್ರವೇಶವನ್ನು ಕಾಣದಿದ್ದರೂ ಅವನ ಯೋಗಗತಿಯನ್ನು ನೋಡಿ ವಿಸ್ಮಯಗೊಂಡವರಾಗಿ ಆತನನ್ನು ಪರಿಪರಿಯಾಗಿ ಹೊಗಳುತ್ತಾ ತಮ್ಮ-ತಮ್ಮ ಲೋಕಗಳಿಗೆ ತೆರಳಿದರು.

ಯಾವ ರೀತಿಯಲ್ಲಿ ನಟನೊಬ್ಬನು ನಾನಾವೇಷಗಳನ್ನು ಧರಿಸಿಯೂ ಯಾವುದೇ ವೇಷದಲ್ಲಿಯೂ ಅನಾಸಕ್ತನಾಗಿರುವನೋ—ಅದೇ ರೀತಿಯಲ್ಲಿ ಜಗತ್ಕಾರಣನಾದ ಭಗವಂತನು ಯಾದವರಲ್ಲಿ ಅವತರಿಸಿ ತನ್ನ ಲೀಲೆಗಳನ್ನು ತೋರಿಸಿ ನಿರ್ಯಾಣವನ್ನು ಹೊಂದಿದುದು ಅವನ ಮಾಯಾಪ್ರದರ್ಶನವೇ ಹೊರತು ಬೇರೆಯಲ್ಲ. ತನ್ನಿಂದಲೇ ಜಗತ್ತನ್ನು ಸೃಷ್ಟಿಸಿ, ಅದರಲ್ಲಿಯೇ ತಾನು ಅನುಪ್ರವೇಶಮಾಡಿ, ವಿಧ-ವಿಧವಾದ ಲೀಲೆಗಳಿಂದ ವಿಹರಿಸಿ, ಅಂತ್ಯದಲ್ಲಿ ಅದನ್ನು ಲಯಗೊಳಿಸಿ ಈಗ ಅವನು ಶಾಂತಿಯಿಂದಿರುತ್ತಾನೆ.

ಮರ್ತ್ಯೇನ ಯೋ ಗುರುಸುತಂ ಯಮಲೋಕನೀತಂ
ತ್ವಾಂ ಚಾನಯಚ್ಛರಣದಃ ಪರಮಾಸ್ತ್ರದಗ್ಧಮ್ ।
ಜಿಗ್ಯೇಽನ್ತಕಾನ್ತಕಮಪೀಶಮಸಾವನೀಶಃ
ಕಿಂ ಸ್ವಾವನೇ ಸ್ವರನಯನ್ಮೃಗಯುಂ ಸದೇಹಮ್ ॥೧೨॥

ಸಾಂದೀಪನೀಗುರುಗಳ ಮಗನು ಯಮಲೋಕಕ್ಕೆ ಹೋಗಿಬಿಟ್ಟಿದ್ದನು. ಆದರೆ ಶ್ರೀಕೃಷ್ಣನು ತನ್ನ ಪ್ರಭಾವದಿಂದ ಮನುಷ್ಯರೂಪದಿಂದಲೇ

ಗುರುಪುತ್ರನನ್ನು ಯಮಲೋಕದಿಂದ ಪುನಃ ಕರೆತಂದನು. ಪರೀಕ್ಷಿತ ಮಹಾರಾಜ! ತಾಯಿಯ ಹೊಟ್ಟೆಯಲ್ಲಿದ್ದಾಗ ನಿನ್ನ ಶರೀರವೇ ಬ್ರಹ್ಮಾಸ್ತ್ರದಿಂದ ಸುಟ್ಟುಹೋಗಿದ್ದಿತು. ಪರಮಕಾರುಣಿಕನಾದ, ಶರಣಾಗತವತ್ಸಲನಾದ ಶ್ರೀಕೃಷ್ಣನು ನಿನ್ನನ್ನು ಜೀವಂತಗೊಳಿಸಿದನು. ಬಾಣಾಸುರನೊಡನೆ ಯುದ್ಧಮಾಡುವ ಸಮಯದಲ್ಲಿ ಅವನ ಪಕ್ಷವನ್ನು ವಹಿಸಿದ್ದ ಕಾಲನಿಗೂ ಮಹಾಕಾಲನಾದ ರುದ್ರದೇವನನ್ನು ಪರಾಜಯಗೊಳಿಸಿದನು. ತನ್ನನ್ನೇ ಬಾಣದಿಂದ ಪ್ರಹರಿಸಿದ ಮಹಾಪರಾಧಿಯಾದ ಜರಾವ್ಯಾಧನಿಗೆ ಸಶರೀರ ಸ್ವರ್ಗವನ್ನು ದಯಪಾಲಿಸಿದನು. ಅಂತಹ ಮಹಾನುಭಾವನು, ಅಪಾರ ಮಹಿಮನು, ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲವೇ?

ತಥಾಪ್ಯಶೇಷಸ್ಥಿತಿಸಂಭವಾಪ್ಯಯೇ–
ಷ್ವನನ್ಯಹೇತುರ್ಯದಶೇಷಶಕ್ತಿಧೃಕ್ ।
ನೈಚ್ಛತ್ಪ್ರಣೇತುಂ ವಪುರತ್ರ ಶೇಷಿತಂ
ಮರ್ತ್ಯೇನ ಕಿಂ ಸ್ವಸ್ಥಗತಿಂ ಪ್ರದರ್ಶಯನ್ ॥೧೩॥

ಯದ್ಯಪಿ ಭಗವಾನ್ ಶ್ರೀಕೃಷ್ಣನು ಸಂಪೂರ್ಣಜಗತ್ತಿನ ಉತ್ಪತ್ತಿ-ಸ್ಥಿತಿ ಮತ್ತು ಸಂಹಾರಕ್ಕೆ ನಿರಪೇಕ್ಷಕಾರಣನಾಗಿದ್ದರೂ ಯಾದವರ ಸಂಹಾರವಾದ ನಂತರ ಅವನು ತನ್ನ ಶರೀರವನ್ನು ಈ ಜಗತ್ತಿನಲ್ಲಿ ಹೆಚ್ಚುಕಾಲ ಇರುವಂತೆ ಮಾಡಲು ಇಚ್ಛಿಸಲಿಲ್ಲ. ಮರಣಧರ್ಮವಿರುವ ಶರೀರದಿಂದ ಯಾವ ಪ್ರಯೋಜನವೂ ಇಲ್ಲವೆಂಬುದನ್ನೂ ಧ್ಯಾನಯೋಗದಿಂದಲೇ ಆತ್ಮ ಸಾಕ್ಷಾತ್ಕಾರವಾಗುವುದೆಂಬುದನ್ನೂ ಆತ್ಮನಿಷ್ಠರಿಗೆ ತೋರಿಸುವ ಸಲುವಾಗಿ ದೇಹವನ್ನು ಇಲ್ಲಿ ಉಳಿಸದೆ ಪರಂಧಾಮಕ್ಕೆ ಹೋದನು.

ಯ ಏತಾಂ ಪ್ರಾತರುತ್ಥಾಯ ಕೃಷ್ಣಸ್ಯ ಪದವೀಂ ಪರಾಮ್ ।
ಪ್ರಯತಃ ಕೀರ್ತಯೇದ್ಭಕ್ತ್ಯಾ ತಾಮೇವಾಪ್ನೋತ್ಯನುತ್ತಮಾಮ್ ॥೧೪॥

ಯಾವನು ಪ್ರಾತಃಕಾಲದಲ್ಲೆದ್ದು ಶುಚೀಭೂತನಾಗಿ ಶ್ರೀಕೃಷ್ಣನು ಪರಮಧಾಮಕ್ಕೆ ತೆರಳಿದುದನ್ನು ಪರಮಭಕ್ತಿಭಾವದಿಂದ ಕೀರ್ತಿಸುವನೋ ಅಂತಹವನು ಶ್ರೀಕೃಷ್ಣನ ಅದೇ ಪರಮಧಾಮವನ್ನೇ ಸೇರುತ್ತಾನೆ.

ಇತ್ತಲಾಗಿ ದಾರುಕನು ಶ್ರೀಕೃಷ್ಣನ ಆದೇಶದಂತೆ ದ್ವಾರಕೆಗೆ ಹೋಗಿ

ವಸುದೇವ ಮತ್ತು ಉಗ್ರಸೇನರ ಕಾಲುಗಳಿಗೆ ಅಡ್ಡಬಿದ್ದು ಅವರ ಚರಣಾರವಿಂದಗಳನ್ನು ಶ್ರೀಕೃಷ್ಣನ ವಿರಹದಿಂದ ಧಾರಾಕಾರವಾಗಿ ಹೊರಬರುತ್ತಿದ್ದ ಕಣ್ಣೀರಿನಿಂದಲೇ ತೋಯಿಸಿಬಿಟ್ಟನು. ವೃಷ್ಣಿಗಳು ಪರಸ್ಪರ ಕದನವಾಡಿ ನಿಧನಹೊಂದಿದರೆಂಬ ಶೋಕವಾರ್ತೆಯನ್ನು ಸಮಗ್ರವಾಗಿ ವಸುದೇವ-ಉಗ್ರಸೇನರಿಗೆ ದಾರುಕನು ಹೇಳಿದನು. ಅದನ್ನು ಕೇಳಿ ಉದ್ವಿಗ್ನರಾದ ಜನರು ಶೋಕದಿಂದ ವಿಮೋಹಿತರಾದರು. ಭಗವಾನ್ ಶ್ರೀಕೃಷ್ಣನ ವಿಯೋಗದಿಂದ ಅತಿದುಃಖಿತರಾಗಿದ್ದ ದ್ವಾರಕಾವಾಸಿಗಳು, ಜ್ಞಾತಿ-ಬಾಂಧವರು ಪರಸ್ಪರವಾಗಿ ಬಡಿದಾಡಿ ಅಸುಗಳನ್ನು ನೀಗಿ ಗತಪ್ರಾಣರಾಗಿ ಬಿದ್ದಿದ್ದ ಸ್ಥಳಕ್ಕೆ ಬಹಳ ಬೇಗನೆ ಹೋದರು. ದೇವಕೀ-ರೋಹಿಣೀ ಮತ್ತು ವಸುದೇವರು ತಮ್ಮ ಪ್ರಿಯಪುತ್ರರಾದ ಶ್ರೀಕೃಷ್ಣ-ಬಲರಾಮರನ್ನು ಕಾಣದೆ ಶೋಕಪೀಡಿತರಾಗಿ ಮೂರ್ಛೆ ಹೊಂದಿದರು. ಭಗವದ್ವಿರಹದಿಂದ ಅತಿದುಃಖಿತರಾಗಿದ್ದ ಅವರು ತಮ್ಮ ಪ್ರಾಣಗಳನ್ನೇ ತೊರೆದರು. ಸ್ತ್ರೀಯರು ತಮ್ಮ-ತಮ್ಮ ಗಂಡಂದಿರನ್ನು ಗುರುತಿಸಿಕೊಂಡು ಗಾಢಾಲಿಂಗನೆಮಾಡಿಕೊಂಡು ಪತಿಯೊಡನೆ ಚಿತೆಯನ್ನೇರಿ ಭಸ್ಮವಾಗಿ ಹೋದರು. ಬಲರಾಮನ ಪತ್ನಿಯರು ಬಲರಾಮನ ಶರೀರವನ್ನೂ, ವಸುದೇವನ ಪತ್ನಿಯರು ವಸುದೇವನ ಶರೀರವನ್ನೂ, ಭಗವಂತನ ಸೊಸೆಯರು ತಮ್ಮ-ತಮ್ಮ ಗಂಡಂದಿರ ಶರೀರವನ್ನೂ ಗುರುತಿಸಿ ಚಿತೆಯಲ್ಲಿರಿಸಿ ತಾವೂ ಸಹಗಮನಮಾಡಿದರು. ರುಕ್ಮಿಣಿಯೇ ಮೊದಲಾದ ಶ್ರೀಕೃಷ್ಣನ ಪಟ್ಟಮಹಿಷಿಯರು ಶ್ರೀಕೃಷ್ಣನನ್ನೇ ಹೃದಯಕಮಲದಲ್ಲಿ ಧ್ಯಾನಿಸುತ್ತಾ ಅಗ್ನಿಪ್ರವೇಶಮಾಡಿದರು. ತನ್ನ ಸಖನೂ, ಪ್ರಿಯತಮನೂ ಆಗಿದ್ದ ಭಗವಾನ್ ಶ್ರೀಕೃಷ್ಣನ ವಿಯೋಗದಿಂದ ಅರ್ಜುನನು ಬಹಳವಾಗಿ ದುಃಖಿಸಿದನು. ಆದರೆ ಅನಂತರ ಅವನು ಶ್ರೀಕೃಷ್ಣನು ರಣರಂಗದಲ್ಲಿ ಮಾಡಿದ್ದ ಗೀತೋಪದೇಶವನ್ನು ಸ್ಮರಿಸಿಕೊಂಡು ಸಮಾಧಾನಹೊಂದಿದನು. ಯದುವಂಶದ ಮೃತರಾದ ವ್ಯಕ್ತಿಗಳಲ್ಲಿ ಯಾರಿಗೆ ಪಿಂಡಪ್ರದಾನಮಾಡುವವರು ಯಾರೂ ಇರಲಿಲ್ಲವೋ ಅಂತಹವರಿಗೆ ಶ್ರಾದ್ಧ-ತರ್ಪಣಾದಿಗಳನ್ನು ಅರ್ಜುನನೇ ವಿಧಿಪೂರ್ವಕವಾಗಿ ಕ್ರಮಶಃ ಮಾಡಿದನು. ಶ್ರೀಹರಿಯಿಂದ ತ್ಯಜಿಸಲ್ಪಟ್ಟಿದ್ದ ದ್ವಾರಕಾಪಟ್ಟಣವನ್ನು ಸಮುದ್ರವು ಕ್ಷಣಮಾತ್ರದಲ್ಲಿ ಮುಳುಗಿಸಿಬಿಟ್ಟಿತು. ಆದರೆ ಭಗವಾನ್

ಶ್ರೀಕೃಷ್ಣನ ನಿವಾಸಸ್ಥಾನವನ್ನು ಅದು ಮುಳುಗಿಸಲಿಲ್ಲ. ವರ್ಜಯಿತ್ವಾ ಶ್ರೀಮದ್ಭಗವದಾಲಯಮ್ ।

ನಿತ್ಯಂ ಸಂನಿಹಿತಸ್ತತ್ರ ಭಗವಾನ್ ಮಧುಸೂದನಃ ।
ಸ್ಮೃತ್ವಾಶೇಷಾಶುಭಹರಂ ಸರ್ವಮಙ್ಗಲಮಙ್ಗಲಮ್ ॥೨೪॥

ಭಗವಾನ್ ಶ್ರೀಕೃಷ್ಣನು ಈಗಲೂ ಕೂಡ ಆ ದೇವಾಲಯದಲ್ಲಿ ವಾಸಮಾಡಿಕೊಂಡಿದ್ದಾನೆ. ಶ್ರೀಕೃಷ್ಣನ ಆ ಸ್ಥಾನವು ಸ್ಮರಣಮಾತ್ರದಿಂದಲೇ ಸಮಸ್ತವಾದ ಪಾಪ-ತಾಪಗಳನ್ನೂ ಹೋಗಲಾಡಿಸುತ್ತದೆ. ಸಮಸ್ತವಾದ ಮಂಗಳಕಾರ್ಯಗಳಿಗೂ ಕೂಡ ಮಂಗಳದಾಯಕವಾಗಿದೆ.

ಪರೀಕ್ಷಿತಮಹಾರಾಜ! ಧನಂಜಯನು ದ್ವಾರಕಾಪಟ್ಟಣದಲ್ಲಿ ಅಳಿದುಳಿದಿದ್ದ ಸ್ತ್ರೀ-ಬಾಲ-ವೃದ್ಧರನ್ನು ಕರೆದುಕೊಂಡು ಇಂದ್ರಪ್ರಸ್ಥಕ್ಕೆ ಬಂದು ಅಲ್ಲಿ ಅವರೆಲ್ಲರನ್ನೂ ನೆಲೆಗೊಳಿಸಿ ಅನಿರುದ್ಧನ ಮಗನಾದ ವಜ್ರನಿಗೆ ಪಟ್ಟಾಭಿಷೇಕಮಾಡಿದನು.

ಪರೀಕ್ಷಿತಮಹಾರಾಜ! ಅರ್ಜುನನಿಂದ ಯಾದವಸುಹೃದರ ವಧೆಯ ವೃತ್ತಾಂತವನ್ನು ಕೇಳಿದ ಧರ್ಮರಾಜನೇ ಮೊದಲಾದ ನಿನ್ನ ತಾತಂದಿರು ತಮ್ಮ ವಂಶರಕ್ಷಕನಾದ ನಿನ್ನನ್ನು ರಾಜ್ಯಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭೀಷೇಕಮಾಡಿ ಸಮಸ್ತರೂ ಮಹಾಪ್ರಸ್ಥಾನಕ್ಕೆ ಹೊರಟರು.

ಯ ಏತದ್ದೇವದೇವಸ್ಯ ವಿಷ್ಣೋಃ ಕರ್ಮಾಣಿ ಜನ್ಮ ಚ ।
ಕೀರ್ತಯೇಚ್ಛ್ರದ್ಧಯಾ ಮರ್ತ್ಯಃ ಸರ್ವಪಾಪೈಃ ಪ್ರಮುಚ್ಯತೇ ॥೨೭॥

ದೇವದೇವನಾದ ಮಹಾವಿಷ್ಣುವಿನ ಈ ಜನ್ಮವೃತ್ತಾಂತವನ್ನೂ ಅಮೋಘವಾದ ಲೀಲಾಪ್ರಸಂಗಗಳನ್ನೂ ಶ್ರದ್ಧಾ-ಭಕ್ತಿಪೂರ್ವಕವಾಗಿ ಯಾವನು ಕೀರ್ತನೆಮಾಡುವನೋ ಅಥವಾ ಕೇಳುವನೋ ಅಂತಹವನು ಸಮಸ್ತವಾದ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ಇತ್ಥಂ ಹರೇರ್ಭಗವತೋ ರುಚಿರಾವತಾರ–
ವೀರ್ಯಾಣಿ ಬಾಲಚರಿತಾನಿ ಚ ಶನ್ತಮಾನಿ ।
ಅನ್ಯತ್ರ ಚೇಹ ಚ ಶ್ರುತಾನಿ ಗೃಣನ್ಮನುಷ್ಯೋ
ಭಕ್ತಿಂ ಪರಾಂ ಪರಮಹಂಸಗತೌ ಲಭೇತ ॥೨೮॥

ಪರೀಕ್ಷಿತಮಹಾರಾಜ! ಯಾವ ಮನುಷ್ಯನು ಈ ಪ್ರಕಾರವಾಗಿ

ಭಕ್ತಭಯಾಪಹಾರಿಯಾದ, ನಿಖಿಲಸೌಂದರ್ಯ-ಮಾಧುರ್ಯನಿಧಿಯಾದ ಶ್ರೀಕೃಷ್ಣಸ್ವಾಮಿಯ ಅವತಾರಕ್ಕೆ ಸಂಬಂಧಿಸಿದ ರೋಚಕವಾದ ಪರಾಕ್ರಮದ ಕಥೆಗಳನ್ನು ಈ ಶ್ರೀಮದ್ಭಾಗವತಪುರಾಣದಲ್ಲಿಯೂ ಇತರ ಪುರಾಣ ಗಳಲ್ಲಿಯೂ ವರ್ಣಿಸಲ್ಪಟ್ಟಿರುವ ಪರಮಾನಂದಮಯವಾದ ಬಾಲಲೀಲೆಗಳನ್ನೂ ಕೈಶೋರಲೀಲೆಗಳನ್ನೂ ಸಂಕೀರ್ತನಮಾಡುವನೋ ಅಂತಹವನು ಪರಮಹಂಸರಾದ ಯತೀಂದ್ರರಿಗೆ ಅಂತಿಮವಾಗಿ ಲಭಿಸುವ ಶ್ರೀಕೃಷ್ಣನ ಚರಣಾರವಿಂದಗಳಲ್ಲಿ ಪರಾಭಕ್ತಿಭಾವವನ್ನು ಹೊಂದುತ್ತಾನೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಏಕಾದಶಸ್ಕಂಧದ ೩೧ನೆಯ ಅಧ್ಯಾಯವು ಮುಗಿಯಿತು.

ಏಕಾದಶಸ್ಕಂಧವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥
ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥
ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ॐ

ಶ್ರೀಮದ್ಭಾಗವತ-ದ್ವಾದಶಸ್ಕಂಧ

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯನ್ತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥

ದ್ವಾದಶಸ್ಕಂಧ ೧ನೆಯ ಅಧ್ಯಾಯ

ಕಲಿಯುಗದ ರಾಜವಂಶಗಳ ವರ್ಣನೆ

ಶ್ರೀಕೃಷ್ಣನು ಪರಂಧಾಮವನ್ನು ಹೊಂದಿದ ವೃತ್ತಾಂತವನ್ನು ಕೇಳಿದ ಪರೀಕ್ಷಿದ್ರಾಜನು ಶುಕಮಹರ್ಷಿಗಳಲ್ಲಿ ಹೀಗೆ ವಿಜ್ಞಾಪಿಸಿದನು :

ಸ್ವಧಾಮಾನುಗತೇ ಕೃಷ್ಣೇ ಯದುವಂಶವಿಭೂಷಣೇ ।
ಕಸ್ಯ ವಂಶೋಽಭವತ್ಪೃಥ್ವ್ಯಾಮೇತದಾಚಕ್ಷ್ವ ಮೇ ಮುನೇ ॥೧॥

"ಮಹಾಮುನಿಗಳೇ! ಯದುಕುಲಶಿರೋಮಣಿಯಾದ ಶ್ರೀಕೃಷ್ಣ ಪರಮಾತ್ಮನು ಸ್ವಧಾಮಕ್ಕೆ ತೆರಳಿದ ಬಳಿಕ ಈ ಭೂಮಿಯಲ್ಲಿ ಯಾವ ರಾಜ ವಂಶದವರು ರಾಜ್ಯಭಾರ ನಡೆಸಿದರು? ಈಗಿನ ರಾಜರು ಯಾರು? ಮುಂದಿನ ರಾಜರು ಯಾರು? ಎಂಬುದನ್ನು ತಿಳಿಸಿರಿ."

ಶುಕಮುನಿಗಳು ಆತನಿಗೆ ಹೀಗೆ ಉತ್ತರಿಸಿದರು :

"ಮಹಾರಾಜ! ಜರಾಸಂಧನ ತಂದೆಯಾದ ಬೃಹದ್ರಥನ ವಂಶದಲ್ಲಿ ಪುರಂಜಯ ಅಥವಾ ರಿಪುಂಜಯ ಎನ್ನುವವನು ಕಟ್ಟಕಡೆಯ ರಾಜ ನಾಗುವನು–ಎಂದು ಹಿಂದೆ ತಿಳಿಸಿದ್ದೆನಷ್ಟೆ? ಆತನಿಗೆ ಶುನಕ ಎಂಬ ಹೆಸರಿನ ಮಂತ್ರಿ ಇರುವನು. ಆ ಶುನಕನು ತನ್ನ ಸ್ವಾಮಿಯನ್ನು ಕೊಲೆಮಾಡಿ ತನ್ನ ಪುತ್ರನಾದ ಪ್ರದ್ಯೋತನನ್ನು ರಾಜಸಿಂಹಾಸನದ ಮೇಲೆ ಕೂರಿಸು

ವನು. ಪ್ರದ್ಯೋತನಿಗೆ ಪಾಲಕನೆಂಬ ಪುತ್ರನೂ ಪಾಲಕನಿಗೆ ವಿಶಾಖಯೂಪನೆಂಬ ಸುತನೂ, ವಿಶಾಖಯೂಪನಿಗೆ ರಾಜಕನೆಂಬ ಮಗನೂ ಮತ್ತು ಆ ರಾಜಕನಿಗೆ ನಂದಿವರ್ಧನನೆಂಬ ಪುತ್ರನೂ ಜನಿಸುವರು. ಪ್ರದ್ಯೋತವಂಶದಲ್ಲಿ ಈ ಐವರು ರಾಜರೇ ಆಳುವವರು. ಇವರಿಗೆ ಪ್ರದ್ಯೋತನರು–ಎಂದು ಹೆಸರು. ಇವರು ನೂರಮೂವತ್ತೆಂಟು ವರ್ಷಗಳವರೆಗೆ ಧರೆಯ ರಾಜತ್ವವನ್ನು ಅನುಭವಿಸುವರು. (ಶ್ಲೋಕ ೨-೪)

ಇವರನಂತರ ಶಿಶುನಾಗನೆಂಬುವನು ಅರಸನಾಗುವನು. ಆತನ ಪುತ್ರನು ಕಾಕವರ್ಣ. ಕಾಕವರ್ಣನಿಗೆ ಕ್ಷೇಮಧರ್ಮನೆಂಬ ಪುತ್ರನೂ ಆ ಕ್ಷೇಮಧರ್ಮನಿಗೆ ಕ್ಷೇತ್ರಜ್ಞನೆಂಬ ಪುತ್ರನೂ ಹುಟ್ಟುವರು. ಕ್ಷೇತ್ರಜ್ಞನಿಗೆ ವಿಧಿಸಾರನೂ, ವಿಧಿಸಾರನಿಗೆ ಅಜಾತಶತ್ರು ಎಂಬುವನೂ ಪುತ್ರರಾಗಿ ಜನಿಸುವರು. ಅಜಾತಶತ್ರುವಿಗೆ ದರ್ಭಕನೂ, ದರ್ಭಕನಿಗೆ ಅಜಯನೂ ಪುತ್ರರಾಗುವರು. ಅಜಯನಿಂದ ನಂದಿವರ್ಧನನೂ ನಂದಿವರ್ಧನನಿಂದ ಮಹಾನಂದಿಯೂ ಜನಿಸುವರು. ಈ ಶಿಶುನಾಗವಂಶದವರೆಲ್ಲಾ ಸೇರಿ ಒಟ್ಟು ಹತ್ತು ಮಂದಿ ಕಲಿಯುಗದಲ್ಲಿ ಮುನ್ನೂರ ಅರವತ್ತು ವರ್ಷಗಳ ಕಾಲ ಭೂಮಿಯಲ್ಲಿ ರಾಜ್ಯವಾಳುವರು. ಮಹಾನಂದಿಗೆ ಕಡೆಯ ವರ್ಣದ ಹೆಂಡತಿಯ ಗರ್ಭದಲ್ಲಿ ನಂದನೆಂಬ ಪುತ್ರನು ಹುಟ್ಟುವನು. ಆತನು ತುಂಬಾ ಬಲಿಷ್ಠನಾದ ರಾಜನು. ಮಹಾಪದ್ಮವೆಂಬ ನಿಧಿಗೆ ಅಧಿಪತಿಯಾಗುವುದರಿಂದ ಜನರು ಈತನನ್ನು ಮಹಾಪದ್ಮನೆಂದು ಕರೆಯುವರು. ಈತನು ಕ್ಷತ್ರಿಯರಾಜರ ನಾಶಕ್ಕೆ ಕಾರಣನಾಗುವನು. ಅಲ್ಲಿಂದ ಮುಂದೆ ಆಳುವ ರಾಜರು ಸಾಮಾನ್ಯವಾಗಿ ವೃಷಲರಾಗಿ ಅಧಾರ್ಮಿಕರೇ ಅಗುವರು. (ಶ್ಲೋಕ ೫-೯)

ಮಹಾಪದ್ಮನು ಭೂಮಿಗೆ ಏಕಚ್ಛತ್ರಾಧಿಪತಿಯಾಗುವನು. ಆತನ ಶಾಸನವನ್ನು ಯಾರಿಗೂ ಮೀರಲಾಗುವುದಿಲ್ಲ. ಎರಡನೆಯ ಪರಶುರಾಮನೋ ಎಂಬಂತೆ ಆತನು ಕ್ಷತ್ರಿಯರ ನಾಶಕ್ಕೆ ಕಾರಣನಾಗುವನು. ಅವನಿಗೆ ಸುಮಾಲ್ಯನೇ ಮುಂತಾದ ಎಂಟು ಮಂದಿ ಪುತ್ರರು ಹುಟ್ಟುವರು. ಅವರೆಲ್ಲರೂ ರಾಜರಾಗಿ ನೂರು ವರ್ಷಗಳ ಕಾಲ ಭೂಮಿಯನ್ನು ಅನುಭವಿಸುವರು. ಕೌಟಿಲ್ಯ ವಾತ್ಸ್ಯಾಯನ ಅಥವಾ ಚಾಣಕ್ಯನೆಂದು ಪ್ರಸಿದ್ಧನಾಗುವ

ಒಬ್ಬ ಮಹಾಬ್ರಾಹ್ಮಣನು ಆ ನಂದನನ್ನೂ ಮತ್ತು ಅವನ ಪುತ್ರರನ್ನೂ ನಾಶಗೊಳಿಸುವನು. ಅವರು ಅಳಿದು ಹೋಗಲು ಆತನ (ಮಹಾಪದ್ಮನ) ಕೊನೆಯ ಪುತ್ರನಾದ ಚಂದ್ರಗುಪ್ತಮೌರ್ಯನಿಗೆ ಸಿಂಹಾಸನದಲ್ಲಿ ಪಟ್ಟಾಭಿಷೇಕಮಾಡುವನು. ಚಂದ್ರಗುಪ್ತಮೌರ್ಯನ ಪುತ್ರ ವಾರಿಸಾರ. ವಾರಿಸಾರನಿಗೆ ಅಶೋಕವರ್ಧನನು ಪುತ್ರನಾಗುವನು. ಅಶೋಕವರ್ಧನನ ಪುತ್ರನು ಸುಯಶ. ಸುಯಶಸನ ಮಗ ಸಂಗತ. ಸಂಗತನ ಪುತ್ರ ಶಾಲಿಶೂಕ ಮತ್ತು ಶಾಲಿಶೂಕನ ಪುತ್ರ ಸೋಮಶರ್ಮ ಎನಿಸುವವರು. ಸೋಮಶರ್ಮನಿಗೆ ಶತಧನ್ವನೂ ಮತ್ತು ಶತಧನ್ವನಿಗೆ ಬೃಹದ್ರಥನೂ ಪುತ್ರರಾಗುವರು. ಎಲೈ ಕುರುಕುಲಮಣಿಯೇ! ಮೌರ್ಯವಂಶದ ಈ ಹತ್ತು ಮಂದಿ ರಾಜರು ಕಲಿಯುಗದಲ್ಲಿ ಒಟ್ಟು ನೂರಮೂವತ್ತೇಳು ವರ್ಷಗಳ ಕಾಲ ರಾಜ್ಯವನ್ನಾಳುವರಪ್ಪಾ. *ಪುಷ್ಪಮಿತ್ರಶುಂಗನು ಬೃಹದ್ರಥನ ಸೇನಾಪತಿ. ಈತನು ತನ್ನ ಸ್ವಾಮಿಯನ್ನು ಸಂಹರಿಸಿ ತಾನೇ ರಾಜನಾಗಿಬಿಡುವನು. ಪುಷ್ಯಮಿತ್ರನಿಗೆ ಅಗ್ನಿಮಿತ್ರನೆಂಬ ಪುತ್ರನು ಹುಟ್ಟುವನು. ಆ ಅಗ್ನಿಮಿತ್ರನ ಪುತ್ರ ಸುಜ್ಯೇಷ್ಠ. ವಸುಮಿತ್ರನೆಂಬುವನು ಸುಜ್ಯೇಷ್ಠನ ಪುತ್ರ. ಆ ವಸುಮಿತ್ರನಿಗೆ ಭದ್ರಕನೂ, ಭದ್ರಕನಿಗೆ ಪುಲಿಂದನೂ, ಪುಲಿಂದನಿಗೆ ಘೋಷನೂ, ಘೋಷನಿಗೆ ವಜ್ರಮಿತ್ರನೂ ಪುತ್ರರಾಗುವರು. ವಜ್ರಮಿತ್ರನು ಭಾಗವತನೆಂಬ ಪುತ್ರನನ್ನೂ ಭಾಗವತನು ದೇವಭೂತಿಯೆಂಬ ಪುತ್ರನನ್ನೂ ಪಡೆಯುವರು. ಶುಂಗವಂಶದ ಈ ಹತ್ತು ಮಂದಿ ರಾಜರೂ ನೂರಹನ್ನೆರಡು ವರ್ಷಗಳವರೆಗೆ ಭೂಮಿಯನ್ನಾಳುವರು.

(ಶ್ಲೋಕ ೧೦-೧೮)

ರಾಜೇಂದ್ರ! ಶುಂಗವಂಶೀಯರಾಜರ ಅನಂತರ ಈ ಭೂಮಿಯನ್ನು ಕಣ್ವವಂಶೀಯ ಭೂಪತಿಗಳು ಆಳುವರು. ಇವರು ತಮ್ಮ ಹಿಂದಿನ ವಂಶದ

---

*ಮೌರ್ಯರಾಜರ ಸಂಖ್ಯೆ ಚಂದ್ರಗುಪ್ತನನ್ನೂ ಸೇರಿಸಿ ಒಂಭತ್ತು ಮಾತ್ರ ಆಗುತ್ತದೆ. ಆದರೆ ವಿಷ್ಣುಪುರಾಣಾದಿಗಳಲ್ಲಿ ಚಂದ್ರಗುಪ್ತನಿಂದ ಐದನೆಯವನನ್ನಾಗಿ ದಶರಥ ಎಂಬ ಒಬ್ಬ ಮೌರ್ಯಭೂಪಾಲನನ್ನು ಹೇಳಿದೆ. ಅವನನ್ನೂ ಸೇರಿಸಿಕೊಂಡು ಹತ್ತು ಮಂದಿ ಮೌರ್ಯಭೂಪತಿಗಳು ಎಂದು ಇಲ್ಲಿ ಹೇಳಿರುವುದಾಗಿ ತಿಳಿಯಬೇಕು.

ರಾಜರಿಗಿಂತಲೂ ಗುಣದಲ್ಲಿ ಕೀಳುಮಟ್ಟದವರಾಗುವರು. ಶುಂಗವಂಶದ ಕಡೆಯ ರಾಜ ದೇವಭೂತಿಯು ಅತ್ಯಂತ ವಿಷಯಲಂಪಟನಾಗಿರುವನು. ಇವನನ್ನು ಕೊಂದುಹಾಕಿ ಇವನ ಮಂತ್ರಿಯಾದ ಕಣ್ವವಂಶೀಯ ವಸುದೇವನು ರಾಜತ್ವವನ್ನು ಪಡೆಯುವನು. ಆ ವಸುದೇವನ ಪುತ್ರನಿಗೆ ಭೂಮಿತ್ರನೂ, ಭೂಮಿತ್ರನಿಗೆ ನಾರಾಯಣನೂ ಪುತ್ರರಾಗುವರು. ನಾರಾಯಣನಿಗೆ ಸುಶರ್ಮನೆಂದು ವಿಖ್ಯಾತನಾದ ಪುತ್ರನು ಹುಟ್ಟುವನು. ಈ ಕಣ್ವವಂಶದ ನಾಲ್ಕುಮಂದಿ ಭೂಪತಿಗಳು ಕಲಿಯುಗದಲ್ಲಿ ಮುನ್ನೂರ ನಲವತ್ತೈದು ಸಂವತ್ಸರಗಳವರೆಗೆ ಭೂಮಿಯನ್ನಾಳುವರು. ಕಣ್ವವಂಶದ ಕಡೆಯರಾಜ ಸುಶರ್ಮನನ್ನು ಆತನ ಬಲಿಷ್ಠ ಸೇವಕನಾದ ಆಂಧ್ರಜಾತಿಗೆ ಸೇರಿದ ಒಬ್ಬ ವೃಷಲನು ಕೊಲೆಮಾಡಿ ಕೆಲವು ಕಾಲ ರಾಜ್ಯವನ್ನಾಳುವನು. ಅನಂತರ ಆತನ ಸೋದರನಾದ ಕೃಷ್ಣನೆಂಬುವನು ರಾಜನಾಗುವನು. ಶ್ರೀಶಾಂತಕರ್ಣನೆಂಬುವನು ಕೃಷ್ಣನ ಪುತ್ರನಾಗುವನು. ಶ್ರೀಶಾಂತಕರ್ಣನ ಪುತ್ರ ಪೌರ್ಣಮಾಸ. ಪೌರ್ಣಮಾಸನು ಲಂಬೋದರನೆಂಬ ಪುತ್ರನನ್ನೂ ಲಂಬೋದರನು ಚಿಬಿಲಕನೆಂಬ ಪುತ್ರನನ್ನೂ ಪಡೆಯುವರು. ಚಿಬಿಲಕನಿಂದ ಮೇಘಸ್ವಾತಿಯೂ, ಮೇಘಸ್ವಾತಿಯಿಂದ ಅಟಮಾನನೂ, ಅಟಮಾನನಿಂದ ಅನಿಷ್ಟಕರ್ಮನೂ, ಅನಿಷ್ಟಕರ್ಮನಿಂದ ಹಾಲೇಯನೂ, ಹಾಲೇಯನಿಂದ ತಲಕನೂ, ತಲಕನಿಂದ ಪುರುಷಭೀರುವೂ ಮತ್ತು ಪುರುಷಭೀರುವಿನಿಂದ ಸುನಂದನರಾಜನೂ ಹುಟ್ಟುವರು. ಸುನಂದನನ ಪುತ್ರನು ಚಕೋರ ಎಂಬ ರಾಜ. ಚಕೋರನಿಗೆ ಎಂಟು ಮಂದಿ ಪುತ್ರರಾಗುವರು. ಇವರಿಗೆಲ್ಲಾ 'ಬಹು' ಎಂಬ ನಾಮಧೇಯ. ಇವರಲ್ಲಿ ಅತ್ಯಂತ ಕಿರಿಯನಾದವನು ಶಿವಸ್ವಾತಿ. ಶಿವಸ್ವಾತಿಯು ಮಹಾವೀರನಾಗಿ ಶತ್ರುಗಳ ಹುಟ್ಟಡಗಿಸಿಬಿಡುವನು. ಶಿವಸ್ವಾತಿಗೆ ಗೋಮತೀಪುತ್ರನೆಂಬ ಪುತ್ರನು ಜನಿಸುವನು. ಗೋಮತೀಪುತ್ರನ ಪುತ್ರನು ಪುರೀಮಾನ್. ಪುರೀಮಂತನ ಪುತ್ರ ಮೇದಶ್ಶಿರ ಮತ್ತು ಮೇದಶ್ಶಿರನ ಪುತ್ರ ಶಿವಸ್ಕಂದ ಎನಿಸುವನು. ಶಿವಸ್ಕಂದನ ಪುತ್ರ ಯಜ್ಞಶ್ರೀ ಎಂದೂ ಯಜ್ಞಶ್ರೀಯ ಪುತ್ರನು ವಿಜಯನೆಂದೂ ಕರೆಯಲ್ಪಡುವರು. ವಿಜಯನಿಗೆ ಚಂದ್ರವಿಜ್ಞ ಮತ್ತು ಲೋಮಧಿ–ಎಂಬ ಇಬ್ಬರು ಪುತ್ರರು ಹುಟ್ಟುವರು. ಈ ಮೂವತ್ತು

ಮಂದಿ ರಾಜರು ನಾನೂರ ಐವತ್ತಾರು ವರ್ಷಗಳವರೆಗೆ ಭೂಮಿಯ ಆಳ್ವಿಕೆಯನ್ನು ಅನುಭವಿಸುವರು. (ಶ್ಲೋಕ ೧೯-೨೮)

ಇವರನಂತರ ಅವಭೃತಿನಗರಿಯ ಏಳು ಮಂದಿ ಆಭೀರರಾಜರೂ, ಗರ್ದಭೀಕುಲದ ಹತ್ತು ಮಂದಿ ರಾಜರೂ ಮತ್ತು ಹದಿನಾರು ಮಂದಿ ಶಂಕಕುಲದ ಭೂಪತಿಗಳೂ ಭೂಮಿಯನ್ನು ಆಳುವರು. ಇವರೆಲ್ಲರೂ ಕಡು ಲೋಭಿಗಳು. ಇವರಾದ ಮೇಲೆ ಎಂಟು ಮಂದಿ ಯವನರೂ ಹದಿನಾಲ್ಕು ಮಂದಿ ತುರುಷ್ಕರೂ ರಾಜ್ಯವನ್ನಾಳುವರು. ತುರುಷ್ಕರ ಅನಂತರ ಹತ್ತು ಮಂದಿ ಗುರುಂಡರೂ ಮತ್ತು ಹನ್ನೊಂದು ಮಂದಿ ಮೌನರೂ ನರಪತಿಗಳಾಗುವರು. ಇವರಲ್ಲಿ ಮೌನರನ್ನು ಬಿಟ್ಟು ಉಳಿದವರೆಲ್ಲರೂ ಒಂದು ಸಾವಿರದ ತೊಂಬತ್ತೊಂಬತ್ತು ವರ್ಷಗಳು ಭೂಮಿಯನ್ನಾಳುವರು. ಮೌನ ನರೇಂದ್ರರು ಹನ್ನೊಂದು ಮಂದಿ. ಇವರು ಮುನ್ನೂರು ವರ್ಷಗಳು ಭೂಮಿಯ ರಾಜತ್ವವನ್ನು ಅನುಭವಿಸುವರು. ಇವರ ಆಳ್ವಿಕೆ ಮುಗಿದುಹೋದಾಗ 'ಕಿಲಿಕಿಲಾ' ಎಂಬ ನಗರಿಯಲ್ಲಿ ಹುಟ್ಟಿದ ಭೂತನಂದ ಎಂಬುವನು ರಾಜನಾಗುವನು. ಭೂತನಂದನ ಪುತ್ರನಾದ ವಂಗಿರಿ, ಆತನ ಸಹೋದರರಾದ ಶಿಶುನಂದಿ, ಯಶೋನಂದಿ ಮತ್ತು ಪ್ರವೀರಕ–ಇವರು ನೂರಾರು ವರ್ಷಗಳವರೆಗೆ ರಾಜ್ಯವನ್ನಾಳುವರು. ಇವರಿಗೆ ಹದಿಮೂರು ಮಂದಿ ಪುತ್ರರಾಗುವರು. ಇವರೆಲ್ಲರಿಗೂ ಬಾಹ್ಲಿಕರೆಂದು ಹೆಸರು. ಇವರ ಅನಂತರ ಪುಷ್ಪಮಿತ್ರನೆಂಬ ಕ್ಷತ್ರಿಯನೂ ಮತ್ತು ಅವನ ಪುತ್ರನಾದ ದುರ್ಮಿತ್ರನೂ ರಾಜರಾಗುವರು. ಬಾಹ್ಲಿಕವಂಶದ ರಾಜರು ಒಟ್ಟಿಗೆ ದೇಶದ ಬೇರೆ ಬೇರೆ ಪ್ರದೇಶಗಳಲ್ಲಿ ರಾಜ್ಯವನ್ನಾಳುವರು. ಅವರಲ್ಲಿ ಏಳು ಮಂದಿ ಆಂಧ್ರದೇಶದ ರಾಜರಾಗುವರು. ಏಳು ಮಂದಿ ಕೋಸಲದ ಭೂಪತಿಗಳಾಗುವರು. ಕೆಲವರು ವಿದೂರಭೂಮಿಗೂ ಮತ್ತೆ ಕೆಲವರು ನಿಷಧದೇಶಕ್ಕೂ ಶಾಸಕರಾಗುವರು. (ಶ್ಲೋಕ ೨೯-೩೫)

ಇವರ ಅನಂತರ ವಿಶ್ವಸ್ಫೂರ್ಜಿ ಎಂಬುವನು ಮಗಧದೇಶದ ರಾಜನಾಗುವನು. ಈತನು ಪುರಂಜಯನೆಂದೂ ಕರೆಯಲ್ಪಡುವನು. (ಹಿಂದೆ ಹೇಳಿದ ಬಾರ್ಹದ್ರಥ ಪುರಂಜಯನೇ ಬೇರೆ ; ಈ ಪುರಂಜಯನೇ ಬೇರೆ.) ಈತನು ಉಚ್ಚವರ್ಣದವರನ್ನು ಪುಲಿಂದ, ಯಾದವ, ಮದ್ರ ಮುಂತಾದ

ಹೆಸರಿನ ಮ್ಲೇಚ್ಛಸದೃಶರನ್ನಾಗಿ ಮಾಡುವನು. ದುಷ್ಟಬುದ್ಧಿಯುಳ್ಳವನಾದ ಈತನು ಬ್ರಾಹ್ಮಣ್ಯಕ್ಕೆ ವಿರುದ್ಧವಾದ ಜನರನ್ನು ಸ್ಥಾಪಿಸಿ ಸಲಹುವನು. ತನ್ನ ಬಲವೀರ್ಯದಿಂದ ಕ್ಷತ್ರಿಯರನ್ನು ನಿರ್ಮೂಲಗೊಳಿಸುವನು. ಪದ್ಮಾವತೀನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಹರಿದ್ವಾರದಿಂದ ಪ್ರಯಾಗದವರೆಗಿನ ಸುರಕ್ಷಿತವಾದ ಭೂಮಿಯನ್ನು ಆಳುವನು. ಘೋರವಾದ ಕಲಿಯುಗವು ಮುಂದುವರಿದಂತೆ ಸೌರಾಷ್ಟ್ರ, ಅವನ್ತೀ, ಆಭೀರ, ಶೂರ, ಅರ್ಬುದ ಮತ್ತು ಮಾಲವದೇಶಗಳ ಬ್ರಾಹ್ಮಣರು ಸಂಸ್ಕಾರಹೀನರಾಗಿ ಬಿಡುವರು ಮತ್ತು ಆಳರಸರೂ ಶೂದ್ರಪ್ರಾಯರಾಗಿಬಿಡುವರು. ಸಿಂಧೂನದಿಯ ತೀರ, ಚಂದ್ರಭಾಗಾ ನದಿಯ ದಡದ ಪ್ರದೇಶ, ಕೌನ್ತೀ ಮತ್ತು ಕಾಶ್ಮೀರ ಮಂಡಲಗಳಲ್ಲಿ ಸಾಮಾನ್ಯವಾಗಿ ವೃಷಲರೂ, ಸಂಸ್ಕಾರಹೀನರಾಗಿ ಬ್ರಹ್ಮತೇಜಸ್ಸನ್ನು ಕಳೆದುಕೊಂಡ ನಾಮಮಾತ್ರದ ಬ್ರಾಹ್ಮಣರೂ ಮತ್ತು ಮ್ಲೇಚ್ಛರೂ ರಾಜ್ಯವನ್ನಾಳುವರು. (ಶ್ಲೋಕ ೩೬-೩೯)

ಈ ರಾಜರು ಸಮಸ್ತರೂ ಆಚಾರ-ವಿಚಾರಗಳಲ್ಲಿ ಮ್ಲೇಚ್ಛಸಮಾನರಾಗಿರುವರು. ಏಕಕಾಲದಲ್ಲೇ ಬೇರೆ ಬೇರೆ ಪ್ರಾಂತಗಳಲ್ಲಿ ಆಳ್ವಿಕೆ ನಡೆಸುವರು. ಅಧರ್ಮ-ಅಸತ್ಯಗಳಲ್ಲಿ ನಿರತರಾಗಿರುವರು. ದಾನಕೊಡುವುದರಲ್ಲಿ ಕಡಿಮೆ ಪ್ರಮಾಣದವರು. ಆದರೆ ಕ್ರೋಧದಲ್ಲಿ ಕಡು ಹೆಚ್ಚು ಪ್ರಮಾಣದವರು. ಹೆಂಗಸರನ್ನೂ, ಬಾಲಕರನ್ನೂ, ಗೋವುಗಳನ್ನೂ, ಬ್ರಾಹ್ಮಣರನ್ನೂ ಸಂಹರಿಸುವುದಕ್ಕೆ ಸಂಕೋಚಪಟ್ಟುಕೊಳ್ಳುವುದಿಲ್ಲ. ಮತ್ತೊಬ್ಬರ ಹಣ ಹೆಂಡಿರುಗಳನ್ನು ಅಪಹರಿಸುವುದರಲ್ಲಿ ಸದಾ ಆಸಕ್ತಿಯುಳ್ಳವರು. ಇವರು ಹುಟ್ಟುವುದೂ ಬೇಗ, ಸಾಯುವುದೂ ಬೇಗ. ಇವರಿಗೆ ಶಕ್ತಿಯೂ ಕಡಿಮೆ, ಆಯುಸ್ಸೂ ಕಡಿಮೆ. ಇವರು ರಜೋಗುಣ-ತಮೋಗುಣಗಳಿಂದ ಆವರಿಸಲ್ಪಟ್ಟು ಸಂಸ್ಕಾರಹೀನರಾಗಿರುತ್ತಾರೆ. ಕರ್ತವ್ಯಕರ್ಮಗಳನ್ನು ತೊರೆಯುವರು. ರಾಜವೇಷ ಧರಿಸಿದ್ದರೂ ಮ್ಲೇಚ್ಛಸ್ವಭಾವದವರಾಗಿ ಪ್ರಜೆಗಳ ರಕ್ತವನ್ನು ಹೀರುವರು. ಶಾಸನಮಾಡುವವರು ಅಂತಹವರಾಗಿರುವುದರಿಂದ ಇವರು ಆಳುವ ದೇಶದ ಪ್ರಜೆಗಳಲ್ಲಿಯೂ ಇದೇ ರೀತಿಯ ದುಷ್ಟಸ್ವಭಾವ, ಆಚರಣೆ, ಮಾತು ಮತ್ತು ವ್ಯವಹಾರಗಳಿರುವುವು.

ರಾಜರೆನಿಸಿದವರು ಪ್ರಜೆಗಳನ್ನು ಶೋಷಣೆಮಾಡುವುದಲ್ಲದೆ ತಾವೂ ಪರಸ್ಪರ ಹಿಂಸಕರಾಗಿ ಕೊನೆಗೆ ಎಲ್ಲರೂ ನಾಶಹೊಂದಿಬಿಡುವರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದ್ವಾದಶಸ್ಕಂಧದ ೧ನೆಯ ಅಧ್ಯಾಯವು ಮುಗಿಯಿತು.

ಕಲಿಯುಗದಲ್ಲಿ ಜನರ ಧರ್ಮಾಚರಣೆ ಹೇಗಿರುತ್ತದೆ?

ಹೀಗೆ ಕಲಿಯುಗದಲ್ಲಿ ಆಳರಸರ ಸ್ವಭಾವ ಹೇಗಿರುತ್ತದೆಯೆಂಬುದನ್ನು ನಿರೂಪಿಸಿದ ಬಳಿಕ ಈ ಯುಗದಲ್ಲಿ ಜನಸಾಮಾನ್ಯರ ಸ್ವಭಾವ, ಧರ್ಮ, ಆಚಾರ, ವ್ಯವಹಾರ ಹೇಗಿರುತ್ತದೆಯೆಂಬುದನ್ನು ನಿರೂಪಿಸುತ್ತಾ ಶುಕಮಹರ್ಷಿಗಳು ಹೀಗೆಂದರು :

ತತಶ್ಚಾನುದಿನಂ ಧರ್ಮಃ ಸತ್ಯಂ ಶೌಚಂ ಕ್ಷಮಾ ದಯಾ ।
ಕಾಲೇನ ಬಲಿನಾ ರಾಜನ್ ನಂಕ್ಷ್ಯತ್ಯಾಯುರ್ಬಲಂ ಸ್ಮೃತಿಃ ॥೧॥

"ರಾಜೇಂದ್ರ! ಕೇಳು. ಕಾಲವು ತುಂಬಾ ಬಲಶಾಲಿಯಾದುದು. ಅದರ ಫಲವಾಗಿ ಕಲಿಯುಗವು ನಡೆಯುತ್ತಿರುವಂತೆಯೇ ಪ್ರತಿದಿನವೂ ಧರ್ಮ, ಸತ್ಯ, ಪವಿತ್ರತೆ, ಕ್ಷಮೆ, ದಯೆ, ಜನರ ಆಯುಸ್ಸು, ಬಲ ಮತ್ತು ಸ್ಮರಣಶಕ್ತಿ ಇವೆಲ್ಲವೂ ಲೋಪಹೊಂದುತ್ತಿರುತ್ತವೆಯಪ್ಪಾ.

ವಿತ್ತಮೇವ ಕಲೌ ನೄಣಾಂ ಜನ್ಮಾಚಾರಗುಣೋದಯಃ ।
ಧರ್ಮನ್ಯಾಯವ್ಯವಸ್ಥಾಯಾಂ ಕಾರಣಂ ಬಲಮೇವ ಹಿ ॥೨॥

ಈ ಯುಗದಲ್ಲಿ ಹಣ ಮತ್ತು ಬಲ ಇವೇ ಎಲ್ಲಕ್ಕೂ ಅಳತೆಗೋಲು–ಪ್ರಮಾಣಗಳಾಗುವುವು. ಯಾವನಲ್ಲಿ ಹೆಚ್ಚು ಹಣವಿದೆಯೋ ಆತನೇ ಕುಲೀನ, ಆತನೇ ಆಚಾರಶೀಲ ಮತ್ತು ಆತನೇ ಗುಣಶಾಲಿ–ಎಂದು ಪರಿಗಣಿಸಲಾಗುವುದು. ಹಾಗೆಯೇ ಯಾವನು ಬಲಶಾಲಿಯೋ ಆತನನ್ನು ಧರ್ಮಿಷ್ಠನೆಂದೂ ನ್ಯಾಯವಂತನೆಂದೂ ಲೆಕ್ಕಿಸಲಾಗುವುದು.

ವಿವಾಹಸಂಬಂಧಮಾಡುವಾಗ ಕುಲ-ಶೀಲ, ಯೋಗ್ಯತೆ–ಮುಂತಾದುವು ಗಳಿಗೆ ಬೆಲೆಕೊಡದೆ ಯುವಕ-ಯುವತಿಯರ ಪರಸ್ಪರ ಕಾಮಾಭಿರುಚಿಯೇ

ಅದಕ್ಕೆ ನಿಯಾಮಕ–ಎನ್ನುವರು. ಛಲ-ಕಪಟಗಳೇ ವ್ಯವಹಾರನಿಪುಣತೆ ಎನಿಸುವುವು. ಸ್ತ್ರೀ-ಪುರುಷರ ಗುಣಮಟ್ಟವನ್ನು ಪರೀಕ್ಷಿಸುವುದಕ್ಕೆ ರತಿ ಕೌಶಲವೇ ಪ್ರಮಾಣವೆನಿಸುವುದು. (ಗುಣ-ಶೀಲಾದಿಗಳಲ್ಲ.) ಯಜ್ಞೋಪ ವೀತಧರಿಸಿದ್ದರೆ ಸಾಕು–ಅವನು ಬ್ರಾಹ್ಮಣನೆನಿಸುವನು. ಬ್ರಹ್ಮಚರ್ಯ, ಸಂನ್ಯಾಸ–ಮುಂತಾದ ಆಶ್ರಮಗಳನ್ನೂ, ಅವುಗಳ ಹೊರಗುರುತುಗಳಾದ ದಂಡ-ಕಮಂಡಲು ಮುಂತಾದುವುಗಳಿಂದ ಮಾತ್ರವೇ ನಿರ್ಣಯಿಸಲಾಗು ವುದು. ಒಂದು ಆಶ್ರಮದಿಂದ ಮತ್ತೊಂದು ಆಶ್ರಮಕ್ಕೆ ಹೋಗುವಾಗಲೂ ಈ ಹೊರಚಿಹ್ನೆಗಳನ್ನೇ ಪ್ರಮಾಣವೆಂದು ಪರಿಗಣಿಸುತ್ತಾರೆ. ನ್ಯಾಯಾಲಯಗಳಲ್ಲಿ ಸರಿಯಾದ ನ್ಯಾಯದೊರೆಯುವುದಿಲ್ಲ. ಚತುರತೆ ಯಿಂದ ಮಾತನಾಡುವವನೇ ಪಂಡಿತನೆನಿಸುವನು. ಬಡತನ ಉಳ್ಳವರನ್ನು ಕೆಟ್ಟವರೆಂದೂ, ವೇಷ–ಇತ್ಯಾದಿ ಬೂಟಾಟಿಕೆಯುಳ್ಳವರನ್ನು ಒಳ್ಳೆಯವರು, ಸಾಧುಗಳು, ಮಹಾತ್ಮರು–ಎಂದೂ ನಿರ್ಣಯಿಸುತ್ತಾರೆ. ವಿವಾಹದಲ್ಲಿ ಗಂಡು-ಹೆಣ್ಣುಗಳ ಪರಸ್ಪರ ಒಪ್ಪಿಗೆ ಸ್ವೀಕಾರವೇ ಸಾಕು. ಶಾಸ್ತ್ರ, ವಿಧಿ, ಸಂಸ್ಕಾರ ಯಾವುದೂ ಬೇಕಾಗಿಲ್ಲ ಎನ್ನುವರು. ಸ್ನಾನವೇ ಸಾಕು. ತಿಲಕಪುಂಡ್ರಗಳೇ ಮುಂತಾದ ಶಾಸ್ತ್ರೀಯ ಅಲಂಕಾರ ಅವಶ್ಯಕವಿಲ್ಲ– ಎನ್ನುತ್ತಾರೆ. ಗಂಗಾದಿತೀರ್ಥಗಳ ಸ್ನಾನ ದೂರದ ವಿಷಯ. ಅಷ್ಟುದೂರಹೋಗಿ ಸ್ನಾನಮಾಡುವುದೇಕೆ? ಇಲ್ಲಿಯೇ ನೀರಿನಲ್ಲಿ ಮಿಂದರೆ ಸಾಕು–ಎಂದು ಅಭಿಪ್ರಾಯಪಡುತ್ತಾರೆ. ಈ ಯುಗದಲ್ಲಿ ಶಾಸ್ತ್ರೀಯವಾದ ಶಿಖೆ ಇಟ್ಟುಕೊಳ್ಳುವುದು, ಜಡೆಹೆಣೆದುಕೊಳ್ಳುವುದು– ಇತ್ಯಾದಿರೂಪದಲ್ಲಿ ತಲೆಕೂದಲನ್ನು ಇಟ್ಟುಕೊಳ್ಳುವುದಿಲ್ಲ. ತಮಗೆ ತೋರಿದ ಶರೀರಕಾಂತಿಗೆ ತಕ್ಕಂತೆ ಅದನ್ನು ಇಟ್ಟುಕೊಳ್ಳುತ್ತಾರೆ. ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳುವುದೇ ಈ ಯುಗದಲ್ಲಿ ಪರಮಪುರುಷಾರ್ಥ. ಮೇಲೆ ಬಿದ್ದು ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವುದೇ ಸತ್ಯಸಂಧತೆ. ಹೇಗಿದ್ದರೂ ತನ್ನ ಕುಟುಂಬವನ್ನು ರಕ್ಷಿಸುವುದೇ ದಕ್ಷತೆಯ ಲಕ್ಷಣ. ಕೀರ್ತಿಸಂಪಾದನೆಗಾಗಿ ಧರ್ಮಾನುಷ್ಠಾನ ಮಾಡಲಾಗುತ್ತದೆ.

ಹೀಗೆ ಭೂಮಂಡಲವು ದುಷ್ಟಪ್ರಜೆಗಳಿಂದ ತುಂಬಿಹೋದಾಗ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರಲ್ಲಿ ಯಾವನು ಹೆಚ್ಚು ಬಲ

ಶಾಲಿಯೋ ಆತನೇ ರಾಜನಾಗುವನು. ರಾಜರು ಅತ್ಯಂತ ನೀಚರೂ, ನಿರ್ದಯರೂ, ಕ್ರೂರಿಗಳೂ, ಕಡುಲೋಭಿಗಳೂ, ಕಸಿದುಕೊಳ್ಳುವ ಮತ್ತು ಲೂಟಿ ದರೋಡೆಮಾಡುವ ಸ್ವಭಾವದವರೂ ಆಗುವರು. ಇವರು ಪ್ರಜೆಗಳ ಹಣ, ಹೆಂಡಿರನ್ನು ಕಿತ್ತುಕೊಳ್ಳತೊಡಗಲು, ಪ್ರಜೆಗಳು ಹೆದರಿ ಕಾಡು ಮೇಡು ಪರ್ವತಗಳಿಗೆ ಓಡಿಹೋಗುವರು. ಅಲ್ಲಿ ಗೆಡ್ಡೆ-ಗೆಣಸು, ಮಾಂಸ, ಜೇನು, ಹಣ್ಣು, ಹೂವು, ಬೀಜ ಮುಂತಾದುವುಗಳನ್ನು ತಿನ್ನುತ್ತಾ ಹೊಟ್ಟೆ ಹೊರೆಯುವರು. ಮಳೆ ಬೀಳದೆ ಕ್ಷಾಮ-ಡಾಮರಗಳು ತಲೆದೋರುವುವು. ಜೊತೆಗೆ ಕಂದಾಯದ ಹೊರೆ ಬೇರೆ. ಬಿರುಗಾಳಿ, ಬಿಸಿಲು ಮತ್ತು ಕೆಲವೊಮ್ಮೆ ಜಲಪ್ರವಾಹಗಳ ಪೀಡೆಯೂ ಸೇರಿಕೊಳ್ಳುವುದು. ಇವುಗಳಿಂದ ಪೀಡಿತರಾದ ಜನರು ಪರಸ್ಪರ ಹೊಡೆದಾಟ-ಬಡಿದಾಟಗಳಲ್ಲೂ ತೊಡಗುವರು. ಹಸಿವು-ಬಾಯಾರಿಕೆಗಳಿಂದಲೂ ರೋಗ-ರುಜಿನಗಳಿಂದಲೂ ಚಿಂತೆ-ಸಂತಾಪಗಳಿಂದಲೂ ಆಕ್ರಮಿಸಲ್ಪಡುವರು. ಕಲಿಯುಗದ ಕಾಲವಿಶೇಷಗಳಲ್ಲಿ ಜನರ ಪರಮಾಯುಸ್ಸು ಇಪ್ಪತ್ತು ಅಥವಾ ಮೂವತ್ತು ವರ್ಷಗಳು ಮಾತ್ರ ಇರುವುದು. (ಶ್ಲೋಕ ೩-೧೧)

ಕಲಿದೋಷದಿಂದ ಪ್ರಾಣಿಗಳ ದೇಹಗಳು ಕೃಶವಾಗುವುವು. ಕುಳ್ಳಾಗುವುವು ಮತ್ತು ಕ್ಷಯಹೊಂದುವುವು. ವರ್ಣ ಮತ್ತು ಆಶ್ರಮಗಳ ಧರ್ಮ ವನ್ನು ಅನುಸರಿಸುವವರಿಗೆ ಪ್ರಮಾಣವಾದ ವೇದಮಾರ್ಗವು ನಷ್ಟವಾಗಿಬಿಡುವುದು. ಪಾಷಂಡಿಗಳ ಧರ್ಮವೇ ಎಲ್ಲೆಲ್ಲೂ ತಾಂಡವವಾಡುವುದು. ರಾಜರು ಲೂಟಿಗಾರ ದರೋಡೆಗಾರರಿಗೆ ಸರಿಸಮರಾಗಿಬಿಡುವರು. ಸುಳ್ಳು, ಕಳ್ಳತನ, ವಿನಾಕಾರಣ ಇತರರನ್ನು ಹಿಂಸೆಮಾಡುವುದು ಇವೇ ಜನರ ಉದ್ಯೋಗಗಳಾಗುವುವು. ಎಲ್ಲ ವರ್ಣಗಳೂ ಬಹುಮಟ್ಟಿಗೆ ನೀಚವರ್ಣದಂತೆಯೇ ಆಗಿಬಿಡುವುವು. ಆಕಳುಗಳು ಮೇಕೆಗಳಂತೆ ಕಡಿಮೆ ಹಾಲುಕೊಡುವುವು. ವಾನಪ್ರಸ್ಥ-ಸಂನ್ಯಾಸಿಗಳ ಆಶ್ರಮಗಳೂ ಗೃಹಸ್ಥರಂತೆ ಸಂಸಾರಧರ್ಮವನ್ನನುಸರಿಸುವುವು. ಭತ್ತ, ಗೋಧಿ ಮುಂತಾದ ಸಸ್ಯ ಔಷಧಿಗಳ ಗಿಡಗಳೂ ಕಡುಚಿಕ್ಕದಾಗಿ ಬಿಡುವುವು. ಮರಗಳು ಬಹುಮಟ್ಟಿಗೆ ಬನ್ನಿಮರದಂತೆ ಮುಳ್ಳುಮರಗಳಾಗುವುವು. ಮೋಡಗಳಲ್ಲಿ ನೀರು ಬರುವುದು ನಿಂತು, ಮಿಂಚುಬಳ್ಳಿಗಳೇ ಹೆಚ್ಚಾಗಿ ಕಾಣಿಸಿಕೊಳ್ಳುವುವು. ಮನೆಗಳು ಅತಿಥಿ

ಸತ್ಕಾರ-ವೇದಪಾರಾಯಣಗಳಿಂದ ಶೂನ್ಯವಾಗುವುವು. ಜನಶೂನ್ಯವೂ ಆಗಿಬಿಡುವುವು. ಹೆಚ್ಚುಮಾತೇಕೆ ಮಹಾರಾಜ! ಕಲಿಯುಗದ ಕೊನೆಯ ವೇಳೆಗೆ ಜನರು ಬುದ್ಧಿ ಮತ್ತು ವೃತ್ತಿಗಳಲ್ಲಿ ಕತ್ತೆಗೆ ಸಮಾನರೇ ಆಗಿಬಿಡುವರು. ಹೀಗೆ ಅಧರ್ಮ-ಆಪತ್ತುಗಳು ಗಗನಕ್ಕೇರಿದಾಗ ಸ್ವಯಂ ಭಗವಂತನೇ ಧರ್ಮಸಂರಕ್ಷಣೆಗೆ ಸತ್ತ್ವಗುಣವನ್ನು ಸ್ವೀಕರಿಸಿ ಈ ಲೋಕದಲ್ಲಿ ಅವತಾರಮಾಡುತ್ತಾನಪ್ಪಾ! (ಶ್ಲೋಕ ೧೨-೧೬)

ಚರಾಚರಗಳಿಗೆ ಗುರುವೂ, ಸರ್ವೇಶ್ವರನೂ, ಸರ್ವಾತ್ಮಕನೂ, ಸಂಪೂರ್ಣಕಾಮನೂ ಆದ ಮಹಾವಿಷ್ಣುವು ಅವತಾರಮಾಡುವುದು ಏತಕ್ಕೆ? ಎಂದರೆ ಧರ್ಮಸಂರಕ್ಷಣೆಗಾಗಿ ಮತ್ತು ಸತ್ಪುರುಷರನ್ನು ಹುಟ್ಟು-ಸಾವುಗಳ ಸುರುಳಿಯೆಂಬ ಕರ್ಮಗಳ ಕಟ್ಟಿನಿಂದ ಬಿಡುಗಡೆಮಾಡುವುದಕ್ಕಾಗಿ. ಆ ಸಮಯದಲ್ಲಿ ಸ್ವಾಮಿಯು ಶಂಭಲವೆಂಬ ಗ್ರಾಮದಲ್ಲಿ ವಾಸಿಸುವ ವಿಷ್ಣುಯಶಸ ಎಂಬ ಹೆಸರಿನ ಮಹಾತ್ಮನಾದ ಬ್ರಾಹ್ಮಣಶ್ರೇಷ್ಠನ ಗೃಹದಲ್ಲಿ ಕಲ್ಕಿ ಎಂಬ ಹೆಸರಿನಿಂದ ಅವತಾರಮಾಡುವನು. ಅಣಿಮಾ ಮುಂತಾದ ಅಷ್ಟೈಶ್ವರ್ಯಗಳಿಂದಲೂ ಜ್ಞಾನವೇ ಮುಂತಾದ ಆರು ಗುಣಗಳಿಂದಲೂ ಸಂಪನ್ನನಾದ ಆ ದೇವದೇವನು ದೇವತೆಗಳು ಸಮರ್ಪಿಸುವ ದೇವದತ್ತವೆಂಬ ಮಹಾವೇಗಶಾಲಿಯಾದ ಕುದುರೆಯನ್ನೇರಿ ಸಂಚರಿಸುತ್ತಾ ದುಷ್ಟರನ್ನು ತನ್ನ ಕತ್ತಿಯಿಂದ ಕತ್ತರಿಸಿಹಾಕುವನು. ಎಣೆಯಿಲ್ಲದ ತೇಜಸ್ಸಿನಿಂದ ತೊಳತೊಳಗಿ ಬೆಳಗುತ್ತಿರುವ ಆ ಭಗವಂತನು ಆ ಅಶ್ವವನ್ನೇರಿ ಭೂಮಿಯಲ್ಲಿ ಎಲ್ಲೆಲ್ಲೂ ಸಂಚರಿಸುತ್ತಾ ರಾಜವೇಷದಿಂದ ತಮ್ಮನ್ನು ಮರೆಸಿಕೊಂಡಿರುವ ಕೋಟಿ-ಕೋಟಿ ದುಷ್ಟ-ದಸ್ಯು-ಡಕಾಯಿತರನ್ನು ಸಂಹಾರಮಾಡುವನು.
(ಶ್ಲೋಕ ೧೭-೨೦)

ಹೀಗೆ ದಸ್ಯುಗಳೆಲ್ಲರೂ ಅಳಿದುಹೋಗಲು, ಶ್ರೀವಾಸುದೇವನ ದೇಹಕ್ಕೆ ಪೂಸಿದ ಅಂಗರಾಗವನ್ನು ಮುಟ್ಟಿ ಸುಗಂಧಭರಿತವೂ ಪರಿಶುದ್ಧವೂ ಆಗಿರುವ ಗಾಳಿಯ ಸ್ಪರ್ಶದಿಂದ ನಗರ-ಗ್ರಾಮನಿವಾಸಿಗಳಾದ ಎಲ್ಲ ಜನರ ಹೃದಯಗಳೂ ಪರಿಶುದ್ಧವಾಗುವುವು ; ಪ್ರಸನ್ನವಾಗುವುವು. ಆಗಲೇ ಸತ್ಯಯುಗವು ಪ್ರಾರಂಭವಾಗುವುದು. ಕಲ್ಕಿರೂಪದಲ್ಲಿ ಅವತರಿಸಿದ ಧರ್ಮಪತಿಯೂ ಸತ್ಯಮೂರ್ತಿಯೂ ಆದ ಭಗವಾನ್ ವಾಸುದೇವನು ಜನರ

ಹೃದಯದಲ್ಲಿ ಬೆಳಗುವುದರಿಂದ ಅವರ ಮಕ್ಕಳು-ಮೊಮ್ಮಕ್ಕಳು ಮುಂತಾದ ಸಂತಾನಪರಂಪರೆಯೂ ಸತ್ತ್ವಗುಣಸಂಪನ್ನವಾಗುವುದು. ಚಂದ್ರನೂ, ಸೂರ್ಯನೂ, ಬೃಹಸ್ಪತಿಯೂ ಯಾವಾಗ ಒಟ್ಟಿಗೆ ಒಂದೇ ರಾಶಿಯಲ್ಲಿ ಸೇರುವರೋ ಆಗ ಕೃತ (ಸತ್ಯ) ಯುಗವು ಆರಂಭವಾಗುವುದೆಂದು ತಿಳಿಯಪ್ಪ! (ಶ್ಲೋಕ ೨೧-೨೪)

ಪ್ರಿಯ ಪರೀಕ್ಷಿತ! ಇಲ್ಲಿಯವರೆಗೂ ನಾನು ನಿನಗೆ ಚಂದ್ರವಂಶ ಮತ್ತು ಸೂರ್ಯವಂಶಗಳೆರಡರಲ್ಲಿಯೂ ಹಿಂದೆ ಹುಟ್ಟಿದ ರಾಜರು, ಈಗ ಇರುವ ರಾಜರು ಮತ್ತು ಮುಂದೆ ಹುಟ್ಟುವ ರಾಜರು, ಇವರೆಲ್ಲರನ್ನೂ ಇವರ ಉತ್ಪತ್ತಿಕ್ರಮವನ್ನೂ ಸಂಕ್ಷೇಪವಾಗಿ ತಿಳಿಸಿದೆನು. ನೀನು ಹುಟ್ಟಿದ ಸಮಯದಿಂದ ನಂದಮಹಾರಾಜನ ಪಟ್ಟಾಭಿಷೇಕಕಾಲದವರೆಗೆ ಒಟ್ಟು * ಒಂದು ಸಾವಿರದ ನೂರ ಹದಿನೈದು ವರ್ಷಗಳಾಗುವುವು. ಕೃತ ಯುಗವು ಆರಂಭವಾಗುವ ಲಕ್ಷಣವನ್ನು ತಿಳಿಸಿದೆನಲ್ಲವೇ? ಹಾಗೆಯೇ ಕಲಿಯುಗವು ಆರಂಭವಾಗುವ ಲಕ್ಷಣವನ್ನು ಹೇಳುತ್ತೇನೆ ; ಕೇಳು. ನೀನು ಇರುವ ಸಮಯದಲ್ಲಿ ಕಲಿಯುಗವು ಆರಂಭವಾಗಿದೆ. ಆಕಾಶದಲ್ಲಿ †ಸಪ್ತರ್ಷಿ

---

* ಪರೀಕ್ಷಿದ್ರಾಜನ ಸಮಯದಿಂದ ನಂದನ ಕಾಲದವರೆಗೆ ಬಾರ್ಹದ್ರಥರ ಒಂದು ಸಾವಿರ ವರ್ಷಗಳೂ ಸೇರಿ ಒಟ್ಟು ೧೪೬೮ ವರ್ಷಗಳಾಗುತ್ತವೆ. ಇಲ್ಲಿ ೧೧೧೫ ವರ್ಷಗಳು ಎಂದು ಹೇಳಿರುವುದು ಈ ಮಧ್ಯದಲ್ಲಿ ಬರುವ ಒಂದು ಗೊತ್ತಾದ ಮುಖ್ಯಕಾಲ ವನ್ನನುಸರಿಸಿ–ಎಂದು ತಿಳಿಯಬೇಕು.

†ಸಪ್ತರ್ಷಿಮಂಡಲ ಎನ್ನುವುದು ಉತ್ತರದಲ್ಲಿ ಪೂರ್ವದಿಕ್ಕಿಗೆ ಅಭಿಮುಖವಾಗಿ ಗಾಡಿಯ ಆಕಾರಕ್ಕೆ ಕಾಣುವ ಏಳು ನಕ್ಷತ್ರಗಳ ಸಮೂಹ. ಇದರಲ್ಲಿ ಗಾಡಿಯ ಮೂಕಿಯ ಕೊನೆಯಲ್ಲಿ ಸ್ವಲ್ಪ ಎತ್ತರವಾಗಿರುವಂತೆ ಕಾಣುವುದು ಮರೀಚಿನಕ್ಷತ್ರ. ಮರೀಚಿಯ ಹಿಂದೆ ಸ್ವಲ್ಪ ತಗ್ಗಿನಲ್ಲಿ ನೊಗದ ಸ್ಥಾನದಲ್ಲಿ ಅರುಂಧತೀನಕ್ಷತ್ರ ಸಮೇತವಾದ ವಸಿಷ್ಠನಕ್ಷತ್ರ ಕಾಣುವುದು. ಅದಕ್ಕೆ ಹಿಂದೆ ಎತ್ತರವಾದ ಮೂಕಿಯ ಬುಡದಲ್ಲಿ ಕಾಣುವುದು ಪುಲಸ್ತ್ಯನಕ್ಷತ್ರ. ಈ ಪುಲಸ್ತ್ಯನಕ್ಷತ್ರಕ್ಕೆ ಹಿಂದೆ ಚೌಕಟ್ಟಿನ ನಾಲ್ಕು ಮೂಲೆಗಳಲ್ಲೂ ಅತ್ರಿ, ಪುಲಸ್ತ್ಯ, ಪುಲಹ, ಕ್ರತು–ಎಂಬ ನಾಲ್ಕು ನಕ್ಷತ್ರಗಳು ಕಾಣಿಸುತ್ತವೆ. ಉದಯಸಮಯದಲ್ಲಿ ಮೊಟ್ಟಮೊದಲಿಗೆ ಗೋಚರಿಸುವ ಎರಡು ನಕ್ಷತ್ರಗಳು ಪುಲಹ ಮತ್ತು ಕ್ರತುನಕ್ಷತ್ರಗಳು ಎಂದು ತಿಳಿಯಬೇಕು.

ಮಂಡಲವು ಉದಯಿಸಿದಾಗ ಏಳು ನಕ್ಷತ್ರಗಳಲ್ಲಿ ಪುಲಹ ಮತ್ತು ಕ್ರತು–ಎಂಬ ಎರಡು ನಕ್ಷತ್ರಗಳು ಮಾತ್ರ ಮೊದಲು ಕಾಣುವುವು. ಎರಡು ನಕ್ಷತ್ರಗಳ ಸಮವಾದ ಮಧ್ಯದಲ್ಲಿ ದಕ್ಷಿಣೋತ್ತರ ದಿಗ್ಭಾಗದಲ್ಲಿ ಅಶ್ವಿನೀ ಮೊದಲಾದ ತಾರೆಗಳಲ್ಲಿ ಒಂದು ನಕ್ಷತ್ರವು ಮಾತ್ರ ಕಾಣಿಸುವುದು. ಆ ನಕ್ಷತ್ರದೊಡನೆ ಸಪ್ತರ್ಷಿಗಣವು ಮನುಷ್ಯರ ಲೆಕ್ಕದಲ್ಲಿ ನೂರು ವರ್ಷಗಳ ಕಾಲ ಕಾಣಿಸುತ್ತಿರುವುದು. ನಿನ್ನ ಕಾಲದಲ್ಲಿ ಆ ಸಪ್ತರ್ಷಿಮಂಡಲವು ಮಘಾನಕ್ಷತ್ರದೊಡನೆ ಸೇರಿರುವುದು. ಇದೇ ಕಲಿಯುಗದ ಆರಂಭ ಸಮಯ.

(ಶ್ಲೋಕ ೨೫-೨೮)

ಶ್ರೀಕೃಷ್ಣ ಎಂಬ ಹೆಸರಿನಲ್ಲಿ ಅವತಾರಮಾಡಿ ಬೆಳಗುತ್ತಿದ್ದ ಭಗವಂತನಾದ ಶ್ರೀಮಹಾವಿಷ್ಣುವೆಂಬ ಸೂರ್ಯನು ಪರಂಧಾಮಕ್ಕೆ ತೆರಳಿದೊಡನೆಯೇ ಕಲಿಯು ಈ ಲೋಕವನ್ನು ಆಕ್ರಮಿಸಿದನು. ಅದರಿಂದಲೇ ಈಗ ಜನರು ಪಾಪಾಚರಣೆಯಲ್ಲಿ ಆಸಕ್ತರಾಗಿದ್ದಾರೆ. ಆ ರಮಾಪತಿಯು ಎಲ್ಲಿಯವರೆಗೆ ತನ್ನ ಅಡಿದಾವರೆಗಳಿಂದ ಭೂಮಿಯನ್ನು ಸ್ಪರ್ಶಮಾಡುತ್ತಿದ್ದನೋ ಅಲ್ಲಿಯವರೆಗೆ ಕಲಿಗೆ ಈ ಭೂಮಿಯ ಮೇಲೆ ತನ್ನ ಕಾಲನ್ನು ಚಾಚಲು ಸಾಧ್ಯವಾಗಲಿಲ್ಲ. ಸಪ್ತರ್ಷಿಗಳು ಮಘಾನಕ್ಷತ್ರದಲ್ಲಿ ಸಂಚರಿಸ ತೊಡಗಿದೊಡನೆಯೇ ಕಲಿಯುಗವು ಆರಂಭವಾಯಿತೆಂದು ತಿಳಿ. ಈ ಕಲಿಯುಗವು ದೇವತೆಗಳ ಲೆಕ್ಕದಲ್ಲಿ ಸಾವಿರದ ಇನ್ನೂರು ವರ್ಷಗಳವರೆಗೆ ಅಂದರೆ ಮನುಷ್ಯರ ಗಣನೆಯಲ್ಲಿ ನಾಲ್ಕು ಲಕ್ಷದ ಮೂವತ್ತೆರಡು ಸಾವಿರ ವರ್ಷಗಳವರೆಗೆ ಇರುವುದು. ಸಪ್ತರ್ಷಿಗಳು ಮಘೆಯನ್ನು ಬಿಟ್ಟು ಪೂರ್ವಾಷಾಢಾ ನಕ್ಷತ್ರವನ್ನು ತಲುಪಿದಾಗ ನಂದನ ರಾಜ್ಯವು ನಡೆಯುವುದು. ಆಗಿನಿಂದಲೇ ಕಲಿಯು ವೃದ್ಧಿಹೊಂದತೊಡಗುವನು. ಭಗವಂತನಾದ ಶ್ರೀಕೃಷ್ಣನು ಯಾವ ದಿವಸದಲ್ಲಿ ಯಾವ ಸಮಯದಲ್ಲಿ ತನ್ನ ಪರಂಧಾಮಕ್ಕೆ ತೆರಳಿದನೋ ಅದೇ ದಿನದ ಅದೇ ಕಾಲದಲ್ಲಿ ಕಲಿಯುಗ ಪ್ರಾರಂಭವಾಯಿತೆಂದು ಪುರಾತತ್ತ್ವವನ್ನು ಬಲ್ಲವರು ಹೇಳುತ್ತಾರೆ. ದೇವತೆಗಳ ಲೆಕ್ಕದಂತೆ ಒಂದು ಸಾವಿರ ವರ್ಷಗಳು ಕಳೆದೊಡನೆಯೇ ಕಲಿಯುಗದ ಕೊನೆಗಾಲವು ಬರುವುದು ಮತ್ತು ಭಗವಂತನಾದ ಕಲ್ಕಿಯ ಕೃಪೆಯಿಂದ ಮತ್ತೆ ಮನುಷ್ಯರಲ್ಲೂ ಸತ್ತ್ವಗುಣವು ತಲೆದೋರಿ ಅವರಿಗೆ ಆತ್ಮಪ್ರಕಾಶ

ಉಂಟಾಗುವುದು. ಅಂದಿನಿಂದ ಸತ್ಯಯುಗದ ಪ್ರಾರಂಭವೂ ಆಗುವುದು ಎಂದು ತಿಳಿಯಪ್ಪಾ!

ರಾಜೇಂದ್ರ! ನಾನು ನಿನಗೆ ಮನುಮಹಾರಾಜರ ವಂಶವನ್ನು ಮಾತ್ರ ಕುರಿತು ಸಂಕ್ಷೇಪವಾಗಿ ವರ್ಣನೆಮಾಡಿದ್ದೆನು. ಈ ಮನುವೇ ಮುಂತಾದ ರಾಜವಂಶಕ್ಕೆ ಯಾವ ವಿಧವಾದ ಉಚ್ಚ-ನೀಚಾವಸ್ಥೆಗಳನ್ನು ಹೇಳಿದೆನೋ, ಅದೇ ಬಗೆಯಲ್ಲಿ ಬ್ರಹ್ಮ-ಕ್ಷತ್ರಿಯ-ವೈಶ್ಯ-ಶೂದ್ರವರ್ಣದವರಿಗೂ ಆಯಾ ಯುಗಭೇದಕ್ಕೆ ತಕ್ಕಂತೆ ಉಚ್ಚ-ನೀಚಾವಸ್ಥೆಗಳುಂಟು—ಎಂದು ತಿಳಿಯ ಬೇಕು. ಪರೀಕ್ಷಿತ! ನಾನು ನಿನಗೆ ಯಾವ ಮಹಾಪುರುಷರ ವರ್ಣನೆಯನ್ನು ಇಲ್ಲಿಯವರೆಗೂ ಮಾಡಿದೆನೋ ಆ ಮಹಾತ್ಮರ ಹೆಸರು ಮಾತ್ರವೇ ಈಗ ಉಳಿದಿದೆ. ಅವರ ಕಥೆ ಮತ್ತು ಕೀರ್ತಿಗಳನ್ನು ಮಾತ್ರವೇ ಭೂಮಿಯಲ್ಲಿ ಈಗ ಕೇಳಬಹುದಾಗಿದೆ.

ಭೀಷ್ಮಪಿತಾಮಹನ ತಂದೆಯಾದ ಶಂತನುಮಹಾರಾಜನ ಸೋದರನಾದ ದೇವಾಪಿಯೂ ಮತ್ತು ಇಕ್ಷ್ವಾಕುವಂಶದ ರಾಜರ್ಷಿಯಾದ ಮರುವೂ ಈಗ ಕಲಾಪಗ್ರಾಮದಲ್ಲಿ ಬೆಳಗುತ್ತಿದ್ದಾರೆ. ಇವರು ಅತ್ಯದ್ಭುತವಾದ ಯೋಗಬಲದಿಂದ ಸಂಪನ್ನರಾದವರು. ಕಲಿಯುಗವು ಕೊನೆಗಾಣುವ ಸಮಯದಲ್ಲಿ ಭಗವಂತನಾದ ಕಲ್ಕಿಯ ಆಜ್ಞೆಯಂತೆ ಇವರು ಇಲ್ಲಿಗೆ ಮತ್ತೆ ದಯಮಾಡಿಸಿ ಹಿಂದಿನಂತೆಯೇ ವರ್ಣಾಶ್ರಮಧರ್ಮಗಳನ್ನು ಬೆಳೆಸುವರು. ಕೃತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗ ಎಂಬಿವೇ ನಾಲ್ಕು ಯುಗಗಳು. ಹಿಂದೆ ಹೇಳಿದ ಕ್ರಮದಲ್ಲಿ ಈ ನಾಲ್ಕೂ ತಮ್ಮ-ತಮ್ಮ ಕಾಲದಲ್ಲಿ ಭೂಮಿಯ ಜೀವಗಳ ಮೇಲೆ ತಮ್ಮ ಪ್ರಭಾವವನ್ನು ತೋರಿಸುತ್ತವೆ.

ನಾನು ನಿನಗೆ ಹಿಂದೆ ವರ್ಣಿಸಿದ ರಾಜರಲ್ಲಿ ಮತ್ತು ಇತರೇ ರಾಜರಲ್ಲಿ ಅನೇಕರು ಈ ಭೂಮಿಯನ್ನು 'ಇದು ನನ್ನದು, ನನಗೆ ಸೇರಿದ್ದು' –ಎಂದು ಹೇಳುತ್ತಿದ್ದು ಕೊನೆಗೆ ಇದನ್ನು ತೊರೆದು ಮಣ್ಣುಪಾಲಾದರು. ಭೂಮಿಯು ಅವರಾರನ್ನೂ ಹಿಂಬಾಲಿಸಲಿಲ್ಲ. ಯಾರೇ ಆದರೇನು? ಸತ್ತ ಮೇಲೆ ಎಲ್ಲರ ದೇಹವೂ ಕ್ರಿಮಿಗಳಾಗಿಯೋ, ಅಮೇಧ್ಯವಾಗಿಯೋ, ಭಸ್ಮರೂಪ ವಾಗಿಯೋ ಮಾರ್ಪಟ್ಟು ಆ ಕ್ರಿಮಿ ಮುಂತಾದ ಹೆಸರುಗಳಿಂದಲೇ ಕರೆಯ

ಲ್ಪಡುವುದು. ಇಂತಹ ದೇಹದ ಸಲುವಾಗಿ ಬಹುಮಂದಿ ಭೂತದ್ರೋಹವನ್ನು ಮಾಡಿ ಅಶುಚಿಯಾದ ನರಕದಲ್ಲಿ ಬೀಳುವರೇ ಹೊರತು ಆತ್ಮಹಿತದ ದಾರಿಯನ್ನು ಅರಿಯಲಾರರು. ಈ ರಾಜರು ಆಗಾಗ್ಗೆ "ಈ ಅಖಂಡವಾದ ಭೂಮಂಡಲವನ್ನು ಹಿಂದೆ ನಮ್ಮ ಪೂರ್ವಿಕರು ಅನುಭವಿಸುತ್ತಿದ್ದರು. ಈಗ ನಾವು ಅನುಭವಿಸಿದ್ದೇವೆ. ಮುಂದೆ ನಮ್ಮ ಮಕ್ಕಳೂ, ಮೊಮ್ಮಕ್ಕಳೂ, ಮರಿಮಕ್ಕಳೂ ಇದನ್ನು ಹೀಗೆಯೇ ಅನುಭವಿಸುವರು." ಎಂದು ಬಗೆ-ಬಗೆಯಾಗಿ ಮನಸ್ಸಿನ ಮಂಡಿಗೆಗಳನ್ನು ತಿನ್ನುತ್ತಿರುವರು. ಎಂತಹ ಮೂಢರು ಇವರು? ಈ ದೇಹವು ಮಣ್ಣು, ನೀರು ಮತ್ತು ತೇಜಸ್ಸುಗಳೆಂಬ ಮೂರು ದ್ರವ್ಯಗಳಿಂದ ರಚಿತವಾಗಿ ಆತ್ಮದಿಂದ ಬೇರೆಯಾದ ಪದಾರ್ಥವು. ಈ ಮೂರ್ಖರು ಇದನ್ನು ತಮ್ಮ ಆತ್ಮವೆಂದೂ ಈ ಭೂಮಿಯನ್ನೂ ತಮ್ಮ ಸ್ವತ್ತೆಂದೂ ಭ್ರಮಿಸಿ ಜಂಬ ಕೊಚ್ಚುತ್ತಿದ್ದು ಕೊನೆಗೆ ಇವೆರಡನ್ನೂ ತೊರೆದು ತಾವೂ ಅದೃಶ್ಯರಾಗಿಬಿಡುವರು.

ಯೇ ಯೇ ಭೂಪತಯೋ ರಾಜನ್ ಭುಞ್ಜನ್ತಿ ಭುವಮೋಜಸಾ ।
ಕಾಲೇನ ತೇ ಕೃತಾಃ ಸರ್ವೇ ಕಥಾಮಾತ್ರಾಃ ಕಥಾಸು ಚ ॥೪೪॥

ತಮ್ಮ ಪೌರುಷ–ಬಲಪರಾಕ್ರಮಗಳಿಂದ ಈ ವಿಸ್ತಾರವಾದ ಭೂಮಿ ಯನ್ನು ತಮ್ಮ ಜೀವಿತಕಾಲದಲ್ಲಿ ಅನುಭವಿಸಿದರೂ ಕೊನೆಗೆ ಅವರೆಲ್ಲರೂ ಕಾಲಬಲದಿಂದ ನಿಗ್ರಹಿಸಲ್ಪಟ್ಟರು. ಕಾಲವನ್ನು ಜಯಿಸುವುದಕ್ಕೆ ಅವರು ಯಾರೂ ಸಮರ್ಥರಾಗಲಿಲ್ಲ. ಕಾಲದ ಕೋರೆದಾಡೆಗೆ ಸಿಕ್ಕಿ ಕಬಳಿಸಲ್ಪಟ್ಟ ಅವರ ಕಥೆಯು ಮಾತ್ರ ಈಗ ಕಿವಿಗೆ ಬೀಳುತ್ತಿದೆಯೇ ಹೊರತು ಅವರು ಯಾರೂ ಕಾಣಿಸುತ್ತಿಲ್ಲ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದ್ವಾದಶಸ್ಕಂಧದ ೨ನೆಯ ಅಧ್ಯಾಯವು ಮುಗಿಯಿತು.

——

ಕಲಿಯುಗಧರ್ಮ ಮತ್ತು ಕಲಿಯುಗದೋಷಗಳಿಂದ ರಕ್ಷಿಸಿಕೊಳ್ಳುವ ಉಪಾಯ

ಶ್ರೀಶುಕಮುನಿಗಳು ಹೇಳುತ್ತಾರೆ :

ದೃಷ್ಟ್ವಾಽತ್ಮನಿ ಜಯೇ ವ್ಯಗ್ರಾನ್ನೃಪಾನ್ ಹಸತಿ ಭೂರಿಯಮ್ ।
ಅಹೋ ಮಾ ವಿಜಿಗೀಷನ್ತಿ ಮೃತ್ಯೋಃ ಕ್ರೀಡನಕಾ ನೃಪಾಃ ॥೧॥

"ತನ್ನನ್ನು ಜಯಿಸುವುದಕ್ಕೋಸ್ಕರ ಹಾತೊರೆಯುತ್ತಾ ಅದರಲ್ಲಿ ತತ್ಪರರಾಗಿರುವ ರಾಜರುಗಳನ್ನು ಕಂಡು ಈ ಭೂದೇವತೆಯು ನಗೆಯಾಡುತ್ತಾಳೆ–ಎಂತಹ ಮೂರ್ಖರು ಇವರು? ತಾವೇ ಮೃತ್ಯುವಿನ ಆಟದ ಬೊಂಬೆಗಳಾಗಿರುವ ಈ ಮಂದಿ ನನ್ನನ್ನು ಜಯಿಸಬೇಕೆಂದು ಹವಣಿಸುತ್ತಿದ್ದಾರಲ್ಲಾ!" –ಎಂದು ನಗುತ್ತಾಳೆ.

"ತಾವು ಒಂದಲ್ಲ ಒಂದು ದಿನ ಸಾವನ್ನು ಅಪ್ಪಲೇಬೇಕು–ಎಂದು ತಿಳಿದಿದ್ದರೂ ಇವರು ವ್ಯರ್ಥವಾಗಿ ನನ್ನನ್ನು ಜಯಿಸಬೇಕೆಂದು ಬಯಸುತ್ತಾರೆ. ನೀರಿನಲ್ಲಿರುವ ಗುಳ್ಳೆಗಳಂತೆ ಕ್ಷಣಭಂಗುರವಾಗಿರುವ ಈ ದೇಹದ ಮೇಲೆ ನಂಬಿಕೆಯಿಟ್ಟು ಮೋಸಹೋಗುತ್ತಾರೆ. 'ಮೊದಲು ಮನಸ್ಸನ್ನೂ ಇಂದ್ರಿಯಗಳನ್ನೂ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಆರು ಮಂದಿ ಒಳಗಿನ ಶತ್ರುಗಳನ್ನೂ ಜಯಿಸಿ ನಮ್ಮ ಮಂತ್ರಿಗಳನ್ನು ಹತೋಟಿಗೆ ತಂದುಕೊಳ್ಳುತ್ತೇವೆ. ಅನಂತರ ಹೊರಗಿನ ಶತ್ರುಗಳಾದ ಭೂಪತಿಗಳ ಸಚಿವರನ್ನೂ ಪೌರರನ್ನೂ, ಸೇನಾನಾಯಕರನ್ನೂ ಮತ್ತು ಸಮಸ್ತಸೇನೆಯನ್ನೂ ವಶಪಡಿಸಿಕೊಂಡುಬಿಡುತ್ತೇವೆ. ನಮ್ಮ ಈ ವಿಜಯಮಾರ್ಗಕ್ಕೆ ಯಾರೇ ಅಡ್ಡ ಬಂದರೂ ಅವರನ್ನೂ ಸೋಲಿಸುತ್ತಾ ಈ ಕ್ರಮದಲ್ಲಿ ಸ್ವಲ್ಪ-ಸ್ವಲ್ಪವಾಗಿ ಸಾಗರದಿಂದ ಸುತ್ತುವರಿಯಲ್ಪಟ್ಟ ಇಡೀ ಭೂಮಂಡಲವನ್ನು ಅಧೀನಕ್ಕೆ ತಂದುಕೊಳ್ಳುತ್ತೇವೆ'–ಎಂದು ಮನಸ್ಸಿನ ಮಂಡಿಗೆಯನ್ನು ಮೆಲ್ಲುತ್ತಿರುವ ಅವರು ತಮ್ಮ ಬಳಿಯಲ್ಲೇ ತಮ್ಮ ಕೇಶವನ್ನು ಹಿಡಿದು ನಿಂತಿರುವ ಮೃತ್ಯುವನ್ನು ಗಮನಿಸುವುದೇ

ಇಲ್ಲ. ಇಷ್ಟೇ ಅಲ್ಲ. ಒಂದು ದ್ವೀಪವು ವಶವಾದ ಬಳಿಕ ಮತ್ತೊಂದು ದ್ವೀಪವನ್ನು ಪರಾಕ್ರಮದಿಂದ ಸ್ವಾಧೀನಪಡಿಸಿಕೊಳ್ಳುವುದಕ್ಕೋಸ್ಕರ ಸಮುದ್ರವನ್ನು ಪ್ರವೇಶಿಸುತ್ತಾರೆ. ಇವರು ಮಾಡಿಕೊಂಡ ಮನೋಜಯಕ್ಕೆ ಎಷ್ಟು ಅಲ್ಪವಾದ ಫಲ ಇದು! 'ಮುಕ್ತಿರಾತ್ಮಜಯೇ ಫಲಂ' ಮನೋಜಯಕ್ಕೆ ಮೋಕ್ಷಪ್ರಾಪ್ತಿಯು ತಾನೇ ತಕ್ಕ ಫಲ? ಅದನ್ನು ಬಿಟ್ಟು ಈ ಮೂರ್ಖರು ಅಲ್ಪವಾದ ಭೂಭಾಗಕ್ಕಾಗಿ ತಮ್ಮ ಆತ್ಮಸಂಯಮವನ್ನು ಬಳಸಿಕೊಳ್ಳುತ್ತಾರಲ್ಲಾ!"

ಎಲೈ ಕುರುಕುಲತಿಲಕನೇ! ಇದನ್ನು ಗಮನಿಸುತ್ತಿರುವ ಭೂದೇವಿಯು "ದೊಡ್ಡ-ದೊಡ್ಡ ಮನುಗಳೂ ಮತ್ತು ಅವರ ವೀರಪುತ್ರರೂ ನನ್ನನ್ನು ತೊರೆದು ಎಲ್ಲಿಂದ ಬಂದರೋ ಅಲ್ಲಿಗೇ ಬರಿಗೈಯಲ್ಲಿ ಹಿಂದಿರುಗಿ ದರು. ಯಾರೂ ನನ್ನನ್ನು ಜೊತೆಯಲ್ಲಿ ಕೊಂಡೊಯ್ಯಲಿಲ್ಲ. ಆದರೆ ಈ ಮೂರ್ಖರಾದ ರಾಜರು ಅಂತಹ ನನ್ನನ್ನು ಯುದ್ಧಮಾಡಿ ವಶಪಡಿಸಿ ಕೊಳ್ಳಲು ಬಯಸುತ್ತಾರಲ್ಲಾ! ನನ್ನ ವಿಷಯದಲ್ಲಿ ಮಮತಾಬಂಧನವುಳ್ಳ ದುಷ್ಟರಾದ ರಾಜರ ರಾಜ್ಯದಲ್ಲಿ ನನಗೋಸ್ಕರ ತಂದೆ-ಮಕ್ಕಳು, ಅಣ್ಣ- ತಮ್ಮಂದಿರು, ಸೋದರರು ಪರಸ್ಪರ ಕಡಿದಾಡುತ್ತಾರೆ. 'ಎಲವೋ ಮೂಢ! ಈ ಇಡೀ ಭೂಮಿಯು ನನಗೆ ಸೇರಿದ್ದು. ನಿನಗೆ ಸೇರಿದ್ದಲ್ಲ'–ಎಂದು ಒಬ್ಬರಿಗೊಬ್ಬರು ಸವಾಲು ಹಾಕುತ್ತಾ ಪರಸ್ಪರ ಕಡಿದಾಡುತ್ತಾ ಮಡಿಯು ತ್ತಾರೆ. ಪೃಥು, ಪುರೂರವಸ್ಸು, ಗಾಧಿ, ನಹುಷ, ಭರತ, ಸಹಸ್ರಬಾಹು ಕಾರ್ತವೀರ್ಯಾರ್ಜುನ, ಮಾಂಧಾತ, ಸಗರ, ರಾಮ, ಖಟ್ವಾಂಗ, ಧುಂಧುಮಾರ, ರಘು, ತೃಣಬಿಂದು, ಯಯಾತಿ, ಶರ್ಯಾತಿ, ಶಂತನು, ಗಯ, ಭಗೀರಥ, ಕುವಲಯಾಶ್ವ, ಕಕುತ್ಸ್ಥ, ನಲ, ನೃಗ, ಹಿರಣ್ಯಕಶಿಪು, ವೃತ್ರಾಸುರ, ಲೋಕವನ್ನು ತಲ್ಲಣಗೊಳಿಸಿದ ರಾವಣ, ನಮುಚಿ, ಶಂಬರ, ಭೌಮಾಸುರ, ಹಿರಣ್ಯಾಕ್ಷ, ತಾರಕಾಸುರ–ಮುಂತಾದ ಮಹಾನರಪತಿಗಳೂ, ದೈತ್ಯಪತಿಗಳೂ, ರಾಕ್ಷಸಾಧಿಪತಿಗಳೂ ಆಗಿಹೋದರಲ್ಲವೆ? ಇವರೆಲ್ಲರೂ ಸರ್ವಜ್ಞರು. ಶೂರವೀರರು. ಯುದ್ಧದಲ್ಲಿ ತಾವು ಯಾರಿಗೂ ಸೋಲದೆ (ದಿಗ್ವಿಜಯದಲ್ಲಿ) ಎಲ್ಲರನ್ನೂ ಸೋಲಿಸಿದವರು. ಈ ಭೂಮಿಯು ನನ್ನದು ಎಂದು ನನ್ನಲ್ಲಿ ಮಹಾಮಮತೆಯನ್ನು ಇಟ್ಟುಕೊಂಡಿದ್ದವರು. ಆದರೆ

ನನ್ನನ್ನು ಎಂದೆಂದಿಗೂ ಆಳುವ ವಿಷಯದಲ್ಲಿ ಕೃತಾರ್ಥರಾಗದೆ ಇವರೆಲ್ಲರೂ ಕಾಲದಿಂದ ಕಬಳಿಸಲ್ಪಟ್ಟರು. ಕೇವಲ ಕೀರ್ತಿಶೇಷರಾಗಿ ಉಳಿದರು."*

(ಶ್ಲೋಕ ೨-೧೩)

ಸಾರ್ವಭೌಮ! ಲೋಕಗಳಲ್ಲಿ ತಮ್ಮ ಕೀರ್ತಿಯನ್ನು ಮಾತ್ರ ಹರಡಿ ಉಳಿದ ಎಲ್ಲ ಭೋಗಗಳನ್ನೂ ತ್ಯಜಿಸಿ ಸ್ವರ್ಗಸ್ಥರಾಗಿಬಿಟ್ಟ ಈ ಮಹಾಪುರುಷರ ಕಥೆಗಳನ್ನು ಹೇಳಿದೆನಲ್ಲವೆ! ನಿನಗೆ ಜ್ಞಾನವನ್ನೂ ಮತ್ತು ವೈರಾಗ್ಯವನ್ನೂ ಉಪದೇಶಮಾಡುವುದಕ್ಕಾಗಿಯೇ ಇವುಗಳನ್ನು ನಾನು ಹೇಳಿರುವುದು. ವಚೋವಿಭೂತೀರ್ನ ತು ಪಾರಮಾರ್ಥ್ಯಂ' ಇವು ಮಾತಿನ ವಿಲಾಸಗಳೇ ಹೊರತು ಪರಮಾರ್ಥವಲ್ಲ.

ಯಸ್ತೂತ್ತಮಶ್ಲೋಕಗುಣಾನುವಾದಃ
ಸಙ್ಗೀಯತೇಽಭೀಕ್ಷ್ಣಮಮಙ್ಗಲಘ್ನಃ ।
ತಮೇವ ನಿತ್ಯಂ ಶೃಣುಯಾದಭೀಕ್ಷ್ಣಂ
ಕೃಷ್ಣೇಽಮಲಾಂ ಭಕ್ತಿಮಭೀಪ್ಸಮಾನಃ ॥೧೪॥

---

*ಈ ರಾಜರ ಪಟ್ಟಿಯಲ್ಲಿ ಕೆಲವು ಮಂದಿ ಯೋಗಿಗಳೂ, ಜ್ಞಾನಿಗಳೂ ಇದ್ದಾರೆ. ಯಾವುದರಲ್ಲಿಯೂ ಮಮತಾ ಮೋಹವಿಲ್ಲದ ಸ್ಥಿತಪ್ರಜ್ಞರೂ ಇದ್ದಾರೆ. ಅವರಿಗೆ ಭೂಮಿಯ ಮೋಹವು ಎಳ್ಳಷ್ಟೂ ಇರಲಿಲ್ಲ. ಆದರೂ ಅವರು ಮಹಾಪರಾಕ್ರಮಿಗಳಾಗಿದ್ದುದರಿಂದ ಮಾಯಾಮಮತೆಗಳುಳ್ಳ ಮಹಾಪರಾಕ್ರಮಿಗಳಾದ ರಾಜರ ಗುಂಪಿನಲ್ಲಿ ದಂಡಿನ್ಯಾಯದಿಂದ ಅವರ ಹೆಸರನ್ನೂ ಸೇರಿಸಿದೆ. ದಂಡಗಳನ್ನು ಹಿಡಿದುಕೊಂಡಿರುವವರ ಗುಂಪಿನಲ್ಲಿ ದಂಡಹಿಡಿಯದೇ ಇರುವವರು ಕೆಲವರು ಇದ್ದರೂ ಅವರನ್ನೂ (ದಂಡಿಗಳ ಗುಂಪಿನಲ್ಲಿರುವುದರಿಂದ) 'ದಂಡಿನಃ' ಎಂದು ಕರೆಯುವುದು ದಂಡಿನ್ಯಾಯ.

ಇವು ಮಾತಿನ ವಿಲಾಸಗಳೇ ಹೊರತು, ಪರಮಾರ್ಥವಲ್ಲ. ಈ ವಾಕ್ಯಕ್ಕೆ ಎರಡು ಬಗೆಯಲ್ಲಿ ಅರ್ಥ ಹೇಳಬಹುದು.

೧) ಇವೆಲ್ಲಾ ಮಾತಿನ ವಿಲಾಸಗಳು. ನಿಜವಾದ ಕಥೆಗಳಲ್ಲ. ನಿನಗೆ ಜ್ಞಾನ ಮತ್ತು ವೈರಾಗ್ಯಗಳನ್ನು ಉಪದೇಶಿಸುವುದಕ್ಕಾಗಿ ಹೆಣೆದು ಹೇಳಲ್ಪಟ್ಟಿರುವ ಕಥೆಗಳು. ಪರಮಾರ್ಥವೇನು? ಎನ್ನುವುದು ಮುಂದಿನ ಶ್ಲೋಕದಲ್ಲಿ ಉಪದೇಶಿಸಲ್ಪಡುವುದು.

ಪರಮಾರ್ಥತ್ವಂ ಕಥಾನಾಂ ನ ಭವತೀತ್ಯರ್ಥಃ ।
ಕಸ್ತರ್ಹಿ ಪುರುಷಾಣಾಮುಪಾದೇಯಃ ಪರಮಾರ್ಥಸ್ತಮಾಹ॥ (ಶ್ರೀಧರೀಯ)

ಶ್ರೇಷ್ಠಕೀರ್ತಿಯುಳ್ಳ ಶ್ರೀಕೃಷ್ಣಪರಮಾತ್ಮನ ಕಲ್ಯಾಣಗುಣಗಳ ಸಂಕೀರ್ತನೆಯೇ ಸಮಸ್ತ ಅಮಂಗಲಗಳನ್ನೂ ನಾಶಪಡಿಸುವುದು ಎಂದು ಮಹಾತ್ಮರು ಹೇಳುತ್ತಾರೆ. ಆದುದರಿಂದ ಆ ಶ್ರೀಭಗವಂತನಲ್ಲಿ ಅನನ್ಯವಾದ ವಿಶುದ್ಧಭಕ್ತಿಯನ್ನು ಬಯಸುವವನು ಅವನ ಕಲ್ಯಾಣಗುಣಗಳ ಈ ಕಥೆಯನ್ನೇ ನಿರಂತರವಾಗಿ ಕೇಳುತ್ತಿರಬೇಕು. ಶ್ರೀಕೃಷ್ಣನಲ್ಲಿ ಅನನ್ಯಭಕ್ತಿಯೇ ಪರಮಪುರುಷಾರ್ಥ. ಆತನ ಕಥೆಗಳ ಶ್ರವಣ-ಸಂಕೀರ್ತನೆಗಳೇ ಅದನ್ನು ಪಡೆಯಲು ಉಪಾಯವು." (ಶ್ಲೋಕ ೧೪-೧೫)

ಮಹರ್ಷಿಯ ಈ ಉಪದೇಶವನ್ನು ಕೇಳಿದ ಪರೀಕ್ಷಿದ್ರಾಜನು ಅವರನ್ನು ಮತ್ತೆ ಪ್ರಶ್ನಿಸಿದನು :

ಕೇನೋಪಾಯೇನ ಭಗವನ್ಕಲೇರ್ದೋಷಾನ್ಕಲೌ ಜನಾಃ ।
ವಿಧಮಿಷ್ಯನ್ತ್ಯುಪಚಿತಾಂಸ್ತನ್ಮೇ ಬ್ರೂಹಿ ಯಥಾ ಮುನೇ ॥೧೬॥

ಯುಗಾನಿ ಯುಗಧರ್ಮಾಂಶ್ಚ ಮಾನಂ ಪ್ರಲಯಕಲ್ಪಯೋಃ ।
ಕಾಲಸ್ಯೇಶ್ವರರೂಪಸ್ಯ ಗತಿಂ ವಿಷ್ಣೋರ್ಮಹಾತ್ಮನಃ ॥೧೭॥

"ಮಹಾತ್ಮರೇ! ಈ ಕಲಿಯುಗದಲ್ಲಿ ಜನರು ತಾವು ಕೂಡಿಹಾಕಿ ಕೊಂಡಿರುವ ರಾಶಿ-ರಾಶಿಯಾದ ಕಲಿದೋಷಗಳನ್ನು ನಾಶಪಡಿಸಿಕೊಳ್ಳಲು ಉಪಾಯವೇನು?–ಎಂಬುದನ್ನು ತಿಳಿಸಿರಿ. ಹಾಗೆಯೇ ಯುಗಗಳ ಸ್ವರೂಪ, ಯುಗಧರ್ಮಗಳು, ಅವಾಂತರ ಮತ್ತು ಮಹಾಪ್ರಳಯಗಳ ಕಾಲಮಾನಗಳು ಮತ್ತು ಪರಮೇಶ್ವರನಾಗಿ ಮಹಾತ್ಮನಾಗಿರುವ ಮಹಾ ವಿಷ್ಣುವಿನ ಕಾಲವೆಂಬ ಸರ್ವಶಕ್ತಿಶಾಲಿಯಾದ ರೂಪ–ಇವುಗಳನ್ನೂ ನಿರೂಪಣೆಮಾಡಿರಿ. ಮುನಿವರ್ಯರೇ!" (ಶ್ಲೋಕ ೧೬-೧೭)

---

೨) ಈ ರಾಜರ ಆಸೆ-ಆಕಾಂಕ್ಷೆಗಳು, ಅವರು ಅನುಭವಿಸಿದ ಭೋಗಗಳು–ಇವೆಲ್ಲಾ ಕೇವಲ ಮಾತಿನ ವಿಲಾಸಗಳು. ಇವುಗಳಲ್ಲಿ ಪರಮಾರ್ಥತೆಯಿಲ್ಲ. ಇವುಗಳಲ್ಲಿ "ನ ಹ್ಯೇಭಿರ್ಭುಕ್ತೇಷು ಭೋಗೇಷು ಪಾರಮಾರ್ಥ್ಯಮಸ್ತಿ" ಪರಮಪುರುಷಾರ್ಥವಲ್ಲದ ಇದನ್ನು ಹೇಳಿದ್ದು ಏಕೆ? ಎಂದರೆ ನಿನಗೆ ಜ್ಞಾನ-ವೈರಾಗ್ಯಗಳನ್ನು ಉಪದೇಶಿಸುವುದಕ್ಕಾಗಿ. ಉಪಾದೇಯವಾದ ಪರಮಪುರುಷಾರ್ಥ ಮತ್ತು ಅದನ್ನು ಹೊಂದುವ ಉಪಾಯವನ್ನು ಮುಂದಿನ ಶ್ಲೋಕದಲ್ಲಿ ಹೇಳಲಾಗುವುದು. (ವೀರರಾಘವೀಯ)

ಶುಕಮುನಿಗಳು ಅವನಿಗೆ ಉತ್ತರನೀಡುತ್ತಾ ಹೀಗೆಂದರು :

ಕೃತೇ ಪ್ರವರ್ತತೇ ಧರ್ಮಶ್ಚತುಷ್ಪಾತ್ತಜ್ಜನೈರ್ಧೃತಃ ।
ಸತ್ಯಂ ದಯಾ ತಪೋ ದಾನಮಿತಿ ಪಾದಾ ವಿಭೋರ್ನೃಪ ॥೧೮॥

“ವಿಷ್ಣುರಾತಮಹಾರಾಜ! ಕೇಳು. ಕೃತಯುಗದಲ್ಲಿ ಧರ್ಮಕ್ಕೆ ನಾಲ್ಕು ಪಾದಗಳಿರುತ್ತವೆ. ಸತ್ಯ, ದಯೆ, ತಪಸ್ಸು ಮತ್ತು ದಾನ–ಎಂಬಿವೇ ಆ ನಾಲ್ಕು ಚರಣಗಳು. ನಾಲ್ಕು ಪಾದಗಳಿಂದಲೂ ಕೂಡಿ ಕಳಕಳಿಸುತ್ತಿರುವ ಇಂತಹ ಧರ್ಮವನ್ನು ಜನರು ಆಗ ಹೊತ್ತಿರುತ್ತಾರೆ.

ಈ ಸತ್ಯಯುಗದಲ್ಲಿ ಎಲ್ಲ ಜನರೂ ಸಾಮಾನ್ಯವಾಗಿ ಸಂತುಷ್ಟರೂ, ದಯಾಳುಗಳೂ, ಸ್ನೇಹಪರರೂ, ಪ್ರಶಾಂತರೂ, ಶಮ-ದಮಸಂಪನ್ನರೂ, ಸಹನಶೀಲರೂ, ಆತ್ಮಾರಾಮರೂ, ಎಲ್ಲದರಲ್ಲೂ ಸಮದೃಷ್ಟಿಯುಳ್ಳವರೂ, ವಿರಕ್ತತಪಸ್ವಿಗಳೂ ಆಗಿರುತ್ತಾರೆ. ಅನಂತರ ಬರುವ ತ್ರೇತಾಯುಗದಲ್ಲಿ ಧರ್ಮದ ಆ ನಾಲ್ಕು ಚರಣಗಳಲ್ಲಿ ನಾಲ್ಕನೇ ಒಂದು ಭಾಗವು ಕ್ಷೀಣಿಸಿ ಹೋಗುತ್ತದೆ. ಅಧರ್ಮದ ನಾಲ್ಕು ಪಾದಗಳಾದ ಅಸತ್ಯ, ಹಿಂಸೆ, ಅಸಂತೋಷ ಮತ್ತು ಕಲಹ ಎಂಬ ನಾಲ್ಕು ಪಾದಗಳ ಪ್ರಭಾವದಿಂದ ಆ ಧರ್ಮದ ಪಾದಗಳ ಚತುರ್ಥಾಂಶವು ಕ್ಷಯಹೊಂದುತ್ತದೆ. ಆ ಸಮಯ ದಲ್ಲಿ ವರ್ಣಗಳಲ್ಲಿ ಬ್ರಾಹ್ಮಣರಿಗೆ ಪ್ರಾಧಾನ್ಯವಿರುತ್ತದೆ. ಜನರು ಹಿಂಸಕರೂ ಆಗಿರುವುದಿಲ್ಲ. ಲಂಪಟರೂ ಆಗಿರುವುದಿಲ್ಲ. ಎಲ್ಲ ಜನರೂ ಕರ್ಮಕಾಂಡದಲ್ಲೂ ತಪಸ್ಸಿನಲ್ಲೂ ನಿಷ್ಠರಾಗಿರುತ್ತಾರೆ. ಅರ್ಥ, ಧರ್ಮ ಮತ್ತು ಕಾಮಗಳೆಂಬ ತ್ರಿವರ್ಗದಲ್ಲಿ ನಿರತರಾಗಿರುತ್ತಾರೆ. ಆ ತ್ರಿವರ್ಗವನ್ನು ಹೇಳುವ ವೇದದ ಕರ್ಮಕಾಂಡದಲ್ಲಿ ನಿಷ್ಣಾತರಾಗಿರುತ್ತಾರೆ. ಮುಂದಿನದು ದ್ವಾಪರಯುಗ. ಇದರಲ್ಲಿ ತಪಸ್ಸು, ಸತ್ಯ, ದಯೆ ಮತ್ತು ದಾನಗಳಲ್ಲಿ ಅರ್ಧಭಾಗವು ಕ್ಷೀಣಿಸಿಹೋಗುವುದು. ಹಿಂಸೆ, ಅಸಂತುಷ್ಟಿ, ಅಸತ್ಯ ಮತ್ತು ದ್ವೇಷ ಎಂಬ ಅಧರ್ಮದ ನಾಲ್ಕು ಪಾದಗಳು ವೃದ್ಧಿಹೊಂದಿ ಮೇಲೆ ಹೇಳಿದಂತೆ ಧರ್ಮದ ಅರ್ಧಭಾಗವನ್ನು ಮೊಟಕುಗೊಳಿಸಿಬಿಡುತ್ತವೆ. ಈ ಸಮಯದ ಜನರು ಸಾಮಾನ್ಯವಾಗಿ ಯಶಸ್ವಿಗಳೂ, ಕರ್ಮಕಾಂಡದಲ್ಲಿ ನಿಷ್ಠೆಯುಳ್ಳವರೂ, ವೇದದ ಅಧ್ಯಯನ ಅಧ್ಯಾಪನೆಗಳಲ್ಲಿ ತತ್ಪರರೂ

ಆಗಿರುತ್ತಾರೆ. ದೊಡ್ಡ ಕುಟುಂಬಿಗಳೂ, ಶ್ರೀಮಂತರೂ, ಸುಖಿಗಳೂ ಆಗಿರುತ್ತಾರೆ. ಕ್ಷತ್ರಿಯ ಮತ್ತು ಬ್ರಾಹ್ಮಣವರ್ಗಗಳಿಗೆ ಪ್ರಧಾನತೆ ಇರುತ್ತದೆ. ಕಡೆಯದಾದ ಕಲಿಯುಗದಲ್ಲಾದರೋ ಅಧರ್ಮದ ನಾಲ್ಕು ಚರಣಗಳೂ ವೃದ್ಧಿಹೊಂದಿ ಅವುಗಳ ಪ್ರಭಾವದಿಂದ ಧರ್ಮದ ಎಲ್ಲ ಚರಣಗಳೂ ಕ್ಷಯಹೊಂದಿ ನಾಲ್ಕನೆಯ ಒಂದು ಭಾಗವು ಮಾತ್ರ ಉಳಿದಿರುವುದು. ಕಟ್ಟಕಡೆಯ ವೇಳೆಗೆ ಆ ನಾಲ್ಕನೆಯ ಒಂದು ಭಾಗವೂ ನಾಶವಾಗಿಬಿಡುವುದು. ಈ ಯುಗದಲ್ಲಿ ಜನರು ಸಾಮಾನ್ಯವಾಗಿ ಲೋಭಿ ಗಳೂ, ದುರಾಚಾರಿಗಳೂ, ಕಠೋರಹೃದಯರೂ, ವಿನಾಕಾರಣ ವೈರಬೆಳೆಸಿ ಕೊಳ್ಳುವವರೂ ಆಗಿರುವರು. ಅಲ್ಪತೇಜಸ್ಸು–ಅಲ್ಪವೀರ್ಯವುಳ್ಳವರಾಗಿ ಮಿತಿಮೀರಿದ ಆಸೆ-ಆಕಾಂಕ್ಷೆಗಳಲ್ಲಿ ಮುಳುಗಿರುವರು. ದುರ್ಭಾಗ್ಯರಾದ ಆ ಜನರಲ್ಲಿ ಶೂದ್ರರೂ ಬೆಸ್ತರೂ ಪ್ರಧಾನತೆಯನ್ನು ಹೊಂದಿರುವರು.

(ಶ್ಲೋಕ ೧೮-೨೫)

ಮನುಷ್ಯರ ಪ್ರಕೃತಿಯು ಸತ್ತ್ವ, ರಜಸ್ಸು ಮತ್ತು ತಮಸ್ಸು ಎಂಬ ತ್ರಿಗುಣಗಳ ಮಿಶ್ರಣದಿಂದ ರಚಿತವಾಗಿದೆಯಪ್ಪಾ. ಈ ಗುಣಗಳು ಕಾಲದ ಪ್ರೇರಣೆಯಿಂದ ಯುಗಕ್ಕೆ ಅನುಗುಣವಾಗಿ ಮನುಷ್ಯರ ಮನಸ್ಸು, ಬುದ್ಧಿ ಮತ್ತು ಇಂದ್ರಿಯಗಳಲ್ಲಿ ಬೇರೆ-ಬೇರೆ ಪ್ರಮಾಣದಲ್ಲಿ ಮಿಶ್ರಿತವಾಗುತ್ತವೆ. ಈ ಕಾಲಾನುಗುಣವಾದ ಮಿಶ್ರಣದಲ್ಲಿ ಯಾವಾಗ ಮನಸ್ಸು, ಬುದ್ಧಿ ಮತ್ತು ಇಂದ್ರಿಯಗಳು ಸತ್ತ್ವಗುಣದಲ್ಲಿ ನೆಲೆಗೊಂಡು ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತವೆಯೋ ಆಗ ಸತ್ಯಯುಗ (ಕೃತಯುಗ) ವೆಂದು ತಿಳಿಯಬೇಕು. ಸತ್ತ್ವಗುಣಕ್ಕೆ ಪ್ರಾಧಾನ್ಯವಿರುವುದರಿಂದ ಆಗ ಮನುಷ್ಯನಿಗೆ ಜ್ಞಾನ ಮತ್ತು ತಪಸ್ಸುಗಳಲ್ಲಿ ಅಧಿಕವಾದ ಅಭಿರುಚಿ ಇರುವುದು. ಮನುಷ್ಯರ ರುಚಿ-ಪ್ರವೃತ್ತಿಗಳು ಧರ್ಮ, ಅರ್ಥ ಮತ್ತು (ಐಹಿಕ-ಪಾರಲೌಕಿಕ) ಕರ್ಮಗಳ ಕಡೆ ಹರಿಯುತ್ತಾ ರಜೋಗುಣದಲ್ಲಿ ಅವರ ಪ್ರಕೃತಿಯು ಕೆಲಸಮಾಡುತ್ತಿರುವಾಗ ತ್ರೇತಾಯುಗವು ಬಂದಿದೆ ಯೆಂದು ತಿಳಿಯಬೇಕು. ಅವರ ಪ್ರಕೃತಿಯಲ್ಲಿ ಯಾವಾಗ ಲೋಭ, ಅಸಂತೋಷ, ಅಭಿಮಾನ, ದಂಭ ಮತ್ತು ಮಾತ್ಸರ್ಯಗಳು ತಾಂಡವ ವಾಡುವ ಮತ್ತು ಕಾಮ್ಯಕರ್ಮಗಳಲ್ಲಿ ಪ್ರವೃತ್ತಿಯುಳ್ಳ ರಜಸ್ತಮೋಗುಣ

ಗಳೆರಡರ ಪ್ರಾಧಾನ್ಯವು ಕಂಡುಬರುತ್ತದೆಯೋ ಆಗ ದ್ವಾಪರಯುಗವೆಂದು ತಿಳಿಯಬೇಕು. ಇನ್ನು ಕೊನೆಯದಾಗಿ ಕಲಿಯುಗದ ವಿಷಯ. ಮನುಷ್ಯರ ಮನಸ್ಸು, ಬುದ್ಧಿ, ಇಂದ್ರಿಯಗಳಲ್ಲಿ ಸುಳ್ಳು, ಕಳ್ಳತನ, ಕಪಟ, ನಿದ್ರೆ, ಆಲಸ್ಯ, ಹಿಂಸೆ, ವಿಷಾದ, ಶೋಕ, ಮೋಹ, ಭಯ ಮತ್ತು ದೈನ್ಯಗುಣಗಳೇ ಯಾವಾಗ ಪ್ರಧಾನವಾಗಿರುತ್ತವೆಯೋ ಆಗ ತಮೋಗುಣಪ್ರಧಾನವಾದ ಕಲಿಯುಗವು ಬಂದಿದೆಯೆಂದು ತಿಳಿಯಬೇಕು.

ಕಲಿಯುಗದ ಜನರಲ್ಲಿ ಕ್ಷುದ್ರದೃಷ್ಟಿಯುಳ್ಳವರೇ ಬಹುಮಂದಿ. ಅವರಿಗೆ ಸಿರಿವಂತಿಕೆ ಕಡಿಮೆಯಾಗಿದ್ದರೂ ಹಸಿವು, ಹೊಟ್ಟೆಬಾಕತನ ಹೆಚ್ಚಾಗಿರುತ್ತದೆ. ಹಣ ಹೆಚ್ಚಿಲ್ಲದಿದ್ದರೂ ಕಾಮನೆಗಳು ತುಂಬಾ ಇರುತ್ತವೆ. ಪುರುಷರು ಕಡುಕಾಮುಕರು. ಸ್ತ್ರೀಯರೂ ದುಷ್ಟ ಸ್ವಭಾವ–ದುರಾಚಾರವುಳ್ಳವರೂ ವ್ಯಭಿಚಾರಿಣಿಯರೂ ಆಗಿರುವರು. ಇಡೀ ದೇಶದಲ್ಲಿ ಹಳ್ಳಿ-ನಗರಗಳಲ್ಲಿ ಎಲ್ಲೆಲ್ಲಿಯೂ ಕಳ್ಳ-ಕಾಕರ ದರೋಡೆಕಾರರದೇ ಪ್ರಾಬಲ್ಯ ಇರುವುದು. ಪಾಷಂಡಿಗಳ ಸಂಖ್ಯೆಯು ಹೆಚ್ಚಿ ಅವರು ವೇದ ಶಾಸ್ತ್ರಗಳಿಗೆ ಅಪಾರ್ಥಮಾಡುತ್ತಾ ಅವುಗಳಿಗೆ ಕಳಂಕತರುವರು. ರಾಜ ರೆಂದು ಕರೆಸಿಕೊಳ್ಳುವವರು ಪ್ರಜೆಗಳ ಸಂಪಾದನೆಯನ್ನು ಕಸಿದುಕೊಂಡು ಅವರ ಪ್ರಾಣವನ್ನು ಹೀರುವರು. ಬ್ರಾಹ್ಮಣರೆನಿಸಿಕೊಂಡವರು ಹೊಟ್ಟೆ ತುಂಬಿಕೊಳ್ಳುವುದು ; ಜನನೇಂದ್ರಿಯವನ್ನು ತೃಪ್ತಿಪಡಿಸಿಕೊಳ್ಳುವುದು– ಇಷ್ಟರಲ್ಲೇ ಆಸಕ್ತಿತೋರುವರು. ವರ್ಣಗಳ ಗತಿಯಂತೆಯೇ ಆಶ್ರಮಗಳ ಗತಿಯೂ ಕುಲಗೆಟ್ಟುಹೋಗುವುದು. ಬ್ರಹ್ಮಚಾರಿ ಎಂದು ಕರೆಸಿಕೊಳ್ಳು ವವರು, ವ್ರತಹೀನರೂ ಆಚಾರಹೀನರೂ, ಅಶುಚಿಗಳೂ ಆಗಿರುವರು. ಗೃಹ ಸ್ಥರು ಇತರರಿಗೆ ಭಿಕ್ಷೆನೀಡುವುದರ ಬದಲು ತಾವೇ ಭಿಕ್ಷೆಬೇಡುತ್ತಾರೆ. ವಾನ ಪ್ರಸ್ಥರು ವನದಲ್ಲಿ ವಾಸಮಾಡುವುದರ ಬದಲು ನಗರ-ಗ್ರಾಮಗಳಲ್ಲಿ ನಿವಾಸಮಾಡುತ್ತಾರೆ. ಸಂನ್ಯಾಸಿಗಳು ಧನಸಂಗ್ರಹದಲ್ಲಿಯೇ ನಿರತರಾಗು ತ್ತಾರೆ. ಹೆಂಗಸರಿಗೆ ಆಕಾರವು ಅಲ್ಪವಾಗಿದ್ದರೂ ಹಸಿವು ಅಧಿಕವಾಗಿರುತ್ತದೆ. ಅವರು ಹೆಚ್ಚು ಮಂದಿ ಮಕ್ಕಳನ್ನು ಗಳಿಸಿದರೂ ಕುಲ-ಶೀಲ- ಮರ್ಯಾದೆ-ನಾಚಿಕೆಗಳನ್ನು ಕಳೆದುಕೊಳ್ಳುತ್ತಾರೆ. ಕಹಿ-ಖಾರದ ಮಾತುಗಳನ್ನೇ ಆಡುತ್ತಾರೆ. ಕಳ್ಳತನ–ಕಪಟಗಳಲ್ಲಿ ತೊಡಗುತ್ತಾರೆ. ಮಹಾಸಾಹಸಿಕರಾಗಿರು

ತ್ತಾರೆ. ವ್ಯಾಪಾರಿಗಳು ಕಡುಕಂಜೂಸಿಗಳು ; ಜಿಪುಣರಲ್ಲಿ ಅಗ್ರೇಸರರು. ಕಾಸು-ಕವಡೆಯನ್ನೂ ಬಿಡದೆ ಪಡೆದುಕೊಳ್ಳುವವರೂ, ಕಪಟಿಗಳೂ, ಕ್ಷುದ್ರರೂ ಆಗಿರುತ್ತಾರೆ. ಆಪತ್ಕಾಲವಿಲ್ಲದಿದ್ದರೂ ನಿಂದ್ಯವಾದ ವಸ್ತುಗಳ ವ್ಯಾಪಾರದಲ್ಲಿ ತೊಡಗುತ್ತಾರೆ. ಸೇವಕವರ್ಗದವರೂ ದಾರಿಬಿಟ್ಟು ಹೋಗುತ್ತಾರೆ. ತಮ್ಮ ದಣಿಯು ಸರ್ವಶ್ರೇಷ್ಠನಾಗಿದ್ದರೂ ಕೂಡ ಆತನಲ್ಲಿ ಸಂಪತ್ತು ಕಡಿಮೆಯಾಯಿತೆಂದರೆ ಆತನನ್ನು ಬಿಟ್ಟು ಓಡಿಹೋಗುತ್ತಾರೆ. ದಣಿಗಳು ತಮ್ಮ ಸೇವಕರನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಸೇವಕನು ಎಷ್ಟೇ ಸ್ವಾಮಿಭಕ್ತನಾಗಿರಲಿ, ಎಷ್ಟೇ ಹಳಬನಾಗಿರಲಿ, ಆತನು ಕಷ್ಟದಲ್ಲಿ ಸಿಕ್ಕಿದನೆಂದರೆ ಆತನನ್ನು ಓಡಿಸಿಬಿಡುತ್ತಾರೆ. ಆಕಳು ಹಾಲುಕೊಡುವ ಸ್ಥಿತಿಯನ್ನು ಕಳೆದುಕೊಂಡರೆ ಅದನ್ನು ತೊರೆದುಬಿಡುವುದಕ್ಕೂ ಅಳುಕುವುದಿಲ್ಲ.

ವತ್ಸ!ಪರೀಕ್ಷಿದ್ರಾಜ! ಕಲಿಯುಗದ ಮನುಷ್ಯರು ಅತ್ಯಂತ ವಿಷಯ ಲಂಪಟರಾಗಿರುತ್ತಾರೆ. ಅವರು ಮದುವೆಯಾಗುವುದು ಕೇವಲ ಕಾಮ ಪಿಪಾಸೆಯ ಪೂರ್ತಿಗಾಗಿ. ವಿಷಯಕ್ಕೆ ವಶರಾದ ಅವರು ತಮ್ಮ ತಂದೆ-ತಾಯಿ-ಬಂಧು-ಮಿತ್ರರನ್ನೂ ತೊರೆದು ಹೆಂಡತಿಯ ಅಣ್ಣ-ತಮ್ಮಂದಿರ ಬಳಗದವರ ಸಹವಾಸ-ಸಲಹೆಗಳನ್ನೇ ಪರಮವೆಂದು ಭಾವಿಸುತ್ತಾರೆ. ಈ ಯುಗದಲ್ಲಿ ನೀಚವರ್ಗದವರೂ ಹೊಟ್ಟೆಪಾಡಿಗೋಸ್ಕರ ತಪಸ್ವಿಗಳ ಸೋಗನ್ನು ಹಾಕಿಕೊಳ್ಳುತ್ತಾರೆ. ದಾನ-ದಕ್ಷಿಣೆ ಸ್ವೀಕರಿಸುತ್ತಾರೆ. ಧರ್ಮ ವನ್ನರಿಯದವರು ಉಚ್ಚವಾದ ಧರ್ಮಾಸನವನ್ನೇರಿ ಧರ್ಮೋಪದೇಶಮಾಡ ತೊಡಗುತ್ತಾರೆ. ಈ ಯುಗದಲ್ಲಿ ಜನರ ಮನಸ್ಸಿನಲ್ಲಿ ಕ್ಷೋಭೆ, ಕಳವಳ ತುಂಬಿರುತ್ತದೆ. ಕ್ಷಾಮದ ಪೀಡೆ ಮತ್ತು ಕಂದಾಯದ ಹೊರೆ ಇವುಗಳಿಂದ ಜನ ಕುಗ್ಗಿ ಕಂಗಾಲಾಗುತ್ತಾರೆ. ಮಳೆಯಿಲ್ಲದೆ, ಬೆಳೆಯಿಲ್ಲದೆ, ಅನ್ನಾಹಾರ ವಿಲ್ಲದೆ ಭಯದಿಂದ ಪೀಡಿತರಾಗುತ್ತಾರೆ. ಉಡಲು ವಸ್ತ್ರವಿಲ್ಲ. ಉಣಲು ಅನ್ನವಿಲ್ಲ. ಕುಡಿಯಲು ನೀರಿಲ್ಲ, ಮಲಗಲು ಹಾಸಿಗೆಯಿಲ್ಲ, ಸ್ನಾನವಿಲ್ಲ, ಒಡವೆ-ಆಭರಣಗಳಿಲ್ಲ. ದಾಂಪತ್ಯದ ಸುಖವಿಲ್ಲ. ಕಲಿಯುಗದ ಕಾಲವಿಶೇಷ ದಲ್ಲಿ ಜನ ಎಲ್ಲವನ್ನೂ ಕಳೆದುಕೊಂಡು ಪಿಶಾಚಿಗಳಂತೆ ಆಗಿಬಿಡುತ್ತಾರೆ. ಈ

ಯುಗದಲ್ಲಿ ಮನುಷ್ಯರು ಒಂದು ಕವಡೆಗೋಸ್ಕರವಾಗಿಯೂ ಕಲಹ ಮಾಡುತ್ತಾ ಸ್ನೇಹ-ಸೌಹಾರ್ದಗಳನ್ನು ತೊರೆದು ತಮಗೆ ಪ್ರಿಯವಾಗಿರುವ ಪ್ರಾಣವನ್ನೂ ಕಳೆದುಕೊಳ್ಳುತ್ತಾರೆ. ತಮ್ಮ ಸ್ವಂತ ನೆಂಟರಿಷ್ಟರನ್ನೂ ಕೊಲೆಮಾಡುತ್ತಾರೆ. ಹೊಟ್ಟೆಪಾಡು, ಇಂದ್ರಿಯತೃಪ್ತಿ ಇಷ್ಟೇ ಜನರ ಗುರಿ. ಮಕ್ಕಳು ಮುದುಕರಾದ ತಂದೆ-ತಾಯಿಗಳನ್ನೂ ಕಾಪಾಡುವುದಿಲ್ಲ. ತಂದೆ-ತಾಯಿಗಳೂ ನೀಚಮನಸ್ಸಿನವರಾಗುತ್ತಾರೆ. ಎಲ್ಲ ವಿಷಯಗಳಲ್ಲೂ ಕುಶಲರಾಗಿ ಯೋಗ್ಯರಾಗಿರುವ ಪುತ್ರರನ್ನೂ ತೊರೆದುಬಿಡುತ್ತಾರೆ.

ಎಲೈ ರಾಜೇಂದ್ರನೇ! ಕಲಿಯುಗದಲ್ಲಿ ಪಾಷಂಡಿಗಳ ಸಹವಾಸ ಉಪದೇಶಗಳಿಂದ ಜನರ ಮನಸ್ಸು ಒಡೆದುಹೋಗುತ್ತದೆ. ಸಾಮಾನ್ಯವಾಗಿ ಅವರು ಜಗತ್ತಿಗೆ ಪರಮಗುರುವಾಗಿರುವ, ಮೂರು ಲೋಕಗಳ ಒಡೆಯರಾದ ಮಹಾದೇವತೆಗಳಿಂದಲೂ ನಮಸ್ಕರಿಸಲ್ಪಟ್ಟ ಅಡಿದಾವರೆಗಳುಳ್ಳ ಭಗವಂತನಾದ ಅಚ್ಯುತನನ್ನು ಆರಾಧಿಸುವುದೇ ಇಲ್ಲ.

ಯನ್ನಾಮಧೇಯಂ ಮ್ರಿಯಮಾಣ ಆತುರಃ
ಪತನ್ ಸ್ಖಲನ್ವಾ ವಿವಶೋ ಗೃಣನ್ಪುಮಾನ್ ।
ವಿಮುಕ್ತಕರ್ಮಾರ್ಗಲ ಉತ್ತಮಾಂ ಗತಿಂ
ಪ್ರಾಪ್ನೋತಿ ಯಕ್ಷ್ಯನ್ತಿ ನ ತಂ ಕಲೌ ಜನಾಃ ॥೪೪॥

ಯಾವನ ಪವಿತ್ರವಾದ ನಾಮವನ್ನು ಸಾವಿನ ಹಾಸಿಗೆಯಲ್ಲಿ ನರಳುತ್ತಿರುವ ಸಮಯದಲ್ಲಾಗಲೀ, ಜಾರುತ್ತಿರುವಾಗಲಾಗಲೀ, ಬೀಳುತ್ತಿರುವಾಗಲಾಗಲೀ, ಎಡವುತ್ತಿರುವಾಗಲಾಗಲೀ, ಅನಿಚ್ಛೆಯಿಂದಲೋ ಪರವಶತೆಯಿಂದಲೋ ಉಚ್ಚರಿಸಿದರೂ ಕೂಡ ಮನುಷ್ಯನು ಕರ್ಮಗಳ ಸಂಕೋಲೆಯಿಂದ ಬಿಡುಗಡೆಹೊಂದಿ ಉತ್ತಮಗತಿಯನ್ನು ಪಡೆಯುವನೋ–ಅಂತಹ ಅಚ್ಯುತನನ್ನು ಈ ಅಧನ್ಯಜನರು ಆರಾಧಿಸುವುದೇ ಇಲ್ಲ.

ಕಲಿಯುಗದಲ್ಲಿ ಕಲಿದೋಷದಿಂದ ದ್ರವ್ಯವು ಅಶುದ್ಧವಾಗುತ್ತದೆ. ದೇಶವು ಅಪವಿತ್ರವಾಗುತ್ತದೆ. ಅಂತಃಕರಣವೂ ಕೊಳೆಯಿಂದ ತುಂಬಿಕೊಳ್ಳುತ್ತದೆ. ಆದರೆ ಭಗವಂತನಾದ ಪುರುಷೋತ್ತಮನನ್ನು ಚಿತ್ತದಲ್ಲಿ ಧರಿಸಿಕೊಂಡರೆ ಸಾಕು–ಆ ಎಲ್ಲ ದೋಷಗಳೂ ತೊಳೆದುಹೋಗುತ್ತವೆ

ಯಪ್ಪಾ. ಆತನ ಸ್ವರೂಪ-ರೂಪ-ಗುಣಗಳನ್ನು ಶ್ರವಣಮಾಡಿದರೆ, ಕೀರ್ತನೆ ಮಾಡಿದರೆ, ಧ್ಯಾನಮಾಡಿದರೆ, ಪೂಜೆಮಾಡಿದರೆ ಮತ್ತು ಆದರಿಸಿದರೂ ಕೂಡ ಆ ಭಗವಂತನು ಹೃದಯವನ್ನು ಹೊಕ್ಕು ಸಾವಿರಾರು ಜನ್ಮಗಳಲ್ಲಿ ಸೇರಿಕೊಂಡಿರುವ ಪಾಪರಾಶಿಗಳನ್ನೂ ಕೂಡ ಕ್ಷಣಮಾತ್ರದಲ್ಲಿ ಧ್ವಂಸಮಾಡಿಬಿಡುತ್ತಾನೆ.

ಯಥಾ ಹೇಮ್ನಿ ಸ್ಥಿತೋ ವಹ್ನಿರ್ದುರ್ವರ್ಣಂ ಹನ್ತಿ ಧಾತುಜಮ್ ।
ಏವಮಾತ್ಮಗತೋ ವಿಷ್ಣುರ್ಯೋಗಿನಾಮಶುಭಾಶಯಮ್ ॥೪೭॥

ಚಿನ್ನವನ್ನು ಅಗ್ನಿಯಲ್ಲಿರಿಸಿದಾಗ ಆ ಲೋಹದಲ್ಲಿ ಸೇರಿಕೊಂಡ ಅಗ್ನಿಯು ಲೋಹಸಂಬಂಧವಾದ ಎಲ್ಲ ಕೊಳೆಗಳನ್ನೂ ನಾಶಪಡಿಸಿಬಿಡುವುದಲ್ಲವೇ? ಹಾಗೆಯೇ ಸಾಧಕರಾದ ಯೋಗಿಗಳ ಹೃದಯದಲ್ಲಿ ಸೇರಿಕೊಂಡ ವಿಷ್ಣುವು ಅವರ ಹೃದಯದ ಎಲ್ಲ ಕಶ್ಮಲಗಳನ್ನೂ ಧ್ವಂಸಮಾಡಿಬಿಡುವನು.

ಪರೀಕ್ಷಿತಮಹಾರಾಜ! ವಿದ್ಯೆ, ತಪಸ್ಸು, ಪ್ರಾಣಾಯಾಮ, ಸರ್ವ ಭೂತಗಳಲ್ಲಿಯೂ ಮೈತ್ರೀಭಾವ, ತೀರ್ಥಸ್ನಾನ, ವ್ರತ, ದಾನ, ಜಪ ಮುಂತಾದುವುಗಳಿಂದ ಅಂತಃಕರಣವು ಶುದ್ಧವಾಗುತ್ತದೆಯೆಂಬುದೇನೋ ನಿಜವೇ. ಆದರೆ ಭಗವಂತನಾದ ಅನಂತನು ಹೃದಯದಲ್ಲಿ ಬೆಳಗುತ್ತಿದ್ದರೆ ಯಾವ ಅತ್ಯಂತ ಪರಿಶುದ್ಧಿಯುಂಟಾಗುತ್ತದೆಯೋ ಆ ಪರಿಶುದ್ಧಿಯು ಮೇಲೆ ಹೇಳಿದ ಸಾಧನಗಳಿಂದ ಉಂಟಾಗುವುದಿಲ್ಲ.

ವತ್ಸಾ! ಸಾವು ನಿನ್ನ ಹತ್ತಿರಕ್ಕೆ ಸಾರುತ್ತಿದೆ. ಈಗ ನೀನು ವಿಚಲಿತನಾಗದೆ ಸಾವಧಾನತೆಯಿಂದ ಸ್ವಾಮಿ ಕೇಶವನನ್ನು ಸರ್ವವೃತ್ತಿ ಗಳಿಂದಲೂ ಹೃದಯದಲ್ಲಿ ಬಿಜಯಮಾಡಿಸಿಕೋ. ಅದರಿಂದ ನಿನಗೆ ನಿಶ್ಚಯ ವಾಗಿಯೂ ಪರಮಗತಿಯುಂಟಾಗುವುದು. ಧೈರ್ಯವಾಗಿರು. ಸಾವಿಗೆ ತುತ್ತಾಗುತ್ತಿರುವವರು ಭಗವಂತನಾದ ಸರ್ವೇಶ್ವರ ಶ್ರೀಹರಿಯನ್ನೇ ಧ್ಯಾನ ಮಾಡಬೇಕು. ಹಾಗೆ ಮಾಡಿದರೆ ಸರ್ವಾತ್ಮನೂ ಸರ್ವಶರಣ್ಯನೂ ಆದ ಆ ಪರಮಾತ್ಮನು ಆತನಿಗೆ ತನ್ನ ಆತ್ಮಭಾವವನ್ನೇ ಅನುಗ್ರಹಿಸಿಬಿಡುತ್ತಾನೆ.

ಕಲೇರ್ದೋಷನಿಧೇ ರಾಜನ್ನಸ್ತಿ ಹ್ಯೇಕೋ ಮಹಾನ್ಗುಣಃ ।
ಕೀರ್ತನಾದೇವ ಕೃಷ್ಣಸ್ಯ ಮುಕ್ತಸಙ್ಗಃ ಪರಂ ವ್ರಜೇತ್ ॥೫೧॥

ಮಹಾರಾಜ! ಕಲಿಯುಗವು ಸರ್ವಪ್ರಕಾರದ ದೋಷಗಳಿಗೂ ಬೊಕ್ಕಸವಾಗಿದ್ದರೂ ಅದರಲ್ಲಿ ಒಂದು ದೊಡ್ಡ ಗುಣವಿದೆ. ಅದೇನೆಂದರೆ ಈ ಯುಗದಲ್ಲಿ ಶ್ರೀಕೃಷ್ಣನ ಸಂಕೀರ್ತನೆಮಾಡಿದರೂ ಸಾಕು. ಸರ್ವಸಂಗಗಳನ್ನೂ ಕಳೆದುಕೊಂಡು ಪರಮಪದವನ್ನು ಹೊಂದಿಬಿಡಬಹುದು.

ಕೃತೇ ಯದ್ಧ್ಯಾಯತೋ ವಿಷ್ಣುಂ ತ್ರೇತಾಯಾಂ ಯಜತೋ ಮಖೈಃ।
ದ್ವಾಪರೇ ಪರಿಚರ್ಯಾಯಾಂ ಕಲೌ ತದ್ಧರಿಕೀರ್ತನಾತ್ ॥೫೨॥

ಮಹಾವಿಷ್ಣುವನ್ನು ಕೃತಯುಗದಲ್ಲಿ ಧ್ಯಾನಮಾಡಿದರೆ ಯಾವ ಫಲವು ದೊರೆಯುವುದೋ, ತ್ರೇತಾಯುಗದಲ್ಲಿ ಆತನನ್ನು ಕುರಿತು ಯಜ್ಞಗಳನ್ನು ಮಾಡಿದರೆ ಯಾವ ಫಲವು ಸಿಕ್ಕುವುದೋ, ದ್ವಾಪರಯುಗದಲ್ಲಿ ಆತನ ಅರ್ಚನೆಯನ್ನೂ-ಪೂಜಾಸೇವೆಯನ್ನೂ ಮಾಡುವುದರಿಂದ ಯಾವ ಫಲವು ದೊರಕುವುದೋ, ಕಲಿಯುಗದಲ್ಲಿ ಶ್ರೀಹರಿಯ ನಾಮಸಂಕೀರ್ತನೆ ಮಾಡುವುದರಿಂದಲೇ ಅಂತಹ ಫಲವು ಸಾಧಿತವಾಗುವುದು.*

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದ್ವಾದಶಸ್ಕಂಧದ ೩ನೆಯ ಅಧ್ಯಾಯವು ಮುಗಿಯಿತು.

ದ್ವಾದಶಸ್ಕಂಧ ೪ನೆಯ ಅಧ್ಯಾಯ

ಕಲ್ಪ ಮತ್ತು ಪ್ರಳಯಗಳ ಕಾಲಪರಿಮಾಣ

ಶ್ರೀಶುಕಮುನಿಗಳು ಹೀಗೆಂದರು :

ಕಾಲಸ್ತೇ ಪರಮಾಣ್ವಾದಿರ್ದ್ವಿಪರಾರ್ಧಾವಧಿರ್ನೃಪ ।
ಕಥಿತೋ ಯುಗಮಾನಂ ಚ ಶೃಣು ಕಲ್ಪಲಯಾವಪಿ ॥೧॥

“ವತ್ಸ!ಪರೀಕ್ಷಿತ! ಪರಮಾಣುವಿನಿಂದ ಹಿಡಿದು ಎರಡು ಪರಾರ್ಧಗಳ

---

*ಧ್ಯಾಯನ್ ಕೃತೇ ಯಜನ್ಯಜ್ಞೈಸ್ತ್ರೇತಾಯಾಂ ದ್ವಾಪರೇರ್ಚಯನ್ ।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಮ್ ॥
ಎಂಬ ವಿಷ್ಣುಪುರಾಣಶ್ಲೋಕವು ಇದಕ್ಕೆ ಸಂಪೂರ್ಣ ಹೋಲಿಕೆಯಾಗಿದೆ.

ಪರ್ಯಂತವಾದ ಕಾಲದ ಸ್ವರೂಪವೇನು? ಒಂದೊಂದು ಯುಗದಲ್ಲಿಯೂ ಎಷ್ಟು ವರ್ಷಗಳಿರುತ್ತವೆ?–ಎಂಬುದನ್ನು ಈಗಾಗಲೇ ನಿನಗೆ ತಿಳಿಸಿಯಾಗಿದೆ. ಕಲ್ಪ* ಮತ್ತು ಲಯಗಳನ್ನು ಕುರಿತು ನೀನು ಕೇಳಿದೆಯಲ್ಲವೇ? ಅವುಗಳನ್ನು ಈಗ ವರ್ಣಿಸುತ್ತೇನೆ ; ಕೇಳು :

ಮನುಷ್ಯರ ಲೆಕ್ಕದಲ್ಲಿ ಒಂದು ಸಾವಿರ ಚತುರ್ಯುಗಗಳಾದರೆ ಅದು ಬ್ರಹ್ಮದೇವರಿಗೆ ಒಂದು ಹಗಲೆನಿಸುವುದು. ಬ್ರಹ್ಮದೇವರ ಆ ಹಗಲನ್ನು ಕಲ್ಪ ಎಂದು ಕರೆಯುತ್ತಾರೆ. ಒಂದು ಕಲ್ಪದಲ್ಲಿ ಹದಿನಾಲ್ಕು ಮನುಗಳ ಆಳ್ವಿಕೆಯ ಕಾಲ ಹದಿನಾಲ್ಕು ** ಮನ್ವಂತರಗಳ ಕಾಲ ಇರುವುದು. ಕಲ್ಪವು ಮುಗಿದ ಬಳಿಕ ಅಷ್ಟೇ ಸಮಯವುಳ್ಳ ಪ್ರಳಯವು ಆಗುವುದು. ಈ ಪ್ರಳಯವನ್ನೇ ಬ್ರಹ್ಮದೇವರ ರಾತ್ರಿ–ಎನ್ನುವರು. ಈ ಸಮಯದಲ್ಲಿ ಈ ಮೂರು ಲೋಕಗಳ ಪ್ರಳಯವಾಗುವುದು–ಅಂದರೆ : ಮೂರು ಲೋಕಗಳೂ ಲಯ ಹೊಂದಿಬಿಡುವುವು. ಇದಕ್ಕೆ ನೈಮಿತ್ತಿಕಪ್ರಳಯ ಎಂದು ಹೆಸರು. ಈ ಪ್ರಳಯಸಮಯದಲ್ಲಿ ಇಡೀ ವಿಶ್ವವನ್ನು ತನ್ನಲ್ಲಿ ಉಪಸಂಹಾರಮಾಡಿಕೊಂಡು ಬ್ರಹ್ಮದೇವರು ಶೇಷಶಾಯಿಯಾಗಿರುವ ಶ್ರೀಭಗವಂತನ ನಾಭಿಪದ್ಮದಲ್ಲಿ ಪವಡಿಸಿರುವರು. ಈ ರೀತಿಯಲ್ಲಿ ಹಗಲಿನ ಅನಂತರ ರಾತ್ರಿ ಮತ್ತು ರಾತ್ರಿಯ ಅನಂತರ ಹಗಲು–ಎಂಬ ಕ್ರಮದಲ್ಲಿ ಕಾಲವು ಕಳೆಯುತ್ತಾ ಯಾವಾಗ ಬ್ರಹ್ಮದೇವರಿಗೆ ಅವರ ಲೆಕ್ಕದಲ್ಲಿ ನೂರು ವರ್ಷಗಳು (ಅಂದರೆ ಮನುಷ್ಯರ ಲೆಕ್ಕದಲ್ಲಿ ಎರಡು ಪರಾರ್ಧಗಳ ಕಾಲವು) ಮುಗಿಯುವುವೋ ಆಗ ಮಹತ್ತತ್ತ್ವ, ಅಹಂಕಾರ ಮತ್ತು ಪಂಚತನ್ಮಾತ್ರೆಗಳು–ಎಂಬ ಏಳು ಪ್ರಕೃತಿಗಳೂ ತಮಗೆ ಕಾರಣವಾಗಿರುವ ಮೂಲಪ್ರಕೃತಿಯಲ್ಲಿ ಲಯ

*ಕಲ್ಪಗಳಲ್ಲಿ ದೈನಂದಿನಕಲ್ಪ ಮತ್ತು ಮಹಾಕಲ್ಪ ಎಂದು ಎರಡು ಭೇದಗಳು. ಇವುಗಳಲ್ಲಿ ದೈನಂದಿನಕಲ್ಪವನ್ನು ಕುರಿತು ಇಲ್ಲಿ ಹೇಳಿದೆ.

**ಮನ್ವಂತರ–ಎಂದರೆ : ಪ್ರತಿಯೊಬ್ಬ ಮನುವಿನ ಆಳ್ವಿಕೆಯ ಕಾಲ–ಎಪ್ಪತ್ತೊಂದು ಚತುರ್ಯುಗಗಳು. ಪ್ರಳಯಗಳಲ್ಲಿ ನಿತ್ಯ, ನೈಮಿತ್ತಿಕ, ಪ್ರಾಕೃತಿಕ ಮತ್ತು ಆತ್ಯನ್ತಿಕ–ಎಂದು ನಾಲ್ಕು ಬಗೆಗಳು. ಬ್ರಹ್ಮದೇವರು ತನ್ನ ಒಂದು ಹಗಲು ಕಳೆದಾಗ (ಇದರ ಪರಿಮಾಣ ಒಂದು ಸಾವಿರ ಚತುರ್ಯುಗಗಳು.) ಒಡನೆಯೇ ಸೃಷ್ಟಿಯ ವ್ಯಾಪಾರವನ್ನು ನಿಲ್ಲಿಸಿ ಶಯನಿಸುವರು. ಇದೇ ನೈಮಿತ್ತಿಕಪ್ರಳಯ.

ಗೊಂಡುಬಿಟ್ಟಿರುವುವು. ಇದಕ್ಕೇ ಪ್ರಾಕೃತಿಕ ಪ್ರಳಯ–ಎಂದು ಹೆಸರಪ್ಪಾ.

ಈ ವಿನಾಶಕಾಲದಲ್ಲಿ ಮೊದಲು ಮಹತ್ತು ಮುಂತಾದ ಏಳು ಪ್ರಕೃತಿಗಳ ಸಮುದಾಯರೂಪವಾದ ಅಂಡಕೋಶವು ಲಯಹೊಂದುವುದು. ಮೋಡಗಳು ನೂರು ವರ್ಷಗಳ ಕಾಲ ಮಳೆಗರೆಯುವುದಿಲ್ಲ. ಯಾರಿಗೂ ತಿನ್ನಲು ಆಹಾರ ದೊರೆಯುವುದಿಲ್ಲ. ಹಸಿವು-ಬಾಯಾರಿಕೆಗಳಿಂದ ಬಸವಳಿದ ಜನರು ಒಬ್ಬರನ್ನೊಬ್ಬರು ತಿಂದುಹಾಕತೊಡಗುವರು. ಉಪದ್ರವದಿಂದ ಪೀಡಿತರಾಗಿ ಸ್ವಲ್ಪ-ಸ್ವಲ್ಪವಾಗಿ ಎಲ್ಲ ಪ್ರಜೆಗಳೂ ಕ್ಷಯಹೊಂದಿಬಿಡುವರು. ಪ್ರಳಯಕಾಲದ ಸೂರ್ಯನು ತನ್ನ ತೀಕ್ಷ್ಣವಾದ ಕಿರಣಗಳಿಂದ ಸಮುದ್ರಗಳಲ್ಲೂ, ಪ್ರಾಣಿಗಳ ಶರೀರಗಳಲ್ಲೂ, ಭೂಮಿಯಲ್ಲೂ ಇರುವ ಎಲ್ಲ ರಸವನ್ನೂ ಶೋಷಿಸಿಬಿಡುತ್ತಾನೆ. ಒಂದು ತೊಟ್ಟು ಜಲವನ್ನೂ ಭೂಮಿಗೆ ಬಿಡುವುದಿಲ್ಲ. ಆಗ ಭಗವಂತನಾದ ಸಂಕರ್ಷಣನ ಬಾಯಿಯಿಂದ ಸಂವರ್ತಕ ಎಂಬ ಪ್ರಳಯಕಾಲದ ಅಗ್ನಿಯು ಹೊರಬರುವುದು. ವಾಯುವಿನ ವೇಗದಿಂದ ಅದು ಮತ್ತೂ ಭುಗಿಲೆದ್ದು ಪಾತಾಳವೇ ಮುಂತಾದ ಭೂಮಿಯ ಎಲ್ಲ ವಿವರಗಳನ್ನೂ ದಹಿಸಿಬಿಡುವುದು. ಅಲ್ಲಿದ್ದ ಪ್ರಾಣಿಗಳೆಲ್ಲಾ ಈಗಾಗಲೇ ಪ್ರಾಣಕಳೆದು ಕೊಂಡುಬಿಟ್ಟಾಗಿದೆ. ಕೆಳಗಡೆಯಿಂದ ಬೆಂಕಿಯ ಝಳ ಮತ್ತು ಮೇಲುಗಡೆಯಿಂದ ಸೂರ್ಯನ ಝಳ–ಎರಡೂ ಸೇರಿರುವಾಗ ಆ ಪ್ರಾಣಿಗಳು ಸಾಯದೇ ಇನ್ನೇನಾದಾವು! ಮೇಲೆ ಕೆಳಗೆ ಮತ್ತು ಎಲ್ಲ ಕಡೆಗಳಿಂದಲೂ ಬ್ರಹ್ಮಾಂಡವು ಉರಿದು ಸುಟ್ಟಬೆರಣಿಯಂತೆ ಆಗಿಬಿಡುವುದು. ಆಮೇಲೆ ಪ್ರಚಂಡವಾದ ಪ್ರಳಯಮಾರುತವು ಹೊರಬಂದು ನೂರಾರು ವರ್ಷಗಳ ಕಾಲ ಭೀಕರವಾಗಿ ಬೀಸತೊಡಗುವುದು. ಆಕಾಶವು ಹೊಗೆ ಮತ್ತು ಧೂಳುಗಳಿಂದ ಮುಚ್ಚಿಹೋಗುವುದು. ಅನಂತರ ನೂರಾರು ಬಣ್ಣ-ಬಣ್ಣದ ಮೋಡಗಳು ಆಕಾಶದಲ್ಲಿ ಸಂಚರಿಸುತ್ತಾ ನೂರಾರು ವರ್ಷಗಳ ಕಾಲ ಭೀಕರಗರ್ಜನೆಯೊಡನೆ ಭೀಕರವಾದ ಮಳೆಯನ್ನು ಕರೆಯುವುವು. ಬ್ರಹ್ಮಾಂಡದಲ್ಲಿರುವ ಎಲ್ಲ ಪ್ರಪಂಚವೂ ಕೇವಲ ಜಲಮಯವಾಗಿಬಿಡುವುದು. (ಶ್ಲೋಕ ೨-೧೩)

ಹೀಗೆ ಜಲಪ್ರಳಯವಾದಾಗ ಜಲವು ಭೂಮಿಯ ವಿಶೇಷಗುಣವಾದ

ಗಂಧವನ್ನು ಸೆಳೆದು ತನ್ನಲ್ಲಿ ಲಯಗೊಳಿಸಿಕೊಳ್ಳುವುದು. ಭೂಮಿಯು ಜಲದಲ್ಲಿ ಲಯಹೊಂದಲಾಗಿ ಜಲದ ಗುಣವಾದ ರಸವನ್ನು ತೇಜಸ್ತತ್ತ್ವವು ಹೀರಿಕೊಂಡುಬಿಡುವುದು. ನೀರು ನೀರಸವಾಗಿ ತೇಜಸ್ಸಿನಲ್ಲಿ ಒಂದಾಗಿ ಬಿಡುವುದು. ಅನಂತರ ವಾಯುವು ತೇಜಸ್ಸಿನ ಗುಣವಾದ ರೂಪವನ್ನು ತನ್ನೊಳಗೆ ಸೆಳೆದುಕೊಳ್ಳುವುದು. ಆಗ ತೇಜಸ್ಸು ರೂಪರಹಿತವಾಗಿ ವಾಯುವಿನಲ್ಲಿ ಲಯಹೊಂದುವುದು. ಆಗ ಆಕಾಶವು ವಾಯುವಿನ ಗುಣವಾದ ಸ್ಪರ್ಶವನ್ನು ತನ್ನಲ್ಲಿ ಸೆಳೆದು ಲಯಗೊಳಿಸಿಕೊಳ್ಳುವುದು. ವಾಯುವು ಸ್ಪರ್ಶಗುಣರಹಿತವಾಗಿ ಆಕಾಶದಲ್ಲಿ ಶಾಂತವಾಗಿಬಿಡುವುದು. ಆಗ ತಾಮಸಾಹಂಕಾರವು ಆಕಾಶದ ಗುಣವಾದ ಶಬ್ದವನ್ನು ನುಂಗಿ ಬಿಡುವುದು. ಶಬ್ದರಹಿತವಾದ ಆಕಾಶವು ತಾಮಸಾಹಂಕಾರದಲ್ಲಿ ಲಯಗೊಳ್ಳುವುದು. ಇದೇ ರೀತಿಯಲ್ಲಿ ತೈಜಸಾಹಂಕಾರವು ಇಂದ್ರಿಯಗಳನ್ನೂ ಮತ್ತು ವೈಕಾರಿಕ (ಸಾತ್ತ್ವಿಕ) ಅಹಂಕಾರವು ಇಂದ್ರಿಯಾಧಿಷ್ಠಾತೃ ದೇವತೆಗಳನ್ನೂ ಮತ್ತು ಇಂದ್ರಿಯವೃತ್ತಿಗಳನ್ನೂ ತಮ್ಮಲ್ಲಿ ಲಯಗೊಳಿಸಿಕೊಳ್ಳುವುವು. ಅನಂತರ ಮಹತ್ತತ್ತ್ವವು ಅಹಂಕಾರವನ್ನೂ ಮತ್ತು ಸತ್ತ್ವವೇ ಮುಂತಾದ ಗುಣಗಳು ಮಹತ್ತತ್ತ್ವವನ್ನೂ ನುಂಗಿ ಹಾಕುವುವು. ಇದೆಲ್ಲಾ ಕಾಲದ ಮಹಿಮೆ. ಅನಂತರ ಅದರ ಪ್ರೇರಣೆಯಿಂದಲೇ ಅವ್ಯಕ್ತ ಪ್ರಕೃತಿಯು ತ್ರಿಗುಣಗಳನ್ನೂ ನುಂಗಿಬಿಡಲು ಪ್ರಕೃತಿಯೊಂದೇ ತಾನೇ ತಾನಾಗಿ ಉಳಿದುಕೊಳ್ಳುವುದು. ಈ ಅವ್ಯಕ್ತಪ್ರಕೃ ತಿಯೇ ಚರಾಚರವಾದ ಇಡೀ ಜಗತ್ತಿಗೆ ಮೂಲಕಾರಣವಾಗಿದೆ. ಅವ್ಯಕ್ತವೂ ಅನಾದಿಯೂ ಅನಂತವೂ ನಿತ್ಯವೂ ಅವಿನಾಶಿಯೂ ಆಗಿದೆ.

ನ ತಸ್ಯ ಕಾಲಾವಯವೈಃ ಪರಿಣಾಮಾದಯೋ ಗುಣಾಃ ।
ಅನಾದ್ಯನನ್ತಮವ್ಯಕ್ತಂ ನಿತ್ಯಂ ಕಾರಣಮವ್ಯಯಮ್ ॥೧೯॥

ಈ ಮೂಲಪ್ರಕೃತಿಯು ಹೀಗೆ ಇದ್ದು ತನ್ನ ಕಾರ್ಯಗಳೆಲ್ಲವನ್ನೂ ಲಯಗೊಳಿಸಿಕೊಂಡು ಪ್ರಳಯ ಸಮಯದಲ್ಲಿ ಸಾಮ್ಯಾವಸ್ಥೆಯನ್ನು ಹೊಂದಿದಾಗ ಕಾಲದ ಅವಯವಗಳಾದ ವರ್ಷ, ಮಾಸ, ಹಗಲು-ರಾತ್ರಿ, ಕ್ಷಣವೇ ಮುಂತಾದುವು ಮೂಲದಲ್ಲಿ ಒಂದಾಗಿ ಸೇರಿಕೊಂಡಿರುವುದರಿಂದ

ಅದರಲ್ಲಿ ಪರಿಣಾಮ, ವೃದ್ಧಿ, ಕ್ಷಯ–ಮುಂತಾದ ಯಾವುದೇ ವಿಕಾರಗಳೂ ಉಂಟಾಗುವುದಿಲ್ಲ.

ನ ಯತ್ರ ವಾಚೋ ನ ಮನೋ ನ ಸತ್ತ್ವಂ
ತಮೋ ರಜೋ ವಾ ಮಹದಾದಯೋಽಮೀ ।
ನ ಪ್ರಾಣಬುದ್ಧೀನ್ದ್ರಿಯದೇವತಾ ವಾ
ನ ಸಂನಿವೇಶಃ ಖಲು ಲೋಕಕಲ್ಪಃ ॥೨೦॥
ನ ಸ್ವಪ್ನಜಾಗ್ರನ್ನ ಚ ತತ್ಸುಷುಪ್ತಂ
ನ ಖಂ ಜಲಂ ಭೂರನಿಲೋಽಗ್ನಿರರ್ಕಃ ।
ಸಂಸುಪ್ತವಚ್ಛೂನ್ಯವದಪ್ರತರ್ಕ್ಯಂ
ತನ್ಮೂಲಭೂತಂ ಪದಮಾಮನನ್ತಿ ॥೨೧॥

ಆಗ ಪ್ರಕೃತಿಯಲ್ಲಿ ಸ್ಥೂಲರೂಪದಲ್ಲಾಗಲೀ, ಸೂಕ್ಷ್ಮರೂಪದಲ್ಲಾಗಲೀ ಮಾತು, ಮನಸ್ಸು, ಸತ್ತ್ವಗುಣ, ರಜೋಗುಣ, ತಮೋಗುಣ, ಮಹತ್ತತ್ತ್ವ ಮುಂತಾದ ವಿಕಾರಗಳು, ಪ್ರಾಣ-ಬುದ್ಧಿ-ಇಂದ್ರಿಯ ಮತ್ತು ಅದರ ದೇವತೆಗಳು ಯಾರೂ, ಯಾವುದೂ ಇರುವುದಿಲ್ಲ. ಸೃಷ್ಟಿಯ ಸಮಯದಲ್ಲಿರುವ ಲೋಕಗಳ ಕಲ್ಪನೆಯಾಗಲೀ ಅವುಗಳ ಸ್ಥಿತಿಯಾಗಲೀ ಯಾವುದೂ ಇರುವುದಿಲ್ಲ. ಕನಸು, ಎಚ್ಚರ, ಗಾಢನಿದ್ರೆ ಎಂಬ ಮೂರು ಅವಸ್ಥೆಗಳೂ ಇರುವುದಿಲ್ಲ. ಆಕಾಶ, ನೀರು, ನೆಲ, ವಾಯು, ಅಗ್ನಿ ಮತ್ತು ಸೂರ್ಯರೂ ಇರುವುದಿಲ್ಲ. ಎಲ್ಲವೂ ನಿದ್ರೆಯಲ್ಲಿದೆಯೋ ಎಂಬಂತೆಯೂ ಶೂನ್ಯದಂತೆಯೂ ಇರುವುದು. ತರ್ಕದಿಂದ ಊಹಿಸುವುದಕ್ಕೂ ಆಗದ ಅವಸ್ಥೆ ಇದು. ಈ ಅವ್ಯಕ್ತವನ್ನೇ ಜಗತ್ತಿನ ಮೂಲಭೂತವಾದ ತತ್ತ್ವವೆಂದು ಹೇಳುತ್ತಾರೆ. ಈ ಅವಸ್ಥೆಗೆ 'ಪ್ರಾಕೃತಪ್ರಳಯ' ಎಂದು ಹೆಸರು. ಈ ಸಮಯದಲ್ಲಿ ಪುರುಷ ಮತ್ತು ಪ್ರಕೃತಿ ಇಬ್ಬರ ಶಕ್ತಿಯೂ ಕಾಲದ ಪ್ರಭಾವದಿಂದ ಕುಂಠಿತವಾಗಿ ಪರವಶವಾಗಿ ತನ್ನ ಮೂಲಸ್ವರೂಪದಲ್ಲಿ ಲಯಹೊಂದಿಬಿಡುವುದು.*

---

*ಈ ಶ್ಲೋಕಗಳಿಗೆ ಹೀಗೂ ಅನುವಾದ ಮಾಡಬಹುದು.:

ಕಡೆಗೆ ಆ ಪ್ರಕೃತಿಯು ಪರಬ್ರಹ್ಮದಲ್ಲಿ ಸೇರಿಕೊಳ್ಳುವುದು. ಆ ಪರಮಾತ್ಮನ ಸ್ವರೂಪವಾದರೋ ಆದ್ಯಂತರಹಿತವಾದುದು. ಅದು ಕಾಲದ ಅವಯವಗಳೆನಿಸಿ

ಮಹಾರಾಜ! ಈಗ ನಿನಗೆ ಆತ್ಯಂತಿಕ ಪ್ರಳಯದ ಅಂದರೆ ಮೋಕ್ಷದ ಸ್ವರೂಪವನ್ನು ತಿಳಿಸುತ್ತೇನೆ ; ಕೇಳು :

ಬುದ್ಧೀನ್ದ್ರಿಯಾರ್ಥರೂಪೇಣ ಜ್ಞಾನಂ ಭಾತಿ ತದಾಶ್ರಯಮ್ ।
ದೃಶ್ಯತ್ವಾವ್ಯತಿರೇಕಾಭ್ಯಾಮಾದ್ಯನ್ತವದವಸ್ತು ಯತ್ ॥೨೩॥

ಬುದ್ಧಿ, ಇಂದ್ರಿಯ ಮತ್ತು ಇಂದ್ರಿಯವಿಷಯಗಳು ಇವುಗಳೆಲ್ಲಕ್ಕೂ ಆಶ್ರಯ ಮತ್ತು ಅಧಿಷ್ಠಾನವಾಗಿರುವವನು ಜ್ಞಾನಸ್ವರೂಪನಾದ ಪರಮಾತ್ಮನೇ. ಎಲ್ಲಕ್ಕೂ ಆತ್ಮಭೂತನಾಗಿರುವ ಆತನೇ ಆ ಬುದ್ಧಿ, ಇಂದ್ರಿಯಾದಿಗಳ ರೂಪದಲ್ಲಿ ಕಾಣುತ್ತಾನೆ. ಹೀಗೆ ಕಾಣುವ ಬುದ್ಧ್ಯಾದಿಗಳು ಆ ಪರಮಾತ್ಮನಿಂದ ಪ್ರತ್ಯೇಕವಾಗಿ ಇರಲಾರವು. ಇವುಗಳಿಗೆ ಆದಿ ಮತ್ತು ಅಂತ್ಯಗಳುಂಟು. ಆದುದರಿಂದ ಇವು ಸತ್ಯವಸ್ತುಗಳಲ್ಲ. ಇವುಗಳಿಗೆ ಧಾರಕನಾದ ಪರಮಾತ್ಮನೊಬ್ಬನೇ ಸತ್ಯವಸ್ತುವು.

ಕೊಂಡ ಹಗಲು-ರಾತ್ರಿ ಮುಂತಾದುವುಗಳಿಂದ ಪರಿಣಾಮಹೊಂದುವುದಿಲ್ಲ. ಇಂದ್ರಿಯಗಳಿಗೆ ಅಗೋಚರವಾಗುವುದರಿಂದ ಅದು ಅವ್ಯಕ್ತವೆನಿಸುವುದು.

'ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯನ್ತೇ ಮಾಮಬುದ್ಧಯಃ' (ಶ್ರೀಗೀತಾ)

ಅದಕ್ಕೆ ಅಳಿವಿಲ್ಲ. ಆದುದರಿಂದ ಅದನ್ನು ನಿತ್ಯವೆಂದು ಹೇಳುವರು. ಮೂಲ ಪ್ರಕೃತಿಯಿಂದ ಪೃಥ್ವಿಯವರೆಗಿನ ಜಗತ್ತಿಗೆಲ್ಲ ಅದೇ ಕಾರಣವಾದುದು. ಹೀಗಿದ್ದರೂ ಕಾರ್ಯದಲ್ಲಿರುವ ದೋಷಗಳು ಅದಕ್ಕೆ ಅಂಟುವುದಿಲ್ಲ. ಮನಸ್ಸು, ವಾಕ್ಕು, ತ್ರಿಗುಣಗಳು, ಮಹತ್ತು ಮುಂತಾದ ತತ್ತ್ವಗಳು, ಪ್ರಾಣ, ಬುದ್ಧಿ, ಇಂದ್ರಿಯಗಳು ಮತ್ತು ಬ್ರಹ್ಮಾಂಡ–ಇವೊಂದೂ ಆ ಪರಮಾತ್ಮನಿಗೆ ಸಂಬಂಧಿಸಿಲ್ಲ. ಆತನಿಗೆ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಅವಸ್ಥಾಭೇದಗಳೂ ಇಲ್ಲ. ಆತನ ಸ್ವರೂಪವು ಆಕಾಶ, ಅಗ್ನಿ, ಭೂಮಿ, ವಾಯು, ಸೂರ್ಯ ಎಂಬಿವುಗಳಲ್ಲೂ ಸೇರಿಲ್ಲ. ಒಳ-ಹೊರವಿಕಾರಗಳಿಗೆ ಈಡಾಗುವುದಿಲ್ಲ. ಆಕಾಶದಂತೆ ಸಮಸ್ತದ್ರವ್ಯಗಳಲ್ಲಿಯೂ ಸೇರಿಕೊಂಡಿದ್ದರೂ ಅವುಗಳ ದೋಷಕ್ಕೆ ಈಡಾಗದೆ ನಿರ್ಮಲವಾಗಿರುವುದು. ಅದನ್ನು 'ಹೀಗಿರಬಹುದು'–ಎಂದು ತರ್ಕದಿಂದ ತೀರ್ಮಾನಿಸಲಾಗುವುದಿಲ್ಲ. ಅದೇ ಅವ್ಯಕ್ತ ಪ್ರಕೃತಿಗೆ (ಪ್ರಧಾನಕ್ಕೆ) ಲಯಸ್ಥಾನವೆಂದು ಜ್ಞಾನಿಗಳು ಹೇಳುತ್ತಾರೆ. ಇದೇ ಪ್ರಾಕೃತಪ್ರಳಯ. ಇದರಲ್ಲಿ ಪುರುಷನ ಮತ್ತು ಪ್ರಕೃತಿಯ ಶಕ್ತಿಗಳು ಭಗವಂತನಲ್ಲಿ ಲಯಹೊಂದುವುವು. ಹೀಗೆ ಪೃಥಿವ್ಯಾದಿ ತತ್ತ್ವಗಳೆಲ್ಲಾ ಕಾಲದ ಪ್ರೇರಣೆಯಿಂದ ತಮ್ಮ ತಮ್ಮ ಕಾರಣಗಳಲ್ಲಿ ಲಯಿಸುತ್ತಾ, ಕೊನೆಗೆ ಪರಬ್ರಹ್ಮಸ್ವರೂಪವೊಂದೇ ಉಳಿಯುವುದು.

ದೀಪಶ್ಚಕ್ಷುಶ್ಚ ರೂಪಂ ಚ ಜ್ಯೋತಿಷೋ ನ ಪೃಥಗ್ಭವೇತ್ ।
ಏವಂ ಧೀಃ ಖಾನಿ ಮಾತ್ರಾಶ್ಚ ನ ಸ್ಯುರನ್ಯತಮಾದೃತಾತ್ ॥೨೪॥

ದೀಪ, ಕಣ್ಣು ಮತ್ತು ಕಾಣುವ ರೂಪ–ಇವು ಮೂರೂ ವಾಸ್ತವವಾಗಿ ತೇಜಸ್ಸಿನಿಂದ ಭಿನ್ನವಾದುವುಗಳಲ್ಲ. ಹಾಗೆಯೇ ಬುದ್ಧಿ, ಇಂದ್ರಿಯ, ಅವುಗಳಿಗೆ ವಿಷಯವಾದ ತನ್ಮಾತ್ರೆಗಳೂ ಕೂಡ ತಮಗೆ ಅಧಿಷ್ಠಾನ ವಾಗಿರುವ ಬ್ರಹ್ಮದಿಂದ ಬೇರೆಯಲ್ಲ. ಅವನನ್ನು ಬಿಟ್ಟು ಅವನಿಂದ ಪ್ರತ್ಯೇಕವಾಗಿರಲಾರವು.

ಬುದ್ಧೇರ್ಜಾಗರಣಂ ಸ್ವಪ್ನಃ ಸುಷುಪ್ತಿರಿತಿ ಚೋಚ್ಯತೇ ।
ಮಾಯಾಮಾತ್ರಮಿದಂ ರಾಜನ್ ನಾನಾತ್ವಂ ಪ್ರತ್ಯಗಾತ್ಮನಿ ॥೨೫॥

ಎಚ್ಚರ, ಕನಸು ಮತ್ತು ಗಾಢನಿದ್ರೆ–ಎಂಬ ಈ ಮೂರು ಅವಸ್ಥೆಗಳು ಬುದ್ಧಿಗೆ ಸೇರಿದುವುಗಳು. ಇವುಗಳಿಂದ ಉಂಟಾಗುವ ವಿಶ್ವ, ತೈಜಸ ಪ್ರಾಜ್ಞ–ಎಂಬ ನಾನಾತ್ವವೂ ಬುದ್ಧಿಗೇ ಸೇರಿದುವುಗಳು. ಇವು ಮಾಯಾ ಮಾತ್ರವಾದುವುಗಳು. ಏಕಮಾತ್ರಸತ್ಯವಾಗಿರುವ ಆತ್ಮನಿಗೆ ಮಾಯಾ ಮಾತ್ರವಾದ ನಾನಾತ್ವವು ಸಂಬಂಧಪಡುವುದಿಲ್ಲ.

ಯಥಾ ಜಲಧರಾ ವ್ಯೋಮ್ನಿ ಭವನ್ತಿ ನ ಭವನ್ತಿ ಚ ।
ಬ್ರಹ್ಮಣೀದಂ ತಥಾ ವಿಶ್ವಮವಯವ್ಯುದಯಾಪ್ಯಯಾತ್ ॥೨೬॥

ಸತ್ಯಂ ಹ್ಯವಯವಃ ಪ್ರೋಕ್ತಃ ಸರ್ವಾವಯವಿನಾಮಿಹ ।
ವಿನಾರ್ಥೇನ ಪ್ರತೀಯೇರನ್ಪಟಸ್ಯೇವಾಙ್ಗ ತನ್ತವಃ ॥೨೭॥

ಅವಯವವಿಶಿಷ್ಟವಾದ ಸಮಸ್ತವಸ್ತುಗಳಲ್ಲೂ ಅವಯವವು ಸತ್ಯ ವೆಂದೇ ತಿಳಿಯಬೇಕು. ಅವಯವಗಳನ್ನು ಬಿಟ್ಟು ಅವಯವಿಯು ಬೇರೆಯಲ್ಲ. ನೂಲಿನ ಎಳೆಗಳನ್ನು ಬಿಟ್ಟು ವಸ್ತ್ರವು ಇರಲಾರದಲ್ಲವೇ? ಹಾಗೆಯೇ ಜಗತ್ತು ತನಗೆ ಕಾರಣವಾಗಿರುವ ಪರಮಾತ್ಮನಿಗಿಂತಲೂ ಬೇರೆಯಾಗಿಲ್ಲ.

ಕಾರಣ (ಸಾಮಾನ್ಯ) ಮತ್ತು ಕಾರ್ಯ (ವಿಶೇಷ)ಗಳನ್ನು ಬೇರೆ ಬೇರೆಯೆಂದು ತಿಳಿಯುವುದು ಭ್ರಮೆ. ಅವೆರಡೂ ಒಂದೇ ಆಗಿವೆ. ಏಕೆಂದರೆ : ಅವೆರಡೂ ಒಂದನ್ನೊಂದು ಆಶ್ರಯಿಸಿವೆ. ಅನ್ಯೋನ್ಯಾಶ್ರಿತವಾಗಿವೆ.

ಯತ್ಸಾಮಾನ್ಯವಿಶೇಷಾಭ್ಯಾಮುಪಲಭ್ಯೇತ ಸ ಭ್ರಮಃ ।
ಅನ್ಯೋನ್ಯಾಪಾಶ್ರಯಾತ್ಸರ್ವಮಾದ್ಯನ್ತವದವಸ್ತು ಯತ್ ॥೨೪॥

ವಿಶೇಷವಿಲ್ಲದೆ ಸಾಮಾನ್ಯಕ್ಕೆ ಸ್ಥಿತಿಯಿಲ್ಲ. ಹಾಗೆಯೇ ಸಾಮಾನ್ಯವನ್ನು ಬಿಟ್ಟು ವಿಶೇಷಕ್ಕೆ ಸ್ಥಿತಿಯಿಲ್ಲ. ಕಾರಣವಾದ ದಾರಗಳಿಲ್ಲದೆ ಕಾರ್ಯವಾದ ವಸ್ತ್ರಕ್ಕೆ ಅಸ್ತಿತ್ವವಿಲ್ಲ. ಅದಕ್ಕೆ ಕಾರ್ಯರೂಪವಾದ ವಸ್ತ್ರವಿರುವುದರಿಂದಲೇ ದಾರವನ್ನು ಕಾರಣ ಎನ್ನುತ್ತಾರೆ. ಯಾವುದಕ್ಕೆ ಆದಿ ಮತ್ತು ಅಂತ್ಯಗಳುಂಟೋ ಅದು ವಸ್ತುವೆನಿಸುತ್ತದೆ.*

ವಿಕಾರಃ ಖ್ಯಾಯಮಾನೋಽಪಿ ಪ್ರತ್ಯಗಾತ್ಮಾನಮನ್ತರಾ ।
ನ ನಿರೂಪ್ಯೋಽಸ್ತ್ಯಣುರಪಿ ಸ್ಯಾಚ್ಚೇಚ್ಚಿತ್ಸಮ ಆತ್ಮವತ್ ॥೨೫॥

ವಿಕಾರರೂಪವಾದ ಜಗತ್ತು ಅನುಭವದಲ್ಲಿ ಕಾಣುತ್ತಿದ್ದರೂ ಇದು ಇದಕ್ಕೆ ಕಾರಣನಾದ ಅಂತರಾತ್ಮನಿಗಿಂತಲೂ ಭಿನ್ನವಲ್ಲ. ಆತನಿಗಿಂತಲೂ ಇದು ಭಿನ್ನವೆಂದು ಅಣುಮಾತ್ರವೂ ನಿರೂಪಣೆಮಾಡುವುದಕ್ಕಾಗುವುದಿಲ್ಲ. ಹಾಗೆ ಇದು ಪ್ರತ್ಯೇಕವಾದುದು. ಇದಕ್ಕೆ ಪ್ರತ್ಯೇಕವಾದ ಇರುವಿಕೆಯುಂಟು ಎಂದು ಒಪ್ಪಿಕೊಂಡರೂ ಇದು ಚಿದ್ರೂಪನಾದ ಆತ್ಮನಿಗೆ ಸಮವೇ ಆಗುವುದು.**

---

*ಪರಬ್ರಹ್ಮದಲ್ಲಿ ವಾಸ್ತವವಾಗಿ ಕಾರ್ಯ-ಕಾರಣಭಾವವೂ ಇರುವುದಿಲ್ಲ. ಕಾರ್ಯ-ಕಾರಣಭಾವವು ಭ್ರಮಮೂಲವಾದುದು. ಕಾರಣವೊಂದೇ ಸತ್ಯವು. ಕಾರ್ಯ-ಕಾರಣ ಭಾವಗಳಿಗೆ ಆದಿ, ಅಂತ ಎರಡೂ ಕಂಡುಬರುವುದರಿಂದ ಇದು ಕನಸಿನಲ್ಲಿ ಕಾಣುವ ಭೇದಭಾವದಂತೆ ಅವಸ್ತುವೇ ಆಗಿದೆ. (ಶ್ರೀಧರೀಯ)

ತತ್ತ್ವಗಳು ಕಾರ್ಯಾವಸ್ಥೆಯನ್ನು ಹೊಂದಿರುವಾಗ ಅವುಗಳಲ್ಲಿ ಪ್ರಕೃತಿವಿಕಾರ ವೆನಿಸಿಕೊಂಡ ಶರೀರಕ್ಕೆ ಮಾತ್ರ ಆದ್ಯನ್ತಗಳುಂಟು. ಅದು ವಿಕಾರಿಯಾದ್ದರಿಂದ ಅವಸ್ತುವು. ಅವಿಕಾರಿಯಾದ ಪರಮಾತ್ಮನೇ ವಸ್ತುವು. (ವೀರರಾಘವೀಯ)

**ಈ ಪ್ರಪಂಚರೂಪವಾದ ವಿಕಾರವು ಕನಸಿನ ವಿಕಾರಕ್ಕೆ ಸಮನಾದುದು ಎಂಬುದ ರಲ್ಲಿ ಸಂದೇಹವಿಲ್ಲ. ಎರಡೂ ಮಾಯೆ, ಮಿಥ್ಯೆ. ಆದರೂ ಇದು ಇದಕ್ಕೆ ಅಧಿ ಷ್ಠಾನವಾಗಿರುವ ಬ್ರಹ್ಮಕ್ಕಿಂತ ಬೇರೆಯಲ್ಲ. ಆತ್ಮದಿಂದ ಬೇರೆ ಎಂದು ಅಣು ಮಾತ್ರವೂ ಇದನ್ನು ನಿರೂಪಿಸಲಾಗುವುದಿಲ್ಲ. ಆತ್ಮದಿಂದ ಬೇರೆಯಾದ ಸತ್ತೆ ಇದಕ್ಕೆ ಉಂಟು ಎಂದು ಭಾವಿಸಿದರೂ ಕೂಡ ಇದೂ ಚಿದ್ರೂಪನಾದ ಆತ್ಮನಂತೆಯೇ ಸ್ವಯಂಪ್ರಕಾಶವಾದುದು–ಅಂದ ಬಳಿಕ ಇದೂ ಆತ್ಮದಂತೆಯೇ ಏಕರೂಪವೆಂದು

ನಹಿ ಸತ್ಯಸ್ಯ ನಾನಾತ್ವಮವಿದ್ವಾನ್ಯದಿ ಮನ್ಯತೇ ।
ನಾನಾತ್ವಂ ಛಿದ್ರಯೋರ್ಯದ್ವಜ್ಜ್ಯೋತಿಷೋರ್ವಾತಯೋರಿವ ॥

ನಾನಾತ್ವವು ಸರ್ವದಾ ಸತ್ಯಸ್ವರೂಪನಾದ ಆತ್ಮನಲ್ಲಿ ಇಲ್ಲವೆಂಬುದರಲ್ಲಿ ಸಂದೇಹವಿಲ್ಲ. ಹಾಗೆ ನಾನಾತ್ವವು ಇದೆಯೆಂದು ಭಾವಿಸುವವರು ಅಜ್ಞಾನಿಗಳು. ಯಾವನಾದರೂ ಅಜ್ಞಾನಿಯು ಆತ್ಮನಲ್ಲಿ ನಾನಾತ್ವವು ಇದೆಯೆಂದು ಭಾವಿಸಿದರೆ ಅದು ಅನೇಕ ಘಟಗಳಲ್ಲಿ ಆಕಾಶ ಕಾಣುವುದನ್ನು ಕಂಡು ಅನೇಕ ಘಟಾಕಾಶಗಳಿವೆ ಎಂದು ಭಾವಿಸುವವರಂತೆ. ಅನೇಕ ಜಲಾಶಯಗಳಲ್ಲಿ ಸೂರ್ಯನನ್ನು ಕಂಡು ಅನೇಕ ಸೂರ್ಯರು ಇದ್ದಾರೆ ಎಂದು ಭಾವಿಸುವವರಂತೆ ಮತ್ತು ಒಳಗೂ ಮತ್ತು ಹೊರಗೂ ವಾಯುವು ಅನುಭವಕ್ಕೆ ಬರುವುದರಿಂದ ಒಳಗಿನ ವಾಯುವೇ ಬೇರೆ. ಹೊರಗಿನ ವಾಯುವೇ ಬೇರೆ ಎಂದು ಭಾವಿಸುವವರಂತೆ ಅಜ್ಞಾನಿಗಳಪ್ಪಾ.

ಸಿದ್ಧವಾಗುವುದು. ಪರಮಾರ್ಥಸತ್ಯದಲ್ಲಿ ನಾನಾತ್ವವಿಲ್ಲವೆಂಬುದು ನಿಸ್ಸಂದೇಹ. ಅದರಲ್ಲಿ ನಾನಾತ್ವವನ್ನು ಸ್ವೀಕರಿಸಿದರೆ ಮಹಾಕಾಶ–ಘಟಾಕಾಶಗಳಿಗೆ, ಆಕಾಶಸ್ಥ ಸೂರ್ಯ ಮತ್ತು ಜಲಗಳಲ್ಲಿ ಪ್ರತಿಬಿಂಬಿತನಾದ ಸೂರ್ಯ, ಒಳಗಿನ ವಾಯು ಮತ್ತು ಹೊರಗಿನ ವಾಯುಗಳಿಗೆ ಭೇದವನ್ನು ಸ್ವೀಕರಿಸಿದಂತೆ ಅಜ್ಞಾನದ ವಿಲಾಸವಾಗುವುದು.

(ಶ್ರೀಧರೀಯ)

ದೇಹದಲ್ಲಿ ಆತ್ಮಾಭಿಮಾನವುಳ್ಳವರಿಗೆ ಜಾತಿ, ಗುಣ, ಕ್ರಿಯೆ, ಜನ್ಮ, ವೃದ್ಧಿ–ಮುಂತಾದ ದೇಹಗತವಿಕಾರಗಳು ಆತ್ಮನಲ್ಲಿರುವಂತೆ ತೋರುವುವು. ಆದರೆ ಅವು ದೇಹಕ್ಕೇ ಹೊರತು ಪ್ರತ್ಯಗಾತ್ಮನಿಗೆ ಕಿಂಚಿತ್ತೂ ಇಲ್ಲವು. ಆತ್ಮಕ್ಕೆ ಯಾವ ಬಗೆಯ ವಿಕಾರವನ್ನೂ ನಿರೂಪಿಸಲಾಗದು. ಅದಕ್ಕೆ ಅಣುಮಾತ್ರವಾದರೂ ವಿಕಾರ ಇರುವುದಾದರೆ ಮುಕ್ತಾತ್ಮನೂ ಅಚೇತನದಂತೆ ಆಗಬೇಕಾಗುತ್ತದೆ. ಆದರೆ ಶುದ್ಧಾತ್ಮಸ್ವರೂಪದಲ್ಲಿ ದೇವ-ಮನುಷ್ಯಾದಿ ನಾನಾತ್ವವು ಸ್ವಲ್ಪವೂ ಇಲ್ಲ. ಅದಕ್ಕೆ ನಾನಾತ್ವವು ಇದೆಯೆಂದು ತಿಳಿಯುವವನು ದೇಹದಲ್ಲಿ ಆತ್ಮಾಭಿಮಾನವುಳ್ಳ ಮೂಢನೇ ಸರಿ. ಆತ್ಮಜ್ಞನಾದ ವಿದ್ವಾಂಸನೆನಿಸನು. ಆಕಾಶ, ಸೂರ್ಯ ಮತ್ತು ವಾಯುಗಳು ಎಲ್ಲೆಲ್ಲಿಯೂ ಒಂದೇ ಆಗಿದ್ದರೂ ಅವು ಯಾವ ಸ್ಥಳದಲ್ಲಿ ವ್ಯಾಪಿಸಿವೆಯೋ ಆ ಸ್ಥಳಕ್ಕೆ ತಕ್ಕಂತೆ ಘಟಾಕಾಶ, ನದೀಗತ ಸೂರ್ಯ, ಬಾಹ್ಯವಾಯು ಎಂದು ಮೊದಲಾಗಿ ಹೊರಗೆ ವ್ಯವಹರಿಸುತ್ತೇವೆ. ಆದರೆ ವಾಸ್ತವವಾಗಿ ಅವುಗಳಿಗೆ ನಾನಾತ್ವವಿಲ್ಲ. ಹಾಗೆಯೇ ದೇಹಾಂತರಸಂಬಂಧದಿಂದ ಆತ್ಮಕ್ಕೆ ನಾನಾತ್ವವು ತೋರುವುದೇ ಹೊರತು ಆತ್ಮಕ್ಕೆ ಸಹಜವಾಗಿಯೂ ನಾನಾತ್ವವೆಂಬುದಿಲ್ಲ. (ವೀರರಾಘವೀಯ)

ಯಥಾ ಹಿರಣ್ಯಂ ಬಹುಧಾ ಸಮೀಯತೇ
ನೃಭಿಃ ಕ್ರಿಯಾಭಿರ್ವ್ಯವಹಾರವರ್ತ್ಮಸು ।
ಏವಂ ವಚೋಭಿರ್ಭಗವಾನಧೋಕ್ಷಜೋ
ವ್ಯಾಖ್ಯಾಯತೇ ಲೌಕಿಕವೈದಿಕೈರ್ಜನೈಃ ॥೩೧॥

ಬಂಗಾರವು ಒಂದೇ ಆಗಿದ್ದರೂ ಮನುಷ್ಯರು ವ್ಯವಹಾರದಲ್ಲಿ ಬೇರೆ ಬೇರೆ ಪ್ರಯೋಜನಗಳಿಗಾಗಿ ಅದಕ್ಕೆ ರೂಪಾಂತರಗಳನ್ನು ಕೊಟ್ಟಾಗ ಅದು ಲೋಕದಲ್ಲಿ ಕಿರೀಟ-ಕುಂಡಲ-ತಟ್ಟೆ-ಬಟ್ಟಲು ಇತ್ಯಾದಿಯಾಗಿ ನಾನಾ ನಾಮಧೇಯಗಳಿಂದ ಕರೆಯಲ್ಪಡುವುದಲ್ಲವೇ? ಅದೇ ರೀತಿಯಲ್ಲೇ ಅತೀಂದ್ರಿಯನಾದ ಪರಮಾತ್ಮನಾರಾಯಣನು ಒಬ್ಬನೇ ಆದರೂ ಲೌಕಿಕವಾಣಿ ಮತ್ತು ವೈದಿಕವಾಣಿಗಳಿಂದ ಅನೇಕ ಮಾತುಗಳಲ್ಲಿ ಹೇಳಲ್ಪಡುತ್ತಾನೆ.*

ಯಥಾ ಘನೋಽರ್ಕಪ್ರಭವೋಽರ್ಕದರ್ಶಿತೋ
ಹ್ಯರ್ಕಾಂಶಭೂತಸ್ಯ ಚ ಚಕ್ಷುಷಸ್ತಮಃ ।
ಏವಂ ತ್ವಹಂ ಬ್ರಹ್ಮಗುಣಸ್ತದೀಕ್ಷಿತೋ
ಬ್ರಹ್ಮಾಂಶಕಸ್ಯಾತ್ಮನ ಆತ್ಮಬನ್ಧನಃ ॥೩೨॥

ಮೋಡವು ಸೂರ್ಯನಿಂದ ಉತ್ಪನ್ನವಾಗಿ ಸೂರ್ಯನಿಂದಲೇ ಪ್ರಕಾಶಿತವಾಗುತ್ತದೆ. ಆದರೂ ಅದು ಸೂರ್ಯನ ಅಂಶವೇ ಆಗಿರುವ ಕಣ್ಣುಗಳಿಗೆ ಸೂರ್ಯನನ್ನು ಕಾಣುವುದಕ್ಕೆ ಅಡ್ಡಿಯಾಗುವುದಿಲ್ಲವೇ? ಹಾಗೆಯೇ ಅಹಂಕಾರವೂ ಪರಬ್ರಹ್ಮನಿಂದಲೇ ಉಂಟಾಗಿ ಬ್ರಹ್ಮದಿಂದಲೇ ಪ್ರಕಾಶ ಪಡೆಯುತ್ತದೆ. ಆದರೂ ಅದು ಬ್ರಹ್ಮನ ಅಂಶವೇ ಆಗಿರುವ ಜೀವಕ್ಕೆ ಬ್ರಹ್ಮಸ್ವರೂಪದ ಸಾಕ್ಷಾತ್ಕಾರವಾಗುವುದಕ್ಕೆ ಅಡ್ಡಿಮಾಡುವುದು.

---

*ಸುವರ್ಣದ ಆಭರಣ-ಪಾತ್ರೆಗಳ ದೃಷ್ಟಾಂತದಿಂದ ಒಬ್ಬನೇ ಪರಮಾತ್ಮನು ನಾನಾ ರೂಪಗಳಿಗೆ ತಕ್ಕಂತೆ ನಾನಾನಾಮಧೇಯಗಳಿಂದ ಲೌಕಿಕ ಮತ್ತು ವೈದಿಕವಾಕ್ಯಗಳಿಂದ ಕರೆಯಲ್ಪಡುತ್ತಾನೆ–ಎಂದು ಇಲ್ಲಿ ಹೇಳಿದೆ. ಹೀಗೆ ಭಗವಂತನನ್ನು ಕರೆಯುವ ಲೌಕಿಕವಾಕ್ಯಕ್ಕೆ ಉದಾಹರಣೆ :

ಕಟಕಮಧಿಕುಟಕರ್ಣಿಕಾದಿಭೇದೈಃ ಕನಕಮಭೇದಮಪೀಷ್ಯತೇ ಯಥೈಕಮ್ ।
ಸುರನರಪಶುಪಾದಿಭೇದೈಃ ಹರಿರಜಿತೋಽಪಿ ಉದೀರ್ಯತೇ ತಥೈಕಃ ॥

ಘನೋ ಯದಾರ್ಕಪ್ರಭವೋ ವಿದೀರ್ಯತೇ
ಚಕ್ಷುಃ ಸ್ವರೂಪಂ ರವಿಮೀಕ್ಷತೇ ತದಾ ।
ಯದಾ ಹ್ಯಹಙ್ಕಾರ ಉಪಾಧಿರಾತ್ಮನೋ
ಜಿಜ್ಞಾಸಯಾ ನಶ್ಯತಿ ತರ್ಹ್ಯನುಸ್ಮರೇತ್ ॥೩೩॥

ಸೂರ್ಯನಿಂದುಂಟಾದ ಮೋಡವು ಚದುರಿಹೋದಾಗ ಕಣ್ಣು ತನ್ನ ಪ್ರಕಾಶಕ್ಕೆ ಮೂಲವಾಗಿರುವ ಸೂರ್ಯನ ಪ್ರಕಾಶವನ್ನು ನೋಡಲು ಸಮರ್ಥವಾಗುತ್ತದೆ. ಹಾಗೆಯೇ ಜೀವದ ಹೃದಯದಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸುವ ಆಸೆ ಉಂಟಾದಾಗ ಆತ್ಮದ ಉಪಾಧಿಯಾಗಿರುವ ಅಹಂಕಾರವು ನಷ್ಟವಾಗಿಬಿಡುವುದು ಮತ್ತು ಜೀವಕ್ಕೆ ಪರಮಾತ್ಮನನ್ನು ಸಾಕ್ಷಾತ್ಕರಿಸುವ ಸಾಮರ್ಥ್ಯವುಂಟಾಗುವುದು.

ಯದೈವಮೇತೇನ ವಿವೇಕಹೇತಿನಾ
ಮಾಯಾಮಯಾಹಙ್ಕರಣಾತ್ಮಬನ್ಧನಮ್ ।
ಛಿತ್ತ್ವಾಚ್ಯುತಾತ್ಮಾನುಭವೋಽವತಿಷ್ಠತೇ
ತಮಾಹುರಾತ್ಯನ್ತಿಕಮಙ್ಗ ಸಂಪ್ಲವಮ್ ॥೩೪॥

ಪ್ರಿಯಪರೀಕ್ಷಿತ! ಜೀವನು ವಿವೇಕವೆಂಬ ಶಸ್ತ್ರದಿಂದ ಮಾಯಾಮಯವಾದ ಅಹಂಕಾರವೆಂಬ ಕಟ್ಟನ್ನು ಕತ್ತರಿಸಿಹಾಕಿದಾಗ ಆತನು ಅಚ್ಯುತನಾದ ಪರಮಾತ್ಮನ ಅನುಭವದಲ್ಲಿ ನೆಲೆಗೊಳ್ಳುತ್ತಾನೆ. ಜೀವನ ಈ ಬಂಧನಮುಕ್ತವಾದ ಪರಮಾರ್ಥಸ್ಥಿತಿಯನ್ನೇ ಆತ್ಯನ್ತಿಕ ಪ್ರಳಯ

ವೈದಿಕವಚನಕ್ಕೆ ಉದಾಹರಣೆ:

ಯಥಾ ಸೋಮ್ಯೈಕೇನ ಲೋಹಮಣಿನಾ ಸರ್ವಂ ಲೋಹಮಯಮ್ ।
ವಿಜ್ಞಾತಂ ಸ್ಯಾದ್ವಾಚಾರಂಭಣಂ ವಿಕಾರೋ ನಾಮಧೇಯಂ ಲೋಹಮಿತ್ಯೇವ ಸತ್ಯಮ್॥ (ಛಾಂದೋಗ್ಯೋಪನಿಷತ್)

ಈ ದೃಷ್ಟಾಂತಗಳಂತೆ ತೋಳ್ಬಳೆ ಕಿರೀಟಾದಿಗಳು ತಮಗೆ ಕಾರಣವಾದ ಬಂಗಾರಕ್ಕಿಂತ ಅಭಿನ್ನವಾಗಿರುವಂತೆ ಜಗತ್ತೂ ಬ್ರಹ್ಮಕ್ಕಿಂತ ಅಭಿನ್ನವೆಂದು ಅಭಿಪ್ರಾಯವು. ನಿರ್ವಿಕಾರನಾದ ಭಗವಂತನಿಗೆ ಜಗದ್ರೂಪ ವಿಕಾರವನ್ನು ಹೇಳಬಹುದೇ? ಎಂದರೆ ಅವನ ಉಪಾಧಿಯಾಗಿರುವ ಅಥವಾ ಅವನ ಶರೀರಭೂತವಾಗಿರುವ ಜಗದ್ವಿಷಯದಲ್ಲಿ ವಿಕಾರವೇ ಹೊರತು ಆತನ ಸ್ವರೂಪದಲ್ಲಲ್ಲ.

ವೆಂದು ಕರೆಯುತ್ತಾರೆ. (ಅಜ್ಞಾನದ ಉಪಾಧಿಯು ಅಥವಾ ದೇಹೋಪಾಧಿಯು ಕಳೆದುಹೋಗುವುದೇ ಆತ್ಯನ್ತಿಕಪ್ರಳಯವು.) (ಶ್ಲೋಕ ೩೧-೩೪)

ಎಲೈ ಪರಂತಪನೇ! ಬ್ರಹ್ಮದೇವರಿಂದ ಹಿಡಿದು ಹುಲ್ಲುಕಡ್ಡಿಯವರೆಗಿನ ಯಾವ ಯಾವ ಪ್ರಾಣಿಗಳುಂಟೋ ಅವೆಲ್ಲಕ್ಕೂ ಯಾವಾಗಲೂ ಉತ್ಪತ್ತಿ ಮತ್ತು ಪ್ರಳಯಗಳು ಇದ್ದೇ ಇರುತ್ತವೆ–ಎಂದು ತತ್ತ್ವಸೂಕ್ಷ್ಮವನ್ನರಿತ ಮಹಾತ್ಮರು ಹೇಳುತ್ತಾರೆ. ಈ ಉತ್ಪತ್ತಿ ಮತ್ತು ಪ್ರಳಯಗಳು ಸಂಸಾರಪ್ರವಾಹದಲ್ಲಿ ನಿತ್ಯವಾಗಿರುತ್ತವೆ. ಸ್ಥೂಲದೃಷ್ಟಿಯುಳ್ಳವರು ಇದನ್ನು ತಿಳಿಯಲಾರರು. ಪ್ರಪಂಚದಲ್ಲಿ ಈ ಪರಿಣಾಮಶೀಲವಾದ ಪದಾರ್ಥಗಳು ಅವಸ್ಥೆಗಳು ಕಾಲಪ್ರವಾಹದ ವೇಗಾತಿಶಯದಿಂದ ಸದಾ ಒಯ್ಯಲ್ಪಡುತ್ತಿರುತ್ತವೆ. ಪ್ರತಿಕ್ಷಣದಲ್ಲೂ ಇವುಗಳ ಉತ್ಪತ್ತಿ ಮತ್ತು ಲಯಗಳು ಆಗುತ್ತಿರುತ್ತವೆ. ಆದಿ-ಅಂತ್ಯಗಳಿಲ್ಲದೇ ನಡೆಯುತ್ತಿರುವ ಈ ಅವಸ್ಥಾಭೇದಗಳು ಸ್ಪಷ್ಟವಾಗಿ ನಮ್ಮ ಗಮನಕ್ಕೆ ಬರುವುದಿಲ್ಲ. ಆಕಾಶದಲ್ಲಿ ನಕ್ಷತ್ರಗಳು ಸದಾ ಚಲಿಸುತ್ತಿದ್ದರೂ ಅವುಗಳ ಗತಿಯು ನಮಗೆ ಸ್ಪಷ್ಟವಾಗಿ ತಿಳಿಯುವುದಿಲ್ಲ. ಹಾಗೆಯೇ ಭೂತಗಳಲ್ಲಿ ಪ್ರತಿಕ್ಷಣವೂ ನಡೆಯುತ್ತಿರುವ ಈ ಅವಸ್ಥೆಗಳು ನಮ್ಮ ದೃಷ್ಟಿಗೆ ಗೋಚರವಾಗುವುದಿಲ್ಲ.

ಮಹಾರಾಜ! ನಾನು ನಿನಗೆ ಹೀಗೆ ಪ್ರಳಯದಲ್ಲಿರುವ ನಿತ್ಯಪ್ರಳಯ, ನೈಮಿತ್ತಿಕಪ್ರಳಯ, ಪ್ರಾಕೃತಿಕಪ್ರಳಯ ಮತ್ತು ಆತ್ಯನ್ತಿಕಪ್ರಳಯಗಳೆಂಬ ನಾಲ್ಕು ಪ್ರಕಾರಗಳನ್ನು ವರ್ಣಿಸಿದ್ದೇನೆ. ಕಾಲದ ಸೂಕ್ಷ್ಮವಾದ ಗತಿಯು ಹೀಗೆಯೇ ಇರುವುದು.

ಎಲೈ ಕುರುಶ್ರೇಷ್ಠನೇ! ಜಗತ್ತಿನ ಸೃಷ್ಟಿಕರ್ತನೂ ಸಮಸ್ತಪ್ರಾಣಿಗಳಿಗೂ ಮತ್ತು ಶಕ್ತಿಗಳಿಗೂ ಆಶ್ರಯನೂ ಆಗಿರುವ ಆ ನಾರಾಯಣನ ಲೀಲಾಚರಿತ್ರಗಳನ್ನು ನಿನಗೆ ಸಂಕ್ಷೇಪವಾಗಿ ಮಾತ್ರ ತಿಳಿಸಿದ್ದೇನೆ. ಅವುಗಳನ್ನು ಪೂರ್ಣವಾಗಿ ಬ್ರಹ್ಮದೇವರಿಗೂ ತಿಳಿಸಲು ಶಕ್ಯವಿಲ್ಲ. ಬಗೆ-ಬಗೆಯ ದುಃಖಗಳೆಂಬ ಕಾಡುಗಿಚ್ಚಿನ ಬಿರುಬೇನೆಯಿಂದ ಪೀಡಿತರಾಗಿ ದಾಟಲು ಅತಿಕಷ್ಟವಾದ ಸಂಸಾರಸಾಗರವನ್ನು ದಾಟಲು ಬಯಸುವ ಜೀವರುಗಳಿಗೆ ಭಗವಂತನಾದ ಪುರುಷೋತ್ತಮನ ಲೀಲಾಚರಿತ್ರಗಳ ರಸವನ್ನು ಸೇವಿಸುವುದಕ್ಕಿಂತ ಬೇರೆ ಉಪಾಯವಿಲ್ಲ.

ನಾನು ನಿನಗೆ ಹೇಳಿದ ಈ ಶ್ರೀಮದ್ಭಾಗವತವೆಂಬ ಪುರಾಣಸಂಹಿತೆಯನ್ನು ಸನಾತನಋಷಿಯಾದ ನಾರಾಯಣಮಹರ್ಷಿಯು ದೇವರ್ಷಿನಾರದರಿಗೆ ಉಪದೇಶಮಾಡಿದನು. ಆ ದೇವರ್ಷಿಗಳು ಅದನ್ನು ನನ್ನ ತೀರ್ಥರೂಪರಾದ ಕೃಷ್ಣದ್ವೈಪಾಯನಮಹರ್ಷಿಗಳಿಗೆ ಉಪದೇಶಮಾಡಿದರು. ಬದರಿಕಾಶ್ರಮವಿಹಾರಿಗಳಾದ ಆ ನನ್ನ ತಂದೆ ಕೃಷ್ಣದ್ವೈಪಾಯನ ಭಗವಂತರು ಪ್ರಸನ್ನಚಿತ್ತರಾಗಿ ಈ ವೇದಸದೃಶವಾದ ಶ್ರೀಭಾಗವತಸಂಹಿತೆಯನ್ನು ನನಗೆ ಉಪದೇಶಿಸಿದರು. ಎಲೈ ಕುರುಪುಂಗವನೇ! ಮುಂದೆ ನೈಮಿಷಾರಣ್ಯದಲ್ಲಿ ಒಂದು ದೊಡ್ಡ ಸತ್ರಯಾಗವು ನಡೆಯುತ್ತಿರುವಾಗ ಶೌನಕಾದಿ ಮಹರ್ಷಿಗಳ ಪ್ರಾರ್ಥನೆಯ ಮೇರೆಗೆ ಸೂತಪುರಾಣಿಕರು ಈ ಸಂಹಿತೆಯನ್ನೇ ಅವರಿಗೆ ಉಪದೇಶಮಾಡುವರು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದ್ವಾದಶಸ್ಕಂಧದ ೪ನೆಯ ಅಧ್ಯಾಯವು ಮುಗಿಯಿತು.

ದ್ವಾದಶಸ್ಕಂಧ ೫ನೆಯ ಅಧ್ಯಾಯ

ಶ್ರೀಶುಕಮುನಿಗಳ ಕಟ್ಟಕಡೆಯ ಉಪದೇಶ.: ಈ ಸಂಹಿತೆಯಲಿ ್ಲ ಪ್ರಧಾನವಾಗಿ ಪ್ರತಿಪಾದ್ಯವಾಗಿರುವ ವಿಷಯಗಳು

ಶ್ರೀಶುಕಮಹರ್ಷಿಗಳು ಹೇಳುತ್ತಾರೆ :

ಅತ್ರಾನುವರ್ಣ್ಯತೇಽಭೀಕ್ಷ್ಣಂ ವಿಶ್ವಾತ್ಮಾ ಭಗವಾನ್ ಹರಿಃ ।
ಯಸ್ಯ ಪ್ರಸಾದಜೋ ಬ್ರಹ್ಮಾ ರುದ್ರಃ ಕ್ರೋಧಸಮುದ್ಭವಃ ॥೧॥

"ಓ ನೃಪಶಿರೋಮಣಿಯೇ! ವಿಶ್ವಾತ್ಮಕನಾಗಿರುವ ಭಗವಂತನಾದ ಶ್ರೀಹರಿಯ ಗುಣಗಳನ್ನೂ ಲೀಲಾಚರಿತ್ರೆಗಳನ್ನೂ ವರ್ಣಿಸುವುದೇ ಈ ಭಾಗವತಸಂಹಿತೆಯ ಪ್ರಧಾನವಿಷಯವು. ಯಾವನ ಪ್ರಸನ್ನತೆಯಿಂದ ಬ್ರಹ್ಮದೇವರೂ ಮತ್ತು ಕ್ರೋಧದಿಂದ ರುದ್ರದೇವರೂ ಜನಿಸಿದರೋ ಅಂತಹ ಸರ್ವೇಶ್ವರನಾದ ಶ್ರೀಹರಿಯು ಸದಾಧ್ಯೇಯನು–ಎಂಬುದನ್ನು ಮನವರಿಕೆ ಮಾಡಿಕೊಡುವುದಕ್ಕಾಗಿ ಆತನ ಗುಣಚರಿತ್ರೆಗಳನ್ನೇ ಇಲ್ಲಿ ಮತ್ತೆ ಮತ್ತೆ ಸಂಕೀರ್ತನಮಾಡಿದ್ದೇನೆ.

ಈಗ ನೀನು, ಋಷಿಶಾಪದಿಂದ ಶೀಘ್ರದಲ್ಲೇ ಸಾಯಬೇಕಲ್ಲಾ–ಎಂದು ಮರಣಕ್ಕೆ ಹೆದರಬೇಡ. ಸಾವಿಗೆ ಹೆದರುವುದು ಪಶುಬುದ್ಧಿಯು. ಆ ಅವಿವೇಕವನ್ನು ತ್ಯಜಿಸು. ಏಕೆಂದರೆ ಮರಣಕ್ಕೆ ಈಡಾಗುವುದು ನಿನ್ನ ದೇಹವೇ ಹೊರತು ನೀನಲ್ಲ ; ನಿನ್ನ ಆತ್ಮವಲ್ಲ. ದೇಹದಂತೆ ನೀನು ಮೊದಲು ಇಲ್ಲದೇ ಹೊಸದಾಗಿ ಹುಟ್ಟಿದವನಲ್ಲ. ಈ ಶರೀರವು ಬಿದ್ದುಹೋಗುವುದರಿಂದ ನೀನು ಸಾಯುವವನೂ ಅಲ್ಲ. ಈಗ ಹುಟ್ಟಿರುವ ನೀನೇ ಮುಂದೆ ಬೀಜದ ಮೊಳಕೆಯಂತೆ ಪುತ್ರ-ಪೌತ್ರಾದಿ ರೂಪದಲ್ಲಿ ತಿರುಗಿ ಹುಟ್ಟುವೆಯೆಂಬುದೂ ನಿಜವಲ್ಲ.* ಕಟ್ಟಿಗೆಯಲ್ಲಿರುವ ಬೆಂಕಿಯು ಆ ಕಟ್ಟಿಗೆಗಿಂತಲೂ ಬೇರೆಯಲ್ಲವೇ? ಹಾಗೆಯೇ ನೀನೂ ಈ ದೇಹಕ್ಕಿಂತಲೂ ಬೇರೆಯಾಗಿರುವೆ.

ಸ್ವಪ್ನೇ ಯಥಾ ಶಿರಶ್ಛೇದಂ ಪಞ್ಚತ್ವಾದ್ಯಾತ್ಮನಃ ಸ್ವಯಮ್ ।
ಯಸ್ಮಾತ್ಪಶ್ಯತಿ ದೇಹಸ್ಯ ತತ ಆತ್ಮಾ ಹ್ಯಜೋಽಮರಃ ॥೪॥

ಕನಸಿನಲ್ಲಿ ಮನುಷ್ಯನು ತನ್ನ ತಲೆಯು ಕತ್ತರಿಸಿ ಹೋಗಿ ಸತ್ತು ಹೋದಂತೆ ; ತನ್ನನ್ನು ಹೊತ್ತುಕೊಂಡು ಹೋದಂತೆ–ಇತ್ಯಾದಿಯಾಗಿ ತಾನೇ ಕೆಲವೊಮ್ಮೆ ಕಂಡರೂ ಆತನು ಆ ಸ್ವಪ್ನಶರೀರಕ್ಕಿಂತಲೂ ಬೇರೆಯಲ್ಲವೇ? ಹಾಗೆಯೇ ಎಚ್ಚರದ ಅವಸ್ಥೆಯಲ್ಲಿಯೂ ಕೂಡ ತಾನು ಮರಣಾದಿಗಳನ್ನು ಹೊಂದುವ ದೇಹಕ್ಕಿಂತಲೂ ಬೇರೆಯಾದವನು–ಎಂದು ತಿಳಿಯಬೇಕು. ಆತ್ಮನಿಗೆ ಹುಟ್ಟು-ಸಾವುಗಳಿಲ್ಲ. ಆತನು ಅಜನೂ ಅಮರನೂ ಆಗಿದ್ದಾನೆ.

ಘಟೇ ಭಿನ್ನೇ ಯಥಾಽಕಾಶ ಆಕಾಶಃ ಸ್ಯಾದ್ಯಥಾ ಪುರಾ ।
ಏವಂ ದೇಹೇ ಮೃತೇ ಜೀವೋ ಬ್ರಹ್ಮ ಸಮ್ಪದ್ಯತೇ ಪುನಃ ॥೫॥

ಮಡಕೆಯು ಒಡೆದುಹೋದಮೇಲೆ ಅದರೊಳಗಿನ ಘಟಾಕಾಶವು ಮೊದಲಿನಂತೆ ಆಕಾಶದಲ್ಲಿ ಸೇರಿಹೋಯಿತೆಂದು ಅನ್ನಿಸುತ್ತದೆ. ಆದರೆ ಆಕಾಶವು ಎಂದಿನಂತೆಯೇ ಅಖಂಡವಾಗಿಯೇ ಇತ್ತು ಮತ್ತು ಇರುವುದು.

---

*'ಆತ್ಮಾ ವೈ ಪುತ್ರನಾಮಾಸಿ' –ಎಂಬ ಶ್ರುತಿಯಂತೆ 'ಪುತ್ರನೇ ಆತ್ಮನು'–ಎಂದು ವಾದಿಸುವವರನ್ನು ಇಲ್ಲಿ ಖಂಡನೆಮಾಡಿದೆ.

ಹಾಗೆಯೇ ದೇಹವು ನಶಿಸಿಹೋದ ಮೇಲೆ ದೇಹದಲ್ಲಿದ್ದ ಜೀವನೂ ಕೂಡ ಭಗವದುಪಾಸನೆಯಿಂದ (ಪ್ರಕೃತಿಯ ಸಂಬಂಧವು ಕಳೆದುಹೋದ ಮೇಲೆ) ಪರಮಾತ್ಮನೊಡನೆ ಸೇರಿಕೊಳ್ಳುತ್ತಾನೆ. (ವಾಸ್ತವವಾಗಿ ದೇವನ ಅಂಶವಾದ ಜೀವನು ಮೊದಲೂ ದೇವನೊಡನೆ ಸೇರಿಯೇ ಇದ್ದವನು ; ಮತ್ತು ಈಗಲೂ ಇರುವವನು ; ಮುಂದೆಯೂ ಇರುವವನು.)

ಮನಃ ಸೃಜತಿ ವೈ ದೇಹಾನ್ಗುಣಾನ್ ಕರ್ಮಾಣಿ ಚಾತ್ಮನಃ ।
ತನ್ಮನಃ ಸೃಜತೇ ಮಾಯಾ ತತೋ ಜೀವಸ್ಯ ಸಂಸೃತಿಃ ॥೬॥

ಮನಸ್ಸೇ ಜೀವನಿಗೆ ದೇಹಗಳನ್ನೂ ಗುಣಕರ್ಮಗಳನ್ನೂ ತಂದು ಕೊಡುವುದು. ಆ ಮನಸ್ಸನ್ನು ಸೃಷ್ಟಿಸುವುದು ಮಾಯೆ. ಜೀವನಿಗೆ ಸಂಸಾರವು ಉಂಟಾಗುವುದಕ್ಕೆ ಈ ಮಾಯೆಯೇ ಕಾರಣವು.

ಸ್ನೇಹಾಧಿಷ್ಠಾನವರ್ತ್ಯಗ್ನಿಸಂಯೋಗೋ ಯಾವದೀಯತೇ ।
ತತೋ ದೀಪಸ್ಯ ದೀಪತ್ವಮೇವಂ ದೇಹಕೃತೋ ಭವಃ ।
ರಜಸ್ಸತ್ತ್ವತಮೋವೃತ್ತ್ಯಾ ಜಾಯತೇಽಥ ವಿನಶ್ಯತಿ ॥೭॥

ಎಣ್ಣೆ, ಎಣ್ಣೆಯ ಪಾತ್ರೆ, ಬತ್ತಿ ಮತ್ತು ಇವುಗಳೊಡನೆ ಅಗ್ನಿಯ ಸೇರುವೆ ಉಂಟಾದಾಗ ಮಾತ್ರವೇ ದೀಪವು ಉರಿಯುವುದಲ್ಲವೇ? ಅದರಂತೆಯೇ ಸಂಸಾರವೂ ಕೂಡ ಕರ್ಮಗಳಿಂದ ಆರಬ್ಧವಾದ ದೇಹ, ಇಂದ್ರಿಯ, ಮನಸ್ಸು ಮುಂತಾದುವುಗಳ ಕೂಟವು ಇರುವವರೆಗೆ ಮಾತ್ರ ಜ್ವಲಿಸುತ್ತಿರುವುದು. ಅಲ್ಲಿಯವರೆಗೆ ಮಾತ್ರ ಹುಟ್ಟು-ಸಾವುಗಳ ತಿರುಗು-ಚಕ್ರವಾದ ಸಂಸಾರದಲ್ಲಿ ಅಲೆದಾಡುತ್ತಿರಬೇಕಾಗುವುದು. ತ್ರಿಗುಣಗಳ ವೃತ್ತಿಗಳಿಂದ ಜೀವನಿಗೆ ಹುಟ್ಟು-ಸಾವುಗಳು ಉಂಟಾಗುವುವು.

ನ ತತ್ರಾತ್ಮಾ ಸ್ವಯಂಜ್ಯೋತಿರ್ಯೋ ವ್ಯಕ್ತಾವ್ಯಕ್ತಯೋಃ ಪರಃ ।
ಆಕಾಶ ಇವ ಚಾಧಾರೋ ಧ್ರುವೋಽನನ್ತೋಪಮಸ್ತತಃ ॥೮॥

ತ್ರಿಗುಣಗಳ ಸಂಯೋಗದಿಂದಲೇ ಜೀವನಿಗೆ ಜನನ-ಮರಣಗಳು. ಅವು ಆತ್ಮನಿಗೆ ಸ್ವತಸ್ಸಿದ್ಧವಾದುವುಗಳಲ್ಲ. ಆತ್ಮವು ವ್ಯಕ್ತಪ್ರಕೃತಿ ಮತ್ತು ಅವ್ಯಕ್ತವಾದ ಮೂಲಪ್ರಕೃತಿ–ಇವೆರಡಕ್ಕಿಂತಲೂ ಬೇರೆಯಾದುದು. ಅವೆರಡಕ್ಕಿಂತಲೂ ವಿಜಾತೀಯವಾದುದು. ಆದುದರಿಂದ ಅದು ಸ್ವಯಂ

ಜ್ಯೋತಿ, ಸ್ವಯಂಪ್ರಕಾಶ. ಸಂಸಾರವು ನಾಶಹೊಂದಿದರೂ ಅದು ಅಳಿಯುವುದಿಲ್ಲ. ಅದು ಆಕಾಶದಂತೆ ಎಲ್ಲಕ್ಕೂ ಆಧಾರವಾದುದು. ಆಕಾಶವು ಘಟದೊಳಗೆ ಸೇರಿದ್ದರೂ ಅದು ಘಟವೆಂಬ ಉಪಾಧಿಯಿಂದ ಬೇರೆಯಾದುದು. ಹಾಗೆಯೇ ಆತ್ಮವು ದೇಹದೊಳಗೆ ಇದ್ದರೂ ದೇಹದಿಂದ ಬೇರೆಯಾದುದು ಮತ್ತು ದೇಹವನ್ನು ಧರಿಸಿರುವುದು. ಆಕಾಶದಂತೆ ಅನಂತವಾದುದು. ಅವಿಕಾರಿಯಾದುದು. ಅಂತರಹಿತವಾದ ಅದಕ್ಕೆ ಅನಂತವೇ ಹೋಲಿಕೆಯೇ ಹೊರತು ಬೇರಾವ ಸಾದೃಶ್ಯವೂ ಅದಕ್ಕೆ ಇಲ್ಲ.

ಏವಮಾತ್ಮಾನಮಾತ್ಮಸ್ಥಮಾತ್ಮನೈವಾಮೃಶ ಪ್ರಭೋ ।
ಬುದ್ಧ್ಯಾನುಮಾನಗರ್ಭಿಣ್ಯಾ ವಾಸುದೇವಾನುಚಿನ್ತಯಾ ॥೯॥

ಹೀಗೆ ದೇಹದೊಳಗಿರುವ ಆತ್ಮನನ್ನು ನಿನ್ನಿಂದಲೇ ನೀನು ಬುದ್ಧಿಯಿಂದ ವಿಚಾರಮಾಡಿ ತಿಳಿದುಕೊ. ವಿಶುದ್ಧವೂ ವಿವೇಕಪೂರ್ಣವೂ ಆದ ಬುದ್ಧಿಯನ್ನು ವಾಸುದೇವನ ಧ್ಯಾನದಿಂದ ತುಂಬಿಕೊಂಡು ಅದರಿಂದ ಆತ್ಮಸ್ವರೂಪವನ್ನು ನಿನ್ನೊಳಗೇ ನೀನು ಕಂಡುಕೋ.

ಚೋದಿತೋ ವಿಪ್ರವಾಕ್ಯೇನ ನ ತ್ವಾಂ ಧಕ್ಷ್ಯತಿ ತಕ್ಷಕಃ ।
ಮೃತ್ಯವೋ ನೋಪಧಕ್ಷ್ಯನ್ತಿ ಮೃತ್ಯೂನಾಂ ಮೃತ್ಯುಮೀಶ್ವರಮ್ ॥

ಮೇಲೆ ಹೇಳಿದಂತೆ ನೀನು ವಿವೇಕ ಮತ್ತು ಭಗವದ್ಧ್ಯಾನಗಳಿಂದ ದೃಢಮನಸ್ಸುಳ್ಳವನಾಗಿದ್ದರೆ, ಸಾವು ನಿನ್ನ ಬಳಿಗೆ ಸುಳಿಯದು. ತಕ್ಷಕನು ಬ್ರಾಹ್ಮಣಶಾಪದಿಂದ ನಿನ್ನ ಬಳಿಗೆ ಬಂದರೂ ನಿನ್ನನ್ನು ದಹಿಸಲಾರನು. ವಾಸುದೇವನಾದರೋ ಮೃತ್ಯುವಿಗೂ ಮೃತ್ಯುವಾಗಿರುವನು. ಮೃತ್ಯುವಿಗೂ ಮೃತ್ಯುವಾಗಿರುವ ಅಂತಹ ಸರ್ವೇಶ್ವರನಲ್ಲಿ ತನ್ಮಯತೆಯನ್ನು ಹೊಂದಿರುವ ನಿನ್ನ ಬಳಿಗೆ ಸುಳಿಯಲು ಮೃತ್ಯುಗಳೂ ಭಯಪಡುವುವು.

ಅಹಂ ಬ್ರಹ್ಮ ಪರಂ ಧಾಮ ಬ್ರಹ್ಮಾಹಂ ಪರಮಂ ಪದಮ್ ।
ಏವಂ ಸಮೀಕ್ಷನ್ನಾತ್ಮಾನಮಾತ್ಮನ್ಯಾಧಾಯ ನಿಷ್ಕಲೇ ॥೧೧॥

ದಶನ್ತಂ ತಕ್ಷಕಂ ಪಾದೇ ಲೇಲಿಹಾನಂ ವಿಷಾನನೈಃ ।
ನ ದ್ರಕ್ಷ್ಯಸಿ ಶರೀರಂ ಚ ವಿಶ್ವಂ ಚ ಪೃಥಗಾತ್ಮನಃ ॥೧೨॥

ಆದುದರಿಂದ ನೀನು 'ಪರಂಧಾಮ (ಪರಮಪ್ರಕಾಶ ಮತ್ತು ಪರಮ

ಸ್ಥಾನವಾಗಿರುವ) ಪರಬ್ರಹ್ಮವೇ ನಾನು. ಪರಮಪದ (ಪರಮಪ್ರಾಪ್ತವಾದ) ಪರಬ್ರಹ್ಮವೇ ನಾನು'–ಎಂಬ ಭಾವನೆಯಿಂದ ನಿನ್ನ ಆತ್ಮವನ್ನು ನಿಷ್ಕಲನಾದ ಆ ಪರಮಾತ್ಮನಲ್ಲಿ ಏಕೀಕರಿಸಿ ನೋಡುತ್ತಿರು. ಹೀಗೆ ಪರಮಾತ್ಮನಲ್ಲಿ ತನ್ಮಯನಾಗಿದ್ದರೆ ನಿನಗೆ ನಿನ್ನ ಶರೀರವಾಗಲೀ ಅಥವಾ ಈ ವಿಶ್ವವಾಗಲೀ ಯಾವುದೂ ಆತನಿಂದ ಬೇರೆಯಾಗಿ ತಿಳಿಯುವುದಿಲ್ಲವಾದ್ದರಿಂದ ತಕ್ಷಕನು ನಿನ್ನ ಪಾದವನ್ನು ನೆಕ್ಕುತ್ತಾ ವಿಷದ ಮುಖಗಳಿಂದ ನಿನ್ನನ್ನು ಕಚ್ಚಿದರೂ ನಿನಗೆ ಅದಾವುದೂ ತಿಳಿಯುವುದಿಲ್ಲ.*

ಮಗು ವಿಷ್ಣುರಾತ! ವಿಶ್ವಾತ್ಮನಾದ ಶ್ರೀಹರಿಯ ಚರಿತ್ರದ ವಿಷಯವಾಗಿ ನೀನು ಏನೇನು ಪ್ರಶ್ನಿಸಿದ್ದೆಯೋ ಅದಕ್ಕೆಲ್ಲಾ ಉತ್ತರಕೊಟ್ಟಿದ್ದಾಯಿತು. ಈಗ ಇನ್ನೇನನ್ನಾದರೂ ಕೇಳಲು ಬಯಸುವೆಯಾ?" (ಶ್ಲೋಕ ೧೩)

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದ್ವಾದಶಸ್ಕಂಧದ ೫ನೆಯ ಅಧ್ಯಾಯವು ಮುಗಿಯಿತು.

---

*ನಾನೇ ಬ್ರಹ್ಮವು, ಬ್ರಹ್ಮವೇ ನಾನು–ಎಂಬಲ್ಲಿ ತಾತ್ಪರ್ಯಭೇದದಿಂದ ಒಂದರಲ್ಲಿ ವಿಶೇಷಣವಾದ ಜೀವವು ಪ್ರಧಾನ, ಮತ್ತೊಂದರಲ್ಲಿ ವಿಶೇಷ್ಯವಾದ ಪರಮಾತ್ಮನು ಪ್ರಧಾನ–ಎಂಬುದಾಗಿ ಬೇರೆಬೇರೆಯಾಗಿ ನಿರ್ದೇಶಮಾಡಿದೆ. ಪರಂಧಾಮ, ಪರಮಂ ಪದಂ–ಎಂಬ ಎರಡೂ ಪರಬ್ರಹ್ಮಕ್ಕೆ ವಿಶೇಷಣಗಳು. ಪರಮಂ ಪದಂ ಎಂದರೆ.: ಪರಮಪ್ರಾಪ್ಯ– (ವಿಶೇಷಣವಾದ) ನಾನೇ (ವಿಶೇಷ್ಯವಾದ) ಪರಬ್ರಹ್ಮವು. (ವಿಶೇಷ್ಯವಾದ) ಪರಬ್ರಹ್ಮವೇ (ವಿಶೇಷಣವಾದ) ನಾನು–ಎಂಬುದಾಗಿ ಪರಂಧಾಮವೂ ಪರಮಪ್ರಾಪ್ಯವೂ ಆಗಿರುವ ಪರಮಾತ್ಮನಲ್ಲಿ ಪ್ರತ್ಯಗಾತ್ಮನನ್ನು ಇರಿಸಬೇಕು. ಪರಮಾತ್ಮ ಶೇಷತ್ವೈಕರಸನನ್ನಾಗಿ ತನ್ನನ್ನು ಧ್ಯಾನಿಸಬೇಕು. ಪರಮಾತ್ಮನು ನಿಷ್ಕಲ–ಎಂದರೆ ಪ್ರಾಕೃತಶರೀರರಹಿತನು. ಅಂತಹ ಪರಮಾತ್ಮನಲ್ಲಿ ಪ್ರತ್ಯಗಾತ್ಮನನ್ನು ಇರಿಸಿ ತಾನು ಅವನಿಗೆ ಶೇಷಭೂತನಾಗಿರುವ ರಸವೊಂದೇ ಉಳ್ಳವನು. ಆತನು ತನಗೆ ಶೇಷಿ–ಎಂಬುದಾಗಿ ಧ್ಯಾನಿಸಬೇಕು. (ವೀರರಾಘವೀಯ)

ನಾನು ಬ್ರಹ್ಮವೇ. ಬ್ರಹ್ಮವೇ ನಾನು–ಎಂದು ಧ್ಯಾನಿಸಬೇಕು. ನಾನು ಬ್ರಹ್ಮವೇ ಎಂಬ ಭಾವನೆಯಿಂದ ಜೀವಕ್ಕೆ ಶೋಕಾದಿನಿವೃತ್ತಿಯಾಗುತ್ತದೆ. ಬ್ರಹ್ಮವೇ ನಾನು–ಎಂದು ಚಿಂತಿಸುವುದರಿಂದ ಬ್ರಹ್ಮವು ಪರೋಕ್ಷವಲ್ಲ. (ಪ್ರತ್ಯಕ್ಷವೇ ಆಗಿದೆ) ಎಂದು ಬ್ರಹ್ಮದಲ್ಲಿ ಪರೋಕ್ಷತೆಯ ವೃತ್ತಿಯು ನಿವೃತ್ತಿಹೊಂದುತ್ತದೆ. ನಿಷ್ಕಲೇ ಆತ್ಮನಿ–ಎಂದರೆ ಉಪಾಧಿರಹಿತನಾದ ಆತ್ಮನಲ್ಲಿ ಎಂದರ್ಥ. (ಶ್ರೀಧರೀಯ)

ದ್ವಾದಶಸ್ಕಂಧ ೬ನೆಯ ಅಧ್ಯಾಯ

ಪರೀಕ್ಷಿದ್ರಾಜನು ಪರಂಧಾಮವನ್ನು ಹೊಂದುವಿಕೆ :
ಜನಮೇಜಯನ ಸರ್ಪಯಾಗ ಮತ್ತು ವೇದಗಳ ಶಾಖಾಭೇದಗಳು

ಸೂತಪುರಾಣಿಕರು ಶೌನಕಾದಿ ಮುನಿಗಳಿಗೆ ಹೇಳುತ್ತಾರೆ :

ಏತನ್ನಿಶಮ್ಯ ಮುನಿನಾಭಿಹಿತಂ ಪರೀಕ್ಷಿ–
ದ್ವ್ಯಾಸಾತ್ಮಜೇನ ನಿಖಿಲಾತ್ಮದೃಶಾ ಸಮೇನ ।
ತತ್ಪಾದಮೂಲಮುಪಸೃತ್ಯ ನತೇನ ಮೂರ್ಧ್ನಾ
ಬದ್ಧಾಞ್ಜಲಿಸ್ತಮಿದಮಾಹ ಸ ವಿಷ್ಣುರಾತಃ ॥೧॥

"ಮುನಿಗಳೇ! ಕೇಳಿರಿ. ವ್ಯಾಸಪುತ್ರರೂ ಎಲ್ಲದರಲ್ಲಿಯೂ ಪರಮಾತ್ಮನನ್ನು ಕಾಣುತ್ತಾ ಸರ್ವಸಮದೃಷ್ಟಿಯುಳ್ಳವರೂ ಆಗಿದ್ದ ಶುಕಬ್ರಹ್ಮರ್ಷಿಗಳ ಈ ಮಾತನ್ನು ಕೇಳಿ ವಿಷ್ಣುರಾತ (ಶ್ರೀಕೃಷ್ಣಸಂರಕ್ಷಿತ) ಪರೀಕ್ಷಿದ್ರಾಜನು ಅವರ ಅಡಿದಾವರೆಗಳ ಬಳಿಗೆ ಸಾರಿ, ವಿನಯದಿಂದ ತಲೆಬಾಗಿ ಅಂಜಲಿಗಳನ್ನು ಜೋಡಿಸಿಕೊಂಡು ಅವರಲ್ಲಿ ಹೀಗೆ ವಿಜ್ಞಾಪಿಸಿದನು :

ಸಿದ್ಧೋಽಸ್ಮ್ಯನುಗೃಹೀತೋಽಸ್ಮಿ ಭವತಾ ಕರುಣಾತ್ಮನಾ ।
ಶ್ರಾವಿತೋ ಯಚ್ಚ ಮೇ ಸಾಕ್ಷಾದನಾದಿನಿಧನೋ ಹರಿಃ ॥೨॥

"ಪರಮಪೂಜ್ಯರೇ! ಆದ್ಯಂತರಹಿತನಾದ ಸಾಕ್ಷಾತ್ ಶ್ರೀಹರಿಯ ಸ್ವರೂಪ–ಚರಿತ್ರಾದಿಗಳನ್ನು ಕರುಣಾಸಿಂಧುಗಳಾದ ತಾವು ನನಗೆ ಮನವರಿಕೆ ಯಾಗುವಂತೆ ವರ್ಣನೆಮಾಡಿದ್ದು ಪರಮಾನುಗ್ರಹವಾಯಿತು. ಇದರಿಂದ ನಾನು ಧನ್ಯನಾದೆನು. ಕೃತಕೃತ್ಯನಾದೆನು.

ಅಜ್ಞಾನಿಗಳೂ ಸಂಸಾರಸಂತಪ್ತರೂ ಆದ ಪ್ರಾಣಿಗಳ ವಿಷಯದಲ್ಲಿ ತಮ್ಮಂತಹ ಮಹಾತ್ಮರು ಹೀಗೆ ಅನುಗ್ರಹವನ್ನು ತೋರುವುದರಲ್ಲಿ ದೊಡ್ಡ ಅಚ್ಚರಿಯೇನೂ ಇಲ್ಲ. ಪರಮೋತ್ತಮಕೀರ್ತಿಶಾಲಿಯಾದ ಶ್ರೀಭಗವಂತ ನನ್ನು ಚೆನ್ನಾಗಿ ವರ್ಣಿಸುವಂತಹ ಈ ಶ್ರೀಮದ್ಭಾಗವತಪುರಾಣಸಂಹಿತೆ ಯನ್ನು ನನಗೆ ಸವಿಸ್ತರವಾಗಿ ಉಪದೇಶಮಾಡಿದಿರಲ್ಲವೇ! ಇದಕ್ಕಿಂತ ಇನ್ನೇನು ಅನುಗ್ರಹಬೇಕು? ಕೇಳತಕ್ಕದ್ದು ಮತ್ತೇನಿದೆ? ಓ ಭಗವಂತರೇ!

ಇನ್ನು ನಾನು ಮರಣಕ್ಕೆ ನಿಮಿತ್ತವಾಗಬಹುದಾದ ತಕ್ಷಕನೇ ಮುಂತಾದ ಯಾರಿಗೂ ಹೆದರುವುದಿಲ್ಲ. ತಾವು ತೋರಿಸಿದ ಪರಮಾಭಯವಾದ ಪರಬ್ರಹ್ಮದಲ್ಲಿ ಪ್ರವೇಶಮಾಡಿದ ಬಳಿಕ ಇನ್ನು ನನಗೆ ಭಯವೆತ್ತಣದು?

ಬ್ರಹ್ಮರ್ಷಿಶ್ರೇಷ್ಠರೇ! ಇನ್ನು ನಾನು ಮಾತನಾಡುವುದನ್ನು ನಿಲ್ಲಿಸಿ ಕಾಮಸಂಸ್ಕಾರರಹಿತವಾದ ಮನಸ್ಸನ್ನು ಇಂದ್ರಿಯಾತೀತನಾದ ಪರಮಾತ್ಮನಲ್ಲಿ ಪ್ರವೇಶಮಾಡಿಸಿ, ಪ್ರಾಣವನ್ನು ತೊರೆಯುತ್ತೇನೆ. ಇದಕ್ಕೆ ಅನುಮತಿಯನ್ನು ಅನುಗ್ರಹಿಸಿರಿ. ತಾವು ಉಪದೇಶಮಾಡಿದ ಜ್ಞಾನ ಮತ್ತು ವಿಜ್ಞಾನಗಳಲ್ಲಿ ನೆಲೆಸಿದ್ದರಿಂದ ನನ್ನ ಅಜ್ಞಾನವೆಲ್ಲವೂ ತೊಲಗಿಹೋಯಿತು. ಅತ್ಯಂತ ಕಲ್ಯಾಣಮಯವಾದ ಭಗವಂತನ ಪದವನ್ನು ತಾವು ನನಗೆ ತೋರಿಸಿಕೊಟ್ಟಿದ್ದೀರಿ." (ಶ್ಲೋಕ ೬-೭)

ಸೂತಪುರಾಣಿಕರು ಹೇಳುತ್ತಾರೆ :

"ಎಲೈ ಮಹರ್ಷಿಗಳೇ! ಹೀಗೆ ಅರಿಕೆಮಾಡಿಕೊಂಡು ಆ ರಾಜ ಶ್ರೇಷ್ಠನು ತಮ್ಮನ್ನು ಪೂಜಿಸಲು, ಭಗವಾನ್ ಶುಕಮುನಿಗಳು ಆತನ ಬೀಳ್ಕೊಡುಗೆಯನ್ನು ಪಡೆದು ಸಾಧು-ಮಹಾತ್ಮ-ಸಂನ್ಯಾಸಿಗಳ ಜೊತೆಯಲ್ಲಿ ಅಲ್ಲಿಂದ ಹೊರಟುಹೋದರು. ರಾಜರ್ಷಿ ಪರೀಕ್ಷಿತನೂ ಕೂಡ ತನ್ನ ಅಂತರಾತ್ಮವನ್ನು ಪರಮಾತ್ಮನಲ್ಲಿ ನೆಲೆಗೊಳಿಸಿ ಧ್ಯಾನಮಗ್ನನಾದನು. ಪ್ರಾಣವೃತ್ತಿಯನ್ನು ನಿಲ್ಲಿಸಿ ವೃಕ್ಷದಂತೆ ನಿಶ್ಚೇಷ್ಟನಾದನು. ಆತನು ಗಂಗಾನದಿಯ ತೀರದಲ್ಲಿ ಪೂರ್ವಾಗ್ರವಾದ ದರ್ಭೆಗಳ ಮೇಲೆ ಉತ್ತರಾಭಿ ಮುಖವಾಗಿ ಕುಳಿತುಕೊಂಡಿದ್ದನು. ಸರ್ವಸಂಗರಹಿತನಾಗಿ ಎಲ್ಲ ಸಂಶಯಗಳನ್ನೂ ಕಳೆದುಕೊಂಡಿದ್ದ ಆ ಮಹಾಯೋಗಿಯು ಬ್ರಹ್ಮಸ್ವರೂಪದಲ್ಲಿ ಪ್ರತಿಷ್ಠಿತನಾಗಿಬಿಟ್ಟನು.

ಎಲೈ ಮಹರ್ಷಿಗಳೇ! ಕ್ರೋಧದಿಂದ ಶಾಪವನ್ನು ಕೊಟ್ಟಿದ್ದ ಮುನಿ ಕುಮಾರ ಶೃಂಗಿಯಿಂದ ಪ್ರೇರಿತನಾದ ತಕ್ಷಕನು ರಾಜರ್ಷಿ ಪರೀಕ್ಷಿತನನ್ನು ಕೊಂದುಹಾಕುವ ಉದ್ದೇಶದಿಂದ ಆತನ ಬಳಿಗೆ ಬರುತ್ತಾ ಮಾರ್ಗದಲ್ಲಿ ಕಶ್ಯಪನೆಂಬ ಬ್ರಾಹ್ಮಣನನ್ನು ಕಂಡನು. ಆ ಬ್ರಾಹ್ಮಣನಾದರೋ ಸರ್ಪವಿಷ ವನ್ನು ಹೋಗಲಾಡಿಸುವ ಚಿಕಿತ್ಸೆಯಲ್ಲಿ ಅತ್ಯಂತ ನಿಪುಣನಾಗಿದ್ದನು.

ತಕ್ಷಕನು ಆತನಿಗೆ ತುಂಬಾ ಹಣವನ್ನು ಕೊಟ್ಟು ಆತನು ರಾಜನ ಬಳಿಗೆ ಬರದಂತೆ ಹಿಂದಿರುಗಿಸಿಬಿಟ್ಟನು. ಇಷ್ಟಬಂದರೂಪವನ್ನು ತಾಳುವ ಶಕ್ತಿಯನ್ನು ಹೊಂದಿದ್ದ ಆ ಘೋರಸರ್ಪವು ಬಾಹ್ಮಣರೂಪದಲ್ಲಿ ತನ್ನನ್ನು ಮರೆಸಿಕೊಂಡು ಪರೀಕ್ಷಿದ್ರಾಜನ ಬಳಿಗೆ ಬಂದು ಆತನನ್ನು ಕಚ್ಚಿಬಿಟ್ಟನು. ರಾಜನು ಆಗ ಪರಬ್ರಹ್ಮದಲ್ಲಿ ಪ್ರತಿಷ್ಠಿತನಾಗಿಬಿಟ್ಟಿದ್ದನು. ಆತನ ದೇಹಕ್ಕೆ ಮಾತ್ರ ತಕ್ಷಕನ ವಿಷದ ಅಗ್ನಿಯು ಹತ್ತಿಕೊಂಡು ಎಲ್ಲರೂ ನೋಡುತ್ತಿರುವಂತೆಯೇ ಅದು ಬೂದಿಯಾಗಿಬಿಟ್ಟಿತು. ಆಗ ಭೂಮಿಯಲ್ಲೂ ಆಕಾಶದಲ್ಲೂ ಮತ್ತು ಸರ್ವದಿಕ್ಕುಗಳಲ್ಲೂ ಗಟ್ಟಿಯಾಗಿ 'ಹಾಹಾ' ಕಾರವು ಕೇಳಿಬರತೊಡಗಿತು. ದೇವತೆಗಳೂ, ಅಸುರರೂ ಮತ್ತು ಮನುಷ್ಯರೇ ಮುಂತಾದ ಎಲ್ಲರೂ ಮಹಾತ್ಮನಾದ ಆ ಪರೀಕ್ಷಿತನ ಪರಮಗತಿಯನ್ನು ಕಂಡು ಆಶ್ಚರ್ಯಭರಿತ ರಾದರು. ದೇವದುಂದುಭಿ ವಾದ್ಯಗಳು ತಮಗೆ ತಾವೇ ಮೊಳಗತೊಡಗಿ ದುವು. ಗಂಧರ್ವರೂ ಅಪ್ಸರೆಯರೂ ಗಾನಮಾಡತೊಡಗಿದರು. ದೇವತೆಗಳು 'ಭಲೆ! ಭಲೆ!' ಎಂದು ಹೊಗಳುತ್ತಾ ಹೂಮಳೆಯನ್ನು ಕರೆದರು. (ಶ್ಲೋಕ ೧೧-೧೫)

ತನ್ನ ತಂದೆಯನ್ನು ತಕ್ಷಕನು ಕಚ್ಚಿಕೊಂದನೆಂಬ ವಿಷಯವನ್ನು ಕೇಳಿ ಪರೀಕ್ಷಿತನ ಪುತ್ರನಾದ ಜನಮೇಜಯಮಹಾರಾಜನಿಗೆ ಮಿತಿಮೀರಿದ ಕೋಪವುಂಟಾಯಿತು. ಆತನು ಬ್ರಾಹ್ಮಣಸಹಿತನಾಗಿ ಸರ್ಪಯಜ್ಞವನ್ನು ಪ್ರಾರಂಭಿಸಿ ಅದರಲ್ಲಿದ್ದ ಅಗ್ನಿಕುಂಡದಲ್ಲಿ ಬಂದು ಬೀಳುವಂತೆ ಸರ್ಪಗಳನ್ನು ಮಂತ್ರಬಲದಿಂದ ಆಹ್ವಾನಿಸಿದನು. ಆ ಯಜ್ಞದಲ್ಲಿ ಉರಿಯುತ್ತಿದ್ದ ಅಗ್ನಿಯಲ್ಲಿ ದೊಡ್ಡ-ದೊಡ್ಡ ಸರ್ಪಗಳು ಬಿದ್ದು ಸುಟ್ಟುಹೋಗುತ್ತಿರು ವುದನ್ನು ಕಂಡು ತಕ್ಷಕನಿಗೆ ತುಂಬಾ ಭಯವುಂಟಾಗಿ ಗಾಬರಿಯಿಂದ ಆತನು ಇಂದ್ರನನ್ನು ಮರೆಹೊಕ್ಕನು. ಆ ತಕ್ಷಕನು ಬರದೇ ಇರುವುದನ್ನು ಕಂಡು ಜನಮೇಜಯನು "ಬ್ರಾಹ್ಮಣಶ್ರೇಷ್ಠರೇ! ಸರ್ಪಾಧಮನಾದ ತಕ್ಷಕ ಏಕೆ ಇನ್ನೂ ಅಗ್ನಿಯಲ್ಲಿ ಬಿದ್ದು ಭಸ್ಮವಾಗುತ್ತಿಲ್ಲ? ಹೇಳಿರಿ"–ಎಂದು ಕೇಳಲು ಬ್ರಾಹ್ಮಣರು–"ಮಹಾರಾಜ! ಆ ನೀಚನು ಇಂದ್ರನನ್ನು ಶರಣುಹೊಂದಿ ಆತನಿಂದ ಸಂರಕ್ಷಿಸಲ್ಪಡುತ್ತಿದ್ದಾನೆ. ಇಂದ್ರನು ಆತನನ್ನು ತಡೆದು ಹಿಡಿದಿರು ವುದರಿಂದ ಆತನು ಬಂದು ಬೆಂಕಿಯಲ್ಲಿ ಬೀಳುತ್ತಿಲ್ಲ"–ಎಂದು ಉತ್ತರ

ನೀಡಿದರು. ಮಹಾಬುದ್ಧಿಶಾಲಿಯಾದ ಪರೀಕ್ಷಿತನ ಪುತ್ರನು "ಋತ್ವಿಜರೇ! ನೀವು ಇಂದ್ರಸಹಿತನಾದ ತಕ್ಷಕನನ್ನೇ ಬೆಂಕಿಯಲ್ಲಿ ಬೀಳಿಸಬಾರದೇಕೆ?"– ಎಂದು ಆದೇಶನೀಡಲು, ಆ ಬ್ರಾಹ್ಮಣರು "ಎಲೈ ತಕ್ಷಕನೇ! ನೀನು ಇಂದ್ರಸಹಿತನಾಗಿ ಈ ಅಗ್ನಿಕುಂಡದಲ್ಲಿ ಬಂದು ಬೀಳು"–ಎಂದು ಮಂತ್ರ ಬಲದಿಂದ ಆತನನ್ನು ಅಗ್ನಿಕುಂಡದೊಳಕ್ಕೆ ಆಹ್ವಾನಿಸಿದರು. ಬ್ರಾಹ್ಮಣರು ಹಾಗೆ ಆಕರ್ಷಣ ಮಂತ್ರವನ್ನು ಪಠಿಸಿದೊಡನೆಯೇ ಇಂದ್ರನು ತನ್ನ ಸ್ಥಾನ ದಿಂದ ಕದಲಬೇಕಾಯಿತು. ವಿಮಾನದಲ್ಲಿ ಕುಳಿತ ಇಂದ್ರನೂ ತಕ್ಷಕನೂ ಕಡುಗಾಬರಿಗೊಂಡರು. ವಿಮಾನವೂ ಕೆಳಗೆಬೀಳುತ್ತಾ ಗಿರ-ಗಿರನೆ ಸುತ್ತ ತೊಡಗಿತು. ಹೀಗೆ ದೇವರಾಜನು ತಕ್ಷಕನೊಡನೆ ವಿಮಾನದಿಂದ ಅಗ್ನಿ ಕುಂಡಕ್ಕೆ ಬಿದ್ದು ಹೋಗುತ್ತಿರುವುದನ್ನು ಕಂಡು ಅಂಗಿರಸರ ಪುತ್ರ ದೇವಪುರೋಹಿತ ಬೃಹಸ್ಪತಿಯು ಜನಮೇಜಯನನ್ನು ಸಂಬೋಧಿಸಿ, "ರಾಜೇಂದ್ರ! ಈ ಸರ್ಪನಾಯಕ ತಕ್ಷಕನನ್ನು ವಧಿಸುವುದು ನಿನಗೆ ತಕ್ಕುದಲ್ಲ. ಏಕೆಂದರೆ ಈತನು ಅಮೃತಪಾನಮಾಡಿ ಅಜರಾಮರನಾಗಿದ್ದಾನೆ. ಜಗತ್ತಿನಲ್ಲಿ ಪ್ರಾಣಿಗಳಿಗೆ ಜೀವನ-ಮರಣ ಮತ್ತು ಅನಂತರದ ಗತಿ–ಇವೆಲ್ಲವೂ ಅವುಗಳ ಕರ್ಮಕ್ಕೆ ಅನುಗುಣವಾಗಿಯೇ ಆಗುತ್ತವೆಯಪ್ಪಾ. ಒಬ್ಬನು ಮತ್ತೊಬ್ಬನಿಗೆ ಸುಖ-ದುಃಖಗಳನ್ನು ಉಂಟುಮಾಡುವುದಕ್ಕೆ ಆ ಕರ್ಮವನ್ನು ಬಿಟ್ಟು ಬೇರೆ ಯಾವುದಕ್ಕೂ ಸಾಧ್ಯವಿಲ್ಲ. ಲೋಕದಲ್ಲಿ ಬಹುಮಂದಿ ಜನರು ಸರ್ಪ, ಚೋರರು, ಬೆಂಕಿ, ಮಿಂಚು, ಸಿಡಿಲು ಮುಂತಾದುವುಗಳಿಂದಲೂ ಹಸಿವು, ಬಾಯಾರಿಕೆ, ರೋಗ ಇತ್ಯಾದಿ ಕಾರಣಗಳಿಂದಲೂ ಸಾವನ್ನಪ್ಪುವುದನ್ನು ನಾವು ಕಾಣುತ್ತೇವೆ. ಆದರೆ ವಾಸ್ತವವಾಗಿ ಅವರ ಸಾವಿಗೆ ಕಾರಣವಾದದ್ದು ಅವರವರ ಪ್ರಾರಬ್ಧಕರ್ಮ ಮಾತ್ರವೇ. ತಮ್ಮ ಪ್ರಾರಬ್ಧಕರ್ಮದ ಫಲವಾಗಿಯೇ ಅವು ಆ ಗತಿಯನ್ನು ಹೊಂದುತ್ತವೆ. ನೀನು ಯಜ್ಞದಲ್ಲಿ ಬಹಳಷ್ಟು ನಿರಪರಾಧಿಸರ್ಪಗಳನ್ನು ಸುಟ್ಟುಹಾಕಿದ್ದೀಯೆ. ಈ ಆಭಿಚಾರಿಕವಾದ ಯಜ್ಞದ ಫಲ ಕೇವಲ ಪ್ರಾಣಿಹಿಂಸೆಯ ಪಾಪವೇ ಆಗುವುದು. ಆದುದರಿಂದ ಇದನ್ನು ನಿಲ್ಲಿಸಿಬಿಡು. "ಜನ್ಯೈರ್ದಿಷ್ಟಂ ಹಿ ಭುಜ್ಯತೇ। ಜನರೆಲ್ಲರೂ ತಮ್ಮ-ತಮ್ಮ ಅದೃಷ್ಟದ ಫಲವನ್ನು ತಾವೇ ಅನುಭವಿಸುವರು"– ಎಂದು ಉಪದೇಶಮಾಡಿದನು. (ಶ್ಲೋಕ ೧೬-೨೭)

ಸೂತಪುರಾಣಿಕರು ಹೇಳುತ್ತಾರೆ :

"ಎಲೈ ಮಹರ್ಷಿಗಳೇ! ಜನಮೇಜಯಮಹಾರಾಜನು ಋಷಿಶ್ರೇಷ್ಠರಾದ ಬೃಹಸ್ಪತಿಗಳ ಮಾತನ್ನು ಶಿರಸಾವಹಿಸಿ 'ತಮ್ಮ ಅಪ್ಪಣೆಯಂತೆ' ಎಂದು ನುಡಿದು ಸರ್ಪಯಜ್ಞವನ್ನು ನಿಲ್ಲಿಸಿಬಿಟ್ಟನು. ಆ ದೇವಗುರುವನ್ನು ವಿಧಿಪೂರ್ವಕವಾಗಿ ಪೂಜಿಸಿದನು. ಇದೆಲ್ಲಾ ಭಗವಂತನ ಮಹಾಮಾಯೆಯೇ ಆಗಿದೆ. ಮಹರ್ಷಿಗಳೇ! ಮಹರ್ಷಿಯಾದ ಶೃಂಗಿಗೆ ಕ್ರೋಧವು ಬಂದದ್ದು, ರಾಜನಿಗೆ ಶಾಪವು ತಗುಲಿ ಆತನು ಮೃತನಾದುದು ಮತ್ತು ಜನಮೇಜಯನಿಗೆ ಕೋಪ ಬಂದು ಸರ್ಪಗಳ ನಾಶವಾದದ್ದು ಇದಕ್ಕೆಲ್ಲಾ ಆ ವೈಷ್ಣವೀಮಾಯೆಯೇ ಕಾರಣ. ** ಭಗವಂತನಿಗೆ ಆತ್ಮದಂತೆ ಪ್ರಿಯರಾಗಿರುವ ಶುದ್ಧಜೀವಿಗಳಲ್ಲೂ ಕೂಡ ಶರೀರದಲ್ಲಿ ಕ್ರೋಧವೇ ಮುಂತಾದ ಗುಣವೃತ್ತಿಗಳಿಂದ ಮೋಹವುಂಟಾಗಿ ಒಬ್ಬನು ಮತ್ತೊಬ್ಬನಿಗೆ ದುಃಖವನ್ನುಂಟುಮಾಡುವುದು, ತಾನು ದುಃಖಕ್ಕೆ ಒಳಗಾಗುವುದು, ತನ್ನ ಪ್ರಯತ್ನದಿಂದ ಇದನ್ನು ನಿವೃತ್ತಿಗೊಳಿಸಲು ಸಾಧ್ಯವಾಗದೇ ಇರುವುದು– ಇತ್ಯಾದಿಗಳನ್ನು ನೋಡುತ್ತೇವೆ. ಇದಕ್ಕೆ ಆತನ ಮಾಯೆಯೇ ಕಾರಣವು.

***ನ ಯತ್ರ ದಮ್ಭೀತ್ಯಭಯಾ ವಿರಾಜಿತಾ**
ಮಾಯಾಽತ್ಮವಾದೇಽಸಕೃದಾತ್ಮವಾದಿಭಿಃ ।
ನ ಯದ್ವಿವಾದೋ ವಿವಿಧಸ್ತದಾಶ್ರಯೋ
ಮನಶ್ಚ ಸಙ್ಕಲ್ಪವಿಕಲ್ಪವೃತ್ತಿ ಯತ್ ॥೩೦॥

ಆದರೆ ಆ ಪರಮಾತ್ಮಸ್ವರೂಪದಲ್ಲಿ ಮಾಯೆಯ ಕಾರ್ಯವು ನಡೆಯುವುದಿಲ್ಲ. 'ಈತನು ಮಾಯಾಕಪಟವುಳ್ಳವನು ; ದಂಭಾಚಾರವುಳ್ಳವನು'– ಎಂದು ಬುದ್ಧಿಯಲ್ಲಿ ಸ್ಫುರಿಸುವ ಯಾವ ಮಾಯೆಯುಂಟೋ ಅದು ಆತ್ಮಜ್ಞರು ಆತ್ಮವನ್ನು ಕುರಿತು ಚರ್ಚೆಮಾಡುತ್ತಿರುವಾಗ ಭಯ

**ಮಮ ಮಾಯಾ ದುರತ್ಯಯಾ (ಶ್ರೀಗೀತಾ)

*ನ ಯತ್ರ ದುರ್ಭಾವ್ಯತಯಾ ವಿಭಾವ್ಯತೇ ಮಾಯಾಽತ್ಮವಾದೇ ಸಕೃತದಾತ್ಮ-ವಾದಿಭಿಃ।
ನ ಯದ್ವಿಕಾರೋ ವಿವಿಧಸ್ತದಾಶ್ರಯೋ ಮನಶ್ಚ ಸಂಕಲ್ಪವಿಕಲ್ಪವೃತ್ತಿ ಯತ್॥

ಗೊಂಡಂತೆ ತನ್ನ ಕಾರ್ಯವಾದ ಮೋಹಾದಿಗಳನ್ನುಂಟುಮಾಡುವುದಿಲ್ಲ. ಮಾಯೆಯನ್ನಾಶ್ರಯಿಸಿರುವ ಬಗೆ-ಬಗೆಯ ವಿವಾದಗಳೂ ಪರಮಾತ್ಮನ ಸ್ವರೂಪದಲ್ಲಿ ಇಲ್ಲವಾಗಿದೆ.

***ನ ಯತ್ರ ಸೃಜ್ಯಂ ಸೃಜತೋಭಯೋಃ ಪರಂ**
ಶ್ರೇಯಶ್ಚ ಜೀವಸ್ತ್ರಿಭಿರನ್ವಿತಸ್ತ್ವಹಮ್ ।
ತದೇತದುತ್ಸಾದಿತಬಾಧ್ಯಬಾಧಕಂ
ನಿಷಿಧ್ಯ ಚೋರ್ಮೀನ್ವಿರಮೇತ್ಸ್ವಯಂ ಮುನಿಃ ॥೩೧॥

ಸಂಕಲ್ಪ-ವಿಕಲ್ಪ ಮಾಡುವ ಮನಸ್ಸೂ ಕೂಡ ಅಲ್ಲಿ ಶಾಂತವಾಗಿ ಬಿಡುತ್ತದೆ. ಕರ್ಮ, ಅದರ ಸಾಮಗ್ರಿ ಮತ್ತು ಅವುಗಳಿಂದ ಸಾಧ್ಯವಾಗುವ ಕರ್ಮ–ಈ ಮೂರರಿಂದಲೂ ಕೂಡಿದ ಅಹಂಕಾರಾತ್ಮಕನಾದ ಜೀವ-ಇವೆಲ್ಲವೂ ಯಾವನಲ್ಲಿ ಇಲ್ಲವೋ ಅಂತಹ ಪರಮಾತ್ಮನಿಗೆ ಯಾವುದರಿಂದಲೂ ಬಂಧವಿಲ್ಲ. ಆತನನ್ನು ಯಾರೂ ವಿರೋಧಿಸಲಾರರು. ಆತನೂ ಯಾರನ್ನೂ ವಿರೋಧಿಸುವುದಿಲ್ಲ. ಅಂತಹ ಆ ಪರಮಪದದ ಸ್ವರೂಪವನ್ನು ಅರಿತವನು ಮನಸ್ಸಿನಲ್ಲಿ ಏಳುವ ಅಹಂಕಾರವೇ ಮುಂತಾದ ತರಂಗಗಳನ್ನು ನಿಷೇಧಿಸಿ ತನ್ನ ಆತ್ಮಸ್ವರೂಪದಲ್ಲಿ ತನಗೆ ತಾನೇ ವಿಹರಿಸುತ್ತಿರಬೇಕು.

ಎಂದು ಶ್ಲೋಕಪಾಠ. ಪರಮಾತ್ಮನನ್ನು ನಿರೂಪಿಸುವವರು ಆತನ ಸ್ವರೂಪವನ್ನು ಒಂದೇ ಒಂದು ಬಾರಿ ನಿರೂಪಿಸುತ್ತಿರುವಾಗಲೂ ಅಲ್ಲಿ ಮಾಯೆಯು ತನ್ನ ಕಾರ್ಯವನ್ನು ಮಾಡಲಾರದು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಪರಮಾತ್ಮನು ಸಂಕಲ್ಪ-ವಿಕಲ್ಪಗಳನ್ನು ಕಳೆದುಕೊಂಡಿರುವ ಪರಿಶುದ್ಧವಾಗಿರುವ ಮನಸ್ಸಿಗೆ ಮಾತ್ರ ವಿಷಯವಾಗುತ್ತಾನೆ. ಆದುದರಿಂದ ಮಾಯಾಮೋಹದ ಮೂಲಕವಾಗಿ ಕುತರ್ಕರೂಪವಾಗಿರುವ ಸಂಕಲ್ಪ-ವಿಕಲ್ಪರೂಪವಾದ ಮನಸ್ಸೂ ಆತನಲ್ಲಿ ಇರುವುದಿಲ್ಲ. ಆತನನ್ನು ವಿಷಯೀಕರಿಸುವುದಿಲ್ಲ. (ವೀರರಾಘವೀಯ)

*ವೀರರಾಘವೀಯದ ಪ್ರಕಾರ ಈ ಶ್ಲೋಕದ ಅಭಿಪ್ರಾಯವು ಹೀಗಿದೆ :

ಕರ್ಮವೂ, ಕರ್ಮಾಧೀನವಾದ ಶರೀರವೂ ಮತ್ತು ಅವೆರಡರಿಂದಲೂ ಸಾಧಿಸಲ್ಪಡುವ ಸುಖ-ದುಃಖಾದಿರೂಪವಾದ ಫಲವೂ ಮತ್ತು ದೇವ-ಮನುಷ್ಯಾದಿ ಶಬ್ದಗಳೂ ಕೂಡ ಯಾವುದರಲ್ಲಿ ಇರುವುದಿಲ್ಲವೋ ಅಂತಹ ಪರಮಾತ್ಮಸ್ವರೂಪವನ್ನು ಮನನಮಾಡುವ ಜೀವನು ತ್ರಿಗುಣಗಳಿಗೆ ವಶನಾಗಿದ್ದರೂ ಕೂಡ ಈ

ಇದು ಅಲ್ಲ, ಇದೂ ಅಲ್ಲ–ಎಂದು ಆ ಪರಮಾತ್ಮನನ್ನು ಬಿಟ್ಟು ಉಳಿದುದೆಲ್ಲವನ್ನೂ ಪರಿತ್ಯಜಿಸಲು ಬಯಸುವ ಜ್ಞಾನಿಗಳು ದುರ್ಭಾವನೆಗಳನ್ನು ಬಿಟ್ಟು ಅನನ್ಯವಾದ ಪ್ರಭಾವದಿಂದ ಯಾವುದನ್ನು ಆಲಿಂಗನ ಮಾಡಿಕೊಂಡು ಸಮಾಧಿಯಲ್ಲಿ ಪ್ರವೇಶಿಸಿ ನೆಲೆಪಡೆಯುತ್ತಾರೆಯೋ ಅದೇ ವಿಷ್ಣುವಿನ ಪರಮಪದವು. ಯಾರಿಗೆ ದೇಹ ಮತ್ತು ಮನೆಗಳ ವಿಷಯದಲ್ಲಿ 'ನಾನು', 'ನನ್ನದು' –ಎಂಬ ದುರಾಸಕ್ತಿ ಇಲ್ಲವೋ ಅವರು ತಾನೇ ಆ ವಿಷ್ಣುವಿನ ಪರಮಪದ (ಪರಮಸ್ವರೂಪ, ಪರಮಸ್ಥಾನವನ್ನು) ಪಡೆಯುವರು! ಈ ಪರಮಪದವನ್ನು ಪಡೆಯಲು ಬಯಸುವವರು ಇತರರು ಹೇಳಬಹುದಾದ ಮರ್ಯಾದೆ ಮೀರಿದ ಕೆಟ್ಟಮಾತುಗಳನ್ನೂ ಸಹಿಸಿಕೊಳ್ಳಬೇಕು. ಅದಕ್ಕೆ ಪ್ರತಿಯಾಗಿ ಯಾರನ್ನೂ ಅವಮಾನಗೊಳಿಸಬಾರದು. ಕ್ಷಣಭಂಗುರವಾದ ದೇಹದಲ್ಲಿ ಅಹಂಕಾರ–ಮಮಕಾರಗಳನ್ನಿಟ್ಟುಕೊಂಡು ಯಾರಲ್ಲಿಯೂ ವೈರವನ್ನು ಕಟ್ಟಿಕೊಳ್ಳಬಾರದು. (ಶ್ಲೋಕ ೩೨-೩೪)

ನಮೋ ಭಗವತೇ ತಸ್ಮೈ ಕೃಷ್ಣಾಯಾಕುಣ್ಠಮೇಧಸೇ ।
ಯತ್ಪಾದಾಮ್ಬುರುಹಧ್ಯಾನಾತ್ಸಂಹಿತಾಮಧ್ಯಗಾಮಿಮಾಮ್ ॥೩೫॥

ಯಾವನ ಅಡಿದಾವರೆಗಳನ್ನು ಧ್ಯಾನಿಸಿದ್ದರಿಂದ ನನಗೆ ಈ ಶ್ರೀಮದ್ಭಾಗವತಮಹಾಸಂಹಿತೆಯನ್ನು ಪಡೆಯಲು ಸಾಧ್ಯವಾಯಿತೋ ಅಂತಹ ಅಕ್ಷತ-ಅನಂತಜ್ಞಾನಪರಿಪೂರ್ಣನಾದ ಭಗವಂತನಾದ ಶ್ರೀಕೃಷ್ಣನಿಗೆ ನಮೋ ನಮಃ."

ಸೂತಪುರಾಣಿಕರ ಈ ಪ್ರವಚನವನ್ನು ಕೇಳಿದ ಶೌನಕಾದಿಮುನಿಗಳು, "ಎಲೈ ಸಾಧುಶಿರೋಮಣಿಯೇ! ಮಹಾತ್ಮರೂ ವೇದಗಳಿಗೆ ಆಚಾರ್ಯರೂ ಆದ ಪೈಲನೇ ಮುಂತಾದ ವೇದವ್ಯಾಸರ ಶಿಷ್ಯರು ವೇದಗಳನ್ನು ಹೇಗೆ ವಿಭಾಗಮಾಡಿದರು–ಎಂಬುದನ್ನು ತಿಳಿಸಪ್ಪಾ!"– ಎಂದು ಪ್ರಾರ್ಥಿಸಿದರು.

ಪೃಥಿವಿಯೇ ಮುಂತಾದ ಅಚಿತ್ತತ್ತ್ವಗಳನ್ನು ಪರಿಹರಿಸಿಕೊಂಡು ಹಸಿವು-ಬಾಯಾರಿಕೆ, ಶೋಕ-ಮೋಹ, ಮುಪ್ಪು ಮತ್ತು ಮರಣಗಳೆಂಬ ಆರು ಊರ್ಮಿ (ತರಂಗ)ಗಳನ್ನು ಕಳೆದುಹಾಕಿ, ಸಮಾಧಾನದಿಂದ ಕೂಡಿ, ಲೋಕವ್ಯಾಪಾರಗಳಿಂದ ವಿಶ್ರಾಂತನಾಗಬೇಕು. ಹಸಿವು-ಬಾಯಾರಿಕೆ, ಶೋಕ-ಮೋಹ, ಮುಪ್ಪು-ಮರಣ-ಎಂಬ ಆರಕ್ಕೆ ಷಡೂರ್ಮಿಗಳು (ಆರು ತೆರೆಗಳು)-ಎಂದು ಹೆಸರು.

ಸೂತಪುರಾಣಿಕರು ಅವರಿಗೆ ಹೀಗೆಂದರು.:

"ಮಹರ್ಷಿಗಳೇ! ಕೇಳಿರಿ. ಸತ್ಯಲೋಕವೆಂಬ ಪರಮಪದದಲ್ಲಿರುವ ಬ್ರಹ್ಮದೇವರು ಏಕಾಗ್ರಚಿತ್ತರಾದಾಗ ಅವರ ಹೃದಯಾಕಾಶದಲ್ಲಿ ಒಂದು ವಿಲಕ್ಷಣವಾದ ನಾದವು ಉಂಟಾಯಿತು. ಕಂಠವೇ ಮುಂತಾದ ಯಾವ ಸ್ಥಾನದೊಡನೆ ಘರ್ಷಣೆಯೇ ಇಲ್ಲದೆ ತನಗೆ ತಾನೇ ಉಂಟಾದ 'ಅನಾಹತ ನಾದ' ಅದು. ಕಿವಿಗಳನ್ನೂ ಮನೋವೃತ್ತಿಗಳನ್ನೂ ತಡೆಗಟ್ಟಿದಾಗ ಯೋಗಿಗಳು ಕೇಳುವ ನಾದ ಅದು. ಮಹಾಯೋಗಿಗಳು ಈ ಅನಾಹತ ನಾದವನ್ನು ಉಪಾಸನೆಮಾಡುವುದರಿಂದ ದ್ರವ್ಯ-ಕ್ರಿಯಾ-ಕಾರಕಗಳೆಂಬ ಮುಬ್ಬಗೆಯ ಮಲಗಳನ್ನು ಕೊಡವಿಕೊಂಡು ಹುಟ್ಟು-ಸಾವುಗಳಿಲ್ಲದ (ಮೋಕ್ಷ) ಗತಿಯನ್ನು ಪಡೆಯುತ್ತಾರೆ.* ಅನಾಹತನಾದದಿಂದ ಯಾವುದು (ಅಕಾರ-ಉಕಾರ-ಮಕಾರಗಳೆಂಬ) ಮೂರು ವರ್ಣಗಳಿಂದ ಅಥವಾ ಮೂರು ಮಾತ್ರೆಗಳಿಂದ ಕೂಡಿದೆಯೋ, ಯಾವುದರ ಉತ್ಪತ್ತಿಯನ್ನು ಯೋಗಿಗಳಲ್ಲದವರು ಅರಿಯಲಾರರೋ, ಯಾವುದು ಸ್ವಯಂಪ್ರಕಾಶವಾಗಿ ದೆಯೋ ಅಂತಹ ಭಗವಂತನಾದ ಪರಬ್ರಹ್ಮಪರಮಾತ್ಮನಿಗೆ ವಾಚಕವಾದ ಓಂಕಾರವು ಉಂಟಾಯಿತು.** ಪರಮಾತ್ಮನಿಂದ ಹೃದಯಾಕಾಶದಲ್ಲಿ ಅಭಿವ್ಯಕ್ತವಾಗುವ ಈ ಪ್ರಣವದಿಂದಲೇ ವಾಣಿಯು ಅಭಿವ್ಯಕ್ತವಾಗುತ್ತದೆ. ವೇದವಾಣಿಯು ಇದರಿಂದ ಅಭಿವ್ಯಕ್ತವಾಗುತ್ತದೆ. ಎಲ್ಲ ಇಂದ್ರಿಯಗಳೂ ಲಯಹೊಂದಿ ಕಿವಿಯ ವೃತ್ತಿಯೂ ನಿದ್ರಿಸುತ್ತಿರುವಾಗ ಒಳಗಿವಿಯಲ್ಲಿ ಈ 'ಸ್ಫೋಟ'ವೆಂದು ಪ್ರಸಿದ್ಧವಾದ ನಾದವನ್ನು ಯೋಗಿಗಳು ಕೇಳುತ್ತಾರೆ. ಈ ನಾದವು ತನಗೆ ಮೂಲ (ಆಶ್ರಯ) ವಾದ ಪರಬ್ರಹ್ಮಪರಮಾತ್ಮನಿಗೆ

---

*ದ್ರವ್ಯ-ಕ್ರಿಯಾ-ಕಾರಕ–ಎಂದರೆ ಕ್ರಮವಾಗಿ ಅಧಿಭೂತ, ಅಧ್ಯಾತ್ಮ, ಅಧಿದೈವಗಳು ಎಂದು ಶ್ರೀಧರೀಯ.

ಶರೀರ, ಕರ್ಮ ಮತ್ತು ಇಂದ್ರಿಯಗಳು–ಎಂದು ವೀರರಾಘವೀಯ.

**ಪ್ರಣವವೇ ಪರಬ್ರಹ್ಮನಿಗೆ ವಾಚಕ ಎಂದು ಯೋಗಸೂತ್ರವೂ ಘೋಷಣೆಮಾಡುತ್ತದೆ. 'ತಸ್ಯ ವಾಚಕಃ ಪ್ರಣವಃ । ತಜ್ಜಪಃ ತದರ್ಥಭಾವನಂ' ಪ್ರಣವವೇ ಪರಮಾತ್ಮನಿಗೆ ವಾಚಕವಾದ ಶಬ್ದವು : ಅದನ್ನು ವಿಧಿಪೂರ್ವಕವಾಗಿ ಜಪಿಸುತ್ತಾ ಅದರ ಅರ್ಥವನ್ನು ಭಾವಿಸುತ್ತಿದ್ದರೆ ಪರಮಾತ್ಮಸಮಾಧಿಯು ಸಿದ್ಧಿಸುತ್ತದೆ.

ನೇರವಾಗಿ ವಾಚಕವಾಗಿದೆ. ಸಮಸ್ತಮಂತ್ರ, ಉಪನಿಷತ್ತು ಮತ್ತು ವೇದ ಗಳಿಗೂ ಸನಾತನವಾದ ಬೀಜವಾಗಿದೆ. 'ಅ ಉ ಮ್' ಎಂಬ ಮೂರು ಈ ಓಂಕಾರದ ಮೂರು ವರ್ಣಗಳು. ಈ ಮೂರು ಸತ್ತ್ವ-ರಜಸ್ಸು-ತಮಸ್ಸು ಎಂಬ ಮೂರು ಗುಣಗಳ ರೂಪದಲ್ಲಿಯೂ, ಋಕ್-ಯಜುಸ್ಸು-ಸಾಮ ಎಂಬ ಮೂರು ನಾಮಗಳ ರೂಪದಲ್ಲಿಯೂ, ಭೂಃ-ಭುವಃ-ಸುವಃ ಎಂಬ ಮೂರು ಅರ್ಥಗಳ ರೂಪದಲ್ಲಿಯೂ, ಜಾಗ್ರತ್-ಸ್ವಪ್ನ-ಸುಷುಪ್ತಿ ಎಂಬ ಮೂರು ವೃತ್ತಿಗಳ ರೂಪದಲ್ಲಿಯೂ ಮೂರು-ಮೂರಾಗಿ ಲೆಕ್ಕಿಸಲ್ಪಡುವ ಭಾವಗಳನ್ನು ಧರಿಸುತ್ತವೆ. ಅನಂತರ ಭಗವಂತರಾದ ಬ್ರಹ್ಮದೇವರು ಈ ಓಂಕಾರದಿಂದ ಅಂತಃಸ್ಥ, ಊಷ್ಮ, ಸ್ವರ, ಸ್ಪರ್ಶ, ಹ್ರಸ್ವ ಮತ್ತು ದೀರ್ಘ ಎಂಬಿವೇ ಮುಂತಾದ ಲಕ್ಷಣಗಳುಳ್ಳ ವರ್ಣಗಳ ಸಮೂಹಮಾಲೆಯನ್ನು ಸೃಷ್ಟಿಮಾಡಿದರು.* ಇದರಿಂದಲೇ ಬ್ರಹ್ಮದೇವರು ತಮ್ಮ ನಾಲ್ಕು ಮುಖಗಳಿಂದ ಹೋತೃ, ಅಧ್ವರ್ಯು, ಉದ್ಗಾತೃ ಮತ್ತು ಬ್ರಹ್ಮ ಎಂಬ ನಾಲ್ಕು ಮಂದಿ ಋತ್ವಿಜರ ಕರ್ಮಗಳನ್ನು ಕ್ರಮವಾಗಿ ತಿಳಿಸುವುದಕ್ಕಾಗಿ ಓಂಕಾರ ಮತ್ತು ವ್ಯಾಹೃತಿಗಳಿಂದ ಕೂಡಿದ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದಗಳೆಂಬ ನಾಲ್ಕು ವೇದಗಳನ್ನು ಪ್ರಕಟ ಮಾಡಿದರು. ವೇದಗ್ರಹಣದಲ್ಲಿ ಕುಶಲರಾದ ಬ್ರಹ್ಮರ್ಷಿಗಳಾದ ಮರೀಚಿಯೇ ಮುಂತಾದ ತನ್ನ ಪುತ್ರರಿಗೆ ಇವುಗಳನ್ನು ಉಪದೇಶಮಾಡಿದರು. ಧರ್ಮ ವನ್ನು ಉಪದೇಶಮಾಡುವುದರಲ್ಲಿ ನಿಪುಣರಾದ ಈ ಬ್ರಹ್ಮರ್ಷಿಗಳು ತಾವು ಅಧ್ಯಯನಮಾಡಿದ್ದ ವೇದಗಳನ್ನು ತಮ್ಮ ಪುತ್ರರಿಗೆ ಉಪದೇಶಮಾಡಿದರು. ಈ ವೇದಗಳು ಸಂಪ್ರದಾಯ ಪರಂಪರೆಯಿಂದ ವ್ರತನಿಷ್ಠರಾಗಿದ್ದ ಇವರ ಶಿಷ್ಯರ ಪ್ರಶಿಷ್ಯರ ಮೂಲಕ ನಾಲ್ಕು ಯುಗಗಳಲ್ಲಿಯೂ ಅಧ್ಯಯನಮಾಡ ಲ್ಪಡುತ್ತಾ ಬೆಳಗಿದುವು. ದ್ವಾಪರಯುಗದ ಪ್ರಾರಂಭದಲ್ಲಿ ಮಹರ್ಷಿಗಳು ಈ ವೇದಗಳನ್ನು ವಿಭಾಗಮಾಡಿದರು. ಕಾಲದ ಪ್ರಭಾವದಿಂದ ಜನರ

---

*ಯ, ರ, ಲ, ವ–ಇವು ಅಂತಃಸ್ಥಗಳು. ಶ, ಷ, ಸ, ಹ–ಎಂಬಿವು ಊಷ್ಮವರ್ಣಗಳು. ಅ ಕಾರದಿಂದ ಕ ಕಾರದವರೆಗಿನ ವರ್ಣಗಳು ಸ್ವರಗಳೆನಿಸುತ್ತವೆ. ಕಕಾರದಿಂದ ಮಕಾರದವರೆಗಿನ ವರ್ಣಗಳು ಸ್ಪರ್ಶ (ವ್ಯಂಜನ)ಗಳು. ಅ, ಉ–ಮುಂತಾದುವು ಹ್ರಸ್ವಗಳು. ಆ, ಊ–ಮುಂತಾದುವು ದೀರ್ಘಗಳು.

ಆಯುಸ್ಸು, ಶಕ್ತಿ ಮತ್ತು ಬುದ್ಧಿಗಳು ಕ್ಷೀಣಿಸಿದ್ದನ್ನು ಗಮನಿಸಿದ ಆ ಮಹರ್ಷಿಗಳು ತಮ್ಮ ಹೃದಯದಲ್ಲಿ ಬೆಳಗುತ್ತಿದ್ದ ಪರಮಾತ್ಮನ ಪ್ರೇರಣೆಯಂತೆ ವೇದಗಳನ್ನು ಬಹುವಿಧವಾಗಿ ವಿಭಾಗಮಾಡಿದರು.

(ಶ್ಲೋಕ ೩೬-೪೭)

ಶೌನಕಮಹರ್ಷಿಗಳೇ! ಈ ವೈವಸ್ವತಮನ್ವಂತರದಲ್ಲಿಯೂ ಕೂಡ ಬ್ರಹ್ಮದೇವರು ಮತ್ತು ರುದ್ರದೇವರೇ ಮುಂತಾದ ಲೋಕಪಾಲಕರ ಪ್ರಾರ್ಥನೆಯಂತೆ ವಿಶ್ವಕರ್ತನಾದ ಭಗವಂತನು ಧರ್ಮಸಂರಕ್ಷಣೆಗಾಗಿ ಪರಾಶರಮಹರ್ಷಿಯಿಂದ ಸತ್ಯವತೀದೇವಿಯ ಗರ್ಭದಲ್ಲಿ ತನ್ನ ಅಂಶಾಂಶ-ಕಲಾಸ್ವರೂಪರಾದ ಕೃಷ್ಣದ್ವೈಪಾಯನರ ರೂಪದಲ್ಲಿ ಅವತಾರಮಾಡಿ ವೇದವಿಭಾಗಮಾಡಿದ್ದಾನೆ. ಈ ಯುಗದಲ್ಲಿ ವೇದಗಳನ್ನು ಋಕ್ಕು, ಯಜುಸ್ಸು, ಸಾಮ ಮತ್ತು ಅಥರ್ವ ಎಂದು ನಾಲ್ಕಾಗಿ ಭಗವಾನ್ ಕೃಷ್ಣದ್ವೈಪಾಯನರು ವಿಭಾಗಮಾಡಿದ್ದಾರೆ.* ಮಣಿಗಳ ಸಮೂಹದಿಂದ ಬೇರೆ ಬೇರೆ ಜಾತಿಯ ಮಣಿಗಳನ್ನು ಆರಿಸಿ ವರ್ಗೀಕರಿಸುವಂತೆ–ಅವರು ವೇದರಾಶಿಯಿಂದ ಋಕ್ಕು-ಯಜುಸ್ಸು-ಸಾಮ ಮತ್ತು ಅಥರ್ವಭಾಗಗಳನ್ನು ಆರಿಸಿ, ಮಂತ್ರಗಳ ಆಕಾರಪ್ರಕರಣಗಳಿಗೆ ಅನುಸಾರವಾಗಿ ವರ್ಗೀಕರಿಸಿ ಋಗ್ವೇದ-ಯಜುರ್ವೇದ-ಸಾಮವೇದ ಮತ್ತು ಅಥರ್ವವೇದಗಳೆಂಬ ನಾಲ್ಕು ಸಂಹಿತೆಗಳನ್ನು ರಚಿಸಿದರು. ಮಹಾಮೇಧಾವಿಗಳಾದ ಆ ವೇದವ್ಯಾಸ ಭಗವಂತರು ತಮ್ಮ ನಾಲ್ಕು ಮಂದಿ ಶಿಷ್ಯರನ್ನು ಕರೆಯಿಸಿ ಆ ಸಂಹಿತೆಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದನ್ನು ದಯಪಾಲಿಸಿದರು. ಪೈಲ ಎನ್ನುವ ಶಿಷ್ಯನಿಗೆ 'ಬಹ್ವೃಚ' ಎಂದು ಕರೆಯಲ್ಪಡುವ ಮೊದಲನೆಯದಾದ ಋಕ್ ಸಂಹಿತೆಯನ್ನೂ, ವೈಶಂಪಾಯನ ಎಂಬ ಶಿಷ್ಯನಿಗೆ 'ನಿಗದ' ಎಂದು ಕರೆಯಲ್ಪಡುವ ಎರಡನೆಯದಾದ ಯಜುಸ್ಸಂಹಿತೆಯನ್ನೂ, ಜೈಮಿನಿ ಎನ್ನುವ ಶಿಷ್ಯನಿಗೆ ಸಾಮಶ್ರುತಿಗಳ 'ಛಂದೋಗ' ಸಂಹಿತೆಯನ್ನೂ ಮತ್ತು

---

*ಅಂಶಾಂಶಕಲೆಯಿಂದ ಪರಾಶರರಿಂದ ಸತ್ಯವತಿ ಗರ್ಭದಲ್ಲಿ ಕೃಷ್ಣದ್ವೈಪಾಯನರ ರೂಪದಲ್ಲಿ ಭಗವಂತನು ಅವತಾರಮಾಡಿದನು. ಇಂತಹ ಅಂಶಾಂಶಕಲಯಾ–ಎಂಬುದಕ್ಕೆ ಮಾಯೆಯ ಸಾತ್ತ್ವಿಕಕಲೆಯಿಂದ–ಎಂದು ಶ್ರೀಧರಸ್ವಾಮಿಗಳು ಅರ್ಥೈಸಿದ್ದಾರೆ. 'ಅಂಶಃ–ಮಾಯಾ, ತಸ್ಯಾಂಶಃ–ಸತ್ತ್ವಂ, ತಸ್ಯ ಕಲಯಾ'

ಸುಮಂತು ಎನ್ನುವ ಶಿಷ್ಯನಿಗೆ 'ಅಥರ್ವಾಙ್ಗಿರಸ' ಎಂಬ ಸಂಹಿತೆಯನ್ನೂ ಅಧ್ಯಯನಮಾಡಿಸಿದರು.

ಋಗ್ವೇದ ವಿಭಾಗಗಳು

ಪೈಲಮಹರ್ಷಿಗಳು ತಾವು ಕಲಿತ *ಋಗ್ವೇದಸಂಹಿತೆಯನ್ನು ಎರಡು ವಿಧವಾಗಿ ವಿಂಗಡಿಸಿ ಅವುಗಳಲ್ಲಿ ಒಂದನ್ನು ಇಂದ್ರಪ್ರಮಿತಿಗೂ ಮತ್ತೊಂದನ್ನು ಬಾಷ್ಕಲನಿಗೂ ಅಧ್ಯಯನಮಾಡಿಸಿದರು. ಬಾಷ್ಕಲ ಮಹರ್ಷಿಗಳೂ ತಾವು ಅಧ್ಯಯನಮಾಡಿದ್ದ ವೇದಶಾಖೆಯನ್ನು ನಾಲ್ಕಾಗಿ ವಿಭಾಗಿಸಿ ಅವುಗಳನ್ನು ತಮ್ಮ ಶಿಷ್ಯರಾದ ಬೋಧ್ಯ, ಯಾಜ್ಞವಲ್ಕ್ಯ, ಪರಾಶರ ಮತ್ತು ಅಗ್ನಿಮಿತ್ರರಿಗೆ ಅಧ್ಯಯನಮಾಡಿಸಿದರು. ಆತ್ಮಸಂಯಮಿಯಾದ ಇಂದ್ರಪ್ರಮಿತಿಯು ಪ್ರತಿಭಾಶಾಲಿ ಶಿಷ್ಯರಿಂದ ಮಾಂಡೂಕೇಯ ಋಷಿಗೆ ತನ್ನ ಸಂಹಿತೆಯನ್ನು ಉಪದೇಶಿಸಿದನು. ಮಾಂಡೂಕೇಯರ ಶಿಷ್ಯೋತ್ತಮರು ದೇವಮಿತ್ರರು. ಆ ದೇವಮಿತ್ರರು ಸೌಭರಿಯೇ ಮುಂತಾದ ಶಿಷ್ಯಶ್ರೇಷ್ಠರಿಗೆ ವೇದಗಳನ್ನು ಅಧ್ಯಯನಮಾಡಿಸಿದರು. ಮಾಂಡೂಕೇಯರ ಪುತ್ರರು ಶಾಕಲ್ಯರು. ಅವರು ತಮ್ಮ ಸಂಹಿತೆಯನ್ನು ಐದಾಗಿ ವಿಭಾಗಮಾಡಿ ಅವುಗಳನ್ನು ವಾತ್ಸ್ಯ, ಮುದ್ಗಲ, ಶಾಲೀಯ, ಗೌಖಲ್ಯ ಮತ್ತು ಶಿಶಿರರೆಂಬ ಶಿಷ್ಯರಿಗೆ ಹೇಳಿಕೊಟ್ಟರು. ಶಾಕಲ್ಯರಿಗೆ ಜಾತೂಕರ್ಣ್ಯ ಎಂಬ ಮತ್ತೊಬ್ಬ ಶಿಷ್ಯರಿದ್ದರು. ಅವರು ತಮ್ಮ ಸಂಹಿತೆಯನ್ನು ಮೂರಾಗಿ ವಿಭಾಗಿಸಿ ಅವುಗಳಿಗೆ ಸಂಬಂಧಪಟ್ಟ ನಿರುಕ್ತಸಹಿತವಾದ ಅವುಗಳನ್ನು ತಮ್ಮ ಶಿಷ್ಯರಾದ ಬಲಾಕ, ಪೈಜ, ವೈತಾಲ ಮತ್ತು ವಿರಜರಿಗೆ ಉಪದೇಶಿಸಿದರು. ಬಾಷ್ಕಲರ ಪುತ್ರ ಬಾಷ್ಕಲಿಯು ಎಲ್ಲ ಶಾಖೆಗಳಿಂದಲೂ ಸಂಗ್ರಹಿಸಿ 'ವಾಲಖಿಲ್ಯ'ವೆಂಬ ಶಾಖೆಯನ್ನು ರಚಿಸಿದರು. ಅದನ್ನು ಪೈಲಾಯನಿ, ಭಜ್ಯ ಮತ್ತು ಕಾಸಾರಮುನಿಗಳು ಗ್ರಹಣಮಾಡಿದರು. ಈ ಬ್ರಹ್ಮರ್ಷಿಗಳು ಮೇಲೆ ಹೇಳಿದ ಸಂಪ್ರದಾಯಾನುಸಾರವಾಗಿ

*ಋಕ್–ಎಂದರೆ ಛಂದೋಬದ್ಧವಾಗಿರುವ ಮಂತ್ರಗಳು. ಯಜಸ್ಸು–ಎಂದರೆ ಛಂದಸ್ಸಿನ ಕಟ್ಟು ಇಲ್ಲದ ಮಂತ್ರಗಳು. ಸಾಮ–ಎಂದರೆ ಗಾನರೂಪವಾದ ಮಂತ್ರಗಳು ಮತ್ತು ಅಥರ್ವ–ಎಂದರೆ ಯಜ್ಞರಕ್ಷಣಾರೂಪ ಮಂತ್ರಗಳು–ಎಂದು ಸಾಮಾನ್ಯವಾಗಿ ವಿಭಾಗ.

ಋಗ್ವೇದಕ್ಕೆ ಸೇರಿದ ಬಹ್ವೃಚ ಶಾಖೆಗಳನ್ನು ಧರಿಸಿದರು. ಈ ವೇದಗಳ ವಿಭಜನೆಯ ಇತಿಹಾಸವನ್ನು ಕೇಳಿದವನು ಎಲ್ಲ ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ. (ಶ್ಲೋಕ ೪೮-೬೦)

ಯಜುರ್ವೇದ ವಿಭಾಗ

ವೈಶಂಪಾಯನಮಹರ್ಷಿಗಳ ಕೆಲವು ಶಿಷ್ಯರಿಗೆ 'ಚರಕಾಧ್ವರ್ಯು' ಗಳು ಎಂದು ಹೆಸರಾಯಿತು. ಅಧ್ವರ್ಯು ವೇದ ಎಂದರೆ ಯಜುರ್ವೇದ. ವೈಶಂಪಾಯನರಿಂದ ಈ ಅಧ್ವರ್ಯು ವೇದವನ್ನು ಕಲಿತ ಕೆಲವರು ತಮ್ಮ ಗುರುಗಳಿಗೆ ಒದಗಿದ್ದ ಬ್ರಹ್ಮಹತ್ಯಾದೋಷಕ್ಕೆ ಪ್ರಾಯಶ್ಚಿತ್ತವಾಗಿ ಒಂದು ವ್ರತವನ್ನು ಆಚರಿಸಿದರು. ಆದುದರಿಂದ ಇವರು 'ಚರಕಾಧ್ವರ್ಯು'ಗಳು ಎನಿಸಿದರು. ಯಾಜ್ಞವಲ್ಕ್ಯ ಎಂಬುವರೂ ವೈಶಂಪಾಯನರ ಶಿಷ್ಯರಲ್ಲಿ ಒಬ್ಬರು. ಇವರು ಒಮ್ಮೆ ಆಚಾರ್ಯರ ಬಳಿಗೆ ಹೋಗಿ, "ಭಗವಾನ್ ಆಚಾರ್ಯರೇ! ಈ ಚರಕಾಧ್ವರ್ಯುಗಳು ಅಲ್ಪಶಕ್ತಿಯುಳ್ಳವರು. ಇವರು ವ್ರತವನ್ನು ಆಚರಿಸಿದ್ದರಿಂದ ಏನು ಮಹಾಲಾಭ? ನಾನೊಬ್ಬನೇ ತಮ್ಮ ಪ್ರಾಯಶ್ಚಿತ್ತಕ್ಕಾಗಿ ದುಷ್ಕರವಾದ ವ್ರತವನ್ನು ಹಿಡಿಯುತ್ತೇನೆ"–ಎಂದು ವಿಜ್ಞಾಪಿಸಿದರು. ಶಿಷ್ಯನ ಈ ಮಾತನ್ನು ಕೇಳಿ ವೈಶಂಪಾಯನರಿಗೆ ತುಂಬಾ ಕ್ರೋಧವುಂಟಾಯಿತು. ಅವರು "ಎಲವೋ ಯಾಜ್ಞವಲ್ಕ್ಯ! ಸಾಕು ಮಾಡು ನಿನ್ನ ಅಹಂಕಾರದ ಮಾತನ್ನು. ಬ್ರಾಹ್ಮಣರನ್ನು ಅವಮಾನ ಮಾಡಿದ ನಿನ್ನಂತಹ ಶಿಷ್ಯನ ಆವಶ್ಯಕತೆಯೇನೂ ನನಗೆ ಇಲ್ಲ. ನನ್ನಿಂದ ಕಲಿತಿರುವ ವೇದವನ್ನೆಲ್ಲಾ ಇಲ್ಲಿಯೇ ಬಿಟ್ಟು ಬೇಗನೆ ಹೊರಟುಹೋಗು." ಎಂದು ಆಜ್ಞಾಪಿಸಿದರು. ಅಂತೆಯೇ ಆ ದೇವರಾತಪುತ್ರರಾದ ಯಾಜ್ಞವಲ್ಕ್ಯರು ತಾವು ಗುರುಗಳಿಂದ ಕಲಿತಿದ್ದ ಯಜುರ್ವೇದಮಂತ್ರಸಮೂಹವನ್ನು ಅಲ್ಲಿಯೇ ಕಕ್ಕಿಬಿಟ್ಟು ಅಲ್ಲಿಂದ ಹೊರಟುಹೋದರು. ಅನಂತರ ಅಲ್ಲಿದ್ದ ಕೆಲವು ಋಷಿಗಳಿಗೆ ಹಾಗೆ ಕಕ್ಕಲ್ಪಟ್ಟ ಯಜುರ್ವೇದಮಂತ್ರ ಸಮೂಹವನ್ನು ಕಂಡು ಹೇಗಾದರೂ ಅದನ್ನು ಗ್ರಹಿಸಿಬಿಡಬೇಕೆಂಬ ಆಸೆಯುಂಟಾಯಿತು. ಆಗ ಅವರು ತಿತ್ತಿರಿಪಕ್ಷಿಗಳ ರೂಪವನ್ನು ತಾಳಿ ಅದನ್ನು ಸೇವಿಸಿಬಿಟ್ಟರು. ಹಾಗೆ ಅವರು ಗ್ರಹಿಸಿದ ಯಜುರ್ವೇದ ಗಣವು 'ತೈತ್ತಿರೀಯ' ಎಂಬ ಪರಮರಮಣೀಯವಾದ ವೇದಶಾಖೆ

ಯಾಯಿತು. ಅನಂತರ ಯಾಜ್ಞವಲ್ಕ್ಯರಿಗೆ, ತಮ್ಮ ಗುರುಗಳ ಬಳಿಯಲ್ಲೂ ಇಲ್ಲದೇ ಇದ್ದಂತಹ ಶ್ರುತಿಗಳನ್ನು ಸಂಪಾದಿಸಬೇಕೆಂಬ ಉತ್ಕಟವಾದ ಆಸೆಯುಂಟಾಯಿತು. ಅದಕ್ಕಾಗಿ ಅವರು ಈ ಮಂತ್ರದಿಂದ ಸೂರ್ಯಭಗವಂತನನ್ನು ಸ್ತುತಿಸಿ ಆರಾಧಿಸಿದರು :

ಓಂ ನಮೋ ಭಗವತೇ ಆದಿತ್ಯಾಯಾಖಿಲಜಗತಾಮಾತ್ಮ ಸ್ವರೂಪೇಣ ಕಾಲಸ್ವರೂಪೇಣ ಚತುರ್ವಿಧಭೂತನಿಕಾಯಾನಾಂ ಬ್ರಹ್ಮಾದಿಸ್ತಮ್ಬಪರ್ಯನ್ತಾನಾಮನ್ತರ್ಹೃದಯೇಷು ಬಹಿರಪಿ ಚಾಕಾಶ ಇವೋಪಾಧಿನಾವ್ಯವಧೀಯಮಾನೋ ಭವಾನೇಕ ಏವ ಕ್ಷಣಲವನಿಮೇ ಷಾವಯವೋಪಚಿತಸಂವತ್ಸರಗಣೇನಾಪಾಮಾದಾನ ವಿಸರ್ಗಾಭ್ಯಾಮಿಮಾಂ ಲೋಕಯಾತ್ರಾಮನುವಹತಿ ॥೬೭॥

ಯದು ಹ ವಾವ ವಿಬುಧರ್ಷಭ ಸವಿತರದಸ್ತಪತ್ಯನುಸವನ-ಮಹರಹರಾಮ್ನಾಯವಿಧಿನೋಪತಿಷ್ಠಮಾನಾನಾಮಖಿಲದುರಿತವೃಜಿನ ಬೀಜಾ ವ ಭರ್ಜನ ಭಗವತಃ ಸಮಭಿಧೀಮಹಿ ತಪನ ಮಣ್ಡಲಮ್ ॥೬೮॥

ಯ ಇಹ ವಾವ ಸ್ಥಿರಚರನಿಕರಾಣಾಂ ನಿಜನಿಕೇತನಾನಾಂ ಮನಇನ್ದ್ರಿಯಾಸುಗಣಾನನಾತ್ಮನಃ ಸ್ವಯಮಾತ್ಮಾನ್ತರ್ಯಾಮೀ ಪ್ರಚೋದಯತಿ* ॥೬೯॥

ಯ ಏವೇಮಂ ಲೋಕಮತಿಕರಾಲವದನಾನ್ಧಕಾರಸಂಜ್ಞಾ-ಜಗರಗ್ರಹಗಿಲಿತಂ ಮೃತಕಮಿವ ವಿಚೇತನಮವಲೋಕ್ಯಾನು-ಕಮ್ಪಯಾ ಪರಮಕಾರುಣಿಕ ಈಕ್ಷಯೈವೋತ್ಥಾಪ್ಯಾಹರಹರನು-

---

*೬೭, ೬೮ ಮತ್ತು ೬೯ನೆಯ ವಾಕ್ಯಗಳಿಂದ ಕ್ರಮವಾಗಿ ಗಾಯತ್ರೀ ಮಂತ್ರದ 'ತತ್ಸವಿತುರ್ವರೇಣ್ಯಂ' 'ಭರ್ಗೋದೇವಸ್ಯ ಧೀಮಹಿ' ಮತ್ತು 'ಧಿಯೋ ಯೋ ನಃ ಪ್ರಚೋದಯಾತ್'–ಎಂಬ ಮೂರು ಪಾದಗಳನ್ನು ವ್ಯಾಖ್ಯಾನಿಸುತ್ತಾ ಸೂರ್ಯ ಭಗವಂತನನ್ನು ಸ್ತುತಿಸಿದೆ.

ಸವನಂ ಶ್ರೇಯಸಿ ಸ್ವಧರ್ಮಾಖ್ಯಾತ್ಮಾವಸ್ಥಾನೇ ಪ್ರವರ್ತಯ-
ತ್ಯವನಿಪತಿರಿವಾಸಾಧೂನಾಂ ಭಯಮುದೀರಯನ್ನಟತಿ ॥೨೦॥

ಪರಿತ ಆಶಾಪಾಲೈಸ್ತತ್ರ ತತ್ರ ಕಮಲಕೋಶಾಞ್ಜಲಿಭಿ-ರುಪಹೃತಾರ್ಹಣಃ ॥೨೧॥

ಅಥ ಹ ಭಗವಂಸ್ತವ ಚರಣನಲಿನಯುಗಲಂ ತ್ರಿಭುವನ ಗುರುಭಿರ್ವನ್ದಿತಮಹಮಯಾತಯಾಮಯಜುಃಕಾಮ ಉಪ - ಸರಾಮೀತಿ ॥೨೨॥

"ಓಂಕಾರಸ್ವರೂಪನಾದ ಭಗವಂತನಾದ ಆದಿತ್ಯನಿಗೆ ನಮಸ್ಕಾರವು. ಪ್ರಭುವೇ! ನೀನು ಸಂಪೂರ್ಣ ಜಗತ್ತಿಗೇ ಆತ್ಮಸ್ವರೂಪನು ಆಗಿದ್ದೀಯೇ. ಬ್ರಹ್ಮದೇವರಿಂದ ಪ್ರಾರಂಭವಾಗಿ ಹುಲ್ಲುಕಡ್ಡಿಯವರೆಗಿನ ಯಾವ ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ್ಜ–ಎಂಬ ನಾಲ್ಕು ಬಗೆಯ ಪ್ರಾಣಿಗಳುಂಟೋ ಅವೆಲ್ಲದರ ಹೃದಯದೊಳಗೂ ಮತ್ತು ಹೊರಗೂ ಆಕಾಶದಂತೆ ಒಂದೇ ಸಮನಾಗಿ ವ್ಯಾಪಿಸಿದರೂ ಉಪಾಧಿಯ ಧರ್ಮಗಳು ಅಂಟದೇ ಇರುವ ಅದ್ವಿತೀಯನಾದ ಭಗವಂತನೇ ಆಗಿದ್ದೀಯೇ. ಕ್ಷಣ, ಲವ, ನಿಮೇಷ ಮುಂತಾದ ಅವಯವಗಳಿಂದ ಕೂಡಿದ ಸಂವತ್ಸರಗಳ ಮೂಲಕವೂ ಮತ್ತು ನೀರನ್ನು ತೆಗೆದುಕೊಳ್ಳುವಿಕೆ ಮತ್ತು ಸುರಿಸುವಿಕೆ ಎಂಬ ಕರ್ಮಗಳ ಮೂಲಕವೂ ಸಮಸ್ತಲೋಕಗಳ ಜೀವನಯಾತ್ರೆಯನ್ನು ನಿರ್ವಹಿಸು ತ್ತಿರುವವನು ನೀನೊಬ್ಬನೇ.

ಎಲೈ ಪ್ರಭುವೇ! ದೇವದೇವೋತ್ತಮನೇ! ಸವಿತೃದೇವನೇ! ಪ್ರತಿ ದಿನವೂ ಮೂರು ಸಂಧ್ಯಾಸಮಯಗಳಲ್ಲೂ ವೇದವಿಧಿಗೆ ಅನುಸಾರವಾಗಿ ಯಾರು ನಿನ್ನನ್ನು ಉಪಾಸನೆಮಾಡುತ್ತಾರೆಯೋ ಅವರ ಸಮಸ್ತ ಪಾಪಗಳನ್ನೂ ಮತ್ತು ದುಃಖಗಳ ಬೀಜಗಳನ್ನೂ ನೀನು ಹುರಿದುಬಿಡುವೆ. ನೀನು ಸಮಸ್ತಸೃಷ್ಟಿಗೆ ಮೂಲಕಾರಣನೂ ಮತ್ತು ಸಮಸ್ತ ಐಶ್ವರ್ಯಗಳಿಗೆ ಸ್ವಾಮಿಯೂ ಆಗಿದ್ದೀಯೆ. ಇಂತಹ ನಿನ್ನ ತೇಜೋಮಯವಾದ ಮಂಡಲವನ್ನು ನಾವು ಏಕಾಗ್ರತೆಯಿಂದ ಧ್ಯಾನಿಸುತ್ತೇವೆ.

ಭಗವಂತ! ನೀನು ಎಲ್ಲರ ಆತ್ಮವೂ ಅಂತರ್ಯಾಮಿಯೂ ಆಗಿದ್ದೀಯೆ.

ಜಗತ್ತಿನಲ್ಲಿರುವ ಸಮಸ್ತಚರಾಚರಪ್ರಾಣಿಗಳಿಗೂ ಆಸರೆಯಾಗಿದ್ದೀಯೆ. ಅವರ ಅಚೇತನವಾದ ಮನಸ್ಸು, ಇಂದ್ರಿಯ ಮತ್ತು ಪ್ರಾಣಗಳಿಗೆ ಪ್ರೇರಕನಾಗಿದ್ದೀಯೆ. ಓ ದೇವನೇ! ಈ ಲೋಕವು ಪ್ರತಿದಿನವೂ ಕಗ್ಗತ್ತಲೆ ಎಂಬ ಹೆಬ್ಬಾವಿನ ಬಾಯಿಗೆ ಸಿಲುಕಿ ಅಚೇತನವಾಗಿ ಶವದಂತೆ ಆಗಿಬಿಡುವುದನ್ನು ಕಂಡು ಪರಮಕರುಣಾಸ್ವರೂಪನಾದ ನೀನು ಅವುಗಳ ಮೇಲೆ ದಯೆಯನ್ನು ಬೀರಿ ನಿನ್ನ ದೃಷ್ಟಿಮಾತ್ರದಿಂದಲೇ ಅವುಗಳನ್ನು ಎಬ್ಬಿಸುತ್ತೀಯೆ ಮತ್ತು ಪರಮಕಲ್ಯಾಣಕ್ಕೆ ಸಾಧನವಾದ ಪ್ರತಿದಿನದ ಆಯಾ ಸಮಯದ ಧರ್ಮಾನುಷ್ಠಾನಗಳಲ್ಲಿ ಆತ್ಮಕ್ಕೆ ಅಭಿಮುಖವಾಗುವಂತೆ ಮಾಡುತ್ತೀಯೆ. ರಾಜನು ದುಷ್ಟರನ್ನು ಭಯಪಡಿಸುತ್ತಾ ತನ್ನ ರಾಜ್ಯದಲ್ಲಿ ಸಂಚರಿಸುವಂತೆ ನೀನೂ ಕೂಡ ಚೋರರು, ಜಾರರು ಮುಂತಾದ ದುಷ್ಟರನ್ನು ಭಯಪಡಿಸುತ್ತಾ ಸಂಚಾರಮಾಡುತ್ತಿರುತ್ತೀಯೆ.

ಎಲ್ಲ ದಿಕ್ಕುಗಳಲ್ಲಿಯೂ ಇರುವ ಎಲ್ಲ ದಿಕ್ಪಾಲಕರೂ ತಮ್ಮ-ತಮ್ಮ ಜಾಗಗಳಲ್ಲಿ ತಮ್ಮ ಕಮಲದ ಮೊಗ್ಗಿನಂತೆ ಇರುವ ಅಂಜಲಿಗಳಿಂದ ನಿನಗೆ ಕಾಣಿಕೆಯನ್ನು ಸಮರ್ಪಿಸುತ್ತಾರೆ.

ಓ ಭಗವಂತನೇ! ನಿನ್ನ ಎರಡು ಅಡಿದಾವರೆಗಳೂ ಮೂರು ಲೋಕಗಳಿಗೂ ಗುರುಗಳಂತೆ ಇರುವ ಮಹಾತ್ಮರಿಂದ ವಂದಿತವಾಗಿವೆ. ನನಗೆ ಇಲ್ಲಿಯವರೆವಿಗೂ ಯಾರಿಗೂ ದೊರೆಯದೇ ಇರುವಂತಹ ನೂತನವಾದ ಯಜುರ್ವೇದವು ದೊರೆಯಲಿ. ಅದಕ್ಕಾಗಿ ಶರಣಾಗತನಾಗಿ ನಿನ್ನಲ್ಲಿ ಬಂದಿದ್ದೇನೆ."

ಸೂತಮಹರ್ಷಿಗಳು ಹೇಳುತ್ತಾರೆ :

"ಎಲೈ ಸನಕಾದಿಮುನಿಗಳೇ! ಯಾಜ್ಞವಲ್ಕ್ಯಮುನಿಗಳು ಮಾಡಿದ ಈ ಸ್ತುತಿಯನ್ನು ಕೇಳಿ ಪ್ರಸನ್ನನಾದ ಸೂರ್ಯಭಗವಂತನು ಅವರ ಮುಂದೆ ಒಂದು ಕುದುರೆಯ ರೂಪದಲ್ಲಿ ಪ್ರಕಟಗೊಂಡು ಅವರಿಗೆ, ಅಲ್ಲಿಯವರೆಗೂ ಯಾರಿಗೂ ದೊರೆಯದೇ ಇದ್ದಂತಹ ಮಂತ್ರಗಳನ್ನು ಉಪದೇಶಮಾಡಿದನು. ಆಗ ಯಾಜ್ಞವಲ್ಕ್ಯರು ತಾವು ಕಲಿತ ಯಜುರ್ವೇದಮಂತ್ರಗಳಿಂದ ಯಜುರ್ವೇದದ ಹದಿನೈದು ಶಾಖೆಗಳನ್ನು ರಚಿಸಿದರು. ಇವೇ ವಾಜಸ

ನೇಯ ಸಂಹಿತೆ ಎಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಇವನ್ನು ಕಾಣ್ವ, ಮಾಧ್ಯಂದಿನರೇ ಮುಂತಾದ ಋಷಿಗಳು ಗ್ರಹಣಮಾಡಿದರು.

ಶ್ರೀಕೃಷ್ಣದ್ವೈಪಾಯನಮಹರ್ಷಿಗಳಿಂದ ಜೈಮಿನಿಮುನಿಗಳು ಸಾಮಸಂಹಿತೆಯನ್ನು ಅಧ್ಯಯನಮಾಡಿದರಷ್ಟೇ! ಆ ಜೈಮಿನಿಮುನಿಗಳ ಪುತ್ರ ಸುಮಂತುಮುನಿ ಮತ್ತು ಪೌತ್ರನು ಸುನ್ವಾನ್. ಜೈಮಿನಿಗಳು ತಮ್ಮ ಪುತ್ರನಿಗೆ ಒಂದು ಸಂಹಿತೆಯನ್ನೂ ಮತ್ತು ಪೌತ್ರನಿಗೆ ಒಂದು ಸಂಹಿತೆಯನ್ನೂ ಉಪದೇಶಮಾಡಿದರು. ಜೈಮಿನಿಗೆ ಸುಕರ್ಮಾ ಎಂಬ ಒಬ್ಬ ಶಿಷ್ಯಶ್ರೇಷ್ಠನಿದ್ದನು. ಸಾಮವೇದವೆಂಬ ಮಹಾವೃಕ್ಷಕ್ಕೆ ಒಂದು ಸಾವಿರ ಸಂಹಿತಾಶಾಖೆಗಳನ್ನು ಏರ್ಪಡಿಸಿದವನು ಈ ಸುಕರ್ಮಾ ಮಹರ್ಷಿಯೇ. ಸುಕರ್ಮನ ಶಿಷ್ಯರು ಕೋಸಲದೇಶನಿವಾಸಿಗಳಾದ ಹಿರಣ್ಯನಾಭ, ಪೌಷ್ಯಂಜಿ ಮತ್ತು ಬ್ರಹ್ಮವಿದರಲ್ಲಿ ಶ್ರೇಷ್ಠತಮರಾದ ಆವನ್ತ್ಯರು. ಇವರು ಆ ಸಾವಿರ ಸಂಹಿತಾಶಾಖೆಗಳನ್ನು ಆಚಾರ್ಯರಿಂದ ಗ್ರಹಿಸಿದರು. ಪೌಷ್ಯಂಜಿ ಮತ್ತು ಆವನ್ತ್ಯರಿಗೆ ಐದುನೂರುಮಂದಿ ಶಿಷ್ಯರಿದ್ದರು. ಇವರು ಉತ್ತರದೇಶದವ ರಾದುದರಿಂದ ಔದೀಚ್ಯಸಾಮವೇದಿಗಳೆನಿಸಿದರು. ಇವರನ್ನೇ ಕೆಲವರು ಪ್ರಾಚ್ಯರೆಂದೂ ಕರೆಯುವರು. ಇವರೆಲ್ಲರೂ ಒಂದೊಂದು ಸಂಹಿತೆಯನ್ನು ಅಧ್ಯಯನಮಾಡಿದರು. ಪೌಷ್ಯಂಜಿಗೆ ಹಿಂದೆ ಹೇಳಿದವರಲ್ಲದೇ ಲೌಗಾಕ್ಷಿ, ಮಾಂಗಲಿ, ಕುಲ್ಯ, ಕುಸೀದ ಮತ್ತು ಕುಕ್ಷಿ ಎಂಬ ಶಿಷ್ಯರೂ ಇದ್ದರು. ಇವರಲ್ಲಿ ಒಬ್ಬೊಬ್ಬರೂ ನೂರು ನೂರು ಸಂಹಿತೆಗಳನ್ನು ಅಧ್ಯಯನಮಾಡಿದರು. ಹಿರಣ್ಯನಾಭರ ಶಿಷ್ಯರು ಕೃತ ಎನ್ನುವವರು. ಇವರು ತಮ್ಮ ಶಿಷ್ಯರಿಗೆ ಇಪ್ಪತ್ತುನಾಲ್ಕು ಸಂಹಿತೆಗಳನ್ನು ಉಪದೇಶಿಸಿದರು. ಉಳಿದ ಸಂಹಿತೆಗಳನ್ನು ಪರಮಸಂಯಮಿಗಳಾದ ಆವನ್ತ್ಯಮುನಿಗಳು ತಮ್ಮ ಶಿಷ್ಯರಿಗೆ ಉಪದೇಶಮಾಡಿದರು. ಇದು ಸಾಮವೇದದ ಪರಂಪರೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದ್ವಾದಶಸ್ಕಂಧದ ೬ನೆಯ ಅಧ್ಯಾಯವು ಮುಗಿಯಿತು.

——

ದ್ವಾದಶಸ್ಕಂಧ ಒನೆಯ ಅಧ್ಯಾಯ

ಅಥರ್ವವೇದ ವಿಭಾಗ : ಪುರಾಣಲಕ್ಷಣ : ಪುರಾಣಪ್ರವರ್ತಕರು

ಸೂತಮಹರ್ಷಿಗಳು ಹೇಳುತ್ತಾರೆ :

ಅಥರ್ವವಿತ್ಸುಮನ್ತುಶ್ಚ ಶಿಷ್ಯಮಧ್ಯಾಪಯತ್ ಸ್ವಕಾಮ್ ।
ಸಂಹಿತಾಂ ಸೋಽಪಿ ಪಥ್ಯಾಯ ವೇದದರ್ಶಾಯ ಚೋಕ್ತವಾನ್ ॥೧॥

ಎಲೈ ಮಹರ್ಷಿಗಳೇ! ಅಥರ್ವವೇದವಿಭಾಗವನ್ನು ಹೇಳುತ್ತೇನೆ ; ಕೇಳಿರಿ. ವೇದವ್ಯಾಸರಿಂದ ಅಥರ್ವವೇದವನ್ನು ಗ್ರಹಿಸಿದ ಅಥರ್ವ ಮುನಿಯು ಅಥರ್ವಸಂಹಿತೆಯನ್ನು ತನ್ನ ಪ್ರಿಯಶಿಷ್ಯನಾದ ಕಬಂಧ ಎನ್ನುವವನಿಗೆ ಉಪದೇಶಿಸಿದನು. ಕಬಂಧಮುನಿಯು ಆ ಸಂಹಿತೆಯನ್ನು ಎರಡಾಗಿ ವಿಭಾಗಿಸಿ ಪಥ್ಯ ಮತ್ತು ವೇದದರ್ಶ ಎಂಬ ಶಿಷ್ಯರಿಗೆ ಅಧ್ಯಯನ ಮಾಡಿಸಿದನು. ಇವರಲ್ಲಿ ವೇದದರ್ಶನಿಗೆ ಶೌಕ್ಲಾಯನಿ, ಬ್ರಹ್ಮಬಲಿ, ಮೋದೋಷ, ಪಿಪ್ಪಲಾಯನಿ ಎಂಬ ನಾಲ್ಕು ಮಂದಿ ಶಿಷ್ಯರಾದರು. ಇನ್ನು ಪಥ್ಯಮುನಿಯ ಶಿಷ್ಯರನ್ನು ಹೇಳುತ್ತೇನೆ. ಪಥ್ಯರಿಗೆ ಕಮುದ, ಶುನಕ ಮತ್ತು ಅಥರ್ವಜ್ಞರಾದ ಜಾಜಲಿ–ಎಂಬ ಮೂವರು ಶಿಷ್ಯರು. ಆಂಗಿರಸ ಗೋತ್ರೋದ್ಭವರಾದ ಶುನಕರಿಗೆ ಬಭ್ರು ಮತ್ತು ಸೈಂಧವಾಯನ ಎಂಬ ಇಬ್ಬರು ಶಿಷ್ಯರಾದರು. ಇವರು ಎರಡು ಸಂಹಿತೆಗಳನ್ನು ಅಧ್ಯಯನ ಮಾಡಿದರು. ಅಥರ್ವವೇದದ ಆಚಾರ್ಯರಲ್ಲಿ ಇವರಲ್ಲದೆ ಸೈಂಧವಾಯನರೇ ಮುಂತಾದವರ ಶಿಷ್ಯರಾದ ಸಾವರ್ಣ್ಯ ಇತ್ಯಾದಿಗಳೂ, ಹಾಗೆಯೇ ನಕ್ಷತ್ರಕಲ್ಪ, ಶಾಂತಿ, ಕಶ್ಯಪ, ಆಂಗಿರಸ ಮುಂತಾದ ವಿದ್ವಾಂಸರೂ ಸೇರಿದ್ದಾರೆ.

ಇನ್ನು ಪೌರಾಣಿಕರ ವಿಷಯವನ್ನು ಹೇಳುತ್ತೇನೆ :

ತ್ರಯ್ಯಾರುಣಿ, ಕಶ್ಯಪ, ಸಾವರ್ಣಿ, ಅಕೃತವ್ರಣ, ವೈಶಂಪಾಯನ ಮತ್ತು ಹಾರೀತ–ಈ ಆರು ಮಂದಿ ಪುರಾಣಗಳ ಪ್ರಸಿದ್ಧರಾದ ಆಚಾರ್ಯರು. ಈ ಎಲ್ಲ ಪೌರಾಣಿಕರೂ ನನ್ನ ತಂದೆಯಿಂದ ಒಂದೊಂದು

ಪುರಾಣಸಂಹಿತೆಯನ್ನು ಅಧ್ಯಯನಮಾಡಿದ್ದರು. ನನ್ನ ತಂದೆಯಾದರೋ ಸಾಕ್ಷಾತ್ ಭಗವಾನ್ ವೇದವ್ಯಾಸರಿಂದಲೇ ಆ ಎಲ್ಲ ಸಂಹಿತೆಗಳನ್ನೂ ಅಧ್ಯಯನಮಾಡಿದ್ದರು. ನಾನು ಆ ಆರು ಮಂದಿ ಆಚಾರ್ಯರಿಂದಲೂ ಎಲ್ಲ ಸಂಹಿತೆಗಳನ್ನೂ ಅಧ್ಯಯನಮಾಡಿದೆನು. ಪುರಾಣಗಳಲ್ಲಿ ಮೇಲೆ ಹೇಳಿದ ಆರು ಸಂಹಿತೆಗಳಲ್ಲದೆ ಇನ್ನೂ ನಾಲ್ಕು ಮೂಲಸಂಹಿತೆಗಳಿದ್ದುವು. ಅವುಗಳನ್ನೂ ಕಶ್ಯಪ, ಸಾವರ್ಣಿ, ಪರಶುರಾಮರ ಶಿಷ್ಯರಾದ ಅಕೃತವ್ರಣರೂ ಮತ್ತು ಅವರೆಲ್ಲರೊಡನೆ ನಾನೂ, ನನ್ನ ತೀರ್ಥರೂಪರಾಗಿದ್ದ, ವೇದವ್ಯಾಸರ ಶಿಷ್ಯರಾಗಿದ್ದ ಶ್ರೀರೋಮಹರ್ಷಣರ ಬಳಿ ಅಧ್ಯಯನಮಾಡಿದೆವು.

(ಶ್ಲೋಕ ೧-೭)

ಎಲೈ ಬ್ರಾಹ್ಮಣಶ್ರೇಷ್ಠರೇ! ಬ್ರಹ್ಮರ್ಷಿಗಳು ವೇದಶಾಸ್ತ್ರಗಳಿಗೆ ಅನುಗುಣವಾಗಿ ಹೇಳಿರುವ ಪುರಾಣಲಕ್ಷಣಗಳನ್ನು ಈಗ ತಿಳಿಸುತ್ತೇನೆ. ಸಾವಧಾನವಾಗಿ ಅವುಗಳನ್ನು ಕೇಳಿರಿ. ಪುರಾಣಗಳಿಗೆ ಹತ್ತು ಲಕ್ಷಣಗಳುಂಟು–ಎಂದು ಪೌರಾಣಿಕ ವಿದ್ವಾಂಸರು ಹೇಳುತ್ತಾರೆ. ಅವು ಯಾವುವೆಂದರೆ :

ಸರ್ಗೋಽಸ್ಯಾಥ ವಿಸರ್ಗಶ್ಚ ವೃತ್ತೀ ರಕ್ಷಾನ್ತರಾಣಿ ಚ ।
ವಂಶೋ ವಂಶಾನುಚರಿತಂ ಸಂಸ್ಥಾ ಹೇತುರಪಾಶ್ರಯಃ ॥೯॥

ಎಂಬಂತೆ ಈ ವಿಶ್ವದ ಸರ್ಗ, ವಿಸರ್ಗ, ವೃತ್ತಿ, ರಕ್ಷೆ, ಮನ್ವಂತರ, ವಂಶ, ವಂಶಾನುಚರಿತ, ಸಂಸ್ಥೆ (ಪ್ರಳಯ), ಹೇತು (ಊತಿ), ಅಪಾಶ್ರಯ ಎಂಬ ಹತ್ತು ಅಂಗಗಳಿಂದ ಕೂಡಿರುವುದು ಪುರಾಣ. ಕೆಲವು ಆಚಾರ್ಯರು ಪುರಾಣಗಳಲ್ಲಿ ಐದೇ ಲಕ್ಷಣಗಳಿವೆಯೆಂದು ಹೇಳುತ್ತಾರೆ. ಇವುಗಳಲ್ಲಿ ಮೊದಲನೆಯ ಹೇಳಿಕೆಯು ಮಹಾಪುರಾಣಗಳಿಗೂ ಎರಡನೆಯದು ಅಲ್ಪಪುರಾಣಗಳಿಗೂ ಅನ್ವಯಿಸುವುದು. ಈಗ ಈ ಲಕ್ಷಣಗಳ ವಿವರಣೆಯನ್ನು ಕೊಡುತ್ತೇನೆ.

ಅವ್ಯಾಕೃತಗುಣಕ್ಷೋಭಾನ್ಮಹತಸ್ತ್ರಿವೃತೋಽಹಮಃ ।
ಭೂತಮಾತ್ರೇನ್ದ್ರಿಯಾರ್ಥಾನಾಂ ಸಮ್ಭವಃ ಸರ್ಗ ಉಚ್ಯತೇ ॥೧೧॥

ಮೂಲಪ್ರಕೃತಿಯಲ್ಲಿ ಸತ್ತ್ವವೇ ಮುಂತಾದ ಗುಣಗಳ ಕಲಕುವಿಕೆ

ಯಿಂದ ಕ್ಷೋಭೆಯುಂಟಾದಾಗ ಮಹತ್ತತ್ತ್ವವು ಉಂಟಾಗುವುದು. ಆ ಮಹತ್ತತ್ತ್ವದಿಂದ ತಾಮಸ, ರಾಜಸ ಮತ್ತು ವೈಕಾರಿಕ (ಸಾತ್ತ್ವಿಕ) ಗಳೆಂದು ಮುಬ್ಬಗೆಯುಳ್ಳ ಅಹಂಕಾರವು ಆವಿರ್ಭವಿಸುವುದು. ಆ ಅಹಂಕಾರಗಳಿಂದ ಪಂಚತನ್ಮಾತ್ರೆಗಳೂ, ಇಂದ್ರಿಯಗಳೂ ಮತ್ತು ವಿಷಯಗಳೂ ಉಂಟಾಗುವುವು. ಈ ಉತ್ಪತ್ತಿಕ್ರಮಕ್ಕೆ 'ಸರ್ಗ' * ಎಂದು ಹೆಸರು.

ಪುರುಷಾನುಗೃಹೀತಾನಾಮೇತೇಷಾಂ ವಾಸನಾಮಯಃ ।
ವಿಸರ್ಗೋऽಯಂ ಸಮಾಹಾರೋ ಬೀಜಾದ್ಬೀಜಂ ಚರಾಚರಮ್ ॥

ಈ ಮಹತ್ತೇ ಮುಂತಾದ ತತ್ತ್ವಗಳು ಪರಮಪುರುಷನ ಅನುಗ್ರಹ–ಪ್ರೇರಣೆಗಳಿಂದ ಸೃಷ್ಟಿಸುವ ಸಾಮರ್ಥ್ಯವನ್ನು ಪಡೆದನಂತರ, ಬೀಜದಿಂದ ಬೀಜವು ಹುಟ್ಟುವಂತೆ ಚರಾ-ಚರಾತ್ಮಕವಾಗಿ ಮತ್ತು ಜೀವನ ಕರ್ಮವಾಸನೆಯಿಂದ ಉಂಟಾಗುವ ಕಾರ್ಯಪ್ರಪಂಚದ ಉತ್ಪತ್ತಿಯೇ ವಿಸರ್ಗವೆನಿಸುತ್ತದೆ.

ವೃತ್ತಿರ್ಭೂತಾನಿ ಭೂತಾನಾಂ ಚರಾಣಾಮಚರಾಣಿ ಚ ।
ಕೃತಾ ಸ್ವೇನ ನೃಣಾಂ ತತ್ರ ಕಾಮಾಚ್ಚೋದನಯಾಪಿ ವಾ ॥೧೩॥

ಈ ಚರಾಚರಪ್ರಾಣಿಗಳಲ್ಲಿ ಅಚರ (ಸ್ಥಾವರ) ಪದಾರ್ಥಗಳು ಚರ (ಜಂಗಮ) ಪ್ರಾಣಿಗಳಿಗೆ 'ವೃತ್ತಿ' ಅಂದರೆ ಜೀವನೋಪಾಯವಾಗಿವೆ. (ಚರಪ್ರಾಣಿಗಳ ಹಾಲು ಮುಂತಾದುವೂ ಜೀವನೋಪಾಯಗಳೇ) ಇವುಗಳಲ್ಲಿ ಕೆಲವು ಜೀವನೋಪಾಯಗಳನ್ನು ಮನುಷ್ಯರು ತಮ್ಮ ಸ್ವಾಭಾವಿಕವಾದ ಕಾಮನೆಯಿಂದ ನಿಶ್ಚಯಿಸಿಕೊಳ್ಳುತ್ತಾರೆ ಮತ್ತು ಕೆಲವು ಶಾಸ್ತ್ರವಿಹಿತಗಳೂ ಆಗಿವೆ. ಇದೇ ವೃತ್ತಿಯು.

ರಕ್ಷಾಚ್ಯುತಾವತಾರೇಹಾ ವಿಶ್ವಸ್ಯಾನು ಯುಗೇ ಯುಗೇ ।
ತಿರ್ಯಙ್ಮರ್ಹಷಿದೇವೇಷು ಹನ್ಯನ್ತೇ ಯೈಸ್ತ್ರಯೀದ್ವಿಷಃ ॥೧೪॥

---

*ಹೋಲಿಕೆ.: ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುಚರಿತಂ ಚೇತಿ ಪುರಾಣಂ ಪಂಚಲಕ್ಷಣಮ್ ॥
ಎಂದು ಅಮರಕೋಶವು ಹೇಳುತ್ತದೆ.

ಇನ್ನು 'ರಕ್ಷಾ' ಎಂಬ ಪುರಾಣಾಂಗದ ವಿಚಾರ. ಶ್ರೀಭಗವಂತನು ಪ್ರತಿಯುಗದಲ್ಲಿಯೂ ಪಶು-ಪಕ್ಷಿ, ಮನುಷ್ಯ, ಋಷಿ, ದೇವತೆ–ಮುಂತಾದ ನಾನಾರೂಪಗಳಲ್ಲಿ ಅವತರಿಸಿ ಬಗೆ-ಬಗೆಯ ಲೀಲೆಗಳನ್ನು ಮಾಡುತ್ತಾನೆ. ಆತನು ವೇದಧರ್ಮವನ್ನು ದ್ವೇಷಿಸುವವರ ಸಂಹಾರವನ್ನೂ ಈ ಅವತಾರಗಳಲ್ಲಿ ಮಾಡುತ್ತಾನೆ. ವಿಶ್ವದ ರಕ್ಷಣೆಗೋಸ್ಕರ ಆತನು ಈ ಅವತಾರಗಳನ್ನು ಎತ್ತುವುದರಿಂದ ಇದಕ್ಕೆ 'ರಕ್ಷಾ' ಎಂದು ಹೆಸರು.

ಮನ್ವನ್ತರಂ ಮನುರ್ದೇವಾ ಮನುಪುತ್ರಾಃ ಸುರೇಶ್ವರಃ ।
ಋಷಯೋಂಽಶಾವತಾರಶ್ಚ ಹರೇಃ ಷಡ್ವಿಧಮುಚ್ಯತೇ ॥೧೫॥

ಮನ್ವಂತರ ಎನ್ನುವುದೂ ಪುರಾಣದ ಒಂದು ಲಕ್ಷಣ. ಮನುಗಳು, ದೇವತೆಗಳು, ಮನುಪುತ್ರರು, ಇಂದ್ರ, ಸಪ್ತರ್ಷಿಗಳು ಮತ್ತು ಶ್ರೀಭಗವಂತನ ಅಂಶಾವತಾರಗಳು–ಈ ಆರರ ವಿಶೇಷತೆಯಿಂದ ಕೂಡಿದ ಸಮಯಕ್ಕೆ 'ಮನ್ವಂತರ' ಎಂದು ಹೆಸರು.

ರಾಜ್ಞಾಂ ಬ್ರಹ್ಮಪ್ರಸೂತಾನಾಂ ವಂಶಸ್ತ್ರೈಕಾಲಿಕೋಽನ್ವಯಃ ।
ವಂಶಾನುಚರಿತಂ ತೇಷಾಂ ವೃತ್ತಂ ವಂಶಧರಾಶ್ಚ ಯೇ ॥೧೬॥

ಹಾಗೆಯೇ 'ವಂಶಾನುಚರಿತವು' ಪುರಾಣದ ಒಂದು ಅಂಗ. ವಂಶ ಎಂದರೆ ಬ್ರಹ್ಮದೇವರಿಂದ ಸೃಷ್ಟಿಸಲ್ಪಟ್ಟ ಯಾವ ರಾಜರುಂಟೋ ಅವರ ಭೂತ, ಭವಿಷ್ಯತ್ತು ಮತ್ತು ವರ್ತಮಾನಕಾಲದ ಸಂತಾನಪರಂಪರೆ. ಆ ರಾಜರುಗಳ ಮತ್ತು ಅವರ ವಂಶನಿರ್ವಾಹಕವಾದ ರಾಜರ ಚರಿತ್ರೆಗೆ ವಂಶಾನುಚರಿತ ಎಂದು ಹೆಸರು.

ನೈಮಿತ್ತಿಕಃ ಪ್ರಾಕೃತಿಕೋ ನಿತ್ಯ ಆತ್ಯನ್ತಿಕೋ ಲಯಃ ।
ಸಂಸ್ಥೇತಿ ಕವಿಭಿಃ ಪ್ರೋಕ್ತಾ ಚತುರ್ಧಾಸ್ಯ ಸ್ವಭಾವತಃ ॥೧೭॥

ಈ ವಿಶ್ವ ಬ್ರಹ್ಮಾಂಡಕ್ಕೆ ಸ್ವಾಭಾವಿಕವಾಗಿಯೇ ಪ್ರಳಯವುಂಟಾಗುವುದು. ಆ ಪ್ರಳಯದಲ್ಲಿ ನೈಮಿತ್ತಿಕ, ಪ್ರಾಕೃತಿಕ, ನಿತ್ಯ ಮತ್ತು ಆತ್ಯನ್ತಿಕ ಎಂಬ ನಾಲ್ಕು ಭೇದಗಳುಂಟು. ಇವುಗಳನ್ನೇ ತತ್ತ್ವಜ್ಞರು 'ಸಂಸ್ಥಾ' ಎಂದು ಕರೆಯುತ್ತಾರೆ.

ಹೇತುರ್ಜೀವೋऽಸ್ಯ ಸರ್ಗಾದೇರವಿದ್ಯಾ ಕರ್ಮಕಾರಕಃ ।
ಯಂ ಚಾನುಶಯಿನಂ ಪ್ರಾಹುರವ್ಯಾಕೃತಮುತಾಪರೇ ॥೧೮॥

ಇನ್ನು ಹೇತುವಿನ ವಿಷಯ. ಸರ್ಗ-ವಿಸರ್ಗ ಮುಂತಾದುವುಗಳಿಗೆ ಕಾರಣವಾದ ಜೀವವೇ 'ಹೇತು' ಎನಿಸುತ್ತದೆ. ಅಜ್ಞಾನವಶದಿಂದ ಅನೇಕ ಕರ್ಮಕಲಾಪಗಳಲ್ಲಿ ಸಿಕ್ಕಿ ಅಲೆದಾಡುತ್ತಿರುವ ಜೀವವೇ ಈ ಪ್ರಪಂಚಸೃಷ್ಟಿಗೆ ಹೇತು (ಕಾರಣ)ವಾಗುತ್ತದೆ. ಅಂದರೆ ಜೀವಾತ್ಮರಿಗೆ ಕರ್ಮಫಲಗಳನ್ನು ಅನುಭವಿಸುವುದಕ್ಕಾಗಿಯೇ ಪ್ರಪಂಚಸೃಷ್ಟಿ. ಸೃಷ್ಟಿಗೆ ಮುಂಚೆ ಜೀವಗಳಿಗೆ ದೇವ-ಮನುಷ್ಯಾದಿ ನಾಮರೂಪವಿಭಾಗವಿರುವುದಿಲ್ಲ. ಅವು ತಾವು ಹಿಂದೆ ಅನುಭವಿಸಿ ಮಿಕ್ಕಿರುವ ಕರ್ಮವಾಸನೆಯಿಂದ ಮಾತ್ರ ಕೂಡಿರುತ್ತವೆ. ಹಾಗೆ ಕರ್ಮವಾಸನೆಗಳಿಂದ ಕೂಡಿದ ಜೀವವೇ ಸೃಷ್ಟಿಗೆ ಕಾರಣವಾಗುವುದರಿಂದ ಜೀವಗಳು ಹೇತು ಎನ್ನಿಸುತ್ತವೆ. ಇಂತಹ ಜೀವವನ್ನೇ ಕೆಲವರು 'ಅನುಶಾಯೀ' ಎಂದೂ ಕೆಲವರು 'ಅವ್ಯಾಕೃತ' ಎಂದೂ ಕರೆಯುತ್ತಾರೆ. ಪ್ರಕೃತಿಯಲ್ಲಿ ಶಯನಮಾಡುವ ಚೈತನ್ಯವಾಗಿರುವುದರಿಂದ ಈತನು ಅನುಶಾಯಿಯು. ನಾಮರೂಪವಿಭಾಗಕ್ಕೆ ಒಳಪಡದೇ ಪ್ರಕೃತಿಯಲ್ಲಿ ಬೆರೆತಿರುವಾಗ ಈತನೇ 'ಅವ್ಯಾಕೃತ' ನೆನಿಸುತ್ತಾನೆ.

ವ್ಯತಿರೇಕಾನ್ವಯೋ ಯಸ್ಯ ಜಾಗ್ರತ್ಸ್ವಪ್ನಸುಷುಪ್ತಿಷು ।
ಮಾಯಾಮಯೇಷು ತದ್ಬ್ರಹ್ಮ ಜೀವವೃತ್ತಿಷ್ವಪಾಶ್ರಯಃ ॥೧೯॥

ಈಗ 'ಅಪಾಶ್ರಯ' ಎಂಬ ಪುರಾಣಾಂಗವನ್ನು ವಿವರಿಸುತ್ತೇನೆ. ಪರಬ್ರಹ್ಮವನ್ನೇ 'ಅಪಾಶ್ರಯ' ವೆಂದು ಕರೆಯುತ್ತಾರೆ. ಪ್ರಕೃತಿಯ ಪರಿಣಾಮವಾಗಿ ಜೀವನಿಗೆ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ವೃತ್ತಿಗಳುಂಟು. ಈ ವೃತ್ತಿಗಳಿಗೆ ವಿಶ್ವ, ತೈಜಸ, ಪ್ರಾಜ್ಞ ಎಂಬ ಹೆಸರು ಗಳಿವೆ. ಇವುಗಳಿಗೆ ತಾನೇ ನಿರ್ವಾಹಕನಾಗಿದ್ದರೂ ಪರಮಾತ್ಮನು ಈ ಅವಸ್ಥೆಗಳಿಗೆ ತುತ್ತಾಗುವುದಿಲ್ಲ. ಇವುಗಳನ್ನು ದಾಟಿರುವ 'ತುರೀಯ' (ನಾಲ್ಕನೆಯದು) ಎಂಬ ಪರತತ್ತ್ವವಾಗಿದ್ದಾನೆ. ಹೀಗೆ ಈತನು ಮೂರು ಅವಸ್ಥೆಗಳಲ್ಲಿ ಅನ್ವಯ (ಸಂಬಂಧ) ಮತ್ತು ವ್ಯತಿರೇಕ (ಅಸಂಬಂಧ)–

ಇವೆರಡಕ್ಕೂ ಆಶ್ರಯನಾಗಿರುವುದರಿಂದ ಈತನನ್ನು 'ಅಪಾಶ್ರಯ' ಎನ್ನುತ್ತಾರೆ.

ಪದಾರ್ಥೇಷು ಯಥಾ ದ್ರವ್ಯಂ ಸನ್ಮಾತ್ರಂ ರೂಪನಾಮಸು ।
ಬೀಜಾದಿಪಞ್ಚಾನ್ತಾಸು ಹ್ಯವಸ್ಥಾಸು ಯುತಾಯುತಮ್ ॥೨೦॥

ವಿರಮೇತ ಯದಾ ಚಿತ್ತಂ ಹಿತ್ವಾ ವೃತ್ತಿತ್ರಯಂ ಸ್ವಯಮ್ ।
ಯೋಗೇನ ವಾ ತದಾಽತ್ಮಾನಂ ವೇದೇಹಾಯಾ ನಿವರ್ತತೇ ॥೨೧॥

ಪದಾರ್ಥಗಳಲ್ಲಿ ದ್ರವ್ಯವು ಸನ್ಮಾತ್ರವಾಗಿದೆ. ನಿರ್ವಿಕಾರವಾಗಿದೆ. ಸ್ವರೂಪತಃ ಅದಕ್ಕೆ ಯಾವ ಅವಸ್ಥಾಭೇದವೂ ಇಲ್ಲ. ಕಾರ್ಯಾವಸ್ಥೆಯಲ್ಲಿ ಮಾತ್ರ ಅದಕ್ಕೆ ಅವಸ್ಥಾಭೇದಗಳು. ಅದಕ್ಕೆ ಆಶ್ರಯವಾಗಿರುವ ಪರಬ್ರಹ್ಮಕ್ಕೆ ಸ್ವರೂಪದಿಂದ ಅವಸ್ಥಾಸಂಬಂಧ (ಅನ್ವಯ) ಇರುವುದಿಲ್ಲ. ವ್ಯತಿರೇಕ (ಅಸಂಬಂಧವೇ) ಇರುತ್ತದೆ. ಕಾರ್ಯಾವಸ್ಥೆಯಲ್ಲಿ ಮಾತ್ರ ಅನ್ವಯ (ಅವಸ್ಥಾಸಂಬಂಧವು) ಬರುತ್ತದೆ. ಹೀಗೆ ಇದು ಯುತ ಮತ್ತು ಅಯುತ ಎರಡೂ ಆಗುತ್ತದೆ. ಆತ್ಮವಿಚಾರದಿಂದ ಅಥವಾ ಯೋಗಾಭ್ಯಾಸದಿಂದ ಈ ಮೂರು ವೃತ್ತಿಗಳನ್ನೂ ತ್ಯಜಿಸಿ ವಿಶ್ರಾಂತಿ ಹೊಂದಿದಾಗ ಆತ್ಮಜ್ಞಾನ ವುಂಟಾಗುತ್ತದೆ. ಅಂತಹ ಆತ್ಮಜ್ಞಾನವನ್ನು ಪಡೆದವನು ಅವಿದ್ಯೆ ಯಿಂದುಂಟಾದ ಕರ್ಮವಾಸನೆ ಮತ್ತು ಕರ್ಮಪ್ರವೃತ್ತಿಗಳಿಂದ ನಿವೃತ್ತನಾಗುತ್ತಾನೆ.

ಎಲೈ ಮಹರ್ಷಿಗಳೇ! ಪುರಾತತ್ತ್ವವನ್ನು ಬಲ್ಲ ವಿದ್ವಾಂಸರು ಈ ಲಕ್ಷಣಗಳಿಂದ ಪುರಾಣಗಳನ್ನು ಗುರುತಿಸುತ್ತಾರೆ. ಇಂತಹ ಲಕ್ಷಣಗಳಿಂದ ಕೂಡಿದ ದೊಡ್ಡ ಮತ್ತು ಚಿಕ್ಕದಾದ ಪುರಾಣಗಳು ಹದಿನೆಂಟು ಎಂದು ಹೇಳುತ್ತಾರೆ. ಬ್ರಹ್ಮಪುರಾಣ, ಪದ್ಮಪುರಾಣ, ವಿಷ್ಣುಪುರಾಣ, ಶಿವಪುರಾಣ, ಲಿಂಗಪುರಾಣ, ಗರುಡಪುರಾಣ, ನಾರದೀಯ ಪುರಾಣ, ಭಾಗವತ ಪುರಾಣ, ಅಗ್ನಿಪುರಾಣ, ಸ್ಕಂದಪುರಾಣ, ಭವಿಷ್ಯಪುರಾಣ, ಬ್ರಹ್ಮವೈವರ್ತಪುರಾಣ, ಮಾರ್ಕಂಡೇಯಪುರಾಣ, ವಾಮನಪುರಾಣ, ವರಾಹಪುರಾಣ, ಮತ್ಸ್ಯ ಪುರಾಣ, ಕೂರ್ಮಪುರಾಣ, ಬ್ರಹ್ಮಾಂಡಪುರಾಣ–ಎಂಬಿವೇ ಆ ಹದಿನೆಂಟು ಪುರಾಣಗಳು.

ಎಲೈ ಬ್ರಾಹ್ಮಣೋತ್ತಮರೇ! ವೇದವ್ಯಾಸರ ಶಿಷ್ಯಪರಂಪರೆಯು ಹೇಗೆ ವೇದಸಂಹಿತೆ ಮತ್ತು ಪುರಾಣಸಂಹಿತೆಗಳ ಅಧ್ಯಯನ, ಅಧ್ಯಾಪನ, ವಿಭಾಗವಿಶ್ಲೇಷಣೆಗಳನ್ನು ಮಾಡಿತು–ಎಂಬುದನ್ನು ನಿಮಗೆ ತಿಳಿಸಿಯಾಯಿತು. ಈ ಪ್ರಸಂಗವನ್ನು ಯಾರು ಅನುಸಂಧಾನಮಾಡುತ್ತಾರೆಯೋ ಅವರಿಗೆ ಬ್ರಹ್ಮತೇಜಸ್ಸು ವೃದ್ಧಿಹೊಂದುವುದು.*

ಮಹಾಪುರಾಣವೂ ಪಾರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ದ್ವಾದಶಸ್ಕಂಧದ ೭ನೆಯ ಅಧ್ಯಾಯವು ಮುಗಿಯಿತು.

——

---

*ಮದ್ವಯಂ ಭದ್ವಯಂ ಚೈವ ಬ್ರತ್ರಯಂ ವ ಚತುಷ್ಟಯಮ್ ।
ಅನಾಪಲಿಂಗ ಕೂಸ್ಕಾನಿ ಪುರಾಣಾನಿ ಪ್ರಚಕ್ಷತೇ ॥

ಎಂಬ ಶ್ಲೋಕವು ಈ ಹದಿನೆಂಟು ಪುರಾಣನಾಮಧೇಯಗಳನ್ನು ಸ್ಮರಿಸಲು ಸಹಾಯ ಮಾಡುತ್ತದೆ.

ಮಕಾರದಿಂದ ಆರಂಭವಾಗುವುದು		೨ (ಮತ್ಸ್ಯ,ಮಾರ್ಕಂಡೇಯ)
ಭಕಾರದಿಂದ	,,	೨ (ಭವಿಷ್ಯ, ಭಾಗವತ)
ಬ್ರಕಾರದಿಂದ	,,	೩ (ಬ್ರಹ್ಮಾಂಡ, ಬ್ರಾಹ್ಮ, ಬ್ರಹ್ಮವೈವರ್ತ)
ವಕಾರದಿಂದ	,,	೪ (ವಿಷ್ಣು, ವರಾಹ, ವಾಮನ, ವಾಯು)
ಆಕಾರದಿಂದ	,,	೧ (ಅಗ್ನಿ)
ನಕಾರದಿಂದ	,,	೧ (ನಾರದೀಯ)
ಪಕಾರದಿಂದ	,,	೧ (ಪದ್ಮ)
ಲಿಕಾರದಿಂದ	,,	೧ (ಲಿಂಗ)
ಗಕಾರದಿಂದ	,,	೧ (ಗರುಡ)
ಕಕಾರದಿಂದ	,,	೧ (ಕೂರ್ಮ)
ಸ್ಕಕಾರದಿಂದ	,,	೧ (ಸ್ಕಂದ)
	ಒಟ್ಟು	೧೮

ಕೆಲವರ ಪ್ರಕಾರ 'ಶಿವಪುರಾಣದ' ಬದಲು 'ವಾಯುಪುರಾಣ'ವನ್ನು ಮಹಾಪುರಾಣಗಳ ಪಟ್ಟಿಯಲ್ಲಿ ಪಠಿಸಬೇಕು. ಈ ಶ್ಲೋಕದಲ್ಲಿ ಹಾಗೆಯೇ ಪಠಿಸಿದೆ.

ಮಾರ್ಕಂಡೇಯರ ಚರಿತ್ರವು: ಅವರ ತಪಸ್ಸು ಮತ್ತು ನರ-ನಾರಾಯಣರ ದರ್ಶನ

ಶೌನಕಮಹರ್ಷಿಗಳು ಸೂತಪುರಾಣಿಕರನ್ನು ಪುನಃ ಹೀಗೆ ಪ್ರಶ್ನಿಸುತ್ತಾರೆ :

ಸೂತ ಜೀವ ಚಿರಂ ಸಾಧೋ ವದ ನೋ ವದತಾಂ ವರ ।
ತಮಸ್ಯಪಾರೇ ಭ್ರಮತಾಂ ನೃಣಾಂ ತ್ವಂ ಪಾರದರ್ಶನಃ ॥೧॥

"ಓ ಸೂತ! ಸಾಧುಶಿರೋಮಣಿಯೇ! ನೀನು ಚಿರಕಾಲಬಾಳು. ವಾಗ್ಮಿಗಳಲ್ಲಿ ವರಿಷ್ಠನಾದವನು ನೀನು. ಅಪಾರವಾದ ಅಜ್ಞಾನದ ಇರುಳಿನಲ್ಲಿ ಅಲೆದಾಡುತ್ತಿರುವ ಚೇತನರನ್ನು ದಡಮುಟ್ಟಿಸಿ ಪರಮಾತ್ಮನ ದರ್ಶನ ಮಾಡಿಸುವ ಮಹಾನುಭಾವನು ನೀನು. ದಯೆಯಿಟ್ಟು ನನ್ನ ಈ ಒಂದು ಪ್ರಶ್ನೆಗೆ ಉತ್ತರ ನೀಡು.

ಮೃಕಂಡುವಿನ ಪುತ್ರನಾದ ಮಾರ್ಕಂಡೇಯಮಹರ್ಷಿಯನ್ನು ದೀರ್ಘಾಯುಷ್ಮಂತನೆಂದೂ ಜಗತ್ತನ್ನೆಲ್ಲಾ ನುಂಗಿಹಾಕುವ ಪ್ರಳಯಕಾಲ ದಲ್ಲಿಯೂ ಜೀವಿತನಾಗಿದ್ದವನೆಂದೂ ಹೇಳುತ್ತಾರೆ. ಆ ಮಹಾತ್ಮನು ಇದೇ ಕಲ್ಪದಲ್ಲಿ ನಮ್ಮ ವಂಶದಲ್ಲೇ ಜನಿಸಿದವನು ; ಭೃಗುಕುಲಶಿರೋಮಣಿಯು ಎಂಬುದಾಗಿಯೂ ಕೇಳಿದ್ದೇನೆ. ನಮಗೆ ತಿಳಿದಂತೆ ಈ ಕಲ್ಪದಲ್ಲಿ ಇಲ್ಲಿಯವರೆಗೂ ಯಾವ ಪ್ರಳಯವೂ ಆಗಿಲ್ಲ. ಹೀಗಿರುವಾಗ ಆತನು ಪ್ರಳಯಕಾಲದಲ್ಲಿ ಸಮಸ್ತಭೂಮಂಡಲವೂ ಸಮುದ್ರದಲ್ಲಿ ಮುಳುಗಿಹೋಗಿದ್ದಾಗ ತಾನೊಬ್ಬನೇ ಆ ಪ್ರಳಯಜಲದಲ್ಲಿ ಬದುಕಿದ್ದನು ಮತ್ತು ಅಕ್ಷಯವಟವೆಂಬ ಆಲದೆಲೆಯ ಮೇಲೆ ಮಲಗಿದ ಶಿಶುರೂಪಿ ಪರಮಪುರುಷನನ್ನು ದರ್ಶನಮಾಡಿದನು–ಎಂದು ಜನರು ಹೇಳುವುದು ಹೇಗೆ ನಿಜವಾಗುತ್ತದೆ? ನನ್ನ ಮನಸ್ಸಿನಲ್ಲಿ ಈ ದೊಡ್ಡ ಸಂದೇಹವುಂಟಾಗಿದೆ. ನಿಜಸ್ಥಿತಿಯನ್ನು ತಿಳಿಯಲು ಮನಸ್ಸು ತುಂಬಾ ಕುತೂಹಲಗೊಂಡಿದೆ. ಕೃಪೆಯಿಟ್ಟು ಈ ಸಂಶಯವನ್ನು ನೀಗಿಸು. ನೀನು ಮಹಾಯೋಗಿ. ಪೌರಾಣಿಕರಲ್ಲಿ ಅಗ್ರಗಣ್ಯನಾದವನು."

ಸೂತಪುರಾಣಿಕನು ಹೀಗೆ ಉತ್ತರ ನೀಡಿದನು :

“ಭಲೇ ಮಹರ್ಷಿಗಳೇ! ನೀವು ತುಂಬಾ ಒಳ್ಳೆಯ ಪ್ರಶ್ನೆಯನ್ನು ಕೇಳಿದಿರಿ. ಇದು ಜನರ ಭ್ರಮೆಯನ್ನು ಹೋಗಲಾಡಿಸುವ ಪ್ರಶ್ನೆ. ಏಕೆಂದರೆ : ಕಲಿಮಲವನ್ನು ತೊಳೆದುಹಾಕುವ ಶ್ರೀನಾರಾಯಣನ ಕಥೆಯು ಇದರಲ್ಲಿ ಸೇರಿದೆ. ಆ ಪವಿತ್ರವಾದ ಚರಿತ್ರವನ್ನು ತಿಳಿಸುವೆನು ಕೇಳಿರಿ. ಮಹರ್ಷಿ ಮೃಕಂಡುವು ತನ್ನ ಪುತ್ರನಿಗೆ, ಬ್ರಾಹ್ಮಣನಿಗೆ ಆಯಾ ಕಾಲಗಳಲ್ಲಿ ವಿಹಿತವಾದ ಎಲ್ಲ ಸಂಸ್ಕಾರಗಳನ್ನೂ ನಡೆಸಿದನು. ಉಪನೀತನಾದ ಮಾರ್ಕಂಡೇಯನು ವಿಧಿಪೂರ್ವಕವಾಗಿ ವೇದಾಧ್ಯಯನಮಾಡಿ ತಪಸ್ಸು-ಸ್ವಾಧ್ಯಾಯಗಳಲ್ಲಿ ನಿಷ್ಣಾತನಾದನು. ನೈಷ್ಠಿಕ ಬ್ರಹ್ಮಚರ್ಯವ್ರತದೀಕ್ಷೆಯನ್ನು ಕೈಗೊಂಡನು. ಶಾಂತನಾಗಿ ಜಟಾಧಾರಿಯಾಗಿ ನಾರುಡೆಯನ್ನುಟ್ಟು ದಂಡ-ಕಮಂಡಲು-ಯಜ್ಞೋಪವೀತಗಳನ್ನು ಧರಿಸಿ ಕೃಷ್ಣಾಜಿನವನ್ನು ಹೊದ್ದುಕೊಂಡು ಜಪ ಮಾಲೆ ಮತ್ತು ದರ್ಭಪವಿತ್ರಗಳನ್ನು ಧರಿಸಿದನು. ಅಖಂಡಬ್ರಹ್ಮಚರ್ಯ ವ್ರತದಲ್ಲಿ ವೃದ್ಧಿಹೊಂದುವುದಕ್ಕಾಗಿ ಈ ವೇಷ-ಭೂಷಣಗಳಿಂದ ಅಲಂಕೃತ ನಾದ ಆತನು ಸಂಧ್ಯಾಕಾಲಗಳಲ್ಲಿ ಸೂರ್ಯನ ಉಪಸ್ಥಾನಮಾಡುವುದರ ಮೂಲಕವಾಗಿಯೂ ಗುರುಶುಶ್ರೂಷೆ, ಬ್ರಾಹ್ಮಣಸೇವೆಗಳನ್ನು ಮಾಡುವು ದರ ಮೂಲಕವಾಗಿಯೂ ಮತ್ತು ಹೃದಯಕಮಲದಲ್ಲಿ ಧ್ಯಾನಮಾಡುವುದರ ಮೂಲಕವಾಗಿಯೂ ಶ್ರೀಹರಿಯನ್ನು ಆರಾಧಿಸುತ್ತಿದ್ದನು. ಸಾಯಂಕಾಲ-ಪ್ರಾತಃಕಾಲಗಳಲ್ಲಿ ತಾನು ಭಿಕ್ಷೆಬೇಡಿ ತಂದ ಅನ್ನವನ್ನು ಆಚಾರ್ಯರಿಗೆ ಸಮರ್ಪಿಸಿ ಅವರು ಅಪ್ಪಣೆಕೊಟ್ಟರೆ ಒಪ್ಪತ್ತು ಊಟಮಾಡುವುದು ಇಲ್ಲ ದಿದ್ದರೆ ಉಪವಾಸವನ್ನೇ ಮಾಡುವುದು—ಎಂಬ ಕಠಿಣ ನಿಯಮದಿಂದಿರುತ್ತಾ, ತಪಸ್ಸು-ಸ್ವಾಧ್ಯಾಯಗಳಲ್ಲಿ ನಿರತನಾಗಿ ಲಕ್ಷ-ಲಕ್ಷ ವರ್ಷಗಳವರೆಗೆ ಶ್ರೀಹರಿ ಶ್ರೀಹೃಷೀಕೇಶನನ್ನು ಆರಾಧಿಸುತ್ತಾ, ಜಯಿಸಲು ಅತಿಕಷ್ಟಸಾಧ್ಯವಾಗಿರುವ ಮೃತ್ಯುವನ್ನು ಗೆದ್ದುಬಿಟ್ಟನು. ಇವನ ಈ ನಿಯಮನಿಷ್ಠೆ ಮತ್ತು ಮೃತ್ಯುವಿಜಯವನ್ನು ನೋಡಿ ಬ್ರಹ್ಮದೇವರು, ರುದ್ರದೇವರು, ಭೃಗುಮಹರ್ಷಿಗಳು, ದಕ್ಷಪ್ರಜಾಪತಿ, ಸನಕಾದಿ ಬ್ರಹ್ಮಮಾನಸಪುತ್ರರು, ಮನುಷ್ಯರು, ದೇವತೆಗಳು, ಪಿತೃದೇವತೆಗಳು ಮತ್ತು ಭೂತಕೋಟಿಗಳು ಎಲ್ಲರಿಗೂ ಅತ್ಯಂತ ಅಚ್ಚರಿಯಾಯಿತು. ಹೀಗೆ ವ್ರತನಿಷ್ಠನಾದ ಆ ಮಹಾ

ಯೋಗಿಯು ತಪಸ್ಸು, ಅಧ್ಯಯನ ಮತ್ತು ಸಂಯಮಗಳಿಂದ ಅವಿದ್ಯೆಯೇ ಮುಂತಾದ ಸಕಲಕ್ಲೇಶಗಳನ್ನೂ ಕಳೆದುಕೊಂಡು ಶುದ್ಧವಾದ ಅಂತಃಕರಣ ದಿಂದ ಸ್ವಾಮಿ ಅಧೋಕ್ಷಜನನ್ನು ಧ್ಯಾನಿಸುತ್ತಿದ್ದನು. ಆತನು ಇಂತಹ ಯೋಗಾಭ್ಯಾಸವನ್ನು ಮಾಡುತ್ತಿರುವಾಗ ಆರು ಮನ್ವಂತರಗಳ ಮಹಾಕಾಲವು ಕಳೆದುಹೋಯಿತು. ಶೌನಕರೇ! ಹೀಗಿರುವಾಗ ಈ ಏಳನೆಯ ಮನ್ವಂತರದಲ್ಲಿ ಇಂದ್ರನಿಗೆ ಈ ಅದ್ಭುತತಪಶ್ಚರ್ಯೆಯನ್ನು ಕಂಡು ಭಯ-ಶಂಕೆಗಳುಂಟಾಗಿ ಆತನು ಆ ತಪಸ್ಸಿಗೆ ವಿಘ್ನವನ್ನುಂಟುಮಾಡ ತೊಡಗಿದನು. ಅವರಿಗೆ ತಪೋಭಂಗವನ್ನುಂಟುಮಾಡುವುದಕೋಸ್ಕರ ಗಂಧರ್ವರನ್ನೂ, ಅಪ್ಸರೆಯರನ್ನೂ, ವಸಂತ-ಮನ್ಮಥರನ್ನೂ, ಮಲಯ ಮಾರುತವನ್ನೂ, ಕಾಮ, ಮದ, ಲೋಭಗಳನ್ನೂ ಕಳುಹಿಸಿದನು. ಇಂದ್ರನ ಆಣತಿಯಂತೆ ಅವರೆಲ್ಲರೂ ಮಹರ್ಷಿಯ ಆಶ್ರಮದ ಸಮೀಪಕ್ಕೆ ಬಂದರು. ಮಹರ್ಷಿಯ ಆಶ್ರಮವಿದ್ದುದು ಹಿಮಾಲಯದ ಉತ್ತರ ಪಾರ್ಶ್ವದಲ್ಲಿ. ಅಲ್ಲಿ ಪುಷ್ಪಭದ್ರಾ ಎಂಬ ನದಿಯು ಹರಿಯುತ್ತಿದೆ ಮತ್ತು ಚಿತ್ರಾ ಎಂಬ ಶಿಲೆಯು ಕಂಗೊಳಿಸುತ್ತಿದೆ. ಅಲ್ಲಿ ಎಲ್ಲವೂ ಪುಣ್ಯವೇ. ಗಿಡ-ಮರ-ಬಳ್ಳಿಗಳು ಪುಣ್ಯ. ಪಕ್ಷಿಗಳು ಪುಣ್ಯ. ಜಲಾಶಯಗಳೂ ಪುಣ್ಯ ; ಪರಿಶುದ್ಧ. ಉನ್ಮತ್ತವಾದ ದುಂಬಿಗಳ ಝೇಂಕಾರ, ಕೋಗಿಲೆಗಳ ಕೂಜಿತ, ನವಿಲುಗಳ ನೃತ್ಯಾ ಡಂಬರ, ಹಕ್ಕಿಗಳ ಕಲಕಲರವವು ಕೂಡಿದ ಕ್ರೀಡಿತ, ನದೀಪ್ರವಾಹಗಳ ಧಿಮಿಧಿಮಿ ತಾಳ ಇವೆಲ್ಲಾ ಸೇರಿದ ಉಲ್ಲಾಸಕರವಾದ ಸಂಗೀತ ತುಂಬಿದ ವಾತಾ ವರಣ ಅಲ್ಲಿತ್ತು. ಇಂತಹ ಪವಿತ್ರವಾದ ಆಶ್ರಮಕ್ಕೆ ಇಂದ್ರನು ಕಳುಹಿಸಿದ ವಾಯುವು ಪ್ರವೇಶಮಾಡಿತು. ಶೀತಲವಾದ ಝರಿಗಳ ನೀರಿನ ತುಂತುರು ಗಳನ್ನು ಹೊತ್ತು, ಸುವಾಸನೆ ತುಂಬಿದ ಕುಸುಮಗಳನ್ನು ಆಲಿಂಗನೆಮಾಡಿದ ಆ ತಂಗಾಳಿಯು, ಆ ಪುಣ್ಯಾಶ್ರಮದೊಳಗೆ ಕಾಮಭಾವವನ್ನು ಹರಡುತ್ತಾ ಮೆಲ್ಲ-ಮೆಲ್ಲಗೆ ಬೀಸತೊಡಗಿತು. ಕಾಮದೇವನ ಪ್ರಿಯಮಿತ್ರನಾದ ವಸಂತನೂ ಅಲ್ಲಿ ತನ್ನ ಮಾಯೆಯನ್ನು ಹರಡಿದನು. ಆಗ ಸಂಧ್ಯಾಸಮಯ. ಆಕಾಶದಲ್ಲಿ ಆಗತಾನೇ ಮೂಡಿದ ಚಂದ್ರನು ತನ್ನ ಮನೋಹರವಾದ ಕಿರಣಗಳನ್ನು ಪ್ರಸರಿಸತೊಡಗಿದನು. ಸಾವಿರಾರು ಕೊಂಬೆಗಳಿಂದ ಕೂಡಿದ ಮರಗಳು ಬಳ್ಳಿಗಳ ಆಲಿಂಗನದಿಂದ ಆನಂದಗೊಂಡು ನೆಲದವರೆಗೂ

ಬಗ್ಗಿದ್ದುವು. ಹೊಸ ಹೊಸ ಚಿಗುರುಗಳ ಮತ್ತು ಹಣ್ಣು-ಹೂವುಗಳ ಗೊಂಚಲುಗಳು ಬೇರೆ-ಬೇರೆ ಕಾಂತಿಗಳಿಂದ ಕಳ-ಕಳಿಸುತ್ತಿದ್ದುವು. ವಸಂತನ ಈ ಸಾಮ್ರಾಜ್ಯವನ್ನು ಕಂಡು ಮನ್ಮಥನು ಅಲ್ಲಿಗೆ ಪ್ರವೇಶ ಮಾಡಿದನು. ಗಾನಮಾಧುರ್ಯವನ್ನು ಹರಿಸುತ್ತಿದ್ದ ಗಂಧರ್ವರು ತಂಡ-ತಂಡ ವಾಗಿ ಆತನನ್ನು ಹಿಂಬಾಲಿಸಿದರು. ಆತನ ಸುತ್ತಲೂ ಸಾವಿರಾರು ಮಂದಿ ಅಪ್ಸರೆಯರು ಬರುತ್ತಿದ್ದರು. ಕಾಮದೇವನೊಬ್ಬನೇ ಅವರೆಲ್ಲರ ನಾಯಕ ನಾಗಿದ್ದನು. ಆತನ ಕೈಯ್ಯಲ್ಲೂ ಸಮ್ಮೋಹನವೇ ಮುಂತಾದ ಬಾಣಗಳಿಂದ ಹೊಡಲ್ಪಟ್ಟಿದ್ದ ಪುಷ್ಪಧನುಸ್ಸು ಕಂಗೊಳಿಸುತ್ತಿತ್ತು. (ಶ್ಲೋಕ ೬-೨೨)

ಅಲ್ಲಿ ಅಗ್ನಿಹೋತ್ರವನ್ನು ಆಚರಿಸಿ ಭಗವಂತನ ಉಪಾಸನೆಯನ್ನು ಮಾಡಿ ಕುಳಿತಿದ್ದ ಮಹಾತ್ಮನಾದ ಮಾರ್ಕಂಡೇಯಮುನಿಯನ್ನು ಇಂದ್ರ ಕಿಂಕರರು ನೋಡಿದರು. ಕಣ್ಣುಮುಚ್ಚಿಕೊಂಡು ಧ್ಯಾನಮಗ್ನನಾಗಿದ್ದ ಆತನ ತೇಜಸ್ಸನ್ನು ನೋಡಿದರೆ ಮೂರ್ತಿಮತ್ತಾದ ಅಗ್ನಿದೇವನನ್ನೇ ಕಂಡಂತೆ ಆಗುತ್ತಿತ್ತು. ಈ ಅದ್ಭುತತೇಜಸ್ವಿಯನ್ನು ಕೆಣಕುವುದು ಬಲು ಕಷ್ಟ ಎಂದು ಆತನನ್ನು ನೋಡಿದೊಡನೆಯೇ ತಿಳಿಯುತ್ತಿತ್ತು. ಇಂತಹ ಸ್ಥಿತಿಯಲ್ಲಿದ್ದ ಆ ತೇಜೋಮೂರ್ತಿಯನ್ನು ಕಂಡು ಇಂದ್ರನ ಕಿಂಕರರು ಬೆರಗಾದರು. ಆದರೂ ಆತನ ಮನಸ್ಸನ್ನು ಕಲಕಲೆಂದು ಅಪ್ಸರೆಯರು ನರ್ತನಮಾಡ ತೊಡಗಿದರು. ಗಂಧರ್ವರಲ್ಲಿ ಕೆಲವರು ಹಾಡುತ್ತಿದ್ದರು. ಮತ್ತೆ ಕೆಲವರು ಮೃದಂಗ, ವೀಣೆ, ಡೋಲು ಮುಂತಾದ ವಾದ್ಯಗಳನ್ನು ಇಂಚರದಿಂದ ಬಾರಿಸತೊಡಗಿದರು. ಇದೇ ಸಮಯದಲ್ಲಿ ಕಾಮದೇವನು ತನ್ನ ಪುಷ್ಪ ಧನುಸ್ಸಿನಲ್ಲಿ ಶೋಷಣ, ದೀಪನ, ಸಮ್ಮೋಹನ, ತಾಪನ ಮತ್ತು ಉನ್ಮಾದನ ಗಳೆಂಬ ಐದು ಮುಖಗಳಿಂದ ಕೂಡಿದ ಬಾಣಗಳನ್ನು ಹೂಡಿದನು. ಆತನು ಇನ್ನೇನು ಗುರಿಯನ್ನು ಸಾಧಿಸಬೇಕು ಎನ್ನುವಷ್ಟರಲ್ಲಿ ಇಂದ್ರನ ಭೃತ್ಯ ರಾದ ವಸಂತ ಮತ್ತು ಲೋಭರು ಮುನಿಯ ಮನಸ್ಸನ್ನು ಕಲಕಲು ಸರ್ವ ಪ್ರಯತ್ನವನ್ನೂ ಮಾಡಿದರು. ಅವರ ಎದುರಿಗೇ ಪುಂಜಿಕಸ್ಥಲೀ ಎಂಬ ಸುಂದರಿಯಾದ ಅಪ್ಸರೆ ಚೆಂಡಾಟವಾಡುತ್ತಿದ್ದಳು. ಆಕೆಯ ನಡುವು ಸ್ತನಗಳ ಭಾರದಿಂದ ಬಳುಕುತ್ತಿತ್ತು. ಆಕೆಯ ತುರುಬಿನಿಂದ ಹೂಗಳು ಉದುರುತ್ತಿದ್ದುವು. ಚೆಂಡು ಪುಟಹಾರಿದ ಕಡೆಗೆ ತನ್ನ ಕಟಾಕ್ಷವನ್ನು

ಬೀರುತ್ತಾ ಕೆಲವೊಮ್ಮೆ ಭೂಮಿಯ ಕಡೆಗೂ ಕೆಲವೊಮ್ಮೆ ತನ್ನ ಅಂಗೈ ಕಡೆಗೂ ನೋಡಿಕೊಳ್ಳುತ್ತಾ ಹಾವ-ಭಾವಗಳೊಡನೆ ವೈಯ್ಯಾರದಿಂದ ಆಕೆಯು ಕುಣಿಯುತ್ತಿರುವಾಗ ನಡುಪಟ್ಟಿ ಕಿತ್ತುಹೋಗಲು ಮಲಯ ಮಾರುತನು ಆಕೆಯು ಧರಿಸಿದ್ದ ತೆಳುವಾದ ಪಟ್ಟೆಯ ಸೀರೆಯನ್ನು ಹಾರಿಸಿ ಬಿಟ್ಟನು. ಇನ್ನೇನು ಮುನಿಯು ಸೋತುಹೋದ, ಅಸ್ತ್ರಪ್ರಯೋಗಕ್ಕೆ ಇದೇ ಸರಿಯಾದ ಸಮಯ–ಎಂದು ಭಾವಿಸಿ ಕಾಮದೇವನು ತಾನು ಹೂಡಿದ್ದ ಬಾಣಗಳನ್ನು ಒಡನೆಯೇ ಪ್ರಯೋಗಿಸಿಬಿಟ್ಟನು. ಆದರೇನು! ಅದೃಷ್ಟಹೀನನಾದ ಅಶಕ್ತನ ಪ್ರಯತ್ನದಂತೆ ಅವರ ಆ ಎಲ್ಲ ಪ್ರಯತ್ನಗಳೂ ವ್ಯರ್ಥವಾಗಿಬಿಟ್ಟವು. **'ಸರ್ವಂ ತತ್ರಾಭವನ್ಮೋಘಂ ಅನೀಶಸ್ಯ ಯಥೋದ್ಯಮಃ।'** ಕೊನೆಗೆ ಅವರೆಲ್ಲರೂ ಹಾವನ್ನು ಕೆಣಕಿದ ಬಾಲಕರಂತೆ ನಿರಾಶರಾಗಿ ಪೆಚ್ಚುಮೋರೆಹಾಕಿಕೊಂಡು ಭಯದಿಂದ ಪಲಾಯನ ಮಾಡಿದರು. ಇಂದ್ರನ ಅನುಚರರಿಗೆ ಎಷ್ಟೇ ಪ್ರಯತ್ನಮಾಡಿದರೂ ಮುನಿಯನ್ನು ಎಳ್ಳಷ್ಟೂ ಕದಲಿಸಲು ಸಾಧ್ಯವಾಗಲಿಲ್ಲ. ಅಂತಹ ದೃಢಮನಸ್ಸು ಮಹರ್ಷಿಮಾರ್ಕಂಡೇಯನದು. ಅಷ್ಟೇ ಅಲ್ಲ. ತನ್ನ ಈ ಮನೋಜಯ ಪರಾಕ್ರಮಕ್ಕಾಗಿ ಆತನಿಗೆ ಎಳ್ಳಷ್ಟೂ ಗರ್ವವುಂಟಾಗಲಿಲ್ಲ. ಮಹಾಪುರುಷರಲ್ಲಿ ಇದೇನೂ ಆಶ್ಚರ್ಯದ ವಿಷಯವಲ್ಲ. **"ಯನ್ನಾಗಾದಹವೋ ಭಾವಂ ನ ತಚ್ಚಿತ್ರಂ ಮಹತ್ಸು ಹಿ"** ಕಾಮದೇವನು ತನ್ನ ಗಣದೊಡನೆ ಪೆಚ್ಚಾಗಿ ಹಿಂದಿರುಗಿದ್ದನ್ನು ಕಂಡ ದೇವರಾಜನು ಆ ಬ್ರಹ್ಮರ್ಷಿಯ ಪ್ರಭಾವವನ್ನು ಗುರುತಿಸಿ ಪರಮಾಶ್ಚರ್ಯಚಕಿತನಾದನು.

(ಶ್ಲೋಕ ೨೩-೩೧)

ಇತ್ತಕಡೆ ಮಾರ್ಕಂಡೇಯಮುನಿಯು ತಪಸ್ಸು, ಅಧ್ಯಯನ ಮತ್ತು ಸಂಯಮಗಳಿಂದ ಚಿತ್ತವನ್ನು ಧ್ಯಾನಸಮಾಧಿಯಲ್ಲಿ ನೆಲೆಗೊಳಿಸಲು ಪ್ರಯತ್ನಿಸುತ್ತಿರುವಾಗ ಆತನನ್ನು ಅನುಗ್ರಹಿಸುವುದಕ್ಕಾಗಿ ನರ-ನಾರಾಯಣರೂಪಿಯಾದ ಶ್ರೀಹರಿಯು ಅಲ್ಲಿ ಪ್ರತ್ಯಕ್ಷನಾದನು. ಆ ನರ-ನಾರಾಯಣರಲ್ಲಿ ಒಬ್ಬನದು (ನರನದು) ಬಿಳಿಯಬಣ್ಣ ಮತ್ತು ಮತ್ತೊಬ್ಬನದು (ನಾರಾಯಣನದು) ಶ್ಯಾಮಲವರ್ಣ. ಇಬ್ಬರಿಗೂ ಆಗ ತಾನೇ ಅರಳಿದ ಕಮಲದಂತೆ ಕೋಮಲವೂ ವಿಶಾಲವೂ ಆದ ಕಣ್ಣುಗಳು.

ನಾಲ್ಕು ಭುಜಗಳು, ಒಬ್ಬನು ಜಿಂಕೆಯ ಚರ್ಮವನ್ನೂ ಮತ್ತೊಬ್ಬನು ಮರದ ತೊಗಟೆಯಿಂದಾದ ನಾರುಡೆಯನ್ನೂ ಧರಿಸಿದ್ದನು. ಅವರ ಕೈಯಲ್ಲಿ ದರ್ಭೆಯೂ ಕತ್ತಿನಲ್ಲಿ ಮೂರೆಳೆಯ ಯಜ್ಞೋಪವೀತವೂ ಕಂಗೊಳಿಸುತ್ತಿದ್ದುವು. ಅವರು ಕೈಯಲ್ಲಿ ಕಮಂಡಲುವನ್ನೂ ಮತ್ತು ಋಜುವಾದ ಬಿದುರಿನ ದಂಡಗಳನ್ನೂ ಧರಿಸಿದ್ದರು. ಹಾಗೆಯೇ ಪದ್ಮಾಕ್ಷಮಣಿಮಾಲೆಯನ್ನೂ, ಮೈಗೆ ಮುತ್ತುವ ಕ್ರಿಮಿಕೀಟಗಳನ್ನು ಓಡಿಸುವ ವಸ್ತ್ರವನ್ನೂ ಧರಿಸಿ, ಮೂರ್ತಿಮತ್ತಾದ ತಪಸ್ಸಿನಂತೆ ಬೆಳಗುತ್ತಿದ್ದರು. ಉನ್ನತವಾದ ಆಕೃತಿಯಿಂದಲೂ ಮಿಂಚಿನಂತೆ ಹೊಳೆಯುವ ದೇಹಕಾಂತಿಯಿಂದಲೂ ಕಂಗೊಳಿಸುತ್ತಿದ್ದ ಅವರು ದೇವತಾಶ್ರೇಷ್ಠರಿಂದಲೂ ಪೂಜಿತರಾಗಿದ್ದರು. ಭಗವಂತನ ದಿವ್ಯರೂಪಗಳಾದ ಆ ನರ-ನಾರಾಯಣಋಷಿಗಳನ್ನು ಕಂಡೊಡನೆಯೇ ಮಾರ್ಕಂಡೇಯರು ಧಿಗ್ಗನೆ ಮೇಲೆದ್ದು ಅವರಿಗೆ ದೀರ್ಘದಂಡ ಪ್ರಣಾಮಮಾಡಿದರು. ಭಗವದ್ದರ್ಶನದಿಂದ ಉಕ್ಕಿಬಂದ ಪರಮಾನಂದದಿಂದ ಆ ಮುನೀಂದ್ರರ ಆತ್ಮ-ಇಂದ್ರಿಯ-ಅಂತಃಕರಣಗಳೆಲ್ಲಾ ಶಾಂತಿ-ಸಂತೃಪ್ತಿಗಳಿಂದ ತುಂಬಿಹೋದುವು. ದೇಹವು ಆನಂದದಿಂದ ನವಿರೆದ್ದು, ಕಣ್ಣುಗಳಲ್ಲಿ ಆನಂದಬಾಷ್ಪವು ತುಂಬಿಕೊಳ್ಳಲು ಆತನಿಗೆ ಅವರನ್ನು ನೋಡುವುದಕ್ಕೂ ಅಸಾಧ್ಯವಾಯಿತು. ಅವರು ಮೇಲೆದ್ದು ಬದ್ಧಾಂಜಲಿಯಾಗಿ ವಿನಯದಿಂದ ತಲೆತಗ್ಗಿಸಿಕೊಂಡು ಕುತೂಹಲದಿಂದ ಅವರನ್ನು ಆಲಿಂಗಿಸುತ್ತಿರುವರೋ ಎಂಬಂತೆ ಮುಂದೆ ಬಂದು ಕುತ್ತಿಗೆ ಸೆರೆ ಬಿಗಿದದ್ದರಿಂದ ಮಾತು ಗದ್ಗದವಾಗಿ 'ನಮೋ ನಮಃ' ಎಂದಿಷ್ಟು ಮಾತ್ರ ಆ ಪ್ರಭುಗಳಿಗೆ ಹೇಳಿದರು. ಅನಂತರ ಅವರಿಬ್ಬರನ್ನೂ ಆಸನದಲ್ಲಿ ಕುಳ್ಳಿರಿಸಿ ಅಡಿದಾವರೆಗಳನ್ನು ತೊಳೆದು ಅರ್ಘ್ಯ, ಗಂಧ, ಧೂಪ-ದೀಪಮಾಲಿಕೆ ಮುಂತಾದುವುಗಳಿಂದ ಅವರನ್ನು ಪೂಜಿಸಿದರು. ಪೂಜೆಯನಂತರ ಸುಖವಾಗಿ ಆಸನದಲ್ಲಿ ಕುಳಿತು ಅನುಗ್ರಹವರ್ಷವನ್ನು ಸುರಿಸುತ್ತಿದ್ದ ಅವರ ಅಡಿಗಳಿಗೆ ಮತ್ತೊಮ್ಮೆ ಎರಗಿ ಅವರನ್ನು ಹೀಗೆ ಸ್ತುತಿಸಿದರು :

ಕಿಂ ವರ್ಣಯೇ ತವ ವಿಭೋ ಯದುದೀರಿತೋಽಸುಃ
ಸಂಸ್ಪಂದತೇ ತಮನುವಾಙ್ಮನಇಂದ್ರಿಯಾಣಿ ।

ಸ್ಪನ್ದನ್ತಿ ವೈ ತನುಭೃತಾಮಜಶರ್ವಯೋಶ್ಚ
ಸ್ವಸ್ಯಾಪ್ಯಥಾಪಿ ಭಜತಾಮಸಿ ಭಾವಬನ್ಧುಃ ॥೪೦॥

“ಪ್ರಭೋ! ನಿನ್ನನ್ನು ಹೇಗೆ ವರ್ಣಿಸಲಿ? ಹೇಗೆ ಸ್ತುತಿಸಲಿ? ಎಲ್ಲ ಜೀವಗಳಿಗೂ ಮತ್ತು ಬ್ರಹ್ಮ-ರುದ್ರರಿಗೂ ಕೂಡ ಪ್ರಾಣವ್ಯಾಪಾರವು ನಡೆಯುವುದು ನಿನ್ನ ಪ್ರೇರಣೆಯಿಂದಲೇ. ಪ್ರಾಣವನ್ನೇ ಅನುಸರಿಸಿ ಎಲ್ಲರ ಮಾತು, ಮನಸ್ಸು ಮತ್ತು ಇಂದ್ರಿಯಗಳು ಕೆಲಸಮಾಡುವುದೂ ಆ ನಿನ್ನ ಪ್ರೇರಣೆಯಿಂದಲೇ. ಹೀಗೆ ಸರ್ವನಿಯಾಮಕನಾಗಿ ಸರ್ವಸ್ವತಂತ್ರ ನಾಗಿದ್ದರೂ ಕೂಡ ನೀನು ನಿನ್ನನ್ನು ಭಜಿಸುವ ಭಕ್ತರೊಡನೆ ಪ್ರೇಮಬಂಧನಕ್ಕೆ ಕಟ್ಟುಬಿದ್ದಿರುವೆಯಲ್ಲವೇ?

ಮೂರ್ತೀ ಇಮೇ ಭಗವತೋ ಭಗವಂಸ್ತ್ರಿಲೋಕ್ಯಾಃ
ಕ್ಷೇಮಾಯ ತಾಪವಿರಮಾಯ ಚ ಮೃತ್ಯುಜಿತ್ಯೈ ।
ನಾನಾ ಬಿಭರ್ಷ್ಯವಿತುಮರ್ತ್ಯತನೂರ್ಯಥೇದಂ
ಸೃಷ್ಟ್ವಾ ಪುನರ್ಗ್ರಸಸಿ ಸರ್ವಮಿವೋರ್ಣನಾಭಿಃ ॥೪೧॥

ಓ ಭಗವಂತ! ನೀನು ಈ ಎರಡು ಮೂರ್ತಿಗಳನ್ನೂ ಕೈಗೊಂಡಿರುವುದು ಮೂರುಲೋಕಗಳ ಕ್ಷೇಮಕ್ಕಾಗಿ, ಸಂತಾಪಶಾಂತಿಗಾಗಿ ಮತ್ತು ಅವರು ಮೃತ್ಯುವನ್ನು ಗೆಲ್ಲುವಂತೆ ಮಾಡುವುದಕ್ಕಾಗಿಯೇ ಹೊರತು ಬೇರಾವ ಕಾರಣಕ್ಕೂ ಅಲ್ಲ. ಇದಲ್ಲದೇ ಮತ್ಸ್ಯ-ಕೂರ್ಮಾದಿ ಇತರ ದೇಹಗಳನ್ನು ನೀನು ಸ್ವೀಕರಿಸುವುದೂ ಲೋಕರಕ್ಷಣೆಗೋಸ್ಕರವಾಗಿಯೇ. ಈ ವಿಶ್ವಕ್ಕೆ ಸೃಷ್ಟಿಕರ್ತನೂ ಮತ್ತು ಸಂಹಾರಕನೂ ನೀನೇ ಆಗಿದ್ದೀಯೆ. ಜೇಡರ ಹುಳುವು ತನ್ನ ಶರೀರದಿಂದ ನೂಲಿನ ಎಳೆಗಳನ್ನು ಹೊರತಂದು ಅವುಗಳನ್ನು ತನ್ನಲ್ಲಿಯೇ ಅಡಗಿಸಿಕೊಳ್ಳುವಂತೆ ನೀನು ಈ ವಿಶ್ವವನ್ನು

---

*ಈ ಜೇಡರಹುಳುವಿನ ದೃಷ್ಟಾಂತದಿಂದ ಪರಮಾತ್ಮನು ಜಗತ್ತಿಗೆ ಉಪಾದಾನ ಕಾರಣ ಮತ್ತು ನಿಮಿತ್ತಕಾರಣ–ಎರಡೂ ಬಗೆಯ ಕಾರಣಗಳಾಗಿದ್ದಾನೆಂದು ತಿಳಿದು ಬರುತ್ತದೆ. ಜೇಡರ ಹುಳುವು ತನ್ನ ಬಲೆಗೆ ಎರಡು ವಿಧವಾದ ಕಾರಣಗಳೂ ಆಗಿದೆಯಲ್ಲವೇ?

ನಿನ್ನಿಂದಲೇ ಹೊರಪಡಿಸಿ ಕೊನೆಗೆ ನಿನ್ನಲ್ಲಿಯೇ ಉಪಸಂಹಾರಮಾಡಿ ಕೊಳ್ಳುತ್ತೀಯೆ.

ತಸ್ಯಾವಿತುಃ ಸ್ಥಿರಚರೇಶಿತುರಂಘ್ರಿಮೂಲಂ
ಯತ್ಸ್ಥಂ ನ ಕರ್ಮಗುಣಕಾಲರಜಃ ಸ್ಪೃಶನ್ತಿ ।
ಯದ್ವೈ ಸ್ತುವನ್ತಿ ನಿನಮನ್ತಿ ಯಜನ್ತ್ಯಭೀಕ್ಷ್ಣಂ
ಧ್ಯಾಯನ್ತಿ ವೇದಹೃದಯಾ ಮುನಯಸ್ತದಾಪ್ತ್ಯೈ ॥೪೨॥

ಚರಾಚರಗಳಿಗೆ ರಕ್ಷಕನೂ, ನಿಯಾಮಕನೂ ಆಗಿರುವ ಅಂತಹ ನಿನ್ನ ಚರಣಕಮಲಗಳಿಗೆ ನನ್ನ ಪ್ರಣಾಮಗಳು. ನಿನ್ನ ಆ ಚರಣಕಮಲಗಳನ್ನು ಶರಣುಹೊಂದಿದವರಿಗೆ ಕರ್ಮ, ಗುಣ ಮತ್ತು ಕಾಲಗಳಿಂದುಂಟಾದ ಯಾವ ಕ್ಲೇಶವೂ ಉಂಟಾಗುವುದಿಲ್ಲ. ವೇದದ ಮರ್ಮವನ್ನರಿತ ಋಷಿ-ಮುನಿಗಳು ಅಂತಹ ನಿನ್ನನ್ನು ಪಡೆಯಲು ನಿರಂತರವಾಗಿ ನಿನ್ನ ಪೂಜಾ, ಸ್ತುತಿ, ಗಂಧ ಲೇಪನ, ವಂದನ, ಪೂಜನ ಮತ್ತು ಧ್ಯಾನಗಳನ್ನು ಮಾಡುತ್ತಾರೆ.

ನಾನ್ಯಂ ತವಾಂಘ್ರ್ಯುಪನಯಾದಪವರ್ಗಮೂರ್ತೇಃ
ಕ್ಷೇಮಂ ಜನಸ್ಯ ಪರಿತೋಭಿಯ ಈಶ ವಿದ್ಮಃ ।
ಬ್ರಹ್ಮಾ ಬಿಭೇತ್ಯಲಮತೋ ದ್ವಿಪರಾರ್ಧಧಿಷ್ಣ್ಯಃ
ಕಾಲಸ್ಯ ತೇ ಕಿಮುತ ತತ್ಕೃತಭೌತಿಕಾನಾಮ್ ॥೪೩॥

ಪ್ರಭುವೇ! ಜೀವಗಳಿಗೆ ಸುತ್ತಮುತ್ತಲೂ ಎಲ್ಲೆಲ್ಲಿಯೂ ಭಯವೇ ತುಂಬಿದೆ. ಕಾಲರೂಪಿಯಾದ ನಿನಗೆ ಬ್ರಹ್ಮದೇವರೇ ಭಯಪಡುತ್ತಾರೆ. ಏಕೆಂದರೆ ಅವರ ಆಯುಸ್ಸೂ ಸೀಮಿತವಾಗಿದೆ. ಅದು ಎರಡು ಪರಾರ್ಧಕಾಲಗಳವರೆಗೆ ಮಾತ್ರ ಇರುತ್ತದೆ. ಹೀಗಿರುವಾಗ ಭೌತಿಕಶರೀರವುಳ್ಳ ಇತರ ಜೀವಿಗಳ ವಿಷಯದಲ್ಲಿ ಹೇಳುವುದೇನು? ವಸ್ತುಸ್ಥಿತಿಯು ಹೀಗಿರುವಾಗ ಜನರಿಗೆ–ಕಾಲಾತೀತನಾಗಿ ಅಭಯಮೂರ್ತಿಯಾಗಿ ಮೋಕ್ಷಮೂರ್ತಿಯೇ ಆಗಿರುವ ನಿನ್ನ ಪಾದಾರವಿಂದಗಳನ್ನು ಶರಣುಹೊಂದುವುದಕ್ಕಿಂತ ಸುಖ-ಶಾಂತಿಯ ಉಪಾಯವು ಬೇರೇನಿದೆ?

ತದ್ವೈ ಭಜಾಮ್ಯೃತಧಿಯಸ್ತವ ಪಾದಮೂಲಂ
ಹಿತ್ವೇದಮಾತ್ಮಚ್ಛದಿ ಚಾತ್ಮಗುರೋಃ ಪರಸ್ಯ ।

ದೇಹಾದ್ಯಪಾರ್ಥಮಸದನ್ತ್ಯಮಭಿಜ್ಞಮಾತ್ರಂ
ವಿನ್ದೇತ ತೇ ತರ್ಹಿ ಸರ್ವಮನೀಷಿತಾರ್ಥಮ್ ॥೪೪॥

ಆದುದರಿಂದ ನಾನು ಆತ್ಮಕ್ಕೆ ಆವರಣವಾಗಿರುವ ನಿಷ್ಪ್ರಯೋಜಕವೂ, ಅಸತ್ತೂ, ಅಳಿವುಳ್ಳದ್ದೂ, ತೋರಿಕೆಯ ಪದಾರ್ಥವೂ ಆಗಿರುವ ಈ ದೇಹವೇ ಮುಂತಾದುದನ್ನು ತೊರೆದು, ಸತ್ಯಜ್ಞಾನಸ್ವರೂಪನೂ ಪರಮಾತ್ಮನೂ ಪರಮಗುರುವೂ ಆಗಿರುವ ನಿನ್ನ ಪಾದಮೂಲವನ್ನು ಮಾತ್ರವೇ ಭಜಿಸುತ್ತೇನೆ. ಹಾಗೆ ಮಾಡಿದವನಿಗೆ ಸಮಸ್ತ ಅಭೀಷ್ಟಗಳೂ ಸಿದ್ಧಿಸುತ್ತವೆ.

ಸತ್ತ್ವಂ ರಜಸ್ತಮ ಇತೀಶ ತವಾತ್ಮಬನ್ಧೋ
ಮಾಯಾಮಯಾಃ ಸ್ಥಿತಿಲಯೋದಯಹೇತವೋಽಸ್ಯ ।
ಲೀಲಾಧೃತಾ ಯದಪಿ ಸತ್ತ್ವಮಯೀ ಪ್ರಶಾನ್ತ್ಯೈ
ನಾನ್ಯೇ ನೃಣಾಂ ವ್ಯಸನಮೋಹಭಯಶ್ಚ ಯಾಭ್ಯಾಮ್ ॥

ಎಲೈ ಆತ್ಮಬಂಧುವೇ! ಪ್ರಭುವೇ! ಈ ವಿಚಿತ್ರವಾದ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣವಾಗಿರುವ ಸತ್ತ್ವ-ರಜಸ್ಸು ಮತ್ತು ತಮಸ್ಸು ಎಂಬ ಮೂರು ಗುಣಗಳನ್ನೂ ನೀನು ಲೀಲಾರ್ಥವಾಗಿ ಧರಿಸಿದ್ದರೂ ಅವುಗಳಲ್ಲಿ ಸತ್ತ್ವಮಯವಾದ ಮೂರ್ತಿಯು ಮಾತ್ರವೇ ಪ್ರಶಾಂತಿಗೆ ಕಾರಣವಾಗುತ್ತದೆ. ಉಳಿದ ಎರಡು ಗುಣಗಳ ಮೂರ್ತಿಗಳು ಪೂರ್ಣನೆಮ್ಮದಿಗೆ ಕಾರಣವಾಗುವುದಿಲ್ಲ. ಅವುಗಳಿಂದ ವ್ಯಸನ, ಮೋಹ, ಭಯಗಳೇ ಉಂಟಾಗುತ್ತವೆ.

ತಸ್ಮಾತ್ತವೇಹ ಭಗವನ್ನಥ ತಾವಕಾನಾಂ
ಶುಕ್ಲಾಂ ತನುಂ ಸ್ವದಯಿತಾಂ ಕುಶಲಾ ಭಜನ್ತಿ ।
ಯತ್ಸಾತ್ವತಾಃ ಪುರುಷರೂಪಮುಶನ್ತಿ ಸತ್ತ್ವಂ
ಲೋಕೋ ಯತೋಽಭಯಮುತಾತ್ಮಸುಖಂ ನ ಚಾನ್ಯತ್ ॥

ಓ ಭಗವಂತ! ಆದುದರಿಂದ ಶ್ರೇಯಸ್ಸನ್ನು ಬಯಸುವ ವಿವೇಕಿಗಳು ನಿನಗೂ ಮತ್ತು ನಿನ್ನ ಭಕ್ತರಿಗೂ ಪ್ರಿಯವಾದ ಶುದ್ಧಸಾತ್ತ್ವಿಕರೂಪವನ್ನೇ ಭಜಿಸುತ್ತಾರೆ. ಸಾತ್ತ್ವತರು (ಪಾಂಚರಾತ್ರಸಿದ್ಧಾಂತವನ್ನು ಬಲ್ಲವರು) ನಿನ್ನ ವಿಶುದ್ಧಸತ್ತ್ವಮಯವಾದ ಆ ಪರಮಪುರುಷಸ್ವರೂಪ

ವನ್ನೇ ಬಯಸುತ್ತಾರೆ. ಅದರ ಉಪಾಸನೆಯಿಂದಲೇ ಅಭಯಪ್ರದವಾದ ವೈಕುಂಠಧಾಮವು ದೊರೆಯುವುದು. ಆತ್ಮಸುಖವು ದೊರೆಯುವುದು. ರಜೋಗುಣ-ತಮೋಗುಣಮೂರ್ತಿಗಳ ಉಪಾಸನೆಯಿಂದಲ್ಲ.

ತಸ್ಮೈ ನಮೋ ಭಗವತೇ ಪುರುಷಾಯ ಭೂಮ್ನೇ
ವಿಶ್ವಾಯ ವಿಶ್ವಗುರವೇ ಪರದೇವತಾಯೈ ।
ನಾರಾಯಣಾಯ ಋಷಯೇ ಚ ನರೋತ್ತಮಾಯ
ಹಂಸಾಯ ಸಂಯತಗಿರೇ ನಿಗಮೇಶ್ವರಾಯ ॥೪೭॥

ಓ ದೇವ! ಆದುದರಿಂದ ಮಹಾಪುರುಷನೂ, ವಿಶ್ವರೂಪಿಯೂ, ವಿಶ್ವಕ್ಕೆಲ್ಲಾ ಗುರುವೂ, ಪರದೇವತೆಯೂ, ಶುದ್ಧಹಂಸಸ್ವರೂಪಿಯೂ, ಮಹಾಮೌನಿಯೂ, ವೇದಾಚಾರ್ಯನೂ, ನಾರಾಯಣಮಹರ್ಷಿ ಮತ್ತು ನರಮಹರ್ಷಿರೂಪಿಯೂ ಆದ ನಿನಗೆ ನಮಸ್ಕಾರವು, ಓ ಭಗವಂತ !

ಯಂ ವೈ ನ ವೇದ ವಿತಥಾಕ್ಷಪಥೈರ್ಭ್ರಮದ್ಧೀಃ
ಸನ್ತಂ ಸ್ವಖೇಷ್ವಸುಷು ಹೃದ್ಯಪಿದೃಕ್ಪಥೇಷು ।
ತನ್ಮಾಯಯಾಽವೃತಮತಿಃ ಸ ಉ ಏವ ಸಾಕ್ಷಾ-
ದಾದ್ಯಸ್ತವಾಖಿಲಗುರೋರುಪಸಾದ್ಯ ವೇದಮ್ ॥೪೮॥

ಓ ಜಗದ್ಗುರುವೇ! ನೀನು ಎಲ್ಲ ಜೀವರ ಇಂದ್ರಿಯಗಳಲ್ಲೂ, ಇಂದ್ರಿಯವಿಷಯಗಳಲ್ಲೂ, ಪ್ರಾಣಗಳಲ್ಲೂ ಮತ್ತು ಹೃದಯದಲ್ಲೂ ವಾಸವಾಗಿದ್ದರೂ ನಿನ್ನ ಮಾಯೆಯಿಂದ ಮೋಹಗೊಂಡ ಬುದ್ಧಿಯುಳ್ಳ ಜೀವರು ನಿನ್ನನ್ನು ತಿಳಿದುಕೊಳ್ಳಲಾರರು. ಲೋಕಗುರುವಾದ ನೀನು ಉಪದೇಶಮಾಡಿದ ಜ್ಞಾನಭಂಡಾರರೂಪವಾದ ವೇದದಲ್ಲಿ ವಿಶ್ವಾಸವುಳ್ಳವ ರಾಗಿ ಅದರ ಉಪದೇಶದ ಅನುಷ್ಠಾನದಿಂದ ಶುದ್ಧರಾದಾಗ ತಾನೇ ಅವರು ನಿನ್ನನ್ನು ಸಾಕ್ಷಾತ್ಕರಿಸಲು ಸಮರ್ಥರಾಗುತ್ತಾರೆ?*

---

*ವೇದಜ್ಞಾನಿಯು ಮಾತ್ರವೇ ಪರಬ್ರಹ್ಮವನ್ನು ಅರಿಯಬಲ್ಲನು ಎಂಬಲ್ಲಿ ವೇದ ವಾಕ್ಯ–'ನಾವೇದವಿನ್ಮನುತೇ ತಂ ಬೃಹನ್ತಂ' (ವೇದವನ್ನರಿಯದವನು ಆ ಪರಬ್ರಹ್ಮವನ್ನು ತಿಳಿಯಲಾರನು.)

ಯದ್ದರ್ಶನಂ ನಿಗಮ ಆತ್ಮರಹಃಪ್ರಕಾಶಂ
ಮುಹ್ಯನ್ತಿ ಯತ್ರ ಕವಯೋಽಜಪರಾ ಯತನ್ತಃ ।
ತಂ ಸರ್ವವಾದವಿಷಯಪ್ರತಿರೂಪಶೀಲಂ
ವನ್ದೇ ಮಹಾಪುರುಷಮಾತ್ಮನಿಗೂಢಬೋಧಮ್ ॥೪೯॥

ಪ್ರಭುವೇ! ನಿನ್ನ ಸ್ವರೂಪದ ರಹಸ್ಯವನ್ನು ಪ್ರಕಾಶಪಡಿಸಬಲ್ಲ ದರ್ಶನವು ಆ ವೈದಿಕದರ್ಶನವೊಂದೇ. ಬ್ರಹ್ಮದೇವರೇ ಮುಂತಾದ ಮಹಾಜ್ಞಾನಿಗಳೂ ಕೂಡ ಪ್ರಾಕೃತತಂತ್ರಗಳಲ್ಲಿ ಆಸಕ್ತರಾದರೆ, ಎಷ್ಟೇ ಪ್ರಯತ್ನಪಟ್ಟರೂ ನಿನ್ನ ತತ್ತ್ವದ ವಿಷಯದಲ್ಲಿ ಮೋಹಕ್ಕೆ ಒಳಗಾಗುತ್ತಾರೆ. ಹೀಗೆ ಎಲ್ಲ ವಾದವಿಷಯಗಳನ್ನೂ ಮೀರಿದವನಾಗಿ ಅಪ್ರಮೇಯವೂ ಅಪರಿಚ್ಛೇದ್ಯವೂ ಆದ ಸ್ವರೂಪಸ್ವಭಾವಗಳುಳ್ಳ ಜ್ಞಾನಸ್ವರೂಪಿಯಾದ ನಿನಗೆ ನಮಸ್ಕಾರವು, ಓ ಮಹಾಪುರುಷ!"

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದ್ವಾದಶಸ್ಕಂಧದ ೮ನೆಯ ಅಧ್ಯಾಯವು ಮುಗಿಯಿತು.

ಮಾರ್ಕಂಡೇಯನಿಗೆ ಭಗವಂತನು ತನ್ನ ಮಾಯಾ ಪ್ರಭಾವವನ್ನು ತೋರಿಸಿದುದು

ಸೂತಪುರಾಣಿಕರು ಹೇಳುತ್ತಾರೆ :

ಸಂಸ್ತುತೋ ಭಗವಾನಿತ್ಥಂ ಮಾರ್ಕಣ್ಡೇಯೇನ ಧೀಮತಾ ।
ನಾರಾಯಣೋ ನರಸಖಃ ಪ್ರೀತ ಆಹ ಭೃಗೂದ್ವಹಮ್ ॥೧॥

"ನರಮಹರ್ಷಿಯ ಮಿತ್ರನಾದ ಭಗವಂತನಾದ ಮಹರ್ಷಿ ನಾರಾಯಣನು ಧೀಮಂತನಾದ ಮಾರ್ಕಂಡೇಯಮುನಿಯು ಮಾಡಿದ ಸ್ತೋತ್ರವನ್ನು ಕೇಳಿ ಅತ್ಯಂತಪ್ರಸನ್ನನಾಗಿ ಆ ಭೃಗುಕುಲತಿಲಕನಾದ ಮಾರ್ಕಂಡೇಯನಿಗೆ ಹೀಗೆಂದನು :

ಭೋ ಭೋ ಬ್ರಹ್ಮರ್ಷಿವರ್ಯೋಸಿ ಸಿದ್ಧ ಆತ್ಮಸಮಾಧಿನಾ ।
ಮಯಿ ಭಕ್ತ್ಯಾನಪಾಯಿನ್ಯಾ ತಪಃಸ್ವಾಧ್ಯಾಯಸಂಯಮೈಃ ॥೨॥

ವಯಂ ತೇ ಪರಿತುಷ್ಟಾಃ ಸ್ಮ ತ್ವದ್ಬೃಹದ್ವ್ರತಚರ್ಯಯಾ ।
ವರಂ ಪ್ರತೀಚ್ಛ ಭದ್ರಂ ತೇ ವರದೇಶಾದಭೀಪ್ಸಿತಮ್ ॥೩॥

"ಓ ಮುನಿಕುಲತಿಲಕನೇ! ಬ್ರಹ್ಮರ್ಷಿವರ್ಯನೇ! ತಪಸ್ಸು, ಅಧ್ಯ ಯನ ಮತ್ತು ಸಂಯಮಗಳಿಂದಲೂ, ನನ್ನಲ್ಲಿಟ್ಟಿರುವ ಅಪಾಯರಹಿತವಾದ ಅನನ್ಯಭಕ್ತಿಯಿಂದಲೂ, ಪರಮಾತ್ಮಸಮಾಧಿಯಿಂದಲೂ ನೀನು ಸಿದ್ಧನೆನಿಸಿದೆ. ನಿನ್ನ ಈ ಕಟ್ಟುನಿಟ್ಟಾದ ನೈಷ್ಠಿಕಬ್ರಹ್ಮಚರ್ಯವ್ರತದ ಆಚರಣೆಯಿಂದ ನಾವು ನಿನ್ನ ವಿಷಯದಲ್ಲಿ ಅತ್ಯಂತಪ್ರಸನ್ನರಾಗಿದ್ದೇವೆ. ನಿನಗೆ ಮಂಗಳವಾಗಲಿ. ವರವನ್ನು ಅನುಗ್ರಹಿಸುವವರೆಲ್ಲರಿಗೂ ಸ್ವಾಮಿಗಳಾಗಿರುವ ನಮ್ಮಿಂದ ನಿನಗೆ ಅಭೀಷ್ಟವಾದ ವರವನ್ನು ಕೇಳಿಕೋ."

ಮಹರ್ಷಿಯು ಭಗವಂತನಲ್ಲಿ ಹೀಗೆ ಬಿನ್ನೈಸಿದನು.:

"ಜಯವಾಗಲಿ ನಿನಗೆ ಓ ದೇವದೇವೇಶ! ಶರಣಾಗತರ ಕಷ್ಟವನ್ನು ಕಳೆಯುವವನೇ! ಸ್ವಾಮಿ! ಅಚ್ಯುತ! ನೀನು ನನಗೆ ದರ್ಶನವನ್ನು ದಯಪಾಲಿಸಿದೆಯಲ್ಲಾ, ಇಷ್ಟೇ ವರವು ನನಗೆ ಸಾಕು. ಬ್ರಹ್ಮಾದಿ ಮಹಾದೇವತೆಗಳೂ ಕೂಡ ಯೋಗದಿಂದ ಪರಿಪಕ್ವವಾದ ಮನಸ್ಸಿನಿಂದ ನಿನ್ನ ದಿವ್ಯದರ್ಶನವನ್ನು ಪಡೆದು ಕೃತಾರ್ಥರಾದರು. ಅಂತಹ ನೀನು ನನ್ನ ಕಣ್ಣುಗಳ ಮುಂದೆ ಕಾಣಿಸಿಕೊಂಡೆಯಲ್ಲವೇ? ಇದಕ್ಕಿಂತ ದೊಡ್ಡವರವೇನು ಬೇಕು? ಪುಂಡರೀಕಾಕ್ಷನೇ! ಪುಣ್ಯಶ್ಲೋಕಶಿರೋಮಣಿಯೇ! ಆದರೂ ನಿನ್ನ ಮಾಯಾಪ್ರಭಾವವನ್ನು ಒಮ್ಮೆ ನೋಡಬೇಕೆಂದು ಬಯಕೆಯಾಗಿದೆ.

ಯಾವುದರಿಂದ ಮೋಹಗೊಂಡು ಲೋಕಪಾಲಕರೂ ಕೂಡ ಸಚ್ಛಬ್ದ ವಾಚ್ಯವಾದ ಸ್ವರೂಪವನ್ನು ಮರೆತು ದೇವ-ಮನುಷ್ಯಾದಿ ಭೇದಗಳನ್ನು ತಮ್ಮಲ್ಲಿ ಆರೋಪಿಸಿಕೊಳ್ಳುತ್ತಾರೋ ಅಂತಹ ನಿನ್ನ ವೈಷ್ಣವೀಮಾಯೆಯ ಪ್ರಭಾವವನ್ನು ಒಮ್ಮೆ ತೋರಿಸುವವನಾಗು."

ಸೂತಪುರಾಣಿಕರು ಹೇಳುತ್ತಾರೆ :

"ಶೌನಕರೇ! ಮುನಿಮಾರ್ಕಂಡೇಯರು ಹೀಗೆ ಸ್ತೋತ್ರಮಾಡಿ ವರವನ್ನು ಸಲ್ಲಿಸಬೇಕೆಂದು ಪ್ರಾರ್ಥಿಸಲು, ಭಗವಂತನು ಮುಗುಳ್ನಗೆ ನಗುತ್ತಾ 'ಹಾಗೆಯೇ ಆಗಲಿ' ಎಂದು ಹೇಳಿ ತನ್ನ ಬದರಿಕಾಶ್ರಮಕ್ಕೆ ಹೊರಟು

ಹೋದನು. ಅನಂತರ ಮಹರ್ಷಿಗಳು ವೈಷ್ಣವೀಮಾಯೆಯನ್ನು ನೋಡಬೇಕೆಂಬ ಕುತೂಹಲದಿಂದ ಕೂಡಿ ತಮ್ಮ ಆಶ್ರಮದಲ್ಲಿಯೇ ಅದೇ ವಿಷಯವನ್ನು ಕುರಿತು ಚಿಂತಿಸುತ್ತಿದ್ದರು. ಅಗ್ನಿ, ಸೂರ್ಯ, ಸೋಮ, ಜಲ, ಭೂಮಿ, ಆಕಾಶ ಮತ್ತು ಆತ್ಮಗಳಲ್ಲಿ ಎಲ್ಲೆಡೆ ಗಳಲ್ಲಿಯೂ ಶ್ರೀಹರಿಯನ್ನು ಧ್ಯಾನಮಾಡುತ್ತಾ ಮಾನಸಿಕದ್ರವ್ಯಗಳಿಂದ ಆತನ ಪೂಜೆಯನ್ನು ಮಾಡುತ್ತಿದ್ದರು. ಪ್ರೇಮದ ಪ್ರವಾಹದಲ್ಲಿ ಮುಳುಗಿ ಒಮ್ಮೊಮ್ಮೆ ಅವರು ಪೂಜೆಮಾಡುವುದನ್ನೂ ಮರೆತುಬಿಡುತ್ತಿದ್ದರು. ಎಲೈ ಭೃಗುಕುಲನಂದನರೇ! ಶೌನಕರೇ! ಆ ಮುನಿಗಳು ಒಮ್ಮೆ ಹೀಗೆಯೇ ಪುಷ್ಪಭದ್ರಾನದಿಯ ದಡದಲ್ಲಿ ಸಂಧ್ಯಾವಂದನೆಮಾಡುತ್ತಿದ್ದಾಗ ಇದ್ದಕ್ಕಿದ್ದಂತೆ ಭಯಂಕರವಾದ ಬಿರುಗಾಳಿ ಬೀಸತೊಡಗಿತು. ಆ ಗಾಳಿಯು ಸೊಯ್ಯನೆ ಭೀಕರಶಬ್ದಮಾಡುತ್ತಿದ್ದಾಗ ಭಯಂಕರವಾದ ಕಪ್ಪುಬಣ್ಣದ ಮೋಡಗಳು ಆಕಾಶದಲ್ಲಿ ಪ್ರಕಟವಾದುವು. ಕೋಲ್ಮಿಂಚು ಕಾಣಿಸಿಕೊಂಡು ಸಿಡಿಲುಗಳು ಬಡಿಯತೊಡಗಿದುವು. ಕಾರ್ಮೋಡಗಳಿಂದ ರಥದ ನೊಗದಷ್ಟು ದಪ್ಪನಾದ ಜಲಧಾರೆಗಳು ಬೀಳತೊಡಗಿದುವು. ಅಷ್ಟೇ ಅಲ್ಲ. ನಾಲ್ಕೂ ಕಡೆಗಳಿಂದಲೂ ಭೂಮಿಯನ್ನು ನುಂಗಿಹಾಕುವ ಉಕ್ಕೇರಿದ ಕಡಲುಗಳು ಕಾಣಿಸಿಕೊಂಡುವು. ಬಿರುಗಾಳಿಯ ವೇಗದಿಂದ ಆ ಸಮುದ್ರಗಳಲ್ಲಿ ದೊಡ್ಡ ದೊಡ್ಡ ಅಲೆಗಳು ಉದ್ಭವಿಸಿ ಉಬ್ಬಿಬರತೊಡಗಿದುವು. ಅವುಗಳಲ್ಲಿ ಭೀಕರ ವಾದ ಮೊಸಳೆಗಳೂ, ಅತಿಭಯಂಕರವಾದ ಸುಳಿಗಳೂ, ಭೀಕರವಾದ ಭೋರ್ಗರೆತಗಳೂ ಗೋಚರವಾಗುತ್ತಿದ್ದುವು. ಒಳಗೂ-ಹೊರಗೂ ನಾಲ್ಕೂ ಕಡೆಗಳಲ್ಲಿಯೂ ಕೇವಲ ಜಲವು ಕಾಣಿಸುತ್ತಿತ್ತು. ಆ ಜಲರಾಶಿಯಲ್ಲಿ ಭೂಮಿಯು ಮಾತ್ರವಲ್ಲದೆ ಸ್ವರ್ಗಲೋಕವೂ ಮುಳುಗಿಹೋಗುತ್ತಿದೆಯೋ ಎಂಬಂತಿತ್ತು. ಮೇಲುಗಡೆ ಬಿರ್ರನೆ ಬಿರುಗಾಳಿ ಬೀಸುತ್ತಿದ್ದಂತೆಯೇ ಮಿಂಚುಬಳ್ಳಿಗಳೂ ಹೊಳೆ-ಹೊಳೆಯುತ್ತಿದ್ದುವು ಮತ್ತು ಇವುಗಳಿಂದ ಇಡೀ ಭೂಮಂಡಲವು ಶೋಷಿಸಿಹೋಗುತ್ತಿತ್ತು. ದಹಿಸಿಹೋಗುತ್ತಿತ್ತು. ಜಲ ಪ್ರಳಯದಿಂದ ಇಡೀ ಭೂಮಿಯು ಮುಳುಗಿಹೋಗಿ ಉದ್ಭಿಜ್ಜ, ಸ್ವೇದಜ, ಅಂಡಜ ಮತ್ತು ಜರಾಯುಜಪ್ರಾಣಿಗಳೆಲ್ಲವೂ ತಳಮಳಗುಟ್ಟುತ್ತಿದ್ದುವು. ಮುನಿಮಾರ್ಕಂಡೇಯರಿಗೆ ಈ ಭೀಕರದೃಶ್ಯವನ್ನು ಕಂಡು ಭಯ-ವ್ಯಾಕುಲತೆ-

ಬೇಸರ–ಗಾಬರಿ–ಎಲ್ಲ ತುಂಬಿಬಂದುವು. ಅವರ ಕಣ್ಣೆದುರಿಗೇ ಪ್ರಳಯ ಸಾಗರದಲ್ಲಿ ಭಯಂಕರವಾದ ಅಲೆಗಳು ಮೇಲೇಳುತ್ತಿದ್ದುವು. ಪ್ರಳಯದ ಮೋಡಗಳು ಪ್ರಚಂಡವಾಗಿ ಮಳೆಸುರಿಸುತ್ತಾ ಸಾಗರದ ನೀರನ್ನು ಮತ್ತೂ ಹೆಚ್ಚಿಸುತ್ತಿದ್ದುವು. ಭೂಮಿ, ಅಂತರಿಕ್ಷ, ಸ್ವರ್ಗ, ಗ್ರಹ, ನಕ್ಷತ್ರಮಂಡಲ ಮತ್ತು ದಿಕ್ಕು-ವಿದಿಕ್ಕುಗಳಿಂದ ಕೂಡಿದ ಇಡೀ ಭೂಮಂಡಲವು ನೀರಿನಲ್ಲಿ ಮುಳುಗಿಹೋಗಿ ತಾವೊಬ್ಬರು ಮಾತ್ರ ಉಳಿದಿರುವುದನ್ನು ಮಾರ್ಕಂಡೇಯಮುನಿಗಳು ಕಂಡರು. ಆಗ ಅವರು ಹುಚ್ಚರಂತೆಯೂ, ಕುರುಡರಂತೆಯೂ, ಜಡೆಗಳನ್ನು ಕೆದರಿಕೊಂಡು ಪ್ರಾಣ ಉಳಿಸಿಕೊಳ್ಳುವುದ ಕ್ಕಾಗಿ ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಓಡಿಹೋಗುತ್ತಿದ್ದರು. ಇದರೊಡನೆ ತಡೆಯ ಲಾರದ ಹಸಿವು ಬಾಯಾರಿಕೆ ಬೇರೆ ಅವರನ್ನು ಪೀಡಿಸುತ್ತಿತ್ತು. ಕೆಲವು ಕಡೆ ದೊಡ್ಡ-ದೊಡ್ಡ ಮೊಸಳೆಗಳೂ ಮತ್ತು ಕೆಲವುಕಡೆ ಭಾರೀ ತಿಮಿಂಗಿಲಗಳೂ ಅವರ ಮೇಲೆ ಬೀಳುತ್ತಿದ್ದುವು. ಒಂದು ಕಡೆಯಿಂದ ಬಿರುಗಾಳಿಯ ಹೊಡೆತ ಮತ್ತೊಂದು ಕಡೆಯಿಂದ ಅಲೆಗಳ ಬಡಿತ ಅವರನ್ನು ಪೀಡಿಸುತ್ತಿದ್ದುವು. ಅಲ್ಲಲ್ಲಿ ಅಲೆದಾಡುತ್ತಾ ಅಪಾರವಾದ ನಟ್ಟಿರುಳಿನಲ್ಲಿ ಮುಳುಗಿ, ಮೂರ್ಛೆ ಬೀಳುತ್ತಾ ಮಿತಿಮೀರಿದ ಆಯಾಸದಿಂದ ಭೂಮಿ ಯಾವುದು? ಆಕಾಶ ಯಾವುದು?–ಎಂಬ ಅರಿವನ್ನೂ ಕಳೆದುಕೊಂಡರು. ಕೆಲವೊಮ್ಮೆ ದೊಡ್ಡ ಸುಳಿಗಳಿಗೆ ಸಿಕ್ಕಿಬೀಳುತ್ತಾ ಕೆಲವೊಮ್ಮೆ ಅಲೆಗಳ ಭಾರೀ ಬಡಿತವನ್ನು ಅನುಭವಿಸುತ್ತಾ ದಿಕ್ಕುದಾರಿಕಾಣದೆ ತತ್ತರಿಸುತ್ತಿದ್ದರು. ಜಲಜಂತುಗಳು ಒಂದರ ಮೇಲೊಂದು ಆಕ್ರಮಣಮಾಡುತ್ತಿರುವಾಗ ಇವರೂ ಅವುಗಳ ಮಧ್ಯೆ ಇದ್ದಕ್ಕಿದ್ದಂತೆ ಸಿಕ್ಕಿಹಾಕಿಕೊಳ್ಳುತ್ತಿದ್ದರು. ಕೆಲವೊಮ್ಮೆ ಶೋಕ ದಲ್ಲಿಯೂ ಕೆಲವೊಮ್ಮೆ ಮೋಹದಲ್ಲಿಯೂ ಮುಳುಗುತ್ತಿದ್ದರು. ಕೆಲವು ವೇಳೆ ದುಃಖವೇ ದುಃಖಕ್ಕೆ ನಿಮಿತ್ತವಾಗುತ್ತಿದ್ದರೆ ಕೆಲವೊಮ್ಮೆ ಸುಖವೂ ಅತ್ಯಲ್ಪವಾಗಿ ಸಿಕ್ಕುತ್ತಿತ್ತು. ಕೆಲವೊಮ್ಮೆ ಭಯ, ಕೆಲವೊಮ್ಮೆ ಸಾವು ಮತ್ತು ಕೆಲವು ವೇಳೆ ಬಗೆ-ಬಗೆಯ ರೋಗ-ರುಜಿನಗಳು ಅವರನ್ನು ಕಾಡು ತ್ತಿದ್ದುವು. ಈ ರೀತಿ ಮಾರ್ಕಂಡೇಯಮಹಾಮುನಿಗಳು ಮಹಾವಿಷ್ಣು ವಿನ ಮಾಯೆಯ ಸುಳಿಸೆಳೆತಗಳಿಂದ ಮೋಹಪರವಶರಾದರು. ಅವರು

ಹೀಗೆ ಆ ಪ್ರಳಯಸಮುದ್ರದಲ್ಲಿ ಪರದಾಡುತ್ತಿರುವಾಗ ನೂರಾರು ಸಾವಿರಾರು ಲಕ್ಷಾಂತರ ವರ್ಷಗಳು ಕಳೆದುಹೋದುವು. (ಶ್ಲೋಕ ೧೦-೧೯)

ಹೀಗೆ ಪ್ರಳಯದ ಕಡಲಿನಲ್ಲಿ ಅಸಂಖ್ಯಾತವರ್ಷಕಾಲ ಅಲೆದಾಡುತ್ತಿರುವಾಗ ಒಮ್ಮೆ ಅವರಿಗೆ ಭೂಮಂಡಲದ ಒಂದು ದಿಣ್ಣೆಯ ಮೇಲೆ ಹಸಿರು ಪಚ್ಚೆಯ ಎಲೆಗಳಿಂದಲೂ ಕೆಂಬಣ್ಣದ ಹೂವು-ಹಣ್ಣುಗಳಿಂದಲೂ ಕಂಗೊಳಿಸುತ್ತಿದ್ದ ಒಂದು ಸಣ್ಣ ಆಲದಮರ ಕಾಣಿಸಿತು. ಅಲ್ಲಿ ಮರದ ಈಶಾನ್ಯದ ಮೂಲೆಯಲ್ಲಿ ಒಂದು ಕೊಂಬೆಯಲ್ಲಿ ಎಲೆಗಳ ದೊನ್ನೆಯೊಂದರಲ್ಲಿ ಚೆಲುವಾದ ಒಂದು ಹಸುಗೂಸು ಪವಡಿಸಿರುವುದನ್ನು ಅವರು ನೋಡಿದರು. ಆ ಶಿಶುವಿನ ಸೊಬಗು ಕಾಂತಿಗಳನ್ನು ಹೇಗೆ ವರ್ಣಿಸೋಣ! ಮರಕತಮಣಿಯಂತೆ ಶ್ಯಾಮಲವಾದ ದೇಹಕಾಂತಿ. ಅದರಿಂದ ಹೊರಹೊಮ್ಮುತ್ತಿದ್ದ ಉಜ್ವಲ ಪ್ರಭೆ ಸುತ್ತ-ಮುತ್ತಲಿನ ಕತ್ತಲೆಯನ್ನು ಅಟ್ಟಿ ಓಡಿಸುತ್ತಿತ್ತು. ಮುಖದಿಂದ ಸೌಂದರ್ಯಸಂಪತ್ತು ಬಿರಿದುಬರುತ್ತಿತ್ತು. ಶಂಖವನ್ನು ಸರಿಹೋಲುವ ಸಿರಿಕಂಠದ ಸೊಗಸು, ವಿಶಾಲವಾದ ವಕ್ಷಃಸ್ಥಳ, ಗಿಳಿಯ ಕೊಕ್ಕಿನಂತೆ ಸುಂದರವಾದ ಮೂಗು ಮತ್ತು ಚೆಲುವಾದ ಹುಬ್ಬುಗಳು, ಕಪ್ಪು ಬಣ್ಣದ ಗುಂಗುರುಕೂದಲು ಕೆನ್ನೆಗಳ ಮೇಲೆ ಇಳಿದು ಬಂದು ಉಸಿರಾಟದ ಗಾಳಿಯಿಂದ ಅಲುಗಾಡುತ್ತಿದೆ. ಶಂಖದಂತೆ ತಿರುವುಗಳುಳ್ಳ ಕಿವಿಗಳಲ್ಲಿ ಸುಂದರವಾದ ದಾಳಿಂಬೆಯ ಹೂವು ಕಳಕಳಿಸುತ್ತಿದೆ. ಅಮೃತದಂತೆ ಬೆಳ್ಳಗಿರುವ ಮುಗುಳ್ನಗೆಯೊಡನೆ ಕೆಳದುಟಿಯು ಹವಳದಂತಹ ಕೆಂಪು ಕಾಂತಿಯು ಕಲೆತು ಶೋಭಿಸುತ್ತಿದೆ. ತಾವರೆಯ ಒಳಭಾಗದಂತೆ ಕೆಂಪಾದ ಕಡೆಗಣ್ಣು, ಹೃದ್ಯವಾದ ಹುಸಿನಗೆ ಮತ್ತು ನೋಟಗಳು, ಸುಂದರವಾದ ಸುಳಿಹೊಕ್ಕುಳು, ಆಗಾಗ ಕದಲುತ್ತಿರುವ ತ್ರಿವಳಿಗಳಿಂದ ಶೋಭಿತವಾದ ಅಂಗೈಅಗಲದ ಉಸಿರಾಟದಿಂದ ಕೂಡಿದ ಉದರದ ಸೌಂದರ್ಯ, ಹೀಗೆಲ್ಲಾ ಚೆಲುವಿನ ಗಣಿಯಾಗಿದ್ದ ಆ ಶಿಶುವು ಕಮನೀಯ ಕೋಮಲವಾದ ಬೆರಳುಗಳಿಂದ ಒಪ್ಪುತ್ತಿದ್ದ ಎರಡು ಕೈಗಳಿಂದಲೂ ತನ್ನ ಒಂದು ಕಾಲನ್ನು ಹಿಡಿದೆತ್ತಿ ಆ ಕಾಲಿನ ಹೆಬ್ಬೆರಳನ್ನು ಬಾಯಲ್ಲಿ ಇಟ್ಟುಕೊಂಡು ಚಪ್ಪರಿಸುತ್ತಿತ್ತು. ಈ ದಿವ್ಯದೃಶ್ಯವನ್ನು ಕಂಡು ಮಾರ್ಕಂಡೇಯ ಮುನಿಗಳು ಅಚ್ಚರಿಯಿಂದ ಬೆಕ್ಕಸಬೆರಗಾದರು. (ಶ್ಲೋಕ ೨೦-೨೫)

ಆ ದಿವ್ಯಶಿಶುವನ್ನು ನೋಡಿದೊಡನೆಯೇ ಮಾರ್ಕಂಡೇಯಮುನಿಯ ಆಯಾಸವೆಲ್ಲಾ ಹೊರಟುಹೋಯಿತು. ಪರಮಾನಂದದಿಂದ ಅವರ ಹೃದಯಕಮಲ–ನೇತ್ರಕಮಲಗಳು ಅರಳಿಕೊಂಡುವು. ದೇಹವೆಲ್ಲಾ ರೋಮಾಂಚಿತವಾಯಿತು. ಪರಮಾದ್ಭುತವಾದ ಆ ಎಳೆಗೂಸಿನ ಅಮೃತ ವಾದ ಭಾವವನ್ನು ಕಂಡು ಮುನಿಗಳ ಮನಸ್ಸಿನಲ್ಲಿ ಬಗೆ-ಬಗೆಯ ಆಲೋಚನಾತರಂಗಗಳು ಮೂಡಿದುವು. 'ಯಾರು ನೀನು?' – ಎಂದು ಅದನ್ನೇ ಪ್ರಶ್ನಿಸೋಣವೆಂದು ಅವರು ಅದರ ಬಳಿ ಸಾರಿದರು. ಅವರು ಇನ್ನೇನು ಅದನ್ನು ತಲುಪಬೇಕು–ಎನ್ನುವಷ್ಟರಲ್ಲಿಯೇ ಅದು ಉಸಿರನ್ನು ಒಳಕ್ಕೆ ಎಳೆದುಕೊಳ್ಳಲು ಭಾರ್ಗವಮುನಿಗಳು ಸೊಳ್ಳೆಯಂತೆ ಅದರ ಶರೀರದೊಳಗಡೆಗೆ ಸೆಳೆಯಲ್ಪಟ್ಟರು. ಆ ಹೊಟ್ಟೆಯೊಳಗೆ ಅವರಿಗೆ ಪ್ರಳಯಕ್ಕೆ ಮೊದಲು ತಾವು ಕಂಡಿದ್ದ ಸಮಸ್ತಸೃಷ್ಟಿಯೂ ಹೇಗಿತ್ತೋ ಹಾಗೆಯೇ ಕಾಣಿಸಿಕೊಂಡಿತು. ಅಲ್ಲಿ ಅವರು ಆಕಾಶವನ್ನೂ, ದ್ಯಾವಾಪೃಥಿವಿಗಳನ್ನೂ, ನಕ್ಷತ್ರಗಣಗಳನ್ನೂ, ಗಿರಿ-ಸಮುದ್ರಗಳನ್ನೂ, ದ್ವೀಪಗಳನ್ನೂ, ವರ್ಷ ಗಳನ್ನೂ, ದಿಕ್ಕು-ವಿದಿಕ್ಕುಗಳನ್ನೂ, ದೇವತೆಗಳನ್ನೂ, ಅಸುರರನ್ನೂ, ಅರಣ್ಯಗಳನ್ನೂ, ದೇಶಗಳನ್ನೂ, ನದಿಗಳನ್ನೂ, ನಗರಗಳನ್ನೂ, ಗಣಿ ಗಳನ್ನೂ, ರೈತರು ವಾಸಿಸುವ ಹಳ್ಳಿಗಳನ್ನೂ, ಗೊಲ್ಲರ ವಸತಿಪ್ರದೇಶ ಗಳನ್ನೂ, ಆಶ್ರಮ-ವರ್ಣ ಮತ್ತು ಅವುಗಳ ಆಚಾರ-ವ್ಯವಹಾರಗಳನ್ನೂ, ಪಂಚಮಹಾಭೂತಗಳನ್ನೂ, ಭೂತಗಳಿಂದ ರಚಿತವಾದ ಪ್ರಾಣಿಗಳ ಶರೀರ ಗಳನ್ನೂ ಮತ್ತು ಪದಾರ್ಥಗಳನ್ನೂ ಅನೇಕ ಯುಗ ಮತ್ತು ಕಲ್ಪದಿಂದ ಕೂಡಿದ ಕಾಲವೇ ಮುಂತಾದುವುಗಳನ್ನೂ ನೋಡಿದರು. ಇಷ್ಟುಮಾತ್ರ ವಲ್ಲದೆ ಯಾವ ದೇಶ, ವಸ್ತು ಮತ್ತು ಕಾಲಗಳ ಮೂಲಕ ಜಗತ್ತಿನ ವ್ಯವಹಾರವು ನಡೆಯುತ್ತದೆಯೋ ಅದೆಲ್ಲವನ್ನೂ ಕಂಡರು. ಹೆಚ್ಚೇನು ಹೇಳೋಣ? ಇಡೀ ವಿಶ್ವವೇ ಸತ್ಯವಾಗಿ ಇರುವಂತೆ ಅವರಿಗೆ ಅಲ್ಲಿ ಕಂಡು ಬಂದಿತು. ಅದೇ ಹಿಮಾಲಯಪರ್ವತ, ಅದೇ ಪುಷ್ಪಭದ್ರಾನದಿಯನ್ನೂ, ಅದರ ದಡದಲ್ಲಿನ ತನ್ನ ಆಶ್ರಮವನ್ನೂ ಮತ್ತು ಅಲ್ಲಿ ವಾಸಿಸುವ ಋಷಿ ಗಳನ್ನೂ ಮಾರ್ಕಂಡೇಯರು ಅಲ್ಲಿ ಪ್ರತ್ಯಕ್ಷವಾಗಿಯೇ ನೋಡಿದರು. ಹೀಗೆ ಇಡೀ ವಿಶ್ವವನ್ನು ನೋಡುತ್ತಿರುವಂತೆಯೇ ಅವರು ಆ ದಿವ್ಯ

ಶಿಶುವಿನ ಉಸಿರಿನ ಮೂಲಕ ಹೊರಗೆ ಎಸೆಯಲ್ಪಟ್ಟು ಮತ್ತೆ ಪ್ರಳಯ ಕಾಲದ ಮಹಾಸಮುದ್ರದಲ್ಲಿ ಬಿದ್ದುಬಿಟ್ಟರು. ಮತ್ತೆ ಸಮುದ್ರದ ಮಧ್ಯದಲ್ಲಿ ಭೂಮಿಯ ದಿಣ್ಣೆಯಮೇಲೆ ಅದೇ ಆಲದಮರವು ಹಿಂದಿನಂತೆಯೇ ಇರುವುದನ್ನೂ ಅದರ ಎಲೆಗಳ ದೊನ್ನೆಯಲ್ಲಿ ಅದೇ ದಿವ್ಯಶಿಶುವು ನಿದ್ರಿಸುತ್ತಿರುವುದನ್ನೂ ಅವರು ಕಂಡರು. ಆ ಶಿಶುವಿನ ತುಟಿಗಳಲ್ಲಿ ಪ್ರೇಮಾಮೃತವು ತುಂಬಿದ ಮುಗುಳ್ನಗೆಯು ಮೆರೆಯುತ್ತಿದ್ದು ಪ್ರೇಮಪೂರ್ಣವಾದ ಪ್ರಸನ್ನದೃಷ್ಟಿಯಿಂದ ಅದು ತನ್ನ ಕಡೆ ನೋಡುತ್ತಿರುವುದನ್ನೂ ಮಾರ್ಕಂಡೇಯಮುನಿಗಳು ಕಂಡರು. ಮುದ್ದಾದ ಮಗುವಿನ ರೂಪದಲ್ಲಿ ಆಟವಾಡುತ್ತಿದ್ದ ಆ ಅಧೋಕ್ಷಜನು (ಇಂದ್ರಿಯಾತೀತನಾದ ನಾರಾಯಣನು) ಕಣ್ಣುಗಳಿಗೆ ಕಾಣಿಸುತ್ತಿದ್ದಂತೆಯೇ ಹೃದಯದೊಳಗೂ ಈ ಮೊದಲೇ ಬೆಳಗುತ್ತಿರುವುದನ್ನೂ ಅವರು ನೋಡಿ ಪ್ರೀತಿಯಿಂದ ಅವನನ್ನು ಅಪ್ಪಿಕೊಳ್ಳುವುದಕ್ಕಾಗಿ ಕಷ್ಟದಿಂದ ಮುಂದಕ್ಕೆ ಸರಿದರು. ಅಷ್ಟರಲ್ಲಿ ಯೋಗೇಶ್ವರನೂ ಹೃದಯಗುಹಾನಿವಾಸಿಯೂ ಆದ ಅದ್ಭುತಶಕ್ತಿಯುಳ್ಳ ಆ ಭಗವಂತನು ಮಹರ್ಷಿಗಳು ನೋಡುತ್ತಿರುವಂತೆಯೇ ಒಡನೆಯೇ ಕಣ್ಮರೆಯಾಗಿಬಿಟ್ಟನು. ಮಹರ್ಷಿಗಳ ಉದ್ದೇಶವು– ದುರದೃಷ್ಟಶಾಲಿಯಾದ ದರಿದ್ರನ ಪ್ರಯತ್ನದಂತೆ ವ್ಯರ್ಥವಾಗಿ ಬಿಟ್ಟಿತು. ಶೌನಕರೇ! ಆ ಶಿಶುವು ಮರೆಯಾದೊಡನೆಯೇ ಆ ಆಲದ ಮರವು ಕಣ್ಮರೆಯಾಯಿತು. ಜಲರಾಶಿಯೂ ಮತ್ತು ಪ್ರಳಯದ ಇತರ ದೃಶ್ಯಗಳೂ ಅದೃಶ್ಯವಾಗಿಬಿಟ್ಟುವು. ತಾವು ಹಿಂದಿನಂತೆಯೇ ತಮ್ಮ ಆಶ್ರಮದಲ್ಲಿ ಧ್ಯಾನಸಮಾಧಿಯಲ್ಲಿ ಕುಳಿತಿರುವುದಾಗಿ ಮಹರ್ಷಿಗಳಿಗೆ ಗೋಚರವಾಯಿತು.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದ್ವಾದಶಸ್ಕಂಧದ ೯ನೆಯ ಅಧ್ಯಾಯವು ಮುಗಿಯಿತು.

——

ದ್ವಾದಶಸ್ಕಂಧ ೧೦ನೆಯ ಅಧ್ಯಾಯ

ಮಾರ್ಕಂಡೇಯರಿಗೆ ಪಾರ್ವತೀ-ಪರಮೇಶ್ವರರ ದರ್ಶನ ಮತ್ತು ವರಪ್ರದಾನ

ಸೂತಪುರಾಣಿಕರು ಹೇಳುತ್ತಾರೆ :

ಸ ಏವಮನುಭೂಯೇದಂ ನಾರಾಯಣವಿನಿರ್ಮಿತಮ್ ।
ವೈಭವಂ ಯೋಗಮಾಯಾಯಾಸ್ತಮೇವ ಶರಣಂ ಯಯೌ ॥೧॥

"ಎಲೈ ಮಹರ್ಷಿಗಳೇ! ಆ ಮಾರ್ಕಂಡೇಯಮಹರ್ಷಿಗಳು ನಾರಾಯಣನು ತೋರಿಸಿದ ಮಾಯಾಪ್ರಭಾವವನ್ನು ಹೀಗೆ ಅನುಭವಿಸಿ ಆ ಮಾಯೆಯನ್ನು ದಾಟಲು ಆ ಮಾಯಾಧಿಪತಿಯಾದ ನಾರಾಯಣನಲ್ಲದೆ ಬೇರೆ ದಾರಿಯಿಲ್ಲವೆಂದು ನಿರ್ಧರಿಸಿ ಆತನನ್ನೇ ಹೀಗೆ ಮರೆಹೊಕ್ಕರು.

ಮಾರ್ಕಂಡೇಯಮುನಿಗಳು ಹೇಳುತ್ತಾರೆ :

ಪ್ರಪನ್ನೋऽಸ್ಮ್ಯಂಘ್ರಿಮೂಲಂ ತೇ ಪ್ರಪನ್ನಾಭಯದಂ ಹರೇ ।
ಯನ್ಮಾಯಯಾಪಿ ವಿಬುಧಾ ಮುಹ್ಯನ್ತಿ ಜ್ಞಾನಕಾಶಯಾ ॥೨॥

"ಓ ಶ್ರೀಹರಿಯೇ! ನಿನ್ನ ಜ್ಞಾನಶಕ್ತಿಯಿಂದ ಪ್ರಕಾಶಿತವಾದ ಮಾಯೆಯ ಪ್ರಭಾವಕ್ಕೆ ಸಿಕ್ಕಿ ದೇವತೆಗಳೂ ಮೋಹಗೊಳ್ಳುತ್ತಾರೆ. ಅಂತಹ ಅದ್ಭುತವಾದ ನಿನ್ನ ಮಾಯೆಯನ್ನು ದಾಟುವುದಕ್ಕಾಗಿ ಶರಣಾಗತರಿಗೆ ಅಭಯವನ್ನು ನೀಡುವ ನಿನ್ನ ಆ ಪಾದಮೂಲವನ್ನೇ ಶರಣುಹೊಂದುತ್ತೇನೆ."

ಹೀಗೆ ಭಗವಂತನಲ್ಲಿ ಶರಣಾಗತಿಮಾಡಿ ಸಮಾಧಿನಿಷ್ಠರಾಗಿದ್ದ ಆ ಮಹಾಯೋಗಿಗಳನ್ನು ಪಾರ್ವತೀಸಮೇತನಾಗಿ ನಂದಿಯನ್ನೇರಿ ದಿವಿಯಲ್ಲಿ ಸಂಚರಿಸುತ್ತಿದ್ದ ಭಗವಂತನಾದ ರುದ್ರನು ನೋಡಿದನು. ರುದ್ರದೇವನೊಡನೆ ಆತನ ಗಣಗಳೂ ಇದ್ದುವು. ಭಗವತೀ ಉಮಾದೇವಿಯು ಆ ಋಷಿಯನ್ನು ಕಂಡು ತನ್ನ ಪತಿದೇವರಿಗೆ ಹೀಗೆಂದಳು : 'ಭಗವಂತರೇ! ಮನಸ್ಸು ಇಂದ್ರಿಯಾದಿಗಳನ್ನೆಲ್ಲಾ ನಿಶ್ಚಲಗೊಳಿಸಿಕೊಂಡಿರುವ ಈ ಬ್ರಾಹ್ಮಣಶ್ರೇಷ್ಠನನ್ನು ನೋಡಿರಿ. ಬಿರುಗಾಳಿ ನಿಂತ ಬಳಿಕ ಅಲೆಗಳೆಲ್ಲವೂ ಅಡಗಿ ಜಲವೂ ಜಲಚರ

ಗಳಾದ ಮೀನುಗಳ ಸಮೂಹವೂ ಎಲ್ಲವೂ ಶಾಂತವಾಗಿರುವ ಮಹಾಸಾಗರದಂತೆ ಈತನು ಬೆಳಗುತ್ತಿದ್ದಾನೆ. ತಾವು ಸಮಸ್ತಸಿದ್ಧಿಗಳನ್ನೂ ದಯಪಾಲಿಸುವವರು. ಕೃಪೆಯಿಟ್ಟು ಈತನು ಮಾಡುತ್ತಿರುವ ಮಹಾತಪಸ್ಸಿಗೆ ತಕ್ಕ ಸಿದ್ಧಿಯನ್ನು ಅನುಗ್ರಹಿಸಿರಿ.' ಭಗವಂತನಾದ ರುದ್ರದೇವನು ಪಾರ್ವತಿಗೆ ಹೇಳಿದನು.: 'ದೇವಿ! ಈ ಬ್ರಹ್ಮರ್ಷಿಯು ಐಹಿಕ ಅಥವಾ ಪಾರಲೌಕಿಕವಾದ ಯಾವ ಫಲವನ್ನೂ ಬಯಸುತ್ತಿಲ್ಲ. ಉಳಿದ ಫಲಗಳ ವಿಷಯ ಹಾಗಿರಲಿ. ಮೋಕ್ಷವನ್ನೂ ಕೂಡ ಈತನು ಇಚ್ಛಿಸುತ್ತಿಲ್ಲ. ಏಕೆಂದರೆ : ಈತನು ಭಗವಂತನಾದ ಪುರುಷೋತ್ತಮನಲ್ಲಿ ಪರಾಭಕ್ತಿಯೆಂಬ ಪರಮಸಿದ್ಧಿಯನ್ನು ಈಗಾಗಲೇ ಪಡೆದುಕೊಂಡಾಗಿದೆ. ಆದರೂ ಈ ಸಾಧುವಿನೊಡನೆ ಸ್ವಲ್ಪ ಸಂಭಾಷಣೆ ಮಾಡೋಣ. ಮನುಷ್ಯರಿಗೆ ಸಾಧುಗಳ ಸಮಾಗಮವು ಒದಗಿದರೆ ಅದು ಪರಮಲಾಭವಲ್ಲವೆ? ಅಯಂ ಹಿ ಪರಮೋ ಲಾಭೋ ನೃಣಾಂ ಸಾಧುಸಮಾಗಮಃ ॥'' ಎಂದು ಉತ್ತರಿಸಿದನು. (ಶ್ಲೋಕ ೩-೭)

ಪುರಾಣಿಕಶಿರೋಮಣಿಗಳಾದ ಸೂತರು ಹೇಳುತ್ತಾರೆ :

ಏವಂ ಸ್ತುತಃ ಸ ಭಗವಾನಾದಿದೇವಃ ಸತಾಂ ಗತಿಃ ।
ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವದೇಹಿನಾಮ್ ॥೮॥

"ಮಹರ್ಷಿಗಳೇ! ಪಾರ್ವತಿಗೆ ಹೀಗೆ ಹೇಳಿ ಸತ್ಪುರುಷರಿಗೆಲ್ಲಾ ಪರಮ ಗತಿಯೂ,* ಸರ್ವವಿದ್ಯೆಗಳಿಗೂ ಅಧಿಪತಿಯೂ, ಸಮಸ್ತಜೀವಿಗಳಿಗೂ ಈಶ್ವರನೂ ಆದ ಭಗವಂತನಾದ ಸದಾಶಿವನು ಆ ಮಹರ್ಷಿಯ ಬಳಿಗೆ ಸಾರಿದನು. ಬುದ್ಧಿಯ ವೃತ್ತಿಗಳೆಲ್ಲವನ್ನೂ ತಡೆಗಟ್ಟಿ ತನ್ನ ಶರೀರವಾಗಲೀ ವಿಶ್ವವೇ ಆಗಲೀ ಯಾವುದೂ ಗಮನಕ್ಕೆ ಬರದೇ ಇರುವ ಸ್ಥಿತಿಯಾದ ನಿರ್ವಿಕಲ್ಪಸಮಾಧಿಯಲ್ಲಿ ಮಗ್ನನಾಗಿದ್ದ ಆ ಮಹಾಮುನಿಗೆ ಜಗದೀಶ್ವರರಾಗಿ ಜಗತ್ತಿಗೆಲ್ಲಾ ಆತ್ಮವಾಗಿರುವ ಆ ದಿವ್ಯದಂಪತಿಗಳು ತಮ್ಮೆದುರಿಗೆ ಬಂದಿದ್ದೂ ತಿಳಿಯಲಿಲ್ಲ. ಭಗವಂತನಾದ ಮಹೇಶ್ವರಮಹಾದೇವನು

---

*ಈಶಾನಃಸರ್ವವಿದ್ಯಾನಾಮೀಶ್ವರಸ್ಸರ್ವಭೂತಾನಾಂ ಬ್ರಹ್ಮಾಧಿಪತಿರ್ಬ್ರಹ್ಮಣೋಽಧಿಪತಿರ್ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಮ್ ॥ ಎಂಬ ಉಪನಿಷನ್ಮಂತ್ರದ ಅನುವಾದವಾಗಿದೆ ಈ ಶ್ಲೋಕ.

ಇದನ್ನು ಗುರುತಿಸಿ ವಾಯುವು ರಂಧ್ರದೊಳಗೆ ಪ್ರವೇಶಮಾಡುವಂತೆ ತನ್ನ ಯೋಗಮಾಯೆಯಿಂದ ಆ ಮಹರ್ಷಿಯ ಹೃದಯಾಕಾಶವನ್ನು ಪ್ರವೇಶಿಸಿಬಿಟ್ಟನು. ಒಡನೆಯೇ ಮುನಿಯ ಹೃದಯದಲ್ಲಿ ಒಂದು ಪರಮಾದ್ಭುತವಾದ ದಿವ್ಯರೂಪವು ಕಾಣಿಸಿಕೊಂಡಿತು. ಮಿಂಚಿನಂತೆ ಹೊಂಬಣ್ಣದ ಜಟಾಜೂಟ, ಮೂರು ಕಣ್ಣುಗಳು, ಹತ್ತು ಬಾಹುಗಳು, ಉನ್ನತವಾದ ಆಕೃತಿ, ಉದಯಿಸುತ್ತಿರುವ ಸೂರ್ಯನಂತಹ ತೇಜಸ್ಸು, ಹುಲಿಯ ಚರ್ಮದ ಉಡುಗೆ, ತ್ರಿಶೂಲ, ಖಟ್ವಾಂಗ, ಧನುಸ್ಸು, ಬಾಣ, ಗುರಾಣಿ, ಜಪಮಾಲೆ, ಡಮರು, ಕಪಾಲ ಮತ್ತು ಕತ್ತಿಗಳನ್ನು ಧರಿಸಿ ಹೀಗೆ ಇದ್ದಕ್ಕಿದ್ದಂತೆ ಮಿಂಚಿನಂತೆ ಹೊಳೆದ ಮೂರ್ತಿಯನ್ನು ಕಂಡು ಆ ಮುನಿಗಳು 'ಇದೇನು? ಎಲ್ಲಿಂದ ಬಂದಿತು?' ಎಂದು ಆಶ್ಚರ್ಯ ಚಕಿತರಾಗಿ ಸಮಾಧಿಯಿಂದ ಎಚ್ಚರಗೊಂಡು ಕಣ್ಣುತೆರೆದು ನೋಡಿದಾಗ ಅವರಿಗೆ ಮೂರು ಲೋಕಗಳಿಗೂ ಗುರುವಾದ ಉಮಾಮಹೇಶ್ವರನು ಗಣಸಹಿತನಾಗಿ ದಯಮಾಡಿಸಿದ್ದು ಗೋಚರಿಸಿತು. ಆಗ ಅವರು ಪತ್ನೀಸಮೇತನಾಗಿದ್ದ ಆ ದೇವದೇವನಿಗೂ ಆತನ ಗಣಗಳಿಗೂ ಸ್ವಾಗತ, ಆಸನ, ಪಾದ್ಯ, ಅರ್ಘ್ಯ, ಗಂಧ, ಪುಷ್ಪಮಾಲೆ, ಧೂಪ-ದೀಪಾದಿಗಳಿಂದ ಪೂಜೆಯನ್ನು ಸಲ್ಲಿಸಿದರು.

"ಪ್ರಭೋ! ಆತ್ಮಾನುಭವದಿಂದ ಸಂಪೂರ್ಣಕಾಮನಾಗಿರುವ ನಿನಗೆ ನಾನು ಏನನ್ನು ಅರ್ಪಿಸಲಿ? ಹೇಗೆ ಆರಾಧಿಸಲಿ? ಇಡೀ ಜಗತ್ತಿಗೇ ಸುಖ-ಶಾಂತಿಗಳನ್ನು ವಿಸ್ತರಿಸುವವನು ನೀನು. ನಿನಗೆ ಯಾವುದನ್ನು ಅರ್ಪಿಸಿ ಸಂತೋಷವನ್ನುಂಟುಮಾಡಲಿ? ನಿನ್ನ ಶಾಂತವಾದ ಸದಾಶಿವ ರೂಪಕ್ಕೆ ನಮಸ್ಕಾರವು. ಸುಖಕರವಾದ ಸತ್ತ್ವಗುಣರೂಪಕ್ಕೆ ನಮಸ್ಕಾರವು. ರಜೋಗುಣಯುಕ್ತವಾದ ಅಘೋರರೂಪಕ್ಕೆ ನಮಸ್ಕಾರವು. ತಮೋಗುಣಯುಕ್ತವಾದ ರೂಪಕ್ಕೂ ನಮಸ್ಕಾರವು"–ಎಂದು ಆತನಿಗೆ ಸ್ತೋತ್ರಸೇವೆಯನ್ನು ಸಮರ್ಪಿಸಿದರು."

ಸೂತಪುರಾಣಿಕರು ಹೇಳುತ್ತಾರೆ :

"ಹೀಗೆ ಅವರಿಂದ ಸ್ತುತಿಸಲ್ಪಟ್ಟ, ಸತ್ಪುರುಷರಿಗೆ ಗತಿಯಾದ,

ಭಗವಂತನಾದ ಆದಿದೇವ ಮಹಾದೇವನು ಸಂತುಷ್ಟನಾಗಿ ಪ್ರಸನ್ನವಾದ ಮನಸ್ಸಿನಿಂದ ನಗುತ್ತಾ ಅವರಿಗೆ ಹೀಗೆಂದನು : * 'ಮನಸ್ಸಿಗೆ ಬೇಕಾದ ವರವನ್ನು ಕೇಳಿಕೋ, ವತ್ಸ! (ಬ್ರಹ್ಮ, ವಿಷ್ಣು, ರುದ್ರಮೂರ್ತಿಗಳಾದ) ನಾವು ಮೂವರೂ ವರವನ್ನು ನೀಡುವವರಿಗೆಲ್ಲಾ ಅಧಿಪತಿಗಳು. ನಮ್ಮ ದರ್ಶನವು ಎಂದಿಗೂ ವ್ಯರ್ಥವಾಗುವುದಿಲ್ಲ. ಮರಣಧರ್ಮವುಳ್ಳವರಿಗೆ ಅಮೃತತ್ವವನ್ನು ನೀಡುವವರು ನಾವು.** ಸಾಧುಗಳಾಗಿ ಪ್ರಶಾಂತರಾಗಿ ವಿಷಯಾಸಕ್ತಿರಹಿತರಾಗಿ, ಭೂತದಯೆಯುಳ್ಳವರಾಗಿ, ನಮ್ಮಲ್ಲಿ ಅನನ್ಯ ಭಕ್ತರಾಗಿ, ಯಾರಲ್ಲಿಯೂ ವೈರವಿಲ್ಲದೆ ಸಮದೃಷ್ಟಿಯುಳ್ಳವರಾಗಿರುವ ಯಾವ ಬ್ರಹ್ಮಜ್ಞಾನಿಗಳುಂಟೋ, ಅವರನ್ನು ಸಮಸ್ತಲೋಕಗಳೂ ಮತ್ತು ಲೋಕಪಾಲಕರೂ ನಮಸ್ಕರಿಸುತ್ತಾರೆ.; ಪೂಜಿಸುತ್ತಾರೆ ಮತ್ತು ಉಪಾಸನೆ ಮಾಡುತ್ತಾರೆ. ಇತರರ ವಿಷಯ ಹಾಗಿರಲಿ. ನಾನೂ, ಭಗವಂತನಾದ ಬ್ರಹ್ಮನೂ ಮತ್ತು ಸರ್ವೇಶ್ವರನಾದ ಸ್ವಯಂ ಶ್ರೀಹರಿಯೂ ಕೂಡ ಅಂತಹವನನ್ನು ಸಂಭಾವಿಸುತ್ತೇವೆ.

---

*ಅಸ್ಮಾಸು–ನಮ್ಮಲ್ಲಿ ಎಂದರೆ ಬ್ರಹ್ಮ, ವಿಷ್ಣು ಮತ್ತು ರುದ್ರರೆಂಬ ತ್ರಿಮೂರ್ತಿಗಳಾದ ನಮ್ಮಲ್ಲಿ, ಸಮದರ್ಶಿನಃ–ಎಂಬುದಕ್ಕೆ 'ನಿರ್ದೋಷಂ ಹಿ ಸಮಂ ಬ್ರಹ್ಮ'– ಎಂಬಂತೆ ಬ್ರಹ್ಮದೃಷ್ಟಿಯುಳ್ಳವರು, ಎಲ್ಲವೂ ಬ್ರಹ್ಮಾತ್ಮಕವಾಗಿದೆಯೆಂಬ ಭಾವನೆಯುಳ್ಳವರು ಎಂದು ಅರ್ಥಮಾಡಬೇಕು. ಅಥವಾ ಎಲ್ಲಾ ಆತ್ಮಗಳೂ ಜ್ಞಾನಾಕಾರವಾಗಿರುವುದರಿಂದ ಸಮಭಾವನೆಯುಳ್ಳವರು ಎಂಬ ಅರ್ಥವನ್ನೂ ಗ್ರಹಿಸಬಹುದು. ಶ್ರೀಗೀತೆಯಲ್ಲಿ ಇದೇ ಅರ್ಥವನ್ನು ತಿಳಿಯಲಾಗಿದೆ. ಪರಬ್ರಹ್ಮವೇ ಜೀವ, ಜಗತ್ತು ಎಲ್ಲವೂ ಆಗಿದೆ–ಎಂಬ ವಾಕ್ಯವನ್ನು ಮೂರು ಅರ್ಥಗಳಲ್ಲಿ ಗ್ರಹಣಮಾಡಬಹುದು. ಇದನ್ನು ಉದಾಹರಣೆಗಳೊಡನೆ ಹೀಗೆ ನಿರೂಪಿಸುತ್ತಾರೆ.:

೧) ಚೋರಃ ಸ್ಥಾಣುಃ–ಕಳ್ಳನು ಕಂಬ–ಎಂದರೆ ಯಾವುದನ್ನು ಕಳ್ಳನೆಂದು ಅಜ್ಞಾನಾವಸ್ಥೆಯಲ್ಲಿ ತಿಳಿದಿದ್ದರೋ ಅದು ವಿವೇಕದಿಂದ ನೋಡಿದಾಗ ಕೇವಲ ಕಂಬ ವೆಂಬ ಅರಿವು ಉಂಟಾಗುತ್ತದೆ. ಹಾಗೆಯೇ ಯಾವುದನ್ನು ಜೀವಜಗತ್ತು ಎಂದು

**ಪಾರಮಾರ್ಥಿಕವಾಗಿ ಎಲ್ಲವೂ ಬ್ರಹ್ಮವೇ ಆಗಿರುವುದರಿಂದ ಎಲ್ಲವನ್ನೂ ಸ್ವರೂಪತಃ ಪರಬ್ರಹ್ಮವೆಂದೇ ಭಾವಿಸುತ್ತಾರೆ. ಯಾವ ಭೇದವನ್ನೂ ಯಾರಲ್ಲಿಯೂ ಎಣಿಸುವುದಿಲ್ಲ.

(ಅದ್ವೈತದೃಷ್ಟಿ)

ಬ್ರಹ್ಮನೇ ಎಲ್ಲಕ್ಕೂ ಆತ್ಮವಾಗಿದೆ. ಜೀವಜಗತ್ತುಗಳು ಬ್ರಹ್ಮಕ್ಕೆ ಶರೀರಭೂತ

ನ ತೇ ಮಯ್ಯಚ್ಯುತೇಽಜೇ ಚ ಭಿದಾಮಣ್ವಪಿ ಚಕ್ಷತೇ ।
ನಾತ್ಮನಶ್ಚ ಜನಸ್ಯಾಪಿ ತದ್ಯುಷ್ಮಾನ್ವಯಮೀಮಹಿ ॥೨೨॥

ಅವರು ನನ್ನಲ್ಲಿ, ವಿಷ್ಣುವಿನಲ್ಲಿ ಮತ್ತು ಬ್ರಹ್ಮದೇವರಲ್ಲಿ ಕಿಂಚಿತ್ತೂ ಭೇದವನ್ನು ಎಣಿಸುವುದಿಲ್ಲ. ಮೂವರನ್ನೂ ಸಮ (ಬ್ರಹ್ಮ) ದೃಷ್ಟಿಯಿಂದ ನೋಡುತ್ತಾರೆ. ಅಣುವಿನಷ್ಟೂ ಭೇದವನ್ನು ನಮ್ಮಲ್ಲಿ ಹೇಳುವುದಿಲ್ಲ ಮತ್ತು ತಮಗೂ ಇತರರಿಗೂ ಸ್ವಲ್ಪವೂ ಭೇದವನ್ನು ಹೇಳುವುದಿಲ್ಲ. ತಮ್ಮನ್ನಾಗಲೀ ಇತರರನ್ನಾಗಲಿ ಪರಮಾತ್ಮನಿಂದ ಬೇರೆಯವರನ್ನಾಗಿ ಭಾವಿಸುವುದಿಲ್ಲ. ಆದುದರಿಂದ ನಾವು ನಿಮ್ಮಂತಹ ಸಮದರ್ಶಿಗಳಾದ ಬ್ರಾಹ್ಮಣರನ್ನು ಸ್ತುತಿಸುತ್ತೇವೆ. ಸೇವಿಸುತ್ತೇವೆ.

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾಶ್ಚೇತನೋಜ್ಝಿತಾಃ ।
ತೇ ಪುನನ್ತ್ಯುರುಕಾಲೇನ ಯೂಯಂ ದರ್ಶನಮಾತ್ರತಃ ॥೨೩॥

ಅಜ್ಞಾನದಲ್ಲಿ ತಿಳಿದಿರುತ್ತೀರೋ ಅದು ಜ್ಞಾನಬಂದಾಗ ಬ್ರಹ್ಮವೇ ಎಂದು ತಿಳಿದುಬರು ತ್ತದೆ. (ಅದ್ವೈತದೃಷ್ಟಿ)

೨) ಪರಮಾತ್ಮನೇ ಜೀವ-ಜಗತ್ತುಗಳು ಎಂದರೆ ಜೀವ-ಜಗತ್ತುಗಳಿಗೆ ಪರಮಾತ್ಮನು ಆತ್ಮವಾಗಿದ್ದಾನೆ. ಜೀವ-ಜಗತ್ತುಗಳು ಆತನಿಗೆ ಶರೀರವಾಗಿವೆ. ಉದಾ : ಅಹಂ ಮನುಷ್ಯಃ–ನಾನು ಮನುಷ್ಯ ಎಂದರೆ ಮನುಷ್ಯಶರೀರವುಳ್ಳವನು ಎಂದರ್ಥ. ವಾಸ್ತವವಾಗಿ ಜೀವನು ಮನುಷ್ಯ, ದೇವತೆ, ಅಸುರ ಯಾವುದೂ ಅಲ್ಲ. ಶರೀರಸಂಬಂಧದಿಂದ ಆಯಾ ವ್ಯವಹಾರಗಳು. ಶರೀರದೃಷ್ಟಿಯಿಂದ ಜೀವನು ಮನುಷ್ಯ ಎನಿಸುವಂತೆ ಜೀವಶರೀರಕನಾಗಿರುವುದರಿಂದ ಜಗಚ್ಛರೀರಕನಾಗಿರುವುದರಿಂದ ಪರಮಾತ್ಮನನ್ನು ಜೀವಜಗತ್ತು ಎಂದು ಕರೆಯಬಹುದು. (ವಿಶಿಷ್ಟಾದ್ವೈತದೃಷ್ಟಿ)

2) ರಾಜನು ರಾಷ್ಟ್ರವಾಗಿದ್ದಾನೆ ಎಂದರೆ : ರಾಷ್ಟ್ರವೆಲ್ಲಾ ರಾಜಾಧೀನ ಎಂದರ್ಥ. ಹಾಗೆಯೇ ಬ್ರಹ್ಮವು ಜೀವಜಗತ್ತು ಎಂದರೆ ಜೀವ-ಜಗತ್ತುಗಳು ಬ್ರಹ್ಮಾಧೀನ ಎಂದರ್ಥ. (ದ್ವೈತದೃಷ್ಟಿ)

ವಾಗಿವೆ. ಆದುದರಿಂದ ಯಾವುದರಲ್ಲೂ ಭೇದವನ್ನೆಣಿಸದೆ ಎಲ್ಲವನ್ನೂ ಬ್ರಹ್ಮಾತ್ಮಕವೆಂದು ತಿಳಿಯುತ್ತಾರೆ. (ವಿಶಿಷ್ಟಾದ್ವೈತದೃಷ್ಟಿ)

ಜೀವ-ಜಗತ್ತು ಎಲ್ಲವೂ ಬ್ರಹ್ಮಕ್ಕೆ ಅಧೀನವಾಗಿವೆ. ಬ್ರಹ್ಮಪರತಂತ್ರವಾಗಿದೆಯೆಂದು ನೋಡಿದಾಗ ಎಲ್ಲವೂ ಸಮ. (ದ್ವೈತದೃಷ್ಟಿ)

ಬ್ರಾಹ್ಮಣೇಭ್ಯೋ ನಮಸ್ಯಾಮೋ ಯೇಽಸ್ಮದ್ರೂಪಂ ತ್ರಯೀಮಯಮ್ ।
ಬಿಭ್ರತ್ಯಾತ್ಮಸಮಾಧಾನತಪಸ್ಸ್ವಾಧ್ಯಾಯಸಂಯಮೈಃ ॥೨೪॥

ಶ್ರವಣಾದ್ದರ್ಶನಾದ್ವಾಪಿ ಮಹಾಪಾತಕಿನೋಽಪಿ ವಃ ।
ಶುಧ್ಯೇರನ್ನನ್ತ್ಯಜಾಶ್ಚಾಪಿ ಕಿಮು ಸಮ್ಭಾಷಣಾದಿಭಿಃ ॥೨೫॥

ಕೇವಲ ಜಲಮಯವಾದ ಜಲಾಶಯಗಳು ಪವಿತ್ರತೀರ್ಥಗಳಾಗುವುದಿಲ್ಲ. ಜಡವಾದ ವಿಗ್ರಹಗಳು ದೇವತೆಗಳಾಗುವುದಿಲ್ಲ. ನಿಮ್ಮಂತಹ ಜ್ಞಾನಿಗಳೇ ನಿಜವಾದ ತೀರ್ಥಗಳು ಮತ್ತು ದೇವತೆಗಳು. ನಿಮ್ಮ ಸಂಬಂಧದಿಂದ (ನಿಮ್ಮ ಸ್ನಾನ-ಪಾನಾದಿಗಳಿಂದ) ಜಲಾಶಯಗಳು ತೀರ್ಥವೆನಿಸುತ್ತವೆ. ನೀವು ಆವಾಹನೆ–ಪ್ರತಿಷ್ಠೆಮಾಡುವುದರಿಂದ ದೇವತಾಮೂರ್ತಿಗಳಿಗೆ ದೇವತಾಶಕ್ತಿಯು ಬರುತ್ತದೆ. ಅವುಗಳ ತೀರ್ಥತ್ವ–ದೇವತ್ವಗಳಿಗೆ ನೀವೇ ಕಾರಣರು. ಆದರೂ ಆ ತೀರ್ಥ ಮತ್ತು ದೇವತಾಮೂರ್ತಿಗಳಿಗಿಂತ ನೀವೇ ಶ್ರೇಷ್ಠರು. ಏಕೆಂದರೆ ಅವು ಬಹುಕಾಲ ಸೇವಿಸಲ್ಪಟ್ಟಾಗ ಶುದ್ಧಿಯನ್ನು ಉಂಟುಮಾಡುತ್ತವೆ. ನಿಮ್ಮಂತಹ ಜ್ಞಾನಿಗಳಾದ ಸಾಧುಸಂತರಾದರೋ ದರ್ಶನಮಾತ್ರದಿಂದಲೇ ಶುದ್ಧಿಯನ್ನು ಉಂಟುಮಾಡುತ್ತೀರಿ.

ವೇದಮೂರ್ತಿಗಳಾದ ನಿಮ್ಮಂತಹ ಬ್ರಾಹ್ಮಣರಿಗೆ ನಾವು ನಮಸ್ಕರಿಸುತ್ತೇವೆ. ಆ ಮಹಾತ್ಮರು ಚಿತ್ತದ ಏಕಾಗ್ರತೆ, ತಪಸ್ಸು, ವೇದಾಧ್ಯಯನ, ಧ್ಯಾನ, ಧಾರಣ ಮತ್ತು ಸಮಾಧಿಗಳಿಂದ ತಮ್ಮ ದೇಹವನ್ನು ವೇದಮಯವನ್ನಾಗಿ ಮಾಡಿಕೊಂಡುಬಿಟ್ಟಿರುತ್ತಾರೆ.

ಎಲೈ ಮಹಾತ್ಮರೇ! ಮಹಾಪಾತಕಿಗಳೂ ಮತ್ತು ಅತ್ಯಂತ ಕೀಳು ಮಟ್ಟದವರೂ ಕೂಡ ನಿಮ್ಮ ಚರಿತ್ರವನ್ನು ಕೇಳಿದರೆ ಮತ್ತು ನಿಮ್ಮ ದರ್ಶನವನ್ನು ಮಾಡಿದರೆ ಶುದ್ಧರಾಗಿಬಿಡುತ್ತಾರೆ. ಇನ್ನು ನಿಮ್ಮೊಡನೆ ಸಂಭಾಷಣೆಮಾಡುವುದು ಮತ್ತು ನಿಮ್ಮ ಸಹವಾಸಮಾಡುವುದು–ಇತ್ಯಾದಿಗಳಿಂದ ಶುದ್ಧರಾಗುವರು–ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.”

ಸೂತಪುರಾಣಿಕರು ಹೇಳುತ್ತಾರೆ :

ಶೌನಕಾದಿಮಹರ್ಷಿಗಳೇ! ಪೂರ್ಣವಾಗಿ ಧರ್ಮರಹಸ್ಯವನ್ನು ವಿಸ್ತರಿಸುತ್ತಿದ್ದ ಸ್ವಾಮಿಚಂದ್ರಶೇಖರನ ಅಮೃತಪ್ರಾಯವಾದ ಈ

ಮಾತುಗಳನ್ನು ಎಷ್ಟೆಷ್ಟು ಕೇಳುತ್ತಿದ್ದರೂ ಭಕ್ತಶ್ರೇಷ್ಠರಾದ, ಜ್ಞಾನಿ ಶ್ರೇಷ್ಠರಾದ, ಅಧ್ಯಾತ್ಮವಿದರಲ್ಲಿ ಶ್ರೇಷ್ಠರಾದ ಮಾರ್ಕಂಡೇಯಮಹರ್ಷಿಗಳಿಗೆ ತೃಪ್ತಿಯಾಗಲಿಲ್ಲ. ಮಹಾವಿಷ್ಣುವಿನ ಮಾಯೆಯಿಂದ ತುಂಬಾ ಅಲೆದಾಡಿ ಆಯಾಸಗೊಂಡು ಕೃಶವಾಗಿದ್ದ ಅವರ ಸಮಸ್ತಕ್ಲೇಶ ಆಯಾಸಗಳೂ ಪರಶಿವನ ಅಮೃತಾಯಮಾನವಾದ ಮಾತಿನಿಂದ ಪರಿಹಾರಹೊಂದಿ ಬಿಟ್ಟುವು. ಆ ಅಮೃತವಚನಗಳ ಶ್ರವಣದಿಂದ ಸ್ವಸ್ಥರಾದ ಆ ಮಹಾತ್ಮರು ಹೀಗೆಂದರು :

"ಆಶ್ಚರ್ಯ! ಭಗವಂತನ ಲೀಲೆಯು ಪ್ರಾಣಿಗಳ ತಿಳಿವಳಿಕೆಯನ್ನು ಮೀರಿದ್ದು. ಅದನ್ನು ಅರ್ಥಮಾಡಿಕೊಳ್ಳಲು ಜೀವಿಗಳಿಗೆ ಸಾಧ್ಯವಿಲ್ಲ. ಏಕೆಂದರೆ ಜಗತ್ತಿಗೇ ಸ್ವಾಮಿಗಳಾಗಿರುವವರು ತಮಗೆ ಅಧೀನರಾಗಿರುವ ನನ್ನಂತಹ ಜೀವಿಗಳನ್ನು ನಮಿಸುತ್ತಿದ್ದಾರೆ. ಸ್ತುತಿಸುತ್ತಿದ್ದಾರೆ. ಅವರು ಹೀಗೆ ಮಾಡುವುದಕ್ಕೆ ಕಾರಣ ಹೀಗಿರಬೇಕು : ಅವರು ಧರ್ಮಪ್ರವಚನ ಮಾಡುವವರು. ಧರ್ಮಪ್ರವಚನಕಾರರು ಸಾಮಾನ್ಯವಾಗಿ ಪ್ರಾಣಿಗಳಿಗೆ ಧರ್ಮದ ರಹಸ್ಯವನ್ನು ತಿಳಿಸುವುದಕ್ಕೋಸ್ಕರ ತಾವು ಅದನ್ನು ಆಚರಿಸು ತ್ತಾರೆ. ಅನುಮೋದಿಸುತ್ತಾರೆ ಮತ್ತು ಸ್ತುತಿಸುತ್ತಾರೆ. ಮೋಡಿ ಮಾಡು ವವರು ತಮ್ಮ ಪ್ರಭಾವದಿಂದ ಅನೇಕ ಆಟಗಳನ್ನು ತೋರಿಸುತ್ತಾರೆ. ಹಾಗೆ ಆಟ ತೋರಿಸುವುದರಿಂದ ಅವರ ಪ್ರಭಾವಕ್ಕೆ ಯಾವ ಕುಂದೂ ಬರುವುದಿಲ್ಲ. ಹಾಗೆಯೇ ಭಗವಂತನಾದ ನೀನು ನಿನ್ನ ಮಾಯಾಮಯ ವಾದ ವೃತ್ತಿಗಳನ್ನು ಸ್ವೀಕರಿಸಿ ಯಾರನ್ನಾದರೂ ನಮಿಸಿದರೆ, ಸ್ತುತಿಸಿದರೆ, ಅದರಿಂದ ನಿನ್ನ ಮಹಿಮೆಗೇನೂ ಕುಂದುಬರುವುದಿಲ್ಲ. ನೀನು ಕನಸು ಕಾಣುವವನಂತೆ ನಿನ್ನ ಮನಸ್ಸಿನಿಂದಲೇ ಈ ವಿಶ್ವವನ್ನು ಸೃಷ್ಟಿಸಿ ಅದರಲ್ಲಿ ಅನುಪ್ರವೇಶಮಾಡುತ್ತೀಯೆ. ವಾಸ್ತವವಾಗಿ ನಿನಗೆ ಕರ್ತೃತ್ವವಿಲ್ಲದಿದ್ದರೂ ಕರ್ಮಮಾಡುವವನ ಗುಣಗಳ ಮೂಲಕ ಕರ್ತೃತ್ವವುಳ್ಳವನಂತೆ ಕಾಣುತ್ತೀಯೆ. ಓ ಭಗವಂತ! ನೀನು ತ್ರಿಗುಣರೂಪನಾಗಿದ್ದರೂ ಆ ತ್ರಿಗುಣಗಳನ್ನೂ ದಾಟಿದ ಆತ್ಮನ ರೂಪದಲ್ಲಿ ಬೆಳಗುತ್ತಿದ್ದೀಯೆ. ಸಮಸ್ತ ಜ್ಞಾನಕ್ಕೆ ಮೂಲವಾದ, ಕೇವಲವೂ ಅದ್ವಿತೀಯವೂ ಆಗಿರುವ ಬ್ರಹ್ಮ ಸ್ವರೂಪನೂ, ಗುರುದೇವನೂ ನೀನೇ. ಇಂತಹ ನಿನಗೆ ನಮಸ್ಕಾರವು.

ಎಲೈ ಅನಂತನೇ! ನಿನ್ನ ಶ್ರೇಷ್ಠವಾದ ದರ್ಶನಕ್ಕಿಂತಲೂ ಹೆಚ್ಚಿನ ಯಾವುದನ್ನು ತಾನೇ ನಾನು ವರದಾನವನ್ನಾಗಿ ಬೇಡಲಿ? ನಿನ್ನ ದರ್ಶನ ಮಾತ್ರದಿಂದಲೇ ಮನುಷ್ಯನು ಪೂರ್ಣಕಾಮನೂ ಮತ್ತು ಸತ್ಯಸಂಕಲ್ಪನೂ ಆಗಿಬಿಡುವನು. ನೀನು ಸ್ವಯಂಪರಿಪೂರ್ಣನಾದವನು. ಅಂತೆಯೇ ಭಕ್ತರ ಸಮಸ್ತಕಾಮನೆಗಳನ್ನೂ ಪೂರ್ಣಗೊಳಿಸುವವನು. ಆದ್ದರಿಂದ ನಿನ್ನ ದರ್ಶನವನ್ನು ಪಡೆದಾದನಂತರವೂ ಮತ್ತೊಂದು ವರವನ್ನು ಬೇಡುತ್ತೇನೆ. ಅದೇನೆಂದರೆ ನನಗೆ ಭಗವಂತನಾದ ಶ್ರೀಹರಿಯಲ್ಲಿಯೂ, ಆತನಿಗೆ ಶರಣುಬಂದ ಭಕ್ತರಲ್ಲಿಯೂ ಮತ್ತು ನಿನ್ನಲ್ಲಿಯೂ ನಿಶ್ಚಲವಾದ ಭಕ್ತಿಯು ಸದಾ ಇರುತ್ತಿರಲಿ." (ಶ್ಲೋಕ ೨೮-೩೪)

ಸೂತಮಹರ್ಷಿಗಳು ಹೇಳುತ್ತಾರೆ :

"ಶೌನಕರೇ! ಕೇಳಿರಿ. ಮಾರ್ಕಂಡೇಯರಿಂದ ಹೀಗೆ ಆರಾಧಿಸಲ್ಪಟ್ಟು ಸ್ತುತಿಸಲ್ಪಟ್ಟ ಭಗವಂತನಾದ ಪರಶಿವನು ಪಾರ್ವತೀದೇವಿಯಿಂದ ಅಭಿನಂದಿಸಲ್ಪಡುತ್ತಾ ಈ ಅನುಗ್ರಹದ ಮಾತನ್ನು ಮುನಿಗೆ ಹೇಳಿದನು : "ಎಲೈ ಮಹರ್ಷಿಯೇ! ನಿನ್ನ ಈ ಎಲ್ಲ ಇಷ್ಟಾರ್ಥವೂ ಈಡೇರಲಿ. ಭಗವಂತನಾದ ಅಧೋಕ್ಷಜನಲ್ಲಿ ಇಂದ್ರಿಯಾತೀತನಾದ ಪರಮಾತ್ಮ ನಾರಾಯಣನಲ್ಲಿ, ನಿನಗೆ ಸದಾ ಅನನ್ಯಭಕ್ತಿಯಿರಲಿ. ಕಲ್ಪಕಾಲದವರೆಗೂ ನಿನ್ನ ಪುಣ್ಯವಾದ ಕೀರ್ತಿಯು ಹರಡಲಿ. ನಿನಗೆ ಮುಪ್ಪು-ಸಾವುಗಳು ಬರದೇ ಇರಲಿ. ಬ್ರಾಹ್ಮಣೋತ್ತಮನೇ! ನಿನಗೆ ಭೂತ-ಭವಿಷ್ಯತ್ತು-ವರ್ತಮಾನಗಳೆಂಬ ಸರ್ವಕಾಲಗಳ ಜ್ಞಾನವೂ ಉಂಟಾಗಲಿ. ವೈರಾಗ್ಯ ಸಹಿತವಾದ ಪರಮಾತ್ಮಜ್ಞಾನವೂ ಉಂಟಾಗಲಿ. ಬ್ರಹ್ಮವರ್ಚಸ್ಸಿನಿಂದ ಬೆಳಗುತ್ತಿರುವ ನಿನಗೆ ಪುರಾಣದ ಆಚಾರ್ಯತ್ವಪದವಿಯೂ ಉಂಟಾಗಲಿ."*
(ಶ್ಲೋಕ ೩೫-೩೭)

---

*ವಿಷ್ಣುಪುರಾಣದಲ್ಲಿ ಪುಲಸ್ತ್ಯಮಹರ್ಷಿಯ ಅನುಗ್ರಹದಿಂದ ಪರಾಶರಮಹರ್ಷಿಗೆ 'ಪುರಾಣಾಚಾರ್ಯ' ಎಂಬ ಪದವಿಯು ಅನುಗ್ರಹಿಸಲ್ಪಡುತ್ತದೆ. ಅವರು ವಿಷ್ಣುಪುರಾಣಕ್ಕೆ ಪ್ರವರ್ತಕರಾಗುತ್ತಾರೆ. ಇಲ್ಲಿ ಪರಶಿವನ ಅನುಗ್ರಹದಿಂದ ಮಾರ್ಕಂಡೇಯಮಹಾಮುನಿಗೆ 'ಪುರಾಣಾಚಾರ್ಯ' ಎಂಬ ಪದವಿಯು ದಯಪಾಲಿಸಲ್ಪಡುತ್ತದೆ. ಇವರು ಪ್ರವರ್ತನಮಾಡಿದ ಪುರಾಣವು ಮಾರ್ಕಂಡೇಯಪುರಾಣ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

ಶ್ರೀಸೂತಪುರಾಣಿಕರು ಕಥೆಯನ್ನು ಮುಂದುವರಿಸುತ್ತಾ ಶೌನಕಾದಿ ಮುನಿಗಳಿಗೆ ಹೀಗೆಂದರು :

"ಎಲೈ ಶೌನಕರೇ! ಹೀಗೆ ಮುಕ್ಕಣ್ಣನಾದ ಮಹಾದೇವನು ಮಾರ್ಕಂಡೇಯಮುನಿಗೆ ವರಗಳನ್ನು ಅನುಗ್ರಹಿಸಿ ಅಲ್ಲಿಂದ ಹೊರಟು ಹೋದನು. ಮಾರ್ಕಂಡೇಯನ ಮಹಾತಪಸ್ಸು, ಭಗವಂತನು ಆತನಿಗೆ ಅನುಗ್ರಹಿಸಿದ ಯೋಗಮಾಯಾಪ್ರಭಾವದ ಅನುಭವ–ಇವುಗಳನ್ನು ಪಾರ್ವತೀದೇವಿಗೆ ವರ್ಣಿಸುತ್ತಾ ಪರಶಿವನು ಹೊರಟುಹೋದನು. ಯೋಗದ ಮಹಿಮೆಯನ್ನೂ, ಅದರ ಮಹಾಫಲವನ್ನೂ ಪಡೆದುಕೊಂಡ ಆ ಭೃಗುಕುಲಶಿರೋಮಣಿಗಳು ಶ್ರೀಹರಿಯಲ್ಲಿ ಏಕಾಂತಭಕ್ತಿಯಿಂದ ಕೂಡಿದವರಾಗಿ ಈಗಲೂ ಭೂಮಿಯಲ್ಲಿ ಸಂಚರಿಸುತ್ತಿದ್ದಾರೆ. ವಿವೇಕಸಂಪನ್ನರಾದ ಮಾರ್ಕಂಡೇಯಮಹಾಮುನಿಗಳು ಹೀಗೆ ಭಗವಂತನ ಅದ್ಭುತವಾದ ಮಾಯೆಯ ವೈಭವವನ್ನು ಅನುಭವಿಸಿದರು–ಎಂಬೀ ಕಥೆಯನ್ನು ನಿಮಗೆ ವರ್ಣಿಸಿದ್ದೇನೆ. ತಿಳಿವಳಿಕೆಯಿಲ್ಲದ ಕೆಲವರು–'ಸಂಸಾರ ವೆಂಬುದು ಮಾರ್ಕಂಡೇಯಮುನಿಗಳು ಅನುಭವಿಸಿದಂತಹ ಮಾಯಾಪ್ರಭಾವದ ದರ್ಶನದಂತೆ ಯಾವಾಗಲೋ ಒಮ್ಮೆ ಮಾತ್ರ ಬರುವುದು'–ಎಂದು ಹೇಳುತ್ತಾರೆ. ಸಂಸಾರವು ಅನಾದಿಯೆಂಬುದನ್ನು ಅವರು ಅರಿಯರು. ವಾಸ್ತವವಾಗಿ ಈ ಸಂಸಾರಚಕ್ರವು ಅನಾದಿಕಾಲದಿಂದ ಮರಳಿಮರಳಿ ಸುತ್ತಿಬರುತ್ತಿದೆಯೇ ಹೊರತು ತಾತ್ಕಾಲಿಕವಲ್ಲ. ಯಾವಾಗಲೋ ಒಮ್ಮೆ ಬಂದು ಹೋಗುವುದಲ್ಲ. (ಶ್ಲೋಕ ೩೮-೪೧)

ಯ ಏವಮೇತದ್ಭೃಗುವರ್ಯ ವರ್ಣಿತಂ
ರಥಾಙ್ಗಪಾಣೇರನುಭಾವಭಾವಿತಮ್ ।
ಸಂಶ್ರಾವಯೇತ್ ಸಂಶೃಣುಯಾದುತಾವುಭೌ
ತಯೋರ್ನ ಕರ್ಮಾಶಯಸಂಸೃತಿರ್ಭವೇತ್ ॥೪೨॥

ಭೃಗುಕುಲತಿಲಕರಾದ ಎಲೈ ಶೌನಕರೇ! ನಾನು ವರ್ಣನೆಮಾಡಿದ, ಚಕ್ರಪಾಣಿಯಾದ ಭಗವಂತನ ಪ್ರಭಾವಮಹಿಮೆಗಳ ವರ್ಣನೆಯಿಂದ ಕೂಡಿದ, ಈ ಮಾರ್ಕಂಡೇಯಚರಿತ್ರವನ್ನು ಯಾರು ಕೇಳುವರೋ ಅಥವಾ

ಕೀರ್ತನೆಮಾಡುವವರೋ ಅವರಿಬ್ಬರೂ ಕರ್ಮದಿಂದ ಉಂಟಾಗುವ ಸಂಸಾರ ಚಕ್ರದಲ್ಲಿ ಭ್ರಮಣೆಮಾಡುವುದರಿಂದ ಎಂದೆಂದಿಗೂ ಬಿಡುಗಡೆ ಹೊಂದುವರು.''

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದ್ವಾದಶಸ್ಕಂಧದ ೧೦ನೆಯ ಅಧ್ಯಾಯವು ಮುಗಿಯಿತು.

ದ್ವಾದಶಸ್ಕಂಧ ೧೧ನೆಯ ಅಧ್ಯಾಯ

ಭಗವಂತನ ಅಸ್ತ್ರ-ಭೂಷಣಾದಿಗಳ ರಹಸ್ಯ ಮತ್ತು ದ್ವಾದಶಾದಿತ್ಯವ್ಯೂಹಾದಿಗಳು

ಸೂತಪುರಾಣಿಕರು ವರ್ಣಿಸಿದ ಮಾರ್ಕಂಡೇಯಚರಿತ್ರವನ್ನು ಗ್ರಹಿಸಿ ಸಂತೋಷಗೊಂಡ ಶೌನಕಾದಿ ಮುನಿಗಳು ಆ ಸೂತಪುರಾಣಿಕರನ್ನು ಮತ್ತೆ ಹೀಗೆ ಪ್ರಶ್ನಿಸಿದರು :

ಅಥೇಮಮರ್ಥಂ ಪೃಚ್ಛಾಮೋ ಭವನ್ತಂ ಬಹುವಿತ್ತಮಮ್ ।
ಸಮಸ್ತತನ್ತ್ರರಾದ್ಧಾನ್ತೇ ಭವಾನ್ಭಾಗವತತತ್ತ್ವವಿತ್ ॥೧॥

ತಾನ್ತ್ರಿಕಾಃ ಪರಿಚರ್ಯಾಯಾಂ ಕೇವಲಸ್ಯ ಶ್ರಿಯಃ ಪತೇಃ ।
ಅಙ್ಗೋಪಾಙ್ಗಾಯುಧಾಕಲ್ಪಂ ಕಲ್ಪಯನ್ತಿ ಯಥಾ ಚ ಯೈಃ ॥೨॥

ತನ್ನೋ ವರ್ಣಯ ಭದ್ರಂ ತೇ ಕ್ರಿಯಾಯೋಗಂ ಬುಭುತ್ಸತಾಮ್ ।
ಯೇನ ಕ್ರಿಯಾನೈಪುಣೇನ ಮರ್ತ್ಯೋ ಯಾಯಾದಮರ್ತ್ಯತಾಮ್ ॥

“ಎಲೈ ಮಹಾತ್ಮನೇ! ನೀನು ಬಹುವಿಷಯಗಳನ್ನು ಬಲ್ಲವನು. ಬಹುವಿಷಯಗಳನ್ನು ಬಲ್ಲವರಲ್ಲಿಯೂ ಉತ್ತಮೋತ್ತಮನಾದವನು. ಎಲ್ಲ ಪುರಾಣ-ಆಗಮಾದಿಶಾಸ್ತ್ರಗಳಲ್ಲಿಯೂ ನಿಷ್ಣಾತನಾದವನು. (ಪಾಂಚ ರಾತ್ರಾಗಮವು ಪ್ರತಿಪಾದಿಸುವ) ಭಾಗವತತತ್ತ್ವವನ್ನು ಚೆನ್ನಾಗಿ ಬಲ್ಲವನು. ನಿನ್ನಲ್ಲಿ ಕ್ರಿಯಾಯೋಗಕ್ಕೆ ಸಂಬಂಧಪಟ್ಟ ಒಂದು ವಿಚಾರವನ್ನು ಕೇಳಬಯಸುತ್ತೇವೆ. ಆಗಮವನ್ನು ತಿಳಿದವರು ಶ್ರೀಮನ್ನಾರಾಯಣನ ಆರಾಧನೆಯನ್ನು ಮಾಡುವಾಗ ಭಗವಂತನ ಅಂಗ-ಉಪಾಂಗಗಳನ್ನೂ ಆತನು ಧರಿಸಿಕೊಂಡಿರುವ ಆಯುಧ ಮತ್ತು ಭೂಷಣಗಳನ್ನೂ ಯಾವ ಯಾವ ರೂಪಗಳಿಂದ ಧ್ಯಾನಿಸುತ್ತಾರೆ? ಯಾವ ಯಾವ ತತ್ತ್ವಗಳ

ಅಭಿಮಾನಿದೇವತೆಗಳನ್ನಾಗಿ ಯಾವ ಯಾವ ಅಸ್ತ್ರ-ಆಭೂಷಣಗಳನ್ನು ಭಾವಿಸಿಕೊಳ್ಳುತ್ತಾರೆ? ಆರಾಧನೆಗೆ ಸಂಬಂಧಪಟ್ಟ ಯೋಗವನ್ನು ತಿಳಿದು ಕೊಳ್ಳುವ ಇಚ್ಛೆಯುಳ್ಳ ನಮಗೆ ಇದನ್ನು ವರ್ಣಿಸಿ ಹೇಳು. ಭಗವಂತನ ಅವಯವಗಳನ್ನೂ ಅಸ್ತ್ರ-ಆಭೂಷಣಗಳನ್ನೂ ಹಾಗೆ ತತ್ತ್ವರೂಪದಿಂದ ಭಾವಿಸಿ ಆರಾಧಿಸುವವರು ಮೃತ್ಯುವನ್ನು ಗೆದ್ದು ಅಮೃತತತ್ತ್ವರೂಪವಾದ ಮುಕ್ತಿಯನ್ನು ಹೊಂದುವರಲ್ಲವೆ?"

ಸೂತಪುರಾಣಿಕರು ಮುನಿಗಳಿಗೆ ಹೀಗೆಂದರು :

"ಮುನಿವರ್ಯರೇ! ಗುರುಗಳಿಗೆ ನಮಸ್ಕಾರಮಾಡಿ, ವೇದಗಳ ಲ್ಲಿಯೂ ಆಗಮಗಳಲ್ಲಿಯೂ ಬ್ರಹ್ಮದೇವರೇ ಮುಂತಾದ ಆಚಾರ್ಯರು ಮಹಾವಿಷ್ಣುವಿನ ಯಾವ ಯಾವ ವಿಭೂತಿಗಳನ್ನು ಈ ಸಂದರ್ಭದಲ್ಲಿ ಹೇಗೆ ಹೇಗೆ ವರ್ಣಿಸಿದ್ದಾರೆ?–ಎಂಬುದನ್ನು ಹೇಳುತ್ತೇನೆ, ಕೇಳಿರಿ. ಮೂಲ ಪ್ರಕೃತಿ, ಮಹತ್ತು, ಅಹಂಕಾರ, ಪಂಚಭೂತಗಳು ಮತ್ತು ಕಾಲ ಎಂಬ ಒಂಭತ್ತು ತತ್ತ್ವಗಳಿಂದಲೂ, ಇವುಗಳ ವಿಕಾರವಾಗಿರುವ ಹನ್ನೊಂದು ಇಂದ್ರಿಯಗಳ ಗಣದಿಂದಲೂ, ಪಂಚತನ್ಮಾತ್ರೆಗಳಿಂದಲೂ ನಿರ್ಮಿತವಾಗಿ ಸಮಸ್ತಚೇತನಗಳನ್ನೂ ಒಳಗೊಂಡಿರುವ ಯಾವ ಬ್ರಹ್ಮಾಂಡವುಂಟೋ ಅದಕ್ಕೆ ವಿರಾಟ್ ಎಂದು ಹೆಸರು. ಜೀವರಾಶಿಸಹಿತವಾದ ಈ ಬ್ರಹ್ಮಾಂಡವನ್ನೇ ಭಗವಂತನ ವಿರಾಡ್ರೂಪವೆಂದು ತಿಳಿದುಕೊಳ್ಳಿರಿ. (ಶ್ರೀಭಗವಂತನ ದಿವ್ಯ ವಿಗ್ರಹವೇ ಬ್ರಹ್ಮಾಂಡಕ್ಕೆ ಅಭಿಮಾನಿದೇವತೆ.) ಈ ಪುರುಷರೂಪಕ್ಕೆ ಕೆಳ ಗಿರುವ ಭೂಮಿಯೇ ಚರಣಗಳು. ಮೇಲಿರುವ ಸ್ವರ್ಗವೇ ಶಿರಸ್ಸು. ಮಧ್ಯ ದಲ್ಲಿರುವ ಅಂತರಿಕ್ಷವೇ ನಾಭಿ. ಸೂರ್ಯನೇ ಕಣ್ಣುಗಳು. ವಾಯುವು ಮೂಗು ಮತ್ತು ದಿಕ್ಕುಗಳು ಕಿವಿಗಳು. ಪ್ರಜಾಪತಿಯೇ ಈತನ ಪುರುಷ ಲಿಂಗವು. ಮೃತ್ಯುವೇ ಗುದವು. ಲೋಕಪಾಲಕಸಮೂಹವೇ ಭುಜಗಳು. ಚಂದ್ರನೇ ಮನಸ್ಸು ಮತ್ತು ಯಮರಾಜನೇ ಹುಬ್ಬುಗಳು. ಆ ಪುರುಷ ನಿಗೆ ಲಜ್ಜೆಯು ಮೇಲಿನ ತುಟಿ ಮತ್ತು ಲೋಭವು ಕೆಳಗಿನ ತುಟಿ. ಚಂದ್ರಿಕೆಯು ಆತನ ಹಲ್ಲುಗಳು ಮತ್ತು ಭ್ರಮೆಯು ಆತನ ಮುಗುಳ್ನಗೆ ಯೆನಿಸುವುದು. ವೃಕ್ಷಗಳು ಅವನ ಮೈಯಲ್ಲಿರುವ ರೋಮಗಳು. ಮೇಘಗಳು ಆತನ ತಲೆಗೂದಲು. ಇನ್ನು ಅವನ ದೇಹದ ಪ್ರಮಾಣವನ್ನು

ಹೇಳುವುದಾದರೆ ವ್ಯಷ್ಟಿಪುರುಷನಿಗೆ ಆಯಾ ಅವಯವಗಳಿಗೆ ತಕ್ಕಂತೆ ಎಷ್ಟು ಪ್ರಮಾಣವಿದೆಯೋ ಈ ಸಮಷ್ಟಿಪುರುಷನಿಗೂ ತನ್ನ ಆಯಾ ಅವಯವ ಗಳಿಗೆ ತಕ್ಕಂತೆ ಅಷ್ಟೇ ಪ್ರಮಾಣವಿರುವುದು.

ಜನ್ಮರಹಿತನಾದ ಆ ಪ್ರಭುವು ಕೌಸ್ತುಭಮಣಿಯ ನೆಪದಿಂದ ಜೀವ ಚೈತನ್ಯವನ್ನೇ ಧರಿಸಿದ್ದಾನೆ. ಆ ಮಣಿಯೇ ಜೀವವರ್ಗಕ್ಕೆ ಅಭಿಮಾನಿ ದೇವತೆಯಾಗಿದೆ. ರತ್ನದ ಪ್ರಭೆಯು ಎಲ್ಲೆಲ್ಲಿಯೂ ಹರಡುವಂತೆ–ಜೀವನು ತನ್ನ ಜ್ಞಾನದ ಪ್ರಭೆಯಿಂದ ಎಲ್ಲವನ್ನೂ ವ್ಯಾಪಿಸಿದ್ದಾನೆ. ಸರ್ವವ್ಯಾಪಿನಿ ಯಾದ ಆ ಚೈತನ್ಯದ ಪ್ರಭೆಯನ್ನೇ ಪ್ರಭುವು ಶ್ರೀವತ್ಸವೆಂಬ ಮಚ್ಚೆಯ ರೂಪದಲ್ಲಿ ತನ್ನ ವಕ್ಷಃಸ್ಥಲದಲ್ಲಿ ಧರಿಸಿಕೊಂಡಿದ್ದಾನೆ. ತ್ರಿಗುಣಾತ್ಮಕವಾದ ಮಾಯೆಯೇ ಆತನು ಧರಿಸಿರುವ ವನಮಾಲೆಯು. ಗಾಯತ್ರಿಯೇ ಮುಂತಾದ ಛಂದಸ್ಸುಗಳು ಆತನ ದಿವ್ಯಪೀತಾಂಬರವು. ಅಕಾರ, ಉಕಾರ, ಮಕಾರಗಳೆಂಬ ಮೂರುಮಾತ್ರೆಗಳಿಂದ ಕೂಡಿದ ಪ್ರಣವವೇ ಆತನು ಧರಿಸಿ ರುವ ಯಜ್ಞೋಪವೀತವು. ಆ ದೇವಾಧಿದೇವನು ಸಾಂಖ್ಯ ಮತ್ತು ಯೋಗ ಗಳನ್ನು ತನ್ನ ಕಿವಿಕಡಕುಗಳನ್ನಾಗಿ ಧರಿಸಿಕೊಂಡಿದ್ದಾನೆ. ಸಮಸ್ತಲೋಕ ಗಳಿಗೂ ಅಭಯವನ್ನು ನೀಡುವ ಬ್ರಹ್ಮಲೋಕವೇ ಆತನ ಕಿರೀಟವು. ಆತನು ಪವಡಿಸಿರುವ ಶೇಷಶಯ್ಯೆಯು ಮೂಲಪ್ರಕೃತಿಯೇ ಆಗಿದೆ. ಧರ್ಮಜ್ಞಾನಾದಿಗಳಿಂದ ಕೂಡಿದ ಶುದ್ಧಸತ್ತ್ವವು ಅವನಿಗೆ ಆಸನವಾಗಿರುವ ಪದ್ಮವು. ಓಜಸ್ಸು (ಮನಶ್ಶಕ್ತಿ), ಸಹಸ್ಸು (ಇಂದ್ರಿಯಶಕ್ತಿ) ಮತ್ತು ಬಲ (ಶರೀರಶಕ್ತಿ) ಗಳಿಂದ ಕೂಡಿದ ಪ್ರಾಣತತ್ತ್ವವನ್ನು ತನ್ನ ಕೌಮೋದಕಿಯೆಂಬ ಗದೆಯನ್ನಾಗಿಯೂ, ಜಲತತ್ತ್ವವನ್ನು ಪಾಂಚಜನ್ಯಶಂಖವನ್ನಾಗಿಯೂ ಮತ್ತು ತೇಜಸ್ತತ್ತ್ವವನ್ನು ಸುದರ್ಶನವನ್ನಾಗಿಯೂ ದೇವನು ಧರಿಸಿದ್ದಾನೆ. ಅಂತೆಯೇ ಆಕಾಶದಂತೆ ನಿರ್ಮಲವಾಗಿರುವ ಆಕಾಶಸ್ವರೂಪವಾದ ಕತ್ತಿಯನ್ನೂ, ತಮೋಮಯವಾದ ಅಜ್ಞಾನವೆಂಬ ಗುರಾಣಿಯನ್ನೂ, ಕಾಲ ತತ್ತ್ವರೂಪವಾದ ಶಾರ್ಙ್ಗಧನುಸ್ಸನ್ನೂ ಮತ್ತು ಕರ್ಮರೂಪವಾದ ಬತ್ತಳಿಕೆಯನ್ನೂ ಆತನು ಧರಿಸಿಕೊಂಡಿದ್ದಾನೆ. ಇಂದ್ರಿಯಗಳನ್ನೇ ಭಗವಂತನ ಬಾಣಗಳನ್ನಾಗಿ ಹೇಳುತ್ತಾರೆ. ಸಂಕಲ್ಪಶಕ್ತಿರೂಪವಾದ ಮನಸ್ಸು ಆತನ ರಥವಾಗಿದೆ. ಪಂಚತನ್ಮಾತ್ರೆಗಳು ಆತನ ರಥದ ಹೊರಭಾಗಗಳಾದರೆ

ವರದಮುದ್ರೆ, ಅಭಯಮುದ್ರೆಯೇ ಮುಂತಾದ ಆತನ ಮುದ್ರೆಗಳು ಕ್ರಿಯಾಶೀಲತೆಯಾಗಿದೆ. ಅಗ್ನಿಮಂಡಲವು ಆತನ ಯಜ್ಞಭೂಮಿ–ಪೂಜಾ ಸ್ಥಾನ. ಅಂತಃಕರಣದ ಶುದ್ಧಿಯೇ ಮಂತ್ರದೀಕ್ಷೆ ಮತ್ತು ಸರ್ವಪಾಪಗಳ ನಾಶನವೇ ಪರಮಾತ್ಮನ ಸೇವೆಯು ; ಆರಾಧನೆಯು. ಭಗವಾನ್ ಎಂಬ ಶಬ್ದದ ಅರ್ಥವಾಗಿರುವ ಸಮಗ್ರವಾದ ಐಶ್ವರ್ಯ, ಧರ್ಮ, ಯಶಸ್ಸು, ಲಕ್ಷ್ಮೀ, ಜ್ಞಾನ ಮತ್ತು ವೈರಾಗ್ಯಗಳೇ ಆತನು ತನ್ನ ಕರಕಮಲದಲ್ಲಿ ಹಿಡಿದಿರುವ ಲೀಲಾಕಮಲವು. ಧರ್ಮ ಮತ್ತು ಕೀರ್ತಿಗಳು ಕ್ರಮವಾಗಿ ಆತನ ಚಾಮರ ಮತ್ತು ಬೀಸಣಿಗೆಗಳು ಮತ್ತು ನಿರ್ಭಯಧಾಮವಾದ ವೈಕುಂಠವೇ ಆತನ ಛತ್ರವು. ಮೂರು ವೇದಗಳೇ ಆ ಯಜ್ಞಪುರುಷನ ವಾಹನವಾದ ಗರುತ್ಮಂತನು. ಆತ್ಮಸ್ವರೂಪನಾದ ಆ ಭಗವಂತನನ್ನು ಎಂದಿಗೂ ಅಗಲದೇ ಅನುಸರಿಸುವ ಆತನ ಆತ್ಮಶಕ್ತಿ–ಆತ್ಮಪ್ರಭೆಗಳೇ ಸಾಕ್ಷಾತ್ ಶ್ರೀದೇವಿಯು. ಭಗವಂತನ ಪಾರ್ಷದರಿಗೆ ನಾಯಕನಾಗಿರುವ ವಿಷ್ವಕ್ಸೇನನು ಪಾಂಚರಾತ್ರಾದಿ ಆಗಮಗಳ ಮೂರ್ತಾಕಾರವು. ಆ ಭಗವಂತನ ಸ್ವಾಭಾವಿಕಗುಣಗಳಾದ ಅಣಿಮಾ–ಮಹಿಮಾ ಮುಂತಾದ ಅಷ್ಟಸಿದ್ಧಿಗಳೇ ಆತನ ಅಷ್ಟದ್ವಾರಪಾಲಕರಾದ ನಂದ-ಸುನಂದಾದಿಗಳು. ಆ ಪರಮಪುರುಷನು ತಾನೇ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ನಾಲ್ಕು ಮೂರ್ತಿಗಳ ರೂಪದಲ್ಲಿದ್ದು 'ಚತುರ್ವ್ಯೂಹ' ಎಂದೆನಿಸುವನು. ಈ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ನಾಲ್ಕು ಮೂರ್ತಿಗಳಿಂದಲೇ ಆತನು ಕ್ರಮವಾಗಿ ಎಚ್ಚರ, ಕನಸು, ಗಾಢನಿದ್ರೆ ಮತ್ತು ಸಮಾಧಿಗಳೆಂಬ ನಾಲ್ಕು ಅವಸ್ಥೆಗಳಲ್ಲಿ ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರೀಯ–ಎಂದು ಕರೆಯಲ್ಪಡುವ ಜೀವನ ಆಯಾ ಅವಸ್ಥೆಗಳಿಗೆ ಅಭಿಮಾನೀದೇವತೆಯಾಗಿರುತ್ತಾನೆ. ಹೀಗೆ ತತ್ತ್ವರೂಪಗಳಾದ ಅಂಗೋಪಾಂಗ, ಆಯುಧ, ಆಭೂಷಣಗಳಿಂದ ಕೂಡಿದ ಆ ಚತುರ್ಮೂರ್ತಿಗಳಿಂದಲೇ ಆತನು ಸೃಷ್ಟಿ-ಸ್ಥಿತಿ-ಸಂಹಾರ ಮತ್ತು ಮೋಕ್ಷಗಳೆಂಬ ನಾಲ್ಕು ಕಾರ್ಯಗಳನ್ನೂ ನಿರ್ವಹಿಸುವನು. ಅನಿರುದ್ಧನು ಸೃಷ್ಟಿಕರ್ತಾ ; ಪ್ರದ್ಯುಮ್ನನು ಸ್ಥಿತಿಯನ್ನು ನಿರ್ವಹಿಸುವವನು. ಸಂಕರ್ಷಣನು

ಸಂಹಾರಕಾರಿ ಮತ್ತುವಾಸುದೇವನು ಮೋಕ್ಷಪ್ರದಾಯಕನು. ಇವೆಲ್ಲಾ ಆ ಪರಮಪುರುಷನ ರೂಪಗಳೇ.

ಓ ಬ್ರಾಹ್ಮಣೋತ್ತಮರೇ! ವೇದಗಳಿಗೆ ಮೂಲವಾಗಿ ಸ್ವಯಂ ಪ್ರಕಾಶನಾಗಿ ತನ್ನದೇ ಆದ ಮಹಿಮೆಯಿಂದ ಪರಿಪೂರ್ಣನಾಗಿರುವ ಈ ಸರ್ವಸ್ವರೂಪನಾದ ಶ್ರೀಹರಿಯೇ ತನ್ನ ಮಾಯೆಯಿಂದ ಬ್ರಹ್ಮನೇ ಮುಂತಾದ ರೂಪಗಳನ್ನು ತಾಳಿ ಸೃಷ್ಟಿ-ಸ್ಥಿತಿ-ಸಂಹಾರಗಳೆಂಬ ಜಗತ್ಕಾರ್ಯಗಳನ್ನು ಎಸಗುತ್ತಾನೆ. ಆದರೆ ಈ ಕರ್ಮಗಳಿಂದ ಆತನ ಜ್ಞಾನಕ್ಕೆ ಯಾವಾಗಲೂ ಆವರಣ ಉಂಟಾಗುವುದಿಲ್ಲ. ಸಂಕೋಚ ಉಂಟಾಗುವುದಿಲ್ಲ. ಸರ್ವವ್ಯಾಪಿಯಾಗಿ ಸರ್ವತ್ರಪ್ರಸಿದ್ಧನಾಗಿದ್ದರೂ ಆತನು ಆವರಣಹೊಂದಿರುವವನಂತೆ ಕಾಣುತ್ತಾನೆ. ಆತನು 'ಗೂಢನು' ರಹಸ್ಯವಾಗಿ ಅಡಗಿರುವವನು, ಎಂದು ಶಾಸ್ತ್ರಗಳಲ್ಲಿ ವ್ಯವಹರಿಸಲ್ಪಡುತ್ತಾನೆ. ಆದರೂ ಅವನಲ್ಲಿ ತತ್ಪರರಾಗಿರುವ ಭಕ್ತರ ಪರಿಶುದ್ಧವಾದ ಮನಸ್ಸಿಗೆ ಸುಲಭವಾಗಿ ಗೋಚರಿಸುತ್ತಾನೆ, ಆ ಭಕ್ತಪ್ರಿಯನಾದ ಭಗವಂತ." ಪರಮಾತ್ಮನನ್ನು ಹೀಗೆ ವರ್ಣಿಸಿ ಆತನ ಧ್ಯಾನದಿಂದ ಆನಂದಪರವಶರಾದ ಸೂತಪುರಾಣಿಕರು ಅನುಭವದಿಂದ ಉಕ್ಕಿಬಂದ ಭಕ್ತಿಗೀತೆಯಿಂದ ಆತನನ್ನು ಹೀಗೆ ಸ್ತುತಿಸುತ್ತಾರೆ.

ಶ್ರೀಕೃಷ್ಣ ಕೃಷ್ಣಸಖ ವೃಷ್ಣ್ಯೃಷಭಾವನಿಧ್ರು-
ಗ್ರಾಜನ್ಯವಂಶದಹನಾನಪವರ್ಗವೀರ್ಯ ।
ಗೋವಿನ್ದ ಗೋಪವನಿತಾವ್ರಜಭೃತ್ಯಗೀತ-
ತೀರ್ಥಶ್ರವಃ ಶ್ರವಣಮಙ್ಗಲ ಪಾಹಿ ಭೃತ್ಯಾನ್ ॥೨೫॥

"ಓ ಶ್ರೀಕೃಷ್ಣ! ಓ ಅರ್ಜುನಮಿತ್ರನೇ! ಓ ಯದುಪುಂಗವ! ಭೂಮಿಗೆ ದ್ರೋಹಮಾಡಿದ ರಾಜರ ವಂಶವೆಂಬ ಬಿದುರುಪೊದೆಯನ್ನು ಸುಟ್ಟುಹಾಕಿದ ಅಗ್ನಿರೂಪನೇ! ಏಕರೂಪವಾದ ಅಪಾರವೀರ್ಯವುಳ್ಳವನೇ! ಗೋವಿಂದಾ! ಗೋವುಗಳನ್ನೂ, ಗೋವಳರನ್ನೂ, ಗೋರೂಪವಾದ ವೇದವಾಣಿಯನ್ನೂ, ಭೂದೇವಿಯನ್ನೂ ಪೊರೆದವನೇ! ಗೋಪಸ್ತ್ರೀಯರ ಗಣಗಳಿಂದಲೂ ದಾಸಗಣಗಳಿಂದಲೂ ಸಂಕೀರ್ತಿತನಾದ ಪುಣ್ಯಕೀರ್ತಿಯುಳ್ಳವನೇ! (ನಾಮ-ಗುಣ-ಲೀಲಾಚರಿತ್ರಾದಿಗಳ) ಶ್ರವಣದಿಂದ ಅತ್ಯಂತ

ಮಂಗಳವನ್ನು ಉಂಟುಮಾಡುವವನೇ! ಸೇವಕರಾದ ನಮ್ಮನ್ನು ಕಾಪಾಡು.

ಎಲೈ ಬ್ರಾಹ್ಮಣಶ್ರೇಷ್ಠರೇ! ಮಹಾಪುರುಷನಾದ ಪರಮಾತ್ಮನ ಚಿಹ್ನೆಗಳಾದ ಅಂಗ, ಉಪಾಂಗ, ಆಯುಧ, ಆಭೂಷಣಗಳ ತಾತ್ತ್ವಿಕ ಸ್ವರೂಪದ ಈ ವರ್ಣನೆಯನ್ನು ಭಗವಂತನಲ್ಲಿ ನೆಟ್ಟಮನಸ್ಸಿನಿಂದ ಪವಿತ್ರನಾಗಿ ಪ್ರಾತಃಕಾಲದಲ್ಲಿ ಯಾವನು ಪಾರಾಯಣಮಾಡುವನೋ, ಆತನಿಗೆ ಹೃದಯಗುಹೆಯಲ್ಲಿ ನೆಲಸಿರುವ ಪರಬ್ರಹ್ಮದ ಜ್ಞಾನವು ಉಂಟಾಗು ವುದು. ಬ್ರಹ್ಮೋಪಾಸನೆಯ ಫಲವು ದೊರೆಯುವುದು."

ಸೂತಪುರಾಣಿಕರು ವರ್ಣಿಸಿದ ಭಗವಂತನ ಅಸ್ತ್ರ-ಆಭೂಷಣಾದಿಗಳ ತಾತ್ತ್ವಿಕರೂಪವನ್ನು ತಿಳಿದಬಳಿಕ ಶೌನಕರು ಆ ಸೂತಪುರಾಣಿಕರಲ್ಲಿ ಮತ್ತೊಂದು ವಿಷಯವನ್ನು ಕುರಿತು ಪ್ರಶ್ನೆಮಾಡುತ್ತಾರೆ :

"ಎಲೈ ಸಾಧುವೇ! ಸೂರ್ಯದೇವರನ್ನು ಅನುವರ್ತಿಸುವ ಏಳು ಗಣಗಳುಂಟು. ಅವು ಒಂದೊಂದು ತಿಂಗಳಲ್ಲೂ ಬೇರೆ-ಬೇರೆ ಹೆಸರುಗಳಿಂದ ಬೇರೆ-ಬೇರೆ ವ್ಯಾಪಾರಗಳನ್ನು ಮಾಡುತ್ತಾ ಸೂರ್ಯರೂಪಿಯಾಗಿರುವ ಭಗವಂತನನ್ನು ಆರಾಧಿಸುತ್ತವೆ—ಎಂಬುದಾಗಿ ಭಗವಂತರಾದ ಶುಕಮಹರ್ಷಿ ಗಳು ಕಥಾಶ್ರವಣಮಾಡುತ್ತಿದ್ದ ಪರೀಕ್ಷಿದ್ರಾಜನಿಗೆ ಹಿಂದೆ ತಿಳಿಸಿದ್ದರಲ್ಲವೆ? ಆ ಗಣಗಳ ಹೆಸರುಗಳೇನು? ಅವು ಆಯಾ ತಿಂಗಳುಗಳಲ್ಲಿ ತಮಗೆ ಅಧಿಪತಿ ಯಾದ ಸೂರ್ಯದೇವರ ನಿಯಮನಕ್ಕೆ ಒಳಪಟ್ಟು ನಡೆಸುವ ಬೇರೆ-ಬೇರೆ ಕಾರ್ಯಗಳು ಯಾವುವು? ಸೌರವ್ಯೂಹವನ್ನು ಕುರಿತ ಈ ವಿವರಣೆಯನ್ನು ನೀನು ಶ್ರದ್ಧಾಳುಗಳಾದ ನಮಗೆ ತಿಳಿಸು."

ಸೂತಪುರಾಣಿಕರು ಅವರಿಗೆ ಹೀಗೆಂದರು :

"ಎಲ್ಲ ಪ್ರಾಣಿಗಳಿಗೂ ಆತ್ಮಭೂತನಾಗಿರುವ ಮಹಾವಿಷ್ಣುವು ಲೋಕ ಯಾತ್ರೆಯನ್ನು ನಿರ್ವಹಿಸುವುದಕ್ಕಾಗಿ ತನ್ನ ಅನಾದಿಯಾದ ಲೋಕವ್ಯವ ಹಾರವನ್ನು ನಡೆಸುವ ಮಾಯೆಯಿಂದ ಈ ಪ್ರಾಕೃತವಾದ ಸೂರ್ಯ ಮಂಡಲವನ್ನು ನಿರ್ಮಿಸಿದನು. ಈ ಮಂಡಲವು ನಿರಂತರವಾಗಿ ಲೋಕ ಗಳನ್ನು ಸುತ್ತುತ್ತಿದೆ. ವಾಸ್ತವವಾಗಿ ಸಮಸ್ತಲೋಕಗಳಿಗೂ ಆತ್ಮ ಸ್ವರೂಪನಾಗಿ ಆದಿಕರ್ತನಾಗಿರುವ ಶ್ರೀಹರಿಯೇ ಸೂರ್ಯನಲ್ಲಿ ಅಂತರ್ಯಾಮಿ

ಯಾಗಿದ್ದು ಆಯಾ ಕಾರ್ಯಗಳನ್ನು ನಡೆಸುತ್ತಿದ್ದಾನೆ. ಸಮಸ್ತವೈದಿಕ ಕ್ರಿಯೆಗಳಿಗೂ ಆ ವಿಷ್ಣುವೇ ಮೂಲವು. ಆತನು ಒಬ್ಬನೇ ಆಗಿದ್ದರೂ ಋಷಿಗಳು ಆತನನ್ನು ಬಹುರೂಪನನ್ನಾಗಿ ವರ್ಣಿಸುತ್ತಾರೆ. ಯಜ್ಞಮೂರ್ತಿಯಾಗಿ ತಾನೊಬ್ಬನೇ ಆಗಿದ್ದರೂ ಯಜ್ಞದ ಕಾಲ, ದೇಶ, ಕ್ರಿಯೆ, ಕರ್ತಾ, ಕರಣ, ಕಾರ್ಯ, ಆಗಮ, ದ್ರವ್ಯ, ಫಲ ಎಂಬುದಾಗಿ ಒಂಭತ್ತು ವಿಧಗಳಿಂದ ಆತನು ಕರೆಯಲ್ಪಡುವುದಿಲ್ಲವೇ? ಹಾಗೆಯೇ ಸೂರ್ಯಶರೀರಕನಾದ ಆತನು ಮಹರ್ಷಿಗಳಿಂದ ಹನ್ನೆರಡು ನಾಮಗಳಿಂದ ಕರೆಯಲ್ಪಡುತ್ತಾನೆ. ಚೈತ್ರವೇ ಮುಂತಾದ ಹನ್ನೆರಡು ಮಾಸಗಳಲ್ಲಿ ಒಂದೊಂದು ತಿಂಗಳಿಗೆ ಒಂದೊಂದು ಗಣದಂತೆ ಹನ್ನೆರಡು ಬೇರೆ-ಬೇರೆ ಗಣಗಳೊಡನೆ ಕೂಡಿ ಲೋಕಯಾತ್ರೆಯನ್ನು ನಿರ್ವಹಿಸುವುದಕ್ಕಾಗಿ ಸಂಚರಿಸುತ್ತಿರುತ್ತಾನೆ. ಪ್ರತಿಯೊಂದು ತಿಂಗಳಲ್ಲಿಯೂ ಸೂರ್ಯನ ನಾಮಧೇಯಗಳು, ಅಪ್ಸರೆಯರು, ರಾಕ್ಷಸರು, ನಾಗರು, ಯಕ್ಷರು, ಋಷಿಗಳು ಮತ್ತು ಗಂಧರ್ವರೆಂಬುವರು ಬೇರೆ-ಬೇರೆಯಾಗಿದ್ದು ಬೇರೆ-ಬೇರೆ ಗಣವೆನಿಸುತ್ತಾರೆ.

ಮೊದಲನೆಯದಾಗಿ ಚೈತ್ರಮಾಸದಲ್ಲಿ ಸೂರ್ಯನು ಧಾತೃ ಎಂದು ಕರೆಯಲ್ಪಡುತ್ತಾನೆ. ಈತನನ್ನು ಕೃತಸ್ಥಲೀ ಎಂಬ ಅಪ್ಸರೆಯೂ, ಹೇತಿ ಎಂಬ ರಾಕ್ಷಸನೂ, ವಾಸುಕಿಯೆಂಬ ಸರ್ಪರಾಜನೂ, ರಥಕೃತ್ ಎಂಬ ಯಕ್ಷನೂ, ಪುಲಸ್ತ್ಯನೆಂಬ ಮಹರ್ಷಿಯೂ ಮತ್ತು ತುಂಬುರುವೆಂಬ ಗಂಧರ್ವನೂ ತಮ್ಮ-ತಮ್ಮ ಕೆಲಸಗಳ ಮೂಲಕ ಸೇವಿಸುತ್ತಾರೆ. ವೈಶಾಖಮಾಸದಲ್ಲಿ ಅರ್ಯಮಾ ಎಂದು ಕರೆಯಲ್ಪಡುವ ಸೂರ್ಯದೇವನನ್ನು ಪುಲಹನೆಂಬ ಋಷಿಯೂ, ಅಥೌಜಾ ಎಂಬ ಯಕ್ಷನೂ, ಪ್ರಹೇತಿಯೆಂಬ ರಾಕ್ಷಸನೂ, ಪುಂಜಿಕಸ್ಥಲಿಯೆಂಬ ಅಪ್ಸರೆಯೂ, ನಾರದನೆಂಬ ಗಂಧರ್ವಮುಖ್ಯನೂ, ಕಚ್ಛನೀರನೆಂಬ ಸರ್ಪರಾಜನೂ ತಮ್ಮ-ತಮ್ಮ ಕಾರ್ಯಗಳಿಂದ ಸೇವಿಸುತ್ತಾರೆ. ಹಾಗೆಯೇ ಜ್ಯೇಷ್ಠಮಾಸದಲ್ಲಿ ಮಿತ್ರನೆಂಬ ಸೂರ್ಯ, ಅತ್ರಿಯೆಂಬ ಮಹರ್ಷಿ, ಪೌರುಷೇಯನೆಂಬ ರಾಕ್ಷಸ, ತಕ್ಷಕನೆಂಬ ಸರ್ಪ, ಮೇನಕೆಯೆಂಬ ಅಪ್ಸರೆ, ಹಾಹಾ ಎಂಬ ಗಂಧರ್ವ ಮತ್ತು ರಥಸ್ವನನೆಂಬ ಯಕ್ಷ–ಇವರು ಸೇರಿ ಕಾರ್ಯವನ್ನು ನಿರ್ವಹಿಸುತ್ತಾರೆ. ಆಷಾಢಮಾಸದಲ್ಲಿ ವರುಣನೆಂಬ ಹೆಸರಿನ ಸೂರ್ಯದೇವನೊಡನೆ ವಸಿಷ್ಠಮಹರ್ಷಿಗಳು, ರಂಭೆ

ಯೆಂಬ ಅಪ್ಸರೆ, ಸಹಜನ್ಯ ಎಂಬ ಯಕ್ಷ, ಹೂಹೂ ಎಂಬ ಗಂಧರ್ವ, ಶುಕ್ರನೆಂಬ ನಾಗ ಮತ್ತು ಚಿತ್ರಸ್ವನನೆಂಬ ರಾಕ್ಷಸ–ಇವರು ತಮ್ಮ-ತಮ್ಮ ಕಾರ್ಯವನ್ನು ನಿರ್ವಹಿಸುತ್ತಾರೆ. ಶ್ರಾವಣಮಾಸವು ಇಂದ್ರ ಎಂಬ ಹೆಸರಿನ ಸೂರ್ಯದೇವನ ಕಾರ್ಯಕಾಲ. ಆ ಮಾಸದಲ್ಲಿ ವಿಶ್ವಾವಸು ಎಂಬ ಗಂಧರ್ವನೂ, ಶ್ರೋತಾ ಎಂಬ ಯಕ್ಷನೂ, ಏಲಾಪತ್ರ ಎಂಬ ನಾಗರಾಜನೂ, ಅಂಗಿರಾ ಎಂಬ ಋಷಿಯೂ, ಪ್ರಮ್ಲೋಚಾ ಎಂಬ ಅಪ್ಸರೆಯೂ, ವರ್ಯನೆಂಬ ರಾಕ್ಷಸನೂ ಆತನನ್ನು ಸೇವಿಸುತ್ತಾರೆ. ಭಾದ್ರಪದಮಾಸದ ಸೂರ್ಯನಿಗೆ ವಿವಸ್ವಾನ್ ಎಂದು ಹೆಸರು. ಆತನನ್ನು ಉಗ್ರಸೇನನೆಂಬ ಗಂಧರ್ವನೂ, ವ್ಯಾಘ್ರನೆಂಬ ರಾಕ್ಷಸನೂ, ಆಸಾರಣನೆಂಬ ಯಕ್ಷನೂ, ಭೃಗು ಮಹರ್ಷಿಯೂ, ಅನುಮ್ಲೋಚಾ ಎಂಬ ಅಪ್ಸರೆಯೂ ಮತ್ತು ಶಂಖಪಾಲನೆಂಬ ನಾಗನೂ ಸೇವಿಸುತ್ತಾರೆ. ಮಾಘಮಾಸದ ಸೂರ್ಯನು ಪೂಷಾ. ಧನಂಜಯನೆಂಬ ನಾಗನೂ, ವಾತನೆಂಬ ರಾಕ್ಷಸನೂ, ಸುಷೇಣನೆಂಬ ಗಂಧರ್ವನೂ, ಸುರುಚಿ ಎಂಬ ಯಕ್ಷನೂ, ಘೃತಾಚೀ ಎಂಬ ಅಪ್ಸರೆಯೂ, ಗೌತಮಋಷಿಯೂ–ಈತನ ಸೇವೆಯನ್ನು ಮಾಡುತ್ತಾರೆ. ಫಾಲ್ಗುನಮಾಸದ ಕಾರ್ಯಕಾಲವು ಪರ್ಜನ್ಯನೆಂಬ ಸೂರ್ಯನಿಗೆ ಸೇರಿದ್ದು. ಆತನನ್ನು ಕ್ರತು ಎಂಬ ಯಕ್ಷನೂ, ವರ್ಚಾ ಎಂಬ ರಾಕ್ಷಸನೂ, ಭರದ್ವಾಜನೆಂಬ ಋಷಿಯೂ, ಸೇನಜಿತ್ ಎಂಬ ಅಪ್ಸರೆಯೂ, ವಿಶ್ವನೆಂಬ ಗಂಧರ್ವನೂ ಮತ್ತು ಐರಾವತ ಎಂಬ ಸರ್ಪವೂ ಅನುಸರಿಸಿ ಸೇವಿಸುತ್ತಾರೆ.

ಮಾರ್ಗಶಿರಮಾಸದಲ್ಲಿ ಸೂರ್ಯದೇವನಿಗೆ ಅಂಶು ಎಂದು ನಾಮಧೇಯ. ಆತನನ್ನು ಕಶ್ಯಪಋಷಿಯೂ, ತಾರ್ಕ್ಷ್ಯನೆಂಬ ಯಕ್ಷನೂ ಋತಸೇನನೆಂಬ ಗಂಧರ್ವನೂ, ಉರ್ವಶೀ ಎಂಬ ಅಪ್ಸರೆಯೂ, ವಿದ್ಯುಚ್ಛತ್ರ ನೆಂಬ ರಾಕ್ಷಸನೂ ಮತ್ತು ಮಹಾಶಂಖನೆಂಬ ಸರ್ಪರಾಜನೂ ಸೇವಿಸು ತ್ತಾರೆ. ಪುಷ್ಯಮಾಸದಲ್ಲಿ 'ಭಗ' ಎಂದು ಕರೆಯಲ್ಪಡುವ ಸೂರ್ಯನೊಡನೆ ಸ್ಫೂರ್ಜನೆಂಬ ರಾಕ್ಷಸನೂ, ಅರಿಷ್ಟನೇಮಿಯೆಂಬ ಗಂಧರ್ವನೂ, ಊರ್ಣನೆಂಬ ಯಕ್ಷನೂ ಆಯುವೆಂಬ ಋಷಿಯೂ, ಪೂರ್ವಚಿತ್ತಿಯೆಂಬ ಅಪ್ಸರೆಯೂ, ಕರ್ಕೋಟಕನೆಂಬ ಸರ್ಪರಾಜನೂ ಇದ್ದು ಆತನ ಸೇವೆಯನ್ನು ಮಾಡುತ್ತಾರೆ. ಆಶ್ವಯುಜಮಾಸದಲ್ಲಿ ತ್ವಷ್ಟನೆಂಬ ಸೂರ್ಯನನ್ನು

ಜಮದಗ್ನಿಋಷಿಯೂ, ಕಂಬಲನೆಂಬ ನಾಗರಾಜನೂ, ತಿಲೋತ್ತಮೆಯೆಂಬ ಅಪ್ಸರೆಯೂ, ಬ್ರಹ್ಮಾಪೇತನೆಂಬ ರಾಕ್ಷಸನೂ, ಶತಜಿತ್ ಎಂಬ ಯಕ್ಷನೂ ಮತ್ತು ಧೃತರಾಷ್ಟ್ರ ಎಂಬ ಗಂಧರ್ವನೂ ಸೇವೆಮಾಡುವರು. ಕಾರ್ತಿಕ ಮಾಸದಲ್ಲಾದರೋ ಸೂರ್ಯನಾರಾಯಣನಿಗೆ ವಿಷ್ಣು ಎಂದು ಹೆಸರು. ಅಶ್ವತರ ಎಂಬ ನಾಗೇಂದ್ರನೂ, ರಂಭೆಯೆಂಬ ಅಪ್ಸರೆಯೂ, ಸೂರ್ಯ ವರ್ಚಾ ಎಂಬ ಗಂಧರ್ವನೂ, ಸತ್ಯಜಿತ್ ಎಂಬ ಯಕ್ಷನೂ, ವಿಶ್ವಾಮಿತ್ರರೆಂಬ ಬ್ರಹ್ಮರ್ಷಿವರೇಣ್ಯರೂ ಮತ್ತು ಮುಖಾಪೇತನೆಂಬ ರಾಕ್ಷಸನೂ ಸೂರ್ಯನ ಸೇವೆಯ ಕಾರ್ಯವನ್ನು ನಿರ್ವಹಿಸುತ್ತಾರೆ.

ಶೌನಕರೇ! ಇವರೆಲ್ಲಾ ಸೂರ್ಯನ ವಿಭೂತಿಗಳು. ಇವರನ್ನು ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಪ್ರತಿದಿನವೂ ಯಾರು ಸ್ಮರಿಸುತ್ತಾರೋ ಅವರ ಸಮಸ್ತಪಾಪಗಳೂ ನಾಶಹೊಂದುತ್ತವೆ.

ಈ ಸೂರ್ಯದೇವನು ಮೇಲೆ ಹೇಳಿದ ತನ್ನ ಆರು ಗಣಗಳೊಡನೆ ಹನ್ನೆರಡು ತಿಂಗಳಲ್ಲೂ ಎಲ್ಲೆಲ್ಲಿಯೂ ಸಂಚಾರಮಾಡುತ್ತಾ ಇಹಲೋಕ ಪರಲೋಕಗಳೆರಡರಲ್ಲೂ ಕ್ಷೇಮವನ್ನುಂಟುಮಾಡುವ ಸದ್ಬುದ್ಧಿಯನ್ನು ಅನುಗ್ರಹಿಸುತ್ತಾನೆ. ಋಷಿಗಳು ಸ್ವಾಮಿಯಾದ ಆದಿತ್ಯನನ್ನು ಸೂರ್ಯ ಸಂಬಂಧವಾದ ಋಗ್ವೇದ, ಯಜುರ್ವೇದ ಮತ್ತು ಸಾಮವೇದದ ಮಂತ್ರಗಳ ಮೂಲಕ ಸ್ತುತಿಸುತ್ತಾರೆ. ಗಂಧರ್ವರು ಆತನ ಕೀರ್ತಿಯನ್ನು ಗಾನ ಮಾಡುತ್ತಾರೆ. ಅಪ್ಸರೆಯರು ಆತನ ಮುಂದೆ ನೃತ್ಯಸೇವೆಯನ್ನು ಸಲ್ಲಿಸುತ್ತಾರೆ. ನಾಗಗಣಗಳು ಹಗ್ಗದಂತೆ ಆತನ ರಥಕ್ಕೆ ಬಿಗಿಯಾಗಿ ಕಟ್ಟಲ್ಪಟ್ಟಿರುತ್ತವೆ. ಯಕ್ಷಗಣಗಳು ಆ ರಥವನ್ನು ಮುಂದೆ ಎಳೆಯುತ್ತಾರೆ. ಬಲಾಢ್ಯರಾದ ರಾಕ್ಷಸರು ಆ ರಥವನ್ನು ಹಿಂದಿನಿಂದ ತಳ್ಳಿಕೊಡುತ್ತಾರೆ. ಇವರಲ್ಲದೆ ವಾಲಖಿಲ್ಯರೆಂಬ ನಿರ್ಮಲವಾದ ಮನಸ್ಸುಳ್ಳ ಅರುವತ್ತು ಸಾವಿರ ಮಂದಿ ಬ್ರಹ್ಮರ್ಷಿಗಳೂ ಆತನಿಗೆ ಸೇವೆಸಲ್ಲಿಸುತ್ತಾರೆ. ಅವರು ಸೂರ್ಯ ದೇವನ ಮುಂದೆ ಆತನಿಗೆ ಎದುರಾಗಿ ನಿಂತು ನಾನಾವಿಧವಾದ ಸ್ತೋತ್ರ ಪಾಠಗಳಿಂದ ಆತನನ್ನು ಸಂತೋಷಪಡಿಸುತ್ತಾರೆ. ಹೀಗೆ ಆದ್ಯಂತರಹಿತನಾದ ಸರ್ವೇಶ್ವರನಾದ ಶ್ರೀಹರಿಯು ಪ್ರತಿಯೊಂದು ಕಲ್ಪದಲ್ಲಿಯೂ ತನ್ನ ಸ್ವರೂಪ

ವನ್ನು ವ್ಯೂಹರೂಪವಾಗಿ ವಿಭಾಗಮಾಡಿಕೊಂಡು ಲೋಕಗಳ ಪಾಲನೆ-ಪೋಷಣೆಗಳನ್ನು ಮಾಡುತ್ತಾನೆ."

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದ್ವಾದಶಸ್ಕಂಧದ ೧೧ನೆಯ ಅಧ್ಯಾಯವು ಮುಗಿಯಿತು.

ದ್ವಾದಶಸ್ಕಂಧ ೧೨ನೆಯ ಅಧ್ಯಾಯ

ಶ್ರೀಮದ್ಭಾಗವತಪುರಾಣದ ವಿಷಯಾನುಕ್ರಮಣಿಕೆ: ಗ್ರಂಥಮಾಹಾತ್ಮ್ಯ

ಸೂತಪುರಾಣಿಕರು ತಮ್ಮ ಪ್ರವಚನವನ್ನು ಉಪಸಂಹಾರಮಾಡುತ್ತಾ ಹೀಗೆ ಗುರುದೇವತಾಸ್ತೋತ್ರವನ್ನು ಮಾಡಿ ಪ್ರವಚನವನ್ನು ಮುಂದುವರಿಸುತ್ತಾರೆ :

ನಮೋ ಧರ್ಮಾಯ ಮಹತೇ ನಮಃ ಕೃಷ್ಣಾಯ ವೇಧಸೇ ।
ಬ್ರಾಹ್ಮಣೇಭ್ಯೋ ನಮಸ್ಕೃತ್ಯ ಧರ್ಮಾನ್ವಕ್ಷ್ಯೇ ಸನಾತನಾನ್ ॥೧॥

"ಭಗವದ್ಭಕ್ತಿ ಭಗವತ್ಸಾಕ್ಷಾತ್ಕಾರರೂಪವಾದ ಮಹಾಧರ್ಮಕ್ಕೆ ನಮಸ್ಕಾರವು. ಈಗ ನಾನು ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರಿಗೆ ನಮಸ್ಕಾರಮಾಡಿ ಶ್ರೀಮದ್ಭಾಗವತವು ಹೇಳಿರುವ ಸನಾತನವಾದ ಧರ್ಮದ ವಿಷಯಗಳನ್ನು ಸಂಕ್ಷೇಪವಾಗಿ ಹೇಳುತ್ತೇನೆ.*

ಎಲೈ ಬ್ರಾಹ್ಮಣೋತ್ತಮರೇ! ನೀವು ಪ್ರಶ್ನೆಮಾಡಿದ್ದರಿಂದ ನಾನು ನಿಮಗೆ ಇಲ್ಲಿಯವರೆಗೂ ಈ ಅದ್ಭುತವಾದ ವಿಷ್ಣುವಿನ ಚರಿತ್ರವನ್ನು ಹೇಳಿದೆನು. ಮನುಷ್ಯರು ಕೇಳಲು ಅತ್ಯಂತ ಉಚಿತವಾಗಿ ಜನ್ಮಕ್ಕೆ ಸಾಫಲ್ಯ

*ಇಜ್ಯಾಚಾರದಯಾಟಿಹಿಂಸಾ ದಾನಸ್ವಾಧ್ಯಾಯಕರ್ಮಣಾಮ್ ।
ಅಯಂ ವಃ ಪರಮೋ ಧರ್ಮಃ ಯದ್ಯೋಗೇನಾತ್ಮದರ್ಶನಮ್ ।
ಎಂದು ಯಾಜ್ಞವಲ್ಕ್ಯಸ್ಮೃತಿಯು ಸಾರುವಂತೆ ಪರಮಾತ್ಮದರ್ಶನವೇ ಮಹತ್ತಮವಾದ ಧರ್ಮವು. ಉಳಿದ ಧರ್ಮಗಳೆಲ್ಲವೂ ಅದಕ್ಕೆ ಅನುಗುಣವಾಗಿರಬೇಕು. ಮಹಾಭಾರತದಲ್ಲಿ ಭೀಷ್ಮನು ಧರ್ಮರಾಯನಿಗೆ ಉಪದೇಶಮಾಡುವಾಗ ಇದೇ ಶ್ಲೋಕವಿದೆ. 'ಸನಾತನಾನ್' ಎಂಬುದಕ್ಕೆ ಬದಲಾಗಿ 'ಶಾಶ್ವತಾನ್'–ಎಂಬ ಪದವಿದೆ.

ವನ್ನು ಉಂಟುಮಾಡುವ ಪವಿತ್ರವಾದ ಚರಿತ್ರವಿದು. ಈ ಭಾಗವತ ಪುರಾಣದಲ್ಲಿ ಸಮಸ್ತಪಾಪಪರಿಹಾರಕನೂ, ಇಂದ್ರಿಯಾಧಿಪತಿಯೂ, ಯದುಪತಿಯೂ ಆಗಿರುವ ಭಗವಾನ್ ಶ್ರೀಹರಿ ಸಾಕ್ಷಾತ್ ಶ್ರೀಮನ್ನಾರಾಯಣನೇ ಮುಖ್ಯವಾಗಿ ಪ್ರತಿಪಾದಿಸಲ್ಪಟ್ಟಿದ್ದಾನೆ. ಜಗತ್ತಿನ ಸೃಷ್ಟಿ-ಸ್ಥಿತಿ-ಸಂಹಾರಗಳಿಗೆ ಕಾರಣವಾಗಿ ಪರಮರಹಸ್ಯವಾಗಿರುವ ಬ್ರಹ್ಮತತ್ತ್ವವನ್ನು ಇಲ್ಲಿ ನಿರೂಪಣೆಮಾಡಿದ್ದೇನೆ. ಜ್ಞಾನ-ವಿಜ್ಞಾನಗಳನ್ನೂ ಅವುಗಳ ಸಾಧನಗಳನ್ನೂ ತಿಳಿಸಿದ್ದೇನೆ. (ಪುರಾಣದ ಪ್ರಥಮಸ್ಕಂಧದಲ್ಲಿ) ಭಕ್ತಿಯೋಗವನ್ನೂ ಮತ್ತು ಅದರಿಂದ ಉಂಟಾಗಿ ಅದನ್ನು ಸ್ಥಿರಪಡಿಸುವ ವೈರಾಗ್ಯವನ್ನೂ ಉಪದೇಶಮಾಡಿದೆ. ಪರೀಕ್ಷಿದ್ರಾಜನ ಕಥೆಯನ್ನೂ ಮತ್ತು ಪ್ರಾಸಂಗಿಕವಾಗಿ ವ್ಯಾಸ-ನಾರದಸಂವಾದರೂಪವಾದ ನಾರದರ ಉಪಾಖ್ಯಾನವನ್ನೂ ಹೇಳಿದೆ. ರಾಜರ್ಷಿಯಾದ ಪರೀಕ್ಷಿದ್ರಾಜನಿಗೆ ಬ್ರಾಹ್ಮಣನ ಶಾಪವು ತಟ್ಟಲು ಆತನು ಗಂಗಾನದಿಯ ದಡದಲ್ಲಿ ಉಪವಾಸ ವ್ರತವನ್ನು ಕೈಗೊಂಡದ್ದು ಮತ್ತು ಆತನಿಗೂ ಶುಕಮಹರ್ಷಿಗಳಿಗೂ ಸಂಭಾಷಣೆಯು ಪ್ರಾರಂಭವಾದದ್ದು ಹೇಳಲ್ಪಟ್ಟಿದೆ.

ಅನಂತರ ಎರಡನೆಯ ಸ್ಕಂಧದಲ್ಲಿ ಯೋಗಧಾರಣೆಯಿಂದ ಶರೀರವನ್ನು ತ್ಯಾಗಮಾಡುವ ವಿಧಿಯನ್ನೂ, ಬ್ರಹ್ಮ-ನಾರದರ ಸಂವಾದವನ್ನೂ, ಭಗವಂತನ ಅವತಾರಗಳ ಸಂಕ್ಷಿಪ್ತವಾದ ನಿರೂಪಣೆಯನ್ನೂ ಮತ್ತು ಮಹತ್ತತ್ತ್ವದಿಂದ ಆರಂಭಿಸಿ ಕ್ರಮವಾಗಿ ಪ್ರಾಕೃತಿಕ ಸೃಷ್ಟಿಯ ಉತ್ಪತ್ತಿಯೇ ಮುಂತಾದ ವಿಷಯಗಳನ್ನೂ ಕೇಳಿದ್ದೀರಿ.

ಮೂರನೆಯ ಸ್ಕಂಧದಲ್ಲಿ ಪ್ರಾರಂಭದಲ್ಲಿ ವಿದುರ ಮತ್ತು ಉದ್ಧವರ ಮತ್ತು ಅನಂತರ ವಿದುರ ಮತ್ತು ಮೈತ್ರೇಯರ ಸಮಾಗಮ ಮತ್ತು ಸಂಭಾಷಣೆಯು ವರ್ಣಿತವಾಗಿದೆ. ಅನಂತರ ಪುರಾಣಸಂಹಿತೆಯ ವಿಷಯವನ್ನು ಕುರಿತ ಪ್ರಶ್ನೆಯೂ ಮತ್ತು ಪರಮಪುರುಷನು ಪ್ರಳಯಕಾಲದಲ್ಲಿ ಹೇಗಿರುತ್ತಾನೆ? ಎಂಬುದರ ನಿರೂಪಣೆಯೂ ಬಂದಿದೆ. ಗುಣಗಳ ಕ್ಷೋಭೆಯಿಂದ ಪ್ರಾಕೃತಿಕಸೃಷ್ಟಿಯೂ ಪ್ರಕೃತಿಯ ವಿಕಾರಗಳೆನಿಸಿದ ಮಹತ್ತು, ಅಹಂಕಾರ ಮತ್ತು ಪಂಚಭೂತಗಳೆಂಬ ಏಳು ತತ್ತ್ವಗಳ ಸೃಷ್ಟಿ ಕ್ರಮವೂ, ಅವುಗಳಿಂದ ಬ್ರಹ್ಮಾಂಡೋತ್ಪತ್ತಿಯೂ ಮತ್ತು ಆ ಬ್ರಹ್ಮಾಂಡ

ದಿಂದ ಚತುರ್ಮುಖಬ್ರಹ್ಮದೇವರ ಉತ್ಪತ್ತಿಯೂ ವರ್ಣಿತವಾಗಿವೆ. ಅನಂತರ ಸ್ಥೂಲ ಮತ್ತು ಸೂಕ್ಷ್ಮವಾದ ಕಾಲದ ಸ್ವರೂಪವನ್ನೂ, ಲೋಕ ಪದ್ಮದ ಉತ್ಪತ್ತಿಯನ್ನೂ, ವರಾಹದೇವರು ಪ್ರಳಯಸಮುದ್ರದಿಂದ ಭೂಮಿಯನ್ನು ಉದ್ಧಾರಮಾಡುವ ಸಂದರ್ಭದಲ್ಲಿ ಹಿರಣ್ಯಾಕ್ಷದೈತ್ಯನನ್ನು ಸಂಹರಿಸಿದ್ದನ್ನೂ, ದೇವತೆಗಳು-ಪಶು-ಪಕ್ಷಿಗಳು-ಮನುಷ್ಯರು—ಎಂಬುವರ ಮತ್ತು ರುದ್ರರ ಉತ್ಪತ್ತಿಕ್ರಮವನ್ನೂ ನಿರೂಪಿಸಿದೆ. ಇದರನಂತರ ಸ್ತ್ರೀ-ಪುರುಷರ ಅರ್ಧಾರ್ಧಭಾಗಗಳಿಂದ ಕೂಡಿದ ವಿಶಿಷ್ಟವಾದ ಸೃಷ್ಟಿಯನ್ನೂ ಮತ್ತು ಅದರಿಂದ ಸ್ವಾಯಂಭುವಮನುವಿನ ಮತ್ತು ಆತನ ಪತ್ನಿಯೆನಿಸಿದ ಆದ್ಯಸ್ತ್ರೀ, ಉತ್ತಮಸ್ತ್ರೀ ಶತರೂಪಾದೇವಿಯ ಜನನವನ್ನೂ ತಿಳಿಸಿದೆ. ಇದಾದ ನಂತರ ಕರ್ದಮಪ್ರಜಾಪತಿಯ ಚರಿತ್ರವನ್ನು ವರ್ಣಿಸುತ್ತಾ ಆತನಿಗೆ ಧರ್ಮಪತ್ನಿಯಾದ ದೇವಹೂತಿಯಲ್ಲಿ ನವಕನ್ಯಕೆಯರು ಜನಿಸಿದ್ದನ್ನೂ, ಭಗವಂತನ ಕಪಿಲಾವತಾರವನ್ನೂ, ಕಪಿಲದೇವರಿಗೂ ಅವರ ತಾಯಿ ದೇವಹೂತಿಗೂ ನಡೆದ ಸಂಭಾಷಣೆಯನ್ನೂ ವಿವರಿಸಿದೆ.

(ಶ್ಲೋಕ ೨-೧೩)

ಇನ್ನು ನಾಲ್ಕನೆಯ ಸ್ಕಂಧದ ವಿಷಯ. ಇದರಲ್ಲಿ ಮರೀಚಿಯೇ ಮುಂತಾದ ಒಂಭತ್ತು ಮಂದಿ ಬ್ರಹ್ಮರ ಉತ್ಪತ್ತಿಯನ್ನೂ, ದಕ್ಷಯಜ್ಞ ಧ್ವಂಸವನ್ನೂ, ಧ್ರುವಕುಮಾರ—ಪೃಥುಚಕ್ರವರ್ತಿಗಳ ಕಥೆಯನ್ನೂ, ಪ್ರಾಚೀನಬರ್ಹಿ ಮತ್ತು ದೇವರ್ಷಿನಾರದರ ಸಂಭಾಷಣೆಯನ್ನೂ ವರ್ಣಿಸಲಾಗಿದೆ.

ಐದನೆಯ ಸ್ಕಂಧದಲ್ಲಿ ಪ್ರಿಯವ್ರತನ ಉಪಾಖ್ಯಾನ, ನಾಭಿ ಮಹಾರಾಜ, ಋಷಭದೇವರು ಮತ್ತು ಭರತಚಕ್ರವರ್ತಿಗಳ ಕಥೆ, ದ್ವೀಪ, ವರ್ಷ, ಸಮುದ್ರ, ಪರ್ವತ ಮತ್ತು ನದಿಗಳ ವರ್ಣನೆ, ಜ್ಯೋತಿಶ್ಚಕ್ರದ ಸನ್ನಿವೇಶ ಮತ್ತು ಪಾತಾಳಲೋಕ, ನರಕಲೋಕಗಳ ಸ್ಥಿತಿಗಳು ವರ್ಣಿಸಲ್ಪಟ್ಟಿವೆ.

ಆರನೆಯ ಸ್ಕಂಧದಲ್ಲಿ ಪ್ರಚೇತಸರಿಂದ ದಕ್ಷನ ಉತ್ಪತ್ತಿ, ದಕ್ಷ ಪುತ್ರಿಯರ ಸಂತಾನವಾದ ದೇವತೆ, ಅಸುರ, ಮನುಷ್ಯ, ಪಶು, ಪರ್ವತ

ಮತ್ತು ಪಕ್ಷಿಗಳ ಜನ್ಮ-ಕರ್ಮಗಳು, ವೃತ್ರಾಸುರನ ಜನ್ಮ-ಕರ್ಮಗಳು ಮತ್ತು ಪರಂಧಾಮಪ್ರಾಪ್ತಿ–ಎಂಬಿಷ್ಟು ವಿಷಯಗಳು ಬಂದಿವೆ.

ಇನ್ನು ಏಳನೆಯ ಸ್ಕಂಧದಲ್ಲಿ ಮುಖ್ಯವಾಗಿ ದೈತ್ಯರಾಜ ಹಿರಣ್ಯಾಕ್ಷ-ಹಿರಣ್ಯಕಶಿಪುಗಳ ಜನ್ಮ-ಕರ್ಮಗಳನ್ನೂ ಭಾಗವತಶಿರೋಮಣಿಯಾದ ಪ್ರಹ್ಲಾದನ ಚರಿತ್ರೆಯನ್ನೂ ವರ್ಣಿಸಲಾಗಿದೆ.

ಎಂಟನೆಯ ಸ್ಕಂಧದಲ್ಲಿ ಮನ್ವಂತರಗಳ ಕಥೆ, ಗಜೇಂದ್ರಮೋಕ್ಷದ ಉಪಾಖ್ಯಾನ, ಬೇರೆ ಬೇರೆ ಮನ್ವಂತರಗಳಲ್ಲಿ ಭಗವಂತನು ಮಾಡುವ ಮತ್ಸ್ಯ, ಕೂರ್ಮ, ವಾಮನ, ಧನ್ವಂತರಿ, ಹಯಗ್ರೀವ ಇತ್ಯಾದಿ ಅವತಾರಗಳು, ಅಮೃತದ ಪ್ರಾಪ್ತಿಗಾಗಿ ದೇವ-ದೈತ್ಯರು ಸಮುದ್ರವನ್ನು ಕಡೆದ ಕಥೆ, ದೇವಾಸುರಸಂಗ್ರಾಮವೇ ಮುಂತಾದ ವಿಷಯಗಳು ವರ್ಣಿಸಲ್ಪಟ್ಟಿವೆ.

ಒಂಭತ್ತನೆಯ ಸ್ಕಂಧದಲ್ಲಿ ಮುಖ್ಯವಾಗಿ ರಾಜವಂಶಗಳ ವರ್ಣನೆಯಿದೆ. ಇಕ್ಷ್ವಾಕುಮಹಾರಾಜನ ಜನ್ಮ-ಕರ್ಮಗಳು, ವಂಶವಿಸ್ತಾರ, ಮಹಾತ್ಮನಾದ ಸುದ್ಯುಮ್ನನ ಮತ್ತು ಇಲಾ-ತಾರಾದೇವಿಯರ ಉಪಾಖ್ಯಾನ–ಇವುಗಳನ್ನು ವರ್ಣಿಸಿದೆ. ಅನಂತರ ಸೂರ್ಯವಂಶದ ವೃತ್ತಾಂತ, ಶಶಾದ ಮತ್ತು ನೃಗನೇ ಮುಂತಾದ ರಾಜರ ಕಥೆ, ಸುಕನ್ಯಾಚರಿತ್ರೆ, ಶರ್ಯಾತಿ, ಖಟ್ವಾಂಗ, ಮಾಂಧಾತೃ, ಸೌಭರಿ, ಸಗರ, ಬುದ್ಧಿಮಂತನಾದ ಕಕುತ್ಸ್ಥ ಮತ್ತು ಕೋಸಲೇಂದ್ರನಾದ ಭಗವಾನ್ ಶ್ರೀರಾಮಚಂದ್ರನ ಸರ್ವಪಾಪಪರಿಹಾರಕವಾದ ಚರಿತ್ರಗಳೂ ಇದೇ ಸ್ಕಂಧದಲ್ಲಿವೆ. ಇದಾದ ನಂತರ ನಿಮಿಯ ದೇಹತ್ಯಾಗವನ್ನೂ ಜನಕಕುಲದವರ ಜನ್ಮಾದಿ ವೃತ್ತಾಂತವನ್ನೂ ವರ್ಣನೆಮಾಡಿದೆ. ಭಾರ್ಗವೇಂದ್ರ ಪರಶುರಾಮದೇವರು ಮಾಡಿದ ದುಷ್ಟಕ್ಷತ್ರಿಯಸಂಹಾರ ; ಚಂದ್ರವಂಶೀಯರಾದ ಪುರೂರವಸ, ಯಯಾತಿ, ನಹುಷ, ದುಷ್ಯಂತನಂದನ ಭರತ, ಶಂತನುಮಹಾರಾಜ ಮತ್ತು ಅವನ ಪುತ್ರರಾದ ಭೀಷ್ಮನೇ ಮುಂತಾದವರ ಸಂಕ್ಷಿಪ್ತಕಥೆಗಳು ಒಂಭತ್ತನೆಯ ಸ್ಕಂಧವನ್ನು ಅಲಂಕರಿಸಿವೆ. ಮತ್ತು ಅದರ ಕೊನೆಯಲ್ಲಿ ಯಯಾತಿಯ ಜ್ಯೇಷ್ಠಪುತ್ರನಾದ ಯದುಮಹಾರಾಜನ ವಂಶವಿಸ್ತಾರವು ಹೇಳಲ್ಪಟ್ಟಿದೆ.

(ಶ್ಲೋಕ ೧೪-೨೬)

ಇದೇ ಪವಿತ್ರವಾದ ಯದುವಂಶದಲ್ಲಿಯೇ ಜಗದೀಶ್ವರನಾದ

ಶ್ರೀಕೃಷ್ಣಪರಮಾತ್ಮನು ಅವತಾರವನ್ನು ಮಾಡಿದನಲ್ಲವೇ! ಈ ವಂಶದಲ್ಲಿ ವಸುದೇವನ ಗೃಹದಲ್ಲಿ ಸ್ವಾಮಿಯು ಜನಿಸಿ ನಂದಗೋಕುಲದಲ್ಲಿ ವೃದ್ಧಿ ಹೊಂದಿದನು. ಅನೇಕ ದೈತ್ಯ-ದಾನವರನ್ನು ಸಂಹಾರಮಾಡಿದನು. ಆತನ ಅವತಾರಲೀಲೆಗಳು ಅಪಾರವಾಗಿವೆ. ಹತ್ತನೆಯ ಸ್ಕಂಧದಲ್ಲಿ ಅವುಗಳನ್ನು ವರ್ಣಿಸಲಾಗಿದೆ. ವಸುದೇವನ ಪತ್ನಿಯಾದ ದೇವಕೀದೇವಿಯ ಗರ್ಭದಲ್ಲಿ ಜನಿಸಿದ ಭಗವಂತನು ಗೋಕುಲದಲ್ಲಿ ನಂದನ ಮನೆಯಲ್ಲಿ ಬೆಳೆದನು. ಅಲ್ಲಿ ಆತನು ಶಿಶುವಾಗಿದ್ದಾಗಲೇ ದುಷ್ಟಪೂತನಿಯ ಪ್ರಾಣ ಗಳನ್ನು ಆಕೆಯ ಸ್ತನ್ಯದೊಡನೆ ಹೀರಿದ್ದು, ಅಸುರಶಕಟನನ್ನು ಕಾಲಿನಿಂದ ಒದ್ದು ಮುರಿದುಹಾಕಿದ್ದು, ತೃಣಾವರ್ತ ಬಕಾಸುರ ಮತ್ತು ವತ್ಸಾಸುರರನ್ನು ಸಂಹರಿಸಿದ್ದು, ಸಪರಿವಾರರಾದ ಧೇನುಕಾಸುರ-ಪ್ರಲಂಬಾಸುರರನ್ನು ಕೊಂದುಹಾಕಿದ್ದು, ಕಾಡುಗಿಚ್ಚಿಗೆ ಸಿಕ್ಕಿಹಾಕಿ ಕೊಂಡಿದ್ದ ಗೋವಳರನ್ನು ರಕ್ಷಿಸಿದ್ದು, ಕಾಳಿಂಗನಾಗನನ್ನು ಮರ್ದಿಸಿದ್ದು, ಹೆಬ್ಬಾವಿಗೆ ಆಹಾರವಾಗುವುದರಲ್ಲಿದ್ದ ನಂದಗೋಪನನ್ನು ರಕ್ಷಿಸಿದ್ದು, ಗೋಪಿಯರು ತನ್ನನ್ನು ಪತಿಯನ್ನಾಗಿ ಪಡೆಯಲು ವ್ರತವನ್ನಾಚರಿಸಿದಾಗ ಸ್ವಾಮಿಯು ಪ್ರಸನ್ನವಾಗಿ ಅವರನ್ನು ಅನುಗ್ರಹಿಸಿದ್ದು, ಯಜ್ಞಮಾಡುತ್ತಿದ್ದ ಋಷಿಗಳ ಪತ್ನಿಯರ ಮೇಲೆ ಭಗವಂತನು ಅನುಗ್ರಹ ಮಾಡಿದ್ದು, ಅವರ ಪತಿಗಳು ಪಶ್ಚಾತ್ತಾಪಪಟ್ಟಿದ್ದು, ಗೋವರ್ಧನಗಿರಿಯನ್ನು ಉದ್ಧರಿಸಿದ ಲೀಲೆ ಮತ್ತು ಇಂದ್ರನೂ ಕಾಮಧೇನುವೂ ಸಮರ್ಪಿಸಿದ ಗೋವಿಂದಪಟ್ಟಾಭಿಷೇಕಸೇವೆ, ಶರದೃತುವಿನ ರಾತ್ರಿಗಳಲ್ಲಿ ಗೋಪಿಯ ರೊಡನೆ ಯೋಗೇಶ್ವರನು ನಡೆಸಿದ ರಾಸಕ್ರೀಡೆ, ಶಂಖಚೂಡನ ವಧೆ, ಅರಿಷ್ಟನ ಸಂಹಾರ, ಕೇಶಿಯ ಸಾವು, ಕಂಸನ ಆಜ್ಞೆಯಂತೆ ಅಕ್ರೂರನು ಬಂದು ಕರೆದಾಗ ಶ್ರೀಕೃಷ್ಣ–ಬಲರಾಮರು ಮಥುರೆಗೆ ಪ್ರಯಾಣಮಾಡಿದುದು, ಗೋಪಿಯರ ವಿಲಾಪ, ಶ್ರೀರಾಮ-ಕೃಷ್ಣರಿಂದ ಮಥುರೆಯ ದರ್ಶನ, ಕುವಲಯಾಪೀಡ ಗಜದ, ಮುಷ್ಟಿಕ ಚಾಣೂರಮಲ್ಲರ ಮತ್ತು ಕಂಸಾಸುರನ ಸಂಹಾರ, ಸಾಂದೀಪನೀಗುರುವಿನ ಬಳಿ ವಿದ್ಯಾಭ್ಯಾಸಮಾಡಿ ಮೃತನಾಗಿದ್ದ ಅವರ ಪುತ್ರನನ್ನು ಜೀವಂತನನ್ನಾಗಿ ಹಿಂದಕ್ಕೆ ಕರೆದುತಂದುದ್ದು, ಮಥುರೆಯಲ್ಲಿ ವಾಸಮಾಡುತ್ತಿದ್ದಾಗ ಉದ್ಧವ-

ಬಲರಾಮರೊಡನೆ ಯಾದವರಿಗೆ ಸರ್ವಪ್ರಕಾರಗಳಿಂದಲೂ ಹಿತವನ್ನುಂಟು ಮಾಡುತ್ತಿದ್ದುದು, ಜರಾಸಂಧನ ಸೇನೆಯನ್ನು ಅನೇಕ ಬಾರಿ ಸಂಹಾರ ಮಾಡಿದ್ದು, ಕಾಲಯವನನನ್ನು ಕೊಂದುಹಾಕಿಸಿದ್ದು, ಕುಶಸ್ಥಲಿಯನ್ನು ಪ್ರವೇಶಮಾಡಿದ್ದು, ದೇವಲೋಕದಿಂದ ಪಾರಿಜಾತವೃಕ್ಷವನ್ನೂ ಮತ್ತು ಸುಧರ್ಮಾಸಭೆಯನ್ನೂ ದ್ವಾರಕೆಗೆ ತಂದದ್ದು, ಶತ್ರುಸೇನೆಗಳನ್ನು ಪರಾಜಯಗೊಳಿಸಿ ರುಕ್ಮಿಣಿಯನ್ನು ಅಪಹರಿಸಿಕೊಂಡು ಬಂದದ್ದು, ಬಾಣಾಸುರನೊಡನೆ ಯುದ್ಧಮಾಡುವ ಪ್ರಸಂಗದಲ್ಲಿ ಮಹಾದೇವನ ಮೇಲೆ ಬಾಣಪ್ರಯೋಗಮಾಡಿ ಅವನಿಗೆ ನಿರಂತರ ಆಕಳಿಕೆಯ ಪ್ರವೃತ್ತಿ ಉಂಟಾಗುವಂತೆ ಮಾಡಿದುದು, ಬಾಣನ ಭುಜಗಳನ್ನು ಕತ್ತರಿಸಿ ಹಾಕಿದುದು, ಪ್ರಾಗ್ಜ್ಯೋತಿಷಪುರದ ನರಕಾಸುರನನ್ನು ಸಂಹರಿಸಿ ಅವನು ಸೆರೆಯಲ್ಲಿಟ್ಟಿದ್ದ ರಾಜಕನ್ಯೆಯರನ್ನು ಕರೆದುತಂದದ್ದು, ಶಿಶುಪಾಲ, ಪೌಂಡ್ರಕವಾಸುದೇವ, ಶಾಲ್ವ, ದುಷ್ಟನಾದ ದಂತವಕ್ತ್ರ, ಶಂಬರಾಸುರ, ದ್ವಿವಿದ, ಮೈಂದ, ಪೀಠ, ಮುರ, ಪಂಚಜನರೇ ಮುಂತಾದವರ ಬಲ-ಪೌರುಷ ಮತ್ತು ಅಂತಹ ಅತಿಶಯಬಲಶಾಲಿಗಳನ್ನೂ ಭಗವಂತನು ಸಂಹರಿಸಿದ್ದು, ತನ್ನ ಸುದರ್ಶನಚಕ್ರದಿಂದ ಕಾಶೀನಗರವನ್ನು ಸುಟ್ಟು ಹಾಕಿದ್ದು ಮತ್ತು ಮಹಾಭಾರತ ಯುದ್ಧದಲ್ಲಿ ಪಾಂಡವರನ್ನು ನೆಪಮಾಡಿ ಕೊಂಡು ಭೂಭಾರವನ್ನು ಬಹುಮಟ್ಟಿಗೆ ಪರಿಹಾರಮಾಡಿದ್ದು– ಎಂಬಿಷ್ಟು ವಿಷಯಗಳೂ ಹತ್ತನೆಯ ಸ್ಕಂಧದಲ್ಲಿ ವರ್ಣಿಸಲ್ಪಟ್ಟಿವೆ. (ಶ್ಲೋಕ ೨೭-೪೦)

ಹನ್ನೊಂದನೆಯ ಸ್ಕಂಧದಲ್ಲಿ ಭಗವಂತನು ಬ್ರಾಹ್ಮಣಶಾಪವನ್ನು ನೆಪವನ್ನಾಗಿ ಮಾಡಿಕೊಂಡು ಇಡೀ ಯದುಕುಲವನ್ನೇ ಸಂಹಾರಮಾಡಿದ ಪ್ರಸಂಗ ಮತ್ತು ಶ್ರೀಕೃಷ್ಣ-ಉದ್ಧವರ ಅದ್ಭುತವಾದ ಆಧ್ಯಾತ್ಮಿಕ ಸಂಭಾಷಣೆಗಳು ವರ್ಣಿತವಾಗಿವೆ. ಈ ಸಂವಾದದಲ್ಲಿ ಭಗವಂತನು ಉದ್ಧವನಿಗೆ ಸಂಪೂರ್ಣವಾದ ಆತ್ಮಜ್ಞಾನವನ್ನೂ ಮತ್ತು ಧರ್ಮನಿರ್ಣಯವನ್ನೂ ಉಪದೇಶಮಾಡಿದ ವಿಷಯವು ಮನವರಿಕೆ ಮಾಡಲ್ಪಟ್ಟಿದೆ. ಮತ್ತು ಕಟ್ಟಕಡೆಗೆ ಶ್ರೀಕೃಷ್ಣಪರಮಾತ್ಮನು ತನ್ನ ಆತ್ಮಯೋಗದ ಪ್ರಭಾವದಿಂದ ಮನುಷ್ಯಲೋಕವನ್ನು ಬಿಟ್ಟು ಪರಂಧಾಮವನ್ನು ಸೇರಿಕೊಂಡ ವಿಷಯವು ಚಿತ್ರಿತವಾಗಿದೆ.

ಕಡೆಯದಾದ ಹನ್ನೆರಡನೆಯ ಸ್ಕಂಧದಲ್ಲಿ ಯುಗಗಳ ಲಕ್ಷಣಗಳನ್ನೂ ಮತ್ತು ಆಯಾ ಯುಗಗಳಲ್ಲಿ ವಾಸಿಸುವ ಜನರ ವ್ಯವಹಾರಗಳನ್ನೂ ವರ್ಣನೆ ಮಾಡಿದೆ ಮತ್ತು ಕಲಿಯುಗದಲ್ಲಿ ಮನುಷ್ಯರ ವೃತ್ತಿ ಹೇಗಿರುತ್ತದೆ? ಗತಿ ಹೇಗಿರುತ್ತದೆ? ಎಂಬುದರ ವಿವರಣೆಯನ್ನೂ, ನಾಲ್ಕು ಬಗೆಯ ಪ್ರಳಯ ಮತ್ತು ಮೂರು ಬಗೆಯ ಉತ್ಪತ್ತಿಗಳ ವರ್ಣನೆಯನ್ನೂ ಕಾಣುತ್ತೇವೆ. ಅನಂತರ ಜ್ಞಾನಿಶ್ರೇಷ್ಠನಾದ ರಾಜರ್ಷಿ ವಿಷ್ಣುರಾತ ಪರೀಕ್ಷಿದ್ರಾಜನು ದೇಹ ತ್ಯಾಗಮಾಡಿ ಪರಂಧಾಮವನ್ನು ಹೊಂದಿದ ವಿಷಯವನ್ನು ವರ್ಣಿಸಿದೆ. ಆಮೇಲೆ ವೇದಗಳ ಶಾಖಾವಿಭಾಗದ ವಿಷಯವು ನಿರೂಪಿತವಾಗಿದೆ. ಮಾರ್ಕಂಡೇಯಮಹರ್ಷಿಯ ಸುಂದರವಾದ ಕಥೆಯನ್ನೂ ಮತ್ತು ಭಗವಂತನ ಅಂಗೋಪಾಂಗಗಳ ಮತ್ತು ದಿವ್ಯಾಯುಧ ಭೂಷಣಗಳ ತಾತ್ತ್ವಿಕವ್ಯಾಖ್ಯಾನವನ್ನೂ ಹೇಳಿ ವಿಶ್ವಾತ್ಮಕನಾದ ಸೂರ್ಯನಾರಾಯಣ ಭಗವಂತನ ಗಣಗಳ ವರ್ಣನೆಯನ್ನು ಕಟ್ಟಕಡೆಯಲ್ಲಿ ಮಾಡಿದೆ.

ಎಲೈ ದ್ವಿಜಶ್ರೇಷ್ಠರೇ! ನೀವು ಯಾವ ಯಾವ ವಿಷಯಗಳನ್ನು ಕುರಿತು ಪ್ರಶ್ನಿಸಿದಿರೋ ಅವೆಲ್ಲಕ್ಕೂ ಉತ್ತರವನ್ನು ನೀಡಿದ್ದೇನೆ. ಮುಖ್ಯವಾಗಿ ಶ್ರೀಹರಿಯು ಲೀಲೆಗಾಗಿ ಕೈಗೊಂಡ ಅವತಾರಚರಿತ್ರಗಳೆಲ್ಲವನ್ನೂ ಸಂಪೂರ್ಣವಾಗಿ ವರ್ಣಿಸಿದ್ದೇನೆ. (ಶ್ಲೋಕ ೪೧-೪೫)

ಪತಿತಃ ಸ್ಖಲಿತಶ್ಚಾರ್ತಃ ಕ್ಷುತ್ತ್ವಾ ವಾ ವಿವಶೋ ಬ್ರುವನ್ ।
ಹರಯೇ ನಮ ಇತ್ಯುಚ್ಚೈರ್ಮುಚ್ಯತೇ ಸರ್ವಪಾತಕಾತ್ ॥೪೬॥

ಮನುಷ್ಯನು ಅಕಸ್ಮಾತ್ತಾಗಿ ಕೆಳಗೆ ಬಿದ್ದ ಸಮಯದಲ್ಲಾಗಲೀ, ಜಾರಿದಾಗಲೇ ಆಗಲೀ, ಎಡವಿದಾಗಲೇ ಆಗಲೀ, ಸೀನುವಾಗ ಅಥವಾ ಕೆಮ್ಮುವಾಗಲೇ ಆಗಲೀ–ಮೈಮರೆತಾದರೂ 'ಹರಯೇ ನಮಃ' (ಶ್ರೀಹರಿಗೆ ನಮಸ್ಕಾರವು) ಎಂದು ಗಟ್ಟಿಯಾಗಿ ಕೂಗಿದ ಪಕ್ಷದಲ್ಲಿ ಆತನು ಎಲ್ಲ ಪಾತಕಗಳಿಂದಲೂ ಬಿಡುಗಡೆ ಹೊಂದುತ್ತಾನೆ.

ಸಙ್ಕೀರ್ತ್ಯಮಾನೋ ಭಗವಾನನನ್ತಃ
ಶ್ರುತಾನುಭಾವೋ ವ್ಯಸನಂ ಹಿ ಪುಂಸಾಮ್ ।
ಪ್ರವಿಶ್ಯ ಚಿತ್ತಂ ವಿಧುನೋತ್ಯಶೇಷಂ
ಯಥಾ ತಮೋಽರ್ಕೋಽಭ್ರಮಿವಾತಿವಾತಃ ॥೪೭॥

ಭಗವಂತನಾದ ಅನಂತನ ನಾಮ-ರೂಪ-ಗುಣ-ಮಹಿಮಾದಿಗಳನ್ನು ಯಾರು ಕೀರ್ತನಮಾಡುತ್ತಾರೆಯೋ ಅಥವಾ ಆತನ ಮಹಾಮಹಿಮೆಯನ್ನು ಯಾರು ಕೇಳುತ್ತಾರೆಯೋ ಅವರ ಹೃದಯವನ್ನು ಆತನು ಹೊಕ್ಕು ಅವರ ಸಮಸ್ತವ್ಯಸನವನ್ನೂ ಕೊಡವಿಹಾಕಿಬಿಡುತ್ತಾನೆ. ಸೂರ್ಯನು ಕತ್ತಲೆಯನ್ನು ಓಡಿಸುವಂತೆಯೂ ಬಿರುಗಾಳಿಯು ಮೋಡವನ್ನು ಚದುರಿಸಿ ಹಾಕುವಂತೆಯೂ ಭಗವಂತನು ಅವರ ಎಲ್ಲ ದುಃಖಗಳನ್ನೂ ಧ್ವಂಸಮಾಡಿಬಿಡುತ್ತಾನೆ.

ಮೃಷಾಗಿರಸ್ತಾ ಹ್ಯಸತೀರಸತ್ಕಥಾ
ನ ಕಥ್ಯತೇ ಯದ್ಭಗವಾನಧೋಕ್ಷಜಃ ।
ತದೇವ ಸತ್ಯಂ ತದುಹೈವ ಮಙ್ಗಲಂ
ತದೇವ ಪುಣ್ಯಂ ಭಗವದ್ಗುಣೋದಯಮ್ ॥೪೮॥

ಭಗವಂತನಾದ ಅಧೋಕ್ಷಜನನ್ನು (ಇಂದ್ರಿಯಾತೀತನಾದ ನಾರಾಯಣನನ್ನು) ಹೇಳದೇ ಇರುವ ವಾಣಿಯು ಎಷ್ಟೇ ಪ್ರಸಿದ್ಧವಾಗಿದ್ದರೂ ನಿರರ್ಥಕವು ; ಸಾರಹೀನವು ; ಅಸದ್ವಿಷಯವಾದ ವಾಣಿಯು. ಭಗವಂತನ ಗುಣಗಳಿಂದ ಪರಿಪೂರ್ಣವಾದ ಯಾವ ವಾಣಿಯುಂಟೋ ಅದೇ ಸತ್ಯ ವಾಣಿಯು. ಅದೇ ಮಂಗಳವಾಣಿಯು.

ತದೇವ ರಮ್ಯಂ ರುಚಿರಂ ನವಂ ನವಂ
ತದೇವ ಶಶ್ವನ್ಮನಸೋ ಮಹೋತ್ಸವಮ್ ।
ತದೇವ ಶೋಕಾರ್ಣವಶೋಷಣಂ ನೃಣಾಂ
ಯದುತ್ತಮಶ್ಲೋಕಯಶೋಽನುಗೀಯತೇ ॥೪೯॥

ಯಾವ ವಚನದಿಂದ ಪುಣ್ಯಕೀರ್ತಿಯಾದ ಭಗವಂತನ ಕೀರ್ತಿಯು ಹಾಡಲ್ಪಡುತ್ತದೆಯೋ ಅದೇ ರಮಣೀಯವೂ ರುಚಿಕರವೂ ನಿತ್ಯನೂತನವೂ ಆದ ವಾಣಿಯು ; ನಿತ್ಯನಿರಂತರವಾಗಿ ಮನಸ್ಸಿಗೆ ಆನಂದವನ್ನುಂಟುಮಾಡುವ ವಾಣಿಯು ; ಮನುಷ್ಯರ ಶೋಕದ ಕಡಲನ್ನು ಶೋಷಣಮಾಡುವ ವಾಣಿಯು.

ನ ತದ್ವಚಶ್ಚಿತ್ರಪದಂ ಹರೇರ್ಯಶೋ
ಜಗತ್ಪವಿತ್ರಂ ಪ್ರಗೃಣೀತ ಕರ್ಹಿಚಿತ್ ।

ತದ್ಧ್ವಾಂಕ್ಷತೀರ್ಥಂ ನ ತು ಹಂಸಸೇವಿತಂ
ಯತ್ರಾಚ್ಯುತಸ್ತತ್ರ ಹಿ ಸಾಧವೋಽಮಲಾಃ ॥೫೦॥

ಜಗತ್ತನ್ನು ಪಾವನಗೊಳಿಸುವ ಶ್ರೀಹರಿಯ ಕೀರ್ತಿಯನ್ನು ಕೊಂಡಾಡದೇ ಇರುವ ಕಾವ್ಯವು (ರಸಭಾವಾಲಂಕಾರಾದಿಗಳಿಂದ ತುಂಬಿ) ಎಷ್ಟೇ ಚಿತ್ರಪದಗಳಿಂದ ಅಲಂಕೃತವಾಗಿದ್ದರೂ ಕಾಗೆಗಳು ಮುಳುಗುವ ಕೆಸರು ಕೊಚ್ಚೆಯ ನೀರಿಗೆ ಸಮಾನವಾಗುವುದು ; ಹಂಸಪಕ್ಷಿಗಳಿಂದಲೂ ಪರಮಹಂಸಭಕ್ತರಿಂದಲೂ ಸೇವಿತವಾದ ತೀರ್ಥಕ್ಕೆ ಸದೃಶವಾಗುವುದಿಲ್ಲ. ಜ್ಞಾನಿಗಳು ಅದನ್ನು ಮುಟ್ಟುವುದಿಲ್ಲ. ಅಚ್ಯುತನು ಇರುವೆಡೆಯಲ್ಲಿ ಮಾತ್ರವೇ ನಿರ್ಮಲಮನಸ್ಕರಾದ ಸಾಧುಗಳು ರಮಿಸುವರು.

ಸ ವಾಗ್ವಿಸರ್ಗೋ ಜನತಾಘಸಂಪ್ಲವೋ
ಯಸ್ಮಿನ್ಪ್ರತಿಶ್ಲೋಕಮಬದ್ಧವತ್ಯಪಿ ।
ನಾಮಾನ್ಯನನ್ತಸ್ಯ ಯಶೋಽಙ್ಕಿತಾನಿ ಯ-
ಚ್ಛೃಣ್ವನ್ತಿ ಗಾಯನ್ತಿ ಗೃಣನ್ತಿ ಸಾಧವ ॥೫೧॥

ಹಾಗೆಯೇ ಯಾವುದಾದರೂ ಕಾವ್ಯದಲ್ಲಿ ಪ್ರತಿಯೊಂದು ಶ್ಲೋಕದಲ್ಲೂ ಅಪದ್ಧವು ತುಂಬಿದ್ದರೂ, ಕಾವ್ಯದೋಷ– ವ್ಯಾಕರಣದೋಷಾದಿಗಳು ಹೇರಳವಾಗಿದ್ದರೂ, ಅದು ಶ್ರೀಭಗವಂತನ ದಿವ್ಯನಾಮಗಳಿಂದ ಅಂಕಿತವಾಗಿದ್ದ ಪಕ್ಷದಲ್ಲಿ ಸರ್ವಜನರ ಪಾಪಗಳನ್ನೂ ಪರಿಹಾರಮಾಡುತ್ತದೆ. ಸತ್ಪುರುಷರು ಆ ಭಗವನ್ಮಯವಾದ ವಾಣಿಯನ್ನೇ ಹಾಡುತ್ತಾರೆ ಮತ್ತು ಕೇಳುತ್ತಾರೆ.

ನೈಷ್ಕರ್ಮ್ಯಮಪ್ಯಚ್ಯುತಭಾವವರ್ಜಿತಂ
ನ ಶೋಭತೇ ಜ್ಞಾನಮಲಂ ನಿರಞ್ಜನಮ್ ।
ಕುತಃ ಪುನಃ ಶಶ್ವದಭದ್ರಮೀಶ್ವರೇ
ನ ಹ್ಯರ್ಪಿತಂ ಕರ್ಮ ಯದಪ್ಯನುತ್ತಮಮ್ ॥೫೨॥

ಮೋಕ್ಷಪ್ರಾಪ್ತಿಗೆ ಕಾರಣವಾದ ಶುದ್ಧಜ್ಞಾನವೂ ಕೂಡ, ಭಗವದ್ಭಕ್ತಿಯಿಂದ ರಹಿತವಾಗಿದ್ದರೆ ಚೆನ್ನಾಗಿ ಶೋಭಿಸಲಾರದು. ಹಾಗೆಯೇ ಭಗವಂತನಲ್ಲಿ ಭಕ್ತಿಯಿಲ್ಲದ ಜ್ಞಾನಯೋಗವೂ ಕೂಡ ಶೋಭಿಸುವುದಿಲ್ಲ. ಭಗವಂತನಿಗೆ ಸಮರ್ಪಣೆಮಾಡಲ್ಪಡದೇ ಇರುವ ಕರ್ಮವು ಎಷ್ಟೇ ಉಚ್ಚವಾಗಿದ್ದರೂ

ಅಮಂಗಲಕರ, ದುಃಖಕರವಾಗುವುದು. ಶೋಭನವಾಗುವುದಿಲ್ಲ. ರಮಣೀಯವಾಗುವುದಿಲ್ಲ.

ಯಶಃಶ್ರಿಯಾಮೇವ ಪರಿಶ್ರಮಃ ಪರೋ
ವರ್ಣಾಶ್ರಮಾಚಾರತಪಃಶ್ರುತಾದಿಷು ।
ಅವಿಸ್ಮೃತಿಃ ಶ್ರೀಧರಪಾದಪದ್ಮಯೋ-
ರ್ಗುಣಾನುವಾದಶ್ರವಣಾದಿಭಿರ್ಹರೇಃ ॥೫೩॥

ವರ್ಣಾಶ್ರಮಗಳಿಗೆ ಅನುಕೂಲವಾದ ಆಚಾರಧರ್ಮಗಳು, ತಪಸ್ಸು ಅಧ್ಯಯನ ಮುಂತಾದುವುಗಳಿಗಾಗಿ ಪಡುವ ಶ್ರಮಕ್ಕೆ ಪ್ರತಿಫಲವಾದರೂ ಏನು? ಕೀರ್ತಿ ಮತ್ತು ಸಂಪತ್ತುಗಳು. ಇವು ಕ್ಷಣಭಂಗುರವಾದುವುಗಳು. ಆದರೆ ಶ್ರೀಭಗವಂತನ ಗುಣ, ಲೀಲೆ, ದಿವ್ಯನಾಮಗಳ ಶ್ರವಣ-ಕೀರ್ತನೆಗಳನ್ನು ಮಾಡಿದರೆ ಆತನ ಅಡಿದಾವರೆಗಳಲ್ಲಿ ನಿಶ್ಚಲವಾದ ಸ್ಮೃತಿಯುಂಟಾಗುವುದು.

ಅವಿಸ್ಮೃತಿಃ ಕೃಷ್ಣಪದಾರವಿನ್ದಯೋಃ
ಕ್ಷಿಣೋತ್ಯಭದ್ರಾಣಿ ಶಮಂ ತನೋತಿ ಚ ।
ಸತ್ತ್ವಸ್ಯ ಶುದ್ಧಿಂ ಪರಮಾತ್ಮಭಕ್ತಿಂ
ಜ್ಞಾನಂ ಚ ವಿಜ್ಞಾನವಿರಾಗಯುಕ್ತಮ್ ॥೫೪॥

ಹಾಗೆ ಶ್ರೀಕೃಷ್ಣನ ಅಡಿದಾವರೆಗಳ ನಿಶ್ಚಲವಾದ ಸ್ಮೃತಿಯುಂಟಾದರೆ ಅದರಿಂದ ನಿತ್ಯನಿರವದ್ಯಫಲವುಂಟಾಗುವುದು. ಅದು ಪಾಪ-ತಾಪ-ಅಮಂಗಲಗಳನ್ನು ತೊಡೆದುಹಾಕುವುದು. ಪರಮಶಾಂತಿಯನ್ನು ವಿಸ್ತರಿಸುವುದು. ಅಂತಃಕರಣವನ್ನು ಶುದ್ಧಿಮಾಡುವುದು. ಪರಮಾತ್ಮನಲ್ಲಿ ಭಕ್ತಿಯನ್ನೂ ಜ್ಞಾನ-ವಿಜ್ಞಾನ-ವೈರಾಗ್ಯಗಳನ್ನೂ ಬೆಳಗಿಸುವುದು.

ಎಲೈ ಬ್ರಾಹ್ಮಣಶ್ರೇಷ್ಠರೇ! ಋಷಿವರ್ಯರೇ! ನೀವು ಧನ್ಯರು, ಕಡುಧನ್ಯರು, ಭಾಗ್ಯವಂತರು. ಏಕೆಂದರೆ: ನೀವು ಸರ್ವಾಂತರ್ಯಾಮಿಯೂ, ಸರ್ವಾತ್ಮನೂ, ಸರ್ವಶಕ್ತನೂ, ಆದಿದೇವನೂ, ಎಲ್ಲರಿಗೂ ಆರಾಧ್ಯದೇವನಾಗಿ ಬೇರಾರನ್ನೂ ಆರಾಧಿಸದೇ ಇರುವವನೂ ಆದ ನಾರಾಯಣನನ್ನು ನಿಮ್ಮ ಹೃದಯದಲ್ಲಿರಿಸಿಕೊಂಡು ನಿರಂತರ ಭಕ್ತಿಭಾವದಿಂದ ಭಜಿಸುತ್ತಿದ್ದೀರಿ. ಮಹಾತ್ಮನಾದ ಪರೀಕ್ಷಿದ್ರಾಜನು ಪ್ರಾಯೋಪವೇಶವ್ರತವನ್ನು ಕೈಗೊಂಡು

ಋಷಿವರ್ಯರಿಂದಲೂ, ಭಾಗವತಶ್ರೇಷ್ಠರಿಂದಲೂ ಭರಿತವಾಗಿದ್ದ ದೊಡ್ಡ ಸಭೆಯಲ್ಲಿ ಪರಮಯೋಗೀಶ್ವರರಾದ ಶುಕಮಹರ್ಷಿಗಳ ಮುಖಾರವಿಂದ ದಿಂದ ಬರುತ್ತಿದ್ದ ಜ್ಞಾನಾಮೃತವನ್ನು ಪಾನಮಾಡುತ್ತಿದ್ದ ಸಮಯದಲ್ಲಿ ನಾನೂ ಅಲ್ಲಿದ್ದು ಆ ಶುಕಮಹರ್ಷಿಗಳ ಮುಖಾರ ವಿಂದದಿಂದಲೇ ಆತ್ಮತತ್ತ್ವವನ್ನು ಶ್ರವಣಮಾಡಿದೆನು. ನೀವು ಆತ್ಮತತ್ತ್ವಪ್ರಕಾಶಕವಾದ ಆ ಶ್ರೀಮದ್ಭಾಗವತದ ಕಥೆ-ತತ್ತ್ವಗಳನ್ನು ನನಗೆ ನೆನಪಿಸಿ ಅದನ್ನು ನಾನು ನಿಮಗೆ ಹೇಳುವಂತೆ ಮಾಡಿದಿರಿ. ಇದರಿಂದ ನಾನು ಕೃತಾರ್ಥನಾದೆನು.

ಎಲೈ ಮಹರ್ಷಿಗಳೇ! ಭಗವಂತನಾದ ವಾಸುದೇವನ ಕರ್ಮಗಳೆಲ್ಲವೂ ಶ್ರವಣ-ಕೀರ್ತನೆಗಳಿಗೆ ಅತ್ಯಂತ ಯೋಗ್ಯವಾದುವು. ಆತನ ಮಾಹಾತ್ಮ್ಯವು ಎಲ್ಲ ಅಶುಭಗಳನ್ನೂ ತೊಳೆದುಹಾಕುವುದು. ಶ್ರೀಭಗವಂತನ ಅಂತಹ ಮಾಹಾತ್ಮ್ಯವನ್ನು ನಿಮಗೆ ವರ್ಣಿಸಿದ್ದೇನೆ. ಯಾವನು ಏಕಾಗ್ರವಾದ ಮನಸ್ಸಿನಿಂದ ಒಂದು ಯಾಮದ ಕಾಲದವರೆಗಾಗಲೀ ಅಥವಾ ಒಂದು ಕ್ಷಣ ಕಾಲವೇ ಆಗಲೀ ಇದನ್ನು ಕೀರ್ತನೆಮಾಡುತ್ತಾನೆಯೋ ಮತ್ತು ಶ್ರದ್ಧೆ ಯಿಂದ ಇದನ್ನು ಕೇಳುತ್ತಾನೆಯೋ–ಆತನು ತನ್ನ ದೇಹ-ಮನಸ್ಸುಗಳಲ್ಲಿ ಸಂಪೂರ್ಣಶುದ್ಧಿಯನ್ನು ಹೊಂದುವನು. ದ್ವಾದಶಿಯ ದಿವಸದಲ್ಲಿ ಅಥವಾ ಏಕಾದಶಿಯ ದಿನದಲ್ಲಿ ಇದನ್ನು ಕೇಳುವವನು ಆಯುಷ್ಮಂತನಾಗುವನು. ಸಂಯಮದೊಡನೆ ಯಾವನು ಉಪವಾಸಮಾಡಿ ಇದನ್ನು ಪಾರಾಯಣ ಮಾಡುತ್ತಾನೆಯೋ ಆತನ ಎಲ್ಲ ಪಾತಕಗಳೂ ತೊಳೆದುಹೋಗುತ್ತವೆ. ಪುಷ್ಕರಕ್ಷೇತ್ರದಲ್ಲಾಗಲೀ, ಮಥುರೆಯಲ್ಲಾಗಲೀ, ದ್ವಾರಕೆಯಲ್ಲಾಗಲೀ ಸಂಯಮದಿಂದ ಕೂಡಿ ಉಪವಾಸದಲ್ಲಿದ್ದು ಈ ಭಾಗವತಸಂಹಿತೆಯನ್ನು ಪಾರಾಯಣಮಾಡಿದವನಿಗೆ ಎಲ್ಲ ಭಯಗಳೂ ತೊಲಗಿಹೋಗುತ್ತವೆ. ಇದನ್ನು ಯಾವನು ಹೇಳುತ್ತಾನೆಯೋ, ಕೇಳುತ್ತಾನೆಯೋ ಮತ್ತು ಕೀರ್ತನೆಮಾಡುತ್ತಾನೆಯೋ ಆತನ ಕಾಮನೆಗಳನ್ನು ದೇವತೆಗಳೂ, ಮುನಿ ಗಳೂ, ಸಿದ್ಧರೂ, ಪಿತೃದೇವತೆಗಳೂ, ಮನುಗಳೂ ಮತ್ತು ರಾಜರ್ಷಿಗಳೂ ಈಡೇರಿಸುತ್ತಾರೆ. ಬ್ರಾಹ್ಮಣನು ಋಗ್ವೇದವನ್ನೂ, ಯಜುರ್ವೇದವನ್ನೂ, ಸಾಮವೇದವನ್ನೂ ಪಾರಾಯಣಮಾಡಿದರೆ ಆತನನ್ನು ಕುರಿತು ಜೇನುತುಪ್ಪ, ತುಪ್ಪ ಮತ್ತು ಹಾಲಿನ ನದಿಗಳು ಹರಿದುಬರುತ್ತವೆ. ಸಕಲಸಮೃದ್ಧಿಯೂ

ಆತನಿಗೆ ಉಂಟಾಗುತ್ತದೆ. ಶ್ರೀಮದ್ಭಾಗವತವನ್ನು ಪಾರಾಯಣಮಾಡುವುದರಿಂದಲೂ ಅದೇ ಫಲವು ದೊರೆಯುತ್ತದೆ. ಸಂಯಮಪೂರ್ವಕವಾಗಿ ಈ ಭಾಗವತಸಂಹಿತೆಯನ್ನು ಅಧ್ಯಯನಮಾಡುವವನು ಶ್ರೀಭಗವಂತನಿಂದಲೇ ವರ್ಣಿಸಲ್ಪಟ್ಟಿರುವ ಪರಮಪದವನ್ನು ಪಡೆಯುತ್ತಾನೆ. ಇದನ್ನು ಪಠಿಸುವುದರಿಂದ ಬ್ರಾಹ್ಮಣರು ಪ್ರಜ್ಞಾವಂತರಾಗುವರು. ತತ್ತ್ವಜ್ಞಾನವನ್ನುಂಟುಮಾಡುವ ಋತಂಭರಾ ಎಂಬ ಬುದ್ಧಿಯನ್ನು ಪಡೆಯುವರು. ಕ್ಷತ್ರಿಯರಿಗೆ ಸಮುದ್ರಪರ್ಯಂತವಾದ ಭೂಮಂಡಲದ ರಾಜ್ಯವು ದೊರೆಯುವುದು. ವೈಶ್ಯನು ಐಶ್ವರ್ಯನಿಧಿಗಳಿಗೆ ಅಧಿಪತಿಯಾಗುವನು ಮತ್ತು ಶೂದ್ರನಿಗೆ ಪಾಪಪರಿಹಾರವಾಗುವುದು. ಕಲಿದೋಷಗಳನ್ನು ನೀಗಿಸುವ ಸರ್ವೇಶ್ವರನಾದ ಶ್ರೀಹರಿಯ ಚರಿತ್ರ-ಗುಣ-ಶೀಲಾದಿಗಳು ಇತರ ಪುರಾಣಗಳಲ್ಲಾಗಲೀ, ಇತಿಹಾಸದಲ್ಲಾಗಲೀ ಇಲ್ಲಿ ಹೇಳಿರುವಷ್ಟು ಹೆಚ್ಚಾಗಿ ಹೇಳಲ್ಪಟ್ಟಿಲ್ಲ. ಇದರಲ್ಲಾದರೋ ಪ್ರತಿಯೊಂದು ಕಥಾಪ್ರಸಂಗದಲ್ಲಿಯೂ, ಪ್ರತಿಯೊಂದು ಪದಗಳಲ್ಲಿಯೂ ಸರ್ವಾತ್ಮಕನಾದ ಆ ಭಗವಂತನ ವರ್ಣನೆಯನ್ನೇ ನೋಡುತ್ತೇವೆ. ಆ ಸ್ವಾಮಿ ಅಚ್ಯುತನಾದರೋ ಹುಟ್ಟು-ಸಾವುಗಳೇ ಮುಂತಾದ ಯಾವ ವಿಕಾರವೂ ಇಲ್ಲದ ಅಂತರಹಿತವಾದ ಆತ್ಮತತ್ತ್ವವು. ದೇಶ-ಕಾಲಾದಿ ಪರಿಚ್ಛೇದಗಳಿಲ್ಲದವನು. ಜಗತ್ತಿನ ಸೃಷ್ಟಿ-ಸ್ಥಿತಿ ಮತ್ತು ಲಯಗಳನ್ನು ಮಾಡುವ ಶಕ್ತಿಗಳೂ ಆತನಿಗೆ ಸ್ವರೂಪದಿಂದಲೇ ಸಿದ್ಧವಾಗಿವೆ. ಬ್ರಹ್ಮ, ರುದ್ರ, ಇಂದ್ರನೇ ಮುಂತಾದ ಲೋಕಪಾಲಕರೂ ಆತನನ್ನು ಲೇಶಮಾತ್ರವೂ ಅರಿಯರು. ಅಂತಹ ಏಕರಸನಾದ ಸಚ್ಚಿದಾನಂದಸ್ವರೂಪನಾದ ಸ್ವಾಮಿಪರಮಾತ್ಮನಿಗೆ ನನ್ನ ಭಕ್ತಿಪೂರ್ವಕವಾದ ನಮನಗಳು. ಆ ದೇವದೇವನು ತನಗೆ ಸ್ವಾಭಾವಿಕವಾಗಿಯೇ ಇರುವ ಕಾಲ, ಪ್ರಕೃತಿ, ಮಹತ್ತು, ಅಹಂಕಾರ ಮತ್ತು ಪಂಚಭೂತಗಳೆಂಬ ತನ್ನ ಒಂಭತ್ತು ಬಗೆಯ ಶಕ್ತಿಗಳಿಂದ ಈ ಸ್ಥಾವರ-ಜಂಗಮಾತ್ಮಕವಾದ ಜಗತ್ತನ್ನು ಸಂಕಲ್ಪಮಾತ್ರದಿಂದ ಸೃಷ್ಟಿಸಿದ್ದಾನೆ. ಅದಕ್ಕೆ ಆಧಾರ ಭೂತನೂ ಆತನೇ ಆಗಿದ್ದಾನೆ. ಅವನ ಪರಮಪದವು ಕೇವಲ ಅನುಭೂತಿ ಸ್ವರೂಪವಾದುದು. ಇಂತಹ ದೇವತೆಗಳಿಗೆಲ್ಲಾ ಆರಾಧ್ಯನಾಗಿರುವ, ಸನಾತನನಾಗಿರುವ, ಶ್ರೀಭಗವಂತನ ಶ್ರೀಚರಣಗಳಿಗೆ ಮತ್ತೆ ಮತ್ತೆ

ನಮಸ್ಕಾರಗಳು. ಭಗವಂತರಾದ ಶ್ರೀಶುಕಮಹರ್ಷಿಗಳು ಸದಾ ಪರಮಾತ್ಮಾನಂದದಲ್ಲಿಯೇ ಮುಳುಗಿರುವವರು. ಈ ಆನಂದಾನುಭವದಿಂದ ಎಲ್ಲ ಭೇದ ದೃಷ್ಟಿಯನ್ನೂ ನೀಗಿದವರು. ಹೀಗಿದ್ದರೂ ಮುರಳೀಮನೋಹರನ ದಿವ್ಯ ಲೀಲೆಗಳು ಅವರ ಎಲ್ಲ ವೃತ್ತಿಗಳನ್ನೂ ಆಕರ್ಷಿಸಿ ತಮ್ಮಲ್ಲಿ ಲಯಗೊಳಿಸಿ ಕೊಂಡುಬಿಟ್ಟುವು. ಇಂತಹ ಜ್ಞಾನ-ಭಕ್ತಿನಿಧಿಗಳಾದ ಆ ಮಹಾನುಭಾವರು ಜಗತ್ತಿನ ಪ್ರಾಣಿಗಳ ಮೇಲೆ ದಯೆತೋರಿ ತತ್ತ್ವದೀಪವಾಗಿರುವ ಈ ಮಹಾಪುರಾಣವನ್ನು ವಿಸ್ತರಗೊಳಿಸಿದರು. ಇಂತಹ ಸರ್ವಪಾಪಭಂಜನರಾದ ವ್ಯಾಸಪುತ್ರರಾದ ಭಗವಾನ್ ಶುಕಮಹರ್ಷಿಗಳ ಪಾದಾರವಿಂದಗಳಿಗೆ ನಮಸ್ಕಾರಮಾಡುತ್ತೇನೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ದ್ವಾದಶಸ್ಕಂಧದ ೧೨ನೆಯ ಅಧ್ಯಾಯವು ಮುಗಿಯಿತು.

ದ್ವಾದಶಸ್ಕಂಧ ೧೩ನೆಯ ಅಧ್ಯಾಯ

ಪುರಾಣಗಳ ಶ್ಲೋಕಸಂಖ್ಯೆ ಮತ್ತು ಶ್ರೀಮದ್ಭಾಗವತದ ಮಹಿಮೆ

ಸೂತಪುರಾಣಿಕರು ಪರಮಾತ್ಮನನ್ನು ಸ್ತುತಿಸಿ ತಮ್ಮ ಪ್ರವಚನದ ಉಪಸಂಹಾರಮಾಡುತ್ತಿದ್ದಾರೆ :

ಯಂ ಬ್ರಹ್ಮಾ ವರುಣೇನ್ದ್ರರುದ್ರಮರುತಃ
ಸ್ತುನ್ವನ್ತಿ ದಿವ್ಯೈಃ ಸ್ತವೈ-
ರ್ವೇದೈಃ ಸಾಙ್ಗಪದಕ್ರಮೋಪನಿಷದೈ-
ರ್ಗಾಯನ್ತಿ ಯಂ ಸಾಮಗಾಃ ।
ಧ್ಯಾನಾವಸ್ಥಿತತದ್ಗತೇನ ಮನಸಾ
ಪಶ್ಯನ್ತಿ ಯಂ ಯೋಗಿನೋ
ಯಸ್ಯಾನ್ತಂ ನ ವಿದುಃ ಸುರಾಸುರಗಣಾ
ದೇವಾಯ ತಸ್ಮೈ ನಮಃ ॥೧॥

"ಯಾವನನ್ನು ಮಹಾದೇವತೆಗಳಾದ ಬ್ರಹ್ಮನೂ, ವರುಣನೂ, ಇಂದ್ರನೂ, ರುದ್ರರೂ ಮತ್ತು ಮರುದ್ದೇವತೆಗಳೂ ದಿವ್ಯವಾದ ಸ್ತೋತ್ರಗಳಿಂದ ಸ್ತುತಿಸುತ್ತಾರೆಯೋ, ಸಾಮವೇದವನ್ನು ಬಲ್ಲ ಶ್ರೋತ್ರಿಯರು

ಯಾವನನ್ನು ಅಂಗಗಳಿಂದಲೂ, ಪದ-ಕ್ರಮಗಳಿಂದಲೂ ಮತ್ತು ಉಪನಿಷತ್ತುಗಳಿಂದಲೂ ಸಹಿತವಾದ ವೇದಗಳಿಂದ ಗಾನಮಾಡುತ್ತಾರೆಯೋ, ಯಾವನನ್ನು ಯೋಗಿಗಳು ಧ್ಯಾನದಲ್ಲಿ ನೆಲೆಸಿದ ತನ್ಮಯವಾದ ಮನಸ್ಸಿನಿಂದ ಸಾಕ್ಷಾತ್ಕರಿಸುತ್ತಾರೆಯೋ ಮತ್ತು ಯಾವನ ವಾಸ್ತವಿಕಸ್ವರೂಪವನ್ನು ದೇವತೆಗಳ ಮತ್ತು ಅಸುರರ ಗಣಗಳೂ ಅರಿಯಲಾರವೋ ಅಂತಹ ದೇವದೇವನಿಗೆ ನಮಸ್ಕಾರವು.

ಪೃಷ್ಠೇ ಭ್ರಾಮ್ಯದಮನ್ದಮನ್ದರಗಿರಿಗ್ರಾವಾಗ್ರಕಣ್ಡೂಯನಾ -
ನ್ನಿದ್ರಾಲೋಃ ಕಮಠಾಕೃತೇರ್ಭಗವತಃ ಶ್ವಾಸಾನಿಲಾಃ ಪಾನ್ತು ವಃ ।

ಯತ್ಸಂಸ್ಕಾರಕಲಾನುವರ್ತನವಶಾದ್ವೇಲಾನಿಭೇನಾಮ್ಭಸಾಂ
ಯಾತಾಯಾತಮತನ್ದ್ರಿತಂ ಜಲನಿಧೇರ್ನಾದ್ಯಾಪಿ ವಿಶ್ರಾಮ್ಯತಿ ॥೨॥

ಅಮೃತಪ್ರಾಪ್ತಿಗಾಗಿ ಪಾಲ್ಗಡಲನ್ನು ದೇವಾಸುರರು ಕಡೆದ ಸಂದರ್ಭದಲ್ಲಿ ಮಹತ್ತಾದ ಮಂದರಗಿರಿಯು ತನ್ನ ಬೆನ್ನಿನಮೇಲೆ ಸುತ್ತುತ್ತಿರುವಾಗ ಅದರ ಬಂಡೆಗಳ ತುದಿಯ ಸ್ಪರ್ಶದಿಂದ ನವೆಯು ಹೋಗಿ ಯಾವನಿಗೆ ಸುಖನಿದ್ರೆಯುಂಟಾಯಿತೋ, ಆ ಕೂರ್ಮರೂಪಿಯಾದ ಭಗವಂತನ ಉಸಿರಾಟದ ವಾಯುವು ನಿಮ್ಮನ್ನು ಕಾಪಾಡಲಿ. ಆ ಉಸಿರಾಟದಿಂದ ಕಲಕಲ್ಪಟ್ಟ ಸಮುದ್ರವು ಆ ಸಂಸ್ಕಾರದಿಂದಲೋ ಎಂಬಂತೆ ಈಗಲೂ ಅಲೆಗಳೆಂಬ ನೆಪದಿಂದ ಹಿಂದಕ್ಕೂ ಮುಂದಕ್ಕೂ ತೂಗಾಡುತ್ತಿದೆ.

ಶೌನಕಮಹರ್ಷಿಗಳೇ! ಪುರಾಣಗಳ ಬೇರೆ-ಬೇರೆ ಶ್ಲೋಕಸಂಖ್ಯೆಯನ್ನೂ, ಮೊತ್ತದ ಶ್ಲೋಕಸಂಖ್ಯೆಯನ್ನೂ, ಶ್ರೀಮದ್ಭಾಗವತಪುರಾಣದ ಪ್ರತಿಪಾದ್ಯವಿಷಯವನ್ನೂ ಮತ್ತು ಅದರ ಪ್ರಯೋಜನವನ್ನೂ ಹೇಳುತ್ತೇನೆ. ಹಾಗೆಯೇ ಈ ಪುರಾಣವನ್ನು ದಾನಮಾಡುವ ಪದ್ಧತಿಯನ್ನೂ ದಾನ, ಪಾಠಗಳ ಮಹಿಮೆಯನ್ನೂ ಹೇಳುತ್ತೇನೆ, ಕೇಳಿರಿ :

ಬ್ರಹ್ಮಪುರಾಣದಲ್ಲಿ ಹತ್ತುಸಾವಿರ ಶ್ಲೋಕಗಳೂ, ಪದ್ಮಪುರಾಣದಲ್ಲಿ ಐವತ್ತೈದುಸಾವಿರ ಶ್ಲೋಕಗಳೂ, ಶ್ರೀಮದ್ವಿಷ್ಣುಪುರಾಣದಲ್ಲಿ ಇಪ್ಪತ್ತುಮೂರುಸಾವಿರ ಶ್ಲೋಕಗಳೂ ಮತ್ತು ಶಿವಪುರಾಣದಲ್ಲಿ ಇಪ್ಪತ್ತುನಾಲ್ಕು ಸಾವಿರಶ್ಲೋಕಗಳೂ ಕಂಡುಬರುತ್ತವೆ. ಶ್ರೀಮದ್ಭಾಗವತದಲ್ಲಿ ಹದಿನೆಂಟು ಸಾವಿರ, ನಾರದಪುರಾಣದಲ್ಲಿ ಇಪ್ಪತ್ತೈದುಸಾವಿರ, ಮಾರ್ಕಂಡೇಯಪುರಾಣ

ದಲ್ಲಿ ಒಂಭತ್ತುಸಾವಿರ ಮತ್ತು ಅಗ್ನಿಪುರಾಣದಲ್ಲಿ ಹದಿನೈದು ಸಾವಿರದ ನಾನೂರು ಶ್ಲೋಕಸಂಖ್ಯೆ ಇದೆ. ಭವಿಷ್ಯಪುರಾಣದ ಶ್ಲೋಕಸಂಖ್ಯೆ ಹದಿನಾಲ್ಕುಸಾವಿರದ ಐನೂರು. ಬ್ರಹ್ಮವೈವರ್ತಪುರಾಣದ ಶ್ಲೋಕಸಂಖ್ಯೆ ಹದಿನೆಂಟು ಸಾವಿರ ಮತ್ತು ಲಿಂಗಪುರಾಣದ ಶ್ಲೋಕಸಂಖ್ಯೆ ಹನ್ನೊಂದು ಸಾವಿರ. ವರಾಹಪುರಾಣದಲ್ಲಿ ಇಪ್ಪತ್ತನಾಲ್ಕುಸಾವಿರ ಶ್ಲೋಕಗಳೂ, ಸ್ಕಂದಪುರಾಣದಲ್ಲಿ ಎಂಭತ್ತೊಂದು ಸಾವಿರದ ನೂರು ಶ್ಲೋಕಗಳೂ, ವಾಮನ ಪುರಾಣದಲ್ಲಿ ಹತ್ತುಸಾವಿರ ಶ್ಲೋಕಗಳೂ, ಕೂರ್ಮಪುರಾಣದಲ್ಲಿ ಹದಿನೇಳು ಸಾವಿರ ಶ್ಲೋಕಗಳೂ, ಮತ್ಸ್ಯಪುರಾಣದಲ್ಲಿ ಹದಿನಾಲ್ಕುಸಾವಿರ ಶ್ಲೋಕಗಳೂ, ಗರುಡಪುರಾಣದಲ್ಲಿ ಹತ್ತೊಂಭತ್ತುಸಾವಿರ ಶ್ಲೋಕಗಳೂ ಮತ್ತು ಬ್ರಹ್ಮಾಂಡಪುರಾಣದಲ್ಲಿ ಹನ್ನೆರಡುಸಾವಿರ ಶ್ಲೋಕಗಳೂ ಕಂಡುಬರುತ್ತವೆ. ಹೀಗೆ ಎಲ್ಲ ಪುರಾಣಗಳೂ ಸೇರಿ ಶ್ಲೋಕಗಳ ಮೊತ್ತ ನಾಲ್ಕುಲಕ್ಷ ಶ್ಲೋಕಗಳಾಗುತ್ತದೆ. ಇವುಗಳಲ್ಲಿ ಹಿಂದೆ ಹೇಳಿದಂತೆ ಶ್ರೀಮದ್ಭಾಗವತವು ಹದಿನೆಂಟು ಸಾವಿರ ಶ್ಲೋಕಗಳನ್ನೊಳಗೊಂಡಿದೆ.

ಶೌನಕರೇ! ಈ ಶ್ರೀಮದ್ಭಾಗವತವನ್ನು ಮೊಟ್ಟಮೊದಲಿಗೆ ಉಪದೇಶಮಾಡಿದವನು ಭಗವಂತನಾದ ಮಹಾವಿಷ್ಣುವು. ಈ ಮಹಾ ಪ್ರಭುವು ತನ್ನ ನಾಭಿಕಮಲದಲ್ಲಿದ್ದ, ಸಂಸಾರಭಯಭೀತರಾಗಿದ್ದ, ಬ್ರಹ್ಮದೇವರಲ್ಲಿ ಕರುಣೆತೋರಿ ಇದನ್ನು ಅವರಿಗೆ ಪ್ರಕಾಶಪಡಿಸಿದನು. ಇದರ ಆರಂಭದಲ್ಲಿ ಮಧ್ಯದಲ್ಲಿ ಮತ್ತು ಕೊನೆಯಲ್ಲಿ ಎಲ್ಲೆಡೆಗಳಲ್ಲೂ ವೈರಾಗ್ಯವನ್ನುಂಟುಮಾಡುವ ಕಥೆಗಳು ಬೆಳಗುತ್ತಿವೆ. ಇಲ್ಲಿ ಬೆಳಗುತ್ತಿರುವ ಶ್ರೀಹರಿಯ ಲೀಲಾಕಥಾಸಮೂಹವು ಅಮೃತಸ್ವರೂಪವೇ ಆಗಿದ್ದು ಅದನ್ನು ಸೇವಿಸುವ ಸಜ್ಜನರಿಗೂ ಮತ್ತು ದೇವತೆಗಳಿಗೂ ಪರಮಾನಂದವನ್ನು ಉಂಟುಮಾಡುತ್ತದೆ. ಉಪನಿಷತ್ತುಗಳ ಸಾರವು ಬ್ರಹ್ಮ ಮತ್ತು ಆತ್ಮಗಳ ಏಕರೂಪವಾದ ಅದ್ವಿತೀಯ ಸದ್ವಸ್ತುವೇ ಆಗಿದೆ ಎಂಬುದು ನಿಮಗೆ ತಿಳಿದೇ ಇದೆ. ಶ್ರೀಮದ್ಭಾಗವತದಲ್ಲಿ ಪ್ರತಿಪಾದ್ಯವಿಷಯವೂ ಅದೇ ಆಗಿದೆ. ಇದನ್ನು ರಚಿಸಿದ್ದು ಮೋಕ್ಷಪ್ರಯೋಜನಕ್ಕಾಗಿಯೇ.

ಭಾದ್ರಪದಮಾಸದ ಪೂರ್ಣಿಮೆಯಂದು ಶ್ರೀಮದ್ಭಾಗವತವನ್ನು ಚಿನ್ನದ ಸಿಂಹಾಸನದಲ್ಲಿರಿಸಿ ಅದನ್ನು ದಾನಮಾಡುವವನಿಗೆ ಪರಮಗತಿಯೇ

ದೊರೆಯುವುದು. ಸತ್ಪುರುಷರ ಸಭೆಯಲ್ಲಿ ಈ ಸರ್ವಶ್ರೇಷ್ಠವಾದ ಶ್ರೀಮದ್ಭಾಗವತದ ದರ್ಶನವಾಗುವವರೆಗೆ ಮಾತ್ರ ಉಳಿದ ಪುರಾಣಗಳಿಗೆ ಶೋಭೆಯಿರುತ್ತದೆ. ಈ ಶ್ರೀಮದ್ಭಾಗವತವು ಸಮಸ್ತಉಪನಿಷತ್ತುಗಳ ಸಾರವಾಗಿದೆ. ಇದರ ರಸಾಮೃತವನ್ನು ಕುಡಿದು ತೃಪ್ತಿಪಡೆದವನು ಬೇರಾವ ಪುರಾಣಶಾಸ್ತ್ರಗಳಲ್ಲೂ ರಮಿಸುವುದಿಲ್ಲ.

ನಿಮ್ನಗಾನಾಂ ಯಥಾ ಗಙ್ಗಾ ದೇವಾನಾಮಚ್ಯುತೋ ಯಥಾ ।
ವೈಷ್ಣವಾನಾಂ ಯಥಾ ಶಮ್ಭುಃ ಪುರಾಣಾನಾಮಿದಂ ತಥಾ ॥೧೬॥

ಕ್ಷೇತ್ರಾಣಾಂ ಚೈವ ಸರ್ವೇಷಾಂ ಯಥಾ ಕಾಶೀ ಹ್ಯನುತ್ತಮಾ ।
ತಥಾ ಪುರಾಣವ್ರಾತಾನಾಂ ಶ್ರೀಮದ್ಭಾಗವತಂ ದ್ವಿಜಾ ॥೧೭॥

ನದಿಗಳಲ್ಲಿ ಗಂಗಾನದಿಯೂ, ದೇವತೆಗಳಲ್ಲಿ ಶ್ರೀಮನ್ನಾರಾಯಣನೂ, ವಿಷ್ಣುಭಕ್ತರಲ್ಲಿ ಶಂಭುವೂ ಹೇಗೆ ಶ್ರೇಷ್ಠರೋ ಹಾಗೆಯೇ ಪುರಾಣಗಳಲ್ಲಿ ಈ ಶ್ರೀಮದ್ಭಾಗವತವು ಸರ್ವಶ್ರೇಷ್ಠವು. ಸರ್ವಕ್ಷೇತ್ರಗಳಲ್ಲಿಯೂ ಹೇಗೆ ಕಾಶೀಕ್ಷೇತ್ರವು ಶ್ರೇಷ್ಠತಮವಾಗಿದೆಯೋ ಹಾಗೆಯೇ ಪುರಾಣಗಳ ಸಮೂಹದಲ್ಲಿ ಈ ಶ್ರೀಮದ್ಭಾಗವತವು ಸರ್ವಶ್ರೇಷ್ಠತಮವಾಗಿದೆ.

ಶ್ರೀಮದ್ಭಾಗವತಂ ಪುರಾಣಮಮಲಂ ಯದ್ವೈಷ್ಣವಾನಾಂ ಪ್ರಿಯಂ
ಯಸ್ಮಿನ್ಪಾರಮಹಂಸ್ಯಮೇಕಮಮಲಂ ಜ್ಞಾನಂ ಪರಂ ಗೀಯತೇ।
ತತ್ರ ಜ್ಞಾನವಿರಾಗಭಕ್ತಿಸಹಿತಂ ನೈಷ್ಕರ್ಮ್ಯಮಾವಿಷ್ಕೃತಂ
ತಚ್ಛೃಣ್ವನ್ವಿಪಠನ್ವಿಚಾರಣಪರೋ ಭಕ್ತ್ಯಾ ವಿಮುಚ್ಯೇನ್ನರ ॥೧೮॥

ಈ ಶ್ರೀಮದ್ಭಾಗವತವು ಅತ್ಯಂತ ಪರಿಶುದ್ಧವಾದ ಪುರಾಣವು. ಇದು ವೈಷ್ಣವರಿಗೆ ಅತ್ಯಂತಪ್ರಿಯವಾದ ಗ್ರಂಥವಾಗಿದೆ. ಪರಮಹಂಸರ ಯಾವ ಪರಿಶುದ್ಧತಮವಾದ ಪರಮಜ್ಞಾನವುಂಟೋ ಅದೇ ಇದರಲ್ಲಿ ಗಾನಮಾಡಲ್ಪಟ್ಟಿದೆ. ಜ್ಞಾನ-ವೈರಾಗ್ಯ-ಭಕ್ತಿಗಳಿಂದ ಕೂಡಿದ ನೈಷ್ಕರ್ಮ್ಯವನ್ನು ಅಂದರೆ ಕರ್ಮಗಳ ಆತ್ಯನ್ತಿಕ ನಿವೃತ್ತಿಯನ್ನು ಇದು ಪ್ರಕಾಶಪಡಿಸುತ್ತದೆ. ಇದನ್ನು ಕೇಳುವವನೂ, ಪಾರಾಯಣಮಾಡುವವನೂ ಮತ್ತು ಮನನಮಾಡುವವನೂ ಭಕ್ತಿಯನ್ನು ಪಡೆದು ಮೋಕ್ಷವನ್ನು ಹೊಂದುವನು.

ಕಸ್ಮೈ ಯೇನ ವಿಭಾಸಿತೋಽಯಮತುಲೋ ಜ್ಞಾನಪ್ರದೀಪಃ ಪುರಾ
ತದ್ರೂಪೇಣ ಚ ನಾರದಾಯ ಮುನಯೇ ಕೃಷ್ಣಾಯ ತದ್ರೂಪಿಣಾ ।
ಯೋಗೀನ್ದ್ರಾಯ ತದಾತ್ಮನಾಥ ಭಗವದ್ರಾತಾಯ ಕಾರುಣ್ಯತ–
ಸ್ತಚ್ಛುದ್ಧಂ ವಿಮಲಂ ವಿಶೋಕಮಮೃತಂ ಸತ್ಯಂ ಪರಂ ಧೀಮ ॥

ಶ್ರೀಮದ್ಭಾಗವತವೆಂಬ ಈ ಎಣೆಯಿಲ್ಲದ ಜ್ಞಾನಪ್ರದೀಪವನ್ನು ಮೊಟ್ಟಮೊದಲಿಗೆ ಭಗವಂತನಾದ ಶ್ರೀಮನ್ನಾರಾಯಣನು ಬ್ರಹ್ಮದೇವರಿಗೆ ಪ್ರಕಾಶಪಡಿಸಿದನು. ಮತ್ತೆ ಅದೇ ನಾರಾಯಣನೇ ಬ್ರಹ್ಮದೇವರ ರೂಪದಿಂದ ದೇವರ್ಷಿನಾರದರಿಗೆ ಇದನ್ನು ಉಪದೇಶಮಾಡಿದನು. ಮತ್ತು ಶ್ರೀನಾರದರ ರೂಪದಿಂದ ಅದೇ ಭಗವಂತನೇ ಶ್ರೀಕೃಷ್ಣದ್ವೈಪಾಯನ ವೇದವ್ಯಾಸಮಹಾಮುನಿಗಳಿಗೆ ಇದನ್ನು ಪ್ರಕಾಶಪಡಿಸಿದನು. ಅನಂತರ ಆತನೇ ಶ್ರೀವೇದವ್ಯಾಸರೂಪದಿಂದ ಶ್ರೀಶುಕಮಹರ್ಷಿಗೂ ಮತ್ತು ಶ್ರೀಶುಕಮಹರ್ಷಿಯ ರೂಪದಿಂದ ಅತ್ಯಂತ ಕರುಣಾಪೂರ್ವಕವಾಗಿ ಶ್ರೀವಿಷ್ಣುರಾತ ಪರೀಕ್ಷಿದ್ರಾಜನಿಗೂ ಉಪದೇಶಮಾಡಿದನು. ಅಂತಹ ಪರಿಶುದ್ಧವೂ, ನಿರ್ಮಲವೂ, ಶೋಕರಹಿತವೂ, ಅಮೃತವೂ ಆದ ಪರಮಸತ್ಯಸ್ವರೂಪ ಪರಬ್ರಹ್ಮವನ್ನು ಧ್ಯಾನಿಸುವೆವು.

ನಮಸ್ತಸ್ಮೈ ಭಗವತೇ ವಾಸುದೇವಾಯ ಸಾಕ್ಷಿಣೇ ।
ಯ ಇದಂ ಕೃಪಯಾ ಕಸ್ಮೈ ವ್ಯಾಚಚಕ್ಷೇ ಮುಮುಕ್ಷವೇ ॥೨೦॥

ಮೋಕ್ಷವನ್ನು ಬಯಸುತ್ತಿದ್ದ ಬ್ರಹ್ಮದೇವರಿಗೆ ಪರಮಕರುಣೆಯಿಂದ ಈ ಶ್ರೀಮದ್ಭಾಗವತವನ್ನು ಉಪದೇಶಮಾಡಿದ ಆ ಸರ್ವಸಾಕ್ಷಿಯಾದ ಭಗವಂತನಾದ ಶ್ರೀವಾಸುದೇವನಿಗೆ ನಮಸ್ಕಾರವು.

ಯೋಗೀನ್ದ್ರಾಯ ನಮಸ್ತಸ್ಮೈ ಶುಕಾಯ ಬ್ರಹ್ಮರೂಪಿಣೇ ।
ಸಂಸಾರಸರ್ಪದಷ್ಟಂ ಯೋ ವಿಷ್ಣುರಾತಮಮೂಮುಚತ್ ॥೨೧॥

ಸಂಸಾರವೆಂಬ ಸರ್ಪದಿಂದ ಕಚ್ಚಲ್ಪಟ್ಟಿದ್ದ ವಿಷ್ಣುರಾತ ಪರೀಕ್ಷಿದ್ರಾಜನಿಗೆ ಈ ಶ್ರೀಮದ್ಭಾಗವತವನ್ನು ಉಪದೇಶಿಸಿ ಆತನನ್ನು ಸಂಸಾರದಿಂದ ಬಿಡುಗಡೆಮಾಡಿದ ಆ ಯೋಗೀಶ್ವರರಾದ ಬ್ರಹ್ಮಸ್ವರೂಪಿ ಶ್ರೀಶುಕಬ್ರಹ್ಮರ್ಷಿಗಳಿಗೆ ನಮಸ್ಕಾರವು.

ಭವೇ ಭವೇ ಯಥಾ ಭಕ್ತಿಃ ಪಾದಯೋಸ್ತವ ಜಾಯತೇ ।
ತಥಾ ಕುರುಷ್ವ ದೇವೇಶ ನಾಥಸ್ತ್ವಂ ನೋ ಯತಃ ಪ್ರಭೋ ॥೨೨॥

ಎಲೈ ದೇವದೇವೋತ್ತಮನೇ! ನಾವು ಮತ್ತೆ ಮತ್ತೆ ಜನ್ಮಗಳನ್ನೆತ್ತುತ್ತಿದ್ದರೂ ಆ ಪ್ರತಿಜನ್ಮದಲ್ಲಿಯೂ ನಿನ್ನ ಅಡಿದಾವರೆಗಳಲ್ಲೇ ನಮಗೆ ಭಕ್ತಿಯುಂಟಾಗುವಂತೆ ಅನುಗ್ರಹಿಸಯ್ಯಾ! ನೀನೇ ನಮ್ಮೆಲ್ಲರ ಏಕಮಾತ್ರ ಸ್ವಾಮಿಯಲ್ಲವೇ!

ನಾಮಸಙ್ಕೀರ್ತನಂ ಯಸ್ಯ ಸರ್ವಪಾಪಪ್ರಣಾಶನಮ್ ।
ಪ್ರಣಾಮೋ ದುಃಖಶಮನಸ್ತಂ ನಮಾಮಿ ಹರಿಂ ಪರಮ್ ॥೨೩॥

ಯಾವನ ನಾಮಸಂಕೀರ್ತನೆಯಿಂದ ಸಮಸ್ತಪಾಪಗಳೂ ನಾಶ ಹೊಂದುವುವೋ ಮತ್ತು ಯಾವನಿಗೆ ನಮಸ್ಕರಿಸಿದ್ದರಿಂದ ಸರ್ವದುಃಖಗಳೂ ಶಮನಹೊಂದುವುವೋ ಅಂತಹ ಪರಮಪುರುಷನಾದ ಶ್ರೀಹರಿಯನ್ನು ನಮಸ್ಕರಿಸುತ್ತೇನೆ.

ಮಹಾಪುರಾಣವೂ ಪಾರಮಹಂಸ್ಯಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ದ್ವಾದಶಸ್ಕಂಧದ ೧೩ನೆಯ ಅಧ್ಯಾಯವು ಮುಗಿಯಿತು.

ಈ ಗ್ರಂಥವು ಸಮಾಪ್ತವಾಯಿತು.

ತ್ವದೀಯಂ ವಸ್ತು ಗೋವಿನ್ದ ತುಭ್ಯಮೇವ ಸಮರ್ಪಯೇ ।
ತೇನ ತ್ವದಂಘ್ರಿಕಮಲೇ ರತಿಂ ಮೇ ಯಚ್ಛ ಶಾಶ್ವತೀ ॥

ಓ ಗೋವಿಂದ! ನಿನ್ನದೇ ಆಗಿರುವ ಈ ಪದಾರ್ಥವನ್ನು ನಿನಗೇ ಸಮರ್ಪಣೆಮಾಡುತ್ತೇನೆ. ಇದರಿಂದ ನನಗೆ ನಿನ್ನ ಚರಣಕಮಲಗಳಲ್ಲಿ ಶಾಶ್ವತವಾದ ಭಕ್ತಿಯನ್ನು ದಯಪಾಲಿಸಯ್ಯಾ!"

ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು
ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು ಓಂ ತತ್ಸತ್

ಶ್ರೀ ಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ
ಓಂ ನಮೋ ಭಗವತೇ ವಾಸುದೇವಾಯ

ॐ

ಶ್ರೀಮದ್ಭಾಗವತಮಾಹಾತ್ಮ್ಯಮ್

ಪರೀಕ್ಷಿದ್ರಾಜ ಮತ್ತು ವಜ್ರನಾಭರ ಸಮಾಗಮ: ಶಾಂಡಿಲ್ಯಮುನಿಯು ಭಗವಂತನ ಲೀಲೆಯ ರಹಸ್ಯವನ್ನೂ ಮತ್ತು ವ್ರಜಭೂಮಿಯ ಮಹತ್ತ್ವವನ್ನೂ ವರ್ಣಿಸಿದುದು

ಮಹರ್ಷಿ ವೇದವ್ಯಾಸರು ಹೇಳುತ್ತಾರೆ :

ಶ್ರೀಸಚ್ಚಿದಾನನ್ದಘನಸ್ವರೂಪಿಣೇ
ಕೃಷ್ಣಾಯ ಚಾನನ್ತಸುಖಾಭಿವರ್ಷಿಣೇ ।
ವಿಶ್ವೋದ್ಭವಸ್ಥಾನನಿರೋಧಹೇತವೇ
ನುಮೋ ವಯಂ ಭಕ್ತಿರಸಾಪ್ತಯೇಽನಿಶಮ್ ॥೧॥

“ನಿತ್ಯನಿರಂತರವಾದ ಭಕ್ತಿರಸಾನುಭವವನ್ನು ಪಡೆಯುವುದಕ್ಕಾಗಿ ನಾವು ಶ್ರೀಸಚ್ಚಿದಾನಂದಘನಸ್ವರೂಪಿಯೂ, ಅನಂತವಾದ ಆನಂದದ ಮಳೆಗರೆಯುವವನೂ ಮತ್ತು ವಿಶ್ವದ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನೂ ಆಗಿರುವ ಶ್ರೀಕೃಷ್ಣಪರಮಾತ್ಮನನ್ನು (ನಿತ್ಯನಿರಂತರವಾಗಿ) ನಮಸ್ಕರಿಸುತ್ತೇವೆ.

ನೈಮಿಷೇ ಸೂತಮಾಸೀನಮಭಿವಾದ್ಯ ಮಹಾಮತಿಮ್ ।
ಕಥಾಮೃತರಸಾಸ್ವಾದಕುಶಲಾ ಋಷಯೋಽಬ್ರುವನ್ ॥೨॥

ಶೌನಕಾದಿಮಹರ್ಷಿಗಳು ಶ್ರೀಭಗವಂತನ ಕಥೆಯ ರಸವನ್ನು ಸವಿಯುವುದರಲ್ಲಿ ಕುಶಲರು. ಈ ಸವಿಯನ್ನು ಪಡೆಯುವುದಕ್ಕಾಗಿ ಅವರು ನೈಮಿಷಾರಣ್ಯದಲ್ಲಿ ಕುಳಿತಿದ್ದ ಮಹಾತ್ಮರಾದ ಸೂತಪುರಾಣಿಕರ ಬಳಿಗೆ ಹೋಗಿ ಅವರಿಗೆ ನಮಸ್ಕಾರಮಾಡಿ ಹೀಗೆ ಪ್ರಶ್ನಿಸಿದರು :

"ಎಲೈ ಮಹಾತ್ಮರೇ! ಧರ್ಮರಾಜಯುಧಿಷ್ಠಿರನು ಅನಿರುದ್ಧನ ಪುತ್ರನಾದ ವಜ್ರನನ್ನು ಶ್ರೀಮಧುರಾಮಂಡಲದಲ್ಲಿಯೂ ತನ್ನ ಮೊಮ್ಮಗನಾದ ಪರೀಕ್ಷಿತನನ್ನು ಹಸ್ತಿನಾವತಿಯಲ್ಲೂ ಪಟ್ಟದಲ್ಲಿ ಕೂರಿಸಿ ಮಹಾ ಪ್ರಸ್ಥಾನಮಾಡಿ ಹಿಮಾಲಯಕ್ಕೆ ಹೊರಟುಹೋದನಷ್ಟೇ! ಅನಂತರ ಮಹಾರಾಜವಜ್ರನೂ, ಮಹಾರಾಜಪರೀಕ್ಷಿತನೂ ಏನೇನು ಕೆಲಸವನ್ನು ಮಾಡಿದರು? ಹೇಗೆ ಮಾಡಿದರು? ಎಂಬುದನ್ನು ತಿಳಿಸಿರಿ."

ಮಹರ್ಷಿಗಳ ಪ್ರಶ್ನೆಗೆ ಉತ್ತರಿಸುತ್ತಾ ಸೂತಪುರಾಣಿಕರು ಹೀಗೆಂದರು :

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥೪॥

"ಭಗವಂತನಾದ ನಾರಾಯಣನನ್ನೂ ನರೋತ್ತಮನಾದ ನರಮಹರ್ಷಿಯನ್ನೂ ಶ್ರೀಸರಸ್ವತೀದೇವಿಯನ್ನೂ ಮಹರ್ಷಿವ್ಯಾಸರನ್ನೂ ನಮಸ್ಕರಿಸಿ ಶುದ್ಧಸತ್ತ್ವನಾಗಿ ಭಗವತ್ತತ್ತ್ವವನ್ನು ಪ್ರಕಾಶಪಡಿಸುವ ಇತಿಹಾಸ ಪುರಾಣರೂಪವಾದ 'ಜಯ' ಎಂಬುದನ್ನು ಹೇಳಬೇಕು.

ಎಲೈ ಮಹರ್ಷಿಗಳೇ! ಧರ್ಮರಾಜನೇ ಮುಂತಾದವರು ಸ್ವರ್ಗಾರೋಹಣಕ್ಕಾಗಿ ಹೊರಟುಹೋದ ಬಳಿಕ ಪರೀಕ್ಷಿನ್ಮಹಾರಾಜನು ಒಂದು ದಿನ ವಜ್ರನಾಭನನ್ನು ಕಂಡುಬರೋಣವೆಂದು ಮಧುರಾನಗರಿಗೆ ಹೋದನು. ತನ್ನ ತಂದೆ-ಚಿಕ್ಕಪ್ಪಂದಿರಿಗೆ ಸಮಾನನಾಗಿದ್ದ ಪರೀಕ್ಷಿತನು ಬಂದಿರುವನೆಂಬುದನ್ನು ಕೇಳಿ ವಜ್ರನು ಪ್ರೀತಿತುಂಬಿದ ಮನಸ್ಸುಳ್ಳವನಾಗಿ ಆತನ ಬಳಿಗೆ ಹೋಗಿ ನಮಸ್ಕಾರಮಾಡಿ ಆತನನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ಮಹಾವೀರನಾದ ಪರೀಕ್ಷಿತನು ಆತನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು ಅಂತಃಪುರಕ್ಕೆ ಹೋಗಿ ಅಲ್ಲಿ ರೋಹಿಣಿಯೇ ಮುಂತಾದ ಶ್ರೀಕೃಷ್ಣನ ಪತ್ನಿಯರಿಗೆ ನಮಸ್ಕಾರಮಾಡಿದನು. ಅವರಿಂದ ತುಂಬಾ ಸಮ್ಮಾನಿಸಲ್ಪಟ್ಟ ಮಹಾರಾಜಪರೀಕ್ಷಿತನು ವಿಶ್ರಾಂತಿಪಡೆದು ಸುಖವಾಗಿ ಕುಳಿತಿದ್ದಾಗ ವಜ್ರನಿಗೆ ಹೀಗೆಂದನು : (ಶ್ಲೋಕ ೮)

"ಅಪ್ಪಾ ವಜ್ರಕುಮಾರ! ನಿನ್ನ ತಂದೆ-ತಾತಂದಿರು ನನ್ನ ತಾತಂದಿ

ರಿಗೆ ನಿಜವಾಗಿಯೂ ಎಷ್ಟು ಉಪಕಾರಮಾಡಿದರೆಂಬುದನ್ನು ವರ್ಣಿಸಲಾಗುವುದಿಲ್ಲ. ಅವರು ನನ್ನ ತಂದೆ-ತಾತಂದಿರನ್ನು ಮಹಾದುಃಖರಾಶಿಯಿಂದ ಮೇಲೆತ್ತಿದರು. ನನ್ನ ಪ್ರಾಣವನ್ನೂ ಕಾಪಾಡಿದರು. ಅವರು ಮಾಡಿದ ಉಪಕಾರಕ್ಕೆ ಬದಲಾಗಿ ನಾನು ಏನು ಮಾಡಿದರೂ ಸಾಲತೀರದು. ಆದುದರಿಂದ ನಾನು ನಿನ್ನಲ್ಲಿ ಒಂದು ಪ್ರಾರ್ಥನೆಮಾಡುತ್ತೇನೆ. ಅದನ್ನು ನಡೆಸಿಕೊಡು. ನೀನು ರಾಜ್ಯದಲ್ಲಿ ಸುಖವಾಗಿ ಜೀವನ ನಡೆಸುತ್ತಿರು. ಕೋಶ-ಸೈನ್ಯಾದಿಗಳನ್ನು ನೋಡಿಕೊಳ್ಳುವುದು ಮತ್ತು ಶತ್ರುಗಳನ್ನು ಅಡಗಿಸುವುದು—ಇವೇ ಮುಂತಾದ ಕಷ್ಟವಾದ ಕೆಲಸಗಳ ಬಗೆಗೆ ಸ್ವಲ್ಪವೂ ಚಿಂತಿಸಬೇಡ. ನಿನ್ನ ತಾಯಂದಿರ ಸೇವೆಯನ್ನು ಮಾಡುತ್ತಿರು. ಅಷ್ಟೇ ಸಾಕು. ರಾಜ್ಯ-ಕೋಶ, ಶತ್ರುಜಯಾದಿ ಕಾರ್ಯಗಳೆಲ್ಲವನ್ನೂ ನನಗೆ ಒಪ್ಪಿಸಿ ಯಾವ ಚಿಂತೆಯೂ ಇಲ್ಲದೇ ಸುಖವಾಗಿರು."

ಪರೀಕ್ಷಿದ್ರಾಜನ ಈ ಪ್ರಿಯವಾದ ಮಾತುಗಳನ್ನು ಕೇಳಿ ತುಂಬಾ ಸಂತೋಷಗೊಂಡ ಮಹಾರಾಜವಜ್ರನು ಆತನಿಗೆ ಹೇಳಿದನು :

"ಮಹಾರಾಜ! ನೀನು ಹೇಳಿದ ಮಾತು ನಿನ್ನ ಸೌಹಾರ್ದಕ್ಕೆ, ಸಾಮರ್ಥ್ಯಕ್ಕೆ, ಸೌಜನ್ಯ, ಬಂಧುಪ್ರಿಯತೆಗಳಿಗೆ ಅನುಗುಣವಾಗಿಯೇ ಇದೆ. ನಿನ್ನ ತಂದೆಯೂ ಕೂಡ ನನಗೆ ಧನುರ್ವಿದ್ಯೆಯನ್ನು ಉಪದೇಶಮಾಡಿ ಪರಮೋಪಕಾರಮಾಡಿದ್ದಾನೆ. ಆತನ ಕೃಪೆಯಿಂದ ನನ್ನಲ್ಲಿ ಕ್ಷತ್ರಿಯೋಚಿತವಾದ ಶೌರ್ಯ-ಶಕ್ತಿಗಳು ತುಂಬಿವೆ. ಆದುದರಿಂದ ನನ್ನ ರಾಜ್ಯರಕ್ಷಣಾದಿಗಳ ಬಗೆಗೆ ನೀನು ಚಿಂತಿಸಬೇಕಾಗಿಲ್ಲ. ಆದರೆ ಒಂದೇ ಒಂದು ವಿಷಯದಲ್ಲಿ ನನ್ನನ್ನು ಚಿಂತೆಯು ಕಾಡುತ್ತಿದೆ. ಅದನ್ನು ನೀನು ಗಮನಿಸಿ ಅದರ ಪರಿಹಾರಕ್ಕೆ ಸಹಾಯಮಾಡು. ನನಗೆ ಮಧುರಾಮಂಡಲದ ರಾಜ್ಯದಲ್ಲಿ ಪಟ್ಟಾಭಿಷೇಕವಾಗಿದ್ದರೂ ನಾನು ಒಂದು ನಿರ್ಜನವಾದ ಅರಣ್ಯದಲ್ಲಿ ವಾಸಮಾಡುತ್ತಿದ್ದೇನೆ. ಇಲ್ಲಿದ್ದ ಪ್ರಜೆಗಳು ಎಲ್ಲಿ ಹೋದರು? ಎಂಬುದೇ ನನಗೆ ತಿಳಿಯುತ್ತಿಲ್ಲ. ಪ್ರಜೆಗಳು ಇದ್ದರೆ ತಾನೇ ರಾಜ್ಯಾಧಿಪತ್ಯದ ಸುಖ?"

ವಜ್ರನ ಮಾತನ್ನು ಕೇಳಿದ ಪರೀಕ್ಷಿದ್ರಾಜನು ಆತನ ಸಂದೇಹ

ವನ್ನು ಪರಿಹರಿಸಲು ಶಾಂಡಿಲ್ಯಮಹರ್ಷಿಗಳಿಗೆ ಹೇಳಿಕಳುಹಿಸಿದನು. ಈ ಶಾಂಡಿಲ್ಯರು ನಂದನೇ ಮುಂತಾದ ಗೋಪರಿಗೆ ಪುರೋಹಿತರಾಗಿದ್ದವರು. ಪರೀಕ್ಷಿತನ ಸಂದೇಶವನ್ನು ಕೇಳಿದೊಡನೆಯೇ ಅವರು ತಮ್ಮ ಪರ್ಣಶಾಲೆಯನ್ನು ಬಿಟ್ಟು ಅಲ್ಲಿಗೆ ದಯಮಾಡಿಸಿದರು. ವಜ್ರಮಹಾರಾಜನು ಅವರನ್ನು ವಿಧಿಪೂರ್ವಕವಾಗಿ ಸತ್ಕರಿಸಿ ಉನ್ನತವಾದ ಆಸನದಲ್ಲಿ ಕುಳ್ಳಿರಿಸಿದನು. ಆಗ ವಿಷ್ಣುರಾತಮಹಾರಾಜ ಪರೀಕ್ಷಿತನು, ವಜ್ರನಾಭನು ಹೇಳಿದ ಮಾತನ್ನು ಅವರಲ್ಲಿ ಒಪ್ಪಿಸಿದನು. ಮಹರ್ಷಿಗಳು ಅದನ್ನು ಕೇಳಿ ಪ್ರಸನ್ನತೆಯಿಂದ ಅವರಿಬ್ಬರನ್ನೂ ಸಮಾಧಾನಪಡಿಸುತ್ತಾ ಹೀಗೆಂದರು :

"ವತ್ಸರೇ! ನಿಮ್ಮ ಸಂದೇಹಪರಿಹಾರಕ್ಕಾಗಿ ನಾನು ನಿಮಗೆ ವ್ರಜಭೂಮಿಯ ರಹಸ್ಯವನ್ನು ಹೇಳುತ್ತೇನೆ. ಸಾವಧಾನವಾಗಿ ಕೇಳಿರಿ. 'ವ್ರಜ' ಎಂಬ ಶಬ್ದಕ್ಕೆ 'ವ್ಯಾಪ್ತಿ' ಎಂದರ್ಥ. ಇದರಂತೆ ಎಲ್ಲವನ್ನೂ ವ್ಯಾಪಿಸಿರುವುದರಿಂದ ಈ ಭೂಮಿಗೆ ವ್ರಜ–ಎಂದು ಹೆಸರು. ಎಲ್ಲವನ್ನೂ ವ್ಯಾಪಿಸಿರುವುದು ತ್ರಿಗುಣಾತೀತವಾದ ಪರಬ್ರಹ್ಮ. ಅದೇ 'ವ್ರಜ' ಎಂದೂ ಕರೆಯಲ್ಪಡುವುದು. ಅದು ಸದಾನಂದಮಯ, ಪರಮಜ್ಯೋತಿರ್ಮಯ ಮತ್ತು ಅವಿನಾಶಿಯಾದ ತತ್ತ್ವವು. ಮುಕ್ತಪುರುಷರು ನೆಲೆಗೊಂಡಿರುವ ಸ್ಥಾನವು. ಅದರಿಂದಲೇ ಈ ಪರಬ್ರಹ್ಮಸ್ವರೂಪವಾದ ವ್ರಜಧಾಮದಲ್ಲಿ ಸದಾನಂದಸ್ವರೂಪನಾದ, ದಿವ್ಯಮಂಗಳವಿಗ್ರಹವುಳ್ಳ, ನಂದನಂದನ ಭಗವಾನ್ ಶ್ರೀಕೃಷ್ಣನು ನೆಲೆಗೊಂಡಿರುತ್ತಾನೆ. ಆತನು ಆಪ್ತಕಾಮನು. ಎಲ್ಲ ಕಾಮನೆಗಳೂ ಈಡೇರಿದವನು. ಪ್ರೇಮರಸದಲ್ಲಿ ಮುಳುಗಿರುವ ರಸಿಕ ಜನರು ಮಾತ್ರವೇ ಆತನಲ್ಲಿ ರಮಿಸಬಲ್ಲರು. ಶ್ರೀಕೃಷ್ಣನನ್ನು ಏಕೆ ಆತ್ಮಾರಾಮ ಎಂದು ಕರೆಯುತ್ತಾರೆ? ಎಂದರೆ : ರಾಧಾದೇವಿಯು ಶ್ರೀಕೃಷ್ಣನಿಗೆ ಆತ್ಮಾ ಎನಿಸುತ್ತಾಳೆ. ಆಕೆಯಲ್ಲಿ ಶ್ರೀಕೃಷ್ಣನು ರಮಿಸುವುದರಿಂದ ರಹಸ್ಯವನ್ನರಿತವರು ಆತನನ್ನು ಆತ್ಮಾರಾಮನೆನ್ನುತ್ತಾರೆ. ಹೀಗೆ ಆಪ್ತಕಾಮ ಎಂಬುದಕ್ಕೂ ವಿಶೇಷವಾದ ಅರ್ಥವಿದೆ. 'ಕಾಮ' ಎಂದರೆ ಅಭಿಲಾಷೆ. 'ವ್ರಜ' ದಲ್ಲಿ ಶ್ರೀಕೃಷ್ಣಪರಮಾತ್ಮನ ಅಭಿಲಾಷೆಗೆ ವಿಷಯವಾದ ಅನೇಕ ಪದಾರ್ಥಗಳಿವೆ. ಗೋವುಗಳು, ಗೋಪಬಾಲಕರು, ಗೋಪಿಯರು ಮತ್ತು ಅವರೊಡನೆ ವಿಹರಿಸುವಿಕೆ ಮುಂತಾದುವು. ಅವೆಲ್ಲವೂ ಸಂಪೂರ್ಣವಾಗಿ

ಇಲ್ಲಿವೆ. ಆದ್ದರಿಂದಲೇ ಆ ಶ್ರೀಕೃಷ್ಣನನ್ನು ಆಪ್ತಕಾಮನೆಂದು ಕರೆಯಲಾಗಿದೆ. ಭಗವಂತನ ಈ ರಹಸ್ಯಲೀಲೆಯು ಪ್ರಕೃತಿಯನ್ನು ಮೀರಿರುವುದು. ಅವನು ಪ್ರಕೃತಿಯೊಡನೆ ಯಾವಾಗ ಆಟವಾಡತೊಡಗುತ್ತಾನೆಯೋ ಆ ಸಮಯದಲ್ಲಿ ಇತರರೂ ಆತನ ಲೀಲೆಯನ್ನು ಅನುಭವಿಸುತ್ತಾರೆ. ಪ್ರಕೃತಿಯೊಡನೆ ಭಗವಂತನು ಆಡುವ ಲೀಲೆಯಲ್ಲಿಯೇ ರಜೋಗುಣ-ಸತ್ತ್ವಗುಣ ಮತ್ತು ತಮೋಗುಣಗಳ ಮೂಲಕ ಸೃಷ್ಟಿ-ಸ್ಥಿತಿ ಮತ್ತು ಲಯಗಳ ಪ್ರತೀತಿ ಉಂಟಾಗುತ್ತದೆ. ಹೀಗೆ ಗಮನಿಸಿದಾಗ ಭಗವಂತನ ಲೀಲೆಯಲ್ಲಿ ವಾಸ್ತವ ಲೀಲಾ ಮತ್ತು ವ್ಯಾವಹಾರಿಕಲೀಲಾ ಎಂದು ಎರಡು ಪ್ರಕಾರಗಳು ಕಂಡುಬರುತ್ತವೆ. ವಾಸ್ತವಲೀಲೆಯು ಸ್ವಾನುಭವದಿಂದ ತನಗೇ ತಿಳಿಯತಕ್ಕದ್ದು. ಅದನ್ನು ಸ್ವಯಂ ಭಗವಂತನು ಮತ್ತು ಆತನ ರಸಿಕರಾದ ಭಕ್ತ ಜನರು ಮಾತ್ರವೇ ತಿಳಿಯಬಲ್ಲರು. ಜೀವರುಗಳ ಎದುರಿಗೆ ನಡೆಯುವ ಲೀಲೆಯೇ ವ್ಯಾವಹಾರಿಕಲೀಲೆ. ವಾಸ್ತವಿಕಲೀಲೆಯಿಲ್ಲದೆ ವ್ಯಾವಹಾರಿಕ ಲೀಲೆಯು ನಡೆಯಲಾರದು. ಆದರೆ ವ್ಯಾವಹಾರಿಕಲೀಲೆಯು ವಾಸ್ತವಿಕ ಲೀಲೆಯು ರಾಜ್ಯಕ್ಕೆ ಪ್ರವೇಶವನ್ನು ಮಾಡಲಾರದು. ನೀವಿಬ್ಬರೂ ನೋಡುತ್ತಿರುವ ಭಗವಂತನ ಲೀಲೆಯು ವ್ಯಾವಹಾರಿಕಲೀಲೆಯು. ಈ ಭೂಮಿ ಮತ್ತು ಸ್ವರ್ಗಲೋಕಗಳು ಈ ಲೀಲೆಯಲ್ಲೇ ಅಡಕವಾಗಿವೆ. ಈ ಭೂಮಿಯಲ್ಲಿಯೇ ಮಧುರಾಮಂಡಲವೂ ಸೇರಿದೆ. ಭಗವಂತನ ವಾಸ್ತವ ವಾದ ರಹಸ್ಯಲೀಲೆಯು ಗುಪ್ತರೂಪದಿಂದ ನಡೆಯುತ್ತಿರುವ ವ್ರಜಭೂಮಿಯು ಇಲ್ಲಿಯೇ ಇದೆ. ಪ್ರೇಮಪೂರ್ಣವಾದ ಹೃದಯವುಳ್ಳ ರಸಿಕಭಕ್ತರಿಗೆ ಕೆಲವು ವೇಳೆಗಳಲ್ಲಿ ಇದು ಎಲ್ಲೆಡೆಗಳಲ್ಲಿಯೂ ಕಾಣಿಸತೊಡಗುತ್ತದೆ. ಕೆಲವೊಮ್ಮೆ ಇಪ್ಪತ್ತೆಂಟನೆಯ ದ್ವಾಪರಯುಗದ ಕೊನೆಯಲ್ಲಿ ಭಗವಂತನು, ರಹಸ್ಯಲೀಲೆಯನ್ನು ಅನುಭವಿಸಲು ಯೋಗ್ಯರಾದ ಭಕ್ತಜನರು ಒಂದೆಡೆ ಸೇರಿದಾಗ ತನ್ನ ಅಂತರಂಗಪ್ರೇಮಿಗಳೊಡನೆ ಅವತಾರಮಾಡಿ ಇಲ್ಲೇ ದರ್ಶನಕೊಡುತ್ತಾನೆ. ಇದೇ ಸಮಯದಲ್ಲೇ ಕೊಂಚಕಾಲದ ಹಿಂದೆ ಇಂತಹ ಸನ್ನಿವೇಶ ಒದಗಿತ್ತು. ರಹಸ್ಯಲೀಲೆಗೆ ಅಧಿಕಾರಿಗಳಾಗಿರುವ ಭಕ್ತಜನರೂ ಕೂಡ ಅಂತರಂಗಪರಿಕರಗಳೊಡನೆ ಒಂದುಗೂಡಿ ಲೀಲಾರಸವನ್ನು ಸವಿಯಲು ಶಕ್ತರಾಗುವಂತೆ ಮಾಡುವುದೇ ಅವನ ಅವತಾರದ ಪ್ರಯೋ

ಜನವು. ಹೀಗೆ ಭಗವಂತನು ಅವತಾರವನ್ನು ಮಾಡಿದಾಗ ಆ ಭಗವಂತನಿಗೆ ಇಷ್ಟರಾದ ಆತನಲ್ಲಿ ಪ್ರೇಮಾತಿಶಯವುಳ್ಳ ದೇವತೆಗಳೂ ಮತ್ತು ಋಷಿಗಳೂ ಮುಂತಾದವರೂ ಕೂಡ ಎಲ್ಲ ಕಡೆಗಳಲ್ಲೂ ಅವತಾರಮಾಡುತ್ತಾರೆ.

(ಶ್ಲೋಕ ೨೦-೩೦)

ಈಗ ತಾನೇ ಕೊಂಚಕಾಲದ ಹಿಂದೆ ನಡೆದ ಅವತಾರದಲ್ಲಿ ಭಗವಂತನು ತನ್ನ ಪ್ರೇಮಿಗಳಾದ ಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸಿ ಈಗ ಅಂತರ್ಧಾನವಾಗಿಬಿಟ್ಟಿದ್ದಾನೆ. ಇಲ್ಲಿ ಮೊದಲನೆಯ ಮೂರು ವರ್ಗಗಳಿಗೆ ಸೇರಿದ ಭಕ್ತಜನರೂ ಉಪಸ್ಥಿತರಾಗಿದ್ದರು ಎಂಬುದು ಇದರಿಂದ ನಿಶ್ಚಿತ ವಾಗುತ್ತದೆ. ಇದರಲ್ಲಿ ಯಾವ ಸಂದೇಹವೂ ಇಲ್ಲ. ಈ ಮೂರು ವರ್ಗ ಗಳಲ್ಲಿ ಮೊದಲನೆಯವರು ನಿತ್ಯರಾದ ಭಗವಂತನ ಅಂತರಂಗಪಾರ್ಷದರು. ಇವರು ಎಂದಿಗೂ ಭಗವಂತನನ್ನು ಅಗಲದೇ ಇರುವವರು. ಭಗವಂತನೊಬ್ಬ ನನ್ನೇ ಪಡೆಯುವ ಇಚ್ಛೆಯುಳ್ಳವರಾಗಿ ಆತನ ಅಂತರಂಗಲೀಲೆಯೊಳಗೆ ಪ್ರವೇಶಪಡೆಯಲು ಬಯಸುವವರು ಎರಡನೆಯ ಸಾಲಿನವರು. ಮೂರ ನೆಯ ವರ್ಗದಲ್ಲಿ ದೇವತೆಗಳೇ ಮುಂತಾದವರು ಸೇರುತ್ತಾರೆ. ಅವರಲ್ಲಿ ದೇವತೆಗಳೇ ಮುಂತಾದವರ ಅಂಶದಿಂದ ಅವತಾರಮಾಡಿದ್ದವರನ್ನು ಭಗವಂತನು ವ್ರಜಭೂಮಿಯಿಂದ ದೂರವಾಗಿಸಿ ಮೊದಲೇ ದ್ವಾರಕೆಯನ್ನು ಪ್ರವೇಶಮಾಡಿಸಿಬಿಟ್ಟಿರುವನು. ಅನಂತರ ಆ ಭಗವಂತನು ಬ್ರಾಹ್ಮಣರ ಶಾಪದಿಂದುಂಟಾದ ಒಂದು ಒನಕೆಯನ್ನು ಒಂದು ನೆಪವನ್ನಾಗಿ ಮಾಡಿಕೊಂಡು ಯದುಕುಲದಲ್ಲಿ ಅವತಾರಮಾಡಿದ್ದ ದೇವತೆಗಳನ್ನು ಸ್ವರ್ಗಕ್ಕೆ ಕಳುಹಿಸಿ ಅವರವರ ಅಧಿಕಾರದಲ್ಲಿ ಮತ್ತೆ ನೆಲೆಗೊಳಿಸಿಬಿಟ್ಟನು ಮತ್ತು ಭಗವಂತನೊಬ್ಬನನ್ನೇ ಪಡೆಯಬೇಕೆಂಬ ಇಚ್ಛೆಯಿಂದ ತುಂಬಿದ್ದ ಭಕ್ತಶ್ರೇಷ್ಠರನ್ನು ಪ್ರೇಮಾನಂದಸ್ವರೂಪರನ್ನಾಗಿಮಾಡಿ ಎಂದೆಂದಿಗೂ ತನ್ನೊಡನೆ ಇರುವ ತನ್ನ ಅಂತರಂಗದ ಪಾರ್ಷದರೊಡನೆ ಸೇರಿಸಿಕೊಂಡು ಬಿಟ್ಟನು. ಭಗವಂತನ ನಿತ್ಯಪಾರ್ಷದರು ಅಷ್ಟೇ ಗುಪ್ತವಾಗಿ ನಡೆಯುತ್ತಿರುವ ನಿತ್ಯಲೀಲೆಯಲ್ಲಿ ಸದಾ ಇರುತ್ತಿದ್ದರೂ ಯಾರು ಅವರ ದರ್ಶನಕ್ಕೆ ಅಧಿಕಾರಿಗಳಾಗಿಲ್ಲವೋ ಅಂತಹವರಿಗೆ ಕಣ್ಮರೆಯಾಗಿರುತ್ತಾರೆ. ವ್ಯಾವಹಾರಿಕ ಲೀಲೆಯಲ್ಲೇ ಇರುವವರು ನಿತ್ಯಲೀಲೆಯ ದರ್ಶನವನ್ನು ಪಡೆಯಲು

ಅಧಿಕೃತರಾಗಿಲ್ಲ. ಆದುದರಿಂದ ಅವರು ಇಲ್ಲಿಗೆ ಬಂದಾಗ ಇಲ್ಲಿ ಎಲ್ಲೆಲ್ಲಿಯೂ ಜನರಹಿತವಾದ ಅರಣ್ಯವನ್ನೇ (ಶೂನ್ಯಪ್ರದೇಶವನ್ನೇ) ಕಾಣುತ್ತಾರೆ. ವಾಸ್ತವಿಕಲೀಲೆಯಲ್ಲಿರುವ ಭಕ್ತಜನರು ಅವರಿಗೆ ಕಾಣಿಸುವುದಿಲ್ಲ.

(ಶ್ಲೋಕ ೩೧-೩೫)

ಆದುದರಿಂದ, ವತ್ಸ ವಜ್ರನಾಭ! ಈ ಬಗೆಗೆ ನೀನು ಚಿಂತೆಪಡಬೇಡ. ನನ್ನ ಆಜ್ಞೆಯಂತೆ ಇಲ್ಲಿ ಜನಭರಿತವಾದ ಬಹಳಷ್ಟು ಗ್ರಾಮಗಳನ್ನು ನಿರ್ಮಾಣಮಾಡು. ಇದರಿಂದ ನಿಶ್ಚಯವಾಗಿಯೂ ನಿನ್ನ ಮನೋರಥಗಳು ಸಿದ್ಧಿಸುವುವು. ಭಗವಂತನಾದ ಶ್ರೀಕೃಷ್ಣನು ಎಲ್ಲೆಲ್ಲಿ ಯಾವ ಯಾವ ಲೀಲೆಗಳನ್ನು ಆಡಿದನೋ ಅದಕ್ಕನುಸಾರವಾಗಿ ಆಯಾ ಹೆಸರುಗಳನ್ನಿಟ್ಟು ಅನೇಕಗ್ರಾಮಗಳನ್ನು ಇಲ್ಲಿ ನಿರ್ಮಿಸಿ ದಿವ್ಯವಾದ ವ್ರಜಭೂಮಿಯನ್ನು ಚೆನ್ನಾಗಿ ಸೇವಿಸುತ್ತಿರು. ಇವುಗಳಲ್ಲಿ ಗೋವರ್ಧನ, ದೀರ್ಘಪುರ (ಡೀಗ್), ಮಥುರಾ, ಮಹಾವನ (ಗೋಕುಲ), ನಂದಿಗ್ರಾಮ (ನಂದಗಾಂವ್) ಮತ್ತು ಬೃಹತ್ಸಾನು (ಬರ್‌ಸಾನಾ) ಇತ್ಯಾದಿಗಳಲ್ಲಿ ನಿನ್ನ ವಾಸಸ್ಥಾನಗಳನ್ನು ಮಾಡಿಕೋ. ಆಯಾ ಜಾಗಗಳಲ್ಲಿರುತ್ತಾ ಭಗವಂತನ ಲೀಲಾಸ್ಥಾನಗಳಾದ ನದೀ, ಪರ್ವತ, ಕಣಿವೆ, ಸರೋವರ ಮತ್ತು ಕುಂಜ (ಲತಾಗೃಹ), ಕುಂಜವನ ಮುಂತಾದುವುಗಳನ್ನು ಸೇವಿಸುತ್ತಿರಬೇಕು. ಹೀಗೆ ಮಾಡಿದರೆ ನಿನ್ನ ರಾಜ್ಯದಲ್ಲಿ ಪ್ರಜೆಗಳು ತುಂಬಾ ಸಂಪನ್ನರಾಗುವರು ಮತ್ತು ನಿನಗೂ ತುಂಬಾ ಪ್ರಸನ್ನತೆಯುಂಟಾಗುವುದು. ಈ ಇಡೀ ವ್ರಜಭೂಮಿಯು ಸಚ್ಚಿದಾನಂದಮಯವಾದುದು. ಆದುದರಿಂದ ನೀನು ಪ್ರಯತ್ನಪೂರ್ವಕ ವಾಗಿ ಈ ಭೂಮಿಯನ್ನು ಸೇವಿಸುತ್ತಿರಬೇಕು. ಇದೋ! ನಾನು ಆಶೀರ್ವಾದಮಾಡುತ್ತೇನೆ. ಭಗವಂತನ ಯಾವ ಯಾವ ಲೀಲಾ ಸ್ಥಳಗಳುಂಟೋ ಅವೆಲ್ಲವನ್ನೂ ನೀನು ನನ್ನ ಕೃಪೆಯಿಂದ ನೋಡಲು ಸಮರ್ಥನಾಗುವೆ. ಮಗು ವಜ್ರನಾಭ! ಈ ವ್ರಜಭೂಮಿಯನ್ನು ಸೇವಿಸುತ್ತಿರುವುದರಿಂದ ನಿನಗೆ ಒಂದಲ್ಲ ಒಂದು ದಿನ ಮಹಾತ್ಮನಾದ ಉದ್ಧವನ ಸಮಾಗಮವೂ ಆಗುವುದು. ಅನಂತರವಾದರೋ ನೀನು ನಿನ್ನ ತಾಯಂದಿರೊಡನೆ ಆತನಿಂದಲೇ ಈ ವ್ರಜಭೂಮಿಯ ಮತ್ತು ಶ್ರೀಭಗವಂತನ ಲೀಲಾರಹಸ್ಯವನ್ನು ತಿಳಿಯಲು ಸಮರ್ಥನಾಗುವೆ.”

ಮುನಿಶ್ರೇಷ್ಠರಾದ ಶಾಂಡಿಲ್ಯರು ಹೀಗೆ ಪರೀಕ್ಷಿದ್ರಾಜ ಮತ್ತು ವಜ್ರನಾಭ–ಇಬ್ಬರಿಗೂ ತಿಳಿವಳಿಕೆಯನ್ನು ನೀಡಿ ಶ್ರೀಕೃಷ್ಣನನ್ನು ಸ್ಮರಿಸುತ್ತಾ ತಮ್ಮ ಆಶ್ರಮಕ್ಕೆ ಹೊರಟುಹೋದರು. ಅವರ ಮಾತುಗಳನ್ನು ಕೇಳಿ ಆ ಇಬ್ಬರು ನೃಪತಿಗಳೂ ಅತ್ಯಂತಸಂತುಷ್ಟರಾದರು.

ಶ್ರೀಸ್ಕಾಂದಮಹಾಪುರಾಣದಲ್ಲಿ ಎರಡನೆಯದಾದ ವೈಷ್ಣವಖಂಡದಲ್ಲಿರುವ
ಶ್ರೀಮದ್ಭಾಗವತಮಾಹಾತ್ಮ್ಯದಲ್ಲಿ ಮೊದಲನೆಯ
ಅಧ್ಯಾಯವು ಮುಗಿಯಿತು.

ಶ್ರೀಮದ್ಭಾಗವತಮಾಹಾತ್ಮ್ಯಮ್ ೨ನೆಯ ಅಧ್ಯಾಯ

ಯಮುನಾ ಮತ್ತು ಶ್ರೀಕೃಷ್ಣಪತ್ನಿಯರ ಸಂವಾದ: ಕೀರ್ತನೋತ್ಸವದಲ್ಲಿ ಉದ್ಧವನು ಪ್ರಕಟವಾದುದು

ಶೌನಕಾದಿಋಷಿಗಳು ಸೂತಪುರಾಣಿಕರನ್ನು ಹೀಗೆ ಪ್ರಶ್ನಿಸುತ್ತಾರೆ :

ಶಾಣ್ಡಿಲ್ಯೇ ತೌ ಸಮಾದಿಶ್ಯ ಪರಾವೃತ್ತೇ ಸ್ವಮಾಶ್ರಮಮ್ ।
ಕಿಂ ಕಥಂ ಚಕ್ರತುಸ್ತೌ ತು ರಾಜಾನೌ ಸೂತ ತದ್ವದ ॥೧॥

“ಪುರಾಣಿಕರೇ! ಶಾಂಡಿಲ್ಯಮಹರ್ಷಿಗಳು ಮಹಾರಾಜಪರೀಕ್ಷಿತನಿಗೂ ಮತ್ತು ವಜ್ರಮಹಾರಾಜನಿಗೂ ಮೇಲೆ ಹೇಳಿದಂತೆ ಸಂದೇಶನೀಡಿ ತಮ್ಮ ಆಶ್ರಮಕ್ಕೆ ಹಿಂದಿರುಗಿದ ಬಳಿಕ ಆ ರಾಜರು ಏನೇನು ಕಾರ್ಯಗಳನ್ನು ಮಾಡಿದರು ಮತ್ತು ಹೇಗೆ ಮಾಡಿದರು? ಎಂಬುದನ್ನು ಹೇಳಿರಿ.”

ಸೂತಪುರಾಣಿಕರು ಅವರಿಗೆ ಹೀಗೆ ಉತ್ತರಿಸಿದರು :

“ಅನಂತರ ಮಹಾರಾಜಪರೀಕ್ಷಿತನು ಇಂದ್ರಪ್ರಸ್ಥದಿಂದ ಸಾವಿರಾರು ಮಂದಿ ದೊಡ್ಡ ವ್ಯಾಪಾರಿಪ್ರಮುಖರನ್ನು ಕರೆಯಿಸಿ ಅವರು ಮಥುರಾನಗರಿಯಲ್ಲಿ ನೆಲೆಸುವಂತೆ ಮಾಡಿದನು. ಸಾರ್ವಭೌಮನು ಇವರನ್ನು ಮಾತ್ರವಲ್ಲದೆ ಮಥುರಾನಗರದಲ್ಲಿದ್ದ ಬ್ರಾಹ್ಮಣಶ್ರೇಷ್ಠರನ್ನೂ ಮತ್ತು ಪ್ರಾಚೀನರಾದ ವಾನರಶ್ರೇಷ್ಠರನ್ನೂ ಕರೆಯಿಸಿ, ಅವರು ಮಾನನೀಯರಾಗಿದ್ದುದನ್ನು ಗಮನಿಸಿ, ಅವರನ್ನು ಆ ಮಥುರಾನಗರಿಯಲ್ಲಿ ನೆಲೆಗೊಳಿಸಿದನು. ಹೀಗೆ ವಜ್ರನಾಭನು ಪರೀಕ್ಷಿದ್ರಾಜನ ಸಹಾಯದಿಂದಲೂ ಮತ್ತು ಶಾಂಡಿಲ್ಯ

ಮುನಿಗಳ ಅನುಗ್ರಹದಿಂದಲೂ ಹಿಂದೆ ಭಗವಂತನಾದ ಶ್ರೀಕೃಷ್ಣನು ತನ್ನ ಪ್ರೇಮಿಗಳಾಗಿದ್ದ ಗೋಪ-ಗೋಪಿಯರೊಡನೆ ಲೀಲೆಗಳನ್ನು ನಡೆಸಿದ ಎಲ್ಲ ಸ್ಥಾನಗಳನ್ನೂ ಶೋಧನೆಮಾಡಿದನು. ಆ ಲೀಲಾಸ್ಥಾನಗಳು ಯಾವುವು? ಎಂಬುದನ್ನು ಖಚಿತಪಡಿಸಿಕೊಂಡು ಆಯಾ ಲೀಲೆಗನುಗುಣವಾಗಿ ಆಯಾ ಸ್ಥಾನಗಳಿಗೆ ಹೆಸರುಗಳನ್ನು ಕೊಟ್ಟು ಭಗವಂತನ ಲೀಲಾವಿಗ್ರಹಗಳನ್ನು ಅಲ್ಲಿ ಸ್ಥಾಪನೆಮಾಡಿ ಅಲ್ಲಲ್ಲಿ ಅನೇಕ ಗ್ರಾಮಗಳನ್ನು ನೆಲೆಗೊಳಿಸಿದನು. ಅಲ್ಲಲ್ಲಿ ಲತಾಗೃಹಗಳನ್ನೂ ಉದ್ಯಾನವನಗಳನ್ನೂ ಸ್ಥಾಪಿಸಿ ಶಿವನೇ ಮುಂತಾದ ದೇವತೆಗಳ ಪ್ರತಿಷ್ಠೆಯನ್ನೂ ಮಾಡಿಸಿದನು. ಗೋವಿಂದದೇವ, ಹರಿದೇವ ಮುಂತಾದ ಹೆಸರುಗಳಿಂದ ಕೂಡಿದ ಶ್ರೀಕೃಷ್ಣಪರಮಾತ್ಮನ ವಿಗ್ರಹಗಳನ್ನೂ ಸ್ಥಾಪಿಸಿದನು. ಈ ನಾನಾ ಶುಭಕರ್ಮಗಳ ಮೂಲಕ ವಜ್ರಮಹಾರಾಜನು ತನ್ನ ರಾಜ್ಯದಲ್ಲಿ ಎಲ್ಲೆಡೆಗಳಲ್ಲೂ ಶ್ರೀಕೃಷ್ಣನೊಬ್ಬನಲ್ಲೇ ಏಕಾಂತಭಾವದಿಂದ ಕೂಡಿದ ಶ್ರೀಕೃಷ್ಣಭಕ್ತಿಯನ್ನು ಪ್ರಚುರಪಡಿಸಿ ಪರಮಾನಂದಿತನಾದನು. ಆತನ ಪ್ರಜೆಗಳಿಗೂ ಇದರಿಂದ ಪರಮಾನಂದವುಂಟಾಯಿತು. ಅವರು ಸದಾ ಭಗವಂತನ ಮಧುರವಾದ ನಾಮದ ಮತ್ತು ಲೀಲೆಗಳ ಸಂಕೀರ್ತನೆಯಲ್ಲಿ ಆಸಕ್ತರಾಗಿ ಪರಮಾನಂದಸಮುದ್ರದಲ್ಲಿ ಮುಳುಗಿದವರಾಗಿ ವಜ್ರನಾಭನ ರಾಜ್ಯಭಾರವನ್ನು ಕೊಂಡಾಡುತ್ತಿದ್ದರು. (ಶ್ಲೋಕ ೨-೭)

ಒಮ್ಮೆ ಪತಿಯ ವಿರಹದಿಂದ ವ್ಯಥೆಗೊಂಡಿದ್ದ ಬಹುಮಂದಿ ಕೃಷ್ಣ ಪತ್ನಿಯರು ಕಾಳಿಂದೀ (ಯಮುನಾ) ದೇವಿಯ ಬಳಿಗೆ ಹೋಗಿ ಆಕೆಯು ಮಾತ್ರ ಸಂತೋಷವಾಗಿಯೇ ಇರುವುದನ್ನು ಕಂಡು ಅಸೂಯೆಯಿಲ್ಲದ ಮನಸ್ಸಿನಿಂದ ಆಕೆಯನ್ನು ಪ್ರಶ್ನೆಮಾಡಿದರು :

"ಎಲೌ ಮಂಗಳಾಂಗಿಯೇ! ನಮ್ಮೆಲ್ಲರಂತೆಯೇ ನೀನೂ ಶ್ರೀಕೃಷ್ಣನ ಧರ್ಮಪತ್ನಿಯು. ಆದರೆ ನಾವೆಲ್ಲರೂ ವಿರಹಾಗ್ನಿಯಲ್ಲಿ ಬೆಂದುಹೋಗು ತ್ತಿರುವಾಗ ನೀನೊಬ್ಬಳು ಮಾತ್ರ ಸಂತೋಷವಾಗಿದ್ದಿಯಲ್ಲ? ಇದಕ್ಕೆ ಕಾರಣವೇನು? ಹೇಳಮ್ಮಾ!"

ಇದನ್ನು ಕೇಳಿ ಕಾಳಿಂದೀದೇವಿಗೆ ನಗೆಯುಂಟಾಯಿತು. ಆದರೂ

ಆಕೆಯು ಅವರೆಲ್ಲರೂ ತನಗೆ ಸವತಿಯರಾಗಿದ್ದರೂ ಸಹೋದರಿಯರಂತೆ ಎಂದು ಭಾವಿಸಿ ಕರಗಿದ ಹೃದಯದಿಂದ ಅವರಿಗೆ ಉತ್ತರಿಸಿದಳು.

"ರಾಧಿಕಾದೇವಿಯು ಆತ್ಮಾರಾಮನಾಗಿರುವ ಶ್ರೀಕೃಷ್ಣಪರಮಾತ್ಮ ನಿಗೆ ಆತ್ಮಭೂತಳಾಗಿದ್ದಾಳೆ. ನಾನು ದಾಸಿಯಂತೆ ಆಕೆಯ ಸೇವೆಯನ್ನು ಮಾಡುತ್ತಿದ್ದೇನೆ. ಅದರ ಪ್ರಭಾವದಿಂದಲೇ ವಿರಹವು ನನ್ನನ್ನು ಮುಟ್ಟುತ್ತಿಲ್ಲ. ಆ ಭಗವಂತನಿಗೆ ಎಷ್ಟು ಮಂದಿ ಪತ್ನಿಯರುಂಟೋ ಅವರೆಲ್ಲರೂ ರಾಧಾದೇವಿಯ ಅಂಶದ ವಿಸ್ತಾರಗಳು. ಶ್ರೀಕೃಷ್ಣ ಪರಮಾತ್ಮನೂ ಮತ್ತು ಶ್ರೀರಾಧಾದೇವಿಯೂ ಸದಾ ಪರಸ್ಪರ ಎದುರು ಬದುರಾಗಿರುತ್ತಾರೆ. ಪರಸ್ಪರ ನಿತ್ಯಸಂಯೋಗದಲ್ಲಿದ್ದಾರೆ. ಆದುದರಿಂದ ರಾಧಾಸ್ವರೂಪದಲ್ಲಿ ಅಂಶತಃ ಇರುವ ಎಲ್ಲ ಶ್ರೀಕೃಷ್ಣಪತ್ನಿಯರೂ ಶ್ರೀಕೃಷ್ಣನ ನಿತ್ಯಸಂಯೋಗದ ಭಾಗ್ಯವನ್ನು ಪಡೆದೇ ಇರುತ್ತಾರೆ. ಶ್ರೀಕೃಷ್ಣನೇ ರಾಧೆಯು ಮತ್ತು ರಾಧೆಯೇ ಶ್ರೀಕೃಷ್ಣನು. ಇವರಿಬ್ಬರ ಪ್ರೇಮವೇ ಕೊಳಲಿನರೂಪದಲ್ಲಿ ಬೆಳಗುತ್ತಿದೆ. 'ಸ ಏವ ಸಾ ಸ **ಸೈವಾಸ್ತಿ ವಂಶೀ ತತ್ಪ್ರೈವರೂಪಿಕಾ।'** ರಾಧೆಯ ಪ್ರೀತಿಯ ಗೆಳತಿ ಯಾದ ಚಂದ್ರಾವಳೀ ಎಂಬುವಳು ಶ್ರೀಕೃಷ್ಣನ ನಖಗಳೆಂಬ ಚಂದ್ರರ ಸೇವೆಯಲ್ಲಿ ಆಸಕ್ತಳಾಗಿರುವುದರಿಂದ 'ಚಂದ್ರಾವಳೀ' ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಾಳೆ. ಶ್ರೀರಾಧಾದೇವಿಯ ಮತ್ತು ಶ್ರೀಕೃಷ್ಣಪರಮಾತ್ಮನ ಸೇವೆಯಲ್ಲಿ ಮಿತಿಮೀರಿದ ಆಕಾಂಕ್ಷೆ-ಆಸಕ್ತಿಗಳನ್ನು ಹೊಂದಿರುವುದರಿಂದ ಆಕೆಯು ಎಂದಿಗೂ ಬೇರೆ ಸ್ವರೂಪವನ್ನು ಧರಿಸುವುದಿಲ್ಲ. ನಾನು ಇಲ್ಲೇ ಶ್ರೀರಾಧಾದೇವಿಯಲ್ಲೇ ಶ್ರೀರುಕ್ಮಿಣಿ ಮುಂತಾದವರು ಸೇರಿಕೊಂಡಿರು ವುದನ್ನು ನೋಡಿದ್ದೇನೆ. ನಿಮಗೂ ಕೂಡ ಶ್ರೀಕೃಷ್ಣನಿಂದ ಸರ್ವಾಂಶ ದಲ್ಲಿಯೂ ಅಗಲಿಕೆಯಾಗಿಲ್ಲ. ಆದರೆ ನೀವು ಈ ರಹಸ್ಯವನ್ನು ಈ ರೂಪದಲ್ಲಿ ಅರಿತಿಲ್ಲದಿರುವುದರಿಂದ ಹೀಗೆಲ್ಲಾ ಇಷ್ಟು ಕಳವಳಪಡುತ್ತಿದ್ದೀರಿ. ಹೀಗೆಯೇ ಈ ಹಿಂದೆ ಅಕ್ರೂರನು ಶ್ರೀಕೃಷ್ಣನನ್ನು ನಂದಗೋಕುಲದಿಂದ ಮಥುರೆಗೆ ಕರೆದುಕೊಂಡುಹೋಗಲು ಬಂದ ಸಮಯದಲ್ಲಿ ಗೋಪಿಯರಲ್ಲಿ ತೋರಿದ ಶ್ರೀಕೃಷ್ಣವಿರಹವೂ ಕೂಡ ವಾಸ್ತವಿಕವಾದ ವಿರಹವಾಗಿರಲಿಲ್ಲ. ವಿರಹದ ಆಭಾಸಮಾತ್ರವೇ ಆಗಿತ್ತು. ಈ ವಿಷಯವು ತಿಳಿಯುವವರೆಗೆ ಅವರು

ಅಗಲಿಕೆಯ ಕಷ್ಟವನ್ನು ಅನುಭವಿಸುತ್ತಿದ್ದರು. ಆದರೆ ಮಹಾತ್ಮನಾದ ಉದ್ಧವನು ಬಂದು ಸಮಾಧಾನವನ್ನು ಹೇಳಿದೊಡನೆಯೇ ಮೇಲೆ ಹೇಳಿದ ರಹಸ್ಯ ಅವರ ಅರಿವಿಗೆ ಬಂದಿತು. ನಿಮಗೂ ಕೂಡ ಆ ಉದ್ಧವನ ಸಮಾಗಮದ ಭಾಗ್ಯವೇನಾದರೂ ಒದಗಿದರೆ ಆಗ ಪ್ರಿಯತಮನಾದ ಶ್ರೀಕೃಷ್ಣನ ನಿತ್ಯವಿಹಾರದ ಸುಖವನ್ನು ನೀವೂ ಅನುಭವಿಸುವಿರಿ.”

(ಶ್ಲೋಕ ೧೧-೧೭)

ಸೂತಪುರಾಣಿಕರು ಹೇಳುತ್ತಾರೆ :

ಕಾಳಿಂದೀದೇವಿಯು ಹೀಗೆ ತಿಳಿವಳಿಕೆ ನೀಡಲು ಆ ಕೃಷ್ಣಪತ್ನಿಯರ ಮನಸ್ಸಿನಲ್ಲಿ–“ಯಾವುದಾದರೂ ಉಪಾಯದಿಂದ ಉದ್ಧವನ ದರ್ಶನವನ್ನು ಪಡೆಯಬೇಕು. ಇದರಿಂದ ನಮಗೆ ನಮ್ಮ ಪ್ರಿಯತಮನ ನಿತ್ಯಸಂಗಮದ ಸೌಭಾಗ್ಯವು ಸಿದ್ಧಿಸುವುದು. ಹೇಗಾದರೂ ಮಹಾತ್ಮನಾದ ಆ ಉದ್ಧವನ ದರ್ಶನವನ್ನು ಪಡೆಯಲೇಬೇಕು’–ಎಂಬ ದೃಢವಾದ ಆಸೆಯುಂಟಾಯಿತು. ಅವರು ಕಾಳಿಂದೀದೇವಿಗೆ ಹೀಗೆಂದರು : “ಸಖಿ! ನೀನು ಧನ್ಯಳು. ಕಡು ಧನ್ಯಳು. ಏಕೆಂದರೆ ನೀನು ಎಂದಿಗೂ ಪ್ರಾಣನಾಥನ ಅಗಲಿಕೆಯ ದುಃಖವನ್ನು ಹೊಂದುವುದಿಲ್ಲ. ಯಾವ ರಾಧಿಕಾದೇವಿಯ ಕೃಪೆಯಿಂದ ನಿನ್ನ ಇಷ್ಟಾರ್ಥವು ಈಡೇರಿತೋ ಆ ದೇವಿಗೆ ನಾವೂ ಈಗ ದಾಸಿಯರಾಗುವೆವು. ಮಹಾತ್ಮನಾದ ಉದ್ಧವನ ಸಮಾಗಮವಾದರೆ ನಮ್ಮ ಎಲ್ಲ ಇಷ್ಟಾರ್ಥಗಳೂ ಈಡೇರುವುದೆಂದು ಈಗತಾನೇ ಹೇಳಿದೆಯಲ್ಲವೇ? ಆದುದರಿಂದ ದಯೆಯಿಟ್ಟು ಆ ಉದ್ಧವನು ಅತಿಶೀಘ್ರವಾಗಿ ನಮಗೆ ದೊರೆಯಲು ಯಾವುದಾದರೊಂದು ಉಪಾಯವನ್ನು ನಮಗೆ ತಿಳಿಸು.”

ಸೂತಪುರಾಣಿಕರು ಹೇಳುತ್ತಾರೆ :

ಅವರ ಆ ಮಾತನ್ನು ಕೇಳಿ ಕಾಳಿಂದೀದೇವಿಯು ಶ್ರೀಕೃಷ್ಣಪರಮಾತ್ಮನ ಹದಿನಾರು ಕಲೆಗಳನ್ನೂ ಸ್ಮರಿಸುತ್ತಾ ಅವರಿಗೆ ಹೀಗೆಂದಳು :

“ಗೆಳತಿಯರೇ! ಶ್ರೀಕೃಷ್ಣನು ತನ್ನ ಪರಂಧಾಮಕ್ಕೆ ತೆರಳಿದ ಸಂದರ್ಭದಲ್ಲಿ ‘ಅಪ್ಪಾ ಉದ್ಧವಾ! ಬದರಿಕಾಶ್ರಮವು ಸಾಧನಾಭೂಮಿಯು.

ಆದುದರಿಂದ ನೀನು ನಿನ್ನ ಸಾಧನೆಯನ್ನು ಪೂರ್ಣಗೊಳಿಸಿಕೊಳ್ಳಲು ಅಲ್ಲಿಗೆ ಹೋಗು'–ಎಂದು ತನ್ನ ಮಂತ್ರಿ ಉದ್ಧವನಿಗೆ ತಿಳಿಸಿದ್ದನು. ಭಗವಂತನ ಆಜ್ಞೆಯಂತೆ ಮಹಾತ್ಮನಾದ ಉದ್ಧವನು ತನ್ನ ಸಾಕ್ಷಾತ್‌ಸ್ವರೂಪದಿಂದ ಬದರಿಕಾಶ್ರಮದಲ್ಲಿ ಬೆಳಗುತ್ತಿದ್ದಾನೆ. ಅಲ್ಲಿಗೆ ತತ್ತ್ವಜಿಜ್ಞಾಸುಗಳು ಯಾರು ಹೋದರೂ ಅವರಿಗೆ ಭಗವಂತನು ತನಗೆ ಉಪದೇಶಿಸಿದ್ದ ಜ್ಞಾನವನ್ನು ಅವನು ಉಪದೇಶಮಾಡುತ್ತಿರುತ್ತಾನೆ. ವ್ರಜಭೂಮಿಯಾದರೋ ಸಾಧನಾ ಭೂಮಿಯಲ್ಲ. ಸಾಧನೆಯ ಫಲರೂಪವಾದ ಭೂಮಿಯೇ ಆಗಿದೆ. ಇದನ್ನೂ ಕೂಡ ಇದರ ರಹಸ್ಯಗಳೊಡನೆ ಭಗವಂತನು ಮೊದಲೇ ಉದ್ಧವನಿಗೆ ತಿಳಿಸಿದ್ದನು. ಆದರೆ ಆ ಫಲಭೂಮಿಯು ಭಗವಂತನು ಅಂತರ್ಧಾನ ಹೊಂದಿದಾಗ ಆತನ ಜೊತೆಯಲ್ಲಿ ತಾನೂ ಸ್ಥೂಲದೃಷ್ಟಿಗೆ ಮರೆಯಾಗಿ ಬಿಟ್ಟಿದೆ. ಆದರೂ ಉದ್ಧವನ ದರ್ಶನವನ್ನು ಪಡೆಯಲು ಸಾಧ್ಯವಾಗುವ ಒಂದು ಸ್ಥಾನವಿದೆ. ಯಾವುದು ಆ ಸ್ಥಾನ? ಎಂದರೆ–ಗೋವರ್ಧನಪರ್ವತದ ಬಳಿ ಇರುವ ಗೋಪಿಕಾಸ್ತ್ರೀಯರ ವಿಹಾರಸ್ಥಳ. ಭಗವಂತನು ಅವರೊಡನೆ ವಿಹರಿಸಿದ ಪವಿತ್ರವಾದ ಸ್ಥಳ. ಅಲ್ಲಿಯ ಬಳ್ಳಿ-ಚಿಗುರುಗಳ ರೂಪದಲ್ಲಿ ಉದ್ಧವನು ಅವಶ್ಯವಾಗಿಯೂ ಅಲ್ಲಿರುತ್ತಾನೆ. ಲತೆಗಳ ರೂಪದಲ್ಲಿ ಆತನು ಅಲ್ಲಿರುವುದೇಕೆಂದರೆ–'ಭಗವಂತನಿಗೆ ಪ್ರಿಯತಮೆಯರಾದ ಗೋಪಿಕಾಸ್ತ್ರೀಯರ ಪಾದಧೂಳಿಯು ತನ್ನ ಮೇಲೆ ಬೀಳಲಿ'–ಎಂಬ ಪವಿತ್ರವಾದ ಆಶಯದಿಂದ. ಉದ್ಧವನ ವಿಷಯದಲ್ಲಿ ಮತ್ತೊಂದು ನಿಶ್ಚಿತವಾದ ವಿಷಯವಿದೆ. ಭಗವಂತನ ಉತ್ಸವವೆಲ್ಲವೂ ಉದ್ಧವನ ಒಂದು ಅಂಗವಾಗುತ್ತವೆ. ಅವನು ಆ ಉತ್ಸವದಿಂದ ಎಂದಿಗೂ ಬೇರ್ಪಡುವುದಿಲ್ಲ. ಆದುದರಿಂದ ಈಗ ನೀವು ವಜ್ರನಾಭನನ್ನು ಜೊತೆಯಲ್ಲಿ ಕರೆದುಕೊಂಡು ಅಲ್ಲಿಗೆ ಹೋಗಿ ಕುಸುಮ ಸರೋವರದ ಬಳಿ ನಿಲ್ಲಿರಿ. ಭಗವದ್ಭಕ್ತರ ಮಂಡಲಿಯನ್ನು ಅಲ್ಲಿ ಸೇರಿಸಿ ವೀಣೆ, ಕೊಳಲು ಮತ್ತು ಮೃದಂಗವೇ ಮುಂತಾದ ವಾದ್ಯಗಳೊಡನೆ ಭಗವಂತನ ನಾಮಗಳ ಮತ್ತು ಲೀಲೆಗಳ ಸಂಕೀರ್ತನೆ, ಭಗವಂತನಿಗೆ ಸಂಬಂಧಪಟ್ಟ ಕಾವ್ಯ-ಕಥೆಗಳ ಶ್ರವಣ ಮತ್ತು ಭಗವಂತನ ಗುಣಗಳ ಗಾನಗಳಿಂದ ಕೂಡಿದ ಸರಸಸಂಗೀತ ಇವುಗಳ ಮೂಲಕ ಉತ್ಸವವನ್ನು ಪ್ರಾರಂಭಿಸಿರಿ. ಹೀಗೆ ಆ ಮಹೋತ್ಸವವು ವಿಸ್ತರಿಸಲ್ಪಟ್ಟರೆ ನಿಶ್ಚಯವಾಗಿಯೂ

ನಿಮಗೆ ಮಹಾತ್ಮನಾದ ಉದ್ಧವನ ದರ್ಶನವು ಅಲ್ಲಿ ಆಗುವುದು. ಅವನು ತಾನೇ ನಿಮ್ಮ ಮನೋರಥವನ್ನು ಚೆನ್ನಾಗಿ ಪೂರ್ಣಗೊಳಿಸುವನು."*

ಸೂತಪುರಾಣಿಕರು ಹೇಳುತ್ತಾರೆ :

"ಎಲೈ ಮುನಿಗಳೇ! ಯಮುನಾದೇವಿಯು ಹೇಳಿದ ಮಾತುಗಳನ್ನು ಕೇಳಿ ಶ್ರೀಕೃಷ್ಣನ ಪತ್ನಿಯರಿಗೆ ತುಂಬಾ ಸಂತೋಷವುಂಟಾಯಿತು. ಅವರು ಯಮುನಾದೇವಿಗೆ ನಮಸ್ಕಾರಮಾಡಿ ಅಲ್ಲಿಂದ ಹಿಂದಿರುಗಿ ವಜ್ರನಾಭನಿಗೂ ಪರೀಕ್ಷಿದ್ರಾಜನಿಗೂ ಆ ಎಲ್ಲ ಮಾತುಗಳನ್ನೂ ತಿಳಿಸಿದರು.

ಪರೀಕ್ಷಿತಮಹಾರಾಜ! ನೀನು ಕೃತಾರ್ಥನಾದೆ. ಶ್ರೀಕೃಷ್ಣನ ಸಂಕೀರ್ತನೆಯಲ್ಲಿ ನಿನ್ನ ಹೃದಯವು ಎಷ್ಟು ಆಳವಾಗಿ ಮುಳುಗಿದೆ! ಶ್ರೀಕೃಷ್ಣನ ಪತ್ನಿಯರಲ್ಲಿ ಭಕ್ತಿಯನ್ನೂ ಮತ್ತು ವಜ್ರನಾಭನಲ್ಲಿ ಪ್ರೀತಿಯನ್ನೂ ನೀನು ತೋರಿಸುತ್ತಿರುವುದು ಮಹಾಭಾಗ್ಯ. ನೀನು ಮಾಡುತ್ತಿರುವುದೆಲ್ಲವೂ ನಿನಗೆ ಅನುರೂಪವಾಗಿಯೇ ಇದೆ. ಶ್ರೀಕೃಷ್ಣನೇ ಅಲ್ಲವೇ ನಿನಗೆ ಶರೀರವನ್ನೂ ವೈಭವವನ್ನೂ ಅನುಗ್ರಹಿಸಿದುದು? ಆತನ ಮರಿಮಗನಲ್ಲಿ ನೀನು ಪ್ರೇಮವನ್ನು ತುಂಬಿಕೊಂಡಿರುವುದು ನ್ಯಾಯವೇ ಆಗಿದೆ. ದ್ವಾರಕಾನಿವಾಸಿಗಳಲ್ಲಿಯೂ–'ಇವರನ್ನು ನೀನು ವ್ರಜಭೂಮಿಯಲ್ಲಿ ನೆಲೆಗೊಳಿಸಿ ಬರಬೇಕು'–ಎಂದು ಯಾರ ಬಗ್ಗೆ ಶ್ರೀಕೃಷ್ಣನು ಅರ್ಜುನನಿಗೆ ಆಜ್ಞಾಪಿಸಿದ್ದನೋ ಅಂತಹ ಈ ಜನರು ಅತ್ಯಂತ ಧನ್ಯರು. ಶ್ರೀಕೃಷ್ಣನ ಮನಸ್ಸೆಂಬ ಚಂದ್ರನು ರಾಧಾದೇವಿಯ ಮುಖದ ಪ್ರಭೆಯೆಂಬ ಚಂದ್ರಿಕೆಯಿಂದ ಕೂಡಿ ಅವರ ಲೀಲಾಭೂಮಿಯಾದ ಈ ವೃಂದಾವನವನ್ನು ತನ್ನ ಕಿರಣಗಳಿಂದ ಪ್ರಕಾಶಪಡಿಸುತ್ತಾ ಇಲ್ಲಿ ಸದಾ ಬೆಳಗುತ್ತಿದೆ. ಶ್ರೀಕೃಷ್ಣನು ಚಂದ್ರಸದೃಶನಾದರೂ ಪ್ರಾಕೃತಚಂದ್ರನಂತೆ ವೃದ್ಧಿ-ಕ್ಷಯಗಳೆಂಬ ವಿಕಾರಗಳನ್ನು ಹೊಂದುವುದಿಲ್ಲ. ಆತನ ಹದಿನಾರುಕಲೆಗಳಿಂದ ಸಾವಿರಾರು ಚಿನ್ಮಯವಾದ ಕಿರಣಗಳು ಹೊರಹೊಮ್ಮುತ್ತಿರುವುದರಿಂದ ಅವುಗಳಲ್ಲಿ ಸಾವಿರಾರು ಭೇದಗಳಾಗುತ್ತವೆ. ಈ ಎಲ್ಲ ಕಲೆಗಳಿಂದಲೂ ಸಂಪನ್ನನಾಗಿ

* ಸಂಸ್ಕೃತಭಾಷೆಯಲ್ಲೂ ಉದ್ಧವ ಎಂಬ ಶಬ್ದಕ್ಕೆ ಉತ್ಸವ ಅರ್ಥವೇ ಇದೆ. 'ಮಹ ಉದ್ಧವ ಉತ್ಸವಃ' (ಅಮರಕೋಶ)

ನಿತ್ಯಪರಿಪೂರ್ಣನಾದ ಶ್ರೀಕೃಷ್ಣನು ಈ ವ್ರಜಭೂಮಿಯಲ್ಲಿ ಸದಾ ಪ್ರಕಾಶಿಸುತ್ತಿರುತ್ತಾನೆ. ಈ ಭೂಮಿಗೂ ಮತ್ತು ಆ ಶ್ರೀಕೃಷ್ಣ ಸ್ವರೂಪಕ್ಕೂ ಯಾವ ಭೇದವೂ ಇಲ್ಲ. ಎಲೈ ರಾಜೇಂದ್ರನೇ! ಹೀಗೆ ನೋಡಿದಾಗ ವ್ರಜವಾಸಿಗಳೆಲ್ಲರೂ ಶ್ರೀಕೃಷ್ಣಪರಮಾತ್ಮನ ಅಂಗಗಳಲ್ಲಿ ಸೇರಿರುವರು. ಶರಣಾಗತರ ಭಯವನ್ನು ದೂರಮಾಡುವ ಈ ವಜ್ರನಾಭನ ಸ್ಥಾನವು ಶ್ರೀಕೃಷ್ಣನ ಬಲಚರಣದಲ್ಲಿದೆ. ಈ ಅವತಾರದಲ್ಲಿ ಭಗವಂತನಾದ ಶ್ರೀಕೃಷ್ಣನು ಇವರೆಲ್ಲರನ್ನೂ ತನ್ನ ಯೋಗಮಾಯೆಯಿಂದ ಆಕ್ರಮಿಸಿ ಕೊಂಡಿದ್ದಾನೆ. ಅದರ ಪ್ರಭಾವದಿಂದಲೇ ಇವರು ತಮ್ಮ ಸ್ವರೂಪವನ್ನು ಮರೆತುಬಿಟ್ಟಿದ್ದಾರೆ. ಇವರು ದುಃಖದಲ್ಲಿ ಮುಳುಗಿರುವುದಕ್ಕೂ ಇದೇ ಕಾರಣವು. ಇದರಲ್ಲಿ ಯಾವ ಸಂಶಯವೂ ಇಲ್ಲ. ಶ್ರೀಕೃಷ್ಣನ ಪ್ರಕಾಶ ವನ್ನು ಪಡೆಯದೇ ಯಾರಿಗೂ ತಮ್ಮ ಸ್ವರೂಪದ ಅರಿವು ಉಂಟಾಗುವುದಿಲ್ಲ. ಜೀವಗಳ ಅಂತಃಕರಣಗಳಲ್ಲಿ ಬೆಳಗುತ್ತಿರುವ ಶ್ರೀಕೃಷ್ಣನ ಪ್ರಕಾಶದ ಮೇಲೆ ಮಾಯೆಯ ತೆರೆಯು ಸದಾ ಆವರಿಸಿದೆ. ಇಪ್ಪತ್ತೆಂಟನೆಯ ದ್ವಾಪರದ ಕಡೆಯಲ್ಲಿ ಇದನ್ನು ಕೇಳಿ ಸಂತುಷ್ಟನಾದ ಪರೀಕ್ಷಿದ್ರಾಜನು ವಜ್ರನಾಭ ನೊಡನೆಯೂ ಶ್ರೀಕೃಷ್ಣಪತ್ನಿಯರೊಡನೆಯೂ ಒಡನೆಯೇ ಆ ನಿರ್ದಿಷ್ಟ ಸ್ಥಳಕ್ಕೆ ಹೋಗಿ ಯಮುನಾದೇವಿಯು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು. ಗೋವರ್ಧನಪರ್ವತಕ್ಕೆ ಹತ್ತಿರದಲ್ಲಿರುವ ವೃಂದಾವನದ ಸಖೀಸ್ಥಳದಲ್ಲಿ ಕುಸುಮಸರೋವರ ಪ್ರದೇಶದಲ್ಲಿ ಶ್ರೀಕೃಷ್ಣಸಂಕೀರ್ತ ನೋತ್ಸವವು ಪ್ರಾರಂಭಿಸಲ್ಪಟ್ಟಿತು. ವೃಷಭಾನುಕುಮಾರಿಯಾದ ಭಗವತೀ ಶ್ರೀರಾಧಾದೇವಿ ಮತ್ತು ಭಗವಾನ್ ಶ್ರೀಕೃಷ್ಣರ ಆ ವಿಹಾರಭೂಮಿಯು ಸಂಕೀರ್ತನದ ಕಾಂತಿಯಿಂದ ಬೆಳಗಲು, ಅಲ್ಲಿದ್ದ ಭಕ್ತಜನರೆಲ್ಲರೂ ಏಕಾಗ್ರ ಚಿತ್ತರಾದರು. ಅವರ ಮನೋವೃತ್ತಿಯು ಆ ಉತ್ಸವದಲ್ಲಿಯೇ ನೆಟ್ಟು ಕೊಂಡಿತು. ಅನಂತರ ಎಲ್ಲರೂ ನೋಡುತ್ತಿರುವಂತೆಯೇ ಅಲ್ಲಿನ ಹುಲ್ಲು-ಪೊದೆ-ಬಳ್ಳಿಗಳ ಸಮೂಹದಿಂದ ಮಹಾತ್ಮನಾದ ಉದ್ಧವನು ಪ್ರಕಟಗೊಂಡು ಎಲ್ಲರ ಮುಂದೆಯೂ ಕಾಣಿಸಿಕೊಂಡನು. ಶ್ಯಾಮಲ ವರ್ಣದ ದೇಹಕಾಂತಿ, ಪೀತಾಂಬರದ ಉಡುಗೆ, ಕತ್ತಿನಲ್ಲಿ ವನಮಾಲೆ ಮತ್ತು ಗುಲಗಂಜಿಗಳ ಮಾಲೆಯಿಂದ ಅಲಂಕೃತನಾಗಿ ಬೆಳಗುತ್ತಿದ್ದ ಆ

ಮಹಾಪುರುಷನ ಮುಖದಿಂದ ಗೋಪೀವಲ್ಲಭಗೋವಿಂದನ ಮಧುರ ಲೀಲೆಗಳ–ಗಾನವು ಮತ್ತೆ-ಮತ್ತೆ ಹೊರಹೊಮ್ಮುತ್ತಿತ್ತು. ಆ ಮಹಾತ್ಮನು ಬಂದಿದ್ದರಿಂದ ಸಂಕೀರ್ತನೋತ್ಸವದ ಕಳೆ ಬೆಳೆಯಿತು. ಸ್ಫಟಿಕಮಣಿಯಿಂದ ರಚಿತವಾದ ದಿವ್ಯಭವನದ ಉಪ್ಪರಿಗೆಯ ಮೇಲೆ ಬೆಳದಿಂಗಳು ಬಿದ್ದಾಗ ಅದರ ಕಾಂತಿಯು ಬಹುಪಾಲು ವೃದ್ಧಿಹೊಂದುವಂತೆ, ಉದ್ಧವನ ಆಗಮನದಿಂದ ಆ ಉತ್ಸವದ ಶೋಭೆಯೂ ಬಹುಗುಣವಾಗಿ ಹೆಚ್ಚಿತು. ಆಗ ಎಲ್ಲರೂ ಸುಖಸಮುದ್ರದಲ್ಲಿ ಮುಳುಗಿ ಎಲ್ಲವನ್ನೂ ಮರೆತುಬಿಟ್ಟರು. ಕೊಂಚಹೊತ್ತಿನನಂತರ ಪ್ರಜ್ಞೆಬಂದಾಗ ಶ್ರೀಕೃಷ್ಣರೂಪಿಯಾಗಿದ್ದ ಉದ್ಧವನನ್ನು ನೋಡಿ ಅವರ ಮನೋರಥವು ಈಡೇರಿತು. ಅವರು ಆತನನ್ನು ಚೆನ್ನಾಗಿ ಪೂಜಿಸಿದರು.” (ಶ್ಲೋಕ ೨೮-೩೫)

ಶ್ರೀಸ್ಕಾಂದಮಹಾಪುರಾಣದಲ್ಲಿ ಎರಡನೆಯದಾದ ವೈಷ್ಣವಖಂಡದ
ಶ್ರೀಮದ್ಭಾಗವತಮಾಹಾತ್ಮ್ಯದಲ್ಲಿ ಎರಡನೆಯ ಅಧ್ಯಾಯವು ಮುಗಿಯಿತು.

ಶ್ರೀಮದ್ಭಾಗವತಮಾಹಾತ್ಮ್ಯಮ್ ೩ನೆಯ ಅಧ್ಯಾಯ

ಶ್ರೀಮದ್ಭಾಗವತದ ಪರಂಪರೆ, ಮಾಹಾತ್ಮ್ಯ: ಭಾಗವತಶ್ರವಣದಿಂದ ಭಗವದ್ಭಾವದ ಪ್ರಾಪ್ತಿ

ಸೂತಪುರಾಣಿಕರು ಹೇಳುತ್ತಾರೆ :

ಅಥೋದ್ಧವಸ್ತು ತಾನ್ದೃಷ್ಟ್ವಾ ಕೃಷ್ಣಕೀರ್ತನತತ್ಪರಾನ್ ।
ಸತ್ಕೃತ್ಯಾಥ ಪರಿಷ್ವಜ್ಯ ಪರೀಕ್ಷಿತಮುವಾಚ ಹ ॥೧॥

ಅನಂತರ ಶ್ರೀಕೃಷ್ಣನ ಸಂಕೀರ್ತನೆಯಲ್ಲಿ ತತ್ಪರರಾಗಿದ್ದ ಅವರನ್ನು ಕಂಡು ಉದ್ಧವನಿಗೆ ಪರಮಾನಂದವಾಯಿತು. ಅವನು ಅವರೆಲ್ಲರನ್ನೂ ಸತ್ಕರಿಸಿದನು. ಪರೀಕ್ಷಿದ್ರಾಜನನ್ನು ಆಲಿಂಗಿಸಿಕೊಂಡು ಆತನು ಅವನಿಗೆ ಹೀಗೆಂದನು :

“ನೃಪವರ್ಯ! ನೀನು ಧನ್ಯನಾದೆ. ಅನನ್ಯವೂ ಅನವರತವೂ ಆದ ಶ್ರೀಕೃಷ್ಣಭಕ್ತಿಯಿಂದ ಪೂರ್ಣನಾಗಿರುವೆ. ಭಗವಂತನಾದ ಶ್ರೀಕೃಷ್ಣನು ತಾನೇ ಮುಂದುಗಡೆ ಕಾಣಿಸಿಕೊಂಡು ತನ್ನ ಮಾಯೆಯ ಪರದೆಯನ್ನು

ತೆಗೆದುಹಾಕುವನು. ಆಗ ಜೀವಗಳಿಗೆ ಪರಮಾತ್ಮನ ಪ್ರಕಾಶವು ದೊರೆಯುವುದು. ಆದರೆ ಈಗ ಆ ಸಮಯವು ಕಳೆದುಹೋಯಿತು. ಆದ್ದರಿಂದ ಈಗ ಆ ಪ್ರಕಾಶವನ್ನು ಪಡೆಯಲು ಬೇರೊಂದು ಉಪಾಯವನ್ನು ಹೇಳುತ್ತೇನೆ.; ಕೇಳಿರಿ. ಆ ಇಪ್ಪತ್ತೆಂಟನೆಯ ದ್ವಾಪರಯುಗವನ್ನು ಬಿಟ್ಟು ಬೇರೆ ಸಮಯದಲ್ಲಿ ಶ್ರೀಕೃಷ್ಣತತ್ತ್ವದ ಪ್ರಕಾಶವನ್ನು ಪಡೆಯಬೇಕಾದರೆ ಅದು ಶ್ರೀಮದ್ಭಾಗವತದ ಮೂಲಕವಾಗಿ ಮಾತ್ರವೇ ಸಾಧ್ಯವಾಗುವುದು.

ಶ್ರೀಮದ್ಭಾಗವತಂ ಶಾಸ್ತ್ರಂ ಯತ್ರ ಭಾಗವತೈರ್ಯದಾ ।
ಕೀರ್ತ್ಯತೇ ಶ್ರೂಯತೇ ಚಾಪಿ ಶ್ರೀಕೃಷ್ಣಸ್ತತ್ರ ನಿಶ್ಚಿತಮ್ ॥೧೨॥

ಶ್ರೀಮದ್ಭಾಗವತಂ ಯತ್ರ ಶ್ಲೋಕಂ ಶ್ಲೋಕಾರ್ಧಮೇವ ಚ ।
ತತ್ರಾಪಿ ಭಗವಾನ್ ಕೃಷ್ಣೋ ಬಲ್ಲವೀಭಿರ್ವಿರಾಜತೇ ॥೧೩॥

ಭಗವದ್ಭಕ್ತರು ಯಾವ ಸ್ಥಳ-ಸಮಯಗಳಲ್ಲಿ ಶ್ರೀಮದ್ಭಾಗವತಶಾಸ್ತ್ರದ ಸಂಕೀರ್ತನೆ, ಶ್ರವಣಗಳನ್ನು ಮಾಡುತ್ತಾರೆಯೋ ಆ ಸ್ಥಳ-ಸಮಯಗಳಲ್ಲಿ ಶ್ರೀಕೃಷ್ಣನು ನಿಶ್ಚಯವಾಗಿ ಇದ್ದೇ ಇರುವನು.

ಶ್ರೀಮದ್ಭಾಗವತದಲ್ಲಿ ಒಂದು ಶ್ಲೋಕವನ್ನಾಗಲೀ ಅರ್ಧಶ್ಲೋಕವನ್ನಾಗಲೀ ಎಲ್ಲಿ ಶ್ರವಣ-ಸಂಕೀರ್ತನೆಗಳನ್ನು ಮಾಡುತ್ತಾರೆಯೋ ಆ ಸ್ಥಳದಲ್ಲಿಯೂ ಕೂಡ ಭಗವಂತನಾದ ಶ್ರೀಕೃಷ್ಣನು ಗೋಪೀಸಮೇತನಾಗಿ ಬೆಳಗುತ್ತಿರುವನು.

ಭಾರತದೇಶದಲ್ಲಿ ಹುಟ್ಟಿ ಅದರಲ್ಲೂ ಮನುಷ್ಯಜನ್ಮವನ್ನು ಪಡೆದಿದ್ದರೂ ಕೂಡ ಪಾಪಕ್ಕೆ ಅಧೀನರಾಗಿ ಯಾರು ಶ್ರೀಮದ್ಭಾಗವತವನ್ನು ಕೇಳುವುದಿಲ್ಲವೋ ಅಂತಹವರು ತಮ್ಮ ಕೈಯಿಂದ ತಮ್ಮನ್ನು ತಾವೇ ಕೊಂದುಕೊಂಡಂತೆ ಆಗುತ್ತದೆ.* ಆತ್ಮಹತ್ಯೆಮಾಡಿಕೊಂಡಂತೆ ಆಗುತ್ತದೆ.

(ಶ್ಲೋಕ೧೪)

---

*ಇಲ್ಲಿ ಆತ್ಮಘಾತ, ಆತ್ಮಹತ್ಯೆ ಎಂದರೆ ತಮ್ಮ ಶರೀರವನ್ನು ನಾಶಪಡಿಸಿಕೊಳ್ಳು ವುದಷ್ಟೇ ಅಲ್ಲ. ಆತ್ಮಹತ್ಯೆ ಎಂದರೆ ಆತ್ಮಜ್ಞಾನವನ್ನು ಪಡೆಯದೇ ಇರುವುದು. ಆತ್ಮವನ್ನು ತಿಳಿಯದೇ ಇದ್ದರೆ ಅಂತಹವರ ಪಾಲಿಗೆ ಆತ್ಮವು ಇದ್ದರೂ ಇಲ್ಲದೇ

ಶ್ರೀಮದ್ಭಾಗವತಶಾಸ್ತ್ರವನ್ನು ಸದಾ ಯಾರು ಸೇವಿಸುತ್ತಾರೆಯೋ ಅವರು ತಮ್ಮ ತಂದೆಯನ್ನೂ, ತಾಯಿಯನ್ನೂ, ಪತ್ನಿಯನ್ನೂ ಮತ್ತು ಆ ಮೂವರ ಕುಲಗಳನ್ನೂ ಉದ್ಧಾರಮಾಡುತ್ತಾರೆ. (ಶ್ಲೋಕ ೧೫)

ಶ್ರೀಮದ್ಭಾಗವತದ ಸೇವನೆಯಿಂದ ವಿಪ್ರರಿಗೆ ವಿದ್ಯೆಯು (ಜ್ಞಾನವು) ದೊರೆಯುತ್ತದೆ. ರಾಜರಿಗೆ ಶತ್ರುಗಳ ಮೇಲೆ ವಿಜಯವು ದೊರಕುತ್ತದೆ. ವೈಶ್ಯರು ಧನವನ್ನು ಗಳಿಸುತ್ತಾರೆ. ಶೂದ್ರರಿಗೆ ಆರೋಗ್ಯಲಾಭವಾಗುತ್ತದೆ. ಸ್ತ್ರೀಯರಿಗೂ ಮತ್ತು ಇತರರಿಗೂ ಅವರ ಮನಸ್ಸಿನ ಇಷ್ಟಾರ್ಥಗಳು ಸಿದ್ಧಿಸುತ್ತವೆ. ಆದುದರಿಂದ ಭಾಗ್ಯವಂತನಾದ ಯಾವನು ತಾನೇ ಭಾಗವತವನ್ನು ಸದಾ ಸೇವಿಸುವುದಿಲ್ಲ? ಅನೇಕ ಜನ್ಮಗಳಲ್ಲಿ ಚೆನ್ನಾಗಿ ಸಿದ್ಧಿಯನ್ನು ಪಡೆದವನಿಗೆ ಮಾತ್ರವೇ ಶ್ರೀಮದ್ಭಾಗವತವು ದೊರೆಯುವುದು. ಅದರಿಂದ ಭಗವಂತನ ಪ್ರಕಾಶವು ಲಭಿಸುವುದು. ಭಗವದ್ಭಕ್ತಿಯು ಅಲ್ಲಿಯೇ ಉಂಟಾಗುವುದು. ಹಿಂದಿನ ಕಾಲದಲ್ಲಿ ಸಾಂಖ್ಯಾಯನ (ಕಪಿಲ) ಮುನಿಗಳ ಅನುಗ್ರಹದಿಂದ ಅದನ್ನು ಬೃಹಸ್ಪತ್ಯಾಚಾರ್ಯರು ಪಡೆದರು. ಬೃಹಸ್ಪತ್ಯಾಚಾರ್ಯರು ನನಗೆ ಅದನ್ನು ಅನುಗ್ರಹಿಸಿದರು. ಇದರಿಂದಲೇ ನಾನು ಶ್ರೀಕೃಷ್ಣನಿಗೆ ಪ್ರಿಯಮಿತ್ರನಾಗಲು ಸಾಧ್ಯವಾಯಿತು. ಎಲೈ ವಿಷ್ಣುರಾತನೇ! ಬೃಹಸ್ಪತ್ಯಾಚಾರ್ಯರು ನನಗೆ ಭಾಗವತಕ್ಕೆ ಸಂಬಂಧಪಟ್ಟ ಒಂದು ಆಖ್ಯಾಯಿಕೆಯನ್ನೂ ಹೇಳಿದ್ದರು. ಅದನ್ನು ಕೇಳು, ಮಹಾರಾಜ! ಆ ಆಖ್ಯಾಯಿಕೆಯಿಂದ ಭಾಗವತಶ್ರವಣದ ಸಂಪ್ರದಾಯದ ಕ್ರಮವೂ ನಮಗೆ ತಿಳಿಯುತ್ತದೆ. (ಶ್ಲೋಕ ೧೬-೨೦)

ಶ್ರೀಬೃಹಸ್ಪತ್ಯಾಚಾರ್ಯರು ಹೇಳುತ್ತಾರೆ :

"ತನ್ನ ಮಾಯೆಯಿಂದ ಪುರುಷರೂಪವನ್ನು ತಾಳಿದ ಭಗವಂತನಾದ ಶ್ರೀಕೃಷ್ಣನು ಸೃಷ್ಟಿಯನ್ನು ಮಾಡಲು ಸಂಕಲ್ಪಿಸಿದಾಗ ಆತನ ದಿವ್ಯ

ಇದ್ದಂತೆಯೇ. ಈಶಾವಾಸ್ಯೋಪನಿಷತ್ತಿನಲ್ಲಿ 'ಯೇ ಕೇಚಾತ್ಮಹನೋ ಜನಾಃ' ಎಂಬಲ್ಲಿ ಇದೇ ಅರ್ಥದಲ್ಲಿಯೇ 'ಆತ್ಮಹನಃ' ಎಂಬ ಪದವನ್ನು ಪ್ರಯೋಗಿಸಿದೆ.

ಮಂಗಳವಿಗ್ರಹದಿಂದ ಮೂವರು ಪುರುಷರು ಪ್ರಕಟಗೊಂಡರು. ಆ ಮೂವರಲ್ಲಿ ರಜೋಗುಣದ ಪ್ರಾಧಾನ್ಯದಿಂದ ಬ್ರಹ್ಮದೇವರೂ, ಸತ್ತ್ವಗುಣದ ಪ್ರಧಾನತೆಯಿಂದ ಮಹಾವಿಷ್ಣುವೂ ಮತ್ತು ತಮೋಗುಣದ ಪ್ರಾಧಾನ್ಯದಿಂದ ರುದ್ರದೇವರೂ ಪ್ರಕಟಗೊಂಡರು. ಪರಮಾತ್ಮನು ಈ ಮೂವರಿಗೆ ಕ್ರಮವಾಗಿ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಲಯಗಳ ಅಧಿಕಾರವನ್ನು ಕೊಟ್ಟನು. ಆಗ ಭಗವಂತನ ನಾಭಿಕಮಲದಿಂದ ಜನಿಸಿದ ಬ್ರಹ್ಮದೇವರು ಆತನಿಗೆ ತಮ್ಮ ಇಷ್ಟಾರ್ಥವನ್ನು ನಿವೇದಿಸಿಕೊಂಡರು. ತಮ್ಮ ಮನೋಭಾವವನ್ನು ಹೀಗೆ ಆತನಲ್ಲಿ ಅರಿಕೆಮಾಡಿಕೊಂಡರು :

ತ್ವಯಾ ಸರ್ಗೇ ನಿಯುಕ್ತೋಽಸ್ಮಿ ಪಾಪೀಯಾನ್ ಮಾಂ ರಜೋಗುಣಃ।
ತ್ವತ್ಸ್ಮೃತೌ ನೈವ ಬಾಧೇತ ತಥೈವ ಕೃಪಯಾ ಪ್ರಭೋ ॥೨೪॥

"ಓ ನಾರಾಯಣನೇ! ಆದಿಪುರುಷನೇ! ಪರಮಾತ್ಮನೇ! ನಿನಗೆ ನಮಸ್ಕಾರವು. ನೀನು ನನ್ನನ್ನು ಸೃಷ್ಟಿಕಾರ್ಯಮಾಡಲು ನೇಮಿಸಿದ್ದೀಯೆ. ಪಾಪಿಷ್ಠವಾದ ರಜೋಗುಣವು ನನಗೆ ನಿನ್ನ ಸ್ಮರಣೆಗೆ ಅಡ್ಡಿಯನ್ನು ಮಾಡದೇ ಇರುವಂತೆ ಅನುಗ್ರಹಮಾಡಯ್ಯ."

ಬೃಹಸ್ಪತಿಗಳು ಹೇಳುತ್ತಾರೆ :

ಬ್ರಹ್ಮದೇವರು ಸೃಷ್ಟಿಗೆ ಮೊದಲು ಮೇಲೆ ಹೇಳಿದಂತೆ ಪ್ರಾರ್ಥನೆ ಮಾಡಲು ಶ್ರೀಭಗವಂತನು ಅವರಿಗೆ ಶ್ರೀಮದ್ಭಾಗವತವನ್ನು ಉಪದೇಶ ಮಾಡಿ–"ಬ್ರಹ್ಮನೇ! ಇದನ್ನು ಸೇವಿಸು. ಇದರಿಂದ ನಿನ್ನ ಇಷ್ಟಾರ್ಥವು ಸಿದ್ಧಿಸುತ್ತದೆ"–ಎಂದು ಆಣತಿಯಿತ್ತನು. ಭಾಗವತದ ಉಪದೇಶವನ್ನು ಪಡೆದು ಬ್ರಹ್ಮದೇವರಿಗೆ ತುಂಬಾ ಸಂತೋಷವುಂಟಾಯಿತು. ಅವರು ಶ್ರೀಕೃಷ್ಣನ ಪ್ರಾಪ್ತಿಗಾಗಿಯೂ ಮತ್ತು ಏಳು ಆವರಣಗಳನ್ನು ಭಂಜಿಸುವುದಕ್ಕಾಗಿಯೂ ಶ್ರೀಮದ್ಭಾಗವತದ ಸಪ್ತಾಹಪಾರಾಯಣವನ್ನು ಮಾಡಿದರು. ಸಪ್ತಾಹಯಜ್ಞದ ವಿಧಿಯಂತೆ ಏಳು ದಿನಗಳ ಕಾಲ ಶ್ರೀಮದ್ಭಾಗವತವನ್ನು ಸೇವಿಸಿದ್ದರಿಂದ ಬ್ರಹ್ಮದೇವರ ಎಲ್ಲ ಮನೋರಥಗಳೂ ಈಡೇರಿದುವು. ಇದರಿಂದ ಅವರು ಸದಾ ಭಗವತ್ಸ್ಮರಣಪೂರ್ವಕ ಸೃಷ್ಟಿಯನ್ನು

ವಿಸ್ತಾರಪಡಿಸುತ್ತಾ ಮತ್ತೆ ಮತ್ತೆ ಸಪ್ತಾಹಯಜ್ಞದ ಅನುಷ್ಠಾನವನ್ನು ಮಾಡುತ್ತಿರುತ್ತಾರೆ. ಬ್ರಹ್ಮದೇವರಂತೆ ಮಹಾವಿಷ್ಣುವೂ ಕೂಡ ತನ್ನ ಇಷ್ಟಾರ್ಥದ ಸಿದ್ಧಿಗಾಗಿ ಆ ಪರಮಪುರುಷನಾದ ಪರಮಾತ್ಮನನ್ನು ಪ್ರಾರ್ಥನೆಮಾಡಿದನು. ಏಕೆಂದರೆ : ಆ ಪುರುಷೋತ್ತಮನೇ ವಿಷ್ಣುವನ್ನು ಪ್ರಜಾಪಾಲನರೂಪವಾದ ಕರ್ಮದಲ್ಲಿ ನೇಮಕಮಾಡಿದನು.

(ಶ್ಲೋಕ ೨೫-೨೮)

ವಿಷ್ಣುವು ಪರಮಪುರುಷನಲ್ಲಿ ಪ್ರಾರ್ಥನೆಮಾಡುತ್ತಾನೆ :

"ದೇವನೇ! ನಿನ್ನ ಆಜ್ಞೆಯಂತೆ ಕರ್ಮ ಮತ್ತು ಜ್ಞಾನಗಳನ್ನು ಸಾಧಿಸುವುದಕ್ಕಾಗಿ ಪ್ರವೃತ್ತಿ ಮತ್ತು ನಿವೃತ್ತಿಗಳ ಮೂಲಕ ಯಥೋಚಿತವಾದ ರೂಪದಿಂದ ಪ್ರಜೆಗಳನ್ನು ಪಾಲಿಸುತ್ತೇನೆ. ಕಾಲದ ಕ್ರಮದಂತೆ ಧರ್ಮಕ್ಕೆ ಯಾವಾಗ ಗ್ಲಾನಿಯುಂಟಾಗುವುದೋ ಆಗಲೆಲ್ಲಾ ಅನೇಕ ಅವತಾರಗಳನ್ನೆತ್ತಿ ಮತ್ತೆ ಧರ್ಮವನ್ನು ಸ್ಥಾಪಿಸುತ್ತೇನೆ. ಯಾರು ಭೋಗವನ್ನು ಅಪೇಕ್ಷಿಸುತ್ತಾರೋ ಅವರಿಗೆ ಅವರು ಮಾಡಿದ ಯಜ್ಞಾದಿಕರ್ಮಗಳ ಫಲವನ್ನು ಅವಶ್ಯವಾಗಿ ಕೊಡುವೆನು. ಮೋಕ್ಷವನ್ನು ಬಯಸುವ ವಿರಕ್ತರಿಗೆ ಐದು ಬಗೆಯ ಮುಕ್ತಿಯನ್ನು ಅನುಗ್ರಹಿಸುವೆನು. ಆದರೆ ಯಾರು ಆ ಮೋಕ್ಷವನ್ನೂ ಬಯಸುವುದಿಲ್ಲವೋ ಅವರನ್ನು ಹೇಗೆ ಪಾಲಿಸಲಿ? ಇದಲ್ಲದೆ ನಾನು ನನ್ನ ರಕ್ಷಣೆಯನ್ನು ಹೇಗೆ ಮಾಡಿಕೊಳ್ಳಲಿ? ನನ್ನ ಲಕ್ಷ್ಮಿಯ ರಕ್ಷಣೆಯನ್ನು ಹೇಗೆ ಮಾಡಲಿ? ಇದಕ್ಕೆ ಉಪಾಯ ಯಾವುದು? ಎಂಬುದನ್ನು ತಿಳಿಸುವವನಾಗು."

ಹೀಗೆ ಪ್ರಾರ್ಥಿಸಿದ ಆ ವಿಷ್ಣುವಿಗೂ ಕೂಡ ಆ ಆದಿಪುರುಷನು ಶ್ರೀಮದ್ಭಾಗವತದ ಸೇವನೆಯನ್ನೇ ಉಪಾಯವನ್ನಾಗಿ ಬೋಧಿಸಿದನು. ಅವನಿಗೆ ಶ್ರೀಮದ್ಭಾಗವತವನ್ನು ಉಪದೇಶಮಾಡಿ–"ಇದನ್ನು ಪಠಿಸು. ನಿನ್ನ ಎಲ್ಲ ಇಷ್ಟಾರ್ಥಗಳೂ ಸಿದ್ಧಿಸುತ್ತವೆ"–ಎಂದು ತಿಳಿಸಿದನು. ಅನಂತರ ವಿಷ್ಣುವಿನ ಮನಸ್ಸು ಪ್ರಸನ್ನವಾಗಿ ಆತನು ಪ್ರತಿಮಾಸದಲ್ಲೂ

ಶ್ರೀಮದ್ಭಾಗವತವನ್ನು ಸ್ಮರಿಸುತ್ತಾ ಲಕ್ಷ್ಮೀದೇವಿಯೊಡನೆ ಕೂಡಿ ತನ್ನ ಕಾರ್ಯವನ್ನು ನಡೆಸಲು ಸಮರ್ಥನಾದನು. ವಿಷ್ಣುವು ಭಾಗವತದ ಪ್ರವಚನಮಾಡುವವನಾಗಿದ್ದು ಲಕ್ಷ್ಮೀದೇವಿಯು ಶ್ರೋತೃವಾಗಿದ್ದಾಗ ಭಾಗವತಶ್ರವಣವು ಒಂದು ತಿಂಗಳಿಗೇ ಮುಗಿಯುತ್ತದೆ. ಲಕ್ಷ್ಮೀದೇವಿಯೇ ಪ್ರವಚನಮಾಡುವವಳಾಗಿ ವಿಷ್ಣುವು ಅದರ ಶ್ರವಣದಲ್ಲಿ ಆಸಕ್ತನಾದಾಗ, ಎರಡು ತಿಂಗಳು ಪೂರ್ತಿ ಕಥೆಯ ರಸಾಸ್ವಾದನೆಯು ನಡೆದು ತುಂಬಾ ಶೋಭಿಸುತ್ತದೆ. ವಿಷ್ಣುವು ಅಧಿಕಾರದಲ್ಲಿರುವುದರಿಂದ ಆತನಿಗೆ ಜಗತ್ತನ್ನು ಪಾಲಿಸುವ ಚಿಂತೆಯೂ ಇರುತ್ತದೆ. ಆದರೆ ಲಕ್ಷ್ಮೀದೇವಿಗೆ ಈ ಚಿಂತೆ ಇಲ್ಲವಾದ್ದರಿಂದ ಆಕೆಯ ಹೃದಯವು ನೆಮ್ಮದಿಯಾಗಿರುತ್ತದೆ. ಆದುದರಿಂದ ಆಕೆಯ ಮುಖದಿಂದ ಬರುವ ಭಾಗವತದ ಕಥೆಯ ಪ್ರವಚನದಲ್ಲಿ ಹೆಚ್ಚು ರಸದ ಸವಿಯುವಿಕೆ ಕಂಡುಬರುವುದು.

ಇದಾದನಂತರ ಭಗವಂತನಿಂದ ಹಿಂದೆ ಸಂಹಾರಕಾರ್ಯವನ್ನು ಮಾಡಲು ನೇಮಿಸಲ್ಪಟ್ಟ ರುದ್ರದೇವರೂ ಕೂಡ ತಮ್ಮ ಸಾಮರ್ಥ್ಯದ ಅಭಿವೃದ್ಧಿಗಾಗಿ ಆ ಪರಮಪುರುಷನನ್ನೇ ಪ್ರಾರ್ಥನೆಮಾಡಿದರು.

ರುದ್ರದೇವರು ಪ್ರಾರ್ಥನೆಮಾಡುತ್ತಾರೆ :

"ಓ ಪ್ರಭುವೇ! ನನ್ನಲ್ಲಿ ನಿತ್ಯ-ನೈಮಿತ್ತಿಕ ಮತ್ತು ಪ್ರಾಕೃತವಾದ ಸಂಹಾರಕಾರ್ಯಗಳನ್ನು ಮಾಡುವ ಶಕ್ತಿಗಳಿವೆ. ಆದರೆ ಆತ್ಯಂತಿಕ ಸಂಹಾರವನ್ನು ಮಾಡುವ ಶಕ್ತಿ ಇಲ್ಲವಾಗಿದೆ. ಇದು ಬಹಳ ದುಃಖದ ವಿಷಯ. ನನ್ನ ಈ ಕೊರತೆಯನ್ನು ನೀಗಿಸಬೇಕೆಂದು ನಿನ್ನನ್ನು ಪ್ರಾರ್ಥಿಸುತ್ತೇನೆ."

ಬೃಹಸ್ಪತ್ಯಾಚಾರ್ಯರು ಹೇಳುತ್ತಾರೆ :

ನಾರಾಯಣನು ಆ ರುದ್ರದೇವರಿಗೂ ಕೂಡ ಅವರ ಇಷ್ಟಾರ್ಥಸಿದ್ಧಿಗಾಗಿ ಶ್ರೀಮದ್ಭಾಗವತವನ್ನೇ ಉಪದೇಶಮಾಡಿದನು. ಅದನ್ನು ಸೇವಿಸಿದ್ದರಿಂದ ರುದ್ರದೇವರು ತಮೋಗುಣವನ್ನು ಜಯಿಸಿಬಿಟ್ಟರು. ಅವರು ಒಂದು ವರ್ಷದಲ್ಲಿ ಒಂದು ಪಾರಾಯಣ ಎಂಬ ಕ್ರಮದಲ್ಲಿ ಭಾಗವತದ ಕಥೆಯನ್ನು ಸೇವಿಸಿದರು. ಇದರಿಂದ ಅವರು ತಮೋಗುಣದ ಮೇಲೆ ಜಯವನ್ನು ಗಳಿಸಿ ಆತ್ಯಂತಿಕಸಂಹಾರದ (ಮೋಕ್ಷದ) ಶಕ್ತಿಯನ್ನೂ ಪಡೆದುಕೊಂಡರು."

ಉದ್ಧವನು ಹೇಳುತ್ತಾನೆ :

"ಶ್ರೀಮದ್ಭಾಗವತದ ಮಾಹಾತ್ಮ್ಯಕ್ಕೆ ಸಂಬಂಧಪಟ್ಟ ಈ ಆಖ್ಯಾಯಿಕೆಯನ್ನು ನಾನು ನನ್ನ ಗುರು ಬೃಹಸ್ಪತ್ಯಾಚಾರ್ಯರಿಂದ ಕೇಳಿದೆನು. ಅವರಿಂದಲೇ ಶ್ರೀಮದ್ಭಾಗವತದ ಉಪದೇಶವನ್ನು ಪಡೆದು ಅವರ ಅಡಿದಾವರೆಗಳಿಗೆ ನಮಸ್ಕಾರಮಾಡಿ ನಾನೂ ಪರಮಾನಂದಭರಿತನಾದೆನು. ಅನಂತರ ಭಗವಂತನಾದ ಮಹಾವಿಷ್ಣುವಿನಂತೆ ನಾನೂ ಒಂದು ತಿಂಗಳಿನವರೆಗೆ ಶ್ರೀಮದ್ಭಾಗವತದ ಕಥಾಮೃತವನ್ನು ಸವಿದೆನು. ಇಷ್ಟು ಮಾತ್ರದಿಂದಲೇ ನನಗೆ ಶ್ರೀಕೃಷ್ಣಪರಮಾತ್ಮನ ಪ್ರಿಯಮಿತ್ರನಾಗುವ ಭಾಗ್ಯ ದೊರೆಯಿತು. ಅನಂತರ ಭಗವಂತನು ನನ್ನನ್ನು ವ್ರಜದಲ್ಲಿ ತನ್ನ ಪ್ರಿಯತಮೆಯರಾದ ಗೋಪಿಯರ ಬಳಿಗೆ ಸಂದೇಶವಾಹಕನನ್ನಾಗಿ ನೇಮಿಸಿದನು. ಭಗವಂತನು ತನ್ನ ಲೀಲಾಪರಿಕರಗಳೊಂದಿಗೆ ಸದಾ ವಾಸ್ತವವಾಗಿ ವಿಹರಿಸುತ್ತಿರುವುದರಿಂದ ಗೋಪಿಯರಿಗೆ ಶ್ರೀಕೃಷ್ಣನಿಂದ ಎಂದಿಗೂ ಅಗಲಿಕೆಯುಂಟಾಗುವುದಿಲ್ಲ. ಆದರೂ ಭ್ರಮೆಯಿಂದ ಶ್ರೀಕೃಷ್ಣನಿಂದ ತಮಗೆ ಅಗಲಿಕೆಯುಂಟಾಯಿತೆಂದು ತಿಳಿದು ವಿರಹವೇದನೆಯನ್ನು ಗೋಪಿಯರು ಅನುಭವಿಸುತ್ತಿದ್ದಾಗ ಭಗವಂತನು ಅವರನ್ನು ಕುರಿತು ಭಾಗವತದ ಸಂದೇಶವನ್ನು ನನ್ನ ಮೂಲಕ ಕಳುಹಿಸಿಕೊಟ್ಟನು. ಆ ಸಂದೇಶವನ್ನು ನನ್ನಿಂದ ಯಥಾಮತಿಯಾಗಿ ಗ್ರಹಿಸಿ, ಗೋಪಿಯರೂ ಒಡನೆಯೇ ವಿರಹ ವೇದನೆಯಿಂದ ಬಿಡುಗಡೆಹೊಂದಿದರು. ನಾನು ಭಾಗವತದ ರಹಸ್ಯವನ್ನು ತಿಳಿಯಲಾಗದಿದ್ದರೂ ಅದರ ಚಮತ್ಕಾರವನ್ನು ಕಣ್ಣಿನಿಂದಲೇ ಕಂಡೆನು. ಇದಾದ ಮೇಲೆ ಬಹಳ ಸಮಯದನಂತರ ಬ್ರಹ್ಮಾದಿದೇವತೆಗಳು ಭಗವಂತನ ಬಳಿಗೆ ಬಂದು ಆತನನ್ನು ಪರಮಪದಕ್ಕೆ ದಯಮಾಡಿಸಬೇಕೆಂದು ಪ್ರಾರ್ಥನೆ ಮಾಡಿ ಹೋದರು. ಆಗ ಪ್ರಭುವು ಅಶ್ವತ್ಥವೃಕ್ಷದ ಬುಡದ ಬಳಿ ನಿಂತಿದ್ದ ನನಗೆ ಶ್ರೀಮದ್ಭಾಗವತವಿಷಯವಾದ ಆ ರಹಸ್ಯವನ್ನು ತಾನೇ ಉಪದೇಶಮಾಡಿ ನನ್ನ ಬುದ್ಧಿಯಲ್ಲಿ ಅದರ ದೃಢವಾದ ನಿಶ್ಚಯವು ಉಂಟಾಗುವಂತೆ ಮಾಡಿದನು. ಅದರ ಪ್ರಭಾವದಿಂದಲೇ ನಾನು ಬದರಿಕಾಶ್ರಮದಲ್ಲಿ ವಾಸವಾಗಿದ್ದರೂ ಇಲ್ಲಿ ವ್ರಜದ ಬಳ್ಳಿಗಳಲ್ಲಿಯೂ ವಾಸ ಮಾಡಲು ಸಾಧ್ಯವಾಗಿದೆ. ಅದರ ಬಲದಿಂದಲೇ ಇಲ್ಲಿ ನಾರದಕುಂಡದಲ್ಲಿ

ಸದಾ ಯಥೇಚ್ಛವಾಗಿ ಬೆಳಗುತ್ತಿರುತ್ತೇನೆ. ಭಗವಂತನ ಭಕ್ತರಿಗೆ ಶ್ರೀಮದ್ಭಾಗವತವನ್ನು ಸೇವಿಸುವುದರಿಂದ ಶ್ರೀಕೃಷ್ಣತತ್ತ್ವದ ಪ್ರಕಾಶ ವುಂಟಾಗುವುದು. ಆದುದರಿಂದ ನಾನು ಇಲ್ಲಿ ಇರುವ ಈ ಎಲ್ಲ ಭಕ್ತಜನರ ಕಾರ್ಯಸಿದ್ಧಿಗೋಸ್ಕರ ಶ್ರೀಮದ್ಭಾಗವತವನ್ನು ಪಾರಾಯಣಮಾಡುವೆನು. ಆದರೆ ಈ ಕೆಲಸದಲ್ಲಿ ನೀನೂ ನನಗೆ ಸಹಾಯಮಾಡಬೇಕು."

(ಶ್ಲೋಕ ೨೫-೫೧)

ಸೂತಪುರಾಣಿಕರು ಹೇಳುತ್ತಾರೆ :

ಇದನ್ನು ಕೇಳಿ ಪರೀಕ್ಷಿದ್ರಾಜನು ಉದ್ಧವನಿಗೆ ಪ್ರಣಾಮಮಾಡಿ ಹೀಗೆ ವಿಜ್ಞಾಪಿಸಿದನು :

"ಓ ಹರಿದಾಸಶಿಖಾಮಣಿಯೇ! ನೀನು ಇಲ್ಲಿ ನಿಶ್ಚಿಂತನಾಗಿ ಶ್ರೀಮದ್ಭಾಗವತದ ಸಂಕೀರ್ತನೆಯನ್ನು ಮಾಡು. ನಾನು ನಿನಗೆ ಏನು ಸಹಾಯ ಮಾಡಬೇಕು? ಎಂಬುದನ್ನು ಆಜ್ಞಾಪಿಸು."

ಸೂತಪುರಾಣಿಕರು ಹೇಳುತ್ತಾರೆ :

"ಇದನ್ನು ಕೇಳಿ ಸಂತೋಷಗೊಂಡ ಉದ್ಧವನು ಪರೀಕ್ಷಿತನಿಗೆ ಹೀಗೆಂದನು :

"ರಾಜೇಂದ್ರನೇ! ಶ್ರೀಕೃಷ್ಣನು ಈ ಭೂಮಿಯನ್ನು ತ್ಯಜಿಸಿದೊಡನೆಯೇ ಮಹಾಬಲಶಾಲಿಯಾದ ಕಲಿಪುರುಷನು ಇಲ್ಲಿ ತನ್ನ ಪ್ರಭುತ್ವ-ಪರಾಕ್ರಮಗಳನ್ನು ಹರಡುತ್ತಿದ್ದಾನೆ. ನಾನು ಶ್ರೀಮದ್ಭಾಗವತ ಪಾರಾಯಣದ ಶುಭಕಾರ್ಯವನ್ನು ಆಚರಿಸತೊಡಗಿದಾಗ ಆತನು ಇದಕ್ಕೆ ಅವಶ್ಯವಾಗಿ ದೊಡ್ಡ ವಿಘ್ನವನ್ನುಂಟುಮಾಡುವನು. ಆದುದರಿಂದ ನೀನು ದಿಗ್ವಿಜಯಕ್ಕೆ ಹೊರಟು ಕಲಿಯನ್ನು ಗೆದ್ದು ವಶಪಡಿಸಿಕೋ. ಇತ್ತಕಡೆ ನಾನೂ ಕೂಡ ನಿನ್ನ ಸಹಾಯದಿಂದ ವೈಷ್ಣವೀರೀತಿಯನ್ನು ಹಿಡಿದು ಒಂದು ತಿಂಗಳ ಕಾಲ ಇಲ್ಲಿ ಶ್ರೀಮದ್ಭಾಗವತ ಕಥೆಯ ರಸದೂಟವನ್ನು ಮಾಡಿಸುವೆನು. ಈ ಕಥಾರಸವನ್ನು ಹರಿಯಿಸಿ ಈ ಶ್ರೋತೃಗಳೆಲ್ಲರನ್ನೂ ಭಗವಂತನಾದ ಮಧುಸೂದನನ ನಿತ್ಯವಾದ ಗೋಲೋಕಧಾಮಕ್ಕೆ ಒಯ್ಯುವೆನು."

(ಶ್ಲೋಕ ೫೨-೫೬)

ಸೂತಪುರಾಣಿಕರು ಹೇಳುತ್ತಾರೆ :

"ಈ ಮಾತನ್ನು ಕೇಳಿ ಪರೀಕ್ಷಿದ್ರಾಜನಿಗೆ ಸಂತೋಷವೇನೋ ಉಂಟಾಯಿತು. ಆದರೆ ತಾನು ಕಲಿಯನ್ನು ನಿಗ್ರಹಿಸುವ ಕಾರ್ಯಕ್ಕೆ ಹೋಗಿ ಶ್ರೀಮದ್ಭಾಗವತದ ಕಥೆಯ ರಸದೌತಣವನ್ನು ತಪ್ಪಿಸಿಕೊಳ್ಳ ಬೇಕಾಗುವುದಲ್ಲಾ! ಎಂದು ಕಳವಳವೂ ಆತನಿಗೆ ಉಂಟಾಯಿತು. ಆತನು ಮಹಾತ್ಮನಾದ ಉದ್ಧವನಿಗೆ ತನ್ನ ಅಭಿಪ್ರಾಯವನ್ನು ವಿಜ್ಞಾಪಿಸಿದನು.

"ಮಹಾತ್ಮನೇ! ನಿನ್ನ ಆಜ್ಞೆಯಂತೆ ನಾನು ಕಲಿಯನ್ನು ಅವಶ್ಯವಾಗಿ ಗೆದ್ದು ವಶಪಡಿಸಿಕೊಳ್ಳುತ್ತೇನೆ. ಆದರೆ ನನಗೆ ಶ್ರೀಮದ್ಭಾಗವತವನ್ನು ಸವಿಯುವ ಭಾಗ್ಯ ಹೇಗೆ ದೊರೆಯುವುದು ? ನಿನ್ನ ಅಡಿದಾವರೆಗಳಲ್ಲಿ ಶರಣುಬಂದಿದ್ದೇನೆ. ಅನುಗ್ರಹಮಾಡು."

ಈ ವಿಜ್ಞಾಪನೆಯನ್ನು ಕೇಳಿ ಉದ್ಧವನು ಆತನಿಗೆ ಹೀಗೆಂದನು :

"ರಾಜೇಂದ್ರ! ನೀನು ಯಾವುದಕ್ಕೂ ಚಿಂತೆಪಡಬೇಡ. ಏಕೆಂದರೆ : ಭಗವಚ್ಛಾಸ್ತ್ರ ಶ್ರೀಮದ್ಭಾಗವತವನ್ನು ಗ್ರಹಿಸುವುದಕ್ಕೆ ನೀನೇ ಮುಖ್ಯನಾದ ಅಧಿಕಾರಿಯು. ಪರಮೋತ್ತಮಪಾತ್ರನು. ಲೋಕದಲ್ಲಿ ಮನುಷ್ಯರು ಬಗೆ-ಬಗೆಯ ಕರ್ಮಗಳಲ್ಲಿ ಆಸಕ್ತರಾಗಿ ಭಾಗವತಶ್ರವಣದ ಮಾತನ್ನೂ ಅರಿತಿಲ್ಲ. ಆದರೆ ನಿನ್ನ ಕಾರಣದಿಂದ, ನಿನ್ನ ಅನುಗ್ರಹದಿಂದ, ಈ ಭಾರತ ವರ್ಷದ ಬಹುಮಂದಿ ಜನರು ಶ್ರೀಮದ್ಭಾಗವತದ ಭಾಗ್ಯವನ್ನು ಪಡೆದು ಅದರಿಂದ ಶಾಶ್ವತವಾದ ಸುಖವನ್ನು ಅನುಭವಿಸುವರು. ಸಾಕ್ಷಾತ್ ಶ್ರೀಕೃಷ್ಣರೂಪಿಗಳಾದ ಭಗವಾನ್ ಶುಕಮಹರ್ಷಿಗಳೇ ನಿನಗೆ ಶ್ರೀಮದ್ಭಾಗವತಕಥೆಯನ್ನು ಉಪದೇಶಿಸುವರು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲವು. ಈ ಕಥೆಯ ಶ್ರವಣದಿಂದ ನೀನು ವ್ರಜೇಶ್ವರನಾದ ಶ್ರೀಕೃಷ್ಣನ ನಿತ್ಯಧಾಮವನ್ನು ಹೊಂದುವೆ. ಅನಂತರ ಈ ಭೂಮಿಯಲ್ಲೆಲ್ಲಾ ಶ್ರೀಮದ್ಭಾಗವತದ ಕಥೆಯ ಪ್ರಚಾರವಾಗುವುದು. ಆದುದರಿಂದ ನೀನು ಹೋಗಿ ಕಲಿಯನ್ನು ನಿಗ್ರಹಿಸು ; ವತ್ಸ!"

ಸೂತಪುರಾಣಿಕರು ಹೇಳುತ್ತಾರೆ :

"ಮಹಾತ್ಮನಾದ ಉದ್ಧವನ ಈ ಮಾತನ್ನು ಕೇಳಿ ಪರೀಕ್ಷಿದ್ರಾಜನು

ಆತನಿಗೆ ಪ್ರದಕ್ಷಿಣ-ನಮಸ್ಕಾರಗಳನ್ನು ಮಾಡಿ ದಿಗ್ವಿಜಯಕ್ಕಾಗಿ ಹೊರಟನು. ಇತ್ತಕಡೆ ವಜ್ರನಾಭನೂ ಕೂಡ ತನ್ನ ಪುತ್ರನಾದ ಪ್ರತಿಬಾಹುವಿಗೆ ತನ್ನ ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿ ತನ್ನ ತಾಯಂದಿರೊಡನೆ ಉದ್ಧವನು ಪ್ರಕಟಗೊಂಡ ನಿರ್ದಿಷ್ಟಸ್ಥಾನಕ್ಕೆ ಹೋಗಿ, ಶ್ರೀಮದ್ಭಾಗವತದ ಕಥೆಯನ್ನು ಸೇವಿಸುವ ಇಚ್ಛೆಯಿಂದ ಅಲ್ಲಿಯೇ ಇರತೊಡಗಿದನು. ಅನಂತರ ಮಹಾತ್ಮನಾದ ಉದ್ಧವನು ವೃಂದಾವನದಲ್ಲಿ ಗೋವರ್ಧನಪರ್ವತದ ಬಳಿ ಒಂದು ತಿಂಗಳ ಕಾಲ ಶ್ರೀಮದ್ಭಾಗವತದ ಕಥಾಸುಧೆಯನ್ನು ಹರಿಯಿಸಿ ದನು. ಆ ರಸವನ್ನು ಸವಿಯುತ್ತಿರುವಾಗ ಭಕ್ತರಿಗೆ ಎಲ್ಲೆಡೆಯಲ್ಲಿಯೂ ಸಚ್ಚಿದಾನಂದಮಯಿಯಾದ ಶ್ರೀಹರಿಯ ಲೀಲೆಯು ಕಣ್ಣುಗಳಿಗೆ ಹಬ್ಬವಾಗಿ ಪ್ರಕಾಶಿಸತೊಡಗಿತು. ಎಲ್ಲೆಲ್ಲಿಯೂ ಶ್ರೀಕೃಷ್ಣನೇ ಕಾಣತೊಡಗಿದನು. ಆಗ ಎಲ್ಲರೂ ತಾವು ಶ್ರೀಕೃಷ್ಣನ ದೇಹದೊಳಗೇ ಇರುವುದನ್ನು ಕಂಡರು. ವಜ್ರನಾಭನು ತಾನು ಶ್ರೀಕೃಷ್ಣನ ಬಲಭಾಗದ ಅಡಿದಾವರೆಯಲ್ಲಿರುವುದನ್ನು ಕಂಡು ಆ ಭಗವಂತನ ಅಗಲಿಕೆಯಿಂದ ಉಂಟಾಗಿದ್ದ ದುಃಖವನ್ನು ನೀಗಿ ಪ್ರಸನ್ನತೆಯಿಂದ ಕಂಗೊಳಿಸಿದನು. ವಜ್ರನಾಭನ ರೋಹಿಣಿಯೇ ಮುಂತಾದ ತಾಯಂದಿರೂ ಕೂಡ ರಾಸಕ್ರೀಡೆಯ ರಾತ್ರಿಯಲ್ಲಿ ಪ್ರಕಾಶಿಸುತ್ತಿದ್ದ ಶ್ರೀಕೃಷ್ಣನೆಂಬ ಚಂದ್ರನ ದಿವ್ಯಮಂಗಳವಿಗ್ರಹದಲ್ಲಿ ತಾವೂ ಕಲೆಯ ಮತ್ತು ಪ್ರಭೆಯ ರೂಪದಲ್ಲಿರುವುದನ್ನು ಕಂಡು ಆನಂದ-ಆಶ್ಚರ್ಯಗಳಿಂದ ಬೆರಗಾದರು. ತಮ್ಮ ಪ್ರಾಣಪ್ರಿಯನಾದ ಭಗವಂತನ ವಿರಹವೇದನೆಯಿಂದ ಬಿಡುಗಡೆಹೊಂದಿ ಆ ಪರಮಾತ್ಮನ ಧಾಮವನ್ನು ಪ್ರವೇಶಿಸಿಬಿಟ್ಟರು. ಇವರಲ್ಲದೆ ಅಲ್ಲಿದ್ದ ಇತರ ಶ್ರೋತೃಗಳೂ ಕೂಡ ಭಗವಂತನ ನಿತ್ಯವಾದ ಅಂತರಂಗಲೀಲೆಯಲ್ಲಿ ಸಮ್ಮಿಳಿತರಾಗಿ ಈ ಸ್ಥೂಲವಾದ ವ್ಯಾವಹಾರಿಕಜಗತ್ತಿನಿಂದ ಒಡನೆಯೇ ಕಣ್ಮರೆಯಾಗಿಬಿಟ್ಟರು. ಆ ಪ್ರೇಮೀಭಕ್ತರು ಗೋವರ್ಧನ ಪರ್ವತದ ಲತಾಗೃಹಗಳಲ್ಲಿಯೂ, ಪೊದೆಗಳಲ್ಲಿಯೂ, ಬೃಂದಾವನದ ಕಾಮ್ಯವನವೇ ಮುಂತಾದ ಉದ್ಯಾನವನಗಳಲ್ಲಿಯೂ ದಿವ್ಯವಾದ ಗೋವುಗಳಿಂದ *

*'ಯತ್ರ ಗಾವೋ ಭೂರಿಶೃಙ್ಗಾ ಅಯಾಸಃ' ಎಂಬ ಋಗ್ವೇದಶ್ರುತಿಯು ಈ ಗೋಸಹಿತವಾದ ಗೋವಿಂದನ ಧಾಮವನ್ನು ಗುರುತಿಸುತ್ತದೆ. (I–154–6)

ಕೂಡಿದ ಶ್ರೀಕೃಷ್ಣನೊಡನೆ ಸಂಚರಿಸುತ್ತಾ ಸದಾ ಅನಂತವಾದ ಆನಂದವನ್ನು ಅನುಭವಿಸುತ್ತಿರುತ್ತಾರೆ. ಶ್ರೀಕೃಷ್ಣನ ಪ್ರೇಮದಲ್ಲಿ ಮುಳುಗಿರುವ ಭಾವುಕಭಕ್ತರಿಗೆ ಇವರ ದರ್ಶನವೂ ಆಗುವುದು.

ಭಕ್ತರಾದ ವಜ್ರನಾಭನೇ ಮುಂತಾದವರು ಭಗವಂತನನ್ನು ಹೊಂದಿದ ಈ ಕಥೆಯನ್ನು ಶ್ರವಣಮಾಡುವವರೂ, ಸಂಕೀರ್ತನೆಮಾಡುವವರೂ ಶ್ರೀಭಗವಂತನ ಸಮಾಗಮವನ್ನು ಹೊಂದುವರು. ಎಂದಿಗೂ ಯಾವ ದುಃಖವೂ ಇಲ್ಲದೆ ಪರಮಸೌಖ್ಯವನ್ನು ಭಗವಂತನೊಡನೆ ಸೇರಿ ಅನುಭವಿಸುವರು.” (ಶ್ಲೋಕ 64–74)

ಶ್ರೀಸ್ಕಾಂದಮಹಾಪುರಾಣದ ಎರಡನೆಯ ಖಂಡವಾದ ವೈಷ್ಣವಖಂಡದಲ್ಲಿ
ಶ್ರೀಮದ್ಭಾಗವತಮಾಹಾತ್ಮ್ಯದಲ್ಲಿ ಮೂರನೆಯ ಅಧ್ಯಾಯವು ಮುಗಿಯಿತು.

ಶ್ರೀಮದ್ಭಾಗವತಮಾಹಾತ್ಮ್ಯಮ್ ೪ನೆಯ ಅಧ್ಯಾಯ

ಶ್ರೀಮದ್ಭಾಗವತದ ಸ್ವರೂಪ, ಪ್ರಮಾಣ, ಶ್ರೋತೃಗಳ ಮತ್ತು ಪ್ರವಚನಕಾರರ ಲಕ್ಷಣ : ಶ್ರವಣವಿಧಿ ಮತ್ತು ಮಾಹಾತ್ಮ್ಯ

ಋಷಿಗಳು ಸೂತಪುರಾಣಿಕರಲ್ಲಿ ಪ್ರಾರ್ಥಿಸುತ್ತಾರೆ :

ಸಾಧು ಸೂತ ಚಿರಂ ಜೀವ ಚಿರಮೇವಂ ಪ್ರಶಾಧಿ ನಃ ।
ಶ್ರೀಮದ್ಭಾಗವತಮಾಹಾತ್ಮ್ಯಮಪೂರ್ವಂ ತ್ವನ್ಮುಖಾಚ್ಛ್ರುತಮ್ ॥

ತತ್ಸ್ವರೂಪಂ ಪ್ರಮಾಣಂ ಚ ವಿಧಿಂ ಚ ಶ್ರವಣೇ ವದ ।
ತದ್ವಕ್ತುರ್ಲಕ್ಷಣಂ ಸೂತ ಶ್ರೋತುಶ್ಚಾಪಿ ವದಾಧುನಾ ॥೨॥

“ಸಾಧು-ಸಾಧು ಸೂತಪುರಾಣಿಕನೇ! ನೀನು ಚಿರಂಜೀವಿಯಾಗು. ಹೀಗೆಯೇ ನಮಗೆ ಉಪದೇಶಾಮೃತವನ್ನು ನೀಡುತ್ತಿರು. ನಿನ್ನ ಬಾಯಿಂದ ನಾವು ಅಪೂರ್ವವಾದ ಶ್ರೀಮದ್ಭಾಗವತಮಾಹಾತ್ಮ್ಯವನ್ನು ಕೇಳಿದೆವು. ಈಗ ನಮಗೆ ಶ್ರೀಮದ್ಭಾಗವತದ ಪ್ರಮಾಣವೇನು? ಶ್ರವಣದ ವಿಧಿಯೇನು? ಭಾಗವತದ ಪ್ರವಚನಕಾರನ ಮತ್ತು ಶ್ರೋತೃವಿನ ಲಕ್ಷಣಗಳೇನು? ಎಂಬುದನ್ನು ತಿಳಿಸು.”

ಸೂತಪುರಾಣಿಕರು ಅವರಿಗೆ ಹೀಗೆಂದರು : "ಎಲೈ ಋಷಿಗಣಗಳೇ!

ಶ್ರೀಮದ್ಭಾಗವತಸ್ಯಾಥ ಶ್ರೀಮದ್ಭಗವತಃ ಸದಾ।
ಸ್ವರೂಪಮೇಕಮೇವಾಸ್ತಿ ಸಚ್ಚಿದಾನನ್ದಲಕ್ಷಣಮ್ ॥೩॥

ಶ್ರೀಮದ್ಭಾಗವತಕ್ಕೂ ಶ್ರೀಭಗವಂತನಿಗೂ ಸ್ವರೂಪವು ಒಂದೇ. ಅದು ಸಚ್ಚಿದಾನಂದಮಯಸ್ವರೂಪ.

ಶ್ರೀಕೃಷ್ಣಾಸಕ್ತಭಕ್ತಾನಾಂ ತನ್ಮಾಧುರ್ಯಪ್ರಕಾಶಕಮ್ ।
ಸಮುಜ್ಜೃಮ್ಭತಿ ಯದ್ವಾಕ್ಯಂ ವಿದ್ಧಿ ಭಾಗವತಂ ಹಿ ತತ್ ॥೪॥

ಜ್ಞಾನವಿಜ್ಞಾನಭಕ್ತ್ಯಙ್ಗಚತುಷ್ಟಯಪರಂ ವಚಃ ।
ಮಾಯಾಮರ್ದನದಕ್ಷಂ ಚ ವಿದ್ಧಿ ಭಾಗವತಂ ಚ ತತ್ ॥೫॥

ಪ್ರಮಾಣಂ ತಸ್ಯ ಕೋ ವೇದ ಹ್ಯನನ್ತಸ್ಯಾಕ್ಷರಾತ್ಮನಃ ।
ಬ್ರಹ್ಮಣೇ ಹರಿಣಾ ತದ್ದಿಕ್ಚತುಃ ಶ್ಲೋಕ್ಯಾ ಪ್ರದರ್ಶಿತಾ ॥೬॥

ಶ್ರೀಕೃಷ್ಣನಲ್ಲಿ ಆಸಕ್ತಿಯುಳ್ಳ ಭಾವುಕರಾದ ಭಕ್ತರ ಹೃದಯದಲ್ಲಿ ಆತನ ಮಾಧುರ್ಯಭಾವವನ್ನು ಪ್ರಕಾಶಪಡಿಸುವ, ಆ ಮಾಧುರ್ಯರಸದ ಸವಿಯನ್ನುಂಟುಮಾಡುವ, ಯಾವ ಯಾವ ವಾಕ್ಯವುಂಟೋ ಅದೆಲ್ಲಾ ಭಾಗವತವೇ.

ಜ್ಞಾನ, ವಿಜ್ಞಾನ, ಭಕ್ತಿ ಮತ್ತು ಅವುಗಳಿಗೆ ಅಂಗವಾದ ಸಾಧನ ಚತುಷ್ಟಯವನ್ನು ಪ್ರಕಾಶಗೊಳಿಸುವ ಮತ್ತು ಮಾಯೆಯನ್ನು ಮರ್ದನ ಮಾಡುವ ಶಕ್ತಿಯುಳ್ಳ ಯಾವ ಯಾವ ವಾಕ್ಯವುಂಟೋ ಅದೆಲ್ಲಾ ಭಾಗವತವೇ–ಎಂದು ತಿಳಿಯಿರಿ. ಈ ಶ್ರೀಮದ್ಭಾಗವತವು ಅನಂತ ಅಕ್ಷರ ಸ್ವರೂಪವಾದುದು. ಇದರ ನಿಯತವಾದ ಪ್ರಮಾಣವು ಇಷ್ಟೇ ಎಂಬುದನ್ನು ಯಾರು ತಾನೇ ಬಲ್ಲರು? ಹಿಂದೆ ಭಗವಂತನಾದ ಶ್ರೀಹರಿಯು ಬ್ರಹ್ಮ ದೇವರನ್ನು ಕುರಿತು ನಾಲ್ಕು ಶ್ಲೋಕಗಳ ಮೂಲಕ ಅದರ ದಿಗ್ದರ್ಶನವನ್ನು ಮಾತ್ರ ಮಾಡಿಸಿದನು. ನಾರಾಯಣನಿಂದ ಬ್ರಹ್ಮದೇವರಿಗೆ ಉಪದೇಶಿಸಲ್ಪಟ್ಟ (ಕೇವಲ ನಾಲ್ಕು ಶ್ಲೋಕಗಳುಳ್ಳ) ಈ ಚತುಃಶ್ಲೋಕೀ ಭಾಗವತದಿಂದ ಸಾಮಾನ್ಯಜೀವಿಗಳು ಲಾಭವನ್ನು ಪಡೆಯಲಾರರು. ಇದರ ಅಪಾರ ವಾದ ಗಾಂಭೀರ್ಯದಲ್ಲಿ ಮುಳುಗಿ ತಮ್ಮ ಇಷ್ಟಾರ್ಥವನ್ನು ಪಡೆಯುವ

ಸಾಮರ್ಥ್ಯವು ಬ್ರಹ್ಮ, ವಿಷ್ಣು, ರುದ್ರ ಮುಂತಾದವರಿಗೆ ಮಾತ್ರವೇ ಇರುವುದು. ಪರಿಮಿತವಾದ ಬುದ್ಧಿಯೇ ಮುಂತಾದ ವೃತ್ತಿಗಳುಳ್ಳ ಮನುಷ್ಯರ ಹಿತಸಾಧನೆಗೆ ಶ್ರೀ ವ್ಯಾಸಮಹರ್ಷಿಗಳು ಪರೀಕ್ಷಿದ್ರಾಜ ಮತ್ತು ಶುಕಮಹರ್ಷಿ ಇವರ ಸಂಭಾಷಣೆಯ ರೂಪದಲ್ಲಿ ಗಾನಮಾಡಿರುವ ಶ್ರೀಮದ್ಭಾಗವತ ಗ್ರಂಥವು ಮಾತ್ರವೇ ಸಮರ್ಥವಾಗುವುದು. ಅವರ ದೃಷ್ಟಿಯಿಂದ ಅದೇ ಶ್ರೀಮದ್ಭಾಗತವು. ಈ ಗ್ರಂಥದ ಶ್ಲೋಕಸಂಖ್ಯೆಯೂ ಹದಿನೆಂಟು ಸಾವಿರ. ಈ ಭವಸಾಗರದಲ್ಲಿ ಕಲಿಪುರುಷನೆಂಬ ಮೊಸಳೆಯ ಬಾಯಿಗೆ ಸಿಲುಕಿರುವ ಪ್ರಾಣಿಗಳಿಗೆ ಈ ಶ್ರೀಮದ್ಭಾಗವತವೇ ಸರ್ವೋತ್ತಮವಾದ ಆಶ್ರಯವು.
(ಶ್ಲೋಕ 3–9)

ಈಗ ಈ ಶ್ರೀಮದ್ವಿಷ್ಣುಕಥೆಯನ್ನು ಆಶ್ರಯಿಸಿರುವ ಯಾವ ಶ್ರೋತೃಗಳುಂಟೋ ಅವರ ಲಕ್ಷಣವನ್ನು ಹೇಳುತ್ತೇನೆ. ಪುರುಷಾರ್ಥ ಸಿದ್ಧಿಗಾಗಿ ಈ ಕಥಾಶ್ರವಣಮಾಡುವ ಶ್ರೋತೃಗಳಲ್ಲಿ ಪ್ರವರ (ಉತ್ತಮ) ಮತ್ತು ಅವರ (ಅಧಮ) ಎಂದು ಎರಡು ಭೇದಗಳು. ಪ್ರವರಶ್ರೋತೃ ಗಳಲ್ಲಿಯೂ ಚಾತಕ, ಹಂಸ, ಶುಕ ಮತ್ತು ಮೀನ ಮುಂತಾದ ಉಪಭೇದಗಳಿವೆ. ಹಾಗೆಯೇ ಅವರ ಶ್ರೋತೃಗಳಲ್ಲಿಯೂ ವೃಕ, ಭೂರುಂಡ, ವೃಷ ಮತ್ತು ಉಷ್ಟ್ರವೇ ಮೊದಲಾದ ಉಪಭೇದಗಳುಂಟು. ಚಾತಕಪಕ್ಷಿಯು ಬೇರೆ ಯಾವ ನೀರನ್ನೂ ಮುಟ್ಟದೆ ಮೋಡವು ಸುರಿಸುವ (ಭೂಮಿಯನ್ನು ಮುಟ್ಟದೇ ಇರುವ) ನೀರನ್ನು ಮಾತ್ರವೇ ಬಯಸುವಂತೆ ಯಾವ ಶ್ರೋತೃಗಳು ಉಳಿದುದೆಲ್ಲವನ್ನೂ ತೊರೆದು ಕೇವಲ ಶ್ರೀಕೃಷ್ಣನಿಗೆ ಸಂಬಂಧಪಟ್ಟ ಶಾಸ್ತ್ರಗಳಾದ ಶ್ರೀಮದ್ಭಾಗವತ ಮುಂತಾದುವುಗಳನ್ನು ಮಾತ್ರ ಕೇಳುವ ವ್ರತವನ್ನು ತೊಟ್ಟಿರುತ್ತಾರೆಯೋ ಅವರು ಚಾತಕ ಎಂಬ ಬಗೆಯ ಉತ್ತಮಶ್ರೋತೃಗಳು. ಹಂಸವು ಹೇಗೆ ನೀರು ಮಿಶ್ರವಾದ ಹಾಲಿನಿಂದ ನಿರ್ಮಲವಾದ ಹಾಲನ್ನು ಮಾತ್ರ ಪ್ರತ್ಯೇಕಿಸಿ ಸೇವಿಸಿ ಜಲಭಾಗವನ್ನು ಬಿಟ್ಟುಬಿಡುತ್ತದೆಯೋ ಹಾಗೆ ಯಾವ ಶ್ರೋತೃಗಳು ಅನೇಕಶಾಸ್ತ್ರಗಳನ್ನು ಕೇಳಿದರೂ ಅವುಗಳಲ್ಲಿ ಸಾರಭಾಗವಾದ ಶ್ರೀಕೃಷ್ಣಕಥೆಯನ್ನು ಮಾತ್ರ ಪ್ರತ್ಯೇಕಿಸಿ ಗ್ರಹಿಸುತ್ತಾರೆಯೋ ಅವರು ಉತ್ತಮಶ್ರೋತೃಗಳಲ್ಲಿ 'ಹಂಸ' ಎನಿಸುತ್ತಾರೆ. ಶುಕ ಎಂದರೆ ಗಿಳಿಯು. ಚೆನ್ನಾಗಿ ಶಿಕ್ಷಣಪಡೆದ ಶುಕವು

ತನ್ನ ಮಧುರವಾಣಿಯಿಂದ ತನಗೆ ಶಿಕ್ಷಣವನ್ನು ಕೊಟ್ಟವನಿಗೂ ಮತ್ತು ಹತ್ತಿರದಲ್ಲಿರುವ ಶ್ರೋತೃಗಳಿಗೂ ಹೇಗೆ ಸಂತೋಷವನ್ನುಂಟುಮಾಡುತ್ತದೆಯೋ ಹಾಗೆಯೇ ಯಾವ ಶ್ರೋತೃವು ಕಥೆಯನ್ನು ಹೇಳುವ ವ್ಯಾಸರ ಬಾಯಿಂದ ಬರುವ ಉಪದೇಶವನ್ನು ಕೇಳಿ, ಅದನ್ನು ಸುಂದರವೂ ಪರಿಮಿತವೂ ಆದ ವಾಣಿಯಿಂದ ತಾನೂ ಹಾಗೆಯೇ ಇತರರಿಗೆ ಹೇಳುತ್ತಾನೆಯೋ, ಅದರಿಂದ ವ್ಯಾಸರಿಗೂ ಮತ್ತು ಇತರ ಶ್ರೋತೃಗಳಿಗೂ ಆನಂದವನ್ನುಂಟುಮಾಡುತ್ತಾನೆಯೋ ಆತನನ್ನು 'ಶುಕ' ಎಂದು ಕರೆಯುತ್ತಾರೆ. ಕ್ಷೀರಸಾಗರದಲ್ಲಿರುವ ಮೀನು ಹೇಗೆ ಯಾವ ಮಾತನ್ನೂ ಆಡದೆ ಎವೆಯಿಕ್ಕದ ಕಣ್ಣುಗಳಿಂದ ನೋಡುತ್ತಾ, ಸದಾ ಹಾಲನ್ನು ಕುಡಿಯುತ್ತಿರುತ್ತದೆಯೋ ಹಾಗೆಯೇ ಕಥಾಶ್ರವಣಮಾಡುವಾಗ ಎವೆಯಿಕ್ಕದ ಕಣ್ಣುಗಳಿಂದ ನೋಡುತ್ತಾ ಯಾವ ಮಾತನ್ನೂ ಆಡದೆ ನಿರಂತರವಾಗಿ ಕಥಾರಸವನ್ನು ಸವಿಯುತ್ತಾ ಇರುವ ಪ್ರೇಮಿಯಾದ ಶ್ರೋತೃವನ್ನು 'ಮೀನ' ಎಂದು ಕರೆಯುತ್ತಾರೆ. ಇವರೆಲ್ಲಾ ಪ್ರವರ (ಉತ್ತಮ) ವರ್ಗದ ಶ್ರೋತೃಗಳು. ಇನ್ನು ಅವರ (ಅಧಮ) ವರ್ಗದ ಶ್ರೋತೃಗಳನ್ನು ನಿರೂಪಿಸುತ್ತೇನೆ. ಇವರಲ್ಲಿ ಮೊದಲನೆಯವರಿಗೆ 'ವೃಕ' ಎಂದು ಹೆಸರು. ವೃಕ ಎಂದರೆ ತೋಳ. ತೋಳವು ಅರಣ್ಯದಲ್ಲಿ ಕೊಳಲಿನಂತೆ ಮಧುರಧ್ವನಿಮಾಡುತ್ತಿರುವ ಸಾಧುಪ್ರಾಣಿಗಳನ್ನು ಹೆದರಿಸುವಂತಹ ಭಯಂಕರವಾದ ಗರ್ಜನೆಯನ್ನು ಮಾಡುವಂತೆ, ಯಾವ ಮೂರ್ಖರು (ಅಥವಾ ದುಷ್ಟರು) ಕಥಾಶ್ರವಣ ಆಗುತ್ತಿರುವಾಗ ಮಧ್ಯೇ ಮಧ್ಯೇ ಗಟ್ಟಿಯಾಗಿ ಮಾತನಾಡುತ್ತಾ ರಸಿಕರಾದ ಶ್ರೋತೃಗಳಿಗೆ ಉದ್ವೇಗವನ್ನುಂಟುಮಾಡುತ್ತಾರೆಯೋ, ಅವರಿಗೆ 'ವೃಕ'ಎಂದು ಹೆಸರು.

ಭೂರುಂಡ–ಎನ್ನುವುದು ಹಿಮಾಲಯದ ಶಿಖರದಲ್ಲಿರುವ ಒಂದು ಜಾತಿಯ ಪಕ್ಷಿ. ಅದು ಇತರರು ಹೇಳುವ ಒಳ್ಳೆಯ ವಾಕ್ಯಗಳನ್ನು ಕೇಳಿ ಅದನ್ನು ಹಾಗೆಯೇ ತಾನೂ ಹೇಳುತ್ತದೆ. ಆದರೆ ಅವರ ಉಪದೇಶದಂತೆ ತಾನು ನಡೆಯುವುದಿಲ್ಲ. ಅದರಿಂದ ತಾನು ಲಾಭಪಡೆಯುವುದಿಲ್ಲ. ಹಾಗೆಯೇ ಕಥಾಶ್ರವಣವಾಗುತ್ತಿರುವಾಗ ಯಾವನು ತಾನು ಉಪದೇಶದ ಮಾತುಗಳನ್ನು ಕೇಳಿ ಅದನ್ನು ಹಾಗೆಯೇ ಇತರರಿಗೆ ಉಪದೇಶಮಾಡುತ್ತಾ, ತಾನು

ಮಾತ್ರ ಅದರಂತೆ ಅನುಷ್ಠಾನಮಾಡುವುದಿಲ್ಲವೋ ಅಂತಹ ಶ್ರೋತೃವನ್ನು 'ಭೂರುಂಡ' ಎನ್ನುತ್ತಾರೆ. ವೃಷ–ಎಂದರೆ ಎತ್ತು. ಎತ್ತಿನ ಮುಂದೆ ಸಿಹಿಯಾದ ದ್ರಾಕ್ಷಿಯಿರಲಿ ಅಥವಾ ಕಹಿಯಾದ ಮೇವು ಇರಲಿ ಎರಡನ್ನೂ ಒಂದೇ ಸಮನಾಗಿ ತಿಳಿದು ಅದು ತಿನ್ನುತ್ತದೆ. ಹಾಗೆಯೇ ಯಾವನು ಕಥಾ ಪ್ರವಚನದಲ್ಲಿ ಸಾರ, ಅಸಾರ–ಎಂದು ವಿವೇಚಿಸದೆ ಎಲ್ಲ ಮಾತುಗಳನ್ನೂ ಸೇವಿಸುತ್ತಾನೆಯೋ ಅಂತಹ ಕುರುಡುಬುದ್ಧಿಯ ಶ್ರೋತೃವು 'ವೃಷ' ಎನ್ನಿಸುತ್ತಾನೆ. ಉಷ್ಟ್ರ–ಎಂದರೆ ಒಂಟೆ. ರುಚಿಕರವಾದ ಎಳಸಾದ ಮಾವಿನ ಚಿಗುರು ಮತ್ತು ಕಹಿಯಾದ ಬೇವಿನಎಲೆ ಎರಡೂ ಇರುವಾಗ ಒಂಟೆಯು ಸಿಹಿಯಾಗಿರುವ ಮಾವಿನ ಚಿಗುರನ್ನು ಬಿಟ್ಟು ಕಹಿಯಾದ ಬೇವಿನ ಎಲೆಗಳನ್ನು ಮಾತ್ರ ತಿನ್ನುತ್ತದೆ. ಹಾಗೆಯೇ ಯಾವನು ಕಥಾ ಶ್ರವಣಪ್ರಸಂಗದಲ್ಲಿ ಮಧುರವಾದ ಭಗವತ್ಕಥೆಗಳನ್ನು ಬಿಟ್ಟು ಅದಕ್ಕೆ ವಿರುದ್ಧವಾದ ಸಾಂಸಾರಿಕವಾದ ಮಾತುಗಳಲ್ಲಿಯೇ ರಮಿಸುತ್ತಾನೆಯೋ ಅಂತಹ ಶ್ರೋತೃವನ್ನು 'ಉಷ್ಟ್ರ' ಎಂದು ಕರೆಯುತ್ತಾರೆ. 'ಪ್ರವರ' ಮತ್ತು 'ಅವರ' ಶ್ರೋತೃಗಳಲ್ಲಿ ಈಗ ಹೇಳಲ್ಪಟ್ಟಿರುವ ಭೇದಗಳಲ್ಲದೆ 'ಭ್ರಮರ' 'ಗರ್ದಭ' ಇವೇ ಮುಂತಾದ ಇನ್ನೂ ಅನೇಕ ಭೇದಗಳುಂಟು. ಅವುಗಳನ್ನು ಶ್ರೋತೃಗಳ ಸ್ವಾಭಾವಿಕವಾದ ಆಚಾರ-ವ್ಯವಹಾರಗಳಿಂದ ನಿರ್ಣಯಿಸಿಕೊಳ್ಳಬೇಕು. ಶ್ರೀಮದ್ಭಾಗವತಪ್ರವಚನವು ನಡೆಯುವಾಗ ಯಾವನು ಪ್ರವಚನಕಾರನಿಗೆ ವಿಧಿಪೂರ್ವಕವಾಗಿ ಪ್ರಣಾಮಮಾಡಿ ಆತನ ಮುಂದೆ ಕುಳಿತು, ಉಳಿದ ಸಾಂಸಾರಿಕವಾದ ಮಾತುಗಳನ್ನು ತೊರೆದು, ಕೇವಲ ಭಗವಂತನ ಲೀಲಾಕಥೆಗಳನ್ನು ಮಾತ್ರ ಕೇಳಲು ಬಯಸುತ್ತಾ ನೆಯೋ, ಕಥೆಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಅತ್ಯಂತ ಕುಶಲನಾಗಿ ದ್ದಾನೆಯೋ, ನಮ್ರನಾಗಿ ಕೈಜೋಡಿಸಿಕೊಂಡು ಶಿಷ್ಯಭಾವದಿಂದ ಶ್ರದ್ಧಾ-ವಿಶ್ವಾಸಯುಕ್ತನಾಗಿ ಉಪದೇಶವನ್ನು ಕೇಳುತ್ತಾನೆಯೋ, ಕೇಳಿದ್ದನ್ನು ಕುರಿತು ಚಿಂತನೆಯನ್ನು ಮಾಡುತ್ತಾ, ತಿಳಿಯದ ವಿಷಯಗಳನ್ನು ಕೇಳಿ ತಿಳಿ ಯುತ್ತಾ, ಪವಿತ್ರಭಾವದಿಂದ ಕೂಡಿ ಶ್ರೀಕೃಷ್ಣಭಕ್ತರಲ್ಲಿ ಸದಾ ಪ್ರೇಮವುಳ್ಳವ ನಾಗಿರುತ್ತಾನೆಯೋ ಅಂತಹ ಶ್ರೋತೃವನ್ನು ಮಾತ್ರವೇ ಪ್ರವಚನಕಾರರು 'ಉತ್ತಮವಾದ ಶ್ರೋತೃ' ಎಂದು ಕರೆಯುತ್ತಾರೆ. (ಶ್ಲೋಕ 10–21)

ಈಗ ಪ್ರವಚನಕಾರನ ಲಕ್ಷಣವನ್ನು ಹೇಳುತ್ತೇನೆ :

ಭಗವನ್ಮತಿರನಪೇಕ್ಷಃ ಸುಹೃದೋ ದೀನೇಷು ಸಾನುಕಮ್ಪೋ ಯಃ ।
ಬಹುಧಾ ಬೋಧನಚತುರೋ ವಕ್ತಾ ಸಂಮಾನಿತೋ ಮುನಿಭಿಃ ॥

ಭಗವಂತನಲ್ಲಿ ಆಸಕ್ತವಾದ ಮತಿಯುಳ್ಳವನಾಗಿರಬೇಕು. ಭಗವಂತನನ್ನು ಬಿಟ್ಟು ಬೇರಾವುದನ್ನೂ ಅಪೇಕ್ಷಿಸಬಾರದು. ಸ್ನೇಹ-ಸೌಹಾರ್ದಗಳನ್ನು ಹೊಂದಿರಬೇಕು. ದೀನರ ವಿಷಯದಲ್ಲಿ ದಯಾಳುವಾಗಿರಬೇಕು. ಬಗೆ-ಬಗೆಯಾದ ಯುಕ್ತಿ ದೃಷ್ಟಾಂತ ಇತ್ಯಾದಿಗಳಿಂದ ತತ್ತ್ವವನ್ನು ಬೋಧಿಸುವುದರಲ್ಲಿ ಚತುರನಾಗಿರಬೇಕು. ಇಂತಹ ಲಕ್ಷಣಗಳಿಂದ ಕೂಡಿದ ಪ್ರವಚನಕಾರನನ್ನು ಮುನಿಗಳೂ ಕೂಡ ಗೌರವಿಸುತ್ತಾರೆ.

ಎಲೈ ವಿಪ್ರಶ್ರೇಷ್ಠರೇ! ಭಾರತವರ್ಷದ ಭೂಮಿಯಲ್ಲಿ ಶ್ರೀಮದ್ಭಾಗವತ ಕಥೆಯನ್ನು ಸೇವಿಸಲು ಅನುಸರಿಸಬೇಕಾಗಿರುವ ವಿಧಿಗಳು ಯಾವುವು? ಎಂಬುದನ್ನು ಈಗ ಹೇಳುತ್ತೇನೆ. ಈ ವಿಧಿಗಳನ್ನು ಪಾಲನೆಮಾಡಿದರೆ ಶ್ರೋತೃವಿಗೆ ಸುಖಪರಂಪರೆಗಳು ವೃದ್ಧಿಹೊಂದುವುವು.

ಶ್ರೀಮದ್ಭಾಗವತದ ಸೇವನೆಯಲ್ಲಿ ಸಾತ್ತ್ವಿಕ, ರಾಜಸ, ತಾಮಸ ಮತ್ತು ನಿರ್ಗುಣ ಎಂದು ನಾಲ್ಕು ಬಗೆಗಳುಂಟು. ಯಜ್ಞದಲ್ಲಿ ಹೇಗೋ ಹಾಗೆ ವೈಭವದ ಸಿದ್ಧತೆಗಳಿಂದ ಕೂಡಿದ್ದು ಬಗೆ-ಬಗೆಯ ಪೂಜಾಸಾಮಗ್ರಿಗಳಿಂದ ಶೋಭಿಸುತ್ತಿರಬೇಕು. ಬಹಳ ಪರಿಶ್ರಮ ಉತ್ಸಾಹಗಳಿಂದ ಆಚರಿಸಲ್ಪಟ್ಟು ಏಳು ದಿವಸಗಳಲ್ಲಿ ಸಮಾಪ್ತಿಮಂಗಳವನ್ನು ಹೊಂದಬೇಕು. ಈ ವಿವರಣೆಗೆ ತಕ್ಕಂತೆ ಪ್ರಸನ್ನತೆಯಿಂದ ಮಾಡಲ್ಪಡುವ ಶ್ರೀಮದ್ಭಾಗವತಸೇವನೆಗೆ 'ರಾಜಸ' ಎಂದು ಹೆಸರು. ಯಾವ ಆತುರವೂ ಇಲ್ಲದೆ ಮೆಲ್ಲಮೆಲ್ಲಗೆ ನಡೆಯುತ್ತಾ ಒಂದು ಅಥವಾ ಎರಡು ತಿಂಗಳಲ್ಲಿ ಕಥೆಯ ರಸವನ್ನು ಸವಿಯುತ್ತಾ ಯಾವ ಆಯಾಸವೂ ಇಲ್ಲದೆ ಸಂತೋಷವನ್ನು ವೃದ್ಧಿಪಡಿಸುತ್ತಾ ಮಾಡಲ್ಪಡುವ ಭಾಗವತಸೇವನೆಯು 'ಸಾತ್ತ್ವಿಕ' ಎನಿಸುತ್ತದೆ. ಮಧ್ಯ-ಮಧ್ಯದಲ್ಲಿ ಮರೆವಿನಿಂದ ಕೆಲವು ವಿಷಯಗಳನ್ನು ಬಿಟ್ಟುಬಿಡುವುದು. ಮರೆತದ್ದು ನೆನಪಿಗೆ ಬಂದಾಗ ಅದನ್ನು ಮತ್ತೆ ಆರಂಭಿಸುವುದು–ಹೀಗೆ ಒಂದು ವರ್ಷಕಾಲದವರೆಗೆ ಆಲಸ್ಯ-ಅಶ್ರದ್ಧೆಗಳಿಂದ ನಡೆಸ

ಲ್ಪಡುವ ಭಾಗವತಕಥಾಸೇವನೆಯನ್ನು 'ತಾಮಸ' ಎನ್ನುತ್ತಾರೆ. ಭಾಗವತಶ್ರವಣವನ್ನು ಮಾಡದೆಯೇ ಇರುವುದಕ್ಕಿಂತಲೂ ತಾಮಸರೂಪ ದಲ್ಲಾದರೂ ಮಾಡುವುದು ಶ್ರೇಷ್ಠ. ವರ್ಷ, ತಿಂಗಳು, ದಿವಸ ಮುಂತಾದ ಕಾಲನಿಯಮದ ಆಗ್ರಹವಿಲ್ಲದೆ ಸದಾ ಭಕ್ತಿಯಿಂದಲೂ, ಪ್ರೇಮದಿಂದಲೂ ಶ್ರೀಮದ್ಭಾಗವತವನ್ನು ಶ್ರವಣಮಾಡುತ್ತಿರುವುದು 'ನಿರ್ಗುಣ' ಸೇವನೆ ಎಂದು ಕರೆಯಲ್ಪಡುತ್ತದೆ. ಪರೀಕ್ಷಿದ್ರಾಜ ಮತ್ತು ಶುಕಬ್ರಹ್ಮರ್ಷಿಗಳ ಸಂಭಾಷಣೆಯ ರೂಪದಲ್ಲಿ ನಡೆದ ಶ್ರೀಮದ್ಭಾಗವತಕಥಾಶ್ರವಣವು ಈ 'ನಿರ್ಗುಣ' ಎಂಬ ವರ್ಗಕ್ಕೆ ಸೇರಿದ್ದು. ಆದರಲ್ಲಿ ಏಳು ದಿವಸಗಳಲ್ಲಿ ಕಥಾಶ್ರವಣ ನಡೆಯಿತು–ಎಂಬ ಕಾಲನಿಯಮವು ಕೇಳಿಬರುತ್ತದೆಯಲ್ಲಾ! ಅದು ಹೇಗೆ 'ನಿರ್ಗುಣ' ವಾಗುವುದು? ಎಂದರೆ ರಾಜನ ಆಯುಸ್ಸಿನಲ್ಲಿ ಉಳಿಕೆಯ ದಿನಗಳು ಏಳೇ ಆಗಿದ್ದುದರಿಂದ ಆ ದಿನಸಂಖ್ಯೆಯು ಬಂದಿದೆಯೇ ಹೊರತು ಸಪ್ತಾಹಕಥಾನಿಯಮವನ್ನು ತಿಳಿಸುವುದಕ್ಕಾಗಿ ಅದು ಬಂದಿಲ್ಲ.

(ಶ್ಲೋಕ 23–29)

ಭಾರತವರ್ಷವನ್ನು ಬಿಟ್ಟು ಇತರ ಸ್ಥಾನಗಳಲ್ಲಿಯೂ ತನ್ನ ಅಭಿ ರುಚಿಗೆ ತಕ್ಕಂತೆ ಸಾತ್ತ್ವಿಕ, ರಾಜಸ, ತಾಮಸ ಅಥವಾ ನಿರ್ಗುಣರೂಪವಾದ ಕಥಾಶ್ರವಣವನ್ನು ಮಾಡಬಹುದು. ಯಾವುದೇ ರೀತಿಯಲ್ಲಾದರೂ ಶ್ರೀಮದ್ಭಾಗವತದ ಶ್ರವಣವನ್ನು ಮಾಡುತ್ತಲೇ ಇರಬೇಕು–ಎಂದು ಇದರ ತಾತ್ಪರ್ಯ. ಶ್ರೀಕೃಷ್ಣಪರಮಾತ್ಮನ ಲೀಲಾಕಥೆಗಳ ಶ್ರವಣ-ಸಂಕೀರ್ತನ ಮತ್ತು ರಸಾಸ್ವಾದನೆಗಳಿಗಾಗಿಯೇ ಅತ್ಯಂತವಾಗಿ ಇಷ್ಟಪಡುತ್ತಾ ಮೋಕ್ಷವನ್ನೂ ಕೂಡ ಯಾರು ಬಯಸುವುದಿಲ್ಲವೋ ಅವರಿಗಾದರೋ ಶ್ರೀಮದ್ಭಾಗವತವೇ ಧನವು. ಸಾಂಸಾರಿಕದುಃಖಗಳಿಗೆ ಹೆದರಿ ತಮ್ಮ ಮುಕ್ತಿಯನ್ನು ಯಾರು ಬಯಸುತ್ತಾರೆಯೋ ಅವರಿಗೆ ಇದು ಭವರೋಗದ ಔಷಧವೇ ಆಗಿದೆ. ಇದಲ್ಲದೆ ಯಾರು ಇಂದ್ರಿಯ ವಿಷಯಗಳಲ್ಲಿಯೇ ರಮಿಸುತ್ತಾ ಸಾಂಸಾರಿಕಸುಖಗಳನ್ನೇ ಸದಾ ಬಯಸುತ್ತಾರೋ ಅಂತಹವರೂ ಕೂಡ ಈ ಕಲಿಯುಗದಲ್ಲಿ ಎಲ್ಲ ರೀತಿಗಳಿಂದಲೂ ಶ್ರೀಮದ್ಭಾಗವತವನ್ನೇ ಸೇವಿಸುವುದು ಒಳ್ಳೆಯದು. ಏಕೆಂದರೆ ಈ ಯುಗದಲ್ಲಿ ಸ್ವರ್ಗಾದಿ ಪ್ರಾಕೃತಿಕಸುಖಗಳನ್ನು

ಪಡೆಯಲು ಸಾಧನವಾದ ಯಜ್ಞಗಳನ್ನು ಆಚರಿಸುವುದಕ್ಕೆ ಬೇಕಾದ ಶಕ್ತಿ-ಸಾಮರ್ಥ್ಯ ಗಳೂ, ಐಶ್ವರ್ಯವೂ, ಶಾಸ್ತ್ರೀಯವಿಧಿ-ವಿಧಾನಗಳ ಜ್ಞಾನವೂ ಜನರಿಗೆ ಇರುವುದಿಲ್ಲವಾದ್ದರಿಂದ ಯಜ್ಞಾದಿಗಳಿಂದ ದೊರೆಯುವ ಸಿದ್ಧಿಯೂ ಅತ್ಯಂತ ದುರ್ಲಭವಾಗಿದೆ. ಈ ಶ್ರೀಮದ್ಭಾಗವತದ ಕಥೆಯು ತನ್ನನ್ನು ಸಕಾಮರಾಗಿ ಸೇವಿಸುವವರಿಗೆ ಹಣ, ಹೆಂಡಿರು, ಮಕ್ಕಳು, ವಾಹನಾದಿಗಳನ್ನೂ, ಕೀರ್ತಿಯನ್ನೂ, ಮನೆಗಳನ್ನೂ, ನಿಷ್ಕಂಟಕವಾದ ರಾಜ್ಯವನ್ನೂ ಕೊಡುವುದು. ಹಾಗೆ ಸಕಾಮಭಾವದಿಂದ ಭಾಗವತವನ್ನು ಸೇವಿಸುವವರು ಇಹಲೋಕದಲ್ಲಿ ಮನಸ್ಸು ಅಪೇಕ್ಷಿಸುವ ಉತ್ತಮ ಭೋಗಗಳನ್ನು ಅನುಭವಿಸಿ ಶ್ರೀಮದ್ಭಾಗವತದ ಮತ್ತು ಭಾಗವತರ ಸಂಗದಿಂದ ಮರಣಾನಂತರ ಶ್ರೀಹರಿಯ ಪರಮಧಾಮವನ್ನು ಹೊಂದುವರು. (ಶ್ಲೋಕ 30–36)

ಎಲ್ಲಿಯಾದರೂ ಶ್ರೀಮದ್ಭಾಗವತದ ಕಥೆಯನ್ನು ಕುರಿತ ವಾರ್ತೆಯು ನಡೆಯುತ್ತಿದ್ದರೆ, ಸಜ್ಜನರು ಆ ಕಥಾಶ್ರವಣದಲ್ಲಿ ಆಸಕ್ತರಾಗಿರುವುದು ಕಂಡುಬಂದರೆ, ಆ ಕಥಾಕಾರ್ಯಕ್ರಮಕ್ಕೂ ಮತ್ತು ಸಜ್ಜನರಿಗೂ ತನು-ಮನ-ಧನಗಳಿಂದ ಸೇವೆಯನ್ನು ಸಲ್ಲಿಸಬೇಕು. ಅವರ ಅನುಗ್ರಹ ದಿಂದಲೂ ಭಾಗವತಸೇವನೆಯ ಪುಣ್ಯವು ದೊರೆಯುವುದು. ಲೋಕದಲ್ಲಿ ಶ್ರೀಕೃಷ್ಣ ಮತ್ತು ಧನ–ಎಂಬ ಎರಡೇ ಜನರು ಬಯಸುವ ಪದಾರ್ಥಗಳು. ಇಲ್ಲಿ ಶ್ರೀಕೃಷ್ಣನನ್ನು ಬಿಟ್ಟು ಉಳಿದೆಲ್ಲಾ ಪದಾರ್ಥಗಳಿಗೂ 'ಧನ' ಎಂದು ಹೆಸರು. ಶ್ರೋತೃಗಳಲ್ಲಿ ಕೃಷ್ಣಾರ್ಥೀ (ಶ್ರೀಕೃಷ್ಣನನ್ನೇ ಪ್ರಯೋಜನವನ್ನಾಗಿ ಬಯಸುವವನು) ಮತ್ತು ಧನಾರ್ಥೀ (ಶ್ರೀಕೃಷ್ಣನನ್ನು ಬಿಟ್ಟು ಉಳಿದ ಪದಾರ್ಥಗಳನ್ನು ಪ್ರಯೋಜನವನ್ನಾಗಿ ಬಯಸುವವನು) ಎಂದು ಎರಡು ವಿಧಗಳು. ಹಾಗೆಯೇ ಪ್ರವಚನಕಾರರಲ್ಲೂ ಕೃಷ್ಣಾರ್ಥೀ ಮತ್ತು ಧನಾರ್ಥೀ ಎಂದು ಎರಡು ಬಗೆಗಳು. ಇವರಿಬ್ಬರೂ ವಿಪರೀತವಿಚಾರದವರಾದರೆ ಅಂದರೆ : ಶ್ರೋತೃವು ಕೃಷ್ಣಾರ್ಥಿಯಾಗಿದ್ದು ಪ್ರವಚನಕಾರನು ಧನಾರ್ಥಿಯಾಗಿದ್ದರೆ ಅಥವಾ ಶ್ರೋತೃವು ಧನಾರ್ಥಿಯಾಗಿದ್ದು ಪ್ರವಚನಕಾರನು ಕೃಷ್ಣಾರ್ಥಿಯಾಗಿದ್ದರೆ ರಸಾಭಾಸವಾಗುವುದು. ಫಲಹಾನಿ ಯಾಗುವುದು. ಆದರೆ ಪ್ರವಚನಕಾರರು ಮತ್ತು ಶ್ರೋತೃಗಳು ಕೃಷ್ಣಾರ್ಥಿ

ಗಳಾಗಿದ್ದರೆ ಅವರಿಗೆ ತಡವಾಗಿಯಾದರೂ ಸಿದ್ಧಿಯು ಅವಶ್ಯವಾಗಿ ದೊರೆಯುವುದು. ಆದರೆ ಧನಾರ್ಥಿಗೆ, ಕರ್ಮದ ಅನುಷ್ಠಾನವು ಸಂಪೂರ್ಣವಾಗಿ ವಿಧಿ-ವಿಧಾನಗಳಿಗೆ ಅನುಸಾರವಾಗಿದ್ದರೆ ಮಾತ್ರ ಸಿದ್ಧಿಯು ಸಿಕ್ಕುವುದು. (ಯಾವ ಕುಂದು-ಕೊರತೆಯೇ ಇಲ್ಲದೆ ವಿಧಿಪೂರ್ವಕವಾಗಿ ಅನುಷ್ಠಾನಮಾಡಿದರೆ ಮಾತ್ರವೇ ಕಾಮ್ಯಕರ್ಮವು ಸಿದ್ಧಿಸುವುದು.) ಕೃಷ್ಣಾರ್ಥಿಗಾದರೋ ಆತನು ಗುಣಹೀನನಾಗಿದ್ದರೂ, ಅನುಷ್ಠಾನದ ವಿಧಿಗಳಲ್ಲಿ ಕೆಲವು ಏರುಪೇರುಗಳಿದ್ದರೂ, ಆತನ ಹೃದಯದಲ್ಲಿ ಪ್ರೇಮ ವೊಂದಿದ್ದರೆ ಸಾಕು, ಅದೇ ಸರ್ವೋತ್ತಮವಿಧಿಯಾಗುವುದು. ಸಕಾಮರಾದ ಶ್ರೋತೃ ಮತ್ತು ಪ್ರವಚನಕಾರರು ಕಥೆಯು ಮುಗಿಯುವವರೆಗೆ ಅತ್ಯಂತ ಸಾವಧಾನತೆಯಿಂದ ಎಲ್ಲ ವಿಧಿಗಳನ್ನೂ ಪಾಲಿಸಬೇಕು. ಶ್ರೋತೃಗಳು ಮತ್ತು ಪ್ರವಚನಕಾರರು ಪ್ರತಿದಿನವೂ ಪ್ರಾತಃಕಾಲದಲ್ಲಿ ಸ್ನಾನಮಾಡಿ ತಮ್ಮ ನಿತ್ಯಕರ್ಮಗಳನ್ನು ಮುಗಿಸಿಕೊಳ್ಳಬೇಕು. ಅನಂತರ ಭಗವಂತನ ಶ್ರೀಪಾದತೀರ್ಥವನ್ನು ಸೇವಿಸಿ ಶ್ರೀಮದ್ಭಾಗವತಗ್ರಂಥವನ್ನೂ ಮತ್ತು ಗುರುದೇವ ಶ್ರೀವ್ಯಾಸಮಹರ್ಷಿಗಳನ್ನೂ ಪೂಜಿಸಬೇಕು. ಇದಾದ ಮೇಲೆ ಅತ್ಯಂತ ಪ್ರಸನ್ನತೆಯಿಂದ ಶ್ರೀಮದ್ಭಾಗವತದ ಶ್ರವಣ-ಸಂಕೀರ್ತನೆಗಳನ್ನು ಮಾಡಬೇಕು. ಕ್ಷೀರವನ್ನು ಅಥವಾ ಕ್ಷೀರಾನ್ನವನ್ನು ಮಾತ್ರ ಸೇವಿಸಬೇಕು. ಮೌನವಾಗಿಯೇ ಸೇವಿಸಬೇಕು. ನಿತ್ಯವೂ ಬ್ರಹ್ಮಚರ್ಯ ನಿಯಮವನ್ನು ಪಾಲಿಸಬೇಕು. ನೆಲದ ಮೇಲೆಯೇ ಮಲಗಬೇಕು. ಕ್ರೋಧ-ಲೋಭಗಳೇ ಮುಂತಾದ ಶತ್ರುಗಳನ್ನು ತೊರೆದುಬಿಡಬೇಕು. ಪ್ರತಿದಿನವೂ ಕಥೆಯ ಕೊನೆಯಲ್ಲಿ ಸಂಕೀರ್ತನೆಯನ್ನು ಮಾಡಬೇಕು ಮತ್ತು ಕಥೆಯ ಸಮಾಪ್ತಿಮಂಗಳದ ದಿವಸ ರಾತ್ರಿಯಲ್ಲೂ ಜಾಗರಣೆ ಮಾಡಬೇಕು. ಸಮಾಪ್ತಿಯಾದನಂತರ ಬ್ರಾಹ್ಮಣರಿಗೆ ಭೋಜನಮಾಡಿಸಿ ಅವರನ್ನು ದಕ್ಷಿಣೆಯಿಂದ ಸಂತೋಷಪಡಿಸಬೇಕು. ಕಥಾಪ್ರವಚನಮಾಡುವ ಗುರುವಿಗೆ ವಸ್ತ್ರ, ಒಡವೆ ಮುಂತಾದುವುಗಳನ್ನು ಸಮರ್ಪಿಸಿ ಗೋವನ್ನೂ ದಾನಮಾಡಬೇಕು. ಹೀಗೆ ವಿಧಿ-ವಿಧಾನಗಳನ್ನು ಪೂರ್ಣಗೊಳಿಸಿದರೆ ಮನುಷ್ಯನಿಗೆ ಹೆಂಡಿರು-ಮಕ್ಕಳು-ಮನೆ-ರಾಜ್ಯ-ಹಣವೇ ಮುಂತಾದ

ಅಭೀಷ್ಟವಸ್ತುಗಳು ಸಿದ್ಧಿಸುವುವು. ಆದರೆ ಸಕಾಮರಾಗಿ ಶ್ರೀಮದ್ಭಾಗವತವನ್ನು ಸೇವಿಸುವುದು ಎಷ್ಟಾದರೂ ವಿಡಂಬನೆಯೇ ಆಗುತ್ತದೆ. ಅದು ಶೋಭಿಸುವುದಿಲ್ಲ.

'ಪರಂ ತು ಶೋಭತೇ ನಾತ್ರ ಸಕಾಮತ್ವಂ ವಿಡಂಬನಮ್'

ಕೃಷ್ಣಪ್ರಾಪ್ತಿಕರಂ ಶಶ್ವತ್ ಪ್ರೇಮಾನನ್ದಫಲಪ್ರದಮ್ ।
ಶ್ರೀಮದ್ಭಾಗವತಂ ಶಾಸ್ತ್ರಂ ಕಲೌ ಕೀರೇಣ ಭಾಷಿತಮ್ ॥೪೮॥

ಶ್ರೀಶುಕಮಹರ್ಷಿಗಳ ಮುಖಕಮಲದಿಂದ ಹೊರಟಿರುವ ಶ್ರೀಮದ್ಭಾಗವತವೆಂಬ ಶಾಸ್ತ್ರವು ಕಲಿಯುಗದಲ್ಲಿ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನನ್ನೇ ದೊರಕಿಸಿಕೊಡುವುದು ಮತ್ತು ನಿತ್ಯ-ನಿರಂತರ ಪ್ರೇಮಾನಂದರೂಪವಾದ ಫಲವನ್ನು ಕೊಡುವುದು.

ಶ್ರೀಸ್ಕಾಂದಮಹಾಪುರಾಣದ ಎರಡನೆಯ ಖಂಡವಾದ ವೈಷ್ಣವಖಂಡದಲ್ಲಿ ಶ್ರೀಮದ್ಭಾಗವತಮಾಹಾತ್ಮ್ಯದಲ್ಲಿ ನಾಲ್ಕನೆಯ ಅಧ್ಯಾಯವು ಮುಗಿಯಿತು.

ಶ್ರೀಮದ್ಭಾಗವತಮಾಹಾತ್ಮ್ಯವು ಸಮಾಪ್ತವಾಯಿತು.

'ಹರಿಃ ಓಂ ತತ್ಸತ್'

ಭಾಗವತದ ಒಂಭತ್ತು ಸಂಪುಟಗಳ ಸಮಗ್ರ ವಿಷಯಾನುಕ್ರಮಣಿಕೆ
ಶ್ರೀಮದ್ಭಾಗವತದ ಮಹಿಮೆ
ಪದ್ಮಪುರಾಣ-ಉತ್ತರ ಖಂಡದ ಅಧ್ಯಾಯಾನುಕ್ರಮಣಿಕೆ
ಮತ್ತು ವಿಷಯಾನುಕ್ರಮಣಿಕೆ

(ವಿ.ಸೂ: ಮೊದಲನೆಯದು :ಮೂಲಶ್ಲೋಕಗಳ ಅಧ್ಯಾಯ ಪುಟಸಂಖ್ಯೆ-
ಎರಡನೆಯದು :ಅನುವಾದದಲ್ಲಿರುವ ವಿಷಯಗಳ ಪುಟಸಂಖ್ಯೆ)

ಶ್ರೀಮದ್ಭಾಗವತ-ಒಂದನೆಯ ಸಂಪುಟ ಪ್ರಥಮಸ್ಕಂಧದ
ಅಧ್ಯಾಯಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ

ದ್ವಿತೀಯಸ್ಕಂಧ

ಶ್ರೀಮದ್ಭಾಗವತ-ಎರಡನೆಯ ಸಂಪುಟ

ಅಧ್ಯಾಯಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ

ತೃತೀಯ ಸ್ಕಂಧ

ಚತುರ್ಥಸ್ಕಂಧ

ಶ್ರೀಮದ್ಭಾಗವತ-ಮೂರನೆಯ ಸಂಪುಟ
ಅಧ್ಯಾಯಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ

ಶ್ರೀಮದ್ಭಾಗವತ-ನಾಲ್ಕನೆಯ ಸಂಪುಟ
ಅಧ್ಯಾಯಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ

ಷಷ್ಠಸ್ಕಂಧ

ಸಪ್ತಮಸ್ಕಂಧ

ಶ್ರೀಮದ್ಭಾಗವತ-ಐದನೆಯ ಸಂಪುಟ

ಅಧ್ಯಾಯಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ

ಅಷ್ಟಮಸ್ಕಂಧ

ನವಮಸ್ಕಂಧ

ಶ್ರೀಮದ್ಭಾಗವತ-ಆರನೆಯ ಸಂಪುಟ

ಅಧ್ಯಾಯಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ

ದಶಮಸ್ಕಂಧ

ಶ್ರೀಮದ್ಭಾಗವತ-ಏಳನೆಯ ಸಂಪುಟ

ಅಧ್ಯಾಯಾನುಕ್ರಮಣಿಕೆ-ವಿಷಯಾನುಕ್ರಮಣಿಕೆ

ಶ್ರೀಮದ್ಭಾಗವತ–ಎಂಟನೆಯ ಸಂಪುಟ

ಅಧ್ಯಾಯಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ

ಏಕಾದಶಸ್ಕಂಧ

ಶ್ರೀಮದ್ಭಾಗವತ ಒಂಭತ್ತನೆಯ ಸಂಪುಟ
ಅಧ್ಯಾಯಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ
(ಏಕಾದಶಸ್ಕಂಧ ಮತ್ತು ದ್ವಾದಶಸ್ಕಂಧಗಳು)

(ವಿ.ಸೂ. ಮೊದಲನೆಯದು : ಮೂಲಶ್ಲೋಕಗಳ ಅಧ್ಯಾಯ ಪುಟಸಂಖ್ಯೆ
ಎರಡನೆಯದು : ಅನುವಾದದಲ್ಲಿರುವ ವಿಷಯಗಳ ಪುಟಸಂಖ್ಯೆ)

ಭಾಗವತಮಾಹಾತ್ಮ್ಯಮ್

–೦–

License No. WPP-13 Licensed to Post without pre-payment of postage
Posted at Thayagaraja Nagar Post Office
Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.